ಛಾಯಾ

ಬಿಡಿ ಪತ್ರಿ ೪ ಆಣೆ

ಸಂಪಾದಕರು :

ಬಿ. ಎಸ್. ವೆಂಕಟರಾಮ್



CHAYA

The Voice of the Progressive Youth.

NOVEMBER 1943

Four Annas



ಸಂಪುಟ ೧ ಜುಲೈ ೧೯೪೩. ಸಂಚಿಕೆ ೯

ಬಾಳದೋಟದಲ್ಲಿ.

★

ಅಸ್ವಸ್ಥದ ಹಾಸಿಗೆಯಲ್ಲಿ.

★

ಶ್ರೀನಿವಾಸರ ಕತೆಗಳು.

★

ಜವಹರಲಾಲರ ಪತ್ರ.

★

ಪಂಚಗುಟಿ.

ಇತ್ಯಾದಿ; ಇತ್ಯಾದಿ.

ಪ್ರಕಾಶಕರು:
ಆರ್. ಎಸ್. ನ್ಯೂಸ್ ಏಜೆನ್ಸಿ.

ಬೆಲೆ
ಎರಡಾಣೆ

ಉಷಾ

ಸೆಪ್ಟೆಂಬರ್

556

1943

ಶ್ರೀ ಗಜಾನನ ಪುಸ್ತಕ ಭಂಡಾರ
(ಕೊಪ್ಪ-ಕಡೂರು)

ಬೆಲೆ

೩ ಆಣೆ

ವಾರ್ಷಿಕ ಚಂದಾ ೨-೮-೦

ನಹೀಕಯಾನಿಯಲ್ಲಿ ರೋಸ್

ಸೋಲ್ ಡಿಸ್ಟ್ರಿಬ್ಯೂಟರ್ಸ್.
ಚಿತ್ರಾ ಏಜೆನ್ಸೀಸ್ ಬೆಂಗಳೂರು ಸಿಟಿ.

ಸಂಪಾದಕರು:—

ಕೀರ್ತನಕೇಸರಿ ವೇ|| ಬಿ. ಶಿವಮೂರ್ತಿಶಾಸ್ತ್ರಿಗಳ

ಅಧ್ಯಾತ್ಮಪ್ರಕಾಶ

“ ಏತಜ್ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ನಾತಃಪರಂ ವೇದಿತವ್ಯಂ ಹಿ ಕಿಂಚಿತ್ ” 57

ಸಂಪುಟ ೧೮ ★ ಸಂಚಿಕೆ ೩

ವಿಷಯಗಳು

ಈ ತಿಂಗಳ ಸಂದೇಶ	೪೯
ಕಾರ್ಯಾಲಯದ ಸುದ್ದಿ	೫೭
ಶಾಂಕರವೇದಾಂತ ನಿಘಂಟು	೫೯
ಬ್ರಹ್ಮವು ನಮ್ಮೆಲ್ಲರ ಆತ್ಮನು	೬೧
ಸಂಸ್ಕೃತವೂ ವೇದಾಂತವೂ	೬೫
ವಿದ್ಯಾರ್ಥಿಗಳಿಗೆ ಪ್ರಶ್ನಪತ್ರಿಕೆ	೭೧
ಉಪಕಾರಸ್ಮರಣೆ	೭೨
ಭಗವದ್ಗೀತೆಯ ಉಪನ್ಯಾಸಗಳು (ಸ್ವತಂತ್ರ ಪುಟಗಳು)	೪೧೭–೪೩೨

ಪತ್ರಿಕೆಗೆ ಚಂದ

ರೂ. ೩-೪-೦

ಪೋಷಕರಿಗೆ ರೂ. ೫-೪-೦ ಮತ್ತು ಮೇಲೆ

ಆದಷ್ಟು ಜನ

ಹೊಸ ಚಂದಾದಾರರನ್ನು ಮಾಡಿ

ಪ್ರೋತ್ಸಾಹಿಸಿರಿ.

ಸಂಪಾದಕರು ಮತ್ತು ಪ್ರಕಾಶಕರು : ವೈ. ನರಸಪ್ಪನವರು.

ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ.

November 1948.

Copy Right

ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆಯವರಿಂದ ಸಂಸ್ಥಾನದ
ಎಲ್ಲಾ ಮಿಡಲ್ ಹೈ ನಾರ್ಮಲ್ ಸ್ಕೂಲುಗಳಿಗೆ ಮಂಜೂರಾಗಿದೆ
T. B C. No 67 of 36—37

—॥ಶ್ರೀ॥—

ಸಪ್ರಬೋಧ

ಕಾದಂಬರೀ ಸಂಗ್ರಹ

(ಉತ್ತಮತರಗತಿಯ ಕನ್ನಡ ಮಾಸಪತ್ರಿಕೆ)

ವಾರ್ಷಿಕ ಚಂದಾ 2—0—0 ಪೋಷಕರಿಗೆ 5 ರೂ॥ ಮೇಲ್ಪಟ್ಟು
ಸ್ಕೂಲುಗಳ ವಾಚನಾಲಯಗಳಿಗೆ 2—8—0

ಸಂಪುಟ 30] 1943 ನೇ ಆಗಸ್ಟ್, ಸೆಪ್ಟಂಬರ್ [ಸಂಚಿಕೆ 2—3

ವಿಷಯ ವಿವರಣೆ

೧ ಸ್ವವಿಷಯ
೨ ಪ್ರಬೋಧ ಶ್ರಾವಣ
೩ ಧರ್ಮವಿಜ್ಞಾನಗ್ರಂಥಮಾಲೆ

ಸಂಪಾದಕ
ಸಿ. ವೆಂಕಟರಮಣಶಾಸ್ತ್ರಿ
ಕರ್ಣಾಟಕ ಕವಿತಿಲಕ ವಚನರಚನಾಚತುರ
ಚಾಮರಾಜನಗರ

1943

ಚಿತ್ರ ಸಮಾಚಾರ್

MAY 44
4 ಆಣೆ

ಅನೇಕ ಕೇಂದ್ರಗಳಲ್ಲಿ ಜಯಭೇರಿ ಮೊಳಗಿಸುತ್ತಿದೆ!

ಹೆಚ್. ಆರ್. ಜಿ. ಸಿ
ಶ್ರೀ ಪಿಕ್ಚರ್ಸಿನ

ವಾಣಿ

— ಕನ್ನಡ —

ಸಾಮಾಜಿಕ
ಕನ್ನಡ ಚಿತ್ರ!

• ಟಿ. ಚೌಡಯ್ಯ • ಕೆ. ಹಿರಣ್ಣಯ್ಯ • ಲಲಿತ • ಚಂದ್ರಮ್ಮ

ನೂರಾರು ಜನರ ಅನುಪಮ ಅಭಿನಯ

ಬೆಂಗಳೂರು
ಮೂವಿಲ್ಯಾಂಡ್

ಮೈಸೂರು
ಚಾಮುಂಡೇಶ್ವರಿ

ಟಾಕೀಸುಗಳಲ್ಲಿ ನೋಡಿ ನಲಿಯಿರಿ!

P. C. S. RELEASE

ರಾಷ್ಟ್ರೀಯ ರಕ್ಷಣಾಬಲ

1945

★

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ
೨೨ ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.
ಪತ್ರಿಕೆ ಹೆಸರು ರಾಷ್ಟ್ರೀಯ ರಕ್ಷಣಾಬಲ
ಆರಂಭ ದಿನಾಂಕ
ಪ್ರಕಟನಾ ಸ್ಥಳ ಮೈಸೂರು
ಸಂಪಾದಕರ ಹೆಸರು
ಮ್ಯಾನೇಜರ ಹೆಸರು
ಸೌಜನ್ಯ ಕೃಪೆ

ಪಶ್ಚಿಮ ಮರುಭೂಮಿ ಯುದ್ಧದಲ್ಲಿ ಜರ್ಮನ್ ಸೈನ್ಯದ
ಹಿನ್ನೆಲೆಯಲ್ಲಿದ್ದವರು

ಹನ್ನೊಂದನೆ ಹುಸ್ಸಾರ್ಸ್ ಸೈನ್ಯದ ಬ್ರಿಟಿಷ್ ಆರ್ಮರ್ಡ್ ಕಾರ್ ದಳದವರನ್ನು ಈ ಚಿತ್ರದಲ್ಲಿ
ಕಾಣಬಹುದು. ಟೋಬ್ರುಕ್, ಬೆಂಘಾಜಿ ಮತ್ತು ಟ್ರಿಪೋಲಿಗಳಿಗೆ
ಮೊಟ್ಟ ಮೊದಲು ನುಗ್ಗಿದವರು ಇವರೇ.
ಇವರ ಹೆಸರುಗಳು (ಎಡದಿಂದ ಬಲಕ್ಕೆ) ಮೇಜರ್ ಜೆ ಲಾರ್ಸ್.
ಸಾರ್ಜೆಂಟ್ ... ಮತ್ತು ಲ್ಯಾ|| ಕಾರ್ಪೋರಲ್ ಪಾರ್ಟರ್

★

ರಾಷ್ಟ್ರೀಯ ರಕ್ಷಣಾಬಲ

ಮೈಸೂರು

ಸಂಪುಟ ೨]　　೫-೯-೪೩ ನೇ ಭಾನುವಾರ　　[ಸಂಚಿಕೆ ೨೩

ಮೈಸೂರು ರಾಷ್ಟ್ರೀಯ ರಕ್ಷಣಾಬಲ

—oo—

ಕೋಲಾರ ಡಿಸ್ಟ್ರಿಕ್ಟಿನಲ್ಲಿ ೧೯೪೩ ನೇ ಇಸವಿ ಜುಲೈ ತಿಂಗಳಲ್ಲಿ ನಡೆದ ಕಾರ್ಯ ಕಲಾಪಗಳ ಸಂಕ್ಷೇಪ ವರದಿ

—oo—

ಜಿಲ್ಲಾ ಆರ್ಗನೈಜರ್

ಲೋಕಸೇವಾನಿರತ ಶ್ರೀ ಎಲ್. ವೇಮಾರೆಡ್ಡಿಯವರು ಮುಳಬಾಗಲು ತಾಲ್ಲೂಕು ಗುಡಿಪಲ್ಲಿ ಮತ್ತು ತಾಯಿಯೂರುಗಳಲ್ಲಿ ಪ್ರಚಾರ ಕಾರ್ಯವನ್ನು ನಡೆಸಿದರು ಗುಡಿಪಲ್ಲಿಯಲ್ಲಿ ವಿಲೇಜ್ ಪಂಚಾಯ್ತಿ ಅಧ್ಯಕ್ಷರು ಮತ್ತು ಮೆಂಬರುಗಳೊಂದಿಗೆ ಯುದ್ಧದ ಪ್ರಸಕ್ತ ವಿಷಯಗಳನ್ನು ಕುರಿತು ಸಂಭಾಷಣೆ ನಡೆಸುದುದೆ ಅಲ್ಲದೆ ಮುಖ್ಯವಾಗಿ ಆಹಾರಪದಾರ್ಥಗಳ ಅಭಾವದ ಪ್ರಶ್ನೆಯನ್ನು ಕುರಿತು ಚರ್ಚಿಸಲಾಯಿತು ಹೆಚ್ಚು ಆಹಾರಪದಾರ್ಥಗಳನ್ನು ಬೆಳೆಯುವಂತೆ ಅವರನ್ನು ಪ್ರೋತ್ಸಾಹಿಸಲಾಯಿತು

ತಾಲ್ಲೂಕು ಆರ್ಗನೈಜರು ಮತ್ತು ರಾಷ್ಟ್ರೀಯ ರಕ್ಷಣಾಬಲ ಸಮಿತಿಯ ಮೆಂಬರುಗಳೂ ಅವಲ್ದಾರರೂ, ರೆವಿನ್ಯೂ ಇನ್ಸ್‌ಪೆಕ್ಟರು ಇವರುಗಳಲ್ಲರೂ ನೆರಡಿದ್ದ ಒಂದು ಸಭೆ ಸೇರಿದ್ದಿತು. ಆ ಸಭೆಗೆ ಸ್ಥಳೀಯ ಪ್ರಜೆಗಳನೇಕರು ಬಂದಿದ್ದರು ಆಗ ಒಂದು ಚಿಕ್ಕ ಭಾಷಣವನ್ನು ಮಾಡಲಾಯಿತು ಪ್ರತಿಯೊಬ್ಬ ಪ್ರಜೆಯೂ ಮಾಡಬೇಕಾದ ಕರ್ತವ್ಯದ ಪ್ರಾಮುಖ್ಯತೆಯ ವಿಷಯವಾಗಿ ಒತ್ತಿಹೇಳಿದ್ದಾಯಿತು ಯುದ್ಧವು ನಡೆಯುವಷ್ಟು ಕಾಲವೂ ಜನರು ಯಾವ ರೀತಿ ಧನಸಂಗ್ರಹ ಮಾಡಲು ಮಿತವ್ಯಯವನ್ನು ಅವಲಂಬಿಸಬೇಕೆಂಬುದನ್ನು ಬೋಧಿಸಲಾಯಿತು. ಆಹಾರ ಪದಾರ್ಥಗಳನ್ನು ದಾಸ್ತಾನು ಮಾಡಿಕೊಂಡಿರತಕ್ಕವರು ಹಸುವಿನಿಂದ ಸಂಕಟಪಡುತ್ತಿರುವವರ ಸಲುವಾಗಿ ಕನಿಕರವನ್ನು ತೋರುವುದಲ್ಲದೆ ಸಹಕರಿಸಬೇಕೆಂದು ಹೇಳಲಾಯಿತು.

ತಾಯಿಯೂರಿನಲ್ಲಿ ಒಂದು ಸಾರ್ವಜನಿಕ ಸಭೆಯನ್ನು ನೇರಿಸಲಾಗಿದ್ದಿತು ಸ್ಥಳೀಯ ಸ್ಕಾಟುಗಳಿಗಾಗಿ ಒಂದು ಭಾಷಣ ಮಾಡಿದ್ದಲ್ಲದೆ ಶಾಲಾ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ರಕ್ಷಣಾಬಲದ ಆದರ್ಶಗಳನ್ನು ಕುರಿತು ತಿಳಿಸಲಾಯಿತು

ಜಿಲ್ಲಾ ಅಡ್ವೈಜರಿ ಕಮಿಟಿಯ ಸಭೆಯಲ್ಲಿ ಆಹಾರದ ಪರಿಸ್ಥಿತಿಯ ವಿಷಯವಾಗಿ ಚರ್ಚೆ ನಡೆಸಿದುದೇ ಅಲ್ಲದೆ, ಅದಕ್ಕಾಗಿ ನಡೆಸಬೇಕಾದ ಕಾರ್ಯಕ್ರಮಗಳನ್ನು ಆಲೋಚಿಸಲಾಯಿತು

ವಿದ್ಯಾಭ್ಯಾಸದ ಭಾಗ

ಶ್ರೀ ವಿ ವೆಂಕಟಸ್ವಾಮಿಚಟ್ಟಿಯವರು ಶಿಡ್ಲಘಟ್ಟ ಕೋಲಾರ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿನ ಹಲವು ಗ್ರಾಮಗಳಿಗೆ ಭೇಟಿ ಕೊಟ್ಟರು ಈ ಪ್ರತಿಯೊಂದು ಊರಿನಲ್ಲಿಯೂ ಇವರು ಕಡು ಬಡವರಿಂದ ಹಿಡಿದು ಸಾಹುಕಾರರವರೆಗೆ ಎಲ್ಲರನ್ನೂ ಕಂಡಿದ್ದು ಬಡವರ ಕಷ್ಟದುಃಖಗಳನ್ನೂ ಸಾಹುಕಾರರು ಯಾವ ರೀತಿ ದುಬಾರಿ ಧಾರಣೆಗಳಿಂದ ಹಣ ಸಂಪಾದಿಸುತ್ತಿದ್ದಾರೆಂಬುದನ್ನೂ ವಿಚಾರಿಸಿ ತಿಳಿದುಕೊಂಡರು ಇವರು ಸಭೆಗಳನ್ನು ನಡೆಸಿ ರೈತರಾದವರು ಹೆಚ್ಚು ಶ್ರಮ ವಹಿಸಿ ಫಸಿಲು ಬೆಳೆಯಬೇಕೆಂದು ಹೇಳಿದ್ದಲ್ಲದೆ ಬಡಬಗ್ಗರಿಗೆ ಸ್ವಲ್ಪ ಸಮಾಧಾನವಾಗುವಂತೆ ಸಾನುಭೂತಿಯ ಮಾತುಗಳನ್ನಾಡಿದರು ಕೋಳಮುಂತಾದ ಧಾನ್ಯಗಳನ್ನೂ ಉಪಯೋಗಿಸಬೇಕೆಂದೂ ಅವು ಬಹಳ ಆರೋಗ್ಯವಾದ ಪದಾರ್ಥಗಳೆಂದೂ ಒತ್ತಿ ಹೇಳಿದರು ಈ ಒರಟು ದವಸಗಳಲ್ಲಿರುವ ಸತ್ವಾಂಶಗಳನ್ನೂ ಅವರಿಗೆ ತಿಳಿಯಪಡಿಸಿ, ಕಡೆಯಲ್ಲಿ ರೈತರು ಯಾರೂ ತಮ್ಮ ದನಕರುಗಳನ್ನು ಬಿಕರಿ ಮಾಡಕೂಡದೆಂದೂ, ವ್ಯಸಾಯ ಪ್ರಧಾನವಾದ ಮೈಸೂರು ದೇಶಗಳಲ್ಲಿನ ರೈತರ ಜೀವನಗಳೇ ಅವುಗಳ ಮೇಲೆ ಆಧಾರ ಪಟ್ಟಿವೆಯೆಂದೂ ಹೇಳಿದರು. ರೈತರು ಪರಮಾವಧಿ ಫಸಲನ್ನು ಪಡೆಯಲು ಬೇಕಾದಷ್ಟು ಗೊಬ್ಬರ ಹಾಕಬೇಕೆಂದೂ ಒತ್ತಿ ಹೇಳಲಾಯಿತು ಸರ್ಕಾರದವರು ರೈತರಿಗೆ ಬೀಜ ಗೊಬ್ಬರ ಮತ್ತು ಬೇಸಾಯದ ಮುಟ್ಟುಗಳನ್ನು ಒದಗಿಸುವ ವಿಷಯವನ್ನು ವಿಶದವಾಗಿ ತಿಳಿಯಪಡಿಸಿದರು.

ಶ್ರೀ|| ಜಿ. ಗಿರಿಮಾಜಿರಾಯರು ಬೌರಿಂಗ್ಪೇಟೆ ಮುಳಬಾಗಲು ಮತ್ತು ಕೋಲಾರದ ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ಹೋಗಿ ಸಭೆಗಳನ್ನು ಸೇರಿಸಿ ಭಾಷಣಗಳನ್ನು ಮಾಡಿದರು. ಈ ಸಭೆಗಳಿಗೆ ಜನರು ಹೆಚ್ಚಾಗಿಯೇ ಬಂದಿದ್ದರು. ಅವರಿಗೆಲ್ಲ ರಾಷ್ಟ್ರೀಯ ರಕ್ಷಣಾಬಲದ ಉದ್ದೇಶಗಳನ್ನು ವಿವರಿಸಲಾಗಿ, ಅನೇಕರು ಅದರ ಸದಸ್ಯರಾಗಲಿಚ್ಛಿಸಿದರು. ಸುಗಲೂರು ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರು ರೈತರನ್ನು ಕುರಿತು ಸರ್ಕಾರದವರು ರೈತರಿಗೆ ಉಂಟುಮಾಡಿರುವ ಸೌಲಭ್ಯಗಳನ್ನು ವಿವರಿಸಿದರು. ಆಹಾರ ಪದಾರ್ಥಗಳನ್ನಿಟ್ಟುಕೊಂಡಿರುವವರು ಅವು ಇಲ್ಲದ ಜನರ ಹಸಿವನ್ನು ನೀಗಲು ಪ್ರಯತ್ನಿಸಬೇಕೆಂದು ಬೋಧಿಸಿದರು

ಕೆಲವು ಸಭೆಗಳು ಶಾಲಾ ಮುಖ್ಯೋಪಧ್ಯಾಯರ ಅಧ್ಯಕ್ಷತೆಯಲ್ಲಿ ನಡೆದವು. ಬಾಲಕರು

೧೩ನೇ ಪುಟವನ್ನು ನೋಡಿ

ಜಪಾನಿನ ಪಾರಿಶ್ರಾಮಿಕ ವ್ಯವಸ್ಥೆಯ ಒಂದು ದೃಶ್ಯ

—oo—

ಕಾರ್ಖಾನೆಗಳಲ್ಲಿ ಆಕಸ್ಮಿಕ ಅನಾಹುತಗಳೂ, ಕಾರ್ಮಿಕ ಜಗಳಗಳೂ ದಿನದಿನಕ್ಕೆ ಹೆಚ್ಚುತ್ತಿದೆ

—oo—

ಕೆಲಸಗಾತಿಯರಿಗೆ ವರ್ಷಕ್ಕೆ ೭೫ ರೂಪಾಯಿ ಕೂಲಿ

—oo—

ಜಪಾನು ಎಷ್ಟೋ ವರ್ಷಗಳಿಂದಲೂ ಜಗತ್ತಿನ ಪಾರಿಶ್ರಾಮಿಕ ರಾಷ್ಟ್ರಗಳ ಪೈಕಿ ಮುಂದುವರೆದಿರುವ ರಾಷ್ಟ್ರಗಳಲ್ಲಿ ತಾನೊಂದೆಂದು ಬಡಾಯಿಕೊಚ್ಚಿಕೊಳ್ಳುತ್ತಿದೆ. ಜಪಾನು ಬಟ್ಟೆಗಳ ಮತ್ತು ಯಂತ್ರಾದಿಗಳ ನಿರ್ಮಾಣಗಳಲ್ಲಿ ಬಹಳಮಟ್ಟಿನ ಪ್ರಗತಿಯನ್ನು ಸಾಧಿಸಿದೆಯೆಂಬುದು ನಿಜವಾದಾಗ್ಯೂ, ಈ ಪ್ರಗತಿಯ ಜತೆಯಲ್ಲಿಯೇ ಕಾರ್ಮಿಕ ಜಗಳಗಳೂ,ಕಾರ್ಖಾನೆಗಳಲ್ಲಿನ ಆಕಸ್ಮಿಕ ಅನಾಹುತಗಳೂ ಸಹ ವಿಪರೀತವಾಗಿ ಹೆಚ್ಚಾಗುತ್ತಿವೆ ಇನ್ನೂ ಅಲ್ಲಿನ ಸ್ತ್ರೀಪುರುಷರ ಆರೋಗ್ಯ ಭಾಗ್ಯವು ಕೆಡುತ್ತಿರುವುದಂತೂ ಹೇಳತೀರದು

ಮೂವರು ಭಾರಿ ಬಂಡವಾಳಗಾರರ ಕೈಯಲ್ಲಿಯೆ ಜಪಾನಿನ ಇಡೀ ನೆಯಿಗೆ ಕಾರ್ಖಾನೆಗಳೂ ಭಾರಿ ಭಾರಿ ಇತರ ಕಾರ್ಖಾನೆಗಳೂ ಇವೆ, ಅಲ್ಲದೆ ಆ ರಾಷ್ಟ್ರದ ಖಾಸಗಿ ಬಂಡವಾಳದಲ್ಲಿನ ಮೂರರಲ್ಲೊಂದು ಪಾಲು ಈ ಮೂವರು ಬಂಡವಾಳಗಾರರದೇ ಆಗಿದೆ. ಮಿಟ್ಸುಯ್ಯಿ ಮಿಟ್ಸು ಬಿಷಿ ಮತ್ತು ಸುಮಿಟೋಮೋ ಕಂಪನಿಗಳು ಸರ್ಕಾರದೊಂದಿಗೆ ಬಹಳ ಸಮೀಪ ಬಾಂಧವ್ಯವನ್ನಿಟ್ಟು ಕೊಂಡೂ ಸೈನ್ಯದ ಇಲಾಖಾ ಮುಖಂಡರ ಅಜೂಜು ಬಾರಿ ಮಾಡಿಕೊಂಡೂ, ಈ ತೆರನಾಗಿ ಅಭಿವೃದ್ಧಿಯನ್ನು ಪಡೆದಿವೆ

ಜಪಾನಿನಲ್ಲಿ ಅನೇಕ "ಮಾದರಿ" ಕಾರ್ಖಾನೆಗಳಿವೆಯೆಂದು ಪ್ರಚಾರ ಕಾರ್ಯ ನಡೆದಿದೆ ಯ್ಯಷ್ಟೆ? ಇದನ್ನು ಹತ್ತಿರಕ್ಕೆ ಹೋಗಿ ಪರೀಕ್ಷಿಸಿ ನೋಡಿದಲ್ಲಿ, ಅವುಗಳ ಬಂಡವಾಳಗಾರರು ಕಡಿಮೆ ಬಂಡವಾಳ ಹಾಕಿ ಪರಮಾವಧಿ ನಫೆಯನ್ನು ಪಡೆಯಲು ಎಲ್ಲ ಪ್ರಯತ್ನಗಳನ್ನೂ ಮಾಡಿರುವುದಾಗಿ ಕಂಡು ಬರುತ್ತದೆ.

ಜಪಾನಿನಲ್ಲಿರುವ ಕಾರ್ಖಾನೆಗಳ ಪೈಕಿ ಮೂರರಲ್ಲೊಂದು ಪಾಲು ಕಾರ್ಖಾನೆಗಳು ಭಾರಿ ಕಟ್ಟಡಗಳಲ್ಲಿ ಇವೆಯಲ್ಲದೆ ಅಲ್ಲಿನ ಕಾರ್ಯಗಳ ಪರಿಸ್ಥಿತಿಗಳು ಸಹ ಉತ್ತಮವಾಗಿವೆ ಈ ಕಾರ್ಖಾನೆಗಳಲ್ಲಿ ಯಂತ್ರಗಳ ಬಳಿ ನಿಂತು ಕೆಲಸ ಮಾಡುವ ಸ್ತ್ರೀಯರು ಕೂಲಿಗಾರರ ವಸತಿಗಳಲ್ಲಿ ಏಕಾಂಗಿಗಳಾಗಿ ಜೀವಿಸುತ್ತಿರುತ್ತಾರೆ

ಕೂಲಿಗಳ ಕಷ್ಟ

ಅವರು ಪ್ರಚಾರ ಮಾಡುತ್ತಿರುವುದನ್ನು ಕೇಳುವುದಕ್ಕೆ ಎಷ್ಟೋ ಶ್ರಾವ್ಯವಾಗಿದ್ದರೂ ಸಹ ಅಲ್ಲಿ ನಡೆಯುತ್ತಿರುವುದು ಮಾತ್ರ ಕೂಲಿಗಳ ಕೈಲಿ ಬೆವರು ಸುರಿಸಿ ಕೆಲಸ ತೆಗೆಯುತ್ತಿರುವುದೇ ಅಲ್ಲಿನ ಹೆಣ್ಣು ಕೂಲಿಗಳು ವರ್ಷಕ್ಕೆ ೧೫೦ರಿಂದ ೧೭೦ ಯೆನ್‌ಗಳನ್ನೂ (ಅಂದರೆ ಸುಮಾರು ೭೫ರಿಂದ ೮೦ ರೂಪಾಯಿಗಳು) ಸಂಪಾದಿಸುತ್ತಾರೆ. ಇದರ ಪೈಕಿ ಐವತ್ತೂ ಯೆನ್‌ಗಳನ್ನೂ ಅಂದರೆ ಮೂರರಲ್ಲೊಂದು ಪಾಲನ್ನು ಕಾರ್ಖಾನೆಯ ಯಜಮಾನನು ಅವರ ತಿಂಡಿತೀರ್ಥದ ಖರ್ಚಿಗಾಗಿಯೂ ಹಿಡಿದುಕೊಳ್ಳುತಾನೆ.

ತಿಂಗಳಿಗೆ ಎರಡೇ ಎರಡು ದಿನಗಳ ರಜಾಮಾತ್ರ ಕೊಡುತ್ತಾರೆ! ಇದನ್ನೆಲ್ಲಾ ನೋಡಿದರೆ ಜಪಾನಿನಲ್ಲಿ ಕಾರ್ಮಿಕ ಪರಿಸ್ಥಿತಿಗಳು ಚೆನ್ನಾಗಿವೆಯೆಂದು ಯಾರು ತಾನೆ ಹೇಳಬಲ್ಲರು

ಜಪಾನಿನ ಕಾರ್ಮಿಕ ಕಾರ್ಯಗಳ ಅನೇಕ ಕೆಲಸಗಳು ಕಾರ್ಖಾನೆ ಕಟ್ಟಡಗಳಿಗೆ ಸಂಬಂಧಿಸಿದಂತೆ ಇರತಕ್ಕ ಸಣ್ಣ ವರ್ಕ್‌ಷಾಪುಗಳಲ್ಲಿಯೂ, ಷೆಡ್‌ಗಳಲ್ಲಿಯೂ ನಡೆಯುತ್ತಿವೆ ಈ ಸ್ಥಳಗಳಲ್ಲಿ ಇರತಕ್ಕ ಪರಿಸ್ಥಿತಿಗಳು ಸ್ವಲ್ಪವೂ ಸಮರ್ಪಕವಾಗಿರ ವುದಿಲ್ಲ

ಮುವ್ವತ್ತು ವರ್ಷ ವಯಸ್ಸಿನ ಕೆಲಸಗಾರನೊಬ್ಬನು ಯಂತ್ರಗಳ ಜೋಡಣೆಯ ಕಾರ್ಖಾನೆಯಲ್ಲಿ ಬೆಳಗ್ಗೆ ಆರೂವರೆ ಘಂಟೆಯಿಂದ ಹಿಡಿದು ರಾತ್ರಿ ಎಂಟೂವರೆ ಘಂಟೆಯವರೆಗೆ ಯಂತ್ರದ ಮುಂದೆ ನಿಂತು ಕೆಲಸಮಾಡುತ್ತಾರೆ. ಮಧ್ಯೆ ಇವನಿಗೆ ಎರಡೇ ಎರಡು ಘಂಟೆಗಳ ಕಾಲ ವಿರಾಮವಿರುತ್ತದೆ ಇವನಿಗೆ ಸಾಧಾರಣವಾಗಿ ಕೊಡತಕ್ಕ ತಿಂಗಳಿಗೆ ಎರಡು ದಿನಗಳ ರಜಾ ಅಲ್ಲದೆ ವಾರಕ್ಕೊಂದು ಅರ್ಧ ದಿನದ ರಜಾ ದೊರಕುತ್ತದೆ.

ಇವನು ಕತ್ತಲು ಮುಸುಕಿರುವ ಕೊಠಡಿಯಲ್ಲಿ ಕೊಳಕು ಮತ್ತು ಎಣ್ಣೆಗಳ ಮಧ್ಯೆ ನಿಂತು ಕೆಲಸ ಮಾಡಬೇಕು ಇದಕ್ಕೆಲ್ಲಾ ಇವನಿಗೆ ತಿಂಗಳಿಗೆ ರೂ ೧೪ ರಿಂದ ಹಿಡಿದು ರೂ ೨-೮ ಆಣೆ ವರೆಗೆ ಸಂಬಳ ಸಿಗುತ್ತದೆ ಈ ಸಂಬಳದಲ್ಲಿ ಇವನು ತನ್ನ ಕಂದಾಯಗಳನ್ನೂ ಬಾಡಿಗೆಯನ್ನೂ ಕೊಟ್ಟು ತನ್ನ ಹೆಂಡತಿ ಮಕ್ಕಳ ಹೊಟ್ಟೆ ಬಟ್ಟೆಗಳಿಗೆ ತಂದುಹಾಕಿ ಕುಟುಂಬ ರಕ್ಷಣೆ ಮಾಡಬೇಕು.

ಜಗದ್ವಿಖ್ಯಾತರಾದ ಕಾವಾಸಾಕಾ ಕಬ್ಬಿಣದ ಕಾರ್ಖಾನೆಗಳಲ್ಲಿಯೂ ಬಂದರು ಕಾರ್ಯಾಲಯಗಳಲ್ಲಿಯೂ ಕೆಲಸ ಮಾಡತಕ್ಕವರ ಪೈಕಿ ಶೇಕಡ ೧೯ ರಷ್ಟು ಮಂದಿ ಜನರು ಅಪ್ರೆಂಟೀಸ್ ಕೆಲಸಗಾರರು ಇವರಿಗೆ ಸಂಬಳವಿಲ್ಲ. ವಾರಕ್ಕೆ ಒಂದೂವರೆ ರೂಪಾಯಿನಷ್ಟು "ಪಾಕೆಟ್ ಮನಿ" ಕೊಡುತ್ತಾರೆ.

ಇದೀಗ ಖಾಸಾ ಜಪಾನಿನಲ್ಲಿಯೇ ಇರತಕ್ಕ ಪರಿಸ್ಥಿತಿಯ ಚಿತ್ರ. ಇನ್ನು ಇವರ ಅಧೀನಕ್ಕೆ ಬಂದಿರತಕ್ಕ ಪರರಾಷ್ಟ್ರಗಳಲ್ಲಿ ಇವರು ತೋರಬಹುದಾದ ದಯೆ ದಾಕ್ಷಿಣ್ಯಗಳನ್ನೂ ಕನಿಕರಗಳನ್ನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ ಅಲ್ಲಿನ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ನೇಟಿವ್ ಜನರನ್ನು ಗುಲಾಮರಂತೆ ಕಾಣುತ್ತಿದ್ದಾರೆಂದು ಈಗಾಗಲೇ ಸಮಾಚಾರವು ತಿಳಿದುಬಂದಿದೆ. ಕೈಗಳಲ್ಲಿ ಕವೆಗಳನ್ನು ಹಿಡಿದುಕೊಂಡು ಪ್ರಹಾರ ಮಾಡುತ್ತಾ ಕೆಲಸ ಮಾಡಿಸಿಕೊಳ್ಳುವುದೇ ಅವರ ಗುರಿ. ಅವರು ಮಾಡುತ್ತಿರುವುದಾದರೂ ಅಷ್ಟೇ

———

ರ್‍ಹೂರ್ ಮತ್ತು ಫ್ರಾನ್ಸ್‌ಗಳ ಮೇಲೆ ದಾಳಿಗಳು

———

ಹವಾಗುಣವು ಹಿತಕರವಾಗಿಲ್ಲದಿದ್ದರೂ ನಿನ್ನೆ ದಿನ ಬ್ರಿಟಿಷ್ ವಿಮಾನ ಪಡೆಗಳು ರ್‍ಹೂರ್ ಮತ್ತು ಉತ್ತರ ಫ್ರಾನ್ಸ್ ಮೇಲೆ ದಾಳಿ ನಡೆಸಿದವು. ಈ ದಾಳಿಗಳಿಂದ ೪೮ ಮಿತ್ರ ವಿಮಾನಗಳು ನಷ್ಟವಾಗಿವೆ ೧೨ ಶತ್ರು ವಿಮಾನಗಳು ನಾಶವಾಗಿವೆ.

ಪೋಪರ ಮನವಿ

—o—

ವಿಟಿಕನ್ ರೇಡಿಯೋದಲ್ಲಿ ಪೋಪರು, ಸೌಹಾರ್ದತೆಗಾಗಿಯೂ ಮತ್ತು ಶಾಂತಿಗಾಗಿಯೂ ರಾಜೀ ಮಾಡಿಕೊಳ್ಳಬೇಕೆಂದು ಮನವಿ ಮಾಡಿಕೊಂಡಿರುವರು.

★ ಮುಸೋಲಿನಿ ★

ಯಾರಿವನು ?

ತನ್ನನ್ನು ಸೈನಿಕವೃತ್ತಿಗೆ ಕರೆಯುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ೧೯೦೫ರ ಒಂದುಸುಳ್ಳು ಪ್ಯಾಸ್‌ಪೋರ್ಟನ್ನು ಇಟ್ಟುಕೊಂಡು ತಲೆತಪ್ಪಿಸಿಕೊಂಡ ಮನುಷ್ಯನು ಅದಾದಹದಿನೈದು ವರ್ಷಗಳಅನಂತರ ಮಹಾಯೋಧವೃತ್ತಿಯ ಪಾತ್ರವನ್ನು ವಹಿಸುವುದಕ್ಕೆ ಹೇಗೆ ಶಕ್ಯವೆಂಬುದನ್ನು ಅರ್ಥಮಾಡಿಕೊಳ್ಳುವುದು ಸುಲಭವಾದ ಕಾರ್ಯವಲ್ಲ.

ಆಂಜೆಲಿಕಾ ಬಾಲಾಬಾನಾಫ್ ಎಂಬುವಳು ತಾನು ಮುಸೋಲಿನಿಯನ್ನು ಕಂಡಾಗ ಮನಸ್ಸಿನಲ್ಲಿ ಉಂಟಾದ ಭಾವನೆಯನ್ನು ಕುರಿತು ಈರೀತಿ ಹೇಳಿದ್ದಾಳೆ - "ಇವನಷ್ಟು ನೀಚ ಪರಿಸ್ಥಿತಿಯಲ್ಲಿರತಕ್ಕ ಮನುಷ್ಯನನ್ನು ನಾನು ಇದುವರೆಗೆ ನೋಡಿಯೇ ಇಲ್ಲ. ಇವನ ದವಡೆಗಳು ವಿಶಾಲವಾಗಿದ್ದರೂ ಸಹ ಅವರ ಕಣ್ಣುಗಳಲ್ಲಿ ಎದ್ದು ಕಾಣುವ ಚಿತ್ತ ಚಾಂಚಲ್ಯವನ್ನೂ ಅಸಂತೋಷವನ್ನೂ ನೋಡಿದರೆ ಇವನೊಬ್ಬ ಶುದ್ಧ ಹೇಡಿಯಿರಬಹುದು ಎನ್ನಿಸಿತು"

ತಾರುಣ್ಯದಲ್ಲಿ

ಇವನಲ್ಲಿದ್ದ ಅತ್ಯುತ್ಕಟಸಮಾಜವಾದವನ್ನೂ ಇವನ ಚಟುವಟಿಕೆಗಳನ್ನೂ ನೋಡಿ ಸ್ವಿಟ್ಜರ್ಲೆಂಡ್ ಸರ್ಕಾರದವರು ಗಡೀಪಾರು ಮಾಡಿದರು. ಇವನ ಮಾತೃದೇಶವು ಅನೇಕ ಬಾರಿ ಇವನು ನಡೆಸಿದ್ದ ತಕ್ಸೀರುಗಳಿಗಾಗಿ ಜೈಲಿಗೆ ಹಾಕಿತ್ತು. ಇವನನ್ನೊಂದಾವರ್ತಿ ಕೋರ್ಟಿಗೆ ಎಳೆದುಕೊಂಡು ಹೋಗಿ ನಿಲ್ಲಿಸಿದಾಗ ತನ್ನ ಅಭಿಪ್ರಾಯಗಳು ರಾಷ್ಟ್ರೀಯ ವಾದಿಗಳ ಅಭಿಪ್ರಾಯಕ್ಕೆ ಶುದ್ಧಾಂಗವಾಗಿ ವ್ಯತಿರೇಕವೆಂದು ಬೊಂಕಿದನು. "ಅವರಿಗೆ ವಿಶಾಲ ಇಟಲಿ ಬೇಕು, ನನಗೆ ಸುಸಂಸ್ಕೃತವೂ ಸಂಪದ್ಯುಕ್ತವೂ ಸ್ವತಂತ್ರವೂ ಆದ ಇಟಲಿ ಬೇಕು" ಎಂದು ಹೇಳಿದ್ದ

ಔದ್ಧತ್ಯ

ಹದಿನೈದು ವರ್ಷಗಳ ಅನಂತರದಲ್ಲಿ ಇವನ ಅಭಿಪ್ರಾಯಗಳು ಒದಲಾವಣೆ ಹೊಂದಿದ್ದವು. ಒಲಿಪ್ರಕಾಶ ವಾದವನ್ನು ಇವನು ದಪ್ಪ ಗಂಟಲಲ್ಲಿ ಪ್ರತಿಪಾದಿಸುತ್ತಿದ್ದನು. ಇಟಲಿಯ ಸತ್ವವು ಹೆಚ್ಚುವುದಕ್ಕೆ ಅವಶ್ಯಕವಾಗಿ ಬೇಕಾಗಿರುವ ರಾಜ್ಯವನ್ನು ಇತರ ನಿರ್ಬಲ ರಾಷ್ಟ್ರಗಳನ್ನು ಆಕ್ರಮಿಸಿಕೊಳ್ಳಬೇಕು ಎಂದು ಹೇಳಲಾರಂಭಿಸಿದ್ದನು

ಪತನ

ಹೀಗಿರುವಾಗ ೧೯೪೩ನೆ ಈಸವಿ ಜುಲೈ ೨೫ನೆಯ ತಾರೀಖು ಭಾನುವಾರದ ದಿವಸ ಸಾಮ್ರಾಜ್ಯ ನಿರ್ಮಾಣನೆಂಬ ಇವನ ಎರಡನೆಯ ಪಾತ್ರವೂ, ಇಟಲಿಯ ಫ್ಯಾಸಿಸ್ಟ್ ಸರ್ವಾಧಿಕಾರಿಯ ಪಾತ್ರವೂ ಸ್ವಲ್ಪವೂ ಗೌರವಾಸ್ಪದವಲ್ಲದ ರೀತಿಯಲ್ಲಿ ಕೊನೆಗಂಡವು

ಮುಸೋಲಿನಿಯ ಪರಿಚಯ

ಈ ಮನುಷ್ಯನು ಯಾರು? ಮತ್ತಾರೂ ಅಲ್ಲ ಬೆನಿಟೊ ಮುಸೋಲಿನಿ ಒಂದು ಹಳ್ಳಿಯ ಕಮ್ಮಾರನ ಹೊಟ್ಟೆಯಲ್ಲಿ ೧೮೮೩ನೆ ಇಸವಿ ಜುಲೈ ೨೯ನೆಯ ತಾರೀಖಿನ ದಿವಸ ಹುಟ್ಟಿದವನು. ವೃತ್ತಿಯಲ್ಲಿ ಗಾರೆಯವನು, ತಾರುಣ್ಯದಲ್ಲಿ ಸಮಾಜವಾದಿ, ಪ್ರೌಢಾವಸ್ಥೆಯಲ್ಲಿ ಫ್ಯಾಸಿಸ್ಟ್ ಸರ್ವಾವಸ್ಥೆಗಳಲ್ಲಿಯೂ ಶಿಕ್ಷಾರ್ಹನಾದ ತಕ್ಸೀರುದಾರ ಇವೊತ್ತು ಮೇರೆ ಮಿತಿಗಳಿಲ್ಲದ ರಕ್ತನೇತುಹತ್ತಕಾಂಕ್ಷೆಗೆ ಬಲಿಬಿದ್ದು ನಾಶವಾದವನು

ಇವನು ತನಗಿದ್ದ ಅಧಿಕಾರ ದಾಹವನ್ನು ತೀರಿಸಿಕೊಳ್ಳಲು ಆದರ ರುಚಿಯನ್ನು 'ಅವಂತಿ'ಎಂಬ ಪತ್ರಿಕೆಯ ಸಂಪಾದಕನಾಗಿದ್ದಾಗ ಚೆನ್ನಾಗಿ ತಿಳಿದುಕೊಂಡಿದ್ದ ಒಂದು ನೀತಿಯಿಂದ ಇನ್ನೊಂದು ನೀತಿಯನ್ನು ಅವಲಂಬಿಸುತ್ತಿದ್ದ ಒಂದುಬಾರಿಯಂತೂ ನನ್ನ ಜೀವಿತವನ್ನೂ ನಾನೊಂದುಸರ್ತಿ ತ್ತಮವಾದ ಜೀವಿತವನ್ನಾಗಿ ಮಾಡಿಕೊಳ್ಳುತ್ತೇನೆ" ಎಂದು ಹೇಳಿ, ತಾನೆಂತಹ ಅತ್ಯುತ್ಕಟ ಸ್ವಾರ್ಥಪರನೆಂಬುದನ್ನೂ, ಆದರ್ಶಗಳನ್ನೂ ಸಹ ಬೇಕಾಗಿದ್ದಲ್ಲಿ ಗಾಳಿಗೆ ಚೆಲ್ಲುವಂಥವನೆಂಬುದನ್ನೂ ಚೆನ್ನಾಗಿ ತೋರ್ಪಡಿಸಿಕೊಂಡ

ಫ್ಯಾಸಿಜಂ ಪಂಥ

ಫ್ಯಾಸಿಸ್ಟ್ ಪಂಥದಲ್ಲಿ ಈ ತನ್ನ ಗುರಿಯನ್ನು ಸಾಧಿಸುವುದಕ್ಕೆ ಒಂದು ನೊಗಸಾದ ಸಾಧನವನ್ನೇ ಗೊತ್ತು ಹಚ್ಚಿಕೊಂಡ ಆದರಿಂದ ತನ್ನ ಉದ್ದೇಶ ಪೂರ್ತಿಯಾಗುವುದೆಂದು ಮನಗಂಡ

ಇವನ ಫ್ಯಾಸಿಸ್ಟ್ ಪಂಥವು ಇತರ ಶಾಂತಿ ಪ್ರಿಯವಾದ ರಾಷ್ಟ್ರಗಳನ್ನು ಆದರ್ಶವಿಹೀನವಾದ ನಿಷ್ಫಲವಾದ ರಾಷ್ಟ್ರಗಳೆಂದೂ ಸತ್ವ ಹೀನವಾದ ದೇಶಗಳೆಂದೂ ದೂಷಿಸುತ್ತಿತ್ತು ಜಗತ್ತಿನಲ್ಲಿ ಸಮಸ್ತ ಹಕ್ಕುಬಾಧ್ಯತೆಗಳೂ ಶ್ವೇತವರ್ಣೀಯರವೇ ಎಂದೂ ಶ್ವೇತೇತರವರ್ಣೀಯರಿಗೆ ಯಾವ ಹಕ್ಕುಗಳೂ ಇಲ್ಲವೆಂದೂ ಆ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವ ಅವಶ್ಯಕತೆಯು ಉಂಟೆಂದೂ ವಾದಿಸ ಹತ್ತಿದ್ದೆ ಅಲ್ಲದೆ ಇಟಲಿಗೆ ಹೆಚ್ಚು ರಾಜ್ಯದ ಅವಶ್ಯಕತೆಯಿದೆಯೆಂದೂ ಅವಶ್ಯ ಬಿದ್ದಲ್ಲಿ ಅದನ್ನು ಆ ನಿರ್ವೀರ್ಯ ರಾಷ್ಟ್ರಗಳಿಂದ ಕಿತ್ತುಕೊಳ್ಳಬೇಕೆಂದೂ ಪ್ರತಿಪಾದಿಸಲಾರಂಭಿಸಿದನು.

ರೋಸಿಹೋಗಿದ್ದ ಇಟಲಿ

೧೯೧೪ರಿಂದ ೧೯೧೮ರವರೆಗೆ ನಡೆದ ಘೋರ ಯುದ್ಧದ ದುಷ್ಪರಿಣಾಮಗಳಿಂದ ಸಂತಪ್ತರಾಗಿದ್ದ ಇಟಾಲಿಯನ್ ಪ್ರಜೆಗಳಿಗೆ ಮುಸೋಲಿನಿಯು ಹೇಳಿದ ಈ ಮಾತುಗಳು ಒಂದು ನೂತನ ಭರವಸೆಯನ್ನೂ ಉತ್ತೇಜನವನ್ನೂ ಕೊಡುವ ಸಂದೇಶವಂತಿದ್ದವು ನಿರುದ್ಯೋಗ ಅಸಮಾಧಾನ, ಜೀವನದ ದುಬಾರಿ ಖರ್ಚಿನ ಬಗ್ಗೆ ಇದ್ದ ಅಸಹ್ಯ ಇವುಗಳಿಂದ ಬಾಲಿ ಬೀಸುತ್ತಿದ್ದ ಇಟಾಲಿಯನ್ ಜನರಿಗೆ ಯುದ್ಧವಾಗುವುದೇ ಲೇಸು ಎಂದೆನಿಸಿದ್ದಿತು. ಮುಸೋಲಿನಿಯು ಹೇಳಿದ ನುಡಿಗಳಲ್ಲಿ ಯಾವುದೊ ಒಂದು ವಿಜಯದ ಆಸೆ, ರಾಜ್ಯ ವಿಸ್ತರಣ ಮತ್ತು ಏಳಿಗೆ ಇವುಗಳು ಇದ್ದವು.

ಮುಸೋಲಿನಿಯ ಆದರ್ಶ

ಈ ಆಶೆಗಳನ್ನು ಸಾಧಿಸಬೇಕಾಗಿದ್ದರೆ ದೇಶದಲ್ಲಿ ಒಂದು ಸರ್ವಾಧಿಕಾರ ಪ್ರಭುತ್ವವು ಅಗತ್ಯವಾಗಿದ್ದಿತು. ಆದಕ್ಕೆ ಮುಸೋಲಿನಿಯು ತಾನೇ ಸರಿಯಾದವನೆಂದು ಹೇಳಿ ಮುಂದ ಬಂದ. "ಈ ಉದ್ದೇಶ ಸಾಧನೆಗಾಗಿ ಕಾರ್ಮಿಕರೆಲ್ಲರೂ ಸಾಮೂಹಿಕವಾಗಿ ನೇರಿ ಹೋರಾಡುವುದು ಅಗತ್ಯವಾಗಿತ್ತು. ಹೆಂಗುಸರು ಹಿನ್ನಲೆಯಲ್ಲಿದ್ದುಕೊಂಡಿರಬೇಕಾದ್ದಿತು. ರಾಜಕೀಯ ರಂಗದಲ್ಲಿ ಸ್ತ್ರೀಯರಿಗೆ ಯಾವ ಪಾತ್ರವೂ ಇಲ್ಲ"

ಈ ವಾಕ್ಯಗಳನ್ನು ಮುಸೋಲಿನಿಯೇ ಹೇಳಿದ್ದಾನೆ.

ಈ ತೆರನಾದ ತಳಹದಿಯ ಮೇಲೆ ಮುಸೋಲಿನಿಯು ಒಂದು ಸಾಮ್ರಾಜ್ಯವನ್ನು ಕಟ್ಟಲು ಉದ್ದೇಶಿಸಿದನು! "ನನ್ನ ಉದ್ದೇಶಗಳು ಸ್ಪಷ್ಟವಾಗಿವೆ; ನನ್ನ ಆಜ್ಞೆಗಳು ಖಚಿತವಾದುವು, ಮೊಟ್ಟಮೊದಲನೆಯ ಸಾಮ್ರಾಜ್ಯದ ಕಾಲದಲ್ಲಿದ್ದಂತೆ ಸುಭದ್ರವಾಗಿಯೂ ಬಲವಾಗಿಯೂ ರೋಂ ನಗರವು ಮತ್ತೆ ಜಗತ್ತಿನ ಅಚ್ಚರಿಯಾಗಬೇಕು" ಎಂದು ಮುಸೋಲಿನಿಯು ಹೇಳಿದನು.

ಪ್ರಭುತ್ವ ಸ್ಥಾಪನೆ

ಇಟಾಲಿಯನ್ ಪ್ರಜೆಗಳು ೧೯೨೨ನೆ ಇಸವಿ ಅಕ್ಟೋಬರ್ ತಿಂಗಳಲ್ಲಿ ರೋಂ ನಗರದ ಮೇಲೆ ನುಗ್ಗಿದರು. ಮುಸೋಲಿನಿಯು ಮಾರನೆಯ ದಿವಸ ರೋಮಿನ ಪೇಟೆ ನುಗ್ಗಿದನು. ಆಗ ತನ್ನ ಕಾರ್ಯವು ಯಶಸ್ವಿಯಾಗಿ ನೆರವೇರಿತು. ಇವನು ಇಟಲಿಯ ವಾಸ್ತವವಾದ ಪ್ರಭುವಾದನು.

ಮುಸೋಲಿನಿಯು ರಾಷ್ಟ್ರದ ನಿರ್ವಿವಾದ ಪ್ರಭುವಾಗಬೇಕೆಂದೂ, ತನ್ನ ಪ್ರಭುತ್ವವು ನಿರಾತಂಕವಾಗಿರುವಂತಾಗಬೇಕೆಂದೂ ಉದ್ದೇಶಿಸಿ, ರಾಜ್ಯದಲ್ಲಿದ್ದ ಶ್ರೀಮಂತರಿಗೆ ತಾನಾ ರಹದಾರಿಗಳನ್ನೂ, ಸೌಕರ್ಯಗಳನ್ನೂ ಕೊಟ್ಟು ಅವರ ಬೆಂಬಲವನ್ನು ಪಡೆದನು. ಜತೆಯಲ್ಲಿಯೇ ಕಾರ್ಮಿಕರನ್ನು ತುಳಿದುಹಾಕಲು ಒಂದು ಚಳವಳವನ್ನು ಹೂಡಿದನು.

ಇವನ ಪ್ರಭುತ್ವವನ್ನು ವಿರೋಧಿಸಿದವರಿಗೆ ಕಾರಾಗಾರಶಿಕ್ಷೆ, ಫಾಸಿಶಿಕ್ಷೆ, ಆಸ್ತಿಪಾಸ್ತಿಗಳ ಮುಟ್ಟುಗೋಲು, ಕ್ರೂರರೀತಿಯಲ್ಲಿ ಶಿಕ್ಷಿಸು ವುದು ಇನೇ ಮುಂತಾದ ಶಿಕ್ಷೆಗಳನ್ನು ವಿಧಿಸುತ್ತಾ ಬಂದನು.

ಇವನ ಕಾಲದಲ್ಲಿ ನಡೆಯುತ್ತಿದ್ದುದು ಕೃತ್ಯಗಳನ್ನು ಧೈರ್ಯವಾಗಿ ಖಂಡಿಸಿದವರ ಪೈಕಿ ಒಬ್ಬನಾದ ಒಬ್ಬನಾದ ಮಟ್ಟಿಯೋಟಿ ಎಂಬುವನು ಫಾಸಿಸ್ಟ್ ಪ್ರಭುತ್ವದಲ್ಲಿ ನಡೆಯುತ್ತಿದ್ದ ಲಂಚ ರುಷುವತ್ತುಗಳ ವಿಧಾನವನ್ನೂ ಹಣದ ಸುಲಿಗೆಯನ್ನೂ ಬಾಯಿಬಿಟ್ಟು ಹೇಳಿದನೆಂದೂ ಅವನನ್ನು ರೋಂ ನಗರದ ಬೀದಿಯಲ್ಲಿಯೇ ಅಪಹರಿಸಿ ಕೊಂಡು ಹೋಗಿ ಯಾವುದೋ ಒಂದು ಪ್ರದೇಶದಲ್ಲಿ ಕೊಲೆ ಮಾಡಿದರು.

ಇದನ್ನು ಮಾಡಿಸಿದ ಆ ಸರ್ವಾಧಿಕಾರಿ ಮುಸೋಲಿನಿಯೇ ಸ್ವತಃ ಒಬ್ಬ ಕೇಡಿಯಾದ ಕಾರಣ ಆ ಕೊಲೆಯ ಕೃತ್ಯವನ್ನು ಮಾಡಿದವರಿಗೆ ಯಾವ ಶಿಕ್ಷೆಯೂ ಆಗಲೇ ಇಲ್ಲ. ಈ ತೆರನಾದ ಘಟನೆಗಳು ಫಾಸಿಸ್ಟ್ ಆಳಿಕೆಯಲ್ಲಿ ಸರ್ವಥಾ ಸಾಮಾನ್ಯವಾಗಿ ನಡೆಯುತ್ತಿದ್ದುವು

ರಕ್ಕರ ನೀತಿ

ಮುಸಲೊನಿಯನ್ನು ಕೊಲೆ ಮಾಡಲು ಮೂರು ಭಾರಿ ಪ್ರಯತ್ನಗಳು ನಡೆದುವು ಈ ಪ್ರಯತ್ನಗಳನ್ನೇ ಒಂದು ಕಾರಣವನ್ನಾಗಿ ಮಾಡಿಕೊಂಡು ಇವನು ಇಟಲಿಯನ್ನು ಸಂಪೂರ್ಣವಾಗಿ ಒಂದು ಸರ್ವಾಧಿಕಾರಿ ರಾಷ್ಟ್ರವನ್ನಾಗಿ ಮಾಡಿ ತಾನೇ ಸರ್ವಾಧಿಕಾರಿಯಾದನು. ವಾಕ್ ಸ್ವಾತಂತ್ರ್ಯ, ಲೇಖನ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ, ಪಾರಿಶ್ರಾಮಿಕ ಸ್ವಾತಂತ್ರ್ಯ ಮುಂತಾದ ಸರ್ವ ಸ್ವಾತಂತ್ರ್ಯಗಳನ್ನೂ, ಫ್ಯಾಸಿಸ್ಟ್ ಪ್ರಭುತ್ವದ ಸಲುವಾಗಿ ಬಲಿಗೊಟ್ಟದ್ದಾಯಿತು. ಆ ರಕ್ಕಸನಾದ ಮುಸೋಲಿನಿ ಮತ್ತು ಅವನ ಗ್ಯಾಂಗಿನವರು ಇವರು ಅಧಿಕಾರ ಸ್ಥಾನಗಳನ್ನು ಆಕ್ರಮಿಸಿಕೊಂಡರು.

ರಕ್ಕರ ನೀತಿ ರೀತಿಗಳಿಗೆ ಅನುಸಾರವಾಗಿ, ಇವರು ೧೯೩೫ರಲ್ಲಿ ಅಷ್ಟು ಕಾಲವೂ ಇಟಲಿಯ ಮಿತ್ರ ರಾಷ್ಟ್ರವಾಗಿದ್ದ ಅಬಿಸೀನಿಯಾದ ಮೇಲೆ ಬಿದ್ದು ತಮ್ಮ ಕ್ರೌರ್ಯವನ್ನೂ ಕುತಂತ್ರ ನೀತಿಯನ್ನು ತೋರ್ಪಡಿಸಿದರು ಈ ನ್ಯಾಯ ಬಾಹಿರವಾದ ಯುದ್ಧದಲ್ಲಿ, ನಿರಸ್ತ್ರರೂ, ನಿಸ್ಸಹಾಯಕರೂ ಆದ ಜನರ ಮೇಲೆ ಬಾಂಬುಗಳನ್ನೂ ವಿಷವಾಯುವನ್ನೂ ಪ್ರಯೋಗಿಸುವುದೇ ಫ್ಯಾಸಿಸ್ಟ್ ನೀತಿಯೊ ಏನೋ ಗೊತ್ತಿಲ್ಲ ... ತೆತ್ತಕ್ಕೆ ಅವ ಗುಣವ ಗಿಯೇ ಮುಸೋಲಿನಿಯು ಈ ರೀತಿ ಮಾಡಿದನೋ ಏನೋ ಮುಸೋಲಿನಿಸಿ ... ಅಂದರೆ ಹೇಗೆಂದರೆ ಹಾಗೆ ವರ್ತಿಸಲು ಅನುಕೂಲವಾಗಿದ್ದಿತು ಹೀಗಿದ್ದ ಕಾರಣದಿಂದಲೇ ಇವನು ಕೇವಲ ಸ್ಪ್ಯಾನಿಷ್ ಜನರ ಅಂತಃಕಲಹವಾಗಿದ್ದ ಯುದ್ಧದಲ್ಲಿ ಹೋರಾಡಲು ತನ್ನ ಸೈನಿಕರನ್ನು ಕಳುಹಿಸಿದ್ದದ್ದು.

ದುರಾಕ್ರಮಣಗಳು

೧೯೩೯ನೆ ಇಸವಿಯ ಏಪ್ರಿಲ್ ತಿಂಗಳ ಗುಡ್ ಫ್ರೈಡೇ ದಿವಸ ಯಾವ ಪೀಠಿಕಾಪ್ರಸಂಗವೂ ಇಲ್ಲದೆಯೆ, ೧೯೩೬ರಲ್ಲಿ ಅಲ್ಬೇನಿಯದೊಂದಿಗೆ ತಾನೇ ಸಹಿಮಾಡಿ, ಮಾಡಿಕೊಂಡಿದ್ದ ಒಪ್ಪಂದವನ್ನು ಸೈನಿಕ ಮೈತ್ರಿಕರಾರನ್ನು ಹರಿದು ಚೂರು ಚೂರುಮಾಡಿ, ಅದರ ಮೇಲೆ ಯುದ್ಧಕ್ಕೆಹೋದನು ಪ್ರಾಯಶಃ ಆ ಯುದ್ಧದಲ್ಲಿ ಗೆಲುವನ್ನು ಪಡೆಯುವುದು ಬಹು ಸುಲಭವೆಂದೂ ಅದರಿಂದ ವನಿಗೆ ತನ್ನ ರಾಜ್ಯದಲ್ಲಿ ಒಳ್ಳೆಯ ಕೀರ್ತಿ ದೊರಕುವುದೆಂದೂ ತನ್ನ ಕೈ ತಪ್ಪಿ ಹೋಗುವುದೋ ಏನೋ ಎಂಬ ಸ್ಥಿತಿಯಲ್ಲಿದ್ದುದನ್ನು ಸರಿಪಡಿಸಿ ಕೊಳ್ಳಬಹುದೆಂದೂ ಬಗೆದಿರಬೇಕು

ಇತ್ತೀಚಿನ ವರ್ತನ

ಈ ಮುಸೋಲಿನಿಯೇನಾದರೂ ೧೯೩೯ನೆಯ ಇಸವಿಯಲ್ಲಿಯೇ ಸತ್ತುಹೋಗಿದ್ದಲ್ಲಿ ಇಟಲಿ ದೇಶದ ಇತಿಹಾಸದಲ್ಲಿ ಅವನೊಬ್ಬ ಮಹಾ ಸಾಹಸಿಯಾದ ಜೂಜುಗಾರನೆಂದು ಅದರೆ ಅವನು ಕಟ್ಟಿದ ಪಣಗಳು ಸಲಸಲಕ್ಕೂ ಸಿದ್ಧಿಸುವುದೆಂದೂ ಉಲ್ಲೇಖಿಸಲ್ಪಡುತ್ತಿತ್ತು ಆದರೆ ೧೯೪೦ನೆ ಇಸವಿ ಜೂನ್ ೧೦ನೆಯ ತಾರೀಖಿನ ದಿವಸ ಇವನು ಮೋಸದಿಂದ ಪತನವಾಗಿದ್ದ ಫ್ರಾನ್ಸಿನ ಮೇಲೆ ಬಿದ್ದನು ಅಂದರೆ ಹಿಂದುಗಡೆಯಿಂದ ಹೋಗಿ ಬೆನ್ನಿನ ಮೇಲೆ ತಿವಿದಂತೆ ಮೋಸ ಮಾಡಿದನು. ನಾಜೀ ಕಾರ್ಯಕ್ಕೆ ಇವನು ಕುಮ್ಮಕ್ಕು ಮಾಡಿ ಸಹಾಯ ಮಾಡಿದ್ದರಿಂದ ತಾನು ಅದುವರೆಗೆ ಗೆದ್ದಿದ್ದ ಗೆಲುವುಗಳನ್ನೆಲ್ಲಾ ಕೂಡಿಸಿ ಇನ್ನೊಂದು ಪಣವಾಗಿಟ್ಟು, ಖಂಡಿತವಾಗಿಯೂ ಸೋಲಾಗತಕ್ಕ ಜೂಜಿನಲ್ಲಿ ಉದ್ಯುಕ್ತನಾದಂತಾಯಿತು

ಪರಿಣಾಮ

ಮುಸೋಲಿನಿಯ ಒಂದು ಪರಾಜಯವುಂಟಾಗುವ ಕಾರ್ಯಕ್ಕೆ ರಾಜ್ಯದ ಸರ್ವಸ್ವವನ್ನೂ ವಿನಿಯೋಗಿಸಿದ್ದಾನೆಂದು ಕಾಲಕ್ರಮದಲ್ಲಿ ಇಟಲಿಯ ಪ್ರಜೆಗಳಿಗೆ ತಿಳಿದುಹೋಯಿತು ಮತ್ತೂ, ಕೆಲವು ಕಾಲ ಇವನಿಗೆ ಬೆಂಬಲವಾಗಿದ್ದ ಫ್ಯಾಸಿಸ್ಟ್ ಪಂಥಿಗಳಿಗೂ ಸಹ, ಮಿತ್ರಪಕ್ಷದ ಸೇನೆಗಳು ಸಿಸಿಲಿ ದ್ವೀಪಕ್ಕೆ ನುಗ್ಗಿದೊಡನೆಯೇ ತಮ್ಮ ವಿಜಯದ, ಸಾಮ್ರಾಜ್ಯ ನಿರ್ಮಾಣದ, ಅಭ್ಯುದಯದ ಸವಿಗನಸುಗಳು ಮಣ್ಣು ಗೂಡಿದುವೆಂಬುದಾಗಿ ಚೆನ್ನಾಗಿ ತಿಳಿದುಹೋಯಿತು.

ಫ್ಯಾಸಿಜಂನಿಂದ ಇಟಲಿಗೆ ಒಂದು ಸಂಸ್ಕೃತಿ ಒಂದು ಶಕ್ತಿ ಒಂದು ತೇಜಸ್ಸು ಒಂದು ಮಹತ್ತರ ಕೀರ್ತಿ ಒಂದು ಅನಿರೀಕ್ಷಿತ ಮಹತ್ವ ಇವುಗಳೆಲ್ಲವೂ ಉಂಟಾಗಿವೆಯೆಂದು ಮುಸೋಲಿನಿಯು ಬಹುಕಾಲ ಇಟಲಿಯ ಜನರನ್ನು ಮೋಸಗೊಳಿಸಿದ್ದನು ಈ ಮಾತುಗಳಿಂದ ಇವನ ಫ್ಯಾಸಿಜಂನಲ್ಲಿದ್ದ ದರೋಡೆ ನೀತಿಯು ಮುಚ್ಚಲ್ಪಟ್ಟಿದ್ದಿತು

ಈಗ ಅದು ಚೆನ್ನಾಗಿ ಬಿಚ್ಚಿ ತೋರಿದಂತೆ ಎಲ್ಲರಿಗೂ ತಿಳಿದುಹೋಗಿ ಅದರ ನೈಜವಾದ ಬಣ್ಣ 'ಗೋಚರವಾಗಿದೆ. ಅದರ ಕಟ್ಟುಬಣ್ಣದ ಸೋಂಕಿಲ್ಲದೆ ಹುಟ್ಟು ಬಣ್ಣದಲ್ಲಿ ನೋಡುತ್ತಿದ್ದಾನೆ. ಪ್ರಜೆಗಳು ಕ್ಷಣಕ್ಷಣಕ್ಕೆ ಬದಲಾವಣೆಯಾಗುತ್ತಿರುವ ಕಾಲಗತಿಯಲ್ಲಿ ಅದು ಉಳಿದಿರಲಾರದೆಂಬುದು ಚೆನ್ನಾಗಿ ಗೊತ್ತಾಯಿತು. ಪ್ರಜೆಗಳಲ್ಲಿ ಈ ತೆರನಾದ ಭಾವನೆಯೇ ಮುಸೋಲಿನಿಯು ರಾಜೀನಾಮೆಯನ್ನು ಕೊಡುವಂತೆ ಮಾಡಿಸಿದ್ದು.

(೧೩ ನೇ ಪುಟನೋಡಿ)



ಮಾಲ್ಟಾ ಬಳಿ ಸಬ್ ಮೆರೀನುಗಳು ಇರುವ ಸ್ಥಳದ ದೃಶ್ಯ

ಮಾಲ್ಟಾ ದ್ವೀಪಕ್ಕೆ ಶತ್ರು ವಿಮಾನಗಳ ಧಾಳಿಯ ಭಯ ಹೆಚ್ಚಾಗಿರುವ ಪ್ರಯುಕ್ತ ಸಬ್‌ಮೆರೀನುಗಳನ್ನು ಮಾಲ್ಟಾ ತೀರದಲ್ಲಿ ನೇಮಿಸಿದ್ದಾರೆ.

ಹಣವನ್ನು ಕೂಡಿಹಾಕಿ, ನಿಮ್ಮ ಭವಿಷ್ಯಕ್ಕೆ ಭರವಸೆಯನ್ನುಂಟು ಮಾಡಿಕೊಳ್ಳಿ

ಜನರು ಹಣವನ್ನು ಯಾಕೆ ಖರ್ಚು ಮಾಡಕೂಡದು ?

ಧನವನ್ನು ಈಗ ಯಾಕೆ ಸಂಗ್ರಹಿಸಬೇಕು ?

ಧನವನ್ನು ಯಾವ ರೀತಿ ಈಗ ಶೇಖರಿಸಬೇಕು ?

ಸಾಮಾನ್ಯ ದಿನಗಳಲ್ಲಿ ಅರ್ಥ ಶಾಸ್ತ್ರಜ್ಞರು ಹಣವನ್ನು ಖರ್ಚು ಮಾಡುವುದರಿಂದ ಇತರಕ್ಕ ಪ್ರಯೋಜನಗಳನ್ನೂ ವಿವರಿಸಿರುತ್ತಾರೆ ಏಕೆಂದರೆ ಸಾಕಾದಷ್ಟು ಹಣವನ್ನು ಸರಿಯಾದ ದಾರಿಗಳಲ್ಲಿ ವೆಚ್ಚ ಮಾಡದೆ ಹೋದಲ್ಲಿ ರಾಷ್ಟ್ರದ ಆರ್ಥಿಕಾಭಿವೃದ್ಧಿಯೂ ಸಾಗುವಂತಿಲ್ಲ

ಇಂಡಿಯಾ ದೇಶದಲ್ಲಿ ಹಣವನ್ನು ಕೂಡಿಡುವುದೆಂದರೆ ಹಣವನ್ನು ಚಿನ್ನದ ರೂಪದಲ್ಲಿ ಕೂಡಿಡುವುದು ಇಲ್ಲವೇ ಜಮೀನ ಗಳನ್ನೂ ಕೊಳ್ಳುವುದು ಇಷ್ಟೆ ಅರ್ಥ. ಇದರಿಂದ ರಾಷ್ಟ್ರದ ಬಂಡವಾಳವು ಬೆಳೆಯದೆ ನಿಂತುಬಿಟ್ಟಂತಾಗುತ್ತದೆ ಈ ರೀತಿ ಮಾಡುವುದಕ್ಕೆ ಬದಲಾಗಿ ಮಾರಾಟವಾಗತಕ್ಕ ಪದಾರ್ಥಗಳನ್ನು ಕೊಳ್ಳುವುದಕ್ಕಾಗಿ ಅದೇ ಹಣವನ್ನು ವೆಚ್ಚ ಮಾಡಿದಲ್ಲಿ ಆ ಪದಾರ್ಥಗಳಿಗೆ ಗಿರಾಕಿ ಹೆಚ್ಚುತ್ತದೆ ತತ್ಫಲವಾಗಿ ಆ ಸರಕುಗಳ ನಿರ್ಮಾಣವು ಹೆಚ್ಚುತ್ತದೆ, ಹೆಚ್ಚು ಜನರಿಗೆ ಉದ್ಯೋಗ ದೊರೆಕಂತಾಗುತ್ತದೆ. ಹಣವು ಚಲಾವಣೆಗೆ ಬಂದು ಪ್ರಜಾ ಕೋಟಿಯ ಜೀವನದ ಮಟ್ಟವು ಮೇಲಕ್ಕೇರುತ್ತದೆ. ಈ ರೀತಿಯಾಗುವುದೇ ಪ್ರಗತಿಪರ ರಾಷ್ಟ್ರದ ಲಕ್ಷಣ ಅಂಥ ಸಂದರ್ಭಗಳಲ್ಲಿ ಹಣವನ್ನು ವೆಚ್ಚಮಾಡಿದವನು ಜನಾಂಗದ ಹಿತಾಕಾಂಕ್ಷಿಯೆನ್ನಿಸಿಕೊಳ್ಳುವನು.

ಆದರೆ ಈಗ ಈ ಯುದ್ಧ ಸಮಯದಲ್ಲಿ ಪರಿಸ್ಥಿತಿಯೇ ಬೇರೆ ಈಗ ಜನರ ಹಣವನ್ನು ವೆಚ್ಚ ಮಾಡಕೂಡದ ಎಷ್ಟು ಸಾಧ್ಯವೋ ಅಷ್ಟನ್ನೂ ಉಳಿಸಿಕೊಳ್ಳಬೇಕು ಯಾಕೆಂದರೆ ಇಂತ ಹಣಕಾಲದಲ್ಲಿ ಯಾರು ಹಣವನ್ನು ಶೇಖರಿಸಿಟ್ಟುಕೊಳ್ಳುವನೋ ಅವನೇ ಜನಾಂಗದ ಮಿತ್ರ, ಸಹಾಯಕ.

ಇದು ಹೇಗೆ ಸಾಧುವಾದುದು ?

ಈರೀತಿ ಹೇಳುವುದಕ್ಕೆ ಅನೇಕ ಮುಖ್ಯವಾದ ಕಾರಣಗಳಿವೆ. ಮೊಟ್ಟಮೊದಲನೆಯದಾಗಿ, ಯುದ್ಧಕಾಲದಲ್ಲಿ ಪದಾರ್ಥಗಳಿಗೆ ಅಭಾವವುಂಟಾಗುವುದು ಸ್ವಾಭಾವಿಕ. ಯಾಕೆಂದರೆ ಸರಕಾರದವರು ಅಪಾರವಾಗಿ ವಸ್ತುಗಳನ್ನು ಕೊಂಡುಕೊಳ್ಳುವ ಪ್ರಯುಕ್ತ ಪದಾರ್ಥಗಳಿಗೆ ಗಿರಾಕಿ ಹೆಚ್ಚಾಗುತ್ತದೆ ಆದರೆ ಅದೇ ಸರಪರಾಜುಗಳು ಮಾತ್ರ ಹೆಚ್ಚಾಗುವುದಿಲ್ಲ ಯಾಕೆಂದರೆ ನಿರ್ಮಾಣ ಕಾರ್ಯಾಲಯಗಳಿಗೆ ಬೇರೆ ತೊಂದರೆಗಳು ಉಂಟಾಗುವುವು.

ಈ ಅಭಾವದ ಜತೆಗೆ ಹೆಚ್ಚು ಲಾಭ ಪಡೆಯಬೇಕೆಂಬ ಸ್ವಾರ್ಥಪರರ ದೆಸೆಯಿಂದಲೂ, ಸರಕುಗಳನ್ನು ಹೆಚ್ಚು ಬೆಲೆಗೆ ಮಾರೋಣವೆಂದು ಹೆಚ್ಚುಹೆಚ್ಚಾಗಿ ಕೊಂಡುಕೊಂಡು ದಾಸ್ತಾನು ಮಾಡುವವರ ದೆಸೆಯಿಂದಲೂ ಪರಿಸ್ಥಿತಿಯು ಇನ್ನೂ ಹದಗೆಡುತ್ತದೆ ಈ ತರನಾದ ಅಭಾವ ಇರತಕ್ಕ ಕಾಲದಲ್ಲಿ ಸುಮ್ಮನೆ ಒಂದೇಸಮನಾಗಿ ಕೊಂಡುಕೊಳ್ಳುತ್ತಾ ಹೋಗುವುದು ಮಹಾಪರಾಧ ಇದರಿಂದ ಆ ಪದಾರ್ಥಗಳ ಧಾರಣೆಗಳು ಇನ್ನೂ ಹೆಚ್ಚಾಗುತ್ತವೆ ಇರತಕ್ಕ ಕೊಂಚ ಸರಕುಗಳಿಗೇ ಎಲ್ಲರೂ ಹೋರಾಡುವ ಕಾರಣದಿಂದ ಅವುಗಳ ಧಾರಣೆಗಳು ಏರತಕ್ಕದ್ದು ಸಹಜವೇ ಆದುದು ಆಗ ಕೇವಲ ಹಣಗಾರರು ಮಾತ್ರ ಅವುಗಳನ್ನು ಕೊಳ್ಳಲು ಸಾಧ್ಯವೇ ಹೊರತು ಬಡವರು ಅವುಗಳಿಲ್ಲದೆಯೆ ಇರಬೇಕಾಗುತ್ತದೆ

ಇಂತಹ ಸಂದರ್ಭಗಳಲ್ಲಿ ಹಣವನ್ನು ವೆಚ್ಚ ಮಾಡದಿರುವುದೇ ಬುದ್ಧಿವಂತಿಕೆ ಯಾಕೆಂದರೆ ಹಿಂದಣ ಅನುಭವದಿಂದ ಈ ಧಾರಣೆಗಳು ಇಂದೋ ನಾಳೆಯೋ ಖಂಡಿತವಾಗಿ ಇಳಿದೇ ಇಳಿಯುತ್ತವೆ ಆಗ ಅದೇ ಹಣವನ್ನು ಹೆಚ್ಚು ಉಪಯೋಗಕರವಾದ ರೀತಿಯಲಿ ವಿನಿಯೋಗಿಸಬಹುದು. ಇಂಥ ಸಂದರ್ಭಗಳಲ್ಲಿ ಗಾಬರಿಬಿದ್ದುಕೊಂಡು ಕೊಳ್ಳುವುದು ಶುದ್ಧ ತಪ್ಪು

ಎರಡನೆಯದಾಗಿ, ಪದಾರ್ಥಗಳು ಅಭಾವವಾಗಿರುವ ಕಾಲದಲ್ಲಿಯೇ ದೇಶದಲ್ಲಿ ಹೆಚ್ಚು ಹಣವು ಚಲಾವಣೆಯಲ್ಲಿದೆ. ಪದಾರ್ಥಗಳು ಮಾತ್ರ ಇದ್ದಷ್ಟೆ ಇದ್ದು, ಹಣವು ಮಾತ್ರ ಹೆಚ್ಚಿ ಹೋದರೆ, ಅವುಗಳ ಧಾರಣೆಗಳು ಏರಲೇಬೇಕು.

ಈಗ ಹಣವು ಹೆಚ್ಚಿಹೋಗಿದೆ. ಹೀಗಾಗಿರುವುದು ಹಿಂದಣ ಯುದ್ಧ ಕಾಲದಲ್ಲಿಯೂ ಆಮೇಲೂ ಜರ್ಮನಿಯು ಮಾಡಿದಂತೆ ಸುಮ್ಮನೆ ನೋಟುಗಳನ್ನು ಪ್ರಿಂಟುಮಾಡಿ ಮಾಡಿ ನಮ್ಮ ಸರ್ಕಾರದವರು ಹಂಚಿಸುತ್ತಿದ್ದಾರೆಂಬುದು ಅಸಲ್ಲವಲ್ಲ. ಸರ್ಕಾರವು ಹೆಚ್ಚು ಹೆಚ್ಚಾಗಿ ಸರಕುಗಳನ್ನು ತನ್ನ ಸ್ವಂತಕ್ಕಾಗಿಯೂ ಮಿತ್ರ ರಾಷ್ಟ್ರಗಳಿಗಾಗಿಯೂ ಕೊಂಡುಕೊಳ್ಳಬೇಕಾಗಿರುವುದರಿಂದ ಹೆಚ್ಚು ನೋಟುಗಳು ಚಲಾವಣೆಗೆ ಬಂದಿವೆ.

ಈ ತೆರನಾಗಿ ಪದಾರ್ಥಗಳನ್ನು ಕೊಂಡುಕೊಳ್ಳುವುದನ್ನು ಯುದ್ಧ ಕಾಲದಲ್ಲಿ ತಪ್ಪಿಸುವುದಕ್ಕೆ ಆಗುವಂತೆಯೆ ಇಲ್ಲ. ಇದರಿಂದ ಹಣವು ಹೆಚ್ಚು ಹೆಚ್ಚಾಗಿ ಚಲಾವಣೆಗೆ ಬರಲೇಬೇಕಾಯಿತು ಯುದ್ಧಮಗ್ನರಾಗಿರುವ ಇತರರಾಜ್ಯಗಳಲ್ಲಿಯೂ ಇದೇ ರೀತಿ ಆಗುತ್ತಲೇ ಇದೆ. ಆದರೆ ಆ ದೇಶಗಳಲ್ಲಿನ ಸರ್ಕಾರಗಳು ತಮಗೆ ಬೇಕಾದ ಪದಾರ್ಥಗಳನ್ನು ಕೊಂಡುಕೊಳ್ಳಲು 'ಸಾಧಾರಣವಾಗಿ ಜನರಿಂದ ವಸೂಲು ಮಾಡಿದ 'ಹಣವನ್ನು ವಿನಿಯೋಗಿಸಿದುದೇ ಹೆಚ್ಚು ಜನರಿಂದ ತೆರಿಗೆಗಳ ರೂಪದಿಂದಲೂ ಸಾಲದ ರೂಪದಿಂದಲೂ,ಬಂದ ಹಣವನ್ನು ವಿನಿಯೋಗಿಸಿದರು. ಜತೆಗೆ ಜನರಿಗೆ ಹಿಂದಿರುಗಿ ಹೋದ ಹಣವನ್ನು ಸಹ ಶೀಘ್ರದಲ್ಲಿಯೆ ವಸೂಲು ಮಾಡಿಕೊಂಡುಬಿಟ್ಟರು.

ಆದರೆ ಈ ದೇಶದಲ್ಲಿಯಾದರೂ, ರಾಜಕೀಯವಾದ ಮತ್ತಿತರ ತೊಂದರೆಗಳಿಂದ ಸರಕಾರವು ಪ್ರಜೆಗಳಿಂದ ಹೆಚ್ಚು ಹಣವನ್ನು ತೆರಿಗೆಗಳ ರೂಪದಲ್ಲಿಯಾಗಲಿ, ಸಾಲಗಳ ರೂಪದಲ್ಲಿಯಾಗಲಿ ಪಡೆಯುವುದಕ್ಕೆ ಸಾಧ್ಯವಾಗಲಿಲ್ಲ.

ಈ ಕಾರಣಗಳಿಂದ ಪದಾರ್ಥಗಳ ಧಾರಣೆವಾಸಿಗಳು ಏರಿ ಹೋಗಿವೆ ಇದನ್ನು ತಪ್ಪಿಸಲು ಜನರು ತಮ್ಮ ಹಣವನ್ನು ವೆಚ್ಚಮಾಡದೆ ಸಾಧ್ಯವಾದ ಮಟ್ಟಿಗೂ ಸಂಗ್ರಹಿಸುವುದಕ್ಕೆ ತೊಡಗಬೇಕು. ಈ ಪ್ರಕಾರ ಖರ್ಚುಮಾಡದೆ ಹಣವನ್ನು ಬಿಗಿಹಿಡಿದಲ್ಲಿ ಧಾರಣೆಗಳು ಏರದಂತೆ ನಿಲ್ಲಿಸು

ಮೂರನೆಯದಾಗಿ, ಹಣವನ್ನು ಈಗ ಖರ್ಚು ಮಾಡದೆ ಉಳಿಸುವುದರಿಂದ ಧಾರಣೆವಾಸಿಗಳು ತಗ್ಗುವುದೊಂದೇ ಅಲ್ಲದೆ, ಯುದ್ಧಾನಂತರ ಖರ್ಚುಮಾಡುವುದಕ್ಕೆ ನಮ್ಮ ಬಳಿ ಹೆಚ್ಚು ಹಣ ಉಳಿದಿರುತ್ತದೆ. ಸಾಧಾರಣವಾಗಿ ಯುದ್ಧವು ಮುಗಿದ ಮೇಲೆ ಪದಾರ್ಥಗಳ ಧಾರಣೆವಾಸಿಗಳು ಬಿದ್ದುಹೋಗುವುದೆ ಅಲ್ಲದೆ, ಹಣದ ಅಭಾವವು ತುಂಬಾ ಕಠಿಣವಾಗಿರುತ್ತದೆ.

ಆದರೆ ಈಸಲ, ಯಾವುದಾದರೊಂದು ಅಂತರರಾಷ್ಟ್ರೀಯ ವ್ಯವಸ್ಥೆಯಿಂದ ಈ ಪರಿಸ್ಥಿತಿಯುಂಟಾಗದಂತೆ ನೋಡಿಕೊಳ್ಳಲಾಗುವುದು. ಆದರೂ ಕೊಂಚಮಟ್ಟಿನ ಹಣದ ಸಂಕೋಚನವು ಅನಿವಾರ್ಯವಾಗಿರುತ್ತದೆ. ಆದುದರಿಂದ ಬುದ್ಧಿವಂತರಾದವರು ಸೊಂಟಕ್ಕೆ ಬಿಗಿಯಾಗಿ ಬಟ್ಟೆ ಕಟ್ಟಿಕೊಂಡು ಕೇವಲ ಜೀವನಾಧಾರಕ್ಕಾಗಿ ಊಟ ಮಾಡುತ್ತಾ ಇದ್ದು ಯುದ್ಧಾನಂತರ ಉಂಟಾಗುವ ಧನಾಭಾವದ ಕಾಲಕ್ಕೆ ಸಾಕಾದಷ್ಟು ಹಣವನ್ನು ಇಟ್ಟುಕೊಂಡಿರಬೇಕು ಅವರು ತಮ್ಮ ಬಳಿ ಇರತಕ್ಕ ಹಳೆಯ ಬಟ್ಟೆಗಳನ್ನು ಉಪಯೋಗಿಸಬೇಕು ತಮ್ಮ ಹಳೆಯ ಕುರ್ಚಿ ಮೇಜುಗಳಲ್ಲೆ ಕಾಲ ಹಾಕಬೇಕು. ಅವುಗಳಿಗೇ ಜಾಣತನದಿಂದ ರಿಪೇರಿ ಮುಂತಾದ್ದನ್ನು ಮಾಡಿಕೊಳ್ಳಬೇಕು ಆಮೇಲೆ ಧಾರಣೆಗಳು ಇಳಿದ ಮೇಲೆ ಯುದ್ಧಾನಂತರ ಹೀಗಾಗುವುದು ಖಂಡಿತ ಸಿಕತಕ್ಕ ಒಳ್ಳೊಳ್ಳೆಯ ಬಟ್ಟೆಗಳನ್ನೂ ಸಾಮಾನುಗಳನ್ನೂ ಕೊಂಡುಕೊಳ್ಳಬಹುದು. ಆಗ ನಿಮ್ಮ ಬಳಿ ಇರತಕ್ಕ ಹಣದಿಂದಲೂ ಬೇಕಾದಷ್ಟು ಸರಕನ್ನೂ ಕೊಂಡುಕೊಳ್ಳಬಹುದು

ಈ ಪ್ರಕಾರ ಈಗ ಜಾಗರೂಕತೆಯಿಂದ ಇರುವ ಜನರು ಯುದ್ಧ ಮುಗಿದ ಮೇಲೆ ಜೀವನದ ಮಟ್ಟವನ್ನೆ ಹೆಚ್ಚಿಸಿಕೊಳ್ಳಬಹುದು. ಈಗ ಹಣವನ್ನು ಉಳಿಸಿಕೊಳ್ಳದೆ ಇರತಕ್ಕ ಜನರು ಕೇವಲ ಜೀವನಕ್ಕಾಗಿಯೇ ತಾಪತ್ರಯ ಬೀಳುತ್ತಿದ್ದರೆ, ಇವರು ಮಾತ್ರ ಸೊಗಸಾದ ಉತ್ತಮ ಜೀವನ ಮಾಡಬಹುದು. ಈ ರೀತಿ ಈಗ ಹಣವನ್ನು ಕೂಡಿಡುವರು ತಮಗೂ, ಇತರರಿಗೂ ಸಹಾಯ ಮಾಡಿದಂತಾಗುತ್ತದೆ

●

ನಾಲ್ಕನೆಯದಾಗಿ, ಅಧಿಕ ಲಾಭ ಸಂಪಾದನೆ ಮಾಡುವುದನ್ನು ತಪ್ಪಿಸುವುದು ನಮ್ಮ ಕರ್ತವ್ಯ ಅದಕ್ಕಾಗಿ ನಾವು ಈಗ ಕೊಂಡುಕೊಳ್ಳುವುದನ್ನೆ ನಿಲ್ಲಿಸಿದಲ್ಲಿ ಅದು ತಪ್ಪಿದಂತೆ ಗುತ್ತದೆ. ಸರಕುಗಳಿಗೆ ಗಿರಾಕಿಗಳೇ ಇಲ್ಲವೆಹೋದರೆ, ಅವುಗಳನ್ನು ಇಟ್ಟುಕೊಂಡಿರತಕ್ಕ ವರ್ತಕನು ಕಡಿಮೆ ಬೆಲೆಗೆ ಮಾರುವುದಕ್ಕೆ ಉಪಕ್ರಮಿಸುವನು. ಈಗಿನಂತಹ ಸಮಯಗಳಲ್ಲಿ ಸರಕುಗಳಿಗೆಸುಮ್ಮನೆ ಪೈಪೋಟಿಮಾಡಿಕೊಳ್ಳುವುದು ತಿಳಿಗೇಡಿತನ. ರಾಗಿ ಕೊಂಡುಕೊಳ್ಳುವುದರಿಂದ ನಿಮಗೂ ತೊಂದರೆಯಾಗುತ್ತದೆ; ಇತರರಿಗೂ ತೊಂದರೆಯಾಗುತ್ತಿದೆ.

ಈ ಪ್ರಕಾರ ಸರಕುಗಳನ್ನು ಹೆಚ್ಚಾಗಿ ಕೊಂಡುಕೊಳ್ಳಬೇಡಿರೆಂದು ಹೇಳುತ್ತಿರುವುದು ಆ ಸರಕುಗಳನ್ನೆಲ್ಲಾ ತಾವೇ ಕೊಂಡುಕೊಳ್ಳಬೇಕೆಂಬ ಇರಾದೆಯಿಂದ ಎಂಬುದಾಗಿ ಜನರಲ್ಲಿ ಒಂದು ತಪ್ಪು ಭಾವನೆಯುಂಟಾಗಿದೆ. ಪರಿಸ್ಥಿತಿಯು ಹೇಗೇ ಇರಲಿ, ಸರಕಾರಕ್ಕೆ ಬೇಕಾದುದನ್ನು ಅದು ಕೊಂಡು ಕೊಂಡೇ ತೀರುತದೆ. ಇದರಲ್ಲಿ ನಷ್ಟಪಡುವವರು ಪ್ರಜೆಗಳು, ಇರತಕ್ಕ ಅಲ್ಪಸರಕುಗಳಿಗೆ ಜನ ಗುಂಪುಗೂಡಿಕೊಂಡು ಕಚ್ಚಾಡಿ ನಷ್ಟಪಡುತ್ತಿದ್ದಾರೆ ನಿಮ್ಮ ಮತ್ತು ಸಾಮಾಜದ ಹಿತಕ್ಕಾಗಿ ನೀವು ಅತ್ಯಗತ್ಯವಾಗಿ ಮೊಟ್ಟಮೊದಲು ಮಾಡಬೇಕಾದ ಕೆಲಸವೇನೆಂದರೆ ನಿಮ್ಮ ಖರ್ಚನ್ನು ಹಿಡಿತ ·ಮಾಡಿಕೊಳ್ಳುವುದು. ಅದುದರಿಂದ ತಮಗೆ ಬೇಕಾದ ಪದಾರ್ಥಗಳನ್ನು ಕಡಿಮೆ ಮಾಡತಕ್ಕ ವಿಷಯದಲ್ಲಿ ಜನರು ರೂಜ್ವೆಲ್ಟರ ಬುದ್ಧಿವಾದವನ್ನು ಅನುಸರಿಸುವುದೇ ಯುಕ್ತಕಾರ್ಯ. "ಮೂಳೆ ಕಾಣುವ ತನಕ ತೆಳ್ಳಗಾಗಿ" ಎಂದಿದ್ದಾರೆ ಅವರು ಇದರ ಅರ್ಥ ಅಷ್ಟುಮಟ್ಟಿಗೆ ನಿಮ್ಮ ಖರ್ಚು ಬಾಬುಗಳನ್ನು ಕಡಿಮೆ ಮಾಡಿಕೊಳ್ಳಿ ಎಂಬುದಾಗಿ.

ನಮ್ಮೆಲ್ಲರಿಗೂ ಆಹಾರ ಮತ್ತು ಬಟ್ಟೆಬರೆಗಳ ವಿಷಯದಲ್ಲಿ ಅಗತ್ಯವಾಗಿ ಒಂದಿಷ್ಟು ಇದ್ದೇ ತೀರಬೇಕು ಆದರೆ ಅವುಗಳನ್ನು ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೂ ಕಡಮೆಮಾಡಬೇಕು. ಈ ಕಾಲದಲ್ಲಿ ನಾವು ಖರ್ಚು ಕಡಿಮೆಮಾಡಿದಲ್ಲಿ ನಮ್ಮನ್ನು ಜಿಪುಣರೆಂದು ಯಾರೂ ಕರೆಯುವುದಿಲ್ಲ. ಇದಕ್ಕೆ ಬದಲಾಗಿ ಈಗ ಯಾರಾದರೂ ಹೊಸ ಬಟ್ಟೆಗಳನ್ನು ಧರಿಸಿ, ಹೊಸ ಸಾಮಾನುಗಳನ್ನು ತಂದು ಮೆರೆದಲ್ಲಿ ಅವರನ್ನು ಬುದ್ಧಿವಂತರು ಕಂಡು ಅಸಂತೃಪ್ತಿ ಪಟ್ಟುಕೊಳ್ಳುತ್ತಾರೆ. ಈಗ ಒಳ್ಳೆಯ ಸ್ಥಿತಿಯಲ್ಲಿರುವ ಜನರು ತಮ್ಮ ಮತ್ತು ತಮಗಿಂತಲೂ ಬಡವರಾಗಿರತಕ್ಕವರ ಸಲುವಾಗಿ ಒಳ್ಳೆಯ ಉದಾಹರಣೆಯನ್ನು ತೋರ್ಪಡಿಸಬೇಕು.

●

ನಾವೇಕೆ ಉಳಿಸಬೇಕು?

ಹಾಗಾದರೆ ನಮ್ಮ ಬಳಿ ಇರತಕ್ಕ ಹಣವನ್ನು ನಾವೇನು ಮಾಡಬೇಕು?

ಮೊಟ್ಟಮೊದಲು ನಮ್ಮ ಸಾಲಸೋಲುಗಳನ್ನು ತೀರಿಸಿ ಬಿಡಬೇಕು. ನಮ್ಮ ಸಾಲಗಳನ್ನು ಈಗಲೆ ತೀರಿಸಿಬಿಟ್ಟಲ್ಲಿ ಹೆಚ್ಚು ಲಾಭಕರ ಯಾಕೆಂದರೆ ಸಾಲಗಳನ್ನು ಮಾಡಿದಾಗ ಹಣಕ್ಕೆ ಹೆಚ್ಚು ಬೆಲೆ ಇದ್ದಿತು. ಅವುಗಳನ್ನು ಈಗ ಕೊಟ್ಟು ತೀರಿಸಿಬಿಟ್ಟಲ್ಲಿ ಕಡಿಮೆ ಬೆಲೆ ಕೊಟ್ಟ ಹಾಗಾಗುವುದು. ಉದಾಹರಣೆಗೆ ಯಾವನಾದರೂ ಒಬ್ಬನು ೧೯೩೯ ರಲ್ಲಿ ಮಾಡಿದ ಸಾಲವನ್ನೂ ಈಗ ತೀರಿಸಿದಲ್ಲಿ ತಾನು ತೆಗೆದುಕೊಂಡ ಹಣದಲ್ಲಿ ಅರ್ಧಭಾಗವನ್ನು ಮಾತ್ರ ಕೊಟ್ಟಂತಾಗುವುದು.

ಆದುದರಿಂದ ನಾವು ನಮ್ಮ ಸಾಲಗಳನ್ನು ಎಷ್ಟು ಬೇಗ ತೀರಿಸಿದರೆ ಅಷ್ಟು ಉತ್ತಮ. ಏಕೆಂದರೆ ಯುದ್ಧಾನಂತ ಧಾರಣೆಗಳು ಬಿದ್ದುಹೋದರೆ ಇದು ಖಂಡಿತ ನಾವು ಹೆಚ್ಚು ಬೆಲೆ ಬಾಳುವ ಹಣ ತೆರಬೇಕಾಗುತ್ತದೆ.

ಇದೇ ರೀತಿಯಾಗಿ ಈಗ ಸಾಲ ದೂಡುವುದೂ ತಪ್ಪೇ ಯಾಕೆಂದರೆ ಆಮೇಲೆ ಈ ಸಾಲವನ್ನು ತೀರಿಸುವುದಕ್ಕೆ ಕಷ್ಟವಾಗುತ್ತದೆ ಹಿಂದಿನ ಯುದ್ಧ ಕಾಲದಲ್ಲಿ ಏನಾಯಿತೆಂಬುದು ನಮಗೆ ಚೆನ್ನಾಗಿ ನೆನಪಿನಲ್ಲಿದೆ. ೧೯೧೭ರಲ್ಲಿ ಧಾರಣೆವಾಸಿಗಳು ಹೆಚ್ಚಿದಾಗ ಕೆಲವು ಹಳ್ಳಿಯ ಜನರು ದುಂದುವೆಚ್ಚ ಮಾಡಲು ಆರಂಭಿಸಿದರು ಮತ್ತು ಧಾರಣೆಗಳು ಅದೇ ರೀತಿಯಾಗಿ ಇರುತ್ತವೆಯೆಂದುಕೊಂಡು ಹಣ ಸಾಲಾ ತಂದು ಜಮೀನುಗಳನ್ನು ಕೊಂಡುಕೊಂಡರು. ಜಮೀನಿನ ಖರೀದಿ ಹಣದ ಒಂದು ಭಾಗಕ್ಕೆ ಆ ಜಮೀನುಗಳನ್ನೇ ಆಧಾರ ಮಾಡಿದರು. ಅನತಿಕಾಲದಲ್ಲಿಯೆ ಧಾರಣೆಗಳು ಬಿದ್ದುಹೋಗಿ ಸಾಲಗಳು ಸಾಲಗಾರರ ಕುತ್ತಿಗೆಗಳಿಗೆ ಬಿಗಿದ ಬೀಸುವ ಕಲ್ಲುಗಳಾದುವು. ಆಧಾರ ಮಾಡಿದ್ದ ಜಮೀನುಗಳು ಹೋದುವು. ಅವುಗಳ ಜತೆಗೆ ಇತರೆ ಜಮೀನುಗಳೂ ಆಧಾರವಾದುವು.

ಈ ಪ್ರಕಾರವಾಗಿ ಇಂಡಿಯಾದಲ್ಲಿ ರೈತರ ಋಣಭಾದಾ ಸಮಸ್ಯೆಯು ತುಂಬಾ ಕಠಿಣವಾಗಿ ಪರಿಣಮಿಸಿ ಆಮೇಲೆ ಬಹಳ ಕಷ್ಟಪಟ್ಟು ಪರಿಷ್ಕರಿಸಬೇಕಾಯಿತು ಇದರಿಂದ ಸಾಲ ಕೊಟ್ಟವರಿಗೆ ತುಂಬಾ ಕಷ್ಟಗಳುಂಟಾದುದಲ್ಲದೆ ಸರ್ಕಾರಗಳಿಗೂ ಒಂದು ಹೊರೆಯಾಯಿತು

●

ವಸ್ತು ನಿರ್ಮಾಣ ಕಾರ್ಯಗಳಲ್ಲಿ ನಿರತರಾಗಬಲ್ಲವರು ಅದರಲ್ಲಿಯೂ ಆಹಾರ ವಸ್ತುಗಳು ಮತ್ತು ಜೀವನಕ್ಕೆ ಅತ್ಯಗತ್ಯವಾದ ಇತರ ಪದಾರ್ಥಗಳನ್ನು ತಯಾರು ಮಾಡತಕ್ಕವರು ತಮ್ಮ ಹಣಗಳನ್ನೂ ಆ ಕಾರ್ಯಗಳಿಗಾಗಿ ವಿನಿಯೋಗಿಸಬೇಕು. ಏಕೆಂದರೆ ಆ ರೀತಿ ಮಾಡುವುದರಿಂದ ಅವರು ದೇಶದಲ್ಲಿನ ಆಹಾರವಸ್ತು ನಿರ್ಮಾಣವನ್ನು ಹೆಚ್ಚಿಸಿದವರಾಗಿರುತ್ತಾರೆ ತತ್ಫಲಿತವಾಗಿ ಅವುಗಳ ಧಾರಣೆಗಳು ಇಳಿಯುವುವು ಇದರಿಂದ ಆಹಾರ ವಸ್ತುಗಳನ್ನು ದಾಸ್ತಾಮಾಡಿರುವವರನ್ನೂ ಸಾಯಿಸಿದಂತಾಗುವುದು. ಯಾಕೆಂದರೆ ಅವರು ಪೇಟೆಗೆ ಸಾಕಾದಷ್ಟು ಸರಕು ಬರುವುದಿಲ್ಲವೆಂದು ಕೊಂಡಿರುತ್ತಾರೆ.

ಕಾರ್ಖಾನೆಗಳ ಮೂಲಕ ತಯಾರುಮಾಡಬಲ್ಲ ಸರಕುಗಳನ್ನು ಹೆಚ್ಚಿಸುವುದು ಸದ್ಯಕ್ಕೆ ಸಾಧ್ಯವಿಲ್ಲ ಯಾಕಂದರೆ ಹೊರಗಿನಿಂದ ಬೇಕಾದ ಯಂತ್ರಾದಿಗಳನ್ನು ತರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಆದರೆ ಕೈಕಸಬುಗಳಿಗೂ ವ್ಯವಸಾಯಕ್ಕೂ ಆ ತೆರನಾದ ತೊಂದರೆಗಳಿಲ್ಲ ಅವುಗಳನ್ನು ಪ್ರೋತ್ಸಾಹಿಸುವುದಕ್ಕೆ ಇದು ಸುಸಮಯವಾಗಿದೆ,

ಸರಿಯಾದ ವ್ಯವಸ್ಥೆಯನ್ನು ಮಾಡಿಕೊಂಡದ್ದೆ ಆದರೆ, ಇನ್ನೂ ಬೇಕಾದಷ್ಟು ಬಟ್ಟೆ, ಕಾಗದ ಸಕ್ಕರೆ, ಸಾಬೂನು, ಶಾಯಿ, ಮುಂತಾದ ಪ್ರತ್ಯಹದಲ್ಲಿಯೂ ಬೇಕಾದ ಪದಾರ್ಥಗಳನ್ನು ಕೈ

(೧೧ ನೇ ಪುಟ ನೋಡಿ)

ಆಹಾರ ಸಮಸ್ಯೆ ಪರಿಹರಿಸಲು ನ್ಯಾಷನಲ್ ವಾರ್‌ಫ್ರಂಟಿನವರ ಸೇವೆ

—●—

ನ್ಯಾಷನಲ್ ವಾರ್‌ಫ್ರಂಟ್ ಸಭೆಯಲ್ಲಿ ಶಿಕ್ಷಣ ಸಚಿವರ ಭಾಷಣ

—●—

"ಸಂಗ್ರಾಮದ ಪರಿಣಾಮವಾಗಿ ಉಂಟಾಗಿರುವ ಪರಿಸ್ಥಿತಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಮೈಸೂರು ಸಂಸ್ಥಾನದಲ್ಲಿ ಎಲ್ಲಿಯೋ ಒಂದು ಕಡೆ ಅಧಿಕ ಪ್ರಮಾಣದಲ್ಲಿ ಸೈನಿಕರನ್ನು ಇಡಲಾಗಿದೆ. ಅವರು ಇರುವುದು ಯೋಗ್ಯವಲ್ಲದ ಮತ್ತು ಧೃಡಪಡದ ಗಾಬರಿಯನ್ನೂ ಏನೂ ಅರಿಯದ ಗ್ರಾಮಸ್ಥರಲ್ಲಿಯೂ ಮತ್ತು ನಗರ ನಿವಾಸಿಗಳಲ್ಲಿಯೂ ಹುಟ್ಟಿಸಿದೆ. ಸೈನಿಕನು ಸಿವಿಲ್ ಪ್ರಜೆಯ ಸ್ನೇಹಿತನು. ನಮ್ಮನ್ನೂ ನಮ್ಮ ಮನೆಗಳನ್ನೂ ಮತ್ತು ಆಸ್ತಿಪಾಸ್ತಿಗಳನ್ನೂ ರಕ್ಷಿಸಲು ಬಂದಿರುವನು ನಮ್ಮ ಸಹಾನುಭೂತಿಗೂ ಮತ್ತು ಉದಾರತೆಗೂ ಆತನು ಪಾತ್ರನು"

ಎಂಬುದಾಗಿ ಶಿಕ್ಷಣ ಸಚಿವರಾದ ಶ್ರೀ ಜೆ. ಅಪ್ಪಾಜಿಗೌಡರು ತಾ|| ೩೧-೮-೪೩ ರಲ್ಲಿ ಅತಾರಾ ಕಛೇರಿಯಲ್ಲಿ ನಡೆದ ನ್ಯಾಷನಲ್ ವಾರ್ ಫ್ರಂಟ್‌ನವರ ಮತ್ತು ಜಿಲ್ಲೆಗಳ ವ್ಯವಸ್ಥಾಪಕರ ಸಭೆಯಲ್ಲಿ ತಿಳಿಸಿದರು.

ಸರಬರಾಯಿ ಶಾಖೆಗೆ ಬೆಂಗಳೂರು ಕಮಿಟಿಯಿಂದ ಸಹಾಯ

ಮುಂದುವರಿಯುತ್ತ ಅವರು, "ನ್ಯಾಷನಲ್ ವಾರ್‌ಫ್ರಂಟ್ ಸಂಸ್ಥೆಯು ಸುಮಾರು ೧೫ ತಿಂಗಳ ಕಾರ್ಯಕಲಾಪಗಳನ್ನು ಈಗ ಪರಿಶೀಲಿಸಬಹುದಾಗಿದೆ. ಆದರೆ ಜೂನ್ ಅಂತ್ಯದವರಿವಿಗೆ ನಿಖರವಾಗಿ ನಡೆದಿರುವ ಕೆಲಸ ಕಾರ್ಯಗಳನ್ನು ಸೂಚಿಸಬಹುದಾಗಿದೆ. ಈ ಸಂಸ್ಥೆಯಲ್ಲಿ ದಿವಾನರು, ಸಚಿವರು ಮತ್ತು ಕಾರ್ಯದರ್ಶಿಗಳನ್ನು ಬಿಟ್ಟರೆ ಉಳಿದವರಿಗೆಲ್ಲಾ ಖಾಸಗಿ ಮನುಷ್ಯರು. ಸಂಸ್ಥಾನಾದ್ಯಂತ ೭೪೦ ಸದಸ್ಯರನ್ನು ಒಳಗೊಂಡ ೭೨ ಸಮಿತಿಗಳಿವೆ. ಇದರಲ್ಲಿ ವೇತನ ಪಡೆದಿರುವ ೨೯ ಜನ ಪ್ರಚಾರಕರಿರುವರು. ಒಟ್ಟು ೭,೬೯೫ ಸಭೆಗಳನ್ನು ನಡೆಸಲಾಯಿತು. ಈ ಕಾರ್ಯಕ್ಕಾಗಿ ಜೂನ್ ಅಂತ್ಯದವರಿವಿಗೆ ೮೫,೩೭೯-೧೩-೪ ರೂ.ಗಳು ವೆಚ್ಚವಾದವು. ಸಾಮಾನ್ಯವಾಗಿ ಈ ಸಂಸ್ಥೆಯ ಕೆಲಸ ಕಾರ್ಯಗಳು ಸಂಸ್ಥಾನದಲ್ಲೆಲ್ಲಾ ಏಕಪ್ರಕಾರವೇ ಇರುತ್ತಿದ್ದವು. ಆದರೆ ಬೆಂಗಳೂರು ನಗರದ ಕಮಿಟಿಯು ಫೇರ್ ಪ್ರೈಸ್ ಡಿಪೋಗಳನ್ನು ತೆಗೆಯುವ ವಿಚಾರದಲ್ಲಿ ಸರಬರಾಯಿ ಶಾಖೆಗೆ ವಿಶೇಷ ಸಹಾಯ ಮಾಡಿತು. ರೇಷನ್ ಕಾರ್ಡುಗಳನ್ನು ವಿನಿಯೋಗಿಸುವ ಕೆಲಸದಲ್ಲಿಯೂ ಈ ಕಮಿಟಿಯ ನೆರವು ಚೆನ್ನಾಗಿದ್ದಿತು. "ಟ್ಯುನೀಷಿಯಾ ದಿನಾಚರಣೆ" ಮತ್ತು "ಯುನೈಟೆಡ್ ನೇಷನ್ಸ್ ದಿನಾಚರಣೆ"ಗಳ ದಿನಗಳಲ್ಲಿ ಬೆಂಗಳೂರಿನ ಅಂಗವಿಕಲ್ಪರಾದ ಭಿಕ್ಷುಕರಿಗೂ ಮತ್ತು ಬಡವರಿಗೂ ಉಚಿತವಾಗಿ ರಾಗಿಯನ್ನು ಖಾಸಗಿ ಉದಾರಿಗಳಿಂದ ಹಂಚಿಸಿತು.

ಅತ್ಯಂತ ಹೆಚ್ಚಿನ ಸಭೆ ನಡೆಸಿದ ಜಿಲ್ಲೆ ಬೆಂಗಳೂರು

ನ್ಯಾಷನಲ್ ವಾರ್‌ಫ್ರಂಟಿನ ಸಂದೇಶವನ್ನು ಜನರಲ್ಲಿ ಸಾರಲು ಅತ್ಯಂತ ಅಧಿಕಸಂಖ್ಯೆಯಲ್ಲಿ ಸಭೆಗಳನ್ನು ಏರ್ಪಡಿಸಿದ ಕೀರ್ತಿಯು ಬೆಂಗಳೂರು ಜಿಲ್ಲೆಗೆ ಸೇರತಕ್ಕದ್ದಾಗಿದೆ. ಅದು ಒಟ್ಟು ೧೫೦೦ ಸಭೆಗಳನ್ನು ನಡೆಸಿತು. ಎರಡನೆಸ್ಥಾನ ದೊರಕುವುದು ಈ ವಿಚಾರದಲ್ಲಿ ಮಂಡ್ಯ ಜಿಲ್ಲೆಗೆ ಅಲ್ಲಿ ಆದ ಸಭೆಗಳು ೧೧೨೫ ಬೆಂಗಳೂರುಜಿಲ್ಲೆಯಲ್ಲಿ ಅಧಿಕ ಆಹಾರ ಪದಾರ್ಥಗಳನ್ನು ಬೆಳೆಯಿರೆಂಬ ಚಳುವಳಿಯು ತೀವ್ರವಾಗಿ ನಡೆಯಿತು. ಹಲವು ಕಡೆಗಳಲ್ಲಿ ಉಚಿತವಾಗಿ ತರಕಾರಿ ಬೀಜಗಳನ್ನೂ ಮತ್ತು ಗಿಡಗಳನ್ನೂ ಹಂಚಲಾಯಿತು.

ಪ್ರಥಮ ಪ್ರದರ್ಶನ ನಡೆಸಿದ ಗೌರವ ಮೈಸೂರಿಗೆ

ನ್ಯಾಷನಲ್ ವಾರ್‌ಫ್ರಂಟಿನ ಧ್ಯೇಯ 'ಉದ್ದಿಶ್ಯ ಮತ್ತು ಫಲಾಫಲಗಳ ವಿಷಯವು ಜನರಿಗೆ ತಕ್ಕ ರೀತಿಯಲ್ಲಿ ಪ್ರಚಾರವಾಗುವಂತೆ ಪ್ರದರ್ಶನವನ್ನು ಇಡೀ ಭಾರತದಲ್ಲಿಯೇ ಮೊಟ್ಟಮೊದಲನೆಯದಾಗಿ ಏರ್ಪಡಿಸಿದ ಕೀರ್ತಿಯು ಮೈಸೂರು ನಗರಕ್ಕೆ ಸಲ್ಲತಕ್ಕದ್ದಾಗಿದೆ. ಅದಾದಮೇಲೆ ಸಂಸ್ಥಾನದ ಜಿಲ್ಲೆಗಳಲ್ಲೈಕೆ ೬ ಜಿಲ್ಲೆಗಳಲ್ಲಿ ಪ್ರದರ್ಶನಗಳೇರ್ಪಟ್ಟವು. ಭಾರತದ ವೈಸ್ರಾಯರು ೨೧-೮-೪೩ ನೇ ತಾರೀಖಿನ ದಿನ ಮೈಸೂರು ನಗರದಲ್ಲಿ ನ್ಯಾಷನಲ್ ವಾರ್‌ಫ್ರಂಟಿನ ಪ್ರದರ್ಶನವನ್ನು ನೋಡಿ ಆನಂದಪಟ್ಟು ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳಿಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಮೈಸೂರಿನ ಎ. ಆರ್. ಪಿ. ದಳದ ಡೆಪ್ಯುಟಿ ಚೀಫ್ ವಾರ್ಡನರಾದ ಶ್ರೀಮತಿ ಎಲ್. ಪಿ. ಕೃಷ್ಣಪ್ಪನವರು ನ್ಯಾಷನಲ್ ವಾರ್‌ಫ್ರಂಟ್ ಕೆಲಸ ಕಾರ್ಯದಲ್ಲಿ ಆಸಕ್ತಿ ವಹಿಸಿ ಇದರ ಸಂದೇಶವನ್ನು ಮಹಿಳೆಯರಲ್ಲಿಯೂ ಹರಡುತ್ತಿರುವ ಕಾರ್ಯವು ಶ್ಲಾಘ್ಯವಾದುದಾಗಿದೆ. ಅವರು ಅದಕ್ಕಾಗಿ ಅಭಿನಂದನಾರ್ಹರು. ತಕ್ಕ ಪ್ರಚಾರ ನಡೆಯಲೆಂದು ಮಾಯಾ ಚಿತ್ರಗಳ ಸಹಿತ ೬೩ ಸಭೆಗಳನ್ನು ಏರ್ಪಡಿಸಲಾಯಿತು.

ಸೈನಿಕರಿಗೆ ಚಿತ್ರದುರ್ಗದ ಸಹಾಯ

ಚಿತ್ರದುರ್ಗದ ಜಿಲ್ಲೆಯಿಂದ ಸೈನಿಕರ ಉಪಯೋಗಕ್ಕಾಗಿ ಉಣ್ಣೆಯ ಕಾಲುಚೀಲಗಳನ್ನೂ ಮತ್ತು ಜರ್ಸಿಗಳನ್ನೂ ಒದಗಿಸಲಾಯಿತು. ಈ ಜಿಲ್ಲೆಯಲ್ಲಿಯೂ ಸಹ ಅಧಿಕ ಆಹಾರ ಪದಾರ್ಥ ಬೆಳೆಯಲು ತಕ್ಕ ಪ್ರಚಾರ ನಡೆಯಿತು.

ತುಮಕೂರಿನಲ್ಲೇ ಅತ್ಯಂತ ಹೆಚ್ಚಿನ ಹೋಬಳಿ ಸಮಿತಿ

ಹೋಬಳಿ ಸಮಿತಿಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ರಚಿಸುವ ಕೆಲಸಕ್ಕೆ ತುಮಕೂರು ಜಿಲ್ಲೆಯು ಸರ್ಕಾರ ವಿಶೇಷ ಶ್ಲಾಘನೆ ಪಡೆಯಿತು. ಮೈಸೂರು ಸಂಸ್ಥಾನದಲ್ಲಿರುವ ಒಟ್ಟು ೪೦೮ ಹೋಬಳಿ ಸಮಿತಿಗಳಲ್ಲಿ ತುಮಕೂರು ಜಿಲ್ಲೆಯೊಂದರಲ್ಲಿಯೇ ೧೦೫ ಹೋಬಳಿ ಸಮಿತಿಗಳಿವೆ.

ಕೋಲಾರ ಜಿಲ್ಲೆಯ ಕಾರ್ಯಕ್ರಮ

ಕೋಲಾರ ಜಿಲ್ಲೆಯಲ್ಲಿ ೬೩ ಸಭೆಗಳಾದವು. ಕೋಲಾರ ಸಮಿತಿಯ ಸದಸ್ಯರು ಪ್ರತ್ಯೇಕ ಪ್ರತ್ಯೇಕವಾಗಿ ಜನರ ಬಳಿಗೆ ತೆರಳಿ ಅವರೊಡನೆ ನ್ಯಾಷನಲ್ ವಾರ್‌ಫ್ರಂಟ್ ಸಂಸ್ಥೆಯ ಪ್ರಭಾವಕ್ಕೆ ಒಳಗಾದ ಸಾರ್ವಜನಿಕರು ರೈತರು ವ್ಯಾಪಾರಸ್ಥರು ವರ್ತಕರು ವಿದ್ಯಾರ್ಥಿಗಳು

(೧೦ನೇ ಪುಟ ನೋಡಿ)

ವಿಚಿ ಸರಕಾರ ಪುನರ್ರಚನೆ

-:o:-

ವಿಚಿ ಸರಕಾರದಲ್ಲಿ ಬದಲಾವಣೆಯಾಗುವುದೆಂದು ಜರ್ಮನ್ ಭವಿಷ್ಯವಾಣಿ ಹೊರಟಿದೆ.

ಈಗ ಫ್ರೆಂಚ್ ಪೋಲಿಸ್ ಜನರಲ್ ಸೆಕ್ರೆಟರಿಯಾಗಿರುವರನ್ನು ವ್ಯವಸಾಯ ಮತ್ತು ಆಹಾರಶಾಖಾ ಸ್ಥಾನಕ್ಕೆ ನೇಮಿಸಬೇಕೆಂದು ಸೂಚಿಸಲ್ಪಟ್ಟಿದೆ.

ಇಟಲಿ ದಂಡಯಾತ್ರಾರಂಭ

—೦—

ಅನೇಕ ರಕ್ಷಣಾ ಸ್ಥಾನಗಳ ಸ್ಥಾಪನೆ

—೮—

ಉತ್ತರ ಇಟಲಿ ಮೇಲೂ ಮಿತ್ರ ದಾಳಿಗಳು

—೦—

ಇಟಲಿ ಆಕ್ರಮಣಾರಂಬವಾಯಿತೆಂಬುದಾಗಿ ಮಿತ್ರ ಕಚೇರಿಯ ಪ್ರಕಟಣೆ ತಿಳಿಸುತ್ತದೆ. ಜನರಲ್ ಇಸನ್‌ಹೋರರ ನಾಯಕತ್ವದಲ್ಲಿ ಮಿತ್ರಸೇನೆಗಳು ಮುನ್ನುಗ್ಗಿವೆ. ೩ನೇ ತಾ|| ಬೆಳಿಗ್ಗೆ ಮೆಸ್ಸಿನಾ ಜಲಸಂಧಿಯ ಮಾರ್ಗವಾಗಿ ಜಲ ಮತ್ತು ವಾಯುಸೇನಾ ಸಹಾಯಗಳಿಂದ ಬ್ರಿಟಿಷ್ ಅಷ್ಟಮ ಸೈನ್ಯವೂ ಮತ್ತು ಕೆನಡಿಯನ್ ಸೈನ್ಯವೂ ಇಟಲಿಯ ಮುಖ್ಯ ಪ್ರದೇಶದಲ್ಲಿ ಬಂದಿಳಿದವು. ಬೆಳಗಿನ ಜಾವ ನಾಲ್ಕೂವರೆ ಗಂಟೆಗೆ ಮೆಸ್ಸಿನಾಕ್ಕೆ ಎದುರು ಭಾಗದಲ್ಲಿ ಮಿತ್ರ ಸೇನೆಗಳ ಪ್ರಥಮ ಆಕ್ರಮಣವಾಯಿತೆಂದು ತಿಳಿಸಲ್ಪಟ್ಟಿದೆ.

ಆಗ ಕೆಲವು ದಿನಗಳಿಂದ ಮಿತ್ರಪಕ್ಷದ ಪರಿಶೀಲನಾ ವಿಮಾನ ಪಡೆಗಳು ಜಲ ಸಂಧಿಯನ್ನು ದಾಟಿ ಶತ್ರು ರಕ್ಷಣಾ ವ್ಯೂಹವನ್ನು ಭೇದಿಸುವ ಸಲುವಾಗಿ ಹೋಗುತ್ತಿದ್ದವು.

ಮಿತ್ರಸೇನೆಗಳು ಇಟಲಿಯಲ್ಲಿ ಬಂದಿಳಿಯುವ ಮುನ್ನ ಜನರಲ್ ಇಸನ್‌ಹೋರರು ಜನರಲ್ ಅಲೆಗ್ಸಾಂಡರ್ ಮತ್ತು ಮಾಂಟಗೋಮರಿಯವರೊಡನೆ ಸಿಸಿಲಿಯಲ್ಲಿ ಸಮಾಲೋಚನೆ ನಡೆಸಿದ್ದರು. ಆದಿನ ಬೆಳಗ್ಗೆ ಇಟಲಿ ಜನರಿಗೆ ಇಟಲಿ ಭಾಷೆಯಲ್ಲಿ ಆಲ್ಜೀರ್ಸ್ ರೇಡಿಯೋ ಮುಖಾಂತರ ಸಂದೇಶ ಕಳಿಸುತ್ತ ಯುದ್ಧದ ೪ನೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಇಟಲಿಯ ಮೇಲೆ ದಂಡಯಾತ್ರೆಯಾರಂಭಿಸುವೆವು ಎಂದು ಹೇಳಿದೆ.

ಇಟಲಿಯು ಜರ್ಮನಿಯ ಯುದ್ಧಕ್ಕಾಗಿ ಬಹಳ ಕಷ್ಟನಷ್ಟಗಳನ್ನನುಭವಿಸಬೇಕಾಗುವುದೆಂದು ಚರ್ಚಿಲರು ಹೇಳಿದುದನ್ನು ಇಟಲಿಯನರು ಜ್ಞಾಪಿಸಿಕೊಳ್ಳಲಿ. ನಿಮ್ಮ ಗಾರಿಬಾಲ್ಡಿಯವರು ನಮ್ಮನ್ನು ಅತ್ಯಾದರದಿಂದ ಸ್ವಾಗತಿಸಿದಂತೇ ನೀವೂ ಸಹ ಮಿತ್ರ ಸೇನೆಗಳು ನಿಮ್ಮ ಸ್ವಾತಂತ್ರ್ಯಕ್ಕಾಗಿ ಬರುತ್ತಿರುವರೆಂದು ಅವರನ್ನು ಸ್ವಾಗತಿಸಿ ಎಂದು ಆ ಸಂದೇಶ ತಿಳಿಸುತ್ತದೆ.

ಇಟಲಿಯಲ್ಲಿ ಮಿತ್ರ ಸೇನೆಗಳು ಬಂದಿಳಿದಿರುವುದರಿಂದ ಈಗಲೇ ಅಂತಹ ಭಾರಿ ಯುದ್ಧಾರಂಬವಾಗಿವೆಯೆಂದು ಮಿತ್ರ ಪಕ್ಷದವರು ಭಾವಿಸಿಲ್ಲ ಆ ಪ್ರದೇಶವೆಲ್ಲಾ ಬೆಟ್ಟಗುಡ್ಡಗಳಿಂದ ತುಂಬಿದೆ

ಜೂಲೈ ೩೦ರಲ್ಲಿ ಇಟಲಿ ದಂಡಯಾತ್ರೆಯ ಬಗ್ಗೆ ಚರ್ಚಿಲರು ಒಂದು ಹೇಳಿಕೆ ಕೊಟ್ಟು ಮೆಡಿಟರೇನಿಯನ್ನಿನಲ್ಲಿ ಮತ್ತು ಇತರ ಪ್ರದೇಶದಲ್ಲಿ ಬೇಸಗೆಯಲ್ಲಿ ಬಹು ಭೀಕರ ಯುದ್ಧವಾರಂಭವಾಗುವುದು ಎಂದು ತಿಳಿಸಿದ್ದರು

ಮಿತ್ರ ಸೇನೆಗಳೂ, ಟ್ಯಾಂಕುಗಳೂ, ಇತರ ವಾಹನಗಳೂ ಮಿತ್ರ ಯುದ್ಧ ನೌಕೆಗಳ ಸಹಾಯದಿಂದ ಇಟಲಿಗೆ ಬಂದು ಸೇರುತ್ತಿವೆ ತೀರ ಪ್ರದೇಶವು ಮಿತ್ರರ ಷೆಲ್‌ಗಳ ಆಘಾತಕ್ಕೆ ಸಿಕ್ಕಿದೆ ಉತ್ತರ ಇಟಲಿ ಮೇಲೂ ದಾಳಿಗಳಾಗಿವೆ.

ರೆಗಿಯೋದಿಂದ ಸಂಜೀವಿನಿ ವರೆಗೆ ಸಿಸಿಲಿಗೂ ವತ್ತು ಇಟಲಿ ಮುಖ್ಯ ಪ್ರದೇಶಕ್ಕೂ ಇರುವ ಭಾಗಗಳಲ್ಲಿ ಹಿಂದಿಗಿಂತ ಹೆಚ್ಚು ರಕ್ಷಣಾಸ್ಥಾನಗಳನ್ನು ಮಿತ್ರರು ತಯಾರಿಸಿಕೊಂಡಿರುವರು ಎಂದು ವಿಚಿ ರೇಡಿಯೋ ತಿಳಿಸುತ್ತದೆ.

ಇಟಲಿ ದಂಡಯಾತ್ರೆಯಾರಂಭಿಸಿದಂದಿನಿಂದ ಅಲ್ಲಿನ ಹೆಚ್ಚು ವಿಷಯಗಳ ಬಗ್ಗೆ ಅಧಿಕಾರಯುತ ಪ್ರಕಟಣೆಯೇನೂ ತಿಳಿಸಲ್ಪಟ್ಟಿಲ್ಲ.

ಸಂಗ್ರಾಮ

ಕೀವ್ ನಗರಕ್ಕೆ ಅಪಾಯ

ರಷ್ಯ ಮಹಾ ರಣಕ್ಷೇತ್ರದಲ್ಲಿ ಸೋವಿಯಟ್ ಸೈನ್ಯಗಳು ಅಸಾಧಾರಣ ವಿಜಯವನ್ನು ಸಂಪಾದಿಸಿವೆ ಸ್ಮೊಲೆನ್‌ಸ್ಕ್ ರಣಕ್ಷೇತ್ರದಲ್ಲಿ ೧೦೦ ಶತ್ರು ವಿಮಾನಗಳು ರಷ್ಯನರ ವಶವಾದವು. ಜರ್ಮನರಿಗೆ ಜನ ಮತ್ತು ಸಾಮಗ್ರಿಗಳ ನಷ್ಟವು ಅಪಾರವಾಗಿದೆ ಆದರೆ ಭೀಕರ ಪ್ರತಿಭಟನೆಯನ್ನು ತೋರಿಸುತ್ತಿರುವರು

ಬ್ರಿಯಾನ್‌ಸ್ಕ್‌ಗೆ ದಕ್ಷಿಣದಲ್ಲಿ ರಷ್ಯನ್ ಸೇನೆಗಳು ಇನ್ನೂ ಮುನ್ನುಗ್ಗಿವೆ, ಮತ್ತು ಆ ಪ್ರಾಂತದ ಮುಖ್ಯ ನಗರವಾದ ಸುಮ್ಮಿಯನ್ನೂ ವಶಪಡಿಸಿಕೊಂಡಿರುವುದಲ್ಲದೆ ಬ್ರಿಯಾನ್‌ಸ್ಕ್ ಮತ್ತು ಕೀವ್ ರೈಲ್ವೆ ರಸ್ತೆಯನ್ನು ಕತ್ತರಿಸಿ ಮತ್ತೊಂದು ನಗರವನ್ನು ರಷ್ಯನರು ವಶಪಡಿಸಿಕೊಂಡಿರುವರು

ರಷ್ಯನ್ ಬಾಂಬರುಗಳು ಪಲಾಯನ ಮಾಡುತ್ತಿರುವ ಜರ್ಮನರ ಮೇಲೆ ಭೀಕರ ದಾಳಿ ಮಾಡುತ್ತಿವೆ.

ಅಜೋವ್ ಸಮುದ್ರದ ಬಳಿ ರಷ್ಯನರು ಮರಿಯೂಪೊಲಿಗೆ ೩೫ ಮೈಲಿ ದೂರದವರೆಗೆ ಜರ್ಮನರನ್ನು ಹಿಮ್ಮೆಟ್ಟಿಸಿದರು.

ರಷ್ಯನ್ ವಿಜಯದ ವಿವರಣೆ

ರಷ್ಯನರು ಬೇಸಿಗೆಯ ದಂಡಯಾತ್ರೆಯನ್ನಾರಂಭಿಸಿದಾಗಿನಿಂದ ಅವರಿಗೆ ದೊರೆತ ವಿಜಯದ ಬಗ್ಗೆ ನಿನ್ನೆ ರಾತ್ರಿ ಮಾಸ್ಕೊ ರೇಡಿಯೋ ವಿವರವನ್ನು ಕೊಟ್ಟಿದೆ

ಸ್ಮೊಲೆನ್‌ಸ್ಕ್, ಬ್ರಿಯಾನ್‌ಸ್ಕ್, ಖಾರ್ಕೋವ್ ಮತ್ತು ಡೋನೇಜ್ ರಂಗಗಳಲ್ಲಿ ರಷ್ಯನರ ಶತ್ರುವ್ಯೂಹವನ್ನು ಧ್ವಂಸಮಾಡಿ ನೂರಾರು ನಗರ ಗ್ರಾಮಗಳನ್ನು ವಶಪಡಿಸಿಕೊಂಡಿರುವರು.

ಉತ್ತರ ಸ್ಮೊಲೆನ್ಸ್ಕಿಗೂ ಮತ್ತು ದಕ್ಷಿಣದಲ್ಲಿ ಸ್ಟಾಲಿನೋಕ್ಕೂ ಅಪಾಯ ಸಂಭವಿಸಿದೆ ಕೀವ್ ಕಡೆ ಹೋಗುವ ಮುಖ್ಯ ರೈಲ್ವೆ ಜಂಕ್ಷನ್ ಕೊನೊಟಾಪ್‌ಗೆ ಸಮೀಪಗತವಾಗುತ್ತಿರುವರು.

ಬೇಸಗೆಯ ದಂಡಯಾತ್ರಾರಂಭವಾದ ನಂತರ ರಷ್ಯದ ಮುಖ್ಯ ಪ್ರಧಾನಿ ಮಾರ್ಷಲ್ ಸ್ಟಾಲಿನ್‌ರವರು ಶುಭಸಂದೇಶವನ್ನು ತಿಳಿಸುತ್ತ

... ವಿಭಾಗ

ಯೂಕ್ರೈನಿನಲ್ಲಿ ಜರ್ಮನರ ಅತಿಮುಖ್ಯ ಸರಪರಾಜು ನೆಲೆಯಾದ ಸೂಮಿ ನಗರ ವಶವಾಗಿರುವುದೆಂದು ಹೇಳಿದರು ಸೂಮಿ ವಶವಾದುದಕ್ಕಾಗಿ ಮಾಸ್ಕೋ ನಗರದಲ್ಲಿ ನಿನ್ನೆ ರಾತ್ರಿ ಸಮಾರಂಭವನ್ನಾಚರಿಸುತ್ತ ಕುಶಾಲು ತೋಪುಗಳನ್ನು ಹಾರಿಸಿದರು ಸ್ಮೋಲೆನ್ಸ್ಕ ಮತ್ತು ಅಜೋವ್ ರಂಗಗಳಲ್ಲಿ ರಷ್ಯ ಸೈನ್ಯಗಳು ಮುನ್ನುಗ್ಗುತ್ತಿರುವ ವಿಚಾರವಾಗಿಯೂ ಪ್ರಕಟಣೆ ಹೊರಟಿದೆ.

ಸ್ಮೊಲೆನ್‍ಸ್ಕ ರಣರಂಗದಲ್ಲಿ ಎರಡು ರಷ್ಯನ್ ಸೈನ್ಯಗಳು ಜರ್ಮನ್ ನೆಲೆಯ ಕಡೆ ನುಗ್ಗುತ್ತಿವೆ ಒಂದು ಯಲ್ನಿಯಾದಿಂದ ೫೦ ಮೈಲಿ ಪೂರ್ವಕ್ಕೂ ಮತ್ತೊಂದು ಮೊದಲನೆಯ ಸೈನ್ಯದ ಉತ್ತರಕ್ಕೆ ೨೦ ಮೈಲಿ ದೂರದಲ್ಲಿಯೂ ದೊರೋಗೋಬಜ್ ಕಡೆ ಹೋಗುತ್ತಿವೆ.

ಡೋನೇಜ್ ರಂಗದಲ್ಲಿ ರಷ್ಯನರು ಜರ್ಮನ್ ರಕ್ಷಣಾ ವ್ಯೂಹವನ್ನು ಧ್ವಂಸ ಮಾಡುತ್ತಿರುವರು ಅದು ಮೊದಲೇ ಬಲಹೀನವಾಗಿದೆ. ಪ್ರಾಯಶಃ ಕುಸಿದು ಬೀಳಬಹುದು ಡೊನೇಜಿನಲ್ಲಿ ಮುಖ್ಯ ಪ್ರದೇಶವಾದ ಲಿಸಿಚಾನ್‍ಸ್ಕ ಕಡೆಗೂ ಮುನ್ನುಗ್ಗುತ್ತಿರುವರು. ಅಂದರೆ ರಷ್ಯನರು ಡೊನೇಜಿನಲ್ಲಿ ಶತ್ರು ವ್ಯೂಹವನ್ನು ಉತ್ತರದಲ್ಲಿ ಭೇದಿಸಿದಂತಾಯಿತು ಲಿಸ್ಸಿಚಾನ್‍ಸ್ಕ ಮತ್ತು ವೋರೋಷಿಲೋವುಗಳು ರಷ್ಯನರ ವಶವಾಗಿವೆ

ಶತ್ರುಗಳ ಲಾರಿ ಸರಪರಾಜು ಕೋರಿಗಳು ಪಿರಂಗಿಗಳು ಮತ್ತು ಟ್ಯಾಂಕುಗಳು ನಾಶವಾಡಲ್ಪಟ್ಟು ಅವರಿಗೆ ಅಪಾರ ನಷ್ಟವನ್ನುಂಟುಮಾಡಿದರು

ರಷ್ಯದಲ್ಲಿ ಈಗ ಅತ್ಯುಗ್ರ ಕಾಳಗವಾಗುತ್ತಿದೆ ಜರ್ಮನರು ಉತ್ತರದಲ್ಲಿ ಸ್ಮೊಲೆನ್ಸ್ಕ ಕಡೆಗೂ ಮತ್ತು ದಕ್ಷಿಣದಲ್ಲಿ ಮಾರಿಯೂಪೋಲ್ ಕಡೆಗೂ ಹಿಮ್ಮೆಟ್ಟಿಸಿರುವರು

ಸ್ಮೋಲೆನ್ಸ್ಕ ರಂಗದಲ್ಲಿ ರಷ್ಯನರು ದಟ್ಟಡವಿಯ ನದಿಗಳು ಮತ್ತು ಜರ್ಮನ್ ಪ್ರದೇಶದ ಮುಖಾಂತರ ಮೂರೂವರೆ ಮೈಲಿಗಳವರೆಗೆ ಮುಂದೆ ನುಗ್ಗಿ ಬಂದಿವೆ; ಮತ್ತು ನೂರಾರು ನಗರಗ್ರಾಮಗಳನ್ನು ವಶಪಡಿಸಿಕೊಂಡಿರುವರು ಜರ್ಮನರು ಹೊಸ ಸೈನ್ಯ ಮತ್ತು ವಿಮಾನಗಳಿಂದ ಪ್ರತಿದಾಳಿಗಳನ್ನು ಮಾಡುತ್ತಿರು.

ಬ್ರಿಯಾರ್ನಸ್ಕ ರಂಗದಲ್ಲಿ ೩ ಮೈಲಿಗಳವರೆಗೂ ಇನ್ನು ಮುನ್ನುಗ್ಗಿರುವರು.

ಖಾರ್ಕೋವ್ ರಂಗದಲ್ಲಿಯೂ ರಷ್ಯನರು ಆಗ್ನೇಯದ ಕಡೆ ಮುನ್ನುಗ್ಗಿರುವುದಾಗಿ ಮಾಸ್ಕೋ ಮಧ್ಯರಾತ್ರಿ ಪ್ರಕಟಣೆ ತಿಳಿಸುತ್ತದೆ.

ಮುಸೋಲಿನಿ ಮನೆ ಸರ್ಕಾರದ ಅಧೀನ

ಬಡೋಗ್ಲಿಯೋ ಸರ್ಕಾರದಿಂದ ಸಮಿತಿ ನೇಮಕ

ಇಟಲಿಯಲ್ಲಿ ಬಡೋಗ್ಲಿಯೋ ಸರಕಾರವು ಫಾಸಿಸ್ಟ ಅಧಿಕಾರಿಗಳು ಬ್ಯಾಂಕ್ ಶಿಲ್ಕನ್ನೂ ತನಿಖೆ ಮಾಡುವ ಸಲುವಾಗಿ ಒಂದು ಸಮಿತಿಯನ್ನೂ ನೇಮಿಸಿರುವುದು ಆ ಸಮಿತಿಯು ಈಗಾಗಲೇ ಸಿಯಾನೋ ಅವನ ಪತ್ನಿ ಎಡ್ಡಾ ಮತ್ತು ಮುಸೋಲಿನಿಯ ಮಗಳ ಲೆಖ್ಖವನ್ನು ತನಿಖೆ ಮಾಡಿ ಕೆಲವು ಮುಖ್ಯ ವಿಷಯಗಳನ್ನು ಸಂಗ್ರಹಿಸಿರುವರು

೯೬,೦೦೦ ಟನ್ ಬಾಂಬುಗಳ ಸುರಿಮಳೆ

೪ ವರ್ಷ ಯುದ್ಧದಲ್ಲಿ ಬ್ರಿಟಿಷ್ ಬಾಂಬರುಗಳ ದಾಳಿ

ಬ್ರಿಟಿಷ್ ಬಾಂಬರುಗಳು ೧೯೪೨ ನೇ ಸಪ್ಟೆಂಬರಿನಿಂದ ೧೯೪೩ ನೇ ಸೆಪ್ಟೆಂಬರ್ ೨ ರವರೆಗೆ ಜರ್ಮನಿಯ ಮೇಲೆ ೯೬,೦೦೦ ಟನ್ ಬಾಂಬುಗಳನ್ನು ಸುರಿಸಿರುವುದಾಗಿ ಅಧಿಕಾರಯುತ ಪ್ರಕಟಣೆ ತಿಸುತ್ತದೆ

ಕಳೆದ ವರ್ಷಗಳಲ್ಲಿ ನಡಸಿದ ಬಾಂಗಿನಿಂದ ಎರಡರಷ್ಟಾಗುವುದು

ಮಿತ್ರ ವಿಮಾನಗಳ ಒಂದು ಭಾರಿ ಪಡೆಯು ಕಡಲ್ಗಾಲುವೆಯನ್ನು ದಾಟಿ ಯೂರೋಪ್ ಕಡೆ ಹೋದವೆಂದು ತಿಳಿದುಬಂದಿದೆ

ಡೊನೇಜಿನಲ್ಲಿ ರಷ್ಯ ಜಯ

ಡೋನೇಜ ರಣರಂಗದಲ್ಲಿ ರಷ್ಯನರು ಇನ್ನು ೫ ಮುಖ್ಯ ನಗರವನ್ನು ವಶಪಡಿಸಿಕೊಂಡು ಸ್ಟಾಲಿನೋ ನಗರವನ್ನು ಸುತ್ತುಗಟ್ಟಿರುವರು. ರಷ್ಯನರು ಇನ್ನೂ ೧೦ ಮೈಲಿಗಳು ಮುಂದೆ ನುಗ್ಗಿ ೧೨ ಸ್ಥಾನಗಳನ್ನು ವಶಪಡಿಸಿಕೊಂಡಿರುವರೆಂದು ಮಾಸ್ಕೊ ಪ್ರಕಟಣೆ ತಿಳಿಸುತ್ತದೆ. ಬ್ರಿಯಾರ್ನಸ್ಕ ರಂಗದಲ್ಲಿ ರಷ್ಯನ್ ಒತ್ತಡವು ಒಂದೇರೀತಿಯಲ್ಲಿದೆ. ಅವರು ೫ ರಿಂದ ೮ ಮೈಲಿಗಳವರೆಗೆ ಮುನ್ನುಗ್ಗಿ ಇನ್ನು ಕೆಲವು ಸ್ಥಾನಗಳನ್ನು ವಶಪಡಿಸಿಕೊಂಡಿರುವರು.

ರಷ್ಯ ಸೈನ್ಯಗಳು ೧೦೦ ಮೈಲಿ ವಿಸ್ತಾರವಾದ ರಣಕ್ಷೇತ್ರದಲ್ಲಿ ಎಡಬಿಡದೆ ಹೋರಾಡುತ್ತಿವೆ. ಅವು ಡೊನೇಜ್ ರಂಗದಲ್ಲಿ ೧೦ ರಿಂದ ೧೫ ಮೈಲಿಗಳವರೆಗೆ ಮುನ್ನುಗ್ಗಿ ೯೦ ಪ್ರದೇಶಗಳನ್ನು ವಶಪಡಿಸಿಕೊಂಡಿವೆ.

ರಷ್ಯನರು ಜರ್ಮನ್ ವ್ಯೂಹವನ್ನು ಭೇದಿಸಿ ಶತ್ರು ಪ್ರತಿಭಟನೆಗಳನ್ನೆಲ್ಲಾ ಧ್ವಂಸ ಮಾಡಿ ಮುಖ್ಯ ಕೈಗಾರಿಕಾ ಕ್ಷೇತ್ರವಾದ ಸ್ಟಾಲಿನೋ ನಗರಕ್ಕೆ ೨೦ ಮೈಲಿ ಸಮೀಪದಲ್ಲಿರುವರೆಂದು ಮಾಸ್ಕೋ ಪ್ರಕಟಣೆ ತಿಳಿಸುತ್ತದೆ ಮುಂದೆ ಇನ್ನೂ ಕಠಿಣ ತೆರನಾದ ಪ್ರದೇಶಗಳಿವೆ

ಖಾರ್ಕೋವ್ ರಂಗದಲ್ಲಿ ೧೫ ಮೈಲಿ ನೈರುತ್ಯದಲ್ಲಿರುವ ಒಂದು ನಗರವನ್ನು ರಷ್ಯನರು ವಶಪಡಿಸಿಕೊಂಡಿರುವರು ಒಟ್ಟು ೧೫೦ ನಗರ ಗ್ರಾಮಗಳು ರಷ್ಯನರ ವಶವಾಗಿವೆ

ರಷ್ಯದಲ್ಲಿರುವ ಬ್ರಿಟಿಷ್ ಮತ್ತು ಅಮೇರಿಕನ್ ಬಾತ್ಮೀದಾರರು ಖಾರ್ಕೋವ್ ಯುದ್ಧ ರಂಗಗಳಿಗೆ ಭೇಟಿ ಕೊಟ್ಟು ಖಾರ್ಕೋವ್ ಮತ್ತು ಸ್ಮೊಲೆನ್‍ಸ್ಕ ರಂಗಗಳಲ್ಲಿ ರಷ್ಯನ ವಿಜಯವು ನಮರ್ಪಕವಾಗಿದೆಯೆಂಬುದಾಗಿ ರಷ್ಯನ್ ಹೈ ಕಮಾಂಡ್ ತಿಳಿಸಿದೆ ವಿಚಾರವನ್ನು ವರದಿ ಮಾಡಿರುತ್ತಾರೆ ಆದರೆ ನೀಪರ್ ಪ್ರದೇಶವನ್ನು ಸೇರಬೇಕಾದರೆ ಇನ್ನು ಬಹು ಪ್ರಯತ್ನ ಪಡಬೇಕಾಗಿದೆ ಎಂದು ತಿಳಿಸಿರುತ್ತಾರೆ

ಬ್ರಿಟಿಷ್ ಮತ್ತು ಅಮೇರಿಕನ್ ಯುದ್ಧ ಸಾಮಗ್ರಿಗಳು ರಷ್ಯನ್ ರಣಕ್ಷೇತ್ರದಲ್ಲಿ ಮುಖ್ಯ ಪಾತ್ರವನ್ನು ವಹಿಸಿವೆ

ಡೆನ್ಮಾರ್ಕ್ ವಿಪ್ಲವ

ವಿನಾಶಕಾರರ ಕೃತ್ಯಗಳು ಹೆಚ್ಚಾಗುತ್ತಿವೆ

ಡೆನ್ಮಾರ್ಕಿನಲ್ಲಿ ವಿಪ್ಲವದ ರಭಸವು ಹೆಚ್ಚುತ್ತಿದೆ ಜರ್ಮನರು ಮಿಲಿಟರಿ ಕಾನೂನನ್ನು ಜಾರಿ ಮಾಡಿದ್ದರೂ ಸಹ ಅವರ ವಿರುದ್ಧ ವಿನಾಶಕಾರಕ ಕೃತ್ಯಗಳು ಇನ್ನೂ ಹೆಚ್ಚಾಗಿ ನಡೆಯುತ್ತಿವೆ

ಶತ್ರು ಪ್ರತಿಭಟನೆಯು ಕಡಮೆಯಾಗಿದೆ

ಬ್ರಿಟಿಷ್ ಅಷ್ಟಮಸೈನ್ಯವು ಸಾಗಿಯೊವಾನಿಗೆ ೧೦ ಮೈಲಿ ದೂರದಲ್ಲಿರುವ ಒಂದು ನಗರವನ್ನು ವಶಪಡಿಸಿಕೊಂಡಿದೆ. ಮುಖ್ಯ ಸೈನ್ಯಗಳು ಪ್ಯಾರಾಚೂಟ್ ಪಡೆಗಳೊಡನೆ ಬಂದು ಸೇರಿವೆ, ಶತ್ರು ಪ್ರತಿಭಟನೆಯು ಬಹಳ ಕಡಮೆಯಾಗಿದೆ.

ಆಹಾರ ಸಮಸ್ಯೆ ಪರಿಹರಿಸಲು ನ್ಯಾಷನಲ್ ವಾರ್‌ಫ್ರಂಟಿನವರ ಸೇವೆ

(೭ ನೇ ಪುಟದಿಂದ)

ಮತ್ತು ಕೈಗಾರಿಕಾಕೆಲಸಗಾರರು೧೯೦೦ ಜನರು ಒಳಗಾದರು.

ಸಾರ್ವಜನಿಕ ಕೂಟಗಳಲ್ಲಿ ಶಿವಮೊಗ್ಗದ ಕಾರ್ಯಕ್ರಮ

ನ್ಯಾಷನಲ್ ವಾರ್ ಫ್ರಂಟ್ ಧ್ಯೇಯ ಮತ್ತು ಉದ್ದಿಶ್ಯವನ್ನು ಶಿವಮೊಗ್ಗ ಜಿಲ್ಲೆಯವರು ಹಬ್ಬಹರಿದಿನಗಳಲ್ಲಿಯೂ ಮತ್ತು ಜಾತ್ರೆಗಳಲ್ಲಿಯೂ ಸೇರುವ ಜನ ಸಮುದಾಯದಲ್ಲಿಯೂ ಸಮ್ಮೇಳನಗಳಲ್ಲಿಯೂ ಸಂತೆಗಳಲ್ಲಿಯೂ ಪ್ರಚಾರ ಮಾಡಿದರು.

ಮೈಸೂರು ಜಿಲ್ಲೆಯಲ್ಲಿ ನಡೆದ ಕೆಲಸ ಅತ್ಯಲ್ಪ

ಮೈಸೂರು ಜಿಲ್ಲೆಯ ಕ್ಷೇತ್ರ ವಿಸ್ತಾರಕ್ಕೂ ಮತ್ತು ಅಲ್ಲಿಯ ಅನುಕೂಲತೆಗೂ ಅನುಗುಣವಾಗಿ ತೃಪ್ತಿಕರವಾಗಿ ಕೆಲಸ ನಡೆಯಲಿಲ್ಲ. ಅಲ್ಲಿ ನಡೆದಿರುವ ಕಾರ್ಯವಾದರೂ ಅತ್ಯಲ್ಪ. ಚಿನ್ನದ ಗಣಿಯಲ್ಲಿಯೂ ಸಹ ಅಷ್ಟೇನೂ ಉತ್ತಮರೀತಿಯಲ್ಲಿ ಕೆಲಸ ನಡೆಯಲಿಲ್ಲ. ಇನ್ನು ಮುಂದೆ ಕೆಲವು ಉತ್ತಮಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

ಆಹಾರ ಸಮಸ್ಯೆಯ ಪರಿಹಾರಕ್ಕೆ ಸೇವೆ

ಈ ಸಂಗ್ರಾಮವು ನಾನಾ ಸಮಸ್ಯೆಗಳಿಗೆ ಎಡೆಕೊಟ್ಟಿದೆ. ಅವುಗಳಲ್ಲಿ ಅನೇಕವು ಮುಖ್ಯವಾದುವೂ ಮತ್ತು ತೀವ್ರವಾದವೂ ಆಗಿವೆ. ಅವುಗಳಿಗೆ ಕೈಹಾಕಿ ಪರಿಹರಿಸುವುದು ಅಗತ್ಯ. ಆದರೆ ಆಹಾರ ಪದಾರ್ಥಗಳ ಸರಬರಾಯಿಯು ಅತ್ಯಗತ್ಯ. ಹಲವು ಆಹಾರ ಪದಾರ್ಥಗಳು ನಮಗೆ ಬೇಕಾಗಿರುವ ಪ್ರಮಾಣಕ್ಕಿಂತ ಕಡಿಮೆಯಿದೆ. ಅತ್ಯಗತ್ಯವಾದ ಆಹಾರ ಪದಾರ್ಥಗಳ ಬೆಳೆಯನ್ನು ತೀವ್ರತರವಾದ ರೀತಿಯಲ್ಲಿಯೂ ವಿಶಾಲಕ್ಷೇತ್ರದಲ್ಲಿಯೂ ಹೆಚ್ಚಿಸುವುದು ಅಗತ್ಯ. ಸರ್ಕಾರದವರು ಇದಕ್ಕಾಗಿ ವಿಶಾಲವಾದ ಜಮೀನುಗಳನ್ನು ಸಾಗುವಳಿಗೆ ಒದಗಿಸಿದ್ದಾರೆ. ಸರ್ಕಾರದವರು ಕಲ್ಪಿಸಿರುವ ಅನುಕೂಲಗಳನ್ನು ಉಪಯೋಗಿಸಿಕೊಂಡು ರೈತರು ಈ ಜಮೀನುಗಳಲ್ಲಿ ಬೆಳೆಯನ್ನು ಬೆಳೆಯುವಂತೆ ಮಾಡಿ ಅವರನ್ನು ಪ್ರೇರೇಪಿಸುವುದರ ಮೂಲಕ ನ್ಯಾಷನಲ್ ವಾರ್ ಫ್ರಂಟ್ ಸಂಸ್ಥೆಯವರು ಅತ್ಯುತ್ತಮ ಸೇವೆ ಸಲ್ಲಿಸಿದಂತಾಗುವುದಲ್ಲದೆ ಆಹಾರ ಸಮಸ್ಯೆಯನ್ನು ಪರಿಹರಿಸುವುದಲ್ಲದೆ ಸಂಗ್ರಾಮ ಪ್ರಯುತ್ನಗಳಿಗೆ ಸಹಾಯ ಮಾಡಿ ಅಂತ್ಯ ವಿಜಯಕ್ಕೆ ನೆರವಿತ್ತಂತಾಗುವುದು. ಈಗ ದೊರೆಯುವ ರಾಗಿ ಮತ್ತು ಭತ್ತವನ್ನು ಸರಿಯಾದ ರೀತಿಯಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒದಗಿಸಿ ಈಗಿನ ಕಷ್ಟ ಪರಿಸ್ಥಿತಿಯನ್ನು ಪರಿಹರಿಸಿಕೊಳ್ಳಬೇಕು. ಸರಕಾರದವರು ಒಂದಾಜ್ಞೆ ಹೊರಡಿಸಿ ಹೆಚ್ಚಿನ ಪ್ರಮಾಣದ ದವಸ ಧಾನ್ಯಗಳನ್ನು ಪಡೆದಿರುವರು. ಸರಕಾರದವರಿತ್ತ ಆಕರ್ಷಯುತವಾದ ಬೆಲೆಗೆ ಮಾರಬೇಕೆಂದು ಸೂಚಿಸಿರುವರು. ಈ ಆಜ್ಞೆಯ ಸದುದ್ದಿಶ್ಯವನ್ನು ರೈತರಿಗೂ ವರ್ತಕರಿಗೂ ಮತ್ತು ಶೇಖರಿಸಿಟ್ಟಿರುವವರಿಗೂ ನ್ಯಾಷನಲ್ ವಾರ್‌ಫ್ರಂಟಿನವರು ವಿವರಿಸಿ ಈ ವ್ಯವಸ್ಥೆಯು ಜಯಪ್ರದವಾಗುವಂತೆ ಮಾಡಬೇಕು. ಅಲ್ಲದೆ ನಗರ ಕ್ಷೇತ್ರಗಳಲ್ಲಿಯೂ ಮತ್ತು ಇತರ ಕ್ಷೇತ್ರಗಳಲ್ಲಿಯೂ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತರುವ ಸಂಭವ ಬರುವುದಾದರೆ ಅದು ಜಯಪ್ರದವಾಗಲು ಅವಕಾಶವಿರಬೇಕು. ಈ ವಿಚಾರದಲ್ಲಿ ನ್ಯಾಷನಲ್ ವಾರ್ ಫ್ರಂಟ್ ಸಂಸ್ಥೆಯವರು ಆಸಕ್ತಿ ವಹಿಸಿ ಸರಕಾರದವರಿಗೆ ನೆರವೀಯಬೇಕು.

ರಕ್ಷಣಾಸಾಲಗಳಿಗೆ ಕೊಡುವ ಚಂದಾ ಸಂಗ್ರಾಮ ಪ್ರಯುತ್ನ ಬೆಂಬಲ

ರಕ್ಷಣಾ ಸಾಲಪತ್ರಗಳಿಗೂ ಸೇವಿಂಗ್ ಸ್ಟಾಂಪ್ಸ್, ಸೇವಿಂಗ್ಸ್ ಸರ್ಟಿಫಿಕೇಟ್ ಮತ್ತು ವಾರ್ ಬಾಂಡುಗಳಿಗೂ ನೀಡುವ ಚಂದಾಹಣವು ಸಂಗ್ರಾಮ ಪ್ರಯುತ್ನಗಳಿಗೆ ನೀಡುವ ಬೆಂಬಲವೆಂಬ ಅಭಿಪ್ರಾಯ ಮೂಡಿದೆ. ಅದು ಸರಿಯಲ್ಲ. ಆಹಾರ ಪದಾರ್ಥಗಳ ಸೇಖರಣೆಗೆ ಅವಕಾಶವಿರಲೇಕೂಡದು. ಎಷ್ಟು ಅಗತ್ಯವೋ ಅಷ್ಟು ಮಾತ್ರ ಕೊಳ್ಳುವುದು. ಮದುವೆ ಮತ್ತು ಇತರ ಸಮಾರಂಭಗಳ ಕಾಲದಲ್ಲಿ ದುಂದು ವೆಚ್ಚ ಮಾಡದಿರುವುದು ಇತ್ಯಾದಿ ವಿಚಾರಗಳಲ್ಲಿ ನ್ಯಾಷನಲ್ ವಾರ್‌ಫ್ರಂಟಿನವರು ತಕ್ಕ ಪ್ರಚಾರ ನಡೆಸಬೇಕು. ಅಲ್ಲದೆ ಸರಕಾರದವರು ಗ್ರಾಮಾಭಿವೃದ್ಧಿ ವ್ಯವಸ್ಥೆಯಲ್ಲಿಯೂ ಮತ್ತು ಅಕ್ಷರತಾ ಪ್ರಚಾರ ಕಾರ್ಯದಲ್ಲಿಯೂ ಬೆಂಬಲ ನೀಡಿ ಕೆಲಸಮಾಡಬೇಕು" ಎಂದು ನುಡಿದರು.

ಜಪಾನ್ ಮತ್ತು ವಿಶಾಲ ಪ್ರಪಂಚ

ವಿಶಾಲ ಜಗತ್ತಿನ ವಿಷಯದಲ್ಲಿ ಜಪಾನ್ ಇಟ್ಟಿರತಕ್ಕ ಭಾವನೆಯು ಅದರ ನೀತಿ ರೀತಿಗಳನ್ನು ನಿರ್ಧರಿಸುತ್ತಿದೆಯೆನ್ನಬಹುದಾಗಿದೆ.

ಜಗತ್ತಿನ ನ್ಯಾಯ ಧರ್ಮಗಳನ್ನು ನಿರ್ಧರಿಸಿ ನಿರೂಪಿಸಿ ಜಾರಿಗೆ ತರಲು ತಕ್ಕವನೆಂದರೆ ಜಪಾನ್ ಪ್ರಜೆಯೊಬ್ಬನೇ ತಕ್ಕವನು ಎಂಬ ವಿಷಯವನ್ನು ಪ್ರತಿಯೊಬ್ಬ ಜಪಾನೀಯನ ಮನಸ್ಸಿನಲ್ಲಿಯೂ ಚೆನ್ನಾಗಿ ನೆಲಸುವಂತೆ ಮಾಡಲ್ಪಟ್ಟಿದೆ.

ಟೈಡ್ ಓಕಾರಾಯ್ ಎಂಬುವರು ಈಗ್ಗೆ ಹತ್ತು ವರ್ಷಗಳ ಹಿಂದೆಯೇ ತಮ್ಮ "ಮೇಥಡ್ಸ್ ಆಫ್ ಜಪಾನ್" ಎಂಬ ಪುಸ್ತಕದಲ್ಲಿ ಈ ಕೆಳಗೆ ಹೇಳಿರುವಂತೆ ಬರೆದಿದ್ದಾರೆ— "ಜಪಾನೀಯರ ಮನೋಧರ್ಮದ ರೀತ್ಯಾ ಜಗತ್ತಿನಲ್ಲಿರುವ ಜನರು ಮೂರು ಪಂಗಡಗಳಾಗಿ ವಿಭಾಗಿಸಲ್ಪಟ್ಟಿದ್ದಾರೆ:—

ಮೊದಲನೆಯ ಪಂಗಡವೆಂದರೆ ಜಗತ್ತಿನಲ್ಲಿರುವ ಸರ್ವರಿಗಿಂತಲೂ ಶ್ರೇಷ್ಠರಾಗಿರುವ ಸಾಕ್ಷಾತ್ ಭಗವಂತನ ವಂಶೀಯರಾದ ನಾವು.

ಎರಡನೆಯ ಪಂಗಡವೆಂದರೆ ಜಗತ್ತಿನಲ್ಲಿರತಕ್ಕ ಪೀತ ವರ್ಣೀಯರಾದ ಅನಾಗರಿಕರು ಕಟ್ಟಕಡೆಯದಾದ ಮೂರನೆಯ ಪಂಗಡದವರೆಂದರೆ "ಕೋರುಂಬ"ರು ಇಂಡಿಯಾ, ಸಿಲೋನ್ ಮತ್ತು ನೀಗ್ರೋ ಜನಾಂಗಗಳ ಜನರು."

ಇತ್ತೀಚೆಗೆ ಈ ರೀತಿಯಾಗಿ ತಮ್ಮ ಜನಾಂಗದ ಶ್ರೇಷ್ಠತೆಯನ್ನು ಕುರಿತು ಸಾರುತ್ತಾ ಇತರ ಜನಾಂಗಗಳನ್ನು ಹೀಯಾಳಿಸುವಿಕೆಯ ಕಾರ್ಯವನ್ನು ಮಂಚೂರಿಯಾದಲ್ಲಿರುವ ಪ್ರೊಫೆಸರಾದ ಟಾಮೊರಾ ಎಂಬಾತನು ಮಾಡಿದ್ದಾನೆ. ಮಾನವರ ಕೋಟಿಯ ಪೈಕಿ ಜಪಾನೀಯರೇ ಸರ್ವೋತ್ತರೆಂದೂ, ಭಗವಂತನು ಸೃಷ್ಟಿಸಿರುವ ಜೀವನ ಕೋಟಿಯ ಪೈಕಿ ಜಪಾನೀಯರೇ ಅತ್ಯುಚ್ಛರೆಂದೂ, ಇಂಥ ಜಪಾನೀಯರು ಏರ್ಪಡಿಸಿರುವ ಸರ್ಕಾರವೇ ಸರ್ವೋತ್ತಮವಾದುದೆಂದೂ, ಆದುದರಿಂದ ವಿಶಾಲ ಪ್ರಾಚ್ಯ ವಿಷ್ಯಾ ಜನಾಂಗಗಳವರ ಉದ್ಧಾರವು ಜಪಾನೀಯರಿಂದಲೇ ಆಗಬೇಕಾಗಿದೆಯೆಂದೂ ಅದಕ್ಕಾಗಿ ಮಿಕ್ಕೆಲ್ಲ ಪ್ರಾಚ್ಯ ರಾಷ್ಟ್ರಗಳೂ ಜಪಾನ್ ಅಧೀನದಲ್ಲಿರಬೇಕೆಂದೂ ಹೇಳಿದ್ದಾನೆ.

ಈ ತೂತುಗಳನ್ನು ಯಾವನೋ ಯಃಕಶ್ಚಿತ್ ಜಪಾನೀಯರು ಹೇಳಿದ್ದಗೆ ಅದನ್ನು ನಿರ್ಲಕ್ಷಿಸಬಹುದಾಗಿದ್ದಿತು, ಆದರೆ ಜವಾಬ್ದಾರೀ ಸ್ಥಾನಗಳಲ್ಲಿ ಇರುವವರು ಹೇಳಿದರೆ ಅದನ್ನು ತಳ್ಳಿಹಾಕುವುದಕ್ಕಾಗುವುದಿಲ್ಲ. ಈ ತೆರನಾದ ಆತ್ಮಶ್ಲಾಘನೆಯ ಬಡಾಯಿ ಮಾತುಗಳನ್ನು ಕೇಳಿದರೆ, ಯಾವುದಾದರೂ ರಾಜ್ಯಗಳು ಜಪಾನಿನ ವಶವಾದಲ್ಲಿ ಅವು ಎಂತಹ ರೀತಿಯಲ್ಲಿ ಅಧೋಗತಿಯನ್ನೈದುವುವು ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಯಾವ ರಾಜ್ಯವನ್ನು ತನ್ನ ಸರಿಸಮಾನವಾದ ರಾಜ್ಯವೆಂಬುದಾಗಿ ಒಪ್ಪಿಕೊಳ್ಳುವುದಿಲ್ಲವೆಂಬುದನ್ನು ಜಪಾನ್ ಈಗಾಗಲೆ ಚೆನ್ನಾಗಿ ವ್ಯಕ್ತಮಾಡಿದೆ. ಜಪಾನಿಗೆ ಗೊತ್ತಿರುವುದಿಲ್ಲ. ಇತರ ರಾಜ್ಯಗಳನ್ನು ಗುಲಾಮಗಿರಿಗೆ ಇಳಿಸುವುದೊಂದೇ!

—

ಅಮೇರಿಕದ ವಿಮಾನ ಮುಖ್ಯಾಧಿಕಾರಿ ಬ್ರಿಟನ್ನಿಗೆ

ಅಮೇರಿಕ ವಿಮಾನ ದಳಗಳ ಮುಖ್ಯಾಧಿಕಾರಿಗಳಾದ ಜನರಲ್ ಅರ್ನಾಲ್ಡ್‌ರವರು ವಾಷಿಂಗ್ಟನ್ನಿನಿಂದ ಬ್ರಿಟನ್ನಿಗೆ ಬಂದರು.

(೬ ನೇ ಪುಟದಿಂದ)

ಯಿಂದಲೇ ಮಾಡಬಹುದು. ಈ ರೀತಿಯಾಗಿ ಕೈಕೆಲಸಗಳು ಇಷ್ಟು ಕಾಲವೂ ಯಂತ್ರಗಳಿಂದ ಸುಲಭವಾಗಿ ತಯಾರಾಗ್ಮಾಡಲ್ಪಟ್ಟು ಅಗ್ಗವಾಗಿ ಪೇಟೆಗೆ ಬಂದ ಸರಕುಗಳದೆಸೆಯಿಂದ ಪೆಟ್ಟುತಿಂದದ್ದು ಈಗ ಚೇತರಿಸಿಕೊಂಡಂತೆ ಆಗುತ್ತದೆ. ಸಾರ್ವಜನಿಕರು ಸರಿಯಾದ ಪ್ರೋತ್ಸಾಹಕೊಟ್ಟಲ್ಲಿ ಅವು ಯುದ್ಧಾನಂತರ ಸಹ ನಡೆಯಬಲ್ಲುವು. ಆಹಾರ ವಸ್ತುಗಳಾದರೊ, ತಯಾರಿಯ ಸೌಕರ್ಯಗಳು ಅಷ್ಟಾಗಿ ಹೆಚ್ಚಾಗಿಲ್ಲ.

ಆದರೆ ಬೇಸಾಯದ ವಿಷಯದಲ್ಲಿ ಹೆಚ್ಚು ಅನುಭವವಿರತಕ್ಕವರು ಕ್ರಮವಾದ ರೀತಿಯಲ್ಲಿ ಬೇಸಾಯ ಮಾಡಿದರೆ, ನೀರನ್ನು ಚೆನ್ನಾಗಿ ಸರಬರಾಜು ಮಾಡುವುದರ ಮೂಲಕ ಒಳ್ಳೆಯ ಬೀಜಗಳನ್ನು ಬಿತ್ತುವುದರ ಮೂಲಕ ಕೊಂಚ ಹೆಚ್ಚಾಗಿ ಗೊಬ್ಬರ ಹಾಕುವುದರ ಮೂಲಕ ಈಗ ಒಂದು ಎಕರೆಯಲ್ಲಿ ಬೆಳೆಯುತ್ತಿರುವ ಫಸಲಿಗಿಂತಲೂ ಎಷ್ಟೋ ಹೆಚ್ಚು ಫಸಲನ್ನು ಬೆಳೆಯಬಹುದು. ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಈಗಿನ ಬೆಳೆಯಲ್ಲಿ ಹೆಚ್ಚು ಬೆಳೆ ತೆಗೆಯಬಹುದು.

ಹೊಸ ಭೂಮಿಗಳನ್ನು ಕ್ರಯಕ್ಕೆ ಕೊಡುವಿಕೆ ಇದು ಸಕಾಲವಾಗಿದೆ. ಅಂತಹ ಜಮೀನುಗಳು ಈಗ್ಗೆ ಸ್ವಲ್ಪವಾಗಿಯೇ ಇದ್ದರೂ ಮುಂದೆ ನೀರಿನ ಸೌಕರ್ಯವನ್ನು ರಸ್ತೆ ಸೌಕರ್ಯವನ್ನು ಹೆಚ್ಚಿಸಿದಲ್ಲಿ ಹೆಚ್ಚು ಜಮೀನುಗಳು ಕ್ರಯಕ್ಕೆ ಖರುವುವು.

ಇಂಡಿಯಾ ದೇಶಕ್ಕೆ ಯುದ್ಧಾನಂತರ ಹೆಚ್ಚು ಆಹಾರಪದಾರ್ಥಗಳು ಬೇಕಾಗುತ್ತವೆ ಎನ್ನಲು ಅನೇಕ ಕಾರಣಗಳಿವೆ. ಹೊರದೇಶಗಳಿಂದ ಸಹ ಆಹಾರಪದಾರ್ಥಗಳಿಗೆ ಗಿರಾಕಿ ಬರಬಹುದು ಈ ಕಾರಣದಿಂದ ಬೇಸಾಯವನ್ನು ಹೆಚ್ಚಿಸಬೇಕಾದುದು ನ್ಯಾಯವಾಗಿಯೆ ಇವೆ.

●

ಆದರೆ ನಮ್ಮಲ್ಲಿ ಅನೇಕರು ಆ ತೆರನಾದ ಕೆಲಸಕಾರ್ಯಗಳಲ್ಲಿ ನಿರತರಾಗುವುದು ಸಾಧ್ಯವಿಲ್ಲ ಆದುದರಿಂದ ನಾವು ಮುಂದಕ್ಕಾಗಿ ಹೆಚ್ಚುಹಣವನ್ನು ಈಗ ಕೂಡಿಬೇಕು. ಈಗ ಬೆಲೆ ಇಳಿದಿರತಕ್ಕ ಹಣಕ್ಕೆ ಆಗ ಬೆಲೆ ಹೆಚ್ಚಾಗಿರುವ ಪ್ರಯುಕ್ತ, ಆ ಕಾಲದಲ್ಲಿ ಮನೆ ಮಠಗಳನ್ನು ಕೊಳ್ಳಬಹುದು, ಗಾಡಿಗಳನ್ನು ಕೊಂಡುಕೊಳ್ಳಬಹುದು, ಬಟ್ಟೆಬರೆಗಳನ್ನು ಒಡವೆಗಳನ್ನು ಇತರ ವಸ್ತುಗಳನ್ನು ಕೊಂಡುಕೊಳ್ಳಬಹುದು.

ಇವನ್ನು ಮಾಡಲು ಅನೇಕ ದಾರಿಗಳಿವೆ. ಒಂದು ದಾರಿ ಹಣವನ್ನು ಬ್ಯಾಂಕುಗಳನಲ್ಲಿ ಹಾಕುವುದು ಆದರ ಇದರಿಂದಲೂ ಉದ್ದೇಶವು ಪೂರೈಸುವುದಿಲ್ಲ ಯಾಕೆಂದರೆ ನಾವು ಹಣವನ್ನು ವೆಚ್ಚಮಾಡದೆ ಸುಮ್ಮನಿದ್ದರೂ ಮತ್ತಾರಾದರೂ ಅದನ್ನು ಬ್ಯಾಂಕಿನಿಂದ ಸಾಲವಾಗಿ ಪಡೆದು ಖರ್ಚುಮಾಡಬಹುದು ಆದರೆ ಫಿಕ್ಸೆಡ್ ಡಿಪಾಜಿಟ್‌ಗಳು ಉತ್ತಮ ಅವುಗಳನ್ನು ಶಿಫಾರ್ಸುಮಾಡಬಹುದು,

ಕೂಲಿ ಮಾಡಿ ಜೀವಿಸುವವರೂ ಅಲ್ಪ ಸಂಬಳ ತರುವವರೂ ತಮ್ಮ ಹಣವನ್ನು ಒಳ್ಳೆಯ ಬಂದೋಬಸ್ತಾಗಿರುವ ಕೋ ಆಪರೇಟಿವ್ ಸೊಸೈಟಿಗಳೇ ಮುಂತಾದ ಆಗಿಂದಾಗ್ಗೆ ಸಣ್ಣ ಸಣ್ಣ ಕಂತುಗಳಲ್ಲಿ ಹಣ ತೆಗೆದುಕೊಂಡು ಮುಂದೆ ಒಟ್ಟಾಗಿ ಬಡ್ಡಿ ಸೇರಿಸಿಕೊಡತಕ್ಕ ಸಂಸ್ಥೆಗಳಲ್ಲಿ ಹಾಕಬೇಕು ಈ ಸಂಸ್ಥೆಗಳಾದರೂ ತಮ್ಮ ಗಿರಾಕಿಗಳಿಗೆ ಅವಶ್ಯ ಬಿದ್ದಲ್ಲಿ ಮನೆಮಠಗಳನ್ನೂ ಒಡವೆ ವಸ್ತುಗಳನ್ನೂ ವಾಹನಗಳನ್ನೂ ಮುಂತಾದುವನ್ನೂ ಸರಿಯಾದ ಬೆಲೆಗಳಿಗೆ ಕೊಂಡುಕೊಳ್ಳುವುದಕ್ಕೆ ಸಹಾಯ ಮಾಡುವಂತಾಗಿರಬೇಕು. ಅನೇಕರಿಗೆ ಮನೆಗಳ ಬಟ್ಟೆಗಳ ಒಡವೆಗಳ ಗಾಡಿಗಳ ದನಕರುಗಳ ವರದಕ್ಷಿಣೆ ಬಳುವಣಿಗಳ ಸಲುವಾಗಿ ಹಣ ಬೇಕಾಗಿ ಬರಬಹುದು ಇದಕ್ಕೆ ಈಗಿನಿಂದಲೇ ಪರಸ್ಪರ ಸಹಾಯ ಸಂಸ್ಥೆಗಳೇ ಮುಂತಾದವುಗಳ ಮೂಲಕ ವ್ಯವಸ್ಥೆ ಮಾಡಿಕೊಂಡಿರಬೇಕು.

●

ಸರಕಾರಕ್ಕೆ ಸಾಲ ಕೊಡಿ

ಮೂರನೆಯದಾಗಿ, ಸರಕಾರಕ್ಕೆ ನಾವು ಹಣವನ್ನು ಸಾಲವಾಗಿ ಕೊಡಬಹುದು. ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳುವುದರ ಮೂಲಕವೂ ಡಿಫೆನ್ಸ್ ಸಾಲಗಳಿಗೆ ಚಂದಾ ಕೊಡುವುದರ ಮೂಲಕವೂ ಸಾಲ ಕೊಡಬಹುದು. ಅಲ್ಪ ಸಂಪಾದನೆ ಇರತಕ್ಕವರು ತಮ್ಮ ಕೂಲಿಕಂಬಳಗಳ ಹಣದಲ್ಲಿ ಸ್ವಲ್ಪ ಉಳಿಸಿ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳನ್ನು ಕೊಂಡುಕೊಳ್ಳಬೇಕು, ಹೆಚ್ಚಾಗಿ ಹಣ ಇರತಕ್ಕವರು ಡಿಫೆನ್ಸ್ ಸಾಲ ಪತ್ರಗಳನ್ನೂ ತೆಗೆದುಕೊಳ್ಳಬಹುದು.

ಈ ಅಂಶವನ್ನು ಕಡೆಯಲ್ಲಿ ಹೇಳಿದ್ದರೂ ಸಹ ನಿಜವಾಗಿ ಹೇಳಬೇಕೆಂದರೆ, ಈ ವಿಧಾನವು ಅಧಿಕ ಲಾಭಕರ ಯಾಕೆಂದರೆ ಇದರ ಮೂಲಕ ದೇಶದಲ್ಲಿ ಉಂಟಾಗಿರುವ ಧನಾಧಿಕ್ಯತೆಯನ್ನು ನಿವಾರಿಸಲು ಇದು ಅತ್ಯಗತ್ಯ.

ಡಿಫೆನ್ಸ್ ಸಾಲಗಳಿಗೆ ಹಣ ಕೊಟ್ಟರೆ ಸರ್ಕಾರಕ್ಕೆ ಸಹಾಯಮಾಡಿದಂತಾಗಿ ಯುದ್ಧ ಚಟುವಟಿಕೆಗಳಿಗೆ ಬೆಂಬಲ ನೀಡಿದಂತಾಗುವುದು. ಪ್ರಕೃತ ಸ್ಥಿತಿಯಲ್ಲಿ ಇದು ನಿಜ. ಇಂಡಿಯಾ ಸರಕಾರದ ಆರ್ಥಿಕ ಸ್ಥಿತಿ ಬಹಳ ಚೆನ್ನಾಗಿದೆ. ತನ್ನ ಖರ್ಚು ವೆಚ್ಚಗಳಿಗೆ ಬೇಕಾದ ಹಣವೆಲ್ಲ ಸುಂಕ ತೆರಿಗೆಗಳಿಂದಲೂ ಸಾಲಗಳಿಂದಲೂ ಒದಗುತ್ತಿವ

ಇವೂತ್ತ ದೇಶದಲ್ಲಿ ಉಂಟಾಗಿರತಕ್ಕ ಧನಾಧಿಕ್ಯತೆಯಿಂದ ಕಷ್ಟಕೀಡಾಗಿರುವವರು ಪ್ರಜೆಗಳೇ ಹೊರತು ಸರ್ಕಾರವಲ್ಲ ಪ್ರಜೆಗಳು ಬೇಕಾದರೆ ಸರ್ಕಾರಕ್ಕೆ ಸಹಾಯ ಮಾಡಲಿ ಇಲ್ಲವಾದರೆ ಬಿಡಲಿ ತಮ್ಮ ಸ್ವಂತ ಉದ್ಧಾರದ ಸಲುವಾಗಿ ದೇಶದಲ್ಲಿ ಚಲಾವಣೆಯಲ್ಲಿರತಕ್ಕ ಹೆಚ್ಚು ಹಣವನ್ನು ಕಡಿಮೆ ಮಾಡಿ ಪದಾರ್ಥಗಳನ್ನು ಕೊಂಡುಕೊಳ್ಳಲು ಇರತಕ್ಕ ಶಕ್ತಿಯನ್ನು ಕಡಿಮೆ ಮಾಡಬೇಕು.

ಸಂಪಾದನಾ ಶಕ್ತಿಯಿರತಕ್ಕವರೂ ದೇಶದಲ್ಲಿನ ಧನಾಧಿಕ್ಯತೆಯ ದೆಸೆಯಿಂದ ತೊಂದರೆಗೀಡಾಗುತ್ತಾರೆ. ಆದ್ದರಿಂದ ಅವರು ಇದಕ್ಕೆ ಮುಖ್ಯವಾಗಿ ಗಮನ ಕೊಡಬೇಕು.

ಸರ್ಕಾರದ ಸಾಲಗಳಿಗೆ ಹಣ ಕೊಡಲು ನಿರಾಕರಿಸಿದವರು ಸರ್ಕಾರಕ್ಕೆ ಏಟು ಹಾಕಿದಂತಾಗುವುದಿಲ್ಲ. ತಮ್ಮ ಮೇಲೆಯೇ ತಮ್ಮ ಬಡ ಸೋದರರ ಮೇಲೆಯೇ ಗದಾಘಾತ ಮಾಡಿದಂತಾಗುವುದು. ಜನರು ಮಾಡಿಕೊಂಡಿರುವ ಅಪಾರ್ಥಕ್ಕೆ ಇವರು ಯುದ್ಧಕಾಲದ ಆರ್ಥಿಕ ವಿಜ್ಞಾನವನ್ನು ಸರಿಯಾಗಿ ತಿಳಿಯದೆ ಇರುವುದೇ ಕಾರಣ. ಹಿಂದಿನ ಯುದ್ಧಗಳ ಕಹಿಯಾದ ಅನುಭವದಿಂದ ಪಾಶ್ಚಾತ್ಯ ರಾಷ್ಟ್ರಗಳು ಸಂಗ್ರಾಮ ಕಾಲದಲ್ಲಿನ ಹಣಕಾಸುಗಳ ಪರಿಸ್ಥಿತಿ ಎನೆಂಬುದನ್ನು ಚೆನ್ನಾಗಿತಿಳಿದುಕೊಂಡಿವೆ. ಆ ಗುಣಪಾಠವು ಯಾವುದೆಂದರೆ- ಸರ್ಕಾರವು ಯುದ್ಧಮಗ್ನವಾಗಿರುವಾಗ ಅದು ಪ್ರಜೆಗಳ ಪದಾರ್ಥಗಳನ್ನು ಕೊಂಡುಕೊಳ್ಳುತ್ತದೆ, ಈ ಪದಾರ್ಥಗಳಿಗೆ ಕೊಡತಕ್ಕ ಹಣವನ್ನು ಸಹ ಪ್ರಜೆಗಳಿಂದಲೇ ತೆರಿಗೆ ರೂಪದಲ್ಲಿಯೊ, ಸಾಲದ ರೂಪದಲ್ಲಿಯೋ ಪಡೆಯುತ್ತದೆ !

ಸರ್ಕಾರವು ಪ್ರಜೆಗಳ ಪದಾರ್ಥಗಳನ್ನು ತೆಗೆದುಕೊಂಡು, ಅವರ ಹಣವನ್ನು ಅವರ ಬಳಿಯೆ ಬಿಟ್ಟುಬಿಟ್ಟರೆ, ದಿನ ದಿನಕ್ಕೆ ಕಡಿಮೆಯಾಗುತ್ತಿರಕುವ ಸರಕುಗಳಿಗೆ ಪೈಪೋಟಿಮಾಡಲು ಬಹಳ ಹಣ ಪ್ರಯೋಗಿಸಲ್ಪಡುತ್ತದೆ. ಇದರಿಂದ ಧಾರಣೆವಾಸಿಗಳು ಹೆಚ್ಚಿ, ಜೀವನದ ವೆಚ್ಚ ತುಂಬಾ ಏರಿಹೋಗುತ್ತದೆ. ಇದರಿಂದ ಎಲ್ಲರಿಗೂ ತೊಂದರೆಯಾಗುತ್ತದೆ. ಬಡವರಿಗಂತೂ ಬಲವಾದ ಪೆಟ್ಟು.

ಇಂಡಿಯಾದಲ್ಲಿ ಸುಂಕಸಾರಿಗೆಗಳನ್ನೂ ತೆರಿಗೆಗಳನ್ನೂ ಹೆಚ್ಚಿಸುವುದು ಕಷ್ಟವೆಂದುಸರ್ಕಾರಕ್ಕೆ ಗೊತ್ತಾಯಿತು ಇತರ ರಾಜ್ಯಗಳಂತೆ ಸಾಲ ಮಾಡುವುದಕ್ಕೂ ಅಸಾಧ್ಯವೆಂದು ತಿಳಿಯಿತು. ಆದುದರಿಂದಲೇ ಇಲ್ಲಿನ ಧಾರಣೆಗಳು ಏರುತ್ತಿರುವುದು.

ಇದಕ್ಕಾಗಿ ಯಾರನ್ನೂ ದೂಷಿಸಿ ಫಲವಿಲ್ಲ. ಆದರೆ ಮುಖ್ಯವಾಗಿ ಕಷ್ಟ ತಿಳಿದಾಗುವವರು ಜನರು ಇವನ್ನು ನಿವಾರಿಸುವ ಕರ್ತವ್ಯ ಜನರ ಮುಖಂಡರ ಮೇಲೆ ಬಿದ್ದಿದೆ ಅವರು ಜನರಲ್ಲಿನ ಹಣ ಒಟ್ಟುಗೂಡಿಸಬೇಕೆ ಹೊರತು ಪದಾರ್ಥಗಳನ್ನು ಕೊಳ್ಳಲು ಪ್ರಯೋಗಿಸಲ್ಪಡಕೂಡದು ಎಂದು ಎಲ್ಲರಿಗೂ ಚೆನ್ನಾಗಿ ತಿಳಿಯಹೇಳಬೇಕು. ಕಡ್ಡಾಯವಾಗಿ ಇದನ್ನು ಮಾಡಿಸಬೇಕು. ಹಣವನ್ನು ಸರ್ಕಾರಕ್ಕೆ ಸಾಲ ಕೊಡಬೇಕು ಇಲ್ಲವೆ ಮೇಲೆ ಹೇಳಿದ ರೀತಿಯಲ್ಲಿ ವಿನಿಯೋಗಿಸಬೇಕು ಕಟ್ಟಕಡೆಗೆ ಹಣವನ್ನು ಕೂಡಿ ಹಾಕುವುದಾದರೂ ಉತ್ತಮವೇ ಹೊರತು ಖರ್ಚು ಮಾಡುವುದು ಸರಿಯಲ್ಲ ಆದರೆ ಕೂಡಿಟ್ಟ ಭಾಗದಲ್ಲಿ ಅದನ್ನು ಆ ತರೆ ಖರ್ಚು ಮಾಡಬಹುದು. ಅಥವಾ ಕಳ್ಳರು ಕದಿಯಬಹುದು.

ಈಗಿನ ಕಾಲದಲ್ಲಿ ಚಿನ್ನ ಬೆಳ್ಳಿ ಅಧಿಕ ಬೆಲೆಯಲ್ಲಿ ಮಾರಾಟವಾಗುತ್ತಿರುವ ಕಾರಣ ಹಣ ಇಟ್ಟರೆ ನೋಟುಗಳ ರೂಪದಲ್ಲಿ ಇಡಬೇಕಾಗುತ್ತದೆ. ಬೆಂಕಿ ಮತ್ತು ಇತರ ನಷ್ಟಕ್ಕೊಳಪಟ್ಟಿರುವ ಈ ದೇಶದಲ್ಲಿ ಇನ್ನೂ ತಕ್ಕುದಲ್ಲ.

ಆದುದರಿಂದ ಈ ತೊಂದರೆಗಳಿಲ್ಲವೂ ಇರುವ ಪ್ರಯುಕ್ತ ಡಿಫೆನ್ಸ್ ಸೇವಿಂಗ್ಸ್ ಸಾಧನಗಳ ರೀತ್ಯಾ ಇಟ್ಟು ಕೊಂಡಲ್ಲಿ ನಿಮ್ಮ ಹಣ ಸುರಕ್ಷಿತವಾಗಿಯೂ ಇರುತ್ತದೆ, ಅದಕ್ಕೆ ಬಡ್ಡಿ ಸೇರಿ ಬೆಳೆದೂ ಬೆಳೆಯುತ್ತದೆ. ಮತ್ತು ನೀವು ಇಚ್ಛಿಸಿದಾಗ ನಿಮಗೆ ಪಾವತಿ ಮಾಡಲ್ಪಡುತ್ತದೆ ನೀವು ನಿಮ್ಮ ಹಣವನ್ನು ಕೋ ಆಪರೇಟಿವ್ ಸೇವಿಂಗ್ಸ್ ಸಂಘಗಳಲ್ಲಿ ಅವು ಸರಿಯಾಗಿ ಕೆಲಸ ಮಾಡುತ್ತಿರುವುದನ್ನು ನೋಡಿ ಇಟ್ಟರೂ ಸಹ ಸರ್ಕಾರದ ಡಿಫೆನ್ಸ್ ಸಾಲ ಪತ್ರಗಳನ್ನು ತೆಗೆದುಕೊಂಡರೆ ಲಭಿಸುವ ಸೌಲಭ್ಯಗಳಿಲ್ಲವೂ ದೊರಕುತ್ತವೆ

ಸಾರಾಂಶ

ಅಮೆರಿಕ ದೇಶದ ಪದಾರ್ಥಗಳ ಬೆಲೆಗಳ ವ್ಯವಸ್ಥಾ ಇಲಾಖೆಯವರು ತಮ್ಮ ಪ್ರಜೆಗಳಿಗೆ ಮಾಡಿರುವ ಬುದ್ಧಿವಾದವು ಇಂಡಿಯಾದೇಶಕ್ಕೆ ಸಹ ಬಹು ಚೆನ್ನಾಗಿ ಅನ್ವಯವಾಗುತ್ತದೆ —

೧ ನಿಮ್ಮ ಖರ್ಚು ವೆಚ್ಚಗಳನ್ನು ಖೋತಾ ಮಾಡಿ ಯಾಕೆಂದರೆ ಈಗ ಜನರಿಗೆ ಬೇಕಾದ ಪದಾರ್ಥಗಳಿಗೆ ಅಭಾವವುಂಟಾಗಿದೆ

೨ ಯುದ್ಧದ ಸಾಲ ಪತ್ರಗಳನ್ನು ಕೊಂಡುಕೊಳ್ಳಿರಿ. ರೂಪಾಯಿಗಳೇ ಆಯುಧಗಳು.

೩ ಸಾಲವಮಾಡಬೇಡಿರಿ ನೀವು ಮಾಡತಕ್ಕ ವ್ಯಾಪಾರವನ್ನೆಲ್ಲಾ ನಗದು ವ್ಯಾಪಾರವನ್ನಾಗಿ ಮಾಡಿರಿ. ಕಂತಿನ ಮೂಲಕ ಯಾವ ವಸ್ತುವನ್ನೂ ಕೊಂಡುಕೊಳ್ಳ ಬೇಡಿರಿ

೪ ಪದಾರ್ಥವನ್ನು ಕೂಡಿಹಾಕಬೇಡಿ ನೀವು ವಸ್ತುಗಳನ್ನು ಒಟ್ಟಿಟ್ಟಷ್ಟು ಅವುಗಳ ಬೆಲೆಯು ಅಸಹಜ ರೀತಿಯಲ್ಲಿ ಹೆಚ್ಚುವುದು ಅವುಗಳಿಗೆ ಕೃತ್ರಿಮವಾದ ಅಭಾವವುಂಟಾಗುವುದು ತತ್ಫಲವಾಗಿ ಪದಾರ್ಥಗಳು ರೇಷನ್ ಮಾಡಲ್ಪಡಬೇಕಾಗುತ್ತದೆ.

ನಿಮ್ಮ ಬಳಿ ಇರುವುದನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳಿ ಅವುಗಳು ದೀರ್ಘಕಾಲ ಇರುವಂತೆ ಮಾಡಿರಿ.

ರೇಷ್ಮೆ ಹತೋಟಿ ಆಜ್ಞೆ

ನಿಯಮಗಳನ್ನು ಉಲ್ಲಂಘಿಸಿದರೆ ೫೦೦ ರೂ. ಜುಲ್ಮಾನೆ

ಭಾರತ ರಕ್ಷಣಾ ಶಾಸನದ ಪ್ರಕಾರ ಸರ್ಕಾರದವರು ಒಂದು ಆರ್ಡರನ್ನು ಜಾರಿ ಮಾಡಿದರು. ಸಂಸ್ಥಾನದಲ್ಲಿ ರೇಷ್ಮೆ ವ್ಯಾಪಾರವನ್ನು ಹತೋಟಿಯಲ್ಲಿಡುವುದೇ ಈ ಆಜ್ಞೆಯ ಉದ್ದೇಶದ ಮುಖ್ಯ ನಿಯಮಗಳೇನೆಂದರೆ,

೧ ರೇಷ್ಮೆ ವ್ಯಾಪಾರಸ್ಥರಾಗಲೀ ಅಥವಾ ರೇಷ್ಮೆ ವ್ಯಾಪಾರ ಸಂಸ್ಥೆಗಳಾಗಲಿ ರೇಷ್ಮೆ ಕಂಟ್ರೋಲರಿಂದ ಲೈಸನ್ಸ್ ಪಡೆಯದೆ ರೇಷ್ಮೆ ವ್ಯಾಪಾರ ಮಾಡಕೂಡದು ಮತ್ತು ಕಚ್ಚಾ ರೇಷ್ಮೆಯನ್ನಾಗಲೀ ಅಥವಾ ನೆಯ್ದ ರೇಷ್ಮೆಯನ್ನಾಗಲೀ ಕೊಂಡುಕೊಳ್ಳಕೂಡದು, ಮತ್ತು ಮಾರಲೂಕೂಡದು

೨. ಪ್ರತಿಯೊಬ್ಬ ರೇಷ್ಮೆ ವ್ಯಾಪಾರಸ್ಥನೂ, ಈ ಆಜ್ಞೆಯ ನಿಯಮಗಳಿಗೆ ಬದ್ಧನಾಗುವ ಒಂದು ತಿಂಗಳೊಳಗಾಗಿ ರೇಷ್ಮೆ ಕಂಟ್ರೋಲರಿಗೆ ತಾನು ರೇಷ್ಮೆ ವ್ಯಾಪಾರಸ್ಥನೆಂದೂ, ತನಗೆ ಲೈಸೆನ್ಸ್ ಬೇಕೆಂದೂ ಅರ್ಜಿ ಹಾಕಿಕೊಳ್ಳಬೇಕು.

೩. ಚರಕ ಮತ್ತು ಫಿಲೇಚರ್ ರೇಷ್ಮೆ ಸಂಸ್ಥೆಗಳಲ್ಲಿ ತಯಾರುಮಾಡುವ ರೇಷ್ಮೆಯನ್ನೆಲ್ಲ (ರೇಷ್ಮೆ ಹುಳು ಹತೋಟಿ ಆರ್ಡರಿನಲ್ಲಿ ವಿವರಿಸುವಂತೆ) ಸರ್ಕಾರಕ್ಕೆ ಮಾರತಕ್ಕದ್ದು ಹಾಗೆಕೊಂಡ ರೇಷ್ಮೆಗೆ ಸರ್ಕಾರದವರು, ಅವರು ಗೊತ್ತುಮಾಡುವ ಬೆಲೆ ಕೊಡುವರು

೪. ರೈಲು ಅಧಿಕಾರಿಗಳೂ ಅಂಚೆ ಅಧಿಕಾರಿಗಳೂ ವೈಮಾನಿಕ ಅಧಿಕಾರಿಗಳೂ ಕಚ್ಚಾ ರೇಷ್ಮೆಯನ್ನಾಗಲೀ ರೇಷ್ಮೆ ಕಂಟ್ರೋಲರಿಂದ ಲೈಸನ್ಸ್ ಪಡೆಯದೆ, ಸಂಸ್ಥಾನದಿಂದ ಹೊರಗೆ ಸಾಗಿಸುವ ಜವಾಬ್ದಾರಿಯನ್ನು ವಹಿಸಕೂಡದ .

ಮೇಲ್ಕಂಡ ಆಜ್ಞೆಯ ನಿಯಮಗಳನ್ನು ಪಾಲಿಸದ ಇದುವರೆಗೂ ಚರಕ ಮತ್ತು ಫಿಲೇಚರ್ ರೇಷ್ಮೆ ಸಂಸ್ಥೆಗಳ ಮಾಲೀಕರಿಗೆ ೧೦೦೦ ರೂಪಾಯಿಗಳವರಕ್ಕೊ ಜುಲುಮಾನೆ ಲೈಸನ್ಸ್ ಪಡೆದ ವ್ಯಾಪಾರಸ್ಥರಿಗೆ (ನಿಯಮಗಳನ್ನು ಪಾಲಿಸದೇ ಇರುವವರಿಗೆ) ಅವರ ಲೈಸನ್ಸನ್ನು ವಜಾಮಾಡುವುದಲ್ಲದೆ ೫೦೦ ರೂಪಾಯಿಗಳವರೆಗೆ, ಜುಲುಮಾನೆ ವಿಧಿಸಲಾಗುವುದು.

ಜಪಾನನ್ನು ಸದೆಬಡಿಯುವೆವು

— ೦ —

ಮಿ|| ಚರ್ಚಿಲ್‌ರವರ ಬ್ರಾಡ್ ಕ್ಯಾಸ್ಟ್ ಭಾಷಣ

ಈ ೧ ನೇ ತಾರೀಖು ರಾತ್ರಿ ಬ್ರಿಟಿಷ್ ಪ್ರಧಾನಿ ಮಿ|| ಚರ್ಚಿಲ್‌ರವರು ಈಚೆಗೆ ಕ್ವಿಬೆಕ್‌ನಲ್ಲಿ ನಡೆದ ಆಂಗ್ಲೋ-ಅಮೇರಿಕನ್ ಸಮಾಲೋಚನೆ ನಡೆಸಿದ ಬಗ್ಗೆ ಬ್ರಾಡ್‌ಕಾಸ್ಟ್ ಭಾಷಣಮಾಡುತ್ತ ಅಲ್ಲಿ ನಡೆದ ಮಾತುಕತೆಗಳೆಲ್ಲಾ ಮುಖ್ಯವಾಗಿ ಜಪಾನಿನ ಮೇಲೆ ಯುದ್ಧ ನಡೆಸುವ ವಿಚಾರವೇ ಆಗಿತ್ತು ಮಾರ್ಷಲ್ ಸ್ಟಾಲಿನ್‌ರವರು ಇದೇ ಕಾರಣಕ್ಕಾಗಿಯೇ ಈ ಸಭೆಯಲ್ಲಿ ಭಾಗವಹಿಸಲಿಲ್ಲ. ಸೋವಿಯೆಟ್ ಸರಕಾರವು ಜಪಾನಿನೊಡನೆ ೪ ವರ್ಷಕಾಲ ಯುದ್ಧ ನಡೆಸಕೂಡದೆಂದು ಸಂಧಿ ಮಾಡಿಕೊಂಡಿದೆ ಅವರನ್ನು ಈ ಸಮಾಲೋಚನೆಗೆ ಆಮಂತ್ರಿಸಿದ್ದರೆ ಸ್ಟಾಲಿನ್‌ರವರಿಗೆ ಬಹಳ ತೊಂದರೆಯುಂಟಾಗುತ್ತಿತ್ತು

ಜಪಾನ್ ಮೇಲೆ ಯುದ್ಧ ನಡೆಸುವ ವಿಚಾರವಾಗಿ ಮಾತನಾಡುತ್ತ ಅಮೆರಿಕದ ಮುಖ್ಯಸೈನ್ಯಗಳೂ ಮತ್ತು ಆಸ್ಟ್ರೇಲಿಯ ನ್ಯೂಜಿಲೆಂಡ್ ಸೈನ್ಯಗಳೂ ಒಟ್ಟಿಗೆ ಪೆಸಿಫಿಕ್‌ನಲ್ಲಿ ಜಪಾನಿನ ವಿರುದ್ಧ ಯುದ್ಧ ನಡೆಯುತ್ತಿವೆ. ಈ ವಿಚಾರದಲ್ಲಿ ಬ್ರಿಟನ್ನಿನ ಮುಖ್ಯ ಜವಾಬ್ದಾರಿಯೆಂದರೆ ಹಿಂದೂ ಸಾಗರ ಮತ್ತು ಹಿಂದುಸ್ಥಾನದ ಮೇಲೆ ಅವಲಂಬಿಸಿದೆ

ವಿಮಾನ ನೌಕ ಮತ್ತು ಭೂ ಸೈನ್ಯಗಳಲ್ಲಿ ಅಮೆರಿಕಲ್ಲಿ ಮತ್ತು ಬ್ರಿಟಿಷ್ ಸೈನ್ಯಗಳು ಏಳಿತವಾಗಿ ಎರಡು ರಾಷ್ಟ್ರಗಳಲ್ಲಿಯೂ ಈ ಸೇನಾ ನಿರ್ಮಾಣ ಬೇಕಾಗಿದೆ ಉತ್ತರ ಆಫ್ರಿಕ ಯುದ್ಧ ಕಾಲದಲ್ಲಿ ಇದು ಯಾವ ರೀತಿ ನಡೆಸಲ್ಪಡಬೇಕು.

ದ್ವಿತೀಯ ರಣರಂಗದ ವಿಚಾರವಾಗಿ ಮಾತನಾಡುತ್ತ, ಅಮೇರಿಕ ಮತ್ತು ಬ್ರಿಟಿಷ್ ಸೇನೆಗಳು ಕಡಲ್ದಾಟುವೆಯನ್ನು ದಾಟಿ ಯೂರೋಪನ್ನು ನಾಜಿಗಳ ಹಿಡಿತದಿಂದ ಬಂಧವಿಮುಕ್ತ ಮಾಡುವ ದಿನಗಳನ್ನು ಎದುರು ನೋಡುತ್ತಿರುವುದಾಗಿ ತಿಳಿಸಿದರು. ಅಂತಹ ಸುದಿನಗಳು ಸಮೀಪದಲ್ಲಿರಬಹುದು ಅಥವಾ ದೂರದಲ್ಲಿರಬಹುದು, ಆದರೆ ದ್ವಿತೀಯ ರಂಗವು ಪ್ರಾರಂಭಿಸಲ್ಪಡುವುದು. ಅದರಲ್ಲಿ ಯಶಸ್ಸು ಸಿಗುವುದೆಂಬ ಭರವಸೆಯಿದೆ ಎಂದು ಹೇಳಿದರು.

ನಮ್ಮ ಹಳ್ಳಿಗಳು

ಗ್ರಾಮಜೀವನ ಉತ್ತಮಗೊಳ್ಳಲು ಏನುಬೇಕಾಗಿದೆ?

ಕೆಲವು ವೇಳೆ ಜನರು ಬಂದು ಭಾರತ ದೇಶಕ್ಕೆ ಹಳ್ಳಿಗಳು ಎಷ್ಟು ಮುಖ್ಯವಾದುವು ಎಂಬುದಾಗಿ ಹೇಳುತ್ತಾರೆ. ಅಂದರೆ ಸಾಮಾನ್ಯವಾಗಿ ಅದರ ಅರ್ಥ ಏನೆಂದರೆ ನಾವು ಆ ಹಳ್ಳಿಗಳಿಗಾಗಿ ಏನಾದರೂ ಮಾಡಬೇಕೆಂಬುದೇ ಅವರ ಕ್ಲೇಶಯ ಯಾಕೆಂದರೆ ಸರ್ವಕಾಲಗಳಲ್ಲಿಯೂ ಒಳ್ಳೆಯದಲ್ಲ ಸಾಮಾನ್ಯವಾಗಿ ದೊಡ್ಡ ಊರುಗಳಿಗೇ ಲಭಿಸುತ್ತವೆಯೆಂದು ಅವರ ಭಾವನೆ.

ಆದರೆ ಹಳ್ಳಿಯೇ ಭಾರತವೆಂಬುದು ನಿಜ. ದೇಶದಲ್ಲಿನ ಜನರಲ್ಲಿ ಹತ್ತರಲ್ಲೊಂಭತ್ತು ಮಂದಿಗಿಂತಲೂ ಹೆಚ್ಚಾಗ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಆ ಹಳ್ಳಿಗಳೇ ಇಲ್ಲದಿದ್ದರೆ ದೊಡ್ಡ ಊರುಗಳಲ್ಲಿ ತಿನ್ನುವುದಕ್ಕೇ ಏನೂ ಇರುತ್ತಿರಲಿಲ್ಲ. ಅವರ ವ್ಯಾಪಾರಸಾಪಾರಗಳಿಗೂ ಕೈಗಾರಿಕೆಗಳಿಗೂ ಪದಾರ್ಥಗಳೇ ಇರುತ್ತಿರಲಿಲ್ಲ.

ಇಲ್ಲಿ, ಹಳ್ಳಿಗಳಲ್ಲಿ, ನಾವಾದರೊ ಬಹು ಕಷ್ಟ ಜೀವನವನ್ನು ಮಾಡುತ್ತಿದ್ದೇವೆ. ಪ್ರಕೃತಿಯ ನೆರವಿನ ಸಂಗಡ ಹೋರಾಡುತ್ತಿದ್ದೇವೆ. ಕೆಲವು ಸಂದರ್ಭಗಳಲ್ಲಿ ಅದರ ಸಹಾಯ ಇಲ್ಲದೆಯೇ ಬೆಳೆಗಳನ್ನು ಬೆಳೆಯಲು ಪ್ರಯತ್ನಿಸುತ್ತೇವೆ.

ಇಷ್ಟೆಲ್ಲಾ ಕಷ್ಟನಿಷ್ಠುರಗಳಿದ್ದರೂ ಹಳ್ಳಿಗಳಲ್ಲಿನ ನಾವು ಎಷ್ಟೊ ಆರೋಗ್ಯವಂತರಾಗಿರುತ್ತೇವೆ. ಆ ಪಟ್ಟಣಗಳಲ್ಲಿ ಸುಖ ಜೀವನ ಮಾಡುವವರಿಗಿಂತಲೂ ನಾವೇ ಮೇಲು.

ನಮ್ಮ ಜೀವಮಾನವನ್ನೆಲ್ಲಾ ಬಯಲಿನಲ್ಲಿಯೇ, ಕೇವಲ ನಮ್ಮ ಬಂಧುಮಿತ್ರರ ಮತ್ತು ನೆರೆಹೊರೆಯವರ ಮಧ್ಯೆಯೇ ಕಳೆಯುತ್ತೇವೆ. ನಮ್ಮ ಮಕ್ಕಳು ಪಟ್ಟಣಗಳಲ್ಲಿ ಇರತಕ್ಕ ಮಕ್ಕಳ ಸಹವಾಸದಲ್ಲಿ ಇದ್ದುಕೊಂಡು ಅವರ ಕೆಟ್ಟ ವರ್ತನಗಳನ್ನು ಕಲಿತು ಹಾಳಾಗಿರುವುದಿಲ್ಲ. ಅವರು ಪರಿಶುದ್ಧನಾಗಿ ಬೆಳೆಯುತ್ತಾರೆ.

ಸಾಮಾನ್ಯ ಜನರಿಗೆ ಗ್ರಾಮಜೀವನವನ್ನು ಒಂದು ಆದರ್ಶಪ್ರಾಯವಾದ ಸುಖದಾಯಕವಾದ ಜೀವನವನ್ನಾಗಿ ಮಾಡಲು ಬಂದಿಷ್ಟು ಮಾತ್ರ ಆಗಬೇಕಾಗಿದೆ: ಒಂದು ಒಳ್ಳೆಯ ಪಾಠಶಾಲೆ; ಒಂದು ಒಳ್ಳೆಯ ಶಾಲಾಕಟ್ಟಡ; ನಮಗೆ ಒಳ್ಳೆಯ ವಾಸದ ಮನೆಗಳು ಮತ್ತು ಒಬ್ಬ ಒಳ್ಳೆಯ ಡಾಕ್ಟರು, ಓದುವುದಕ್ಕೆ ಕೆಲವು ಪುಸ್ತಕಗಳು, ಸಮಾಚಾರಗಳನ್ನೂ ಸಂಗೀತವನ್ನೂ ಕೇಳಿ ತಿಳಿದುಕೊಳ್ಳುವುದಕ್ಕೆ ಒಂದು ರೇಡಿಯೊ, ಈ ತೆರನಾದ ಕೆಲವು ವಿಷಯಗಳು ನಮ್ಮ ಹಳ್ಳಿಯ ಜೀವನವನ್ನು ಸುಖಪ್ರದವಾಗಿಯೂ, ಹೆಚ್ಚು ಆರೋಗ್ಯಕರವಾಗಿಯೂ ಮಾಡಬಲ್ಲವು. ಪಟ್ಟಣಗಳಲ್ಲಿನ ಬಹು ಮಂದಿಗಿಂತಲೂ ಉತ್ತಮವಾದ ಜೀವನವನ್ನೂ ಮಾಡಬಹುದು ಹಳ್ಳಿಗಳಲ್ಲಿ.

ಇವೊತ್ತು ಈ ವಿಷಯಗಳೆಲ್ಲವೂ ನಮ್ಮ ಹಿಡಿತದಲ್ಲಿವೆ. ಒತ್ತಟ್ಟಿಗೆ ಸೇರಿ ಕೆಲಸ ಮಾಡುವುದರಿಂದ ಪಡೆಯಬಹುದಾಗಿದೆ. ಸರ್ಕಾರವೂ ಸಹ ನಮ್ಮ ಸಹಾಯಕ್ಕೆ ಖಂಡಿತವಾಗಿಯೂ ಬರುತ್ತದೆ. ಆದರೆ ನಾವು ನಮ್ಮ ಸ್ಥಿತಿಗತಿಗಳನ್ನು ಉತ್ತಮಗೊಳಿಸಿಕೊಳ್ಳುವುದಕ್ಕೆ ಆಸಕ್ತರಾಗಿರಬೇಕು. ಅಷ್ಟೆ.

ಗ್ರಾಮಗಳಲ್ಲಿ ನಮ್ಮ ಪರಿಸ್ಥಿತಿಯನ್ನು ಉತ್ತಮಗೊಳಿಸುವುದರ ತಳಹದಿಯು ಏನಾಗಿರುವುದೆಂದರೆ ನಮ್ಮ ಸ್ವಂತ ಕಾಯಕಗಳನ್ನು ಉತ್ತಮಗೊಳಿಸಿಕೊಳ್ಳುವುದೇ ನಾವು ನಮ್ಮ ಭೂಮಿಕಾಣಿಗಳಿಂದ ದೂರವಾದಲ್ಲಿ ನಾವು ನಮ್ಮ ಜೀವಿತಗಳಿಂದ ದೂರವಾದಂತೆಯೇ ಸರಿ.

ನಾವು ನಮ್ಮ ಹಳ್ಳಿಗಳಲ್ಲಿ ನಡೆಯುವ ಕೈಗಾರಿಕೆಗಳನ್ನು ಮರೆಯಕೂಡದು. ಸಾಬೂನು ತಯಾರಿಕೆ, ನೆಯಿಗೆ, ಮರೆಗೆಲಸ-ಮುಂತಾದ ವೃತ್ತಿಗಳನ್ನು ಮರೆಯಬಾರದು. ನಮ್ಮ ಪಶುಗಳಲ್ಲಿ ಅದರಲ್ಲಿಯೂ ನಮಗೆ ಹಾಲನ್ನೂ ಮೊಟ್ಟೆಗಳನ್ನೂ ಒದಗಿಸುವ ಪ್ರಾಣಿಗಳನ್ನು ಮುಖ್ಯವಾಗಿ ಮರೆಯಬಾರದು

ಅಂದರೆ ನಮ್ಮ ಭವಿಷ್ಯಗಳು ನಮ್ಮ ಕೈಲೇ ಇವೆ. ನಾವೆಲ್ಲರೂ ಸಾಮೂಹಿಕವಾವ ಸೇರಿ ನಮ್ಮ ಜೀವನಗಳನ್ನು ಉತ್ತಮಗೊಳಿಸಿಕೊಳ್ಳೋಣ.

ಮುಸೋಲಿನಿ

(೪ ನೇ ಪುಟದಿಂದ)

ಮುಸೊಲಿನಿಯ ಪತನ

ಇದರಿಂದ ಫ್ಯಾಸಿಜಂ ಕಮಾನಿನ ಮಧ್ಯದ ಕಲ್ಲುಕಳಚಿ ಬಿದ್ದಂತಾಯಿತು. ಇದರ ಸಂಗಡಲೇ ಇಟಲಿಯಲ್ಲಿದ್ದ ಫ್ಯಾಸಿಸ್ಟ್ ಪಕ್ಷವು ರದ್ದಾಯಿತೆಂಬ ವರ್ತಮಾನವೂ ಬಂದಿತು.

ಫ್ಯಾಸಿಸ್ಟ್ ಪಂಥವು ಏನೋ ಒಂದಿಷ್ಟುಕಾಲ ಮುಂದುವರೆಯಲು ಸಾಧ್ಯವಿದ್ದಿತೇ ಹೊರತು, ಆ ನಂತರ ಅದು ಹಿಂದಕ್ಕೆ ಸರಿಯಬೇಕಾಗಿದ್ದಿತು. ಈ ವಿಧಾನದಲ್ಲಿ ಇಡೀ ರಾಜ್ಯದ ಭಾಗ್ಯ ವಿಶೇಷಗಳು ತುಳಿಯಲ್ಪಟ್ಟು ಕೇವಲ ಒಬ್ಬ ವ್ಯಕ್ತಿಯ ಆಳಿಕೆಯನ್ನು ಮೇಲಕ್ಕೆತ್ತಲ್ಪಡುವುದು. ಒಂದು ಜನಾಂಗವು ಇನ್ನೊಂದು ಜನಾಂಗಕ್ಕಿಂತಲೂ ಹೆಚ್ಚೆಂಬುದಾಗಿ ಸಾರುವುದು. ಹೀಗಿದ್ದ ಕಾರಣದಿಂದಲೂ, ಈ ಆಳ್ವಿಕೆಯು ಅನುಸರಿಸಿದ ದಬ್ಬಾಳಿಕೆಯಿಂದಲೂ, ಇತರ ಸ್ವಾತಂತ್ರ್ಯ ಪ್ರಿಯ ರಾಷ್ಟ್ರಗಳೆಲ್ಲವೂ ಒಟ್ಟುಗೂಡಿಕೊಂಡು ಇದನ್ನ ತುಳಿದು ಹಾಕಬೇಕೆಂಬ ಛಲವನ್ನು ಹುಟ್ಟಿಸಿತು.

ಅಕ್ಷರಾಜ್ಯಗಳ ಗಾಲಿಕಳಚಿತು

ಈ ಕಾರಣಗಳೆಲ್ಲವುಗಳ ಫಲವಾಗಿ, ಅಕ್ಷರಾಜಗಳು ಬಿಡಾರದಲ್ಲಿ ಅತ್ಯಂತ ಹಿರಿದಾದ ಬಾಂಬು ಬಿದ್ದಂತಾಯಿತು. ಇದು ೧೯೪೩ ನೆ ಇಸವಿ ಜುಲೈ ೨೫ ನೆಯ ತಾರೀಖಿನ ದಿವಸ ನಡೆಯಿತು. ಮುಸೋಲಿನಿಯು ರಂಗದಿಂದ ನಿಷ್ಕ್ರಮಿಸಿದ್ದರಿಂದ ಅಕ್ಷರಾಜ್ಯ ಶಕಟದ ಒಂದು ಗಾಲಿಯು ಕಳಚಿ ಬಿದ್ದಂತಾಯಿತು. ಇನ್ನು ಹಿಟ್ಲರೊಬ್ಬನೇ ಗಿರಗಿರನೆ ತಿರಗಬೇಕಾಗಿದೆ.



ಟರ್ಕಿಯ ವೈಮಾನಿಕರು ಬ್ರಿಟನ್ನಿನಲ್ಲಿ ಶಿಕ್ಷಣ ಪಡೆಯುತ್ತಿರುವುದು.
ಈಗ ಅನೇಕ ಮಂದಿ ಟರ್ಕಿ ತರುಣರಿಗೆ ವೈಮಾನಿಕ ಶಿಕ್ಷಣವು ಬ್ರಿಟಿಷ್ ವೈಮಾನಿಕರಿಂದ ನಡೆಯುತ್ತಿದೆ. ಮೊದಲು ಶಿಕ್ಷಣಕ್ಕಾಗಿ ನಿರ್ಮಿಸಿರುವ ವಿಮಾನಗಳಲ್ಲಿ ಶಿಕ್ಷಣ ಕೊಡಲಾಗುತ್ತಿದೆ. ಶಿಕ್ಷಣ ಮುಗಿದ ಮೇಲೆ ಅವರು ಸ್ವದೇಶಕ್ಕೆ ತೆರಳುತ್ತಾರೆ.

ಮಹಿಳೆಯರಿಗೆ ಮಾತ್ರ

ಬೆಂಗಳೂರು ನಗರದ ಮಹಿಳೆಯರೇ, ಪ್ರಾಯಶಃ ನೀವೆಲ್ಲಾ ಬೀದಿಬೀದಿಗಳಲ್ಲಿರುವ ಪೋಸ್ಟರ್‌ಗಳಲ್ಲಿಯೂ ವರ್ತಮಾನ ಪತ್ರಿಕೆಗಳಲ್ಲಿಯೂ ಹತ್ತು ಕೋಟಿ ಸ್ತ್ರೀಯರು ಎಂದು ಬರೆದಿರುವುದನ್ನು ನೋಡಿ ಆಶ್ಚರ್ಯಪಟ್ಟು ಇದು ಏನಿರಬಹುದು ಎಂದು ತಿಳಿದುಕೊಳ್ಳುವುದಕ್ಕಾಗಿ ಆತುರರಾಗಿರಬಹುದು.

ಹತ್ತು ಕೋಟಿ ಸ್ತ್ರೀಯರು ಎಂಬುದು ಒಂದು ಚಲಚ್ಚಿತ್ರದ ಹೆಸರು. ಮುಂದಿನ ವಾರ ಬಿ. ಆರ್. ವಿ. ಸಿನೀಮಾ ಮಂದಿರದಲ್ಲಿ ಒಂದು ಕಾಸೂ ಖರ್ಚಿಲ್ಲದೆ ನಿಮಗೋಸ್ಕರವೇ ತೋರಿಸಲ್ಪಡುವುದು.

ಮಹಿಳೆಯರೇ; ನಿಮ್ಮ ಸಹಾಯವಿಲ್ಲದೆ ಪುರುಷರಾದ ಮಾತ್ರಕ್ಕೇ ನಾವು ಈ ಯುದ್ಧವನ್ನು ಜಯಿಸಲಾರೆವು. ಆಗಲೇ ನೀವು ರಣರಂಗವನ್ನು ಪ್ರವೇಶಿಸಿದ್ದೀರಿ. ಸೈನ್ಯದ ಕೆಲಸಗಳನ್ನೆಲ್ಲಾ ನೀವೇ ನಡೆಸುತ್ತಿದೀರಿ. ನಿಮ್ಮ ಸಾಹಸಗಳು ಈಗಾಗಲೇ ಅಸಾಧಾರಣವೂ ಅಪರಿಮಿತವೂ ಆಗಿದೆ.

ಆದರೆ ಬ್ರಿಟಿಷ್ ಎಂಟನೇ ಸೈನ್ಯ ನಾಲ್ಕನೇ ಇಂಡಿಯನ್ ದಳ ಸ್ಟಾಲಿನ್‌ಗ್ರಾಡ್ ನಗರದ ವೀರರು ಟ್ರೆಂಡಿಟ್ಸ್ ಮತ್ತು ಇನ್ನೂ ಅನೇಕಾನೇಕ ಪುರುಷರ ಸಾಹಸಗಳನ್ನೂ ಮತ್ತು ನಿಮ್ಮಂಥಾ ಸ್ತ್ರೀಯರೇ ಇತರ ದೇಶಗಳಲ್ಲಿ ಮಿತ್ರ ರಾಷ್ಟ್ರಗಳ ಹಿತಕ್ಕಾಗಿ ದುಡಿಯುತ್ತಿರುವುದನ್ನು ನೋಡಿ ನಿಮ್ಮಲ್ಲೆಲ್ಲಾ ಒಂದು ಮಹತ್ತರವಾದ ಸ್ಪರ್ಧಾ ಶಕ್ತಿಯುಂಟಾಗಿರಬೇಕು.

ನಿಮ್ಮ ಶಕ್ತ್ಯಾನುಸಾರ ನೀವು ದುಡಿಯುತ್ತಿರಬಹುದೆಂದು ನೀವು ತಿಳಿದಿರಬಹುದು. ಇನ್ನೂ ಇದಕ್ಕಿಂತಲೂ ಹೆಚ್ಚಿನ ಕೃತ್ಯಗಳನ್ನು ಮಾಡಬಹುದೆಂದು ನಿಮಗೆ ತೋರಲದಬಹುದು. ಮತ್ತು ನಿಮಗೆ ಏನೂ ತೋಚದೆ ಇದ್ದರೂ ಇರಬಹುದು.

ಸೆಪ್ಟೆಂಬರ್ ಲನೇ ತಾ|| ಬುಧವಾರ ಸಂಜೆ ೬ ಗಂಟೆಗೆ ಬಿ. ಆರ್. ವಿ. ಸಿನಿಮಾ ಮಂದಿರಕ್ಕೆ ಬನ್ನಿರಿ. ನಿಮ್ಮ ಗೃಹ ಸಂಕಟಗಳು ಎಷ್ಟಿದ್ದರೂ ನೀವು ಯಾವ ರೀತಿ ಸಹಾಯ ಮಾಡಬಲ್ಲಿರಿ. ಎಂಬುದನ್ನ ಅಲ್ಲಿ ನೋಡಿ ಕೇಳಿ ತಿಳಿಯುವಿರಿ.

ಬೀದಿಬೀದಿಯಲ್ಲಿ ಅಂಟಿಸಿರುವ ಪೋಸ್ಟರ್ಸ್‌ಗಳನ್ನು ನೋಡಿ. ಅವು ಎಲ್ಲೆಲ್ಲಿಯೂ ಇವೆ. ಚಿತ್ರ ಪ್ರದರ್ಶನವು ಮುಗಿದ ನಂತರ ರೆಸಿಡೆಂಟ್ ಜನರಲ್ ಬ್ರೂಸ್ ಲೇಡಿ ಬೇರಿಸ್ ಫೋರ್ಡ್ ಪಿಯರ್ಸ್ ಮೈಸೂರು ಹಣಕಾಸಿನ ಸಚಿವರಾದ ಶ್ರೀ ಅನಂತರಾಮಯ್ಯರವರ ಪತ್ನಿ ಶ್ರೀಮತಿ ವಾಲ್ಷ್ (ಬಿ.ವಿ.ಎಸ್.) ಶ್ರೀಮತಿ ಅಡ್‌ಲಾರ್ಡ್(ಡಬ್ಲ್ಯು ಎ.ಸಿ.,)ಮಿಸ್ ವಾಟ್ಕಿನ್ಸ್(ಪ್ರಿನ್ಸಿಪಲ್ ಮೇಟ್ರನ್ ಸದರ್ನ್ ಆರ್ಮಿ) ಇವರೆಲ್ಲರೂ ಭಾಷಣ ಮಾಡುವರೂ ಬ್ರಿಗೆಡಿಯರ್‌ರಸಲ್‌ರವರಿಂದ ಇವರೆಲ್ಲರ ಪರಿಚಯ ನಡೆಯುವುದು. ಮೈಸೂರು ದಿವಾನರಾದ ಶ್ರೀ ಎನ್. ಮಾಧವರಾಯರ ಪತ್ನಿ ಶ್ರೀಮತಿ ಎನ್. ಮಾಧವರಾಯರೂ ಮೈಸೂರು ಸರಕಾರದ ಚೀಫ್ ಮೆಡಿಕಲ್ ಆಫೀಸರವರಾದ

ಮದ್ರಾಸಿನಲ್ಲಿ ಸಂಗ್ರಾಮ ವಸ್ತು ಪ್ರದರ್ಶನ

ಲಕ್ಷಕ್ಕಿಂತ ಹೆಚ್ಚು ಪ್ರೇಕ್ಷಕರು

ಮದ್ರಾಸಿನ ಗವರ್ನರಾದ ಸರ್ ಆರ್ಥರ್ ಹೋಪ್‌ರವರು ಈ ದಿವಸ ಆರಂಭೋತ್ಸವನ್ನು ನಡೆಸಿದ ಜನೆಯ ಸಂಗ್ರಾಮ ವಸ್ತು ಪ್ರದರ್ಶನಕ್ಕೆ ಈ ಸಾಯಂಕಾಲ ಸುಮಾರು ಒಂದು ಲಕ್ಷಕ್ಕಿಂಲತೂ ಹೆಚ್ಚು ಮಂದಿ ಪ್ರೇಕ್ಷಕರು ಬಂದಿದ್ದರು.

ಗವರ್ನರ ಭಾಷಣ

ಪ್ರದರ್ಶನದ ಆರಂಭಮಾಡುತ್ತಾ ಗವರ್ನರವರು ಈ ಕೆಳಗೆ ಹೇಳಿರುವಂತೆ ನುಡಿದರು.

"ಇದುವರೆಗೆ ನಡೆಸಿದ ಪ್ರದರ್ಶನಗಳ ಪೈಕಿ ಇದೇ ಅತ್ಯಂತ ದೊಡ್ಡದು. ಆಧುನಿಕ ಯುದ್ಧವು ಯಾವ ರೀತಿ ಇದೆ ಎಂಬುದನ್ನೂ, ಅದರಲ್ಲಿ ಯಾವ ಯಾವ ಆಯುಧಾದಿಗಳನ್ನು ಉಪಯೋಗಿಸುತ್ತಾರೆಂಬುದನ್ನೂ ಸೈನ್ಯಕ್ಕೆ ಸೇರದಿರುವ ಪ್ರಜಾನೇಕಕ್ಕೆ ತೋರ್ಪಡಿಸುವುದಕ್ಕಾಗಿಯೇ ಈ ಪ್ರದರ್ಶನವು ಉದ್ದೇಶಿಸಲ್ಪಟ್ಟಿದೆ. ಈ ಯುದ್ಧದ ದೆಸೆಯಿಂದ ಇಡೀ ರಾಷ್ಟ್ರ ವ್ಯಾದ್ಯಂತವೂ ಯಾವ ರೀತಿಯಾಗಿ ಕೈಗಾರಿಕೋದ್ಯಮಗಳು ಅಭಿವೃದ್ಧಿ ಹೊಂದಿವೆಯೆಂಬುದನ್ನು ತೋರ್ಪಡಿಸುವುದಕ್ಕೆ ಈ ಪ್ರದರ್ಶನವು ಅಧಿಕಾರಿ ವರ್ಗಕ್ಕೆ ತುಂಬಾ ಸಹಾಯಕಾರಿಯಾಗಿದೆ. ದೇಶದಲ್ಲಿನ ಕಾರ್ಖಾನೆಗಳು ಈಗ ಕೇವಲ ಯುದ್ಧಕ್ಕಾಗಿಯೇ ವಸ್ತುಗಳನ್ನು ನಿರ್ಮಿಸುತ್ತಿದ್ದಾಗ್ಯೂ, ಮುಂದೆ ಶಾಂತಿ ಕಾಲಕ್ಕೆ ಬೇಕಾದ ವಸ್ತುಗಳನ್ನು ತಯಾರು ಮಾಡುವುದಕ್ಕಾಗಿ ಸುಲಭವಾಗಿ ಅನುಕೂಲಿಸುತ್ತವೆ.

"ಪ್ರಜೆಗಳು ಈಗ ಕೈಲಾದ ಮಟ್ಟಿಗೂ ಧನವನ್ನು ಸಂಗ್ರಹಿಸಬೇಕು. ಕೊನೆಯ ಪಕ್ಷ ಒಂದು ಯುದ್ಧ ನೌಕೆ ಮತ್ತು ಒಂದು ಕ್ರೂಜರನ್ನು ಈಯುದ್ಧ ಮುಗಿಯುವುದರೊಳಗಾಗಿ ಕೊಂಡುಕೊಳ್ಳುವುದಕ್ಕಾಗಿಹಣವನ್ನು ಚಂದಾಹಾಕಬೇಕು. ಇನ್ನೂ ಸಂಗ್ರಾಮ ಪರಿಸ್ಥಿತಿಯನ್ನು ಹೇಳಬೇಕೆಂದರೆ ಅದು ಶೀಘ್ರದಲ್ಲಯೊ ಅಥವಾ ಮುಂದೆಯೋ ಮುಗಿದೇ ಮುಗಿಯುತ್ತದೆ. ಅಲ್ಲಿಯವರೆಗೆ ನಮ್ಮ ಪ್ರಯತ್ನಗಳಲ್ಲಿ ಸ್ವಲವೂ ಶೈಥಲ್ಯವನ್ನು ತೋರ್ಪಡಿಸುವುದಕ್ಕಾಗುವುದಿಲ್ಲ.

ಡಾ|| ಮಿಸ್. ಅಲ್ಬುಕರ್ಕರವರೂ ಸಭೆಯನ್ನಲಂಕರಿಸುವರು.

ನಿಮ್ಮ ಜಾತಿ ಮತ ಜನಾಂಗ. ಏನೇ ಆಗಿರಲಿ ಈ ಪ್ರದರ್ಶನವು ನಿಮ್ಮದೆಂದು ತಿಳಿಯಿರಿ. ಧರ್ಮಾರ್ಥ ಪ್ರದರ್ಶನ ಆದರೆ ಒಂದು ಬಿನ್ನಹ, ಈ ಸಂತೋಷ ಸಮಾರಂಭಕ್ಕೆ ನಿಮ್ಮ ಮಕ್ಕಳನ್ನು ಗಂಡಸರ ಬಳಿಯಲ್ಲಿಯೇ ಮನೆಯಲ್ಲಿ ಬಿಟ್ಟು ಬನ್ನಿ.

ಕೆನಡಾ ದೇಶದ ಸಂಗ್ರಾಮ ಪರಿಕರಗಳ ಉತ್ಪತ್ತಿ

ಯುದ್ಧ ವಸ್ತುಗಳ ನಿರ್ಮಾಣದಲ್ಲಿ ಕೆನಡಾ ದೇಶಕ್ಕೆ ನಾಲ್ಕನೆಯ ಸ್ಥಾನ. ಅಮೇರಿಕ ಸಂಯುಕ್ತ ಸಂಸ್ಥಾನಗಳು ರಷ್ಯಾ ಮತ್ತು ಗ್ರೇಟ್ ಬ್ರಿಟನ್ನುಗಳನ್ನು ಬಿಟ್ಟರೆ ಕೆನಡಾ ದೇಶವೇ ಗಣನೆಗೆ ಬರಬೇಕಾದರೆ,

ಕೆನಡಾ ದೇಶದಲ್ಲಿ ತಯಾರಾಗುವ ವಸ್ತುಗಳ ಪೈಕಿ ಶೇಕಡಾ ೭೦ರಷ್ಟು ಮಿತ್ರರಾಷ್ಟ್ರಗಳಿಗೆ ರವಾನಿಸಲ್ಪಡುತ್ತವೆ.

ಕೆನಡಾ ದೇಶದಲ್ಲಿ ಈಗ ಪ್ರತಿವಾರವೂ ಎಷ್ಟು ಯುದ್ಧ ಪರಿಕರಗಳು ತಯಾರಾಗುತ್ತವೆ ಯೆಂದರೆ:—

೮೦ ವಿಮಾನಗಳು

೪೦೦೦ ಮೋಟಾರ್ ಯಾನಗಳು

೪೫೦ ಯುದ್ಧ ಯಾನಗಳು

೬ ರಕ್ಷಣಾ, ಸಾಮಾನಿನ ಪೆಟ್ರೋಲ್ ನೌಕೆಗಳು

೯೬೦ ಭಾರಿ ಫಿರಂಗಿಗಳು

೧೩,೦೦೦ ಸಣ್ಣ ಆಯುಧಗಳು

೫,೫೫,೦೦೦ ಭಾರಿ ಮದ್ದುಗುಂಡುಗಳು

೭,೫೦,೦೦,೦೦೦ ಸಣ್ಣ ಆಯುಧಗಳ ಮದ್ದುಗುಂಡುಗಳು

೧೦,೦೦೦ ಟನ್‌ಗಳು ರಾಸಾಯನಿಕ ಪದಾರ್ಥಗಳು ಮತ್ತು ಸ್ಫೋಟಕಗಳು

೧,೨೦,೦೦,೦೦೦ ರೂಪಾಯಿಗಳ ಇತರ ಪದಾರ್ಥಗಳು

ಕಾಹಿಲಿ ಮೇಲೆ ದಾಳಿ

ಭೀಕರ ವಿಮಾನ ಕದನ

ಶತ್ರು ವಿಮಾನಗಳ ನಾಶ

ಆಗ್ನೇಯ ಪೆಸಿಫಿಕ್‌ನಲ್ಲಿರುವ ಮಿತ್ರ ಕಚೇರಿಯ ಪ್ರಕಟಣೆಯ ಪ್ರಕಾರ ಒಲವಾದ ಮಿತ್ರ ವಿಮಾನ ಪಡೆಗಳು ಜಪಾನಿಯರ ವಿಮಾನಗಳ ನೆಲೆಯಾದ ಕಾಹಿಲಿಮೇಲೆ ಭಾರಿ ದಾಳಿ ಮಾಡಿದವು.

ಸುಮಾರು ೬೦ ಶತ್ರು ವಿಮಾನಗಳು ಮಿತ್ರ ದಾಳಿಯನ್ನೆದುರಿಸಿದವು. ಭೀಕರ ವಾಯು ಕದನವಾಗಿ ೩೭ ಜಪಾನೀ ವಿಮಾನಗಳು ಧ್ವಂಸ ಮಾಡಲ್ಪಟ್ಟವು.

ಅಕ್ಷರಾಜ್ಯಗಳ ನಷ್ಟಗಳು

೧೯೪೩ನೇ ಇಸವಿ ಜೂನ್‌ವರೆಗಿನ ನಷ್ಟಗಳು

—ವಿಮಾನಗಳು—

ಬ್ರಿಟಿಷ್ ಮತ್ತು ಅಮೇರಿಕ ವೈಮಾನಿಕ ಪಡೆಗಳೂ ಮಿತ್ರ ಪಕ್ಷದ ವಿಮಾನ ನಿರೋಧಕ ಫಿರಂಗಿ ಪಡೆಯವರೂ ನಿಷ್ಕೃಷ್ಟವಾಗಿ ೧೮,೦೩೧ ಜರ್ಮನ್, ಇಟಾಲಿಯನ್ ಮತ್ತು ಜಪಾನೀ ವಿಮಾನಗಳನ್ನು ಈ ಯುದ್ಧವಾರಂಭವಾದಾಗಿನಿಂದ ೧೯೪೩ನೇ ಜೂನವರೆಗೆ ನಾಶಮಾಡಿದ್ದಾರೆಂದು ಅಂಕಿಗಳಿಂದ ತಿಳಿದು ಬಂದಿದೆ.

ರಷ್ಯನ್ ರಣಾಂಗಣಗಳಲ್ಲಂತೂ ಇನ್ನೂ ಎಷ್ಟೋ ಸಹಸ್ರ ಶತ್ರು ವಿಮಾನಗಳು ನಷ್ಟವಾಗಿವೆ. ಬ್ರಿಟಿಷ್ ನೌಕಾ ಪಡೆಯವರು ೯೮೫ ವಿಮಾನಗಳನ್ನು ಧ್ವಂಸ ಮಾಡಿದ್ದಾರೆ. ಅಮೇರಿಕ ನೌಕಾ ಪಡೆಯ ಫಿರಂಗಿಗಳಿಂದಲೂ, ವಿಮಾನಗಳಿಂದಲೂ ಪೆಸಿಫಿಕ್ ಯುದ್ಧ ರಂಗದಲ್ಲಿ ನಾಶವಾಗಿರತಕ್ಕ ವಿಮಾನಗಳ ಸಂಖ್ಯೆಯನ್ನೂ, ಫ್ರಾನ್ಸಿನ ಪತನಕ್ಕೆ ಹಿಂದೆ ಫ್ರೆಂಚ್ ವೈಮಾನಿಕ ಪಡೆಯವರು ನಾಶಮಾಡಿರತಕ್ಕ ವಿಮಾನಗಳನ್ನೂ ಈ ಮೇಲೆ ನಮೂದಿಸಿರುವ ಅಂಕಿಗಳಿಗೆ ಸೇರಿಸಿಲ್ಲ. ಇಷ್ಟೇ ವಿಮಾನಗಳು ನಾಶವಾಗಿವೆಯೆಂಬುದರ ಕರಾರುವಾಕ್ಕಾ ಅಂಕಿಗಳು ತಿಳಿದು ಬಂದಿಲ್ಲ

ಅಮೇರಿಕ ಮತ್ತು ಬ್ರಿಟಿಷ್ ವೈಮಾನಿಕ ಪಡೆಗಳಿಗೆ ೯೯೦೬ ವಿಮಾನಗಳು ನಷ್ಟವಾಗಿದೆಯೆಂದು ಗೊತ್ತಾಗಿದೆ. ಆದರೆ ಬರ್ಮಾ ಮತ್ತು ಪೆಸಿಫಿಕ್ ರಂಗಗಳಲ್ಲಿ ನಾಶವಾಗಿರುವ ವಿಮಾನಗಳು ಈ ಅಂಕಿಗೆ ಸೇರಿಲ್ಲ.

ಯೂರೋಪಿಯನ್ ರಣಾಂಗಣದಲ್ಲಿ

ವರ್ಷ	ಅಕ್ಷರಾಜ್ಯಗಳು	ಅಮೇರಿಕ ವಿಮಾನಗಳು
೧೯೪೨	೧೮೨	೩೩
೧೯೪೩	೯೯೦	೨೬೦
	ಜಮ್ಲ ೧೧೭೨	೨೯೩

ಟುನೀಷಿಯಾದಲ್ಲಿ

ವರ್ಷ	ಅಕ್ಷರಾಜ್ಯ	ಮಿತ್ರ ಪಕ್ಷ
೧೯೪೨	೨೯೦	೧೨೪
೧೯೪೩	೧೯೪೧	೬೭೧
	ಜುಮ್ಲ ೨೨೩೧	೭೯೫

ಗ್ರೇಟ್ ಬ್ರಿಟನ್ನಿನಲ್ಲಿ

೧೯೩೯	೨೩	೦
೧೯೪೦	೩೦೩೮	೮೪೭
೧೯೪೧	೬೩೧	೪೦
೧೯೪೨	೨೯೬	೧೦
೧೯೪೩	೨೧೩	೩
	ಜುಮ್ಲ ೪೨೦೧	೯೦೦

ಯೂರೋಪಿನಲ್ಲಿ

ವರ್ಷ	ಅಕ್ಷರಾಜ್ಯ	ಬ್ರಿಟಿಷ್
೧೯೩೯	೪೦	೩೨
೧೯೪೦	೧೦೧೬	೭೫೯
೧೯೪೧	೮೮೦	೧೫೧೭
೧೯೪೨	೫೫೫	೧೯೭೫
೧೯೯೩	೩೨೩	೧೪೫೨
	ಜುಮ್ಲ ೨೮೧೪	೫೭೩೫

ಮಧ್ಯಪ್ರಾಚ್ಯದಲ್ಲಿ (ಮಾಲ್ಟಾ ಸೇರಿ)

ವರ್ಷ	ಅಕ್ಷರಾಜ್ಯ	ಮಿತ್ರಪಕ್ಷ
೧೯೪೦	೩೪೭	೭೬
೧೯೪೧	೧೧೧೨	೬೩೫
೧೯೪೨	೧೭೮೪	೧೧೬೩
೧೯೪೩	೨೫೭	೧೦೩
	ಜುಮ್ಲ ೩೫೦೦	೧೯೭೭

ದೂರಪ್ರಾಚ್ಯ, ಇಂಡಿಯಾ ಮತ್ತು ಬರ್ಮ

ವರ್ಷ	ಅಕ್ಷರಾಜ್ಯ	ಬ್ರಿಟಿಷ್
೧೯೪೨	೨೮೬೩	೮೯
೧೯೪೩	೧೧೭೯	೬೦
	ಜುಮ್ಲ ೪೦೪೨	೧೪೯

ರಷ್ಯಾದಲ್ಲಿ (ಬ್ರಿಟಿಷ್ ದಳದಿಂದ)

೧೯೪೨	ಅಕ್ಷರಾಜ್ಯ ೧೫	ಬ್ರಿಟಿಷ್ ೧

ಸ್ಕ್ಯಾಂಡಿನೇವಿಯಾದಲ್ಲಿ

೧೯೪೦

ಮೈಸೂರು ನ್ಯಾಷನಲ್ ವಾರ್‌ಫ್ರಂಟ್

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಬೆಂಗಳೂರು

—ಪೋಸ್ಟರ್ಸ್ ಕಾಂಪಿಟೀಷನ್—

ಕಡೇ ದಿನ ೧೫ ನೇ ಸೆಪ್ಟಂಬರ್ ೧೯೪೩

ಮೈಸೂರು ನ್ಯಾಷನಲ್ ವಾರ್‌ಫ್ರಂಟ್‌ನ ಪ್ರಚಾರ ಕಾರ್ಯಕ್ಕೆ ಅನುಕೂಲವಾಗಿ ಪೋಸ್ಟರುಗಳನ್ನು ಚಿತ್ರಿಸಿಕೊಡುವವರಿಗೆ ಒಟ್ಟು ೨೦೦ ರೂಪಾಯಿಗಳ ಬಹುಮಾನ ಕೊಡಲಾಗುವುದು. ಸ್ಪರ್ಧೆಯ ವಿವರಗಳು:—

೧ ಮೈಸೂರು ದೇಶದಲ್ಲಿ (ದಂಡೂ ಸೇರಿ) ವಾಸಿಸುವ ಸರ್ಕಾರಿ ನೌಕರರಾದಿಯಾಗಿ ಸ್ಪರ್ಧೆಯಲ್ಲಿ ಯಾರು ಬೇಕಾದರೂ ಭಾಗ ವಹಿಸಬಹುದು. ಕಸಬುದಾರ ಅಥವಾ ಕಲಿಯುತ್ತಿರುವ ಚಿತ್ರಗಾರರಿಗೂ ಅವಕಾಶ ಉಂಟು.

೨ ಪ್ರವೇಶ ಧನವಿಲ್ಲದೆಯೇ ಎಷ್ಟು ಪ್ರತಿಗಳನ್ನು ಬೇಕಾದರೂ ಕಳಿಸಬಹುದು.

೩ ಸ್ಪರ್ಧೆಯ ಚಿತ್ರ ಸ್ವಂತದ್ದಾಗಿರಬೇಕು. ಆ ಪ್ರತಿಯ ಹಿಂಭಾಗದಲ್ಲಿ ಈ ಕೆಳಗಿನಂತಿರುವ ಸರ್ಟಿಫಿಕೇಟ್ ಬರೆದು ರುಜು ಮಾಡಿರಬೇಕಲ್ಲದೆ ಸ್ಪರ್ಧಿಯ ಹೆಸರು, ವಿಳಾಸಗಳನ್ನು ಕಪ್ಪು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

(ಸರ್ಟಿಫಿಕೇಟ್)

"............................ ಎಂಬ ಹೆಸರಿನ ಕಸುಬುದಾರ. (೧) ಅಮೆಚೂರ್ ಚಿತ್ರಗಾರನಾದ ನಾನು ಬರೆದ ನನ್ನ ಸ್ವಂತ ಚಿತ್ರವೆಂತ ದೃಢವಾಗಿ ಹೇಳುತ್ತೇನೆ. ಈ ಚಿತ್ರದ ಕಾಪಿರೈಟನ್ನು ನಾನು ಈವರೆಗೆ ಯಾರಿಗೂ ಮಾರಿಲ್ಲ. ಮೈಸೂರು ವಾರ್‌ಫ್ರಂಟ್ ಸಂಸ್ಥೆಯವರಿಂದ ಏರ್ಪಟ್ಟಿರುವ ಈ ಪೋಸ್ಟರ್ ಸ್ಪರ್ಧೆಯ ಎಲ್ಲ ರೂಲ್ಸುಗಳಿಗೂ ಒಳಪಟ್ಟಿರುತ್ತೇನೆ"

೪ ಪ್ರತಿಯಲ್ಲಿ ಈ ಕೆಳಗೆ ಹೇಳಿರುವ ವಿಷಯಕ್ಕೆ ಸಂಬಂಧಿಸಿದ ಯಾವುದಾದರೂ ಚಿತ್ರವನ್ನು ಪೂರ್ತಿಯಾಗಿ ಚಿತ್ರಿಸಿ ಅದರ ಕೆಳಗೆ ದೊಡ್ಡದಾಗಿ ಅದು ಯಾವ ವಿಷಯಕ್ಕೆ ಸಂಬಂಧಿಸಿದ್ದೆಂಬುದನ್ನು ಸೂಚಿಸುವ ಸ್ಲೋಗನ್ ಬರೆದು ಕಳಿಸತಕ್ಕದ್ದು.

೫ ಆ ವಿಷಯ ವಿಭಾಗಗಳು ಯಾವುವೆಂದರೆ—

(೧) ಹೆಚ್ಚು ಆಹಾರ ಬೆಳೆಯಿರಿ (೨) ಹೆಚ್ಚು ತರಕಾರಿ ಬೆಳೆಯಿರಿ.

೬ ಈ ಒಂದೊಂದು ವಿಭಾಗಕ್ಕೂ ಮೂರು ಬಹುಮಾನಗಳನ್ನು ಇರಿಸಲಾಗಿದೆ

ಮೊದಲನೇ ಬಹುಮಾನ ರೂ. ೫೦; ಎರಡನೇ ಬಹುಮಾನ ರೂ. ೩೦ ಮೂರನೇ ಬಹುಮಾನ ರೂ. ೨೦,

೭ ಪ್ರತಿಗಳು "೩೦×೪೦"ರ ಅಳತೆಯಿರಬೇಕು ! ಬೇಕಿದ್ದಲ್ಲಿ ಕಟ್ಟು ಹಾಕಿಸಿ ಕಳಿಸಬಹುದು. ಆದರೆ ಸ್ಪರ್ಧಿಗಳ ಅನುಕೂಲಕ್ಕಾಗಿ ಗಾಜಿಲ್ಲದೆ ಕಳಿಸುವುದು ಉತ್ತಮ

೮ ಎಲ್ಲ ಪ್ರತಿಗಳನ್ನು ಸರಿಯಾಗಿ ಪ್ಯಾಕ್ ಮಾಡಿ ಸೆಪ್ಟೆಂಬರ್ ೧೫ ರೊಳಗೆ "ದಿ ಸೆಕ್ರೆಟರಿ ಮೈಸೂರು ನ್ಯಾಷನಲ್ ವಾರ್ ಫ್ರಂಟ್ ಟೆಕ್ನಿಲಾಜಿಕಲ್ ಇನ್‌ಸ್ಟಿಟ್ಯೂಟ್ ಬಿಲ್ಡಿಂಗ್ಸ್ (ಎರಡನೇ ಅಂತಸ್ತು) ಬೆಂಗಳೂರು" ಇವರ ವಿಳಾಸಕ್ಕೆ ಟಪಾಲು ಅಥವಾ ಖುದ್ದಾಗಿ ತಲುಪಿಸತಕ್ಕದ್ದು

೯ ಸರ್ಕಾರದಿಂದ ನೇಮಿಸಲ್ಪಟ್ಟ ಜಡ್ಜಿಗಳು ಇವನ್ನು ಪರೀಕ್ಷಿಸಿ ತೀರ್ಮಾನ ಕೊಡುತ್ತಾರೆ. ಅವರ ತೀರ್ಮಾನಕ್ಕೆ ಎಲ್ಲರೂ ಒಪ್ಪತಕ್ಕದ್ದು

೧೦ ಮೊದಲಿನ ಮೂರು ಬಹುಮಾನಗಳನ್ನು ಪಡೆದ ಚಿತ್ರಗಳ ಕಾಪಿರೈಟ್ ಮೈಸೂರು ವಾರ್‌ಫ್ರಂಟ್‌ನವರಿಂದ ಕಾದಿರಿಸಲ್ಪಡುತ್ತದೆ. ಅವರು ಅವುಗಳನ್ನು ಬೇರೆ ಪ್ರತಿಗಳನ್ನಾಗಿ ಮಾಡಿಸಿಕೊಳ್ಳಲು ಮತ್ತು ಪ್ರಚಾರ ಕಾರ್ಯಕ್ಕಾಗಿ ಉಪಯೋಗಿಸಿಕೊಳ್ಳಲು ಹಕ್ಕುದಾರರಾಗುತ್ತಾರೆ

೧೧ ಬಹುಮಾನ ಪಡೆದ ಮತ್ತು ಬಹುಮಾನ ಪಡೆಯದೆ ಇರುವುವುಗಳಲ್ಲಿ ಆರಿಸಲ್ಪಟ್ಟ ಚಿತ್ರಗಳನ್ನು ಅಕ್ಟೋಬರ್‌ನಲ್ಲಿ ನೇರಲಿರುವ ದಸರಾ ಪ್ರದರ್ಶನದಲ್ಲಿ ಪ್ರದರ್ಶಿಸಲಾಗುವುದು

೧೨ ಬಹುಮಾನ ಪಡೆದ ಪ್ರತಿಗಳು ವಿನಾ ಮಿಕ್ಕ ಎಲ್ಲಾ ಪ್ರತಿಗಳನ್ನೂ ದಸರಾ ಪ್ರದರ್ಶನಾನಂತರ ವಾರ್ ಫ್ರಂಟಿನ ಖರ್ಚಿನಿಂದ ಸ್ಪರ್ಧಿಗಳಿಗೆ ಹಿಂದಕ್ಕೆ ಕಳಿಸಲಾಗುವುದು.

ಬೆಂಗಳೂರು

೧೮ ಆಗಸ್ಟ್ ೧೯೪೩

ಜಿ. ಬಿ. ಮಲ್ಲಾರಾಧ್ಯ,
ಆರ್ಗನೈಸಿಂಗ್ ಸೆಕ್ರೆಟರಿ, ನ್ಯಾಷನಲ್ ವಾರ್‌ಫ್ರಂಟ್ ಇನ್ ಮೈಸೂರು.

K. Achyutha Rao & Bros.

No 1931

ಶ್ರೀ

೩೫ ಸಂಚಿಕೆ ೧೧-೧೨

ಸಂತಃ ಸ್ವಯಂ ಪರಹಿತೇಷು ಕೃತಾಭಿಯೋಗಾಃ ।

ಸದ್ಬೋಧ ಚಂದ್ರಿಕೆ

(ತಿಳಿಗನ್ನಡ ಮಾಸ ಪತ್ರಿಕೆ)

SADBODHA CHANDRIKE

(Monthly Magazine)

WORLD NEWS P... RAVALLI ... INDIA
Shimoga

ಸಂಪಾದಕರು ಮತ್ತು ಪ್ರಕಾಶಕರು:
ಶಂ. ಗು. ಕುಲಕರ್ಣಿ,
ಆನಂದವನ

ವಾರ್ಷಿಕ ಚಂದಾ:—
ಮ. ಆ. ದಿಂದ ೨-೮-೦ ರೂ. ವ್ಹಿ. ಪಿ. ಯಿಂದ ೨-೧೨-೦ ರೂ.

ಈ ಸಂಚಿಕೆಯ ಬೆಲೆ ೬ ಆಣೆ

ಮಾಘ
ಫಾಲ್ಗುಣ
ಚಿತ್ರಭಾನು

ಪ್ರಿಂಟರ:— ಭಿ. ಪ. ಕಾಳೆ,
ಶ್ರೀಶೇಷಾಚಲ ಪ್ರೆಸ್ಸ,
ಆನಂದವನ-ಅಗಡಿ

ಫೆಬ್ರುವಾರಿ
ಮಾರ್ಚ
೧೯೪೩

ಒಟ್ಟು ಸಂಚಿಕೆ ೪೨೦

WORLD NEWS PAPER EXHIBITION
MEGARAVALLI 577
Shimoga Dist.

ವೈದಿಕ ಧರ್ಮ ಗ್ರಂಥಮಾಲೆ

ಪುಸ್ತಕ

ಅಕ್ಟೋಬರ್

ಹಿಂದೂ ಸಂರಕ್ಷಣೆ

HINDU SAMRAKSHANE IN KNNAD

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು 90

ಆರಂಭ ದಿನಾಂಕ ....

ಪ್ರಕಟನಾ ಸ್ಥಳ ....

ಸಂಪಾದಕರ ಹೆಸರು ....

ಮಾಲಿಕರ ಹೆಸರು ....

ಸೌಜನ್ಯ ಕೃಪೆ ....

ಮುನ್ನುಡಿ

ಇಂದು ಹಿಂದುಗಳ ಮೇಲೆ ಒಂದಲ್ಲ ಒಂದು ತರದ ಆಪತ್ತು ಬರುತ್ತಿರುವುದನ್ನು ನಾವು ಕಾಣುತ್ತೇವೆ. ಪತ್ರಿಕೆಗಳಲ್ಲಿ ಓದುತ್ತೇವೆ. ಅವುಗಳನ್ನು ದೂರೀಕರಿಸುವ ಉಪಾಯವನ್ನು ಕಾರ್ಯರೂಪಕ್ಕೆ ತರುವುದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯ. ಆದುದರಿಂದ ಈ ಕುರಿತು ಅಲ್ಲಹಾಬಾದಿನ ಪಂಡಿತ ಗಂಗಾಪ್ರಸಾದ್ ಉಪಾಧ್ಯಾಯ M.A., ಇವರು ಬರೆದಿರುವ ಒಂದು ಲೇಖನದ ಆಧಾರದಿಂದ ಕೆಲವು ಸಾಧನಗಳನ್ನು ಈ ಚಿಕ್ಕ ಪುಸ್ತಕದಲ್ಲಿ ತೋರಿಸಲ್ಪಟ್ಟಿದೆ. ಹಿಂದೂ ಸಮಾಜವು ಇದರಿಂದ [illegible] ಹೊಂದೀತಾಗಿ ಆಶಿಸುತ್ತೇನೆ.

ಇತಿ

ವಸಿಷ್ಠ

ಹಿಂದೂ ಸಂರಕ್ಷಣೆ

ಹಿಂದೂ ಜನಾಂಗವು ಪ್ರತಿ ದಿನವೆಂಬಂತೆ ಕಡಿಮೆಯಾಗುತ್ತಾ ಬರುತ್ತಿರುವುದನ್ನು ನಾವು ಕಾಣುತ್ತೇವೆ. ಒಂದು ಕಾಲದಲ್ಲಿ ನಮ್ಮ ಭಾರತ ದೇಶದಲ್ಲಿ ಕೇವಲ ಹಿಂದುಗಳೇ ವಾಸಿಸುತ್ತಿದ್ದರು. ಇಂದು ಹಿಂದುಗಳ ಸಂಖ್ಯೆಯು ಮೂರರಲ್ಲಿ ಎರಡು ಪಾಲು ಮಾತ್ರವಿದೆ. ಸರಾಸರಿ ಪ್ರತಿ ದಿನ ಮುನ್ನೂರು ಮಂದಿ ಹಿಂದುಗಳು ಕಡಿಮೆಯಾಗುತ್ತಾ ಬರುತ್ತಾರೆ. ಇದೇ ರೀತಿ ಮುಂದೆಯೂ ನಡೆದರೆ ಹಿಂದೂ ಎಂಬ ಹೆಸರು ಭಾರತ ದೇಶದಿಂದ ಶೀಘ್ರವೇ ಅಳಿದು ಹೋಗುವುದು! ಇದು ನಿಶ್ಚಯ!!

ಶ್ರೇಷ್ಠವಾದ ಈ ಹಿಂದೂ ಜನಾಂಗದ ರಕ್ಷಣೆಯ ಉಪಾಯವಾವುದು? ಎಂಬುದೇ ಈಗ ನಮ್ಮ ಮುಂದಿರುವ ಪ್ರಶ್ನೆ.

ಶಾರೀರಿಕ ಬಲ

ಹಿಂದುಗಳು ಸಬಲರಾಗಿರುತ್ತಿದ್ದರೆ ಅನ್ಯರು ಈ ಜನಾಂಗವನ್ನು ಪೀಡಿಸಲು ಸಾಹಸ ಪಡುತ್ತಿದ್ದಿಲ್ಲ; ಎಂದು ಹಲವರು ಹೇಳುತ್ತಾರೆ. ಈ ಮಾತು ನಿಜವಾದದ್ದು. ಏಕೆಂದರೆ—ದುರ್ಬಲರಿಗೆ ಯಾರೂ ಸಹಾಯವನ್ನು ಮಾಡುವುದಿಲ್ಲ "ದೈವೋ ದುರ್ಬಲ ಘಾತಕ" ದೇವರು ಸಹ ದುರ್ಬಲರಿಗೆ ಸಹಾಯಕನಾಗಿಲ್ಲ. ಶರೀರದಲ್ಲಿ ಬಲ ಇಲ್ಲದವನಿಗೆ ಶತ್ರುಗಳ ಮಾತಂತಿರಲಿ, ವಾಯು, ಜಲ, ಮತ್ತು ಅನ್ನವು ಸಹ ಹಾನಿ

ಯನ್ನು ಮಾಡಲು ತೊಡಗುತ್ತದೆ. ಆದುದರಿಂದ ಪ್ರತಿಯೊಬ್ಬ ಹಿಂದುವು ತನ್ನ ಶಾರೀರಿಕ ಬಲವು ಹೆಚ್ಚಾಗುವಂತೆ ವಿಶೇಷವಾಗಿ ಪ್ರಯತ್ನಿಸಬೇಕು. ಪ್ರತಿ ದಿನ ವ್ಯಾಯಾಮವನ್ನು ಮಾಡುತ್ತಿರಬೇಕು. ಹಾಲು, ತುಪ್ಪ ಮೊದಲಾದ ಪುಷ್ಟಿಕಾರಕ ಪದಾರ್ಥಗಳನ್ನು ಚೆನ್ನಾಗಿ ತಿನ್ನಬೇಕು. ಶರೀರಕ್ಕೆ ಹಾನಿಯೊದಗುವಂತಹ ಬೀಡಿ, ಸಿಗರೇಟು, ಸರಾಯಿ ಮೊದಲಾದ ಕೆಟ್ಟ ಪದಾರ್ಥಗಳನ್ನು ಎಂದೂ ಸೇವಿಸಬಾರದು. ಹಿಂದುಗಳು ಆಯುಧಗಳನ್ನು ಇಟ್ಟುಕೊಳ್ಳುವಂತೆ ಪ್ರಚಾರ ಮಾಡಬೇಕು. ಯಾವ ಆಯುಧಗಳಿಗೆ ಲೈಸನ್ಸು ಇದೆಯೋ ಅವುಗಳ ಲೈಸನ್ಸು ಸಹ ಪಡಕೊಳ್ಳಬೇಕು. ಯಾವುದಕ್ಕೆ ಲೈಸನ್ಸಿನ ಅವಶ್ಯಕತೆಯಿಲ್ಲವೋ ಅದನ್ನು ಹಾಗೆಯೇ ಇಟ್ಟುಕೊಳ್ಳಬೇಕು. ಇದರಿಂದ ಎರಡು ತರದ ಲಾಭವಿದೆ. ೧ನೇದ್ದು- ಆಯುಧಗಳನ್ನು ನೋಡಿ ಭಯಪಡುವ ಅಭ್ಯಾಸವು ಹೋಗುವದು. ೨ನೇದ್ದು- ಆಪತ್ಕಾಲದಲ್ಲಿ ತನ್ನ ರಕ್ಷಣೆಯು ಆಗುವದು. ತನ್ನ ಸತೀತ್ವವನ್ನು ನಾಶಪಡಿಸಲು ಯಾವನಾದರೂ ದುರಾತ್ಮನು ತನ್ನ ಮೇಲೆ ಆಕ್ರಮಣಮಾಡಿದರೆ ಅಂಥಾ ಸಮಯದಲ್ಲಿ ತನ್ನ ಸತೀತ್ವ ರಕ್ಷಣೆಗಾಗಿಯಾದರೂ ಸ್ತ್ರೀಯರು ಇಂಥಾ ಆಯುಧಗಳನ್ನು ತಮ್ಮ ಬಳಿಯಲ್ಲಿ ಇಟ್ಟುಕೊಳ್ಳಬೇಕು.

ಸಾಮಾಜಿಕ ಸಂಘಟನೆ

ಕೇವಲ ಶಾರೀರಿಕ ಬಲದಿಂದ ನಮ್ಮ ರಕ್ಷಣೆಯು ಆಗಲಾರದು. ಶಾರೀರಿಕ ಬಲದಲ್ಲಿ ಹಿಂದುಗಳು ಈಗಲೂ ಅಷ್ಟೊಂದು ನಿರ್ಬಲರಾಗಿಲ್ಲ. ಆದರೆ ಈ ಜನಾಂಗದೊಳಗೆ ಸಂಘಟನೆಯು ಇರುವುದಿಲ್ಲ. ಬಿಲ್ಲವ, ಮಹಾರ್, ಕೊರಗ ಮೊದಲಾದ ಹಲವು ಪಂಗಡಗಳು ಬಹಳ ಬಲಿಷ್ಠವಾಗಿವೆ. ಆದರೆ ನಾವು ಅವರನ್ನು ನೀಚರೆಂದು ಅಸ್ಪೃಶ್ಯರೆಂದು, ತಿಳಿಯುತ್ತೇವೆ. ಇದು ದೊಡ್ಡ ಅಪರಾಧವಾಗಿದೆ. ನಾವು ಆ ರೀತಿ ಎಂದಿಗೂ ತಿಳಿಯಬಾರದು. ಅವರು ನಮ್ಮನ್ನು ಅವಶ್ಯವಾಗಿ ರಕ್ಷಣೆ ಮಾಡುವವರು. ಎಲ್ಲಾ ಪಂಗಡಗಳು ಪರಸ್ಪರ ಸೌಹಾರ್ದದಿಂದ ಇರಬೇಕು.

ಒಬ್ಬರು ಇನ್ನೊಬ್ಬರಿಗೆ ಸಹಾಯವನ್ನು ಮಾಡುತ್ತಿರಬೇಕು. ಉಚ್ಚ ನೀಚ ಎಂಬ ಭೇದವನ್ನು--ಜಗಳವನ್ನು ದೂರ ಮಾಡಿ ತಾವೆಲ್ಲರೂ ಒಂದೇ ಜನಾಂಗವೆಂದು ತಿಳಿಯಬೇಕು. ಮತ್ತು ತನ್ನ ಜನಾಂಗದ ಒಂದು ಅಂಶಕ್ಕೆ ಯಾವುದಾದರೊಂದು ಆಪತ್ತು ಬಂದಲ್ಲಿ ಎಲ್ಲರೂ ಕೂಡಿ ಆ ಅಂಶಕ್ಕೆ ಸಹಾಯವನ್ನು ಮಾಡಬೇಕು.

ಸಾಹಸ ಮತ್ತು ವಿಶ್ವಾಸ

ಹಿಂದುಗಳು ತಾವು ತಿಳಿದಷ್ಟು ನಿರ್ಬಲರಾಗಿಲ್ಲ. ಪ್ರತಿಯೊಬ್ಬರು—ಹಿಂದುಗಳು ನಿರ್ಬಲರೆಂದು ಹೇಳುತ್ತಾರೆ. ಇದರಿಂದಾಗಿ ನಮ್ಮಲ್ಲಿ ಬಲವು ಕಡಿಮೆಯಾಗುತ್ತ ಬರುತ್ತಿದೆ. ಆದುದರಿಂದ ಪ್ರತಿಯೊಬ್ಬ ಹಿಂದುವು ತಾನು ಬಲಿಷ್ಠನಾಗಿದ್ದೇನೆಂದು ತಿಳಿಯಬೇಕು. ಮತ್ತು ಇತರ ಹಿಂದುಗಳ ಮೇಲೆ ವಿಶ್ವಾಸವನ್ನಿಡಬೇಕು. ತನ್ನ ಬಂಧುಗಳಾದ ಇತರ ಹಿಂದುಗಳು ತನಗೆ ಸಹಾಯವನ್ನು ಮಾಡುವರು ಎಂಬ ವಿಶ್ವಾಸವನ್ನು—ಆಶೆಯನ್ನು ಪ್ರಯೊಬ್ಬ ಹಿಂದುವು ಕಟ್ಟಿಕೊಳ್ಳಬೇಕು. ಸಾಹಸ ಮತ್ತು ವಿಶ್ವಾಸದಿಂದ ನಿರ್ಬಲರಲ್ಲಿ ಸಹ ಬಲವು ಬರುತ್ತದೆ.

ಭ್ರಮಜಾಲದ ತ್ಯಾಗ

ಹಿಂದುಗಳಲ್ಲಿ ಒಂದು ದೊಡ್ಡ ದೋಷವಿದೆ. ಜನರು ಇವರನ್ನು ಭ್ರಮಜಾಲದಲ್ಲಿ ಥಕ್ಕನೆ ಸಿಕ್ಕಿಸಿಕೊಳ್ಳುತ್ತಾರೆ. ಇವರ ಪೂಜಾ ಕ್ರಮವು ಬಹಳ ಕೆಟ್ಟದ್ದಿರುತ್ತದೆ. ಇವರು ಏಕೇಶ್ವರನನ್ನು ಪೂಜಿಸುವುದನ್ನು ಬಿಟ್ಟು, ಕಲ್ಲು, ನದಿ, ವೃಕ್ಷ ಮೊದಲಾದವುಗಳನ್ನೆಲ್ಲಾ ದೇವರೆಂದು ಪೂಜಿಸುತ್ತಾರೆ. ಮುಸಲ್ಮಾನರ ಘೋರಿಗಳನ್ನು ಸಹ ಕೆಲವರು ಪೂಜಿಸುತ್ತಾರೆ. ಇಟ್ಟಿಗೆ, ಕಲ್ಲು ಮೊದಲಾದವುಗಳನ್ನು ತೋರಿಸಿ ಇವುಗಳೇ ದೇವರೆಂದು ಯಾರಾದರೂ ಹೇಳಿದರೆ ಸರಿ, ತಕ್ಷಣ ತಲೆ ಬಾಗಿಸಿ ನಮಸ್ಕರಿಸುವರು. ಭೂತಪ್ರೇತಗಳ ಕಟ್ಟು ಕಥೆಗಳನ್ನು ಯಾರಾದರೂ ಹೇಳಿದರೆ, ಯಾವುದೊಂದು ವಿಚಾರವನ್ನು ಮಾಡದೆ ತಕ್ಷಣ ಅವುಗಳೆಲ್ಲಾ ಸತ್ಯವೆಂದು ನಂಬುವರು. ಈ ಅವಿವೇಕತನದಿಂದಾಗಿ ಮುಸಲ್ಮಾನ ಪೀರರು, ಫಕೀರರು, ಹಿಂದೂ ಮಂತ್ರವಾದಿಗಳು, ಚಾಲಾಕಿ ಜನರು ಇವರನ್ನು ತಕ್ಷಣ

ತಮ್ಮ ಬಲೆಯಲ್ಲಿ ಸಿಕ್ಕಿಸಿಕೊಳ್ಳುವರು. ಹಲವು ಠಕ್ಕರು ಸಾಧು ಮತ್ತು ಫಕೀರರ ವೇಷವನ್ನು ಧರಿಸಿ ಸುಲಭದಿಂದ ಇವರ ಮನೆಯೊಳಗೆ ನುಗ್ಗಿ ಇವರ ಸ್ತ್ರೀಯರನ್ನು ತಮ್ಮ ಬಲೆಯಲ್ಲಿ ಸಿಕ್ಕಿಸಿಕೊಳ್ಳುತ್ತಾರೆ. ಇವರ ಕುರಿತು ಒಬ್ಬ ಇಂಗ್ಲೀಷ್ ಮಹಾಶಯರು ಈ ರೀತಿ ಬರೆಯುತ್ತಾರೆ:—"ಯಾವ ಹಿಂದುವು ವೃಕ್ಷಗಳಿಗೆ ತಲೆಬಗ್ಗಿಸಿ ನಮಸ್ಕಾರ ಮಾಡುತ್ತಾನೆಯೋ ಅವನು—ಆ ವೃಕ್ಷಗಳನ್ನು ಮೆಟ್ಟಿನಿಂದ ತುಳಿಯುವ ಜನಾಂಗದ ಎದುರು ಎಂದಿಗೂ ನಿಲ್ಲಲಾರನು." ಇದು ನಿಜವಾದ ಮಾತು. ವೇದದಲ್ಲಿ ಸಹ— ಅಸತ್ಯದ ಮೇಲೆ ಅಶ್ರದ್ಧೆಯನ್ನೂ, ಸತ್ಯದ ಮೇಲೆ ಶ್ರದ್ಧೆಯನ್ನೂ ಇಡಬೇಕೆಂದು ಹೇಳಿರುತ್ತದೆ. ಆದರೆ ಹಿಂದುಗಳಾದರೋ ಅಸತ್ಯ ಮತ್ತು ಸತ್ಯ ಇವೆರಡರ ಮೇಲೂ ಶ್ರದ್ಧೆಯನ್ನು ಇಡುತ್ತಾರೆ. 'ಇಂಥಾ ಕಡೆಯಲ್ಲಿದ್ದ ತನ್ನನ್ನು ತೆಗೆದು ಪೂಜಿಸಿರಿ ಎಂದು ಇಂಥಾ ಒಂದು ದೇವತೆಯು ಸ್ವಪ್ನದಲ್ಲಿ ಬಂದು ತನಗೆ ಹೇಳಿರುತ್ತದೆ' ಎಂದು ಯಾರಾದರೂ ಹೇಳಿದರೆ ಸರಿ, ಇವರು ಪೂಜಿಸಲು ಪ್ರಾರಂಭಿಸುವರು. ಹಾಗೆಯೇ ಒಂದು ಹಳೇ ಘೋರಿಯು ಯಾವುದೇ ಒಂದು ಕಾರಣದಿಂದ ಜರಿದು ಬಿದ್ದುದನ್ನು ನೋಡಿದರೆ ಸರಿ, ಅದು ಮೃತಪಟ್ಟವನ ಮಾಹಾತ್ಮ್ಯ ಎಂದು ತಿಳಕೊಂಡು ಅದನ್ನೂ ಪೂಜಿಸಲು ತೊಡಗುವರು. ಯಾವನಾದರೊಬ್ಬನು ಬಂದು-ಮೃತಪಟ್ಟ ತಂದೆ, ತಾಯಿ ಅಥವಾ ಇತರ ಸಂಬಂಧಿಗಳ ಕೂಡೆ ನಿಮಗೆ ಭೇಟಿಯಾಗುವಂತೆ ತಾನು ಮಾಡುವೆನೆಂದು ಒಬ್ಬ ಹಿಂದುವಿನ ಕೂಡೆ ಹೇಳಿದರೆ ಅವನು ಆತನ ಮಾತಿನ ಮೇಲೆ ವಿಶ್ವಾಸವನ್ನಿಟ್ಟು ಆತನಿಗೆ ತನ್ನ ಧನವನ್ನು ಅರ್ಪಿಸುವನು ತಾತ್ಪರ್ಯ:— ಹಿಂದುಗಳಲ್ಲಿ ಸತ್ಯ ಯಾವುದು ಅಸತ್ಯ ಯಾವುದು ಎಂಬುದನ್ನು ನಿರ್ಣಯ ಮಾಡುವ ಯೋಗ್ಯತೆಯೇ ಮಾಯವಾಗಿ ಹೋಗಿದೆ. ಆದುದರಿಂದ ಇವರನ್ನು ಹೇಗಾದರೂ ಮಾಡಿ ಭ್ರಮ ಜಾಲದಿಂದ ರಕ್ಷಿಸಬೇಕಾಗಿದೆ. ಮತ್ತು ನಿಜವಾದ ಧಾರ್ಮಿಕ ಸಿದ್ಧಾಂತಗಳನ್ನು ತಿಳಿಯಪಡಿಸಿ, ಏಕೇಶ್ವರನ ಸತ್ಯ ಪೂಜೆಯನ್ನು ಕಲಿಸಬೇಕಾಗಿದೆ.

ಧರ್ಮ ಪ್ರಚಾರ ಮತ್ತು ಶುದ್ಧಿ

ಹಿಂದುಗಳಲ್ಲಿರುವ ಇನ್ನೊಂದು ದೋಷವೇನೆಂದರೆ ತಮ್ಮ ಜನಾಂ

ಗವು ಹೆಚ್ಚಾಗಬೇಕು ಎಂದು, ಕ್ರೈಸ್ತ, ಮುಸಲ್ಮಾನ್ ಮೊದಲಾದವರು ತಿಳಿಯುವಂತೆ ಹಿಂದುಗಳು ತಿಳಿಯುವುದಿಲ್ಲ. ಒಬ್ಬ ಹಿಂದುವು ಮುಸಲ್ಮಾನನಾಗಿ ಹೋದರೆ ಮುಸಲ್ಮಾನರು ಸಂತೋಷಪಡುವರು. ಪರರನ್ನು ಮುಸಲ್ಮಾನರನ್ನಾಗಿ ಮಾಡುವದು ತಮ್ಮ ಧರ್ಮವೆಂದು ಅವರು ತಿಳಿಯುತ್ತಾರೆ. ಆದರೆ ಒಬ್ಬ ಕ್ರೈಸ್ತನಾಗಲಿ ಮುಸಲ್ಮಾನನಾಗಲಿ, ಹಿಂದುವಾಗಲು ಇಚ್ಛಿಸಿದರೆ ಹಿಂದುವು ಅವನ ಮೇಲೆ ಅಪ್ರಸನ್ನನಾಗುವನು. ಇದರಿಂದ ಹಿಂದುಗಳ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತಿದೆ. ಇವರು ಅಲ್ಪ ವಿಷಯಗಳಿಂದಾಗಿ ತಮ್ಮ ಜಾತಿಯವರನ್ನು ಬಹಿಷ್ಕರಿಸುತ್ತಿದ್ದಾರೆ. ಬಹಿಷ್ಕರಿಸಲ್ಪಟ್ಟವರು ಮುಸಲ್ಮಾನ, ಯಾ ಕ್ರೈಸ್ತ ಮತಕ್ಕೆ ಸೇರಿ ಹಿಂದುಗಳ ಮೇಲೆ ಅತ್ಯಾಚಾರವನ್ನು ನಡೆಸುತ್ತಾರೆ. ಒಬ್ಬನು ಮುಟ್ಟಿದ್ದನ್ನು ಇನ್ನೊಬ್ಬನು ತಿಂದರೆ ಧರ್ಮ ಭ್ರಷ್ಟನಾಗುತ್ತಾನೆಂದು ಹಿಂದುಗಳು ತಿಳಿಯುವರು. ಕೇವಲ ತಿನ್ನುವುದರಿಂದ ಯಾ ಕುಡಿಯುವುದರಿಂದ ಒಬ್ಬನು ಧರ್ಮದಿಂದ ಭ್ರಷ್ಟನಾಗುವುದಿಲ್ಲ, ಎಂಬುದನ್ನು ಇವರು ತಿಳಕೊಂಡಿಲ್ಲ. ಪ್ರತಿಯೊಬ್ಬ ಹಿಂದೂ ಸ್ತ್ರೀ ಪುರುಷರು ತಮ್ಮ ಧರ್ಮದ ತತ್ವಗಳನ್ನು ಪರಧರ್ಮೀಯರಿಗೆ ತಿಳಿಯಪಡಿಸಬೇಕು. ಮತ್ತು ಅವರು (ಪರಧರ್ಮೀಯರು) ಹಿಂದುಗಳಾಗಲು ಇಚ್ಛಿಸಿದರೆ, ಅವರಿಗೆ ಅದಕ್ಕಾಗಿ ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಹಿಂದೂ ಧರ್ಮವು ಹಿಂದುಗಳಿಗೆ ದೇವರಿಂದ ಸಿಕ್ಕಿದ್ದಾಗಿರುತ್ತದೆ. ವೇದವು ಈಶ್ವರಕೃತವಾಗಿದೆ. ವೇದಗಳ ಆಜ್ಞೆಯಂತೆ ನಡೆದುಕೊಳ್ಳುವುದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯವಾಗಿದೆ. ವೇದದಲ್ಲಿ — "ಕೃಣ್ವಂತೋ ವಿಶ್ವಮಾರ್ಯಂ" ಇಡೀ ಜಗತ್ತಿನ ಜನರನ್ನು ಆರ್ಯರನ್ನಾಗಿ ಮಾಡಿರಿ, ಎಂದು ಆಜ್ಞೆ ಇರುತ್ತದೆ. ಆದುದರಿಂದ ಯಾವ ಹಿಂದುವು, ಪರಮತೀಯರು ವೈದಿಕ ಧರ್ಮವನ್ನು ಗ್ರಹಣ ಮಾಡುವುದರಲ್ಲಿ ಸಹಾಯವನ್ನು ಮಾಡುವುದಿಲ್ಲವೋ ಅವನು ಪಾಪವನ್ನು ಮಾಡುತ್ತಾನೆಂದು ತಿಳಿಯಬೇಕು. ಹಿಂದೂ ಧರ್ಮವು ಜಗತ್ತಿನೊಳಗೆ ಪ್ರಸಾರವಾದರೆ ಇಡೀ ಜಗತ್ತಿನ ಕಲ್ಯಾಣವುಂಟಾಗುವುದರಲ್ಲಿ ಸಂದೇಹವಿಲ್ಲ. ಆಗ ಜನರು ಗೋವಿನ ರಕ್ಷಣೆಯನ್ನು

ಮಾಡುವವರಾಗುವರು. ವೈದಿಕ ಸಭ್ಯತೆಯು ಎಲ್ಲೆಲ್ಲಿಯೂ ತುಂಬು ವದು. ಅವನು ತನಗೆ ಶತ್ರು ಎಂಬ ಮಾತೇ ಇರಲಾರದು. ಎಲ್ಲರೂ ಮಿತ್ರತ್ವದಿಂದ ಇರುವರು. ಆದಕಾರಣ ಹಿಂದುಗಳು ಎಲ್ಲಾ ಉಚಿತ ಉಪಾಯಗಳಿಂದ ವೈದಿಕ ಧರ್ಮದ ಪ್ರಚಾರವನ್ನು ಮಾಡಬೇಕು. ಮತ್ತು ಯಾವನಾದರೊಬ್ಬ ವ್ಯಕ್ತಿಯಾಗಲಿ, ಯಾ ಸಮಾಜವಾಗಲಿ ಶುದ್ಧಿಯಾಗಲು (ಮತಾಂತರ ಹೊಂದಲು) ಇಚ್ಛಿಸಿದರೆ ತಕ್ಷಣವೇ ಅವರ ಶುದ್ಧಿಯನ್ನು ಮಾಡಬೇಕು. ಹಿಂದಿನ ಕಾಲದಲ್ಲಿ ನಮ್ಮ ಪೂರ್ವಜರು ಪರರನ್ನು ಶುದ್ಧೀಕರಿಸಿದ ಪ್ರಮಾಣಗಳು ಇತಿಹಾಸದಲ್ಲಿ ತುಂಬಾ ಇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡುತ್ತೇನೆ—

೧—ಬಜಾಜೀ ನಾಯಕ್ ನಿಂಬಾಳಕರ್ ಎಂಬ ಮಹಾರಾಷ್ಟ್ರ ವೀರನನ್ನು ಆದಿಲ್‌ಶಾಹ ಬಾದಶಾಹನು ಬಂಧಿಸಿ ಮುಸಲ್ಮಾನನಾಗಲು ಆಜ್ಞೆಯನ್ನು ತೋರಿಸಿದನು. ಅದಕ್ಕೆ ಅಸಮ್ಮತಿಯನ್ನು ಸೂಚಿಸಿದ್ದರಿಂದ ಭಯವನ್ನು ತೋರಿಸಿದನು. ಕಡೆಗೆ ಬಾದಶಾಹನ ಪುತ್ರಿಯನ್ನು ತನಗೆ ವಿವಾಹಮಾಡಿಕೊಡುವ ಶರ್ತದ ಮೇರೆಗೆ ಮುಸಲ್ಮಾನ ಮತ ವನ್ನು ಸ್ವೀಕರಿಸಿದನು. ನಿಂಬಾಳಕರರಿಗೂ, ಶಿವಾಜಿ ಮಹಾರಾಜ ಕುಟುಂಬಕ್ಕೂ ನಿಕಟ ಸಂಬಂಧವಿತ್ತು. ಆದ ಕಾರಣ ಶಿವಾಜಿಯ ಮಾತೆ ಯವರಾದ ಜೀಜಾ ಬಾಯಿಗೆ ಈ ವರ್ತನೆಯು ಬಹಳ ದುಃಖವನ್ನುಂಟು ಮಾಡಿತು. ಇವರು ಎಲ್ಲಾ ಮಹಾರಾಷ್ಟ್ರ ಮಂಡಲಗಳನ್ನು ಒಟ್ಟು ಗೂಡಿಸಿ ಶಾಸ್ತ್ರ ಆಧಾರದಂತೆ ನಿಂಬಾಳಕರರನ್ನು ಅವರ ಕುಟುಂಬ ಸಹಿತ ಶುದ್ಧೀಕರಿಸಿ ಪುನಃ ತಮ್ಮ ಕುಟುಂಬದೊಳಗೆ ಸೇರಿಸಿಕೊಂಡರು. ಈ ಕುರಿತು ಮುಂದೆ ಯಾರೂ ಆಕ್ಷೇಪ ಮಾಡದಂತೆ ಶಿವಾಜಿ ಮಹಾರಾಜರ ಪುತ್ರಿ ಶ್ರೀಮತಿ ಸಖೂಬಾಯಿಯನ್ನು ನಿಂಬಾಳಕರರ ಔರಸ ಪುತ್ರನಿಗೆ ಕೊಟ್ಟು ವಿವಾಹವನ್ನು ಸಹ ಮಾಡಿದರು.

೨—ತುಲಜೋ ಭಟ್ ಜೋಶೀ ಎಂಬವರನ್ನು ಯವನರು ಪುಸ ಲಾಯಿಸಿ ಭ್ರಷ್ಟರನ್ನಾಗಿ ಮಾಡಿದರು. ಅವರು ಪಶ್ಚಾತ್ತಾಪ ಪಟ್ಟುದ ರಿಂದ ಬ್ರಾಹ್ಮಣರು ಪ್ರಾಯಶ್ಚಿತ್ತದ ಮೂಲಕ ಪುನಃ ಕುಟುಂಬದೊ ಳಗೆ ಸೇರಿಸಿಕೊಂಡರು. ಈ ಕುರಿತು ವಿಘ್ನವನ್ನು ಮಾಡುವವರಿಗೆ

ದಂಡವು ಕೊಡಲ್ಪಡುವುದೆಂದು ಸರಕಾರದ ಹುಕುಂ ಕೂಡ ಹೊರಟಿತ್ತು.

೩—ಗಂಗಾಧರ ರಂಗನಾಥ ಕುಲಕರ್ಣಿ ಎಂಬವರು ಮೊಗಲರ ಸೇವೆಯನ್ನು ಮಾಡುತ್ತಿದ್ದರು. ಕೆಲವು ಸಮಯದ ನಂತರ ಮೊಗಲರು ಇವರನ್ನು ಭ್ರಷ್ಟಪಡಿಸಿ ಬಂದೀಖಾನೆಯಲ್ಲಿಟ್ಟರು. ಅಲ್ಲಿ ಮೊಗಲರ ಆಹಾರವನ್ನು ಉಣ್ಣುತ್ತಾ ಅವರ ಸಹವಾಸದಲ್ಲೇ ಇರಬೇಕಾಯಿತು. ಆ ಮೇಲೆ ಅವರಿಗೆ ದೊಡ್ಡ ಹುದ್ದೆಯು ಸಿಕ್ಕಿತು. ಕೆಲವು ವರ್ಷಗಳ ತರುವಾಯ ಅವರ ಮನಸ್ಸಿನಲ್ಲಿ ಈ ಕುರಿತು ಅನುತಾಪ ಉಂಟಾಗಿ ಸರ್ವಸ್ವವನ್ನು ತ್ಯಜಿಸಿ, ಪುನಃ ತನ್ನ ಕುಟುಂಬದೊಳಗೆ ಸೇರಲು ಇಚ್ಛಿಸಿದರು. ರಾಜಶ್ರೀ ಛಂದೋಗಾಮಾತ್ಯ ಎಂಬ ಪ್ರಸಿದ್ಧ ಪುರುಷರು ಪಂಡಿತರ ಸಭೆಯನ್ನು ಜರಗಿಸಿ, ಎಲ್ಲರ ಸಮ್ಮತಿಯಿಂದ, ಪ್ರಾಯಶ್ಚಿತ್ತದ ಮೂಲಕ ಶುದ್ಧೀಕರಿಸಿ ಪುನಃ ವರ್ಗದೊಳಗೆ ಸೇರಿಸಲ್ಪಟ್ಟರು. ಆ ಮೇಲೆ—"ಇವರ ಬ್ರಾಹ್ಮಣತ್ವದಲ್ಲಿ ಯಾವನು ಸಂದೇಹಪಡುತ್ತಾನೆಯೋ ಅವನು ದೇವ ಬ್ರಾಹ್ಮಣ ದ್ರೋಹಿ, ಮಹಾ ಪಾತಕೀ ಎಂದು ತಿಳಿಯಲ್ಪಡುವದು"- ಈ ರೀತಿ ಆಜ್ಞೆಯನ್ನು ಹೊರಡಿಸಿದರು. ಈ ಘಟನೆಯು ಶಕ ಸಂವತ್ ೧೬೦೮ ಚೈತ್ರ ಶುದ್ಧ ೨ ಸೋಮವಾರ ನಡೆದುದಾಗಿರುತ್ತದೆ.

೪—ಪೇಶ್ವಾ ಸವಾಯಿ ಮಾಧವರಾಯರ ಕಾಲದಲ್ಲಿ ನರಹರಿ ಎಂಬ ಬ್ರಾಹ್ಮಣನೊಬ್ಬನು ಮುಸಲ್ಮಾನನಾಗಿ ಹೋಗಿದ್ದನು. ಪೇಶ್ವೆಯವರ ಆಜ್ಞಾನುಸಾರ ಅವನು ಶುದ್ಧೀಕರಿಸಲ್ಪಟ್ಟನು.

೫—ಪ್ರಥಮ ಬಾಜೀರಾವ ಪೇಶ್ವೆಯವರಿಗೆ, ಹೈದರಾಬಾದದ ನವಾಬರ ಬೇಗಮ್ಮನವರು 'ಮಸ್ತಾನಿ' ಎಂಬ ಹೆಸರಿನ ತನ್ನ ಪುತ್ರಿಯನ್ನು ವಿವಾಹಮಾಡಿ ಕೊಟ್ಟಿದ್ದರು. ಇವರಲ್ಲಿ ಒಂದು ಗಂಡು ಮಗುವು ಸಹ ಹುಟ್ಟಿತ್ತು.*

---

*1, 2, 3 ಈ ಘಟನೆಗಳ ಉಲ್ಲೇಖವು—ಪಂಡಿತ ಮಹಾದೇವ ಶಾಸ್ತ್ರಿ ದಿವೇಕರ್ ಇವರಿಂದ ರಚಿತವಾದ—ಧರ್ಮ ಭ್ರಷ್ಟಾಂಚಿ ಶುದ್ಧೀ ಕರಣ, ಆಣಿ ಶುದ್ಧೀ ಸಂ

ಧರ್ಮ ಗ್ರಂಥದ ಸ್ವಾಧ್ಯಾಯ

ಹಿಂದುಗಳು, ಗೀತಾ, ರಾಮಾಯಣ ಮೊದಲಾದ ಅನೇಕ ಪುಸ್ತಕಗಳನ್ನು ತಮ್ಮ ಧಾರ್ಮಿಕ ಗ್ರಂಥಗಳೆಂದು ತಿಳಿಯುತ್ತಾರೆ. ಆದರೆ ಈ ಎಲ್ಲಾ ಪುಸ್ತಕಗಳ ಮೂಲವು ವೇದವು. ಗೀತಾ, ರಾಮಾಯಣ, ಪುರಾಣ ಮೊದಲಾದ ಎಲ್ಲಾ ಗ್ರಂಥಗಳಲ್ಲಿ ವೇದಗಳ ಮಹಿಮೆಯನ್ನು ಹೊಗಳಿರುವುದನ್ನು ಕಾಣಬಹುದು. ಹಿಂದುಗಳೊಳಗಿನ ಯಾವ ಸಂಪ್ರದಾಯವೂ ವೇದಗಳಿಗೆ ವಿರೋಧವಿಲ್ಲ. ಆದುದರಿಂದ ವೇದಗಳನ್ನು ಓದುವ ಅಭ್ಯಾಸವನ್ನು ಪ್ರತಿಯೊಬ್ಬ ಹಿಂದುವು ಮಾಡಬೇಕು. ಮುಸಲ್ಮಾನರು ಪ್ರತಿದಿನ ಪ್ರಾತಃಕಾಲ ಕುರಾನಿನ ಪಾಠವನ್ನು ಮಾಡುವಂತೆ, ಹಿಂದುಗಳು ವೇದಾಧ್ಯಯನವನ್ನು ಮಾಡಬೇಕು. ನಾವೆಲ್ಲರೂ ದೇವರ ಮಕ್ಕಳಾದುದರಿಂದ ದೇವರ ಜ್ಞಾನೋಪದೇಶಗಳನ್ನು ಬರೆದಿರುವ ವೇದಗಳನ್ನು ಓದುವ ಅಧಿಕಾರವು ನಮಗೆಲ್ಲರಿಗೂ ಇದೆ. ವೇದಗಳನ್ನು ಓದುವುದರಿಂದ ಹಿಂದುಗಳಲ್ಲಿರುವ ಪರಸ್ಪರ ಭೇದಭಾವಗಳೆಲ್ಲಾ ದೂರವಾಗುವುವು ಮತ್ತು ಇದರಿಂದ ತಮ್ಮ ಧರ್ಮದ ಮೇಲೆ ದೃಢವಾದ ಶ್ರದ್ಧೆಯು ಉಂಟಾಗುವುದು. ನಮ್ಮ ಮುಂದಾಳುಗಳು ಮೇಲಿನ ಎಲ್ಲಾ ಉಪಾಯಗಳನ್ನು ಕಾರ್ಯರೂಪದಲ್ಲಿ ತಂದು ಹಿಂದುಗಳ ರಕ್ಷಣೆಯನ್ನು ಮಾಡುವರಾಗಿ ಆಶಿಸುತ್ತೇನೆ.

ಇತಿ.

ಸ್ವಾರ ಎಂಬ ಪುಸ್ತಕದಲ್ಲಿ ಮಾಡಲ್ಪಟ್ಟಿದೆ. 4, 5 ಇವುಗಳು ಶ್ರೀ। ರಾನಡೆಯವರಿಂದ ರಚಿತವಾದ Rise of the Marata Power ಎಂಬ ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ರಾಷ್ಟ್ರಬಂಧು

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

RASHTRA BANDHU, KANNADA WEEKLY, MANGALORE. (S. K.)

ವಾರ್ಷಿಕ ಚಂದಾ ರೂ. ೩-೮-೦. ಅಂಚೆವೆಚ್ಚ ಸೇರಿ ರೂ. ೩-೮-೦.

Proprietor: Dr. U. Rama Rau, Madras. ಸಂಪಾದಕರು: ಕಡೆಂಗೋಡ್ಲು ಶಂಕರಭಟ್ಟರು.

ಆದಿತ್ಯವಾರ, ೨-೪-೧೯೪೪. Sunday 2nd April, 1944 Vol. XVI No. 4

EHTA'S 453 ...T ST. MADRAS

ಮೆಹ್ತಾ ಎಂಡ್ ಸನ್ಸ್ 453 ಮಿಂಟ್ ಸ್ಟ್ರೀಟ್, ಮದ್ರಾಸ್

The Mysore Industrial & Agricultural Marketing Co.,

...ರ್ಕ ವಿಲಾಸ, ಪೋರ್ಟ್‌ರೋಡ್, ಬಂದರ್, ಮಂಗಳೂರು

ಇವರು

ಮೈಸೂರು ಸರಕಾರದವರು ತಮ್ಮ ಕಾರ್ಖಾನೆಯಲ್ಲಿ ತಯಾರಿಸಿದ

ಉತ್ತಮ ತರದ ಮಿಲಾಪಿನ

...ರೆ, ಪಿಕ್ಕಾಸು, ಕತ್ತಿ, ಕೊಡಲಿಗಳು, ಕೈಗಾಡಿಗಳು

ನಾಜೂಕಾದ ಬಾಳಿಕೆಯ

ಚೂರಿ ಕತ್ತರಿಗಳು;

ಇವುಗಳಿಗೆ ಮಂಜೂರಾದ ಸ್ಟೋಕಿಸ್ಟ್ಸ್.

H. O. MAVALI CIRCLE, BANGALORE.

ಸುಖದದಾರಿ

ಸ್ತ್ರೀಪುರುಷರಿಗೆ ಬೇಕಾದ ದಾರಿಯಾವುದು?

ದಾಂಪತ್ಯ ಸುಖಕ್ಕಾಗಿ ಜ್ಞಾನ, ಕಾಮಶಾಸ್ತ್ರ ಪರಿಪೂರ್ಣತೆ ... ಸಚಿತ್ರವಾಗಿ ತಿಳಿಸಿಕೊಡುವ ... ಗ್ರಂಥಗಳನ್ನೋದಿರಿ.

ಪ್ರೇಮಕಲಹ (ಸ್ತ್ರೀ ಅನ್ವಸ್ತ್ರ)	೧-೮-೦
ಪೌರುಷ (ಸಚಿತ್ರ)	೧-೮-೦
ರತಿರಹಸ್ಯ	೧-೮-೦
ಕಾಮದ ಗುಟ್ಟು ,,	೧-೮-೦
ಭ್ರಾಂತಿ, ಲೈಂಗಿಕ ಶಿಕ್ಷಣ	೧-೮-೦
ಸ್ಮರತಿ (ಅನೇಕ ಅನ್ವಸ್ತ್ರ)	೧-೮-೦
ಗರ್ಭನಿರೋಧಕ (ಅನೇಕ ಚಿತ್ರಗಳು)	೧-೮-೦
ದಾಂಪತ್ಯ ದರ್ಶನ ,, (ಹೊಸ ಪುಸ್ತಕ)	೧-೮-೦
ಕಾಮಕುಂಜ	೧-೮-೦
ವಿಕೃತ ಕಾಮ	೧-೮-೦
ಅನಂಗರಂಗ ,,	೧-೮-೦
ವಾತ್ಸ್ಯಾಯನಕಾಮಸೂತ್ರ	೧-೮-೦

ವಿ. ಪಿ. ವೆಚ್ಚ ಬೇರೆ. ... ಬರೆಯಿರಿ.

ಸಮಾಜ ಪುಸ್ತಕಾಲಯ, ಧಾರವಾಡ.

ಸವಿಯೂಟ!

ಸಾಹಿತ್ಯದ ಸವಿಯೂಟಕ್ಕಾಗಿ ಔತಣ!

ಹಂಚಿನಮನೆಯಲಿನೆ

ಶ್ರೀ. ದೇವುಡು ಅವರ "ಘಾಟೇ ಮುದುಕ"

ದಿ|| ಶರತ್‌ಬಾಗಳ "ರಾಜಲಕ್ಷ್ಮಿ"

ಶ್ರೀ. "ಆನಂದಕಂದ" ಮೊದಲಾದವರ

ಸಾಮಾಜಿಕ ಕಾದಂಬರಿಗಳು

ಯುಗಾದಿಯಿಂದ ಯುಗಾದಿಗೆ

೮ ಪುಸ್ತಕಗಳು

ಬಿಡಿ ಪುಸ್ತಕದ ಬೆಲೆ ೧-೮-೦

ವಾರ್ಷಿಕ ಚಂದಾ ೮ ರೂಪಾಯಿ ಮಾತ್ರ. ಈ ಬಗ್ಗೆ ವಿ. ಪಿ. ಕಳಿಸುವದಿಲ್ಲ. ಪೂರ್ಣ ಹಣ ಮುಂಗಡ M.O. ಮೂಲಕ ಕಳಿಸಬೇಕು. ಪ್ರವೇಶ ಧನ ಒಂದು ರೂಪಾಯಿ ಕಳಿಸಿಯೂ ಚಂದಾದಾರರಾಗಬಹುದು. ಇಂಥವರಿಗೆ ಪ್ರತಿ ಪುಸ್ತಕವನ್ನು ವಿ. ಪಿ. ವೆಚ್ಚ ಸೇರಿ ೧-೪-೦ ಗೆ ವಿ. ಪಿ. ಮಾಡಲಾಗುವದು. ವಿವರಕ್ಕೆ ಒಂದಾಣೆ ಅಂಚೆಚೀಟಿ ಕಳಿಸಿರಿ.

ಪ್ರತಿಭಾ ಗ್ರಂಥಮಾಲೆ, ಧಾರವಾಡ

...ತರದ ವಿದ್ಯುಚ್ಛಕ್ತಿನ ಮತ್ತು ಯಾಂತ್ರಿಕ ಸಲಕರಣೆಗಳಿಗೆ

...ರಿದುಕೊಳ್ಳಿರಿ:—

...ಮಣಿ ಮತ್ತು ಕಂಪೆನಿ,

...ಪೋಸ್ಟಾಫೀಸು ರಸ್ತೆ, ಕೊಯಮುತ್ತೂರು.

FOR ALL SORTS OF ELECTRICAL AND OTHER MECHINERY REQUIREMENTS

Apply to:—

Mani & Company,

5/16 Old Post Office Road, Coimbatore

...ತಂಕ ನಿಗ್ರಹ ಮಾತ್ರೆ

...ಹ್ಯದೊಡದ ಬಳಿಕ ಚಿನ್ನ ಮತ್ತು ರಾತ್ರಿ ...ಜನದ ಬಳಿಕ ಅಥರಣವಾಗಿದೆ. ...ಜೀರ್ಣ, ಮಂಕು ಹಿಡಿಯುವಿಕೆ, ನರಗಳ ...ಲತೆಯನ್ನು ಹೋಗಲಾಡಿಸಿ ದೇಹಕ್ಕೆ ಬಲ ...ಮತ್ತು ಆಹಾರವನ್ನು ಒದಗಿಸುವುದು.

32 ಮಾತ್ರೆಗಳ ಡಬ್ಬಿಗೆ ರೂ. 1/4. ...ಳಿಗೆ ನಮ್ಮ ಉಚಿತ ಕೈಪಿಡಿಯನ್ನೋದಿರಿ.

...ತಂಕ ನಿಗ್ರಹ ಫಾರ್ಮಸಿ, 26 ಬ್ರಾಡ್ವೆ, ಮದರಾಸು.

...ರು:—ಶಾ ಕಂಪೆನಿ, ಮಂಗಳೂರು.

...ತ್ರಿ ಪತಿಬಂಧಕಕ್ಕೆ 'ದಂಪತಿ ಸುಖ' ... ಮತ್ತು ಪರಿಣಾಮ ... ಶಾಶ್ವತ. ೪-೦-೦, ತಾತ್ಕಾಲಿಕ ರೂ. ೧-೮-೦.

...ಷ್ಣ ಸ್ವಚ್ಛವಾಗಿಯೂ ಸುಲಭವಾಗಿಯೂ ಹೋಗಲು 'ಚುಂಬಕಿ ರೇಚನಿ.' ಏನೇ ಕಾರಣವಿದ್ದರೂ ೨೪ ಗಂಟೆಗಳಲ್ಲಿ ಪ್ರಸ್ರವಣ ಮಾಡಿಸುತ್ತೆ. ರೂ. ೨-೧೨-೦. ವಿ. ಪಿ. ೧೨ ಆಣೆ ಕರ್ಚು ಪ್ರತ್ಯೇಕ ...

...ಷ ಮದನ ವಿಲಾಸ ರಸಾಯನ'ಕಳೆದು ಹೋದ ಪೌರುಷವನ್ನು ಮರಳಿ ಕೊಟ್ಟು ಮೆದುಳು ಶಕ್ತಿಯನ್ನು ಹೆಚ್ಚಿಸಿ ಧಾತು ವೃದ್ಧಿಮಾಡಿ ವೈವಾಹಿಕ ಜೀವನವನ್ನು ಸುಖಕರಗೊಳಿಸುತ್ತೆ. ರೂ. ೩/೮/; ವಿ. ಪಿ. ೧೨ ಆಣೆ.

M. Kavyatirtha (R-M.)

..., Cornwallis Street, CALCUTTA.

...:—Shah Company, Mangalore.

...I. RAJU CHETTIAR

ದಕ್ಷಿಣ ಕನ್ನಡ

ಸೆಂಟ್ರಲ್ ಕೊ-ಒಪರೇಟಿವ್ ಬೇಂಕ್, ಲಿಮಿಟೆಡ್

ಒಂದು ವರ್ಷ ಮ್ಯಾದೆಯ ನಿರಖು ಠೇವಣಾತಿಗಳ ಮೇಲೆ ಶೇಕಡಾ 3ರ ದರದಲ್ಲಿ ಬಡ್ಡಿ ಕೊಡಲಾಗುತ್ತದೆ

ಠೇವಣಾತಿಯಾಗಿಡತಕ್ಕ ಮೊಬಲಗುಗಳನ್ನು ಕೆಳಗಿನ ಸ್ಥಳಗಳಲ್ಲಿರುವ ನಮ್ಮ ಏಜನ್ಸಿಗಳಲ್ಲಿಯೂ ಕಟ್ಟಬಹುದು.

ಉಡುಪಿ, ಕುಂದಾಪುರ, ಕಾರ್ಕಳ, ಪುತ್ತೂರು, ಕಾಸರಗೋಡು, ಬೈಂದೂರು, ಮೂಡಬಿದ್ರೆ, ಮೂಲ್ಕಿ, ಬೆಳ್ತಂಗಡಿ, ಸುಳ್ಯ, ಹೊಸದುರ್ಗ, ಪೆರ್ಡಾಲ.

ಕೊಡಿಯಾಲ್‌ಬೈಲು, ಮಂಗಳೂರು, 25-1-1944.

U. Shantha Rama Rao, ಕಾರ್ಯದರ್ಶಿ.

— ಮುಟ್ಟಾಗುವಿಕೆ —

ಹಲ ತಿಂಗಳಿಂದ ಕಟ್ಟಾಗಿದ್ದರೂ, ಯಾ ಇನ್ನಾವ ಕಾರಣವಿದ್ದರೂ 'ಕುಮಾರಿ' (Pills) ಪತ್ತಿ ನಿರುಪದ್ರವಿ. ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು. ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/-ದೀರ್ಘಕಾಲದ ಮತ್ತು ಕಠಿನತರ ಸಂದರ್ಭಗಳಿಗೆ ವಿಶೇಷ ತಯಾರಿ. ರೂ. 5-(ವಿ. ಪಿ. 12 ಆಣೆ ಹೆಚ್ಚಿಗೆ) Mrs. P. Deveo. F. D. S. (R.B.), Tollygunge, Calcutta.

ಸ್ಟಾಕಿಸ್ಟರು: ಫೂಟ್ವೇರ್ ಸ್ಟೋರ್ಸ್, ಮಂಗಳೂರು

ವಜ್ರ ಸೆಟ್ಟಿಂಗಿನಲ್ಲಿ ಅದ್ವಿತೀಯ ಕೌಶಲ್ಯ

ಎಚ್. ಕೃಷ್ಣಗಣಪತಿಶೇಟ್

ವಜ್ರ, ಪಾಚಿಗಳು ಮತ್ತು ಕಲಾಕೃತಿಯ ಆಭರಣ...

ದಿ ಝಂಡೂ ಫಾರ್ಮಾಸ್ಯುಟಿಕಲ್ ವರ್ಕ್ಸ್, ಬೊಂಬೈ ಇವರ

1. ದ್ರಾಕ್ಷಾ ಆಸವ:— ಈ ರಸಾಯನವು ಜ್ವರದಿಂದುಂಟಾಗುವ ನಿಶ್ಶಕ್ತಿ, ಶರೀರದೊಳಗುಂಟಾಗುವ ವಿಷ, ಕಫ, ಗಂಟಲು ರೋಗ ಇವುಗಳನ್ನು ಪರಿಹರಿಸುವುದು.

2. ಚ್ಯವನ ಪ್ರಾಶ:— ಇದೇ ಜೀವನದ ಶಕ್ತಿ ಸುಖ ಸಂತೋಷ ಮತ್ತು ದೀರ್ಘಾಯುಷ್ಯದಬೀಜ

3. ಕೇಸರಿ ಜೀವನ:— ಗಂಡಸರಿಗೆ ಅಮೃತಪ್ರಾಯ. ವಿದ್ಯಾರ್ಥಿಗಳಿಗೂ ವ್ಯಾಪಾರಸ್ಥರಿಗೂ ಅಧಿಕ ಸರಿಗೂ ... ಸೇವನೆಯಿಂದ ಮೆದುಳು ಶಕ್ತಿಯು ಪುಷ್ಟವಾಗುವುದು

4. ಅಶೋಕಾರಿಷ್ಟ:— ಹೆಂಗಸರಿಗೆ ಸಂಜೀವಿನಿ. ಯಾವುದೇ ತರದ ರೋಗಗಳಿರಲಿ, ಅಶೋಕಾರಿಷ್ಟವೆ ಅವರಿಗೆ ಸ್ತ್ರಾಣಶಕ್ತಿ ಜೀವಪ್ರದವಾಗಿದೆ.

5. ಆಮಲಾ ತೈಲ:— ಕಣ್ಣಿಗೆ ತಂಪನ್ನುಂಟುಮಾಡುವುದು. ಮೆದುಳಿಗೆ ಶಕ್ತಿಯುಂಟಾಗುವುದು ಕೂದಲುಗಳನ್ನು ಕಪ್ಪಾಗಿ ಉದ್ದವಾಗಿಯೂ ನಯವಾಗಿಯೂ ಮಾಡುವುದಲ್ಲದೆ ಹೊಳಪನ್ನುಂಟು ಮಾಡುವುದು.

6. ರ್ಯಾಕ್ಟೊ-ಫಾಸ್ಫೋ-ಮಾಲ್ಟ್:— ಎಂಬ ರಸಾಯನವನ್ನು ಪ್ರಸಿದ್ಧ ಡಾಕ್ಟರುಗಳು ಅಪ್ರತಿಮ ಟಾನಿಕ್ಕೆಂದು ಮುಕ್ತಕಂಠದಿಂದ ಹೊಗಳುತ್ತಿದ್ದಾರೆ. ಒಮ್ಮೆ ಪರೀಕ್ಷಿಸಿ ಆನಂದಪಡಿರಿ

ಮಂಗಳೂರು ಏಜಂಟ್:— 1 ಯಲ್. ಯನ್. ಶರ್ಮ, ಕಾರ್ನಾಡ್ ಸದಾಶಿವ ರಾವ್‌ರೋಡ್, ಮಂಗಳೂರು

ZANDU

2 ಶಾ ಕಂಪೆನಿ, ಮಂಗಳೂರು

3 ವಿ. ವಿ. ಶೆಣೈ, ಕಾರ್ಕಳ.

ಕಸ್ತೂರಿ ಮಿಶ್ರಣವೆಂಬ ದಶಮೂಲ ರಸಾಯನ

ಇದು ಪ್ರಸವಿಸಿದುದರಿಂದ ಉಂಟಾದ ಎಲ್ಲಾ ಆಯಾಸವನ್ನು ಹೋಗಲಾಡಿಸಿ ಆಶ್ವಾಸನೆಯನ್ನು ಉಂಟುಮಾಡುವುದು. ಕಶವನ್ನು ಶ್ರಯದಿಂದ ಹೊರಗೆ ಮಾಡುವುದು. ಗರ್ಭಕೋಶದಲ್ಲಿ ದುಷ್ಟ ರಕ್ತವನ್ನು ನಿಲ್ಲಗೊಡದೆ ಹೊರಗೆ ಸುರಿಸುವುದು. ಗರ್ಭಕೋಶವನ್ನು ಆಕುಂಚಿಸಿ ಸ್ಥಾನದಲ್ಲಿ ನಿಲ್ಲಿಸಿ ವೇದನೆಯನ್ನು ಶಾಂತಗೊಳಿಸುವುದು. ನಂಜಿನ ಜ್ವರಕ್ಕೆ ಅವಕಾಶಕೊಡಲಾರದು. ಅನಂತರ ಈ ರಸಾಯನವನ್ನು 2 ತಿಂಗಳುಗಳ ಸಮಯ ಸೇವಿಸಿದರೆ ಶರೀರದ ರಕ್ತ ಧಾತುವು ಅಭಿವೃದ್ಧಿಯಾಗಿ ಸುಖಭರಾಗಿ ಶರೀರವು ಪುಷ್ಟಿಯಾಗುವುದು. ಜೀರ್ಣವಿದ್ದು, ಮಲವಿಸರ್ಜನೆಗಳು ಕ್ರಮದಂತೆ ನಡೆಯುವುವು. ಮಗುವಿನ...

ಚಿತ್ರವಾಣಿ

Anglo-Kannada Film Monthly

743

IS LENGTHY PICTURE A NECESSITY

★

SOCIETY GIRLS AND FILM INDUSTRY

★

ನಳಿನಿಯು ಪಾಪಿಯೆ ?

★

ಲೀಲಾ ಕಂಡ ಕನಸು

★

ಚಿತ್ರ ವಿಮರ್ಶೆ

ಇತ್ಯಾದಿ

★

CHITRAVANI

AUGUST 1943

ಬೆಲೆ ಒಂದಾಣೆ

ಡಾಕ್ಟರ್ ಲೀಲಾ



ಮೇ

2 ANNAS

KIRTHI KIRANA

ಸೇವಾ ಸದನ

ತ್ರೈಮಾಸಿಕ ಪತ್ರಿಕೆ.

ಸಂಪುಟ ೩	ತಾರಣ ಚೈತ್ರ ಶುದ್ಧ ೨ 25-3-44	ಸಂಚಿಕೆ ೩

ಸೇವಾಸದನ-ಚಿದಂಬರಾಶ್ರಮ, ಗುಬ್ಬಿ.

ವಾರ್ಷಿಕ ಚಂದಾ 1-4-0 ರೂ. ಮಾತ್ರ.

ಶಾರದಯಾಮಿನಿ

ಪ್ರಬುದ್ಧ

ಕರ್ನಾಟಕ

ಸ್ವಭಾನು ಸಂವತ್ಸರ] —೯೭— [ಸಂಕ್ರಾಂತಿ ಸಂಚಿಕೆ

Shimoga Dist. Karnataka

ಮೈಸೂರು :
ಮೈಸೂರು ವಿಶ್ವವಿದ್ಯಾನಿಲಯ
೧೯೪೪

ಸಂಪುಟ ೨೫] [ಸಂಚಿಕೆ ೩

ಮಲಿತ ಕೊಳಗಳಾಗಿಯುಳಿಯೆ
ಮಾಡಲೇಸು ಸಾಗದೆ ? '

ಎಂಬುದಿದೇ ನಿನ್ನ ಮೊಳಗೆ
ಏಸು ಹೇಳು ಸೀರದ !
ಬರವುಹೋಗು ಬರಿಲಹರಿಯೆ
ಸ್ವೈರಗತಿಯ ನಾರದ !

ಬಂದು ಬೆರೆತು ಎಲ್ಲಿ ಏಸೊ
ತೋರಿದಲ್ಲಿ ಸುರಿಯುತ
ಮರೆಗೆ ಸಾರಿ ಇರುವೆಯೇಸೊ
ಲೀಲೆಯಲ್ಲಿ ಸುರಿಯುತ ?

ರಂ. ಶ್ರೀ. ಮುಗಳಿ.

ಕನ್ನಡ ನಾಡಿನ ಚಿನ್ನದ ಗಣಿಗಳು

ಪೀಠಿಕೆ

ಕವಿ ನಮ್ಮ ನಾಡನ್ನು ಚಿನ್ನದ ನಾಡೆಂದು, ಗಂಧದ ಗುಡಿಯೆಂದು, ಹಾಡಿ ವರ್ಣಿಸಿದರು. ಇದು ಬರಿಯ ಅಲಂಕಾರದ ಮಾತಲ್ಲ. ಅಕ್ಷರಶಃ ನಿಜವಾದ ಸಂಗತಿ. ನಮ್ಮ ನಾಡು ನಿಜವಾಗಿಯೂ ಚಿನ್ನದ ನಾಡು; ಗಂಧದ ಗುಡಿ.

ಚಿನ್ನ ಒಂದೇ ಅಲ್ಲ ನಮ್ಮ ನಾಡಿನ ನೆಲದಲ್ಲಿ ದೊರೆಯುವುದು. ಅನೇಕ ಇತರ ಖನಿಜಗಳಿಗೆ ಇಲ್ಲಿನ ಶಿಲೆಗಳು ಭಂಡಾರದಂತಿವೆ. ಚಿನ್ನ ಕೂಡ ಕೋಲಾರ ಪ್ರದೇಶದಲ್ಲಿ ಒಂದೇ ಕಡೆಯೇ ಅಲ್ಲ ದೊರೆಯುವುದು. ದೇಶದ ಉದ್ದಗಲವೂ ಚಿನ್ನ ಕ್ಕಾಗಿಯೇ ಕೆಲಸಮಾಡಿದ ಅನೇಕ ಹಳೆಯ ಗಣಿಗಳಿವೆ. ತುಂಗಭದ್ರೆ ಹರಿದು ತೊಯಿಸುವ ಪ್ರದೇಶದಲ್ಲೆಲ್ಲ ಚಿನ್ನದ ಸಣ್ಣ ರೇಕುಗಳು ನದಿಯ ಮರಳಿನಲ್ಲಿ ದೊರೆಯುತ್ತವೆ. ಹೊನ್ನಾಳಿ, ಹೊನ್ನೇಹಟ್ಟಿ, ಹೊನ್ನೇಮರಡಿ, ಹೊನ್ನೇಬಾಗಿ, ಹೊನ್ನೂರು, ಹೊನ್ನಾವರ ಈ ಹೆಸರುಗಳೇ ಅಲ್ಲಿ ಚಿನ್ನವಿದೆ ಎನ್ನುವುದಕ್ಕೆ ಸೂಚನೆ ಯಾಗಿವೆ. ಹೀಗೆ ನಮ್ಮ ದೇಶವೆಲ್ಲ ಹರಡಿರುವ ಈ ಬೆಲೆಬಾಳುವ ಲೋಹ, ನಮ್ಮ ದೇಶದ ಖನಿಜಗಳಲ್ಲೆಲ್ಲ ಅತಿ ಮುಖ್ಯಸ್ಥಾನವನ್ನು ಪಡೆದಿದೆ. ನಮ್ಮ ದೇಶದಲ್ಲಿನ ಚಿನ್ನದ ಚರಿತ್ರೆಯನ್ನು ಚಿತ್ರಿಸುವುದೇ ಈ ಲೇಖನದ ಉದ್ದೇಶ. ಭೂಮಿಯಲ್ಲಿ ಚಿನ್ನ ಸಿಗುವ ರೀತಿ, ಮುಖ್ಯಮುಖ್ಯವಾದ ಗಣಿಗಳು, ಕೋಲಾರದ ಗಣಿಯ ಚರಿತ್ರೆ, ಅಲ್ಲಿನ ಕಾರ್ಯ, ಅದರಿನಿಂದ ಚಿನ್ನವನ್ನು ಪಡೆಯುವ ರೀತಿ, ಈ ವಿವರಗಳನ್ನೂ ಇನ್ನು ಮುಂದೆ ನಮ್ಮ ದೇಶದಲ್ಲಿ ಚಿನ್ನಕ್ಕೆ ಯಾವ ಭವಿಷ್ಯ ಕಾದಿದೆ ಎನ್ನುವುದನ್ನೂ ಇಲ್ಲಿ ಪ್ರಸ್ತಾಪಮಾಡಲಾಗಿದೆ.

ಚಿನ್ನದ ಚರಿತ್ರೆ

ಚಿನ್ನಕ್ಕಿರುವ ಪ್ರಾಶಸ್ತ್ಯ ಏಕೆ? ಮಾನವ ಕುಲ ಮೊದಲಾದಂದಿನಿಂದ ಈವರೆಗೂ ಚಿನ್ನಕ್ಕೆ ದೊಡ್ಡ ಸ್ಥಾನ ಉಂಟು. ಚಿನ್ನದ ಮಿರುಗುವ ಹೊಂಬಣ್ಣ ಮೊದಲಿಗೆ ಮನುಷ್ಯನ ಮನಸ್ಸನ್ನು ತನ್ನ ಕಡೆಗೆ ಸೆಳೆಯಿತು. ಆ ಹೊಂಬಣ್ಣ ಎಷ್ಟು ಕಾಲವಾದರೂ ಕಂದದೆ ಕುಂದದೆ ಇದ್ದುದನ್ನು ಕಂಡಮೇಲೆ ಆ ಲೋಹ ಇನ್ನೂ ಒಲಿಯಿತು. ಜೊತೆಗೆ ಚಿನ್ನ ಮೃದುವಾದುದರಿಂದ ಅದನ್ನು ಯಾವ ಆಕಾರಕ್ಕೆ

ಬೇಕಾದರೂ ಬಗ್ಗಿಸಿಕೊಳ್ಳುವುದು ಸಾಧ್ಯವಾಗಿ, ವಿಧವಿಧವಾದ ಆಭರಣಗಳನ್ನು ಮಾಡಿಕೊಂಡು ಸಿಂಗರಿಸಿಕೊಳ್ಳಲು ಸಾಧ್ಯವಾಯಿತು. ಚಿನ್ನ ಬಹು ತೂಕವಾಗಿರುವುದರಿಂದಲೂ, ಬಹು ವಿರಳವಾಗಿ ದೊರೆಯುವುದರಿಂದಲೂ, ಕೆಡದೆ ಇರುವ ಕಾರಣದಿಂದಲೂ ನಾಣ್ಯಕ್ಕೆ ಬಹು ಯೋಗ್ಯವಾದ ಲೋಹವಾಗಿ ಕಂಡಿತು. ಈ ಎಲ್ಲ ಕಾರಣಗಳ ದೆಸೆಯಿಂದ ಇನ್ನು ಯಾವ ಲೋಹವೂ ಪಡೆಯದ ಸ್ಥಾನವನ್ನು ಚಿನ್ನ ಮೊದಲಿಂದಲೇ ಪಡೆಯಿತು.

ದೇಶದಲ್ಲಿನ ಚಿನ್ನವೆಲ್ಲ ಸ್ಥಳದ ಚಿನ್ನದ ಗಣಿಗಳಿಂದ ಬಂದುದೇ. ಚಿನ್ನದ ಚರಿತ್ರೆ ಬಹು ಹಳೆಯದು. ನಮ್ಮ ದೇಶದಲ್ಲಿನ ಮೂಲನಿವಾಸಿಗಳು ಚಿನ್ನವನ್ನು ಬಳಸುತ್ತಿದ್ದರು. ಆದರಿಂದ ತರತರದ ಒಡವೆಗಳನ್ನು ಮಾಡುವಷ್ಟು ಚತುರರಾಗಿದ್ದರು. ಆರ್ಯರು ಹಿಂದೂಸ್ಥಾನಕ್ಕೆ ಬರುವ ಮೊದಲೇ ಇಲ್ಲಿ ನೆಲಸಿದ್ದ ದ್ರಾವಿಡರು ಬಹು ಸಂಸ್ಕಾರ ಹೊಂದಿದ್ದವರಾಗಿದ್ದು ಮೆಸೊಪೊಟೇಮಿಯಾ, ಈಜಿಪ್ಟ್ ಮೊದಲಾದ ದೇಶಗಳೊಂದಿಗೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದರು. ಇಲ್ಲಿಂದ ತೇಗದ ಮರವನ್ನೂ ಬಂಗಾರವನ್ನೂ ಆ ದೇಶಗಳಿಗೆ ಕಳುಹಿಸುತ್ತಿದ್ದರು. ನಮ್ಮ ದೇಶದಲ್ಲಿ ಕಾಣಬರುವ ಅನೇಕ ಹಳೆಯ ಗಣಿಗಳು ಈ ಅತಿ ಪ್ರಾಚೀನಕಾಲಕ್ಕೆ ಸೇರಿದುವೇ. ಮುಂದೆ ಹಿಂದೂಸ್ಥಾನ, ಚರಿತ್ರೆಯ ಉದ್ದಕ್ಕೂ ದೊಡ್ಡ ರಾಷ್ಟ್ರವಾಗಿ ಬಾಳಿತು, ಬೆಳೆಯಿತು. ಮೊಗಲರ ಆಸ್ಥಾನದ ವೈಭವವನ್ನು ವಿಜಯನಗರದ ಅರಸರ ಸಂಪತ್ತನ್ನು ಕಂಡು ಬೆರಗುಗೊಳ್ಳದವರಾರು! ಇಷ್ಟೆಲ್ಲ ಚಿನ್ನ ನಮ್ಮ ದೇಶದಲ್ಲಿಯೇ ದೊರೆಯಿತೆ ಎನ್ನುವುದು ಸಂದೇಹ. ಇಷ್ಟು ಹೇರಳವಾದ ಚಿನ್ನವನ್ನು ಒದಗಿಸಿರಬಹುದಾದ ಹಳೆಯ ಗಣಿ ಅಥವಾ ಗಣಿಗಳು ನಮ್ಮ ದೇಶದ ಗಡಿಯ ಒಳಗೆ ಈವರೆಗೆ ಕಂಡುಬಂದಿಲ್ಲ. ನಮ್ಮ ಪೂರ್ವಿಕರು ದೇಶದ ಎಲ್ಲ ಗಣಿಗಳಿಂದ ಪಡೆದಿರಬಹುದಾದ ಚಿನ್ನದ ಒಟ್ಟು ಮೊತ್ತ ಮೊದಲ ಮುವ್ವತ್ತು ವರ್ಷಗಳ ಅವಧಿಯಲ್ಲಿ ಕೋಲಾರದ ಗಣಿಯಿಂದ ತೆಗೆದ ಚಿನ್ನದ ಮೊತ್ತವನ್ನು ಮುಟ್ಟಿರಲಾರದೆಂದು ಪಂಡಿತರು ಅಭಿಪ್ರಾಯಪಡುತ್ತಾರೆ.[1]

ಭೂಮಿಯಲ್ಲಿ ಚಿನ್ನ ಸಿಗುವ ರೀತಿ

ನೀರಿನ ವಸತಿ ಇದ್ದಕಡೆಯೇ ಮೊದಲು ನೆಲಸಿದ ಜನ, ಹಳ್ಳಗಳ ದಂಡೆಯ ಮಣ್ಣಿನಲ್ಲಿ ಸೇರಿದ್ದ ಚಿನ್ನವನ್ನೇ ಮೊದಲು ಗುರುತಿಸಿ ಅದನ್ನು ಸಂಗ್ರಹಿಸಿರಬೇಕು. ಭೂಮಿಯ ಮೇಲುಭಾಗದ ಶಿಲೆಗಳು, ಬಿಸಿಲು ಗಾಳಿ ಮಳೆಗಳ ಹಾವಳಿಗೆ ಸಿಕ್ಕಿ

---

[1] W. F. Smeeth. *Mineral Resources of Mysore*, Bul. No. 7, 4, (1916) Mysore Geological Department.

ಚೂರುಚೂರಾಗುತ್ತವೆ. ಎಲ್ಲ ಕಲ್ಲಿನಂತೆಯೇ ಚಿನ್ನ ಸೇರಿರುವ ಬೆಣಚುಕಲ್ಲೂ ಚೂರಾಗುತ್ತದೆ. ಹೀಗೆ ಸುಚ್ಛಾದ ಚಿನ್ನ ಬೆರೆತಿರುವ ಕಲ್ಲನ್ನು ಹತ್ತಿರದ ಹಳ್ಳವೋ ನದಿಯೋ ದೂರ ಒಯ್ಯುತ್ತದೆ. ದೂರಹೋದಂತೆ ಕಲ್ಲು ಮತ್ತೂ ಪುಡಿಯಾಗುತ್ತ ಹೋಗಿ, ಕಲ್ಲಿನಲ್ಲಿ ಸೇರಿದ್ದ ಚಿನ್ನ ಬೇರೆಯಾಗಿ ಹಳ್ಳಗಳಲ್ಲಿನ ಮೆಕ್ಕಲುಮಣ್ಣಿನಲ್ಲಿ ಬೆರೆಯುತ್ತದೆ. ಮೂಲಸ್ಥಾನದಿಂದ ದೂರ ಹೋದಂತೆಲ್ಲ ಚಿನ್ನದ ಕಣ ಸಣ್ಣದಾಗುತ್ತ ಹೋಗುತ್ತದೆ; ಹತ್ತಿರ ಬಂದಂತೆ ರಾಗಿಯ ಕಾಳಿನಷ್ಟು, ಜೋಳದ ಕಾಳಿನಷ್ಟು ದೊಡ್ಡ ಚೂರುಗಳು ಸಿಕ್ಕುತ್ತವೆ.

ಮೇಲಿನ ಅಂಶವನ್ನು ಗಮನಕ್ಕೆ ತೆಗೆದುಕೊಂಡರೆ, ಚಿನ್ನ ಭೂಮಿಯಲ್ಲಿ ಸಿಕ್ಕುವ ರೀತಿಯಲ್ಲಿ ಎರಡು ಮುಖ್ಯ ವಿಧಗಳನ್ನು ನಾವು ಗುರುತಿಸಬಹುದು. ಒಂದನೆಯದು ಕಲ್ಲಿನಲ್ಲಿ ಸೇರಿರುವ **ಮೂಲಚಿನ್ನ.** ಎರಡನೆಯದು ಕಲ್ಲಿನಿಂದ ಬೇರೆಯಾಗಿ ಹಳ್ಳದ ಮಣ್ಣಿನಲ್ಲಿ, ನದಿಯ ಮೆಕ್ಕಲಿನಲ್ಲಿ ಸೇರಿರುವ **ಮೆಕ್ಕಲುಚಿನ್ನ.**

i. **ಮೂಲಚಿನ್ನ**—ಮೂಲಚಿನ್ನ ಕಲ್ಲಿನಲ್ಲಿ ಬೆರೆತಿರುತ್ತದೆ. ಇನ್ನು ಆ ಕಲ್ಲಿನ ಕುಲವೇನು? ನೆಲೆಯೇನು? ತಿಳಿಯೋಣ. ಬೆಣಚುಕಲ್ಲು ಸಾಮಾನ್ಯವಾಗಿ ಎಲ್ಲರೂ ನೋಡಿರುವ, ಗುರುತಿಸುವ ಕಲ್ಲು. ಮೂಲಚಿನ್ನವೆಲ್ಲ ಮುಖ್ಯವಾಗಿ ಈ ಬೆಣಚು ಕಲ್ಲಿನಲ್ಲಿ ಬೆರೆತಿರುತ್ತದೆ. ಎಲ್ಲ ಬೆಣಚುಕಲ್ಲಿನಲ್ಲಿಯೂ ಚಿನ್ನ ಬೆರೆತಿದೆ ಎಂದರ್ಥವಲ್ಲ. ಕೆಲವು ವಿಶೇಷ ಸಂದರ್ಭಗಳಲ್ಲಿ ರೂಪುಹೊಂದಿದ ಬೆಣಚಿನಲ್ಲಿ ಮಾತ್ರ ಚಿನ್ನ ಸೇರಿರುತ್ತದೆ. ಈ ಸಂದರ್ಭಗಳು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯವು. ನಮ್ಮ ದೇಶದಲ್ಲಿನ ಸ್ಥಿತಿಯನ್ನು ಮಾತ್ರ ಇಲ್ಲಿ ವಿವರಿಸಿದೆ.

ಧಾರವಾಡ ಪದರುಶಿಲೆಗಳು. ನಮ್ಮ ದೇಶದಲ್ಲಿ ಕಾಣಬರುವ ಅತಿ ಪುರಾತನವಾದ ಶಿಲಾಸಮುದಾಯಕ್ಕೆ ಧಾರವಾಡ ಪದರುಶಿಲೆ (Dharwar Schists) ಎಂದು ನಾಮಕರಣಮಾಡಿದಾರೆ. ಶ್ರೀರಂಗಪಟ್ಟಣದಿಂದ ಹಿಡಿದು ಧಾರವಾಡದ ಆಚೆಗೂ ಅಲ್ಲೊಂದು ಇಲ್ಲೊಂದರಂತೆ ಹಂಚಿಹೋಗಿ ಹಬ್ಬಿರುವ ವಿಶೇಷತರದ ಶಿಲಾಸಮುದಾಯಕ್ಕೆ ಈ ಹೆಸರು ಅನ್ವಯಿಸುತ್ತದೆ. ಧಾರವಾಡ ಪದರುಶಿಲೆಗಳ ಹರವನ್ನು ಪಕ್ಕದ ನಕ್ಷೆಯಲ್ಲಿ ತೋರಿಸಿದೆ (ನಕ್ಷೆ 1). ಮೊದಲು ಈ ಶಿಲೆಗಳನ್ನು ಧಾರವಾಡದ ಹತ್ತಿರ ಗುರುತಿಸಿದ್ದಾದ್ದರಿಂದ ಧಾರವಾಡದ ನಂಟು ಮೈಸೂರಿಗೂ ಅಂಟಿತು. ಸಾಮಾನ್ಯವಾಗಿ ಈ ಸಮುದಾಯಕ್ಕೆ ಸೇರಿದ ಶಿಲೆಗಳು ಪದರಪದರವಾಗಿ, ಹಾಳೆಹಾಳೆಯಾಗಿ ಬಿಟ್ಟುಕೊಳ್ಳುವ ಕಾರಣದಿಂದ ಈ ತರದ ಶಿಲೆಗಳನ್ನು ಪದರುಶಿಲೆ ಎಂದು ಕರೆಯುತ್ತಾರೆ. ಈ ಪದರುಶಿಲೆಗಳಲ್ಲಿ ಎರಡು ಮುಖ್ಯ ಶಿಲಾರೂಪಗಳನ್ನು ನಾವು ಗುರುತಿಸಬಹುದು. ಒಂದು ಕಪ್ಪಗಿರುವ ಹಾರನ್‌ಬ್ಲೆಂಡ್ (hornblende) ಇಂದ ಕೂಡಿದ ಶಿಲೆ.

ಇದು ಮುಖ್ಯವಾಗಿ ಕೋಲಾರ ಪ್ರಾಂತದಲ್ಲಿ ವಿಶೇಷವಾಗಿ ಹರಡಿದೆ. ಎರಡನೆಯು ಶಿಲಾ ರೂಪ ತಿಳಿ ಹಸುರುಬಣ್ಣದ ಕ್ಲೋರೈಟಿನಿಂದ (chlorite) ಕೂಡಿದುದು. ಇದು ವಿಶೇಷವಾಗಿ ಶಿವಮೊಗ್ಗ, ಚಿತ್ರದುರ್ಗ ಪ್ರಾಂತಗಳಲ್ಲಿ ಕಾಣುತ್ತದೆ.

ಬೆಣಚುಕಲ್ಲಿನ ಸಿರಗಳ ಲಕ್ಷಣ. ಬೆಣಚುಕಲ್ಲಿನ ಸಿರಗಳು ಸಾಮಾನ್ಯವಾಗಿ ಎಲ್ಲ ಕಾಲದ ಎಲ್ಲ ತರದ ಶಿಲೆಗಳಲ್ಲಿ ಹರಡಿದ್ದರೂ, ಚಿನ್ನ ಸಿಗುವ ದೃಷ್ಟಿಯಿಂದ ಧಾರವಾಡ ಪದರುಶಿಲೆಗಳಲ್ಲಿ ಕಂಡುಬರುವ ಬೆಣಚಿನ ಸಿರಗಳು ಮಾತ್ರ ಮುಖ್ಯವಾದುವು. ಚಿನ್ನವನ್ನು ಹುಡುಕಹೋಗುವವರ ಗಮನವೆಲ್ಲ ಈ ಪದರುಶಿಲೆಗಳಲ್ಲಿ ಸೇರಿರುವ ಬೆಣಚುಕಲ್ಲಿನ ಸಿರಗಳ ಕಡೆಗೇ ಇರುತ್ತದೆ. ಈ ಸಿರಗಳಲ್ಲಿಯೂ ನಾವು ಎರಡುತರದವನ್ನು ಗುರುತಿಸಬಹುದು. ಕಪ್ಪು ಹಾರನ್‌ಬ್ಲೆಂಡ್ ಪದರುಶಿಲೆಯೊಂದಿಗೆ ಕಾಣುವ ಬೆಣಚಿನ ಸಿರಗಳು ಸಾಮಾನ್ಯವಾಗಿ ಬೂದುಬಣ್ಣದವಾಗಿರುತ್ತವೆ. ಕೋಲಾರ ಪ್ರಾಂತದ ಬೆಣಚೆಲ್ಲವೂ ಈ ಬಗೆಯದು. ಶಿವಮೊಗ್ಗ, ಚಿತ್ರದುರ್ಗ ಪ್ರಾಂತಗಳಲ್ಲಿ ಹರಡಿರುವ ಕ್ಲೋರೈಟಿನಿಂದ ಕೂಡಿದ ಹಸುರು ಕಲ್ಲುಗಳೊಡನಿರುವ ಬೆಣಚು ಬಿಳುಪಾಗಿರುತ್ತದೆ. ಈ ಎರಡುತರದ ಬೆಣಚಿನಲ್ಲಿಯೂ ಬಂಗಾರ ಸೇರಿರುತ್ತದೆ.

ಬಂಗಾರ ಕಲ್ಲಿನಲ್ಲಿ ಯಾವರೀತಿ ಸೇರಿರುತ್ತದೆ. ಸಾಮಾನ್ಯವಾಗಿ ಕಲ್ಲಿನಲ್ಲಿ ಸೇರಿರುವ ಬಂಗಾರ ಕಣ್ಣಿಗೆ ಕಾಣುವುದಿಲ್ಲ. ಸಮೃದ್ಧಿಯಾದ ಪ್ರದೇಶಗಳಿಂದ ಬಂದ ಬೆಣಚಿನಲ್ಲಿ ಮಾತ್ರ ಚಿನ್ನ ಕೂದಲು ಎಳೆಯಷ್ಟು ಸಣ್ಣಾಗೆ, ಸಣ್ಣ ಸಣ್ಣ ರೇಕುಗಳಾಗಿ ಕಾಣುತ್ತದೆ. ಒಂದು ಟನ್ ಬೆಣಚುಕಲ್ಲಿನಲ್ಲಿ ಆರು ಪೆನಿವೇಟು (೧ ಪೆನಿವೇಟು = ೨೪ ಗುಲಗಂಜಿ ತೂಕ)ಗಳಷ್ಟು ಬಂಗಾರ ಇದ್ದರೆ ಅದನ್ನು ಒಳ್ಳೆಯ ಅದಿರೆಂದು ಎಣಿಸುತ್ತಾರೆ. ಒಂದು ಟನ್ ಕಲ್ಲಿನಲ್ಲಿ ಆರು ಪೆನಿವೇಟು ಚಿನ್ನ ಎಂದರೆ ಸುಮಾರು ಒಂದುಲಕ್ಷ ಜನಸಮೂಹದಲ್ಲಿ ಒಬ್ಬ ಸಾಹುಕಾರ ಇದ್ದಂತೆ ಎಂದಿಟ್ಟು ಕೊಳ್ಳಬಹುದು. ಇಷ್ಟು ಅಲ್ಪಪ್ರಮಾಣದಲ್ಲಿ ಚಿನ್ನ ಕಲ್ಲಿನಲ್ಲಿ ಸೇರಿರುವ ಕಾರಣದಿಂದ ಅದನ್ನು ಕಣ್ಣಿನಿಂದ ಗುರುತಿಸುವುದು ಕಷ್ಟ. ಕೋಲಾರದ ಗಣಿಯಿಂದ ಮೇಲೆ ಬರುವ ಬಹುಭಾಗದ ಕಲ್ಲಿನಲ್ಲಿ ಚಿನ್ನ ಕಣ್ಣಿಗೆ ಕಾಣುವುದೇ ಇಲ್ಲ !

ಚಿನ್ನದ ಕಲ್ಲು. ಎರಡು ವರ್ಷಗಳ ಕೆಳಗೆ ಹೊನ್ನಾಳಿ ತಾಲೂಕಿನ ಪಲವನಹಳ್ಳಿ ಗ್ರಾಮದ ಹತ್ತಿರ ಮೆಕ್ಕಲುಮಣ್ಣಿನಿಂದ ಚಿನ್ನವನ್ನು ಪಡೆಯಲು ಶೋಧನೆ ನಡೆಸುತ್ತಿದ್ದಾಗ ಒಂದು ಚಿನ್ನದ ಕಲ್ಲು ನಿಧಿ ಸಿಕ್ಕಿತು.[1] ಸಿಕ್ಕಿದ ಕಲ್ಲು ಒಂದು ತೆಂಗಿನಕಾಯಷ್ಟು ಗಾತ್ರವಿದೆ. ಈ ಕಲ್ಲಿನ ತುಂಬ ಥಳಥಳಿಸುವ ಚಿನ್ನವೇ. ತಿರಿತಿರಿ

[1] B. P. Radhakrishna—'Notes on Prospecting for alluvial gold round Kudurekonda and Palavanhalli, Honnali Taluk, Shimoga Dt.'—Rec. Mysore Geological Department, Vol. XXXIX, 168-169 and plate XXIV (1941).

ಯಾಗಿ ಹೂಡೆಹೂಡೆಯಾಗಿ ಒಡೆದಿದೆ ಕಲ್ಲಿನಲ್ಲಿ ಚಿನ್ನ. ಅಷ್ಟು ಸಣ್ಣ ಕಲ್ಲಿನಲ್ಲಿ ನಾಲ್ಕೂವರೆ ಸೇರು ಬಂಗಾರವೇ ಸೇರಿದೆಯೆಂದರೆ ಕಲ್ಲಿನಲ್ಲಿ ಯಾವರೀತಿ ಚಿನ್ನ ಹರಡಿದೆ ಎನ್ನುವುದನ್ನು ಊಹಿಸಿಕೊಳ್ಳಬಹುದು. ಇಂಥದೊಂದು ಬೆಲೆಯುಳ್ಳ ಕಲ್ಲು ಸಿಕ್ಕಿದ ಮಾತ್ರದಿಂದ ಆ ಪ್ರಾಂತದ ಬೆಣಚೆಲ್ಲದರಲ್ಲಿಯೂ ಇದೇ ರೀತಿ ಚಿನ್ನ ಹರಡಿದೆ ಯೆಂದು ತಿಳಿಯಬಾರದು. ಜಗತ್ತಿನ ಯಾವುದೋ ಹಳ್ಳಿಯೊಂದರಲ್ಲಿ ಒಬ್ಬಾಕೆ ಐದು ಮಕ್ಕಳನ್ನು ಒಂದೇಬಾರಿಗೆ ಹಡೆದಳೆಂದರೆ ಅದು ಎಲ್ಲ ತಾಯಂದಿರಿಗೂ ಅನ್ವಯಿಸುವ ಮಾತಾದೀತೆ? ಅದರಂತೆಯೇ ಇಲ್ಲಿಯೂ — ಇದೂ ಒಂದು ಸೃಷ್ಟಿಯ ವಿಪರೀತ. ವಾಸ್ತವವಾಗಿ ಚಿನ್ನದ ಕಲ್ಲು ಸಿಕ್ಕಿದ ಸುತ್ತಮುತ್ತಲಿನ ಪ್ರದೇಶದ ಬೆಣಚೆಲ್ಲವನ್ನೂ ಪರೀಕ್ಷೆ ಮಾಡಿದಾಗ ಅವುಗಳಲ್ಲಿ ಚಿನ್ನ ಸ್ವಲ್ಪವೂ ಕಾಣಲಿಲ್ಲ. ಬೆಣಚುಕಲ್ಲಿನ ಬಹುಭಾಗ ಬಂಜರಾಗಿದ್ದರೂ ಚಿನ್ನ ಒಂದೊಂದುಕಡೆ ಅಧಿಕವಾಗಿ ಶೇಖರವಾಗಿರುವ ಸಂದರ್ಭಗಳು ಕಂಡುಬರುವುದುಂಟು. ಪಲವನಹಳ್ಳಿಯ ಹತ್ತಿರ ಸಿಕ್ಕಿದ ಚಿನ್ನದ ಕಲ್ಲು ಈ ರೀತಿ ರೂಪುಹೊಂದಿರಬೇಕು.

ಮುಖ್ಯವಾಗಿ ಮೂಲಚಿನ್ನ ಬೆಣಚುಕಲ್ಲಿನಲ್ಲಿ ಅದರಲ್ಲಿಯೂ ಧಾರವಾಡ ಪದರು ಶಿಲೆಗಳಲ್ಲಿ ಕಂಡುಬರುವ ಬೂದು ಮತ್ತು ಬಿಳಿಯ ಬಣ್ಣದ ಬೆಣಚಿನ ಸಿರಗಳಲ್ಲಿ ಸೇರಿರುತ್ತದೆಯೆಂದು ತಿಳಿದರೆ ಸಾಕು.

ii. **ಮೆಕ್ಕಲುಮಣ್ಣಿನಲ್ಲಿ ಚಿನ್ನ.** ಎಂಥ ಗಟ್ಟಿ ಕಲ್ಲಾಗಲಿ ಗಾಳಿಮಳೆಗಳ ಹಾವಳಿಗೆ ಸಿಕ್ಕಿದಮೇಲೆ ಕ್ಷಯಿಸುತ್ತದೆ. ಬೆಂಗಳೂರಿನ ಕಣ್ಣಾಸ್ಪತ್ರೆಯ ಕಟ್ಟಡದ ಕಲ್ಲಿಗೂ, ಹೊಸದಾಗಿ ಕಟ್ಟಿದ ಹೆರಿಗೆ ಆಸ್ಪತ್ರೆಯ ಕಟ್ಟಡದ ಕಲ್ಲಿಗೂ ವ್ಯತ್ಯಾಸ ಕಾಣುವುದಿಲ್ಲವೆ? ಒಂದು ಚೊಕ್ಕ ಹೊಸತಾಗಿ ಮಿರುಗುಟ್ಟುತ್ತಿದ್ದರೆ ಇನ್ನೊಂದು ಕಾಂತಿಗೆಟ್ಟು ಮಣ್ಣಿನ ಬಣ್ಣವಾಗಿ ಕಾಣುತ್ತದೆ. ಇಪ್ಪತ್ತು ಮುವ್ವತ್ತು ವರ್ಷಗಳ ಅವಧಿಯಲ್ಲಿ ಕಲ್ಲು ಇಷ್ಟು ಬದಲಾವಣೆ ಹೊಂದಬೇಕಾಗಿದ್ದರೆ ಕೋಟ್ಯಂತರ ವರ್ಷ ಗಳಲ್ಲಿ ಕಲ್ಲುಬಂಡೆಗಳೇ ದೂಳಿದ್ದು ಹೋಗುವುದೇನಾಶ್ಚರ್ಯ.

ಚಿನ್ನದ ನಿಕ್ಷೇಪಗಳು ಮಣ್ಣಿನಲ್ಲಿ ಒಟ್ಟುಗೂಡುವ ರೀತಿ. ಮಿಕ್ಕೆಲ್ಲ ಕಲ್ಲುಗಳಂತೆಯೇ ಚೂರಾದ ಚಿನ್ನದ ಕಲ್ಲನ್ನೂ ಹತ್ತಿರದ ಹಳ್ಳವೋ ನದಿಯೋ ದೂರ ನಾಗಿಸಿಬಿಡುತ್ತದೆ. ನೀರಿನ ವೇಗ ಕಡಿಮೆಯಾದ ಕಡೆ ಹೆಚ್ಚು ತೂಕವುಳ್ಳ ಕಲ್ಲು ಗುಂಡುಗಳೂ, ಚಿನ್ನವೂ ಕೆಳಗೆ ತಂಗುತ್ತವೆ. ಲಕ್ಷಾಂತರ ವರ್ಷಗಳು ಈ ವ್ಯಾಪಾರ ತಪ್ಪಿಲ್ಲದೆ ನಡೆದರೆ ಕೆಲವು ಕಡೆಗಳಲ್ಲಿ ಚಿನ್ನ ವಿಶೇಷವಾಗಿ ಶೇಖರವಾಗುತ್ತದೆ. ಇವೇ ಮೆಕ್ಕಲುಮಣ್ಣಿನಲ್ಲಿ ಶೇಖರವಾದ ಚಿನ್ನದ ನಿಕ್ಷೇಪಗಳು. ಮೇಲೆ ವಿವರಿಸಿದ ಪ್ರಕೃತಿ ವ್ಯಾಪಾರಗಳ ದೆಸೆಯಿಂದ ಕಲ್ಲಿನಲ್ಲಿ ಬೆರೆತಿರುವ ಚಿನ್ನ ತನಗೆ ತಾನೇ ಬೇರೆ

ಯಾಗಿ ಒಂದು ಗೊತ್ತಾದ ಕಡೆ ಒಟ್ಟುಗೂಡುತ್ತದೆ. ಕಲ್ಲನ್ನು ಪುಡಿಮಾಡುವ, ಪುಡಿಯಿಂದ ಚಿನ್ನವನ್ನು ಪ್ರತ್ಯೇಕಿಸುವ, ಕೂಡಿಸುವ ಒಟ್ಟು ಎಲ್ಲ ಕಾರ್ಯವನ್ನೂ ಪ್ರಕೃತಿಯೇ ಮಾಡಿ ಮುಗಿಸಿರುವುದರಿಂದ, ಇಂಥ ನಿಕ್ಷೇಪಗಳಿಂದ ವಿಶೇಷ ಕಷ್ಟವಿಲ್ಲದೆ ಲಾಭದಾಯಕವಾಗಿ ಚಿನ್ನವನ್ನು ಪಡೆಯಬಹುದು. ನದಿಯ ದಂಡೆಗಳಲ್ಲಿ ಮೇಲೆ ಮೇಲೆಯೇ ಈ ತರದ ನಿಕ್ಷೇಪಗಳು ದೊರೆಯುವುದರಿಂದ ಗಣಿಗಳನ್ನು ತೋಡುವ ಕಷ್ಟ ಕೂಡ ಇರುವುದಿಲ್ಲ.

ನಿಕ್ಷೇಪಗಳು ಸೇರುವುದಕ್ಕೆ ಅನುಕೂಲ ವಾತಾವರಣ ಬೇಕು. ಇಂಥ ನಿಕ್ಷೇಪಗಳು ಶೇಖರವಾಗುವುದಕ್ಕೆ ಅನುಕೂಲವಾದ ವಾತಾವರಣವಿರಬೇಕು. ನದಿಯ ನೀರು ಸದಾಕಾಲದಲ್ಲಿಯೂ ಒಂದೇ ಸಮನಾಗಿ ಹರಿಯುತ್ತಿದ್ದು, ದಿನದಿನವೂ ಹೊಸ ಹೊಸ ಮಣ್ಣನ್ನು ತರುತ್ತಿದ್ದರೆ ಗೊತ್ತಾದ ಸ್ಥಳದಲ್ಲಿ ಚಿನ್ನವೂ ಶೇಖರವಾಗುತ್ತ ಹೋಗುತ್ತದೆ. ಅದಕ್ಕೆ ಬದಲು ಬೇಸಗೆಯಲ್ಲಿ ಬತ್ತಿಹೋಗಿ ಮಳೆಗಾಲದಲ್ಲಿ ಮೇರೆವರಿದು ತುಂಬುಹೊಳೆ ಹರಿದರೆ ಶೇಖರವಾದ ಅಲ್ಪಸ್ವಲ್ಪ ಚಿನ್ನವೂ ಕೊಚ್ಚಿಹೋಗಿ ಸಾಗರದ ಪಾಲಾಗುತ್ತದೆ. ಹಿಂಗಾರು ಮುಂಗಾರುಗಳ ಹಾವಳಿಗೆ ಸಿಕ್ಕಿದ ನಮ್ಮ ದೇಶದಲ್ಲಿ ಈ ರೀತಿ ಚಿನ್ನ ಸೇರಲು ಅವಕಾಶವಾಗದೆ ಹೋಯಿತು. ಆದರೆ ಚಿನ್ನ ಸೇರದೆಯೇ ಹೋಗಲಿಲ್ಲ; ಆಫ್ರಿಕಾ, ಅಮೆರಿಕಾ ಖಂಡಗಳಲ್ಲಿನಂತೆ ಹೆಚ್ಚು ಸೇರಲಿಲ್ಲ, ಅಷ್ಟೆ. ಈಗಲೂ ಶಿವಮೊಗ್ಗೆಯ ಹೊನ್ನಾಳಿ ತಾಲೂಕಿನ ನ್ಯಾಮತಿ, ಕುದುರೆಕೊಂಡ, ಪಲವನಹಳ್ಳಿ, ಈ ಗ್ರಾಮಗಳ ಸುತ್ತಮುತ್ತಿನ ಹಳ್ಳಗಳ ಮಣ್ಣನ್ನು ಜಾಲಿಸಿ, ಚಿನ್ನ ಪಡೆಯುವುದನ್ನು ನೋಡಬಹುದು. ಮಣ್ಣು ಜಾಲಿಸಿ ಚಿನ್ನ ತೆಗೆಯುವವರನ್ನು "ಜಾಲಗಾರರು" ಎಂದು ಕರೆಯುತ್ತಾರೆ. ಪಲವನಹಳ್ಳಿಯ ಲಂಬಾಣಿ ಗೃಹಸ್ಥರು ಈ ಕೆಲಸದಲ್ಲಿ ತುಂಬಾ ನುರಿತವರು. ಈಚೆಗೆ ಅದೇ ಗ್ರಾಮದ ಬೆಸ್ತರೂ ಈ ಕಸಬನ್ನು ಅಭ್ಯಾಸಮಾಡಿಕೊಂಡಿದಾರೆ.

ಜಾಲಗಾರರು—ಅವರ ಕೆಲಸ. ಜಾಲಗಾರನ ಸಾಧನಗಳು ತೀರ ಸಾಮಾನ್ಯವಾದುವು. ಅವನೆಲ್ಲ ಸಾಮಗ್ರಿಯೂ ಎರಡು ಮೂರು ರೂಪಾಯಿ ಬೆಲೆ ಬಾಳಲಾರವು. ಒಂದು ಮೇಲುಹಲಗೆಯಿಲ್ಲದ ಉದ್ದನೆಯ ಮರದ ಪೆಟ್ಟಿಗೆ. ಇದೇ ಅವನ ಮುಖ್ಯ ಸಾಧನವಾದ ದೋಣಿ; ಮಧ್ಯೆ ತಗ್ಗಾಗಿರುವ ಒಂದು ಮರದ ಸುತ್ತು ತಟ್ಟೆ; ನೀರನ್ನು ಮೊಗೆದು ಹುಯ್ಯುವುದಕ್ಕೆ ಅರ್ಧವಾಗಿ ಸೀಳಿದ ಒಂದು ಸೋರೆ ಬುರುಡೆಯ ಹೋಳು. ಬಂದ ಚಿನ್ನವನ್ನು ಶೇಖರಿಸುವುದಕ್ಕೆ ಒಂದು ತೆಂಗಿನಕಾಯಿ ಚಿಪ್ಪು; ಇವೇ ಅವನ ಸರ್ವಸ್ವ. ಚಿನ್ನ ಇಂಥ ಹಳ್ಳಗಳಲ್ಲಿ ಇದೆ, ಇಲ್ಲ ಎನ್ನುವುದಕ್ಕೆ ಅವನ ಸುತ್ತು ತಟ್ಟೆ ಸಹಾಯಮಾಡುತ್ತದೆ. ಮೊದಲು ಆ ತಟ್ಟೆಯು ತುಂಬುವಷ್ಟು

ಹಳ್ಳದ ಮಣ್ಣನ್ನು ಸೇರಿಸುತ್ತಾನೆ. ಆ ಮೇಲೆ ತಟ್ಟೆಯ ಮೇಲೆಯೇ ಮಣ್ಣೆಲ್ಲವನ್ನೂ ನೀರಿನಲ್ಲಿ ತೊಳೆದು ತೊಳೆದು ದಪ್ಪ ಸಣ್ಣ ಕಲ್ಲುಗುಂಡುಗಳನ್ನೂ ತೆಗೆದುಹಾಕುತ್ತಾನೆ. ಕೈಚಳಕದಿಂದ ಅವನು ತಟ್ಟೆಯನ್ನು ಸುತ್ತುತ್ತ ಹೋದಂತೆ ಹಗುರವಾದ ಕಲ್ಲು ಮಣ್ಣೆಲ್ಲವೂ ತೊಳೆದುಹೋಗಿ ಕೊನೆಯಲ್ಲಿ ತೂಕವಾದ ಕಪ್ಪುಗಸಿ ಉಳಿಯುತ್ತದೆ. ತೊಳೆದ ಮಣ್ಣಿನಲ್ಲಿ ಚಿನ್ನ ಇದ್ದಿದ್ದರೆ ಅದು ಗಸಿಯಲ್ಲಿ ಉಳಿದು ಥಳಥಳನೆ ಕಣ್ಣಿಗೆ ಕಾಣುತ್ತದೆ. ಈ ಕೆಲಸಕ್ಕೆ "ಮಚ್ಚೆ" ನೋಡುವುದು ಎಂದು ಹೇಳುತ್ತಾರೆ. ಗಸಿಯಲ್ಲಿ ಕಾಣುವ ಒಂದೊಂದು ಚಿನ್ನದ ಹಳುಕೂ ಒಂದೊಂದು ಮಚ್ಚೆ. ಹೆಚ್ಚು ಮಚ್ಚೆ ದೊರೆತರೆ ಅವನು ದೋಣಿಯನ್ನು ಅಲ್ಲೇ ಕಟ್ಟುತ್ತಾನೆ. ಸಾಮಾನ್ಯವಾಗಿ ಹರಿಯುವ ನೀರಿನ ವೇಗ ಕಡಿಮೆಯಾಗುತ್ತದೆಂದು ತೋರಿಬಂದ ಕಡೆಗಳಲ್ಲಿ ಎಂದರೆ, ಹಳ್ಳದ ತಿರುಗಣೆಗಳಲ್ಲಿ ನೀರಿನ ದುಮುಕಲುಗಳಲ್ಲಿ ಅವನು ಮಚ್ಚೆ ನೋಡುತ್ತಾನೆ. ಮಚ್ಚೆ ನೋಡುವುದರಿಂದಲೇ ಜಾಲಗಾರನು ಅನುಭವಸ್ಥನೇ ಅಲ್ಲವೆ ಎಂದು ಹೇಳಿ ಬಿಡಬಹುದು. ಮುಂದಿನ ಕೆಲಸ ಸುಲಭ. ದೋಣಿ ಕಟ್ಟಿದ್ದಾದಮೇಲೆ ಹಳ್ಳದ ಮಣ್ಣೆಲ್ಲವನ್ನೂ ಕೆರೆದುತಂದು ಒಬ್ಬನು ದೋಣಿಯೊಳಗೆ ಸುರಿಯುತ್ತಾನೆ. ದೋಣಿಯಲ್ಲಿ ಮಣ್ಣು ಸುಮಾರಾಗಿ ಸೇರಿದಮೇಲೆ ಜಾಲಗಾರ ತನ್ನ ಸೋರೆಬುರುಡೆಯಿಂದ ನೀರನ್ನು ಮೊಗೆದು ಮಣ್ಣಿನ ಮೇಲೆ ಹುಯ್ದು, ಕಲ್ಲು, ಮಣ್ಣು, ಹೆಂಟೆ ಎಲ್ಲವನ್ನೂ ತೆಗೆಯುತ್ತ ಹೋಗುತ್ತಾನೆ. ಈ ರೀತಿ ಇಪ್ಪತ್ತು ಮುವ್ವತ್ತು ಬಾಣಲೆಯಷ್ಟು ಮಣ್ಣು ತೊಳೆದಮೇಲೆ ದೋಣಿಯ ತಳದಲ್ಲಿ ಸಾಕಾದಷ್ಟು ಗಸಿ ಸೇರಿರುತ್ತದೆ. ಈ ಗಸಿಯೆಲ್ಲವನ್ನೂ ತನ್ನ ಸುತ್ತು ತಟ್ಟೆಗೆ ತೊಳೆದುಕೊಂಡು ಜಾಲಿಸುತ್ತಾನೆ. ಕಡಿಮೆ ತೂಕದ ಗಸಿಯೂ ಆಗ ತೊಳೆದುಹೋಗಿ ಕೊನೆಯಲ್ಲಿ ಚಿನ್ನದಪುಡಿ ಉಳಿಯುತ್ತದೆ. ಬಂದ ಚಿನ್ನವನ್ನು ತನ್ನ ತೆಂಗಿನ ಚಿಪ್ಪಿಗೆ ತೊಳೆದುಕೊಳ್ಳುತ್ತಾನೆ. ಹಗಲಿನಿಂದ ಸಾಯಂಕಾಲದ ವರೆಗೆ ಇದೇ ತಂದೆಮಕ್ಕಳ ಕೆಲಸ. ಒಳ್ಳೆಯ ದಿನದ ಕೆಲಸವಾದರೆ ಸುಮಾರು ಎರಡರಿಂದ ಹಿಡಿದು ನಾಲ್ಕು ರೂಪಾಯಿವರೆಗೂ ಬಾಳುವ ಬಂಗಾರ ದೊರೆಯುತ್ತದೆ. ಸಾಧಾರಣವಾಗಿ ನಾಲ್ಕು ಐದು ಗುಂಜಿ ಬಂಗಾರ, ಎಂದರೆ ರೂಪಾಯಿ, ರೂಪಾಯಿವರೆ ಬಾಳುವ ಬಂಗಾರ ಸಿಕ್ಕಿದರೆ ಹೆಚ್ಚು. ಈಚೆಗೆ ಈ ಕಸಬನ್ನು ಬಹಳ ಜನ ಬಿಟ್ಟುಬಿಟ್ಟಿದಾರೆ. ಕುಶಲವಾದ ಕೆಲಸ ಮೂಲೆಪಾಲಾಗಿದೆ.

ಚಿನ್ನದ ಕೈಗಾರಿಕೆ—ಕರ್ನಾಟಕದ ಗತವೈಭವ

ಮೆಕ್ಕಲುಮಣ್ಣಿನಲ್ಲಿ ಸೇರಿರುವ ಚಿನ್ನವನ್ನೇ ಮೊಟ್ಟಮೊದಲಿಗರು ಗುರುತಿಸಿ ಪಡೆದರೆಂದೂ, ಆಮೇಲೆ ಆ ಚಿನ್ನದ ಜಾಡನ್ನೇ ಅನುಸರಿಸಿ ಮೂಲಚಿನ್ನದ ನೆಲೆಯಾದ

ಬೆಣಚುಕಲ್ಲಿನ ಸಿರಗಳನ್ನು ಗುರುತಿಸಿದರೆಂದೂ ಮೇಲೆಯೇ ತಿಳಿಸಿದೆ. ಬೆಣಚುಕಲ್ಲಿನ ಸಿರಗಳು ಸಾಮಾನ್ಯವಾಗಿ ಐದಾರು ಅಡಿಗಳಿಗಿಂತ ಹೆಚ್ಚು ಅಗಲವಿರುವುದಿಲ್ಲ. ಉದ್ದದಲ್ಲಿ ಅವು ನಾಲ್ಕು ಐದು ಮೈಲಿಗಳ ದೂರ ಹಬ್ಬಿರಬಹುದು. ಕಲ್ಲಿನಲ್ಲಿ ಚಿನ್ನ ಸೇರಿರುವುದನ್ನು ಕಂಡಮೇಲೆ, ಕಲ್ಲನ್ನು ಒಡೆದು, ಬಂದ ಪುಡಿಯೆಲ್ಲವನ್ನೂ ನೀರಿನಲ್ಲಿ ಜಾಲಿಸಿ ಚಿನ್ನ ಪಡೆಯಬೇಕಾಯಿತು. ಕಲ್ಲು ಎಲ್ಲಿಯತನಕ ಮೇಲೆಮೇಲೆಯೇ ಸಿಕ್ಕೀತು? ಕಲ್ಲನ್ನು ಹೆಚ್ಚು ಪಡೆಯುವುದಕ್ಕಾಗಿ ಆಳವಾದ ಕೂಪಗಳನ್ನೇ ಕೊರೆಯಬೇಕಾಯಿತು. ಹೀಗೆ ನಮ್ಮ ಪುರಾತನರು ತೆಗೆದ ಗಣಿಗಳನ್ನು ಕನ್ನಡ ನಾಡಿನಲ್ಲೆಲ್ಲಾ ಗುರುತಿಸಬಹುದು.

ಪುರಾತನ ಗಣಿಗಳು ಯಾವ ಕಾಲಕ್ಕೆ ಸೇರಿದವು? ಈ ಹಳೆಯ ಗಣಿಗಳು ಯಾವ ಕಾಲಕ್ಕೆ ಸೇರಿದವು? ಅವುಗಳಲ್ಲಿ ಕೆಲಸಮಾಡಿದ ಜನ ಯಾರು? ಈ ಗಣಿಗಳಲ್ಲಿನ ಕೆಲಸ ಯಾವಾಗ, ಏಕೆ ನಿಂತಿತು? ಈ ಪ್ರಶ್ನೆಗಳಿಗೆ ಚರಿತ್ರೆಯಲ್ಲಿ ಉತ್ತರ ಸಿಕ್ಕುವುದಿಲ್ಲ. ಗ್ರೀಕ್ ಚರಿತ್ರಕಾರರಿಂದ ಹಿಡಿದು ೧೯ನೆಯ ಶತಮಾನದವರೆಗೆ ಈ ಗಣಿಗಳ ಪ್ರಸ್ತಾಪ ಎಲ್ಲಿಯೂ ಬರುವುದಿಲ್ಲ. ಕ್ರಿ.ಶ. ೭೭ರಲ್ಲಿದ್ದ ಪ್ಲಿನಿ (Pliny) ಎಂಬ ಗ್ರೀಕ್ ಯಾತ್ರಿಕ ಹೀಗೆ ಬರೆದಿದ್ದಾನೆ:[1]

> 'In the country of the Nareae, beyond the mountain Capitalia (Mount Abu in Rajputana) there are numerous mines of gold and silver in which the Indians work very extensively.'

ರಾಜಪುತಾನ ಮತ್ತು ಅದರ ಸುತ್ತಿನ ಪ್ರದೇಶಗಳಲ್ಲಿ ಚಿನ್ನಕ್ಕಾಗಿ ಕೆಲಸಮಾಡಿದ ಯಾವ ಹಳೆಯ ಗಣಿಗಳೂ ಕಂಡಿಲ್ಲವಾದ್ದರಿಂದ ಪ್ಲಿನಿ, ಹೈದರಾಬಾದು, ಮೈಸೂರು ಪ್ರಾಂತಗಳಲ್ಲಿನ ಗಣಿಗಳ ವಿಚಾರವನ್ನೇ ಇಲ್ಲಿ ಪ್ರಸ್ತಾಪಮಾಡಿದಾನೆಂದು ನಾವು ಊಹಿಸಬಹುದಾಗಿದೆ. ಈ ಗಣಿಗಳ ಪ್ರಸ್ತಾಪ ಬರುವುದು ಅದೇ ಮೊದಲು. ವಿಜಯನಗರದ ಆಸ್ಥಾನಕ್ಕೆ ಹೋಗಿಬಂದ ವಿದೇಶೀಯ ಯಾತ್ರಿಕರಲ್ಲಿ ಒಬ್ಬನೂ ಚಿನ್ನದ ಗಣಿಗಳ ವಿಷಯ ಬರೆಯದೆ ಇರುವುದರಿಂದ ಆ ಕಾಲಕ್ಕೆ ಕನ್ನಡನಾಡಿನಲ್ಲಿ ಚಿನ್ನದ ಗಣಿಗಳಿದ್ದುದೇ ಮರೆತುಹೋದಂತೆ ಕಾಣುತ್ತದೆ.

ಯಾವುದೋ ಅತಿ ಪ್ರಾಚೀನ ಕಾಲದಲ್ಲಿ ಅತಿ ಕುಶಲರಾದ ಕೆಲಸಗಾರರ ತಂಡ ದೇಶವನ್ನೆಲ್ಲಾ ಸಂಚರಿಸಿ, ಚಿನ್ನವಿರುವ ಕಲ್ಲೆಲ್ಲವನ್ನೂ ಒಂದೂ ಬಿಡದಂತೆ ಪತ್ತೆಮಾಡಿ, ಚಿನ್ನ ಹೆಚ್ಚು ಸೇರಿದೆಯೆಂದು ಕಂಡುಬಂದ ಕಡೆಗಳಲ್ಲೆಲ್ಲಾ ಆಳವಾದ ಗಣಿಗಳನ್ನು ತೋಡಿ ಕೆಲಸಮಾಡಿದ್ದಾರೆನ್ನುವುದು ಸ್ಪಷ್ಟವಾಗಿದೆ. ಈ ಹಳಬರು

---

[1] Malcolm Maclaren, 'Gold' The Mining Journal, 241, (1908).

ಗಣಿ ತೋಡುವ ಕೆಲಸ ಒಂದರಲ್ಲೇ ಅಲ್ಲ ಸುರಿತಿರುವುದು. ಅವರು ಆ ಪ್ರಾಚೀನ ಕಾಲದಲ್ಲಿ ಕಲ್ಲಿನಿಂದ ಚಿನ್ನವನ್ನು ಪ್ರತ್ಯೇಕಿಸುತ್ತಿದ್ದ ರೀತಿ ನಾವು ನವೀನರು ಮಾಡುವಂತೆಯೇ ಇದೆ. ಆ ಕಾಲದಲ್ಲಿಯೇ ಅವರಿಗೆ ಪಾದರಸದ ಉಪಯೋಗ ಚೆನ್ನಾಗಿ ಗೊತ್ತಿತ್ತು.[1] ಕ್ರಿ.ಪೂ. ೩೦೦೦ ಸುಮಾರಿಗೆ ಸೇರಿದ ಮೊಹೆಂಜೊದಾರೊವಿನಲ್ಲಿ Cinnabar ಎಂಬ ಪಾದರಸದ ಮುಖ್ಯ ಖನಿಜ ದೊರೆತಿರುವುದಾಗಿ ಸರ್ ಜಾನ್ ಮಾರ್ಷಲ್ ಅವರು ವರದಿಮಾಡಿದ್ದಾರೆ. ಈಗಲೂ ಹಳೆಯ ಗಣಿಗಳ ಹತ್ತಿರದ ಮಣ್ಣನ್ನು ತೊಳೆದರೆ ಪಾದರಸದ ಕಣಗಳು ದೊರೆಯುತ್ತವೆ.

ಪುರಾತನರು ಗಣಿ ತೋಡಿರುವ ರೀತಿ. ಗಣಿಗಳಲ್ಲಿ ನೀರಿನ ಮಟ್ಟ ಸಿಕ್ಕಿದ ಮೇಲೆ ಕೆಲಸ ಕೈಬಿಟ್ಟಂತೆ ಕಾಣುತ್ತದೆ. ಕೋಲಾರದ ಹಳೆಯ ಗಣಿಗಳ ಆಳ ೨೦೦ ಅಡಿಗಳಿಗೂ ಹೆಚ್ಚಿತ್ತು. ಹೈದರಾಬಾದಿನ ಹಟ್ಟಿಯ ಹಳೆಯ ಗಣಿಗಳು ೬೪೦ ಅಡಿಗಳಿಗೂ ಕೆಳಗೆ ಇಳಿದಿದ್ದುವಂತೆ.[2] ಈ ಆಳವಾದ ಗಣಿಗಳಿಂದ ನೀರನ್ನು ಸಾಗಿಸಲು ಮಡಕೆಗಳನ್ನು ಉಪಯೋಗಿಸುತ್ತಿದ್ದರು. ಕೋಲಾರ ಮತ್ತು ಹಟ್ಟಿಯ ಹಳೆಯ ಗಣಿಗಳನ್ನು ಮೊದಲು ಶೋಧಿಸಿದಾಗ ತಳದಲ್ಲಿ ಸುಮಾರು ಹತ್ತು ಅಡಿಗಳಷ್ಟು ಎತ್ತರ ಮಡಕೆ ಚೂರುಗಳು ಕಂಡುಬಂದಿತು. ಗಟ್ಟಿ ಕಲ್ಲಿಗೆ ಬೆಂಕಿ ಹಚ್ಚಿ ಆರಿದಾಗ ಅದನ್ನು ಕಲ್ಲುಸುತ್ತಿಗೆಗಳಿಂದ ಒಡೆದು ಕಲ್ಲು ಕೀಳುತ್ತಿದ್ದರು. ಹಟ್ಟಿ ಮತ್ತು ಇತರ ಹಳೆಯ ಗಣಿಗಳಲ್ಲಿ ತಳಗಡೆ ಸುಟ್ಟ ಮರದ ತುಂಡುಗಳು, ಬೂದಿ, ಇದ್ದಲು ವಿಶೇಷವಾಗಿ ಕಂಡುಬಂದಿತು.

ಗಣಿ ಆಳಕ್ಕೆ ಇಳಿದಂತೆಲ್ಲ ಗೋಡೆ ಕುಸಿದುಬೀಳದಂತೆ ತಡೆಯಲು ಮರದ ದಿಮ್ಮಿಗಳನ್ನು ಜೋಡಿಸುತ್ತಾರೆ. ಹಟ್ಟಿ, ಕೋಲಾರದ ಗಣಿಗಳಲ್ಲಿ ಸಿಕ್ಕಿದ ಕರಿಜಾಲಿ (ಬಾಬುಲ್—Acacia Arabica) ಮರದ ತುಂಡುಗಳನ್ನು ನೋಡಿದರೆ ನಮ್ಮ ಪುರಾತನರಿಗೆ ಗಣಿಯ ಭದ್ರತೆಗೋಸ್ಕರ ಮರಜೋಡಿಸುವ ಕ್ರಮ ಚೆನ್ನಾಗಿ ತಿಳಿದಿತ್ತೆಂದು ವ್ಯಕ್ತಪಡುತ್ತದೆ.

ಕಲ್ಲಿನಿಂದ ಚಿನ್ನವನ್ನು ಪ್ರತ್ಯೇಕಿಸುತ್ತಿದ್ದ ಬಗೆ. ಚಿನ್ನ ಸೇರಿರುವ ಕಲ್ಲನ್ನು ಗಣಿಯಿಂದ ಮೇಲೆ ತಂದಮೇಲೆ ಅದನ್ನು ಸಣ್ಣ ಸಣ್ಣ ಕಾಳಿನಷ್ಟು ಗಾತ್ರಕ್ಕೆ ಪುಡಿ

---

[1] L. Munn—'Observations and Notes on the method of Ancient Gold Mining in Southern India, with special reference to the Raichur and Shorpur Districts of Hyderabad State.'—*Transactions of the Mining and Geological Institute of India.* XXX, 105 (1936).

[2] 'At the Hutti Mine in Raichur District all payable quartz, save for a few pillars, was extracted to the depth of 640 ft.—a record, not only for India, but, I believe, for the World.'—L. Munn. Ibid, 104.

ಮಾಡುತ್ತಿದ್ದರು. ಹಳೆಯ ಗಣಿಗಳ ಹತ್ತಿರ ಕಲ್ಲುಬಂಡೆಗಳು ಕುಳಿಬಿದ್ದಿರುವುದನ್ನೂ ಗುರುತಿಸಬಹುದು. ಈ ಸಣ್ಣ ಕಾಳಿನಂಥ ಚಿನ್ನದ ಕಲ್ಲನ್ನು ಭಾರಿ ಗುಂಡುಕಲ್ಲುಗಳ ಕೆಳಗೆ ಕೊಟ್ಟು ಮತ್ತೂ ಪುಡಿಮಾಡುತ್ತಿದ್ದರು. ಇಂಥ ಕಲ್ಲುಗುಂಡುಗಳು ವಿಶೇಷ ವಾಗಿ ಚಿನ್ನದ ಪ್ರದೇಶದಲ್ಲಿ ಬಿದ್ದಿರುತ್ತವೆ. ಪುಡಿಯಾದ ಕಲ್ಲೆಲ್ಲವನ್ನೂ ನೀರು ಹತ್ತಿರ ವಿರುವ ಕಡೆ ಕೊಂಡುಹೋಗಿ ಅಲ್ಲಿ ಜಾಲಿಸಿ ಚಿನ್ನ ಪಡೆಯುತ್ತಿದ್ದರು.

ಈ ಕೈಗಾರಿಕೆ ನಡೆಸಿದ ಜನ ಯಾರು? ಇಷ್ಟೆಲ್ಲ ಕೆಲಸ ಮಾಡಿದ ಜನ ಯಾರು? ನಾಡೆಲ್ಲವನ್ನೂ ಸಂಚರಿಸಿ, ಯಾವೊಂದು ಚಿನ್ನದ ಪ್ರದೇಶವನ್ನೂ ಬಿಡದೆ ಶೋಧಿಸಿದವರು ಯಾವ ನಾಡವರು? ಕೆಲಸ ನಡೆದಿರುವ ಪ್ರದೇಶದ ವೈಶಾಲ್ಯವನ್ನು ನೋಡಿದರೆ, ಮತ್ತು ಗಣಿ ತೋಡುವ ಕೆಲಸ ಎಷ್ಟು ಸಿಧಾನದ ಕೆಲಸ ಎನ್ನುವುದನ್ನು ನಾವು ಗಮನಿಸಿದರೆ, ದಂಡೆತ್ತಿ ಬಂದ ಯಾವ ಜನಾಂಗವೂ ಈ ಎಲ್ಲ ಕೆಲಸವನ್ನೂ ಸಾಧಿಸಿರಲಾರದೆನ್ನುವುದು ಸ್ಪಷ್ಟಪಡುತ್ತದೆ. ನಮ್ಮ ದೇಶದಲ್ಲಿ ಚಿನ್ನದ ಗಣಿಗಳನ್ನು ತೋಡಿ ಕೆಲಸಮಾಡಿದವರು ಈಜಿಪ್ಷಿಯನರು, ಇಲ್ಲವೆ ಅವರೊಡನೆ ಸಂಪರ್ಕವಿಟ್ಟು ಕೊಂಡಿದ್ದವರೆಂದು ಶ್ರೀಯುತ ಎಲಿಯಟ್ ಸ್ಮಿತ್ತರು[1] ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯಕ್ಕೆ ಪುರಾತನ ಈಜಿಪ್ಷಿಯನರೂ ಚಿನ್ನದ ಕೈಗಾರಿಕೆಯಲ್ಲಿ ನುರಿತ ಜನ ಎನ್ನುವ ಆಧಾರದ ಹೊರತು ಬೇರೆ ಯಾವ ಆಧಾರವೂ ಇದ್ದಂತೆ ಕಾಣುವುದಿಲ್ಲ. ಹೈದರಾಬಾದು ಪ್ರಾಂತದ ಪುರಾತನ ಗಣಿಗಳ ಶೋಧನೆ ನಡೆಸಿದ ಶ್ರೀ ಮನ್ನರು ಹೊರಗೆಡಹಿರುವ ಸಾಕ್ಷ್ಯಗಳು ಮೇಲಿನ ಅಭಿಪ್ರಾಯ ತಪ್ಪೆನ್ನುವುದನ್ನು ತೋರಿಸು ತ್ತವೆ. ಆಫ್ರಿಕಾ ಖಂಡದ ದಕ್ಷಿಣ ರೊಡೀಷಿಯಾ ಪ್ರಾಂತದಲ್ಲೆಲ್ಲ, ಸುಮಾರು ನಮ್ಮ ದಕ್ಷಿಣ ಇಂಡಿಯದಲ್ಲಿರುವಂಥ ಶಿಲೆಗಳೇ ಹರಡಿವೆ. ಅಲ್ಲಿಯೂ ಇಲ್ಲಿನಂತೆಯೇ ಸಣ್ಣ ಸಣ್ಣ ಗಣಿಗಳು ವಿಶೇಷವಾಗಿ ಕಂಡುಬರುತ್ತವೆ. ಅಲ್ಲಿ ಗಣಿ ತೋಡಿರುವ ರೀತಿ, ಒಳಗೆ ನಡೆದಿರುವ ಕೆಲಸ ನಮ್ಮ ದೇಶದಲ್ಲಿ ನಡೆದಂತೆಯೇ ಇದೆ. ನಮ್ಮ ದೇಶದ ಹುಣಿಸೆ ಮರ (Tamarind Indicas) ಮತ್ತು ಕಾಡುಹತ್ತಿಯ ಮರಗಳು ರೊಡೀಷಿಯದ ಗಣಿಗಳ ಸುತ್ತ ಬೆಳೆದಿವೆಯಂತೆ. ಈ ಸಸ್ಯಗಳು ಆ ದೇಶದಲ್ಲಿ ಬೆಳೆಯತಕ್ಕುವಲ್ಲ. ಈ ಮರಗಳೇ ಅಲ್ಲದೆ ಆಫ್ರಿಕನರು Mahobohobo ಎಂದು ಕರೆಯುವ ಬೇರೆ ಒಂದು ಮರವಿದೆಯಂತೆ. ಈ ಮರದ ಮಾತೃಸ್ಥಾನವೂ ದಕ್ಷಿಣ ಇಂಡಿಯಾ ಮತ್ತು ಮಲಯ. ಈ ಮರದ ವಿಷಯವಾಗಿ ರೊಡೀಷಿಯದ ಗಣಿಗಳ ಅನುಭವವಿರುವಾತ ಹೇಳಿದ ಮಾತು ಗಮನಾರ್ಹವಾಗಿದೆ —

> In Rhodesia this tree is found on the area of the Prehistoric Rock Mines, but the vast extent of the country now covered by

[1] Elliot Smith, *Human History*.

> its forests demonstrate that it arrived in some extremely remote times. Being an Indian fruit tree it was in all probability introduced by Indians. (*Guide to Rhodesia*, 2nd Edn.) issued by the Beira and Mashonaland Railways.[1]

ಈ ಎಲ್ಲ ಮರಗಳೂ ಹಳೆಯ ಚಿನ್ನದ ಗಣಿಗಳ ಹತ್ತಿರವೇ ಇರುವುದರಿಂದ ರೊಡೀಷಿಯದ ಗಣಿಗಳನ್ನು ಪತ್ತೆಮಾಡಿ ಕೆಲಸಮಾಡಿದವರು ನಮ್ಮ ದೇಶೀಯರೆ ಇರಬಹುದೆ ಎಂಬ ಅನುಮಾನ ಬರುತ್ತದೆ. ಹೈದರಾಬಾದು ಮತ್ತು ರೊಡೀಷಿಯದ ಗಣಿಗಳ ಪರಿಚಯ ಚೆನ್ನಾಗಿ ಉಳ್ಳ ಮೇಜರ್ ಲೈಟ್‌ಫುಟ್ (Major Lightfoot) ಅವರು ಶ್ರೀ ಲಿಯೊನಾರ್ಡ್ ಮನ್ನರಿಗೆ ಬರೆದ ಕಾಗದದಲ್ಲಿ — "The ancient workings here are very similar to those in Hyderabad as I can vouch by personal observation" . . . . ಎಂದು ಬರೆದಿದಾರೆ. ಆಫ್ರಿಕಾದ ಪುರಾತನ ಗಣಿಗಳ ವಿಷಯವನ್ನು ಸಂಗ್ರಹಿಸಿದ ಯೂರೋಪಿಯನರು ಸೆಸಿಲ್ ರೋಡ್ಸ್‌ನಿಗೆ (Cecil Rhodes) The finest rock mines in Rhodesia are undoubtedly of Asiatic Origin[2] ಎಂದು ವರದಿಮಾಡಿದಾರೆ.

ಹಳೆಯ ಗಣಿಗಳಲ್ಲಿ ಸಿಕ್ಕಿದ ಕಲ್ಲುಸುತ್ತಿಗೆ ಮತ್ತು ಇತರ ಕಲ್ಲಿನ ಆಯುಧಗಳು, ಸಲಾಕೆಯಂಥ ಕಬ್ಬಿಣದ ತುಂಡುಗಳು, ಇವುಗಳನ್ನು ನೋಡಿದರೆ, ಗಣಿಗಳಲ್ಲಿ ಕೆಲಸ ಮಾಡಿದ ಜನರು ಉತ್ತರಶಿಲಾಯುಗದ ಕೊನೆ ಅಥವಾ ಕಬ್ಬಿಣಯುಗದ ಮೊದಲಿಗೆ ಸೇರಿದ ಜನರೆಂದು ಊಹಿಸಬಹುದು. ಎಂದರೆ ಇವರ ಕಾಲವು ಕ್ರಿ.ಪೂ. ೧೩೦೦ ಕ್ಕೂ ಹಿಂದಿನದೆಂದಾಯಿತು.

ಮಾಸ್ಕಿಯ ಬಳಿಯ ಸುವರ್ಣನಗರಿ (?) ಇಷ್ಟು ಪ್ರಾಚೀನಕಾಲದಲ್ಲಿ ಮೊದಲಾದ ಕೈಗಾರಿಕೆ ಎಲ್ಲಿಯತನಕ ಮುಂದುವರಿಯಿತು? ಇದನ್ನು ಕೈಬಿಡಲು ಕಾರಣ ವೇನು ? ಈ ಪ್ರಶ್ನೆಗಳಿಗೆ ಉತ್ತರ ಖಂಡಿತವಾಗಿ ಹೇಳುವುದು ಕಷ್ಟ. ಹೈದರಾಬಾದು ಸಂಸ್ಥಾನದ ಮಾಸ್ಕಿಯ ಹತ್ತಿರ ಅಶೋಕನ ಶಾಸನ ಇದೆ. ಇದರ ಬಳಿ, ಬುದ್ಧಕಾಲದ ಇಟ್ಟಿಗೆಗಳು, ಬಣ್ಣದ ಮಡಕೆಗಳು, ಸುಣ್ಣ, ಚಿಪ್ಪು ಉಂಗುರಗಳು ದೊರೆಯುತ್ತವಂತೆ. ಅಶೋಕ ಮಹಾರಾಜನ ದಕ್ಷಿಣ ರಾಜಧಾನಿಯಾದ 'ಸುವರ್ಣನಗರಿ' ಇದೇ ಇದ್ದಿರಬಹುದೇ ಎಂದು ಶ್ರೀ ಮನ್ನರು ಅನುಮಾನಿಸುತ್ತಾರೆ. ಹೆಸರಿಗೆ ತಕ್ಕಹಾಗೆ ಈ ನಿವೇಶನಕ್ಕೆ ಅನತಿದೂರದಲ್ಲಿಯೇ ಪುರಾತನ ಚಿನ್ನದ ಗಣಿಗಳಿರುವುದನ್ನೂ

[1] Quoted by Leonard Munn. Ibid, 107.
[2] Ibid, 107.

ಸುತ್ತಮುತ್ತ ಚಿನ್ನದ ಕಲ್ಲನ್ನು ಕುಟ್ಟಲು ಉಪಯೋಗಿಸುವ ಕಲ್ಲುಗುಂಡುಗಳು ಬಿದ್ದಿರುವುದನ್ನೂ ನೋಡಿದರೆ ಇದೇ ಸುವರ್ಣನಗರಿ ಆಗಿರಬಹುದೆಂದು ತೋರುತ್ತದೆ. ಇಲ್ಲಿ ಇನ್ನೂ ಹೆಚ್ಚಿನ ಶೋಧನೆ ನಡೆಸಿದರೆ ಮೇಲಿನ ಅನುಮಾನ ಸ್ಥಿರಪಟ್ಟೀತು. ಅಂತೂ ಮೌರ್ಯರ ಕಾಲದಲ್ಲಿ, ಗೋದಾವರಿಯ ದಕ್ಷಿಣಕ್ಕಿರುವ ನಾಡಿನಲ್ಲಿ ಚಿನ್ನದ ಕೈಗಾರಿಕೆ ವಿಶೇಷವಾಗಿ ನಡೆಯುತ್ತಿತ್ತೆಂದು ಊಹಿಸಬಹುದು.

ಕೈಗಾರಿಕೆ ಯಾವ ಕಾಲದ ವರೆಗೆ ಮುಂದುವರಿಯಿತು? ಮುಂದೆ ಯಾವ ಕಾಲದವರೆಗೆ ಚಿನ್ನದ ಕೈಗಾರಿಕೆ ಮುಂದುವರಿಯಿತೆನ್ನುವುದನ್ನು ನಿರ್ಧರಿಸುವುದು ಕಷ್ಟ. ಹೈದರಾಬಾದಿನ ಹಟ್ಟಿ ಮತ್ತು ಅದರ ಸುತ್ತಿನ ಗಣಿಗಳನ್ನು ಶೋಧನೆ ಮಾಡಿದಾಗ ಒಂದಂಶ ಹೊರಬಿದ್ದಿತು. ಆ ಎಲ್ಲ ಗಣಿಗಳು ಪ್ರಕೃತಿ ವ್ಯಾಪಾರಗಳ ದೆಸೆಯಿಂದ ಕಾಲನ ಬಾಯಿಗೆ ತುತ್ತಾಗಿ ಮುಚ್ಚಿಹೋದುವಾಗಿ ಕಂಡುಬರಲಿಲ್ಲ. ಬೇಕೆಂದೇ ಪೂರ್ವಿಕರು ಕಲ್ಲುಗುಂಡು, ಮಣ್ಣೆಲ್ಲವನ್ನೂ ಗಣಿಯೊಳಗೆ ಉರುಳಿಸಿ ಮುಚ್ಚಿರುವುದಾಗಿ ಕಂಡುಬಂದಿತು. ಪ್ರಾಯಶಃ ದಂಡೆತ್ತಿ ಬಂದ ಹಗೆಗಳಿಗೆ ನೆಲೆ ಕಾಣಸಿಗಬಾರದೆಂದು ಗಣಿಗಳನ್ನು ಮುಚ್ಚಿಬಿಟ್ಟಹಾಗೆ ಕಾಣುತ್ತದೆ. ಹೈದರಾಬಾದು ಪ್ರಾಂತದ ಗಣಿಗಳ ಕಥೆ ಅಂದಿಗೇ, ಎಂದರೆ ಮಹಮದೀಯರು ದಂಡೆತ್ತಿಬಂದ ಕಾಲಕ್ಕೇ ಮುಗಿಯಿತು. ಮುಂದೆ ದಂಡೆತ್ತಿ ಬಂದವರಿಗಾಗಲಿ, ವಿಜಯನಗರದ ಅರಸುಗಳಿಗಾಗಲಿ ಚಿನ್ನದ ಗಣಿಗಳು ಆ ಪ್ರದೇಶದಲ್ಲಿದ್ದುದೇ ಮನವರಿಕೆಯಾಗದೆ ಹೋಯಿತು. ಚಿನ್ನದ ಕೈಗಾರಿಕೆಗೆ ಅದೇ ಕೊನೆಯಾಯಿತು.

ಈ ವಿಷಯವಾಗಿ ಮುಂದೆ ಶೋಧನೆ ನಡೆಯಬೇಕಾದ ಅಗತ್ಯ. ನಮ್ಮ ದೇಶದ ಗಣಿಗಳನ್ನು ತೋಡಿದವರು ಈಜಿಪ್ಷಿಯನರೆಂದು ಎಲಿಯಟ್ ಸ್ಮಿತ್ತರೂ, ಚೀಣೀಯರೆಂದು ಷ್ವಾರ್ಸ್ (Schwarz) ಅವರೂ ಅಭಿಪ್ರಾಯಪಟ್ಟಿದ್ದಾರೆ. ಯಾವ ದಂಡೆತ್ತಿ ಬಂದ ಜನಾಂಗವಾಗಲಿ, ವ್ಯಾಪಾರಕ್ಕಾಗಿ ಬಂದ ವಿದೇಶೀಯರಾಗಲಿ ಇಲ್ಲಿಯ ಚಿನ್ನದ ಗಣಿಗಳನ್ನು ತೋಡಿದರೆನ್ನುವುದನ್ನು ನಂಬುವುದು ಕಷ್ಟ. ನೂರಾರು ಮೈಲಿ ದೇಶವನ್ನೆಲ್ಲಾ ಸಂಚರಿಸಿ, ಒಂದೂಬಿಡದಂತೆ ಚಿನ್ನದ ನೆಲೆಯೆಲ್ಲವನ್ನೂ ಪತ್ತೆಮಾಡಿ ೫೦೦–೬೦೦ ಅಡಿಗಳವರೆಗೂ ಕೂಪಗಳನ್ನಿಳಿಸಿ ಕೆಲಸಮಾಡಿದ ಜನ ಇಂದಿದ್ದು ನಾಳೆ ಹೋಗುವ ವಿದೇಶಿಗಳದಲ್ಲ ಎನ್ನುವುದು ಸ್ಪಷ್ಟ. ನೂರಾರು ವರ್ಷಗಳ ಪರಿಶ್ರಮ ಎದ್ದು ಕಾಣುತ್ತದೆ ಅವರು ಮಾಡಿದ ಕೆಲಸದಲ್ಲಿ. ಈ ಎಲ್ಲ ಕೆಲಸ ದೇಶದಲ್ಲಿನ ಮೂಲನಿವಾಸಿಗಳದೇ ಎನ್ನುವ ವಾದವನ್ನು ನಾವು ಒಪ್ಪಬಹುದಾಗಿದೆ. ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಚಿನ್ನದ ಕೈಗಾರಿಕೆಯ ವಿಷಯವಾಗಿ ಎಲ್ಲಿಯಾದರೂ ಪ್ರಸ್ತಾಪ ಬಂದಿದ್ದರೆ ಪಂಡಿತರು ಅದನ್ನು ಎತ್ತಿ ತೋರಿ ಈಗ ಅಸ್ಪಷ್ಟವಾಗಿ

ತೋರುತ್ತಿರುವ ನಮ್ಮ ಪುರಾತನರ ಕಲೆಯ ಇತಿಹಾಸದ ಮೇಲೆ ಇನ್ನೂ ಹೆಚ್ಚಿನ ಬೆಳಕು ಬೀಳುವಂತೆ ಮಾಡಬೇಕು.[1]

ಕನ್ನಡನಾಡಿನ ಚಿನ್ನದ ಗಣಿಗಳು

ಗೋದಾವರಿಯಿಂದ ಹಿಡಿದು ಕಾವೇರಿಯವರೆಗಿನ ನಡುವಣ ನಾಡು ಕನ್ನಡ ನಾಡು ಹೇಗೊ ಹಾಗೆ ಚಿನ್ನದ ನಾಡೂ ಹೌದು. ನಮ್ಮ ಭಾರತದ ಎಲ್ಲ ಚಿನ್ನದ ಗಣಿಗಳಿರುವುದೂ ಈ ಸರಹದ್ದಿನೊಳಗೇ. ಈ ಎಲ್ಲೆಯೊಳಗೆ ಕಂಡುಬರುವ ಮುಖ್ಯ ಮುಖ್ಯವಾದ ಗಣಿಗಳಿರುವ ಸ್ಥಳಗಳನ್ನು ನಕ್ಷೆಯಲ್ಲಿ ತೋರಿಸಿದೆ. ನಾಡಲ್ಲೆಲ್ಲ ಚಿನ್ನದ ಗಣಿಗಳಿದ್ದರೂ ಹೆಚ್ಚಿನ ಕೆಲಸ ನಡೆದಿರುವುದು ಮೈಸೂರು ಪ್ರಾಂತದ ಗಣಿಗಳಲ್ಲಿ ಮಾತ್ರ. ಆದುದರಿಂದ ಮೈಸೂರು ಪ್ರಾಂತದ ಗಣಿಗಳ ವಿಷಯವನ್ನು ಮುಂದೆ ವಿಸ್ತರಿಸಿ ಬರೆಯಲಾಗಿದೆ. ಮೈಸೂರಿನ ಹೊರಗೆ ಮುಖ್ಯವಾಗಿ ಕೆಲಸ ನಡೆದಿರುವುದು ಹೈದರಾಬಾದು ಸಂಸ್ಥಾನದ ಲಿಂಗಸುಗೂರು ಮತ್ತು ರಾಯಿಚೂರು ಜಿಲ್ಲೆ, ಧಾರವಾಡ ಜಿಲ್ಲೆ ಮತ್ತು ಅನಂತಪುರದ ಜಿಲ್ಲೆಗಳಲ್ಲಿ.

ಹೈದರಾಬಾದು ಸಂಸ್ಥಾನ. ಕೋಲಾರದ ಗಣಿಗಳಲ್ಲಿ ಬಿಟ್ಟರೆ ಹೆಚ್ಚಿನ ಕೆಲಸ ನಡೆದಿರುವುದು ಲಿಂಗಸುಗೂರು ಜಿಲ್ಲೆಗೆ ಸೇರಿದ **ಹಟ್ಟಿ** ಗ್ರಾಮದ ಹತ್ತಿರ. ೧೯೦೧ನೆಯ ಇಸವಿಯಲ್ಲಿ ಮೊದಲಾದ ಕೆಲಸ ೧೯೨೦ರ ಕೊನೆಯವರೆಗೂ ನಡೆಯಿತು. ೧,೦೧೦,೭೫೦ ಪೌಂಡುಗಳು ಬೆಲೆಬಾಳುವ ೨೫೬,೪೨೪ ಔನ್ಸು (ಎಂದರೆ ೬೪೧,೦೬೦ ತೊಲ) ಚಿನ್ನ ಈ ಗಣಿಗಳಿಂದ ಬಂದಿದೆ. ೧೯೨೦ರಿಂದ ಈ ಗಣಿಯಲ್ಲಿ ಕೆಲಸ ನಡೆಯಲಿಲ್ಲ. ಈಚೆಗೆ ಈ ಗಣಿಯನ್ನು ಪುನಃ ಉದ್ಧಾರಮಾಡುವ ಪ್ರಯತ್ನಗಳು ನಡೆಯುತ್ತಿವೆ.

ರಾಯಿಚೂರು ಜಿಲ್ಲೆಗೆ ಸೇರಿದ **ತೊಪ್ಪಲುದೊಡ್ಡಿಯ** ಹತ್ತಿರ ೧೯೦೫ರಲ್ಲಿ ಸ್ವಲ್ಪ ಕೆಲಸ ನಡೆಯಿತು. ಆದರೆ ಕಲ್ಲಿನಲ್ಲಿ ಚಿನ್ನ ಹೆಚ್ಚು ಪ್ರಮಾಣದಲ್ಲಿ ಸೇರಿದ್ದಂತೆ ಕಾಣಲಿಲ್ಲವಾದ್ದರಿಂದ ೧೯೦೮ರಲ್ಲಿ ಇಲ್ಲಿ ನಡೆಯುತ್ತಿದ್ದ ಕೆಲಸ ನಿಂತುಹೋಯಿತು.

ಧಾರವಾಡ ಜಿಲ್ಲೆ. ಧಾರವಾಡ ಜಿಲ್ಲೆಯ ಗದಗಿನ ಹತ್ತಿರವೂ ೧೯೦೫ರಿಂದ ೧೯೧೧ರ ವರೆಗೆ ಕೆಲಸ ನಡೆಯಿತು. ಇಲ್ಲಿ ಸಹ ಕಲ್ಲಿನಲ್ಲಿ ಸೇರಿರುವ ಚಿನ್ನ ಹೆಚ್ಚಿಲ್ಲವೆಂದು ಕೆಲಸವನ್ನು ಕೈಬಿಟ್ಟರು.

ಅನಂತಪುರ ಜಿಲ್ಲೆಯಲ್ಲಿ ಧರ್ಮಾವರ ತಾಲ್ಲೂಕಿನ ರಾಮಗಿರಿಯ ಬಳಿ ಹಳೆಯ ಗಣಿಗಳಿವೆ. ಇಲ್ಲಿಯೂ ಹೆಚ್ಚು ಕೆಲಸ ನಡೆದಿಲ್ಲ.

---

[1] ಜರಗುಗರ್ಚು — ಎಂಬ ಮಾತು ಸಾಹಿತ್ಯದಲ್ಲಿ ಬಳಕೆಯಲ್ಲಿದೆ. ಅದು ಚಿನ್ನವನ್ನು ತೊಳೆಯುವ ಕಾರ್ಯವನ್ನು ಸೂಚಿಸುವುದು — ಡಿ.ಎಲ್.ಎನ್.

ಕೋಲಾರದ ಚಿನ್ನದ ಪ್ರದೇಶ

ಹಿಂದೂದೇಶದ ಚಿನ್ನದ ವಾರ್ಷಿಕ ಉತ್ಪತ್ತಿಯಲ್ಲಿ ಶೇಕಡ ೯೯ ಕ್ಕೂ ಹೆಚ್ಚಿನ ಭಾಗ ಮೈಸೂರಿನಿಂದ, ಅದರಲ್ಲೂ ಕೋಲಾರದ ಚಿನ್ನದ ಪ್ರದೇಶದಿಂದ ಬರುತ್ತದೆ. ಈ ಪ್ರದೇಶದಲ್ಲಿ ಈಗ ಕೆಲಸಮಾಡುತ್ತಿರುವ ಗಣಿಗಳು ನಾಲ್ಕು : ಮೈಸೂರು ಗಣಿ, ಛಾಂಪಿಯನ್ ಗಣಿ, ಉರಿಗಂ ಗಣಿ ಮತ್ತು ನಂದಿದುರ್ಗ ಗಣಿ. ಈ ನಾಲ್ಕು ಗಣಿಗಳಿಂದ ಒಟ್ಟುಗೂಡಿ ವರ್ಷ ಒಂದಕ್ಕೆ ಸರಾಸರಿ ೩,೨೫,೦೦೦ ಔನ್ಸು ಎಂದರೆ ಸುಮಾರು ೮೧೦,೦೦೦ ತೊಲ ಬಂಗಾರ ಹುಟ್ಟುತ್ತದೆ. (ಕಳೆದ ಎರಡು ವರ್ಷಗಳಲ್ಲಿ ಉತ್ಪತ್ತಿ ಸ್ವಲ್ಪ ಕಡಿಮೆಯಾಗಿದೆ. ಕೋಲಾರದ ಗಣಿಯಲ್ಲಿ ಕೆಲಸವನ್ನು ಯೂರೋಪಿಯನರು ಮೊದಲು ಮಾಡಿದಂದಿನಿಂದ ೧೯೪೨ರ ಕೊನೆಯ ವರೆಗೆ ಸುಮಾರು ೧೪೮ ಕೋಟಿ ರೂಪಾಯಿಗಳ ಬೆಲೆ ಬಾಳುವ ಚಿನ್ನ ಈ ಗಣಿಗಳಿಂದ ಬಂದಿದೆ. ಹಿಂದೆ ನಮ್ಮ ಪುರಾತನರು ಎಷ್ಟು ಚಿನ್ನ ಪಡೆದಿದ್ದರೆನ್ನುವುದು ನಮಗೆ ತಿಳಿಯದು. ನಮ್ಮ ದೇಶದ ಸಂಪತ್ತಿನ ಒಂದು ಹಿರಿಯ ಅಂಗವಾದ ಈ ಕೋಲಾರದ ಗಣಿಗಳ ಹಿಂದಿನ ಚರಿತ್ರೆಯನ್ನೂ ಅಲ್ಲಿನ ಕಾರ್ಯಕಲಾಪಗಳ ವಿವರವನ್ನೂ ತಿಳಿಯುವುದು ಆವಶ್ಯಕ.

ಕೋಲಾರದ ಗಣಿಯ ಚರಿತ್ರೆ. ಕೋಲಾರದ ಗಣಿಯ ಇತಿಹಾಸ ಬಹು ಹಳೆಯದಾದರೂ ಚರಿತ್ರಾಂಶ ಯಾವುದೂ ಈ ವರೆಗೆ ದೊರೆತಿಲ್ಲ. ಶಾಸನಗಳಲ್ಲಿಯೂ ಅದರ ಉಲ್ಲೇಖವಿಲ್ಲ. ಗ್ರೀಕ್ ಚರಿತ್ರಕಾರನಾದ ಪ್ಲಿನಿ ಹೇಳಿದುದೇ ಕೊನೆಯ ಮಾತು. ವಿಜಯನಗರ ಸಾಮ್ರಾಜ್ಯದ ಸರಹದ್ದಿನೊಳಗಿದ್ದರೂ ಅದರ ಪ್ರಸ್ತಾಪ ಎಲ್ಲಿಯೂ ಇಲ್ಲ. ಟಿಪ್ಪೂಸುಲ್ತಾನನು ಒಬ್ಬ ಬ್ರಾಹ್ಮಣನ ಉಮೇದುವಾರಿಕೆಯಲ್ಲಿ ಕೆಲಸ ನಡೆಸಿದನೆಂದೂ, ಆದರೆ ಬ್ರಾಹ್ಮಣ ಮಹಾಶಯನು ಆಸಕ್ತಿಯಿಂದ ಕೆಲಸ ಮಾಡಿಸಲಿಲ್ಲವೆಂದೂ ಅದರ ಫಲವಾಗಿ ಕೆಲಸ ಅಲ್ಲಿಗೇ ನಿಂತುಹೋಯಿತೆಂದೂ ಸ್ಥಳ ಚರಿತ್ರೆಯಿದೆ.

ಕೋಲಾರದ ಗಣಿಯ ಈಚಿನ ಚರಿತ್ರೆ ೧೮೦೨ರಿಂದ ಮೊದಲಾಗುತ್ತದೆ. ಲೆಫ್ಟಿನೆಂಟ್ ವಾರೆನ್ (Lt. Warren) ಎಂಬಾತ ಬೇತಮಂಗಲದ ಕೆರೆಯ ಹತ್ತಿರ ಬೀಡುಬಿಟ್ಟಿದ್ದಾಗ ಸುತ್ತಮುತ್ತಲಿನ ಹಳ್ಳಿಯವರು ಚಿನ್ನದ ವಿಷಯ ಮಾತನಾಡುವುದನ್ನು ಕೇಳಿ, ಉರಿಗಂ ಮತ್ತು ಮಾರಿಕುಪ್ಪಗಳ ಬಳಿ ಕೆಲಸ ನಡೆಸಿ ಸ್ವಲ್ಪ ಚಿನ್ನ ಪಡೆದನಂತೆ. ಅಲ್ಲಿನ ಹಳ್ಳಿಗರೂ ಆಗಾಗ ಒಟ್ಟು ಸೇರಿ ಕೆಲಸ ನಡೆಸಿ ಬಂದ ಚಿನ್ನವನ್ನು ಹಂಚಿಕೊಳ್ಳುತಿದ್ದರಂತೆ. ಆದರೆ ಅವರು ಬಹಳ ಅಪಾಯಕರವಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದರೆಂದು ಹೇಳಿ ಸರ್ ಮಾರ್ಕ್ ಕಬ್ಬನ್ ಒಂದು ಶಾಸನವನ್ನು ಹೊರಡಿಸಿ ಅಲ್ಲಿ ನಡೆಯುತ್ತಿದ್ದ ಕೆಲಸವನ್ನು ನಿಲ್ಲಿಸಿಬಿಟ್ಟನು.

ಕೋಲಾರದ ಗಣಿಯನ್ನು ಯೂರೋಪಿಯನರ ಕಣ್ಣಿಗೆ ಬೀಳುವಂತೆ ಮಾಡಿ, ಈಚಿನ ಚಿನ್ನದ ಕೈಗಾರಿಕೆಗೆ ಕಾರಣನಾದವನು ಲೆವೆಲ್ (Lavelle). ಈತ ಸರಕಾರದವರಿಗೆ ತನ್ನುದ್ದೇಶ ತಿಳಿಯಬಾರದೆಂದೊ ಏನೊ, ಕೋಲಾರದ ಪ್ರದೇಶದಲ್ಲಿ ಕಲ್ಲಿದ್ದಲನ್ನು ಪಡೆಯುವುದಕ್ಕೆ ೧೮೭೩ರಲ್ಲಿ ರಹದಾರಿ ಕೇಳಿದನು. ೧೮೭೫–೭೬ರಲ್ಲಿ ಸ್ವಲ್ಪ ಕೆಲಸ ನಡೆಸಿ, ಕೊನೆಗೆ ೫,೦೦೦ ಪೌಂಡು ಬಂಡವಾಳವಿರುವ ಲಂಡನಿನ ಒಂದು ಕಂಪೆನಿಗೆ ತನ್ನ ಹಕ್ಕನ್ನು ಮಾರಿದನು. ಮೊದಲಲ್ಲಿ ಹೆಚ್ಚು ಚಿನ್ನ ಸಿಕ್ಕಿದುದನ್ನು ಕಂಡು ಬೇರೆಬೇರೆ ಕಂಪನಿಯವರು ವಿಶೇಷ ಬಂಡವಾಳ ಹಾಕಿಕೊಂಡು ಬಂದರು. ಆದರೆ ಅವರು ಸ್ಥಳದ ಪರಿಶೋಧನೆಗೆ ಗಮನಕೊಡದೆ ತಮ್ಮ ದೇಶೀಯರಿಗೆ ಹೆಚ್ಚು ಸಂಬಳ ಕೊಟ್ಟು ಕರೆಸಿಕೊಳ್ಳುವುದರಲ್ಲೂ, ಸೊಗಸಾದ ಭವನಗಳನ್ನು ಕಟ್ಟುವುದರಲ್ಲೂ, ಕುಟ್ಟುವ ಯಂತ್ರಗಳನ್ನು ತರಿಸುವುದರಲ್ಲೂ ತಮ್ಮ ಬಂಡವಾಳವನ್ನೆಲ್ಲ ಕರಗಿಸಿದರು. ಇವರೇನುಮಾಡಿದರೂ ಕೆಳಗಿನಿಂದ ಚಿನ್ನ ಬೇರೆ ಬರಲಿಲ್ಲ. ತತ್ಫಲವಾಗಿ ಕಂಪನಿಗಳೆಲ್ಲವೂ ದಿವಾಳಿಯೆದ್ದುಹೋದುವು. ೧೮೮೭ರಲ್ಲಿ ಎಲ್ಲರೂ ಲಂಡನಿನಲ್ಲಿ ಸಭೆ ಸೇರಿ ಮುಂದೇನು ಮಾಡಬೇಕೆಂದು ಆಲೋಚನೆ ನಡೆಸಿದರು. ಗಣಿಗಳಲ್ಲಿ ಕೆಲಸ ಮಾಡಿ ಪರಿಶ್ರಮವಿದ್ದ ಕ್ಯಾಪ್ಟನ್ ಪ್ಲುಮರನು (Capt. Plumer) ಅಳಿದುಳಿದಿದ್ದ ಒಂಡವಾಳವನ್ನು ಖರ್ಚುಮಾಡಿ ನೋಡೋಣವೆಂದು ಹೇಳಿದಮೇಲೆ ಕೆಲಸವನ್ನು ಮುಂದುವರಿಸಬೇಕೆಂಬ ನಿರ್ಣಯವಾಯಿತು. ಪ್ಲುಮರನ ಅದೃಷ್ಟದಿಂದ ಮೊದಲಿನ ಹಳೆಯ ಗಣಿಗಳ ತಳದಲ್ಲಿ ಚಿನ್ನ ವಿಶೇಷವಾಗಿ ಸೇರಿದ್ದ ಛಾಂಪಿಯನ್ ಸಿರ (Champion Lode) ಸಿಕ್ಕಿತು. ಪ್ಲುಮರನ ಕಂಪನಿಗೆ ಬಂದ ಲಾಭದಿಂದ ಉತ್ತೇಜಿತರಾಗಿ ಮಿಕ್ಕ ಕಂಪನಿಯವರೂ ಒಂದು ಕೆಲಸಮಾಡಲು ತೊಡಗಿದರು. ಅಂದಿನಿಂದ ಇಂದಿನವರೆಗೂ ಗಣಿಗಳಲ್ಲಿ ಯಾವೊಂದು ತೊಂದರೆಯೂ ಇಲ್ಲದೆ ಸುಸೂತ್ರವಾಗಿ ಕೆಲಸ ನಡೆಯುತ್ತಿದೆ. ೧೯೦೨ರಲ್ಲಿ ವಿದ್ಯುತ್ತಿನ ಸಹಾಯವೂ ದೊರೆತು, ವೆಚ್ಚ ಕಡಿಮೆಯಾಗಿ, ಗಣಿಗಳು ಮತ್ತೂ ಅಭಿವೃದ್ಧಿಹೊಂದಲು ಕಾರಣವಾಯಿತು.

ಭೂವಿನ್ಯಾಸ. ಕೋಲಾರದ ಚಿನ್ನದ ಪ್ರದೇಶದಲ್ಲಿನ ಶಿಲಾಸಮುದಾಯಗಳ ರಚನೆ, ಅವುಗಳ ಹರವು ಮತ್ತು ಪರಸ್ಪರ ಸಂಬಂಧ ಇವೆಲ್ಲವನ್ನೂ ತೋರಿಸುವ ನಕ್ಷೆಯನ್ನು ಪಕ್ಕದಲ್ಲಿ ಕೊಟ್ಟಿದೆ. ಈ ಪ್ರದೇಶದ ಶಿಲೆಗಳೆಲ್ಲವನ್ನೂ ಪರೀಕ್ಷಿಸಿ, ಪರಿಶೋಧನೆಮಾಡಿ, ನಕ್ಷೆಯನ್ನು ಮೊದಲು ತಯಾರಿಸಿದ ಕೀರ್ತಿ ದಿವಂಗತರಾದ ಶ್ರೀಯುತ ಬೆಂಗಳೂರು ಜಯರಾಮರವರಿಗೆ ಸಲ್ಲತಕ್ಕದ್ದು. ಅವರು ತಯಾರಿಸಿದ ನಕ್ಷೆಯ ಆಧಾರದ ಮೇಲೆ ಇಲ್ಲಿ ಕೊಟ್ಟಿರುವ ನಕ್ಷೆಯನ್ನು ರಚಿಸಲಾಗಿದೆ.

ಧಾರವಾಡ ಪದರು ಶಿಲೆಯೆಂದು ನಾಮಕರಣ ಮಾಡಿರುವ ಶಿಲಾಸಮುದಾಯ

ಮೊದಲಿಗೆ ಏಕವಾಗಿದ್ದು ದಕ್ಷಿಣ ಖಂಡವನ್ನೆಲ್ಲ ಆಕ್ರಮಿಸಿಕೊಂಡಿತ್ತು. ಶಿಲೆಗಳು ರೂಪುಹೊಂದಿದನಂತರ ಕೆಳಗಿನಿಂದ ಉಕ್ಕಿಬಂದ ಗ್ರ್ಯಾನೈಟುಗಳು ವಿಶಾಲವಾಗಿ ಹರಡಿದ್ದ ಧಾರವಾಡ ಶಿಲೆಗಳನ್ನು ತುಂಡರಿಸಿ, ದೂರ ದೂರ ಚೆದರಿಸಿಬಿಟ್ಟವು. ಹೀಗೆ ಚೆದರಿಹೋದ ಬೇರೆ ಬೇರೆ ಪದರು ಶಿಲಾವಲಯಗಳನ್ನು ನಕ್ಷೆಯಲ್ಲಿ ತೋರಿಸಿದೆ. (ನಕ್ಷೆ ೩) ಕೋಲಾರದ ಪದರು ಶಿಲಾವಲಯ ಇಂಥದೊಂದು ಹರಿದುಹೋಗಿ ಉಳಿದಿರುವ ತುಂಡು ಈ ಪದರು ಶಿಲೆಗಳನ್ನು ಉತ್ತರ ದಕ್ಷಿಣ ಸುಮಾರು ನಲವತ್ತು ಮೈಲಿಗಳು ಗುರುತಿಸಬಹುದು. ವಲಯದ ಸರಾಸರಿ ಅಗಲ ನಾಲ್ಕು ಮೈಲಿಗಳು, ಒಟ್ಟು ವಿಸ್ತೀರ್ಣ ಸುಮಾರು ೧೦೦ ಚದರ ಮೈಲಿಗಳು. ಕೋಲಾರ ಪದರು ಶಿಲಾವಲಯ ಕಿರಿದಾದರೂ ನಮ್ಮ ನಾಡಿನದೇ ಏಕೆ, ಒಟ್ಟು ಇಂಡಿಯಾದ ಚಿನ್ನವೆಲ್ಲ ಇಲ್ಲಿಂದಲೇ ಬರುವುದರಿಂದ, ಈ ವಲಯಕ್ಕೆ ಭೂಶಾಸ್ತ್ರಜ್ಞರು ವಿಶೇಷ ಪ್ರಾಶಸ್ತ್ಯ ಕೊಟ್ಟಿದಾರೆ.

ಹಾರನ್‌ಬ್ಲೆಂಡ್ ಪದರುಶಿಲೆಗಳೇ ವಲಯದ ಬಹುಭಾಗವನ್ನು ಆಕ್ರಮಿಸಿವೆ. ವಲಯದ ಪಶ್ಚಿಮ ಅಂಚಿನಲ್ಲಿ ಕಬ್ಬಿಣ ಸೇರಿರುವ ಬೆಳುಗಲ್ಲುಗಳ ಸಾಲುಗಳು ಹಲವಿವೆ. ಇವುಗಳ ಮೇಲೆಯೂ ಕೆಲವು ಹಳೆಯ ಗಣಿಗಳನ್ನು ತೋಡಿದ್ದಾರೆ. ಹಾರನ್ ಬ್ಲೆಂಡ್ ಪದರುಶಿಲೆಯ ಪೂರ್ವಕ್ಕೆ ಸಣ್ಣ ಸಣ್ಣ ಕಲ್ಲುಗುಂಡುಗಳನ್ನು ತೋರಿಸುವ ಒಂದರೊಡನೊಂದು ಕಲಸಿಕೊಂಡು ಸುಚ್ಚುಗುಚ್ಚಾದಂತಿರುವ ಕದಂಬ ಶಿಲೆಗಳು ಕಾಣುತ್ತವೆ.

ಛಾಂಪಿಯನ್ ಸಿರ—ಅದರ ಮುಖ್ಯ ಲಕ್ಷಣಗಳು. ಚಿನ್ನದ ಸಿರಗಳಿರುವ ದೃಷ್ಟಿಯಿಂದ ನಮಗೆ ಹಾರನ್‌ಬ್ಲೆಂಡ್ ಪದರು ಶಿಲೆಗಳೇ ಮುಖ್ಯ. ಈ ಶಿಲೆಗಳನ್ನು ಭೇದಿಸಿಕೊಂಡು ಬಂದಿರುವ ಬೆಣಚು ಕಲ್ಲಿನ ಸಿರಗಳ ಸಾಲುಗಳು ಹಲವಿವೆ. ಈ ಸಿರಗಳೆಲ್ಲದರಲ್ಲಿಯೂ ಚಿನ್ನವಿಲ್ಲ. ಇವುಗಳಲ್ಲೊಂದಾದ ಛಾಂಪಿಯನ್ ಸಿರ ಒಂದರಲ್ಲೇ ಚಿನ್ನ ವಿಶೇಷವಾಗಿ ಸೇರಿರುವುದು. ಪುರಾತನರು ಕೆಲಸಮಾಡಿದ್ದ ಹಳೆಯ ಗಣಿಗಳೆಲ್ಲವೂ ಈ ಛಾಂಪಿಯನ್ ಸಿರದ ಮೇಲೆಯೇ ಇದ್ದುದು. ಈಗ ಕೆಲಸ ನಡೆಯುತ್ತಿರುವ ಮುಖ್ಯ ಗಣಿಗಳಾದ, ಮೈಸೂರು, ಛಾಂಪಿಯನ್, ಉರಿಗಂ ಮತ್ತು ನಂದಿದುರ್ಗ ಗಣಿಗಳಿರುವುದಾದರೂ ಈ ಛಾಂಪಿಯನ್ ಸಿರದ ಮೇಲೆಯೇ. ಸುಮಾರು ನಾಲ್ಕು ಮೈಲಿಗಳಷ್ಟು ದೂರ ಈ ಸಿರವನ್ನು ಚೆನ್ನಾಗಿ ಗುರುತಿಸಬಹುದು. ಉತ್ತರಕ್ಕೆ ಎಂದರೆ ಬಾಲಘಾಟು ಗಣಿಗೂ ಆ ಕಡೆ ಸಿರ ಒಡೆದುಹೋಗುತ್ತದೆ. ಮೈಸೂರು ಗಣಿಯ ದಕ್ಷಿಣಕ್ಕೂ ಸಿರ ಸ್ಥಿರವಾಗಿ ಕಾಣುವುದಿಲ್ಲ. ದಕ್ಷಿಣದಲ್ಲಿ ಮೈಸೂರು ಗಣಿಯಿಂದ ಹಿಡಿದು ಉತ್ತರದಲ್ಲಿ ಬಾಲಘಾಟು ಗಣಿಯವರೆಗೆ, ಎಂದರೆ ಸುಮಾರು

ನಾಲ್ಕು ಮೈಲಿಗಳ ದೂರ ಸಿರವನ್ನು ಗುರುತಿಸಬಹುದು. ಈ ಉದ್ದಕ್ಕೂ ಸಿರದ ಸರಾಸರಿ ಅಗಲ ನಾಲ್ಕು ಅಡಿ. ಒಂದೊಂದು ಕಡೆ ಮಾತ್ರ ಸಿರ ಮಡಿಕೆಬಿದ್ದು ಅಗಲ ಹೆಚ್ಚಿದಂತೆ ಕಾಣುತ್ತದೆ. ಹೀಗೆ ಮಡಿಕೆಬಿದ್ದ ಪ್ರದೇಶದಲ್ಲಿ ಚಿನ್ನ ವಿಶೇಷವಾಗಿ ಸೇರಿರುವುದಾಗಿ ತೋರುತ್ತದೆ. ಸಿರದ ಉದ್ದಕ್ಕೂ ಅಲ್ಲಲ್ಲೇ ಇಂಥ ಸಮೃದ್ಧಿಯಾದ ಪ್ರದೇಶಗಳು ಸಿಗುತ್ತವೆ. ಇದಕ್ಕೆ ಗಣಿಯವರು 'ಷೂಟ್' (shoot) — ಕುಡಿ, ಚಿಗುರು — ಎಂದು ಕರೆಯುತ್ತಾರೆ. ಇಂಥ ಎರಡು ಸಮೃದ್ಧಿಯಾದ ಪ್ರದೇಶಗಳ ನಡುವೆ ಬಂಜರು ಕಲ್ಲಿರುತ್ತದೆ. ಇದರಲ್ಲಿ ಚಿನ್ನವಿರುವುದಿಲ್ಲ, ಇದ್ದರೂ ತೀರ ಅಲ್ಪಪ್ರಮಾಣದಲ್ಲಿರುತ್ತದೆ. ಒಂದು ಸಮೃದ್ಧಿಯಾದ ಪ್ರದೇಶ ಬರಿದಾಗುವುದರೊಳಗಾಗಿ ಅಂಥದೇ ಮತ್ತೊಂದು ದೊರೆಯುವುದರಿಂದ ಗಣಿಯಲ್ಲಿನ ಕೆಲಸ ಸುಸೂತ್ರವಾಗಿ ನಡೆಯುತ್ತ ಹೋಗುತ್ತದೆ. ಛಾಂಪಿಯನ್ ಸಿರದ ಈ ಎಲ್ಲ ಲಕ್ಷಣಗಳು ಮೊದಲಿಗೆ ಗಣಿಗಳನ್ನು ತೋಡಿದ ಪುರಾತನರಿಗೆ ತಿಳಿದಿತ್ತೆಂದು ಕಾಣುತ್ತದೆ. ಅವರು ತೋಡಿದ ಅತಿ ಆಳವಾದ ಗಣಿ (ಸುಮಾರು ೨೬೦ ಅಡಿಗಳು) ಇಂಥದೊಂದು ಸಮೃದ್ಧಿಯಾದ ಪ್ರದೇಶದ ಮೇಲೆ ತೆಗೆದುದು. ಇದೇ ವಿಷಯವಾಗಿ ಪ್ರಪಂಚದ ಚಿನ್ನದ ಗಣಿಗಳ ಇತಿಹಾಸಕಾರನಾದ Maclaren ಪಂಡಿತನು ಹೀಗೆ ಬರೆಯುತ್ತಾನೆ: —

> 'The rich shoot of the Mysore Mine had been worked to a depth of 236 ft. by the ancients who had apparently grasped the intricacies of Kolar gold deposition. This great shoot had a stoping length of 800 ft. with a maximum width of 35 ft. . . . . and is certainly the most notable shoot in the history of gold mining.'

ಕೋಲಾರದ ಗಣಿ ಸಮ್ಮ ಪಾಲಿಗೆ 'ದಿನದಿನದಲೆಂಟೆಂಟು ಭಾರದ ಕನಕ'ವನ್ನು ಕೊಡುವ ಸ್ಯಮಂತಕ ಮಣಿ. ಈ ಕನಕವನ್ನು ಪಡೆಯಲು ದಿನವೂ ಸುಮಾರು ೨೪,೦೦೦ ಜನರು ಕೆಲಸಮಾಡುತ್ತಾರೆ. ಇವರಲ್ಲಿ ಸುಮಾರು ೩೦೦ ಮಂದಿ ಯೂರೋಪಿಯನರು, ಮಿಕ್ಕವರೆಲ್ಲ ಭಾರತೀಯರು. ಇಷ್ಟೊಂದು ಜನ ಹಗಲಿರುಳೂ ಕೆಲಸಮಾಡಬೇಕಾದ ಅಗತ್ಯವಿರುವ ಈ ಗಣಿಗಳಲ್ಲಿನ ಕೆಲಸ ಎಷ್ಟು ಅಗಾಧ ಎನ್ನುವುದನ್ನು ಊಹಿಸಿಕೊಳ್ಳಬಹುದು.

ಚಿನ್ನ ಸೇರಿರುವುದು ಬೆಣಚುಕಲ್ಲಿನ ಸಿರಗಳಲ್ಲಷ್ಟೆ. ಈ ಸಿರಗಳ ಉದ್ದ ಹೆಚ್ಚು, ಅಗಲ ಕಡಿಮೆ; ಅಲ್ಲದೆ ಅವು ಬಹು ಆಳದವರೆಗೂ ಹಬ್ಬಿರುತ್ತವೆ. ಆದರಿಂದ ಚಿನ್ನ ಪಡೆಯಬೇಕಾದರೆ ಗಣಿ ಕೆಳಗೆ ಇಳಿಯುತ್ತ ಹೋಗಬೇಕು. ಪ್ರಪಂಚದ ಆಳವಾದ ಗಣಿಗಳೆಲ್ಲವೂ ಚಿನ್ನದ ಗಣಿಗಳೇ ಆಗಿರುವುದು ಈ ಕಾರಣದಿಂದಲೇ.

ಗಣಿ ತೋಡುವ ರೀತಿ. ಕೋಲಾರದ ಛಾಂಪಿಯನ್ ಸಿರ ಬಹು ಆಳದವರೆಗೂ ಕಂಡುಬರುತ್ತದೆ. ಭೂಮಿಯ ಮೇಲುಗಡೆ ಈ ಸಿರದ ಇಳಿವು (Dip) ಸುಮಾರು ೩೫°. ಕೆಳಗೆ ಇಳಿದಂತೆಲ್ಲಾ ಸಿರ ನೆಟ್ಟಗಾಗುತ್ತ ಬಂದು ತಳದ ಮಟ್ಟಗಳಲ್ಲಿ ಗೋಡೆ ನಿಂತಂತೆ ನಿಲ್ಲುತ್ತದೆ. ಚಿನ್ನದ ಅದಿರನ್ನು ಪಡೆಯುವುದಕ್ಕೆ ಸಿರದ ಮೇಲೆ ಮುಖ್ಯ ಕೂಪವನ್ನೂ, ಸಣ್ಣ ಸಣ್ಣ ಕೂಪಗಳನ್ನೂ ಇಳಿಸುತ್ತಾರೆ. ಇಂಥ ಎರಡು ಮೂರು ಕೂಪಗಳ ನಡುವೆ ಸುರಂಗಗಳನ್ನು ಕೊರೆದು ಒಂದಕ್ಕೊಂದು ಸಂಬಂಧ ಕಲ್ಪಿಸುತ್ತಾರೆ. ಸಾಮಾನ್ಯವಾಗಿ ನೂರಡಿಗೆ ಒಂದೊಂದು ಮಟ್ಟದಂತೆ ಮುಖ್ಯಕೂಪದ ಎರಡೂ ಪಕ್ಕಗಳಲ್ಲಿ ಸುರಂಗಗಳನ್ನು ಕೊರೆಯುತ್ತಾರೆ. ಹೀಗೆ ಕೊರೆದ ಮಟ್ಟಗಳು ಸಿರದ ಜಾಡನ್ನೇ ಅನುಸರಿಸಿ ಹೋಗುತ್ತವೆ. ಮುಖ್ಯ ಕೂಪಗಳು, ಸುರಂಗಗಳು ಮಟ್ಟಗಳು ಇವುಗಳನ್ನು ತೋರಿಸುವ ಚಿತ್ರವನ್ನಿಲ್ಲಿಕೊಟ್ಟಿದೆ (ಚಿತ್ರ ೪). ಒಂದೊಂದು ಮಟ್ಟದಿಂದ ಬಂದ ಚಿನ್ನದ ಕಲ್ಲೆಲ್ಲವೂ, ಮುಖ್ಯ ಕೂಪದ ಮಾರ್ಗವಾಗಿ ತೊಟ್ಟಿಲುಗಳಲ್ಲಿ ಮೇಲಕ್ಕೆ ಬರುತ್ತದೆ.

ಗಣಿಗಳ ಆಳ, ಅಲ್ಲಿಯ ಉಷ್ಣಪ್ರಮಾಣ. ಗಣಿಯ ಕೆಲಸದಲ್ಲಿ ಕಾರ್ಯಕುಶಲತೆಯಲ್ಲಿ, ನೈರ್ಮಲ್ಯದಲ್ಲಿ ಕೋಲಾರದ ಗಣಿಗಳು ಪ್ರಪಂಚದ ಗಣಿಗಳಲ್ಲೆಲ್ಲಾ ಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿವೆ. ಭೂಮಟ್ಟದಿಂದ ೮,೬೦೦ ಅಡಿಗಳಿಗೂ ಮೀರಿ ಕೆಳಗಿಳಿದಿರುವ ಕೋಲಾರದ ಗಣಿಗಳು ಪ್ರಪಂಚದಲ್ಲೆಲ್ಲಾ ಅತಿ ಆಳವಾದ ಗಣಿಗಳಾಗಿವೆ. ಇಷ್ಟು ಆಳದಲ್ಲಿ ಕೆಲಸಮಾಡುವುದು ಬಹಳ ಕಷ್ಟ. ಆ ಆಳಗಳಲ್ಲಿ ಉಷ್ಣದ ಪ್ರಮಾಣವು ೧೩೪° F ಇರುತ್ತವೆಯೆಂದರೆ ಅಲ್ಲಿನ ಸ್ಥಿತಿಯನ್ನು ಊಹಿಸಿಕೊಳ್ಳಬಹುದು. ಈ ಉಷ್ಣವನ್ನು ಆದಷ್ಟು ಕಡಿಮೆಮಾಡುವುದಕ್ಕಾಗಿ ಮೇಲಿನಿಂದ ತಂಪಾದ ಗಾಳಿಯನ್ನು ಕೆಳಮಟ್ಟಗಳಿಗೆ ಕಳುಹಿಸುತ್ತಾರೆ. ಅಲ್ಲದೆ ವಿದ್ಯುತ್ ಬೀಸಣಿಗೆಗಳನ್ನು ಹಾಕಿ ಅಲ್ಲಿನ ಬೇಗೆಯನ್ನು ತಾಳಿಕೊಳ್ಳುವಂತೆ ಮಾಡಿದಾರೆ.

ಗಣಿಗಳಲ್ಲುಂಟಾಗುವ ಕಲ್ಲುಸಿಡಿತಗಳು. ಗಣಿಗಳ ಕೆಲಸದಲ್ಲಿ ಇನ್ನೊಂದು ಕಷ್ಟ ಬೆರೆತಿದೆ. ಗಣಿಗಳೊಳಗೆ ಕಲ್ಲು ಸಿಡಿಯಿತೆಂದೂ, ಅದರ ಪರಿಣಾಮವಾಗಿ ಪ್ರಾಣಹಾನಿಯಾಯಿತೆಂದೂ ಒಮ್ಮೊಮ್ಮೆ ಪತ್ರಿಕೆಗಳಲ್ಲಿ ವರದಿಗಳನ್ನು ನೋಡುತ್ತಿರುತ್ತೇವೆ. ಈ ಕಲ್ಲುಸಿಡಿತಗಳು ಏಕೆ ಆಗುವುವೆನ್ನುವುದನ್ನು ತಿಳಿಯುವುದು ಆವಶ್ಯಕ. ಭೂಮಿಯ ಒಳಗೆ ಆಳವಾಗಿ ಹೋದಂತೆಲ್ಲ ಉಷ್ಣ ಹೆಚ್ಚಿದಂತೆ ಕಲ್ಲುಗಳ ಮೇಲಿನ ಒತ್ತಡವೂ ಹೆಚ್ಚುತ್ತದೆ. ಗಣಿಗಳನ್ನು ಆಳ ಇಳಿಸುರಂಗಳನ್ನು ಕೊರೆದು ಹೇರಳವಾಗಿ ಕಲ್ಲೆಲ್ಲವನ್ನೂ ಮೇಲೆ ತೆಗೆದಾಗ ಗಣಿಯಲ್ಲಿನ ಕೆಲವು ಪ್ರದೇಶಗಳು ಟೊಳ್ಳಾಗುತ್ತವೆ.

M. Maclaren, 'Gold' The Mining Journal, 255 (1908).

ಸುರಂಗಗಳನ್ನು ಕೊರೆದು ಕಲ್ಲೆಲ್ಲವನ್ನೂ ತೆಗೆಯುವ ಮೊದಲು ಸಮನಾಗಿ ಪ್ರಸರಿಸಿದ್ದ ಒತ್ತಡ, ಅಲ್ಲಲ್ಲಿ ಟೊಳ್ಳುಪ್ರದೇಶಗಳು ಉಂಟಾದಾಗ ವ್ಯತ್ಯಾಸವಾಗುತ್ತದೆ. ಇದರ ಪರಿಣಾಮವಾಗಿ, ಗಣಿಯ ಗೋಡೆಗಳು ಧಡೀರನೆ ಉರುಳಿ, ಕೆಲವುವೇಳೆ ಗಣಿಯಲ್ಲಿ ಕೆಲಸ ನಡೆಯುತ್ತಿದ್ದ ಭಾಗಗಳು ಸಂಪೂರ್ಣವಾಗಿ ಮುಚ್ಚಿಹೋಗುತ್ತವೆ.

ಹೀಗೆ ಕಲ್ಲುಗಳು ಸಿಡಿದು ಗೋಡೆಗಳು ಉರುಳಿಬೀಳುವುದನ್ನು ಆದಷ್ಟುಮಟ್ಟಿಗೆ ತಪ್ಪಿಸಲು ಒಂದು ಮಾರ್ಗವಿದೆ. ಅದೇನೆಂದರೆ ಗಣಿಗಳಲ್ಲಿರುವ ಟೊಳ್ಳು ಪ್ರದೇಶಗಳನ್ನು ಕಡಿಮೆಮಾಡುವುದು. ಚಿನ್ನದ ಕಲ್ಲೆಲ್ಲವನ್ನೂ ತಗೆದುಕೊಂಡು ಒಂದು ಭಾಗವನ್ನು ಸಂಪೂರ್ಣವಾಗಿ ಬರಿದುಮಾಡಿದಮೇಲೆ, ಅಂಥ ಶೂನ್ಯಪ್ರದೇಶಗಳನ್ನು ಕಲ್ಲುಜಲ್ಲಿ, ಇಟ್ಟಿಗೆ, ಸಿಮೆಂಟು ಇವುಗಳಿಂದ ಭದ್ರಮಾಡುತ್ತಾರೆ. ಕೆಲಸಮಾಡುತ್ತಿರುವ ಪ್ರದೇಶಗಳನ್ನು ಸಹ ಮರದ ದಿಮ್ಮಿಗಳನ್ನು ಆಸರೆ ಕೊಡುವುದರಿಂದಲೊ, ಇಲ್ಲವೆ ಕಾಂಕ್ರೀಟು ಕಂಭಗಳನ್ನು ನಿಲ್ಲಿಸುವುದರಿಂದಲೊ ಭದ್ರಮಾಡುತ್ತಾರೆ. ಹೀಗೆ ಮಾಡುವುದರಿಂದ ವ್ಯತ್ಯಸ್ತವಾಗಿದ್ದ ಒತ್ತಡ ಮತ್ತೆ ಸಮವಾಗಿ ಪ್ರಸರಿಸುತ್ತದೆ. ಈ ಕಾರ್ಯಕ್ರಮಗಳನ್ನು ಕೈಕೊಂಡು ಕಲ್ಲುಸಿಡಿತಗಳನ್ನು ಆದಷ್ಟು ಕಡಿಮೆಮಾಡಲು ಗಣಿಯವರು ಪ್ರಯತ್ನಿಸುತ್ತಿದಾರೆ.

ಕಲ್ಲಿನಿಂದ ಚಿನ್ನ ಪ್ರತ್ಯೇಕಿಸುವ ಬಗೆ. ಗಣಿಯೊಳಗೆ ಸಿಡಿಮದ್ದಿನ ಸಹಾಯದಿಂದ ಕಿತ್ತ ಕಲ್ಲೆಲ್ಲವನ್ನೂ ಒಳಗೇ ದಪ್ಪ ದಪ್ಪ ಗುಂಡುಗಳಾಗಿ ಒಡೆದು ಕೂಪಗಳ ಮೂಲಕ ಮೇಲೆ ಕಳುಹಿಸುತ್ತಾರೆ. ಈ ಕಲ್ಲೆಲ್ಲವೂ ಕೂಪಮುಖದಲ್ಲಿರುವ ಜರಡಿಗಳ ಮೂಲಕ ಹಾಯುತ್ತವೆ. ಜರಡಿಗಳಿಂದ ಹಾದುಹೋಗುವ ಕಲ್ಲೆಲ್ಲವೂ ಸೋಸುವ ಸ್ಥಳಕ್ಕೆ (Sorting Station) ಹೋಗುತ್ತದೆ. ಅಲ್ಲಿ ಶೇಕಡ ೧೦ ರ ವರೆಗೆ ಕಳಪೆ ಕಲ್ಲೊಂದು (Waste rock) ತ್ಯಜಿಸಿಬಿಡುತ್ತಾರೆ. ಒಳ್ಳೆಯ ಕಲ್ಲೆಲ್ಲವೂ ಅಲ್ಲಿಂದ ಕುಟ್ಟುವ ಯಂತ್ರಕ್ಕೆ (Stamping Mill) ಹೋಗುತ್ತದೆ. ಈ ಯಂತ್ರಾಲಯದಲ್ಲಿ ಐದು ಐದು ಒನಕೆಗಳು ಒಟ್ಟುಗೂಡಿರುವಂಥ ಹಲವು ಬತೇರಿ (Battery) ಗಳಿವೆ. ಬತೇರಿಗಳಲ್ಲಿ ಸೇರಿರುವ ಒಂದೊಂದು ಒನಕೆಯೂ ಸುಮಾರು ೧,೩೦೦ ಪೌಂಡುಗಳು (ಎಂದರೆ ೫೪ ಮಣಗಳು) ತೂಕವಿರುತ್ತದೆ. ಕಲ್ಲು ಮಿಲ್ಲಿಗೆ ಬಂದಾಗ ಈ ಒನಕೆಗಳು ಒಂದಾದ ಮೇಲೆ ಒಂದು ಕಲ್ಲಿನ ಮೇಲೆ ಬೀಳುತ್ತವೆ. ಇದರ ಫಲವಾಗಿ ಕಲ್ಲೆಲ್ಲವೂ ಹಿಟ್ಟಿನಂತಾಗುತ್ತದೆ. ಈ ಹಿಟ್ಟಾದ ಕಲ್ಲೆಲ್ಲ ನೀರಿನ ಸಹಾಯದಿಂದ ಚದರ ಅಂಗುಲಕ್ಕೆ ಒಂಬತ್ತು ತೂತುಗಳಿರುವಂಥ ಜರಡಿಗಳ ಮೂಲಕ ಹಾದು, ಕಂಬಳಿ ಹಾಸಿರುವ ಇಳು ಮೇಜುಗಳ ಮೇಲೆ ಹರಿಯುತ್ತದೆ. ಚಿನ್ನ ತೂಕವಾಗಿರುವ ಕಾರಣ ಕಲ್ಲುಹಿಟ್ಟಿನಲ್ಲಿ ಸೇರಿರುವ ಚಿನ್ನವೆಲ್ಲ ಕಂಬಳಿಯ ಎಳೆಗಳಿಗೆ ಸಿಕ್ಕಿ ಅಲ್ಲಿಯೇ ಉಳಿಯುತ್ತದೆ. ಉಳಿದ

ಗಣಿಗಳಿಂದ ಸರಕಾರಕ್ಕಿರುವ ಆದಾಯ. ಚಿನ್ನದ ಗಣಿಗಳಿಂದ ಸರಕಾರಕ್ಕೆ ನೇರವಾಗಿ ಬರುವ ಆದಾಯವನ್ನು ಈ ಕೆಳಗಿನ ಪಟ್ಟಿಯಲ್ಲಿ ಕಾಣಿಸಿದೆ* :—

ರಾಜಾದಾಯ	೧೭,೨೩,೦೦೦ ರೂಪಾಯಿಗಳು
ಅಧಿಕಬೆಲೆಯ ಸುಂಕದ ಕಾನೂನಿನ ಪ್ರಕಾರ ಸಂದ ಮೊಬಲಗು	೧,೦೧,೭೭,೦೦೦ ..
ವಿದ್ಯುಚ್ಛಕ್ತಿಯ ಸರಬರಾಜಿಗೆ (ಖರ್ಚು ಕಳೆದು)	೨೬,೬೫,೦೦೦ ,,
ನೀರಿನ ಸರಬರಾಜಿಗಾಗಿ (ಖರ್ಚು ಕಳೆದು)	೧,೫೦,೦೦೦ ,,
ಆದಾಯದ ತೆರಿಗೆಗಳ ಮೂಲಕ	೧೯,೫೯,೦೦೦ ,,
ಒಟ್ಟು	೧,೬೬,೭೪,೦೦೦ ರೂಪಾಯಿಗಳು

ಕೋಲಾರದ ಗಣಿಯ ಆಯುಸ್ಸು. ನಮ್ಮ ದೇಶಕ್ಕೆ ಇಷ್ಟು ಹೆಚ್ಚಿನ ಲಾಭವನ್ನೂ ಸಾವಿರಾರು ಮಂದಿಗೆ ಜೀವನಸೌಕರ್ಯವನ್ನೂ ಕೊಡುವ ಈ ಚಿನ್ನದ ಕೈಗಾರಿಕೆ ಹೀಗೆಯೇ ಇನ್ನೆಷ್ಟು ವರ್ಷಗಳ ಕಾಲ ಮುಂದುವರಿದೀತು ಎನ್ನುವ ಅಂದಾಜನ್ನು ಕೊಡುವುದು ಸೂಕ್ಷ್ಮವಾಗಿ ಕಾಣುತ್ತದೆ.

ಧಾರವಾಡ ಪದರುಶಿಲೆಗಳಲ್ಲಿ ಕಂಡುಬರುವ ಬೆಣಚಿನ ಸಿರಗಳಲ್ಲಿ ಮಾತ್ರ ಚಿನ್ನವಿರುವುದೆನ್ನುವುದನ್ನು ಹಿಂದೆಯೇ ನಾವು ತಿಳಿದೆವು. ಆದುದರಿಂದ ಧಾರವಾಡ ಶಿಲೆಗಳು ಯಾವ ಕೆಳಮಟ್ಟದವರೆಗೂ ಕಂಡುಬರುವುವೋ ಅಲ್ಲಿಯವರೆಗೂ ಚಿನ್ನ ಸೇರಿರುವ ಬೆಣಚಿನ ಸಿರಗಳೂ ಇಳಿಯುವುವೆಂದು ಅಂದಾಜುಮಾಡಬಹುದು. ಮೇಲಿನ ಶಿಲೆಗಳ ವಿನ್ಯಾಸದಿಂದ ಈ ಕೆಳಮಟ್ಟ ಹದಿನೇಳು ಹದಿನೆಂಟುಸಾವಿರ ಅಡಿಗಳಿಗೂ ಈಚೆಗೆ ಸಿಗಲಾರದೆಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ.[1] ಹೆಚ್ಚೆಂದರೆ ಈಗ ಇಳಿದಿರುವ ಆಳವಾದ ಗಣಿಯ ಆಳ ೯,೦೦೦ ಅಡಿಗಳು ಅಂದಮೇಲೆ ಇನ್ನು ೯,೦೦೦ ಅಡಿಗಳವರೆಗೆ ಚಿನ್ನದ ಸಿರ ಕಂಡುಬರುವುದೆಂದು ಊಹಿಸಲವಕಾಶವಿದೆ. ಆದರೆ ಗಣಿಯ ಒಡೆಯರ ಮುಂದಿರುವ ಪ್ರಶ್ನೆ ಎಷ್ಟು ಆಳದವರೆಗೆ ಚಿನ್ನ ಸಿಕ್ಕೀತು ಎನ್ನುವುದಲ್ಲ; ಯಾವ ಕೆಳಮಟ್ಟದವರೆಗೆ ತಾವು ಲಾಭದಾಯಕವಾಗಿ ಕೆಲಸ

* ೧೯೪೨-೪೩ ರ ಬಡ್ಜೆಟ್ ವರದಿಯಿಂದ ಸಂಗ್ರಹಿಸಿದ್ದು.

[1] B. Rama Rao, 'Mineral deposits of Mysore'—*Geo. Mining and Metallurgical Society of India*, Presidential Address, 1942.

ಸಾಧ್ಯ ಎನ್ನುವುದು. ಆಳ ಇಳಿದಂತೆಲ್ಲ ಉಷ್ಣ ಹೆಚ್ಚುತ್ತದೆ. ಈಗ ಮುಟ್ಟಿರುವ ಆಳದಲ್ಲೇ ಉಷ್ಣ ಅತ್ಯಧಿಕವಾಗಿದೆ. ಅದನ್ನು ನಿವಾರಿಸಲು ಮೇಲಿನಿಂದ ತಣ್ಣನೆ ಗಾಳಿಯನ್ನು ಕಳುಹಿಸಿ ಬೇಗೆಯನ್ನು ತಾಳಿಕೊಳ್ಳುವಂತೆ ಮಾಡಿದಾರೆ ಹೀಗೆ ಕೆಳಮಟ್ಟಗಳಲ್ಲಿನ ಅಧಿಕ ಉಷ್ಣವನ್ನು ಹತೋಟಿಗೆ ತಂದುಕೊಂಡು ಆ ಆಳ ಗಳಲ್ಲಿಯೂ ಗಾಳಿ ಆಡುವಂತೆ ಮಾಡಿದರೆ ಇನ್ನೂ ಹೆಚ್ಚಿನ ಆಳಗಳಿಗೆ ಹೋಗುವುದ ಸಾಧ್ಯವಾಗುತ್ತದೆ.

ಚಿನ್ನದ ಬೆಲೆ ಈಗ ಬಹುಮಟ್ಟಿಗೆ ಏರಿದೆಯಾದ್ದರಿಂದ ಈಗ ಒಂದು ಟನ ಕಲ್ಲಿನಲ್ಲಿ ನಾಲ್ಕು-ಐದು ಪೆನಿವೇಟುಗಳ ಪ್ರಮಾಣದಲ್ಲಿ ಸೇರಿದ್ದರೂ ಅದನ್ನು ಲಾಭ ಕರವಾಗಿ ಪಡೆಯಲು ಸಾಧ್ಯವಾಗಿದೆ. ಇದೆಲ್ಲವನ್ನೂ ಪರಿಶೀಲಿಸಿಯೇ ಗಣಿಯನ್ನು ನಡೆಸುವ ಕಂಪನಿಯವರು ೧೯೪೦ರಲ್ಲಿ ಮತ್ತೆ ಮುವ್ವತ್ತು ವರ್ಷ ಎಂದರೆ ೧೯೭೦ರ ವರೆಗೆ ಕೆಲಸಮಾಡಲು ರಹದಾರಿಯನ್ನು ಮೈಸೂರು ಸರಕಾರದಿಂದ ಪಡೆದರು.

ದೇಶದ ಇತರ ಚಿನ್ನದ ಪ್ರದೇಶಗಳು

ಚಿನ್ನವೇನೂ ದೇಶದಲ್ಲೆಲ್ಲ ಹರಡಿದೆ. ಪ್ರತಿಜಿಲ್ಲೆಯಲ್ಲಿಯೂ ಅಲ್ಲೊಂದ ಇಲ್ಲೊಂದರಂತೆ ಹಳೆಯ ಗಣಿಗಳು ಕಂಡುಬರುತ್ತವೆ. ಈ ಹಳೆಯ ಗಣಿಗಳ ಶೋಧ ಮುವ್ವತ್ತು ವರ್ಷಗಳ ಕೆಳಗೆ ನಡೆಯಿತು. ೧೯೦೦ ರಿಂದ ಹಿಡಿದು ೧೯೧೫ ರ ವರೆ ಒಂದಲ್ಲ ಒಂದು ಕಡೆ ಶೋಧನಕಾರ್ಯ ಮುಂದುವರಿಯಿತು. ಆಗ ನಡೆದ ಕೆಲಸಗ ವಿವರ ಭೂಶೋಧನಾ ಇಲಾಖೆಯ ಡೈರೆಕ್ಟರವರ ವರದಿಗಳಲ್ಲಿಯೂ, ಮೈಸೂರ ದೇಶದ ಗಣಿಗಳ ಮುಖ್ಯ ಮೇಲ್ವಿಚಾರಕರ ವರದಿಗಳಲ್ಲಿಯೂ ದೊರೆಯುತ್ತದೆ.

ನಮ್ಮ ದೇಶದ ಮುಖ್ಯಾಮುಖ್ಯವಾದ ಹಳೆಯ ಗಣಿಗಳ ಪರಿಚಯವನ್ನೂ ಅವುಗಳಲ್ಲಿ ಈ ವರೆಗೆ ನಡೆದಿರುವ ಶೋಧನ ಕಾರ್ಯಗಳ ವಿವರವನ್ನೂ ಸಂಕ್ಷೇಪ ವಾಗಿ ಇಲ್ಲಿ ಕೊಟ್ಟಿದೆ.

ಹೊನ್ನಾಳಿ ಚಿನ್ನದ ಪ್ರದೇಶ. ಶಿವಮೊಗ್ಗ ಜಿಲ್ಲೆಗೆ ಸೇರಿರುವ ಹೊನ್ನಾ ತಾಲೂಕು ಹೆಸರೇ ಸೂಚಿಸುವಂತೆ ಚಿನ್ನದ ನೆಲೆ. ಹೊನ್ನಾಳಿಗೆ ಪಶ್ಚಿಮಕ್ಕಿರು ನ್ಯಾಮತಿ, ಕುದುರೆಕೊಂಡ, ಪಲವನಹಳ್ಳಿ ಗ್ರಾಮಗಳ ಸುತ್ತಮುತ್ತಲಿನ ಹಳ್ಳಗ ಮಣ್ಣಿನಲ್ಲೆಲ್ಲ ಸಣ್ಣ ಚಿನ್ನ ಬೆರೆತಿದೆ. ಗ್ರಾಮಸ್ಥರು ಮಳೆಗಾಲದ ದಿವಸಗಳ ಮಣ್ಣು ತೊಳೆದು ಚಿನ್ನವನ್ನು ಪಡೆಯುತ್ತಾರೆ. ಹಿಂದೆ ಹೆಚ್ಚಾಗಿಯೇ ಈ ರೀ ಚಿನ್ನವನ್ನು ಪಡೆಯುತ್ತಿದ್ದರೆಂದು ತೋರುತ್ತದೆ. ಈಚೆಗೆ ಈ ಕಸಬಿನವರು ಕಡಿಮ ಯಾಗಿದಾರೆ. ಇರುವ ಕೆಲವರೂ ಸಹ ವ್ಯವಸಾಯದೊಂದಿಗೆ ಮಣ್ಣು ಜಾಲಿಸ

ವುದನ್ನು ಅಭ್ಯಾಸಮಾಡಿರುವರೇ ಹೊರತು ಅದನ್ನೂ ಮೊದಲಿನಂತೆ ಮುಖ್ಯ ಕಸುಬನ್ನಾಗಿ ಇಟ್ಟುಕೊಂಡವರಲ್ಲ. ಮಣ್ಣಿನಿಂದ ಜಾಲಿಸಿ ಪಡೆದ ಬಂಗಾರವೆಲ್ಲವೂ ಸ್ಥಳದ ಅಕ್ಕಸಾಲಿಗರ ಕೈಸೇರುವುದರಿಂದ, ಈ ಬಯಲಿನಿಂದ ಎಷ್ಟು ಬಂಗಾರ ಉತ್ಪತ್ತಿಯಾಯಿತೆನ್ನುವ ಲೆಕ್ಕ ಸಿಕ್ಕುವುದಿಲ್ಲ.

ಮಣ್ಣಿನಲ್ಲಿ ಹೆಚ್ಚಿನ ಬಂಗಾರ ಸೇರಿರಬೇಕಾದರೆ ಹತ್ತಿರದಲ್ಲಿಯೇ ಮೂಲ ಬಂಗಾರದ ನೆಲೆಯಾದ ಬೆಣಚು ಕಲ್ಲಿನ ಸಿರಗಳು ಇರಬೇಕಷ್ಟೆ. ಬೆಣಚುಕಲ್ಲಿನ ಸಿರಗಳು ಕುದುರೆಕೊಂಡ, ನ್ಯಾಮತಿ ಮತ್ತು ಪಲವನಹಳ್ಳಿಗಳ ಸುತ್ತ ಕಂಡುಬರುತ್ತವೆ. ಅಲ್ಲಲ್ಲೇ ಪುರಾತನರು ಕೆಲಸಮಾಡಿ ಕೈಬಿಟ್ಟ ಹಳೆಯ ಗಣಿಗಳೂ ಇವೆ. ಚಿನ್ನವನ್ನು ಹುಡುಕಲು ಬಂದ ಇಂಗ್ಲಿಷರ ಗಮನ ಈ ಕಡೆ ಬಿದ್ದುದು ೧೮೮೦ರಲ್ಲಿ. ಮಣ್ಣಿನಲ್ಲಿ ವಿಶೇಷವಾಗಿ ಚಿನ್ನ ಸೇರಿದುದನ್ನು ಕಂಡು ಉತ್ತೇಜಿತರಾಗಿ ಕುದುರೆಕೊಂಡದ ಸಮೀಪದಲ್ಲಿ ಕೆಲಸವನ್ನಾರಂಭಿಸಿದರು. ಮೊದಮೊದಲು ವಿಶೇಷವಾಗಿಯೇ ಚಿನ್ನ ದೊರೆಯಿತು. ಆದರೆ ಬರಬರುತ್ತ ಚಿನ್ನದ ಸಿರ ಕೆಳಗೆ ಇಳಿದಂತೆ ಕಿರಿದಾಗುತ್ತ ಹೋದುದರಿಂದಲೂ, ಕೆಲಸವನ್ನು ಮುಂದುವರಿಸಲು ಬಂಡವಾಳ ದೊರೆಯದೆ ಹೋದುದರಿಂದಲೂ, ಕಳೆದ ಮಹಾ ಯುದ್ಧದ ಹೊತ್ತಿಗೆ ಸರಿಯಾಗಿ ಗಣಿಗಳಲ್ಲಿನ ಕೆಲಸ ಒಮ್ಮೆಗೇ ನಿಂತುಹೋಯಿತು. ಈ ಪ್ರಾಂತದ ದಕ್ಷಿಣಕ್ಕಿರುವ ಪಲವನಹಳ್ಳಿಯ ಹತ್ತಿರ ನಡೆಯುತ್ತಿದ್ದ ಕೆಲಸವೂ ಇದೇ ಸುಮಾರಿಗೆ ನಿಂತುಹೋಯಿತು. ಬಹುಕಾಲದಿಂದ ಕೆಲಸ ನಿಂತುಹೋಗಿರುವ ಈ ಗಣಿಗಳಿಂದ ಚಿನ್ನವನ್ನು ಲಾಭದಾಯಕವಾಗಿ ಪಡೆಯಬಹುದೇ ಇಲ್ಲವೆ ಎಂದು ತಿಳಿಯಲು ಇನ್ನೂ ಹೆಚ್ಚಿನ ಶೋಧನೆ ನಡೆಯಬೇಕಾಗಿದೆ.

ಪಲವನಹಳ್ಳಿಯ ಸುತ್ತ ನಡೆದ ಕೆಲಸ. ಎರಡು ವರ್ಷಕ್ಕೆ ಹಿಂದೆ ಇದೇ ಪ್ರಾಂತದಲ್ಲಿ ನಾಲ್ಕೂವರೆ ಸೇರು ಚಿನ್ನ ಬೆರೆತಿರುವ ಒಂದು ಚಿನ್ನದ ಕಲ್ಲು ದೊರೆಯಿತು. ದೊರೆತ ಕಲ್ಲು ಹುಟ್ಟುಕಲ್ಲಲ್ಲ ; ಹತ್ತಿರ ಎಲ್ಲಿಂದಲೋ ಉರುಟಿಕೊಂಡು ಬಂದ ಚೂರು ಕಲ್ಲು ಮಾತ್ರ. ಪಲವನಹಳ್ಳಿಯ ಹತ್ತಿರ ಹಳ್ಳದ ಮಣ್ಣನ್ನು ಜಾಲಿಸುತ್ತಿದ್ದಾಗ ಸಿಕ್ಕಿದ ಕಲ್ಲು ಇದು. ಇದರ ನೆಲೆಯನ್ನು ಪತ್ತೆಮಾಡಲು ಸರ್ಕಾರದವರು ಸ್ಥಳ ಶೋಧನೆಗಾಗಿ ೫೦,೦೦೦ ರೂಪಾಯಿಗಳನ್ನು ಮೀಸಲಾಗಿಟ್ಟರು. ಶೋಧನಕಾರ್ಯವೂ ಮುಂದುವರಿಯಿತು. ಆದರೆ ಕಾರ್ಯಾರಂಭದಲ್ಲಿಯೇ ಯುದ್ಧದ ಮೋಡ ಕವಿದು, ದೂರದೇಶದಿಂದ ಬರಬೇಕಾದ ಯಂತ್ರಸಾಧನಗಳೊದಗದೆ ಹೋಗಿ ಕೆಲಸವನ್ನು ಅನಿವಾರ್ಯವಾಗಿ ನಿಲ್ಲಿಸಬೇಕಾಗಿ ಬಂತು. ಯುದ್ಧಾನಂತರದಲ್ಲಿ ಈ ಬಯಲಿನಲ್ಲಿ ಹೆಚ್ಚಿನ ಶೋಧನೆಗಳನ್ನು ನಡೆಸಲು ಸಾಧ್ಯವಾದೀತು.

ತುಂಗಭದ್ರೆ ಮತ್ತು ಅದರ ಉಪನದಿಗಳ ಮೆಕ್ಕಲಿನಲ್ಲಿ ಚಿನ್ನ. ಬೆಣಚು ಕಲ್ಲಿನ ಸಿರಗಳಲ್ಲಿ ಸೇರಿರುವ ಮೂಲಚಿನ್ನವೇ ಅಲ್ಲದೆ ಹೊನ್ನಾಳಿ ಚಿನ್ನದ ಪ್ರದೇಶದಲ್ಲಿ ಹರಿಯುವ ತುಂಗಭದ್ರೆ ಮತ್ತು ಅದರ ಉಪನದಿಗಳ ಮೆಕ್ಕಲು ಮಣ್ಣಿನಲ್ಲಿಯೂ ಚಿನ್ನ ಬೆರೆತಿರುತ್ತದೆ. ಮೆಕ್ಕಲು ಮಣ್ಣಿನಲ್ಲಿ ಸೇರಿರುವ ಚಿನ್ನದ ಪ್ರಮಾಣ ಎಷ್ಟಿರಬಹುದೆನ್ನುವುದನ್ನು ತಿಳಿಯಲು ಕಳೆದ ಕೆಲವು ವರ್ಷಗಳಿಂದ ಶೋಧನೆ ನಡೆಯುತ್ತಾ ಇದೆ. ನಮ್ಮ ನದಿಗಳ ಮೆಕ್ಕಲಿನಲ್ಲಿ ಚಿನ್ನ ಹೆಚ್ಚು ಸೇರುವುದಕ್ಕೆ ವಾತಾವರಣ ಸರಿಯಾಗಿಲ್ಲವೆನ್ನುವುದನ್ನು ಹಿಂದೆಯೇ ತಿಳಿಸಲಾಯಿತು. ಹೊಳಲೂರು, ನಾಗಸಮುದ್ರ, ಅನ್ವೇರಿ, ಮಳಲಿ, ಗೋವಿನಕೋವಿ. ಈ ಪ್ರದೇಶಗಳಲ್ಲಿ ತುಂಗಭದ್ರಾ ತೀರದ ಮರಳನ್ನು ತೊಳೆದು ನೋಡಲಾಯಿತು.[1] ಕುದುರೆಕೊಂಡ, ಪಲವನಹಳ್ಳಿಯ ಸುತ್ತಲಿನ ಹಳ್ಳಿಗಳ ಮಣ್ಣನ್ನೂ ಜಾಲಿಸಿ ನೋಡಿಯಾಯಿತು.[2] ಆದರೆ ಎಲ್ಲಿಯೂ ದೊಡ್ಡ ಕೈಗಾರಿಕೆಯನ್ನು ಸ್ಥಾಪಿಸುವಷ್ಟು ಹಿರಿದಾದ ನಿಕ್ಷೇಪಗಳು ದೊರೆಯಲಿಲ್ಲ. ಒಂದು ಗಜ ಮಣ್ಣನ್ನು ತೊಳೆದರೆ ಸರಾಸರಿ ಎರಡು ಗುಂಜಿಗಳಿಗೆ ಮೇಲೆ ಬಂಗಾರ ದೊರೆಯದೆ ಹೋಯಿತು. ದೊಡ್ಡದಾಗಿ ಕೈಗಾರಿಕೆ ಸ್ಥಾಪಿಸಲು ಉತ್ತೇಜನ ಸಾಲದಿದ್ದರೂ ಸಣ್ಣ ರೀತಿಯಲ್ಲಿ ಗ್ರಾಮ ಕೈಗಾರಿಕೆಯನ್ನು ಸ್ಥಾಪಿಸಬಹುದಾಗಿದೆ. ಇದೇ ಉದ್ದೇಶವಾಗಿ ಮುಂದೆಯೂ ಶೋಧನೆಗಳು ನಡೆಯಬೇಕಾಗಿವೆ.

ಶಿವಮೊಗ್ಗ ಜಿಲ್ಲೆಯಲ್ಲಿನ ಹಳೆಯ ಗಣಿಗಳು

ಶಿವಮೊಗ್ಗ ಜಿಲ್ಲೆಯಲ್ಲಿ, ಹೊನ್ನಾಳಿ ಪ್ರದೇಶವನ್ನು ಬಿಟ್ಟರೆ ಹಳೆಯ ಗಣಿಗಳು ತರೀಕೆರೆ, ಭದ್ರಾವತಿಯ ಸುತ್ತ ವಿಶೇಷವಾಗಿ ಕಾಣುತ್ತವೆ. ಇಲ್ಲೆಲ್ಲಾ ಬಹುಕಡೆ ಕಾಡು ಬೆಳೆದುಹೋಗಿರುವುದರಿಂದ ಗಣಿಗಳ ನೆಲೆಯೇ ಸಿಕ್ಕದಂತಾಗಿದೆ. ಮುಖ್ಯವಾದ ಹಳೆಯ ಗಣಿಗಳು ಭದ್ರಾವತಿಯ ದಕ್ಷಿಣಕ್ಕಿರುವ ಹೊನ್ನೆಹಟ್ಟಿ, ಬಲಗಾರಗುಂಡಿ, ತಮ್ಮಡಿಹಳ್ಳಿಗಳ ಹತ್ತಿರವೂ, ತರೀಕೆರೆಯ ದಕ್ಷಿಣಕ್ಕಿರುವ ಸಿದ್ಧರಹಳ್ಳಿ, ನಂದಿಹೊಸಳ್ಳಿಯ ಹತ್ತಿರವೂ ಇವೆ.

ಚಿತ್ರದುರ್ಗ ಜಿಲ್ಲೆಯಲ್ಲಿನ ಹಳೆಯ ಗಣಿಗಳು

ಚಿತ್ರದುರ್ಗ ಜಿಲ್ಲೆಯಲ್ಲಿ, ಹಳೆಯ ಗಣಿಗಳು, ದುರ್ಗದ ಉತ್ತರಕ್ಕಿರುವ ಗೋಣೂರು, ಕೋಟೆಮರಡಿ, ಮಾರಿಕಣಿವೆಗೆ ಏಳು ಮೈಲಿ ದೂರದಲ್ಲಿರುವ ಬೋಡಿ

---

[1] S. Lakshmana Rao. Gold bearing alluvium in the Tungabhadra and its tributaries in the Shimoga and Honnali taluks. Rec. Mys. Geo. Dept. XXXV, 33-47.

[2] B. P. Radhakrishna. Ibid, XXXIX 166-179 (1941).

ಮರಡಿ, ಇಪ್ಪಾರ ಗುಡ್ಡಗಳು, ಜಾವಗೊಂಡನಹಳ್ಳಿ ಹತ್ತಿರವಿರುವ ಅಜ್ಜನಹಳ್ಳಿ, ದಿಂಡಿವಾರ ಈ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇಲ್ಲಿ ಹೆಸರಿಸಿರುವ ಯಾವ ಪ್ರದೇಶ ದಲ್ಲಿಯೂ ಸಹ ಹೆಚ್ಚಿನ ಕೆಲಸ ನಡೆದಿರುವುದು ಕಂಡುಬಂದಿಲ್ಲ. ಎಲ್ಲ ಕಡೆಯೂ ಮೇಲೆ ಮೇಲೆ ದೊರೆತ ಬಂಗಾರದ ಕಲ್ಲನ್ನು ಮಾತ್ರ ತೆಗೆದಂತೆ ಕಾಣುತ್ತದೆ. ಈಗ ಉಳಿದಿರುವುದು ಬರಿಯ ಬಂಜರುಕಲ್ಲು, ಇಲ್ಲವೆ ತೀರ ಅಲ್ಪಪ್ರಮಾಣದಲ್ಲಿ ಚಿನ್ನ ಸೇರಿರುವ ಬೆಣಚು.

ತುಮಕೂರು ಜಿಲ್ಲೆಯಲ್ಲಿನ ಹಳೆಯ ಗಣಿಗಳು

ತುಮಕೂರು ಜಿಲ್ಲೆಯಲ್ಲಿ ಮುಖ್ಯವಾದ ಗಣಿ ಬೆಳ್ಳಾರದ ಹತ್ತಿರವಿದೆ. ಬುಕ್ಕಾ ಪಟ್ಟಣದಿಂದ ಹುಳಿಯಾರಿಗೆ ಹೋಗುವ ರಸ್ತೆಯಲ್ಲಿ ಬೆಳ್ಳಾರ ಸಿಗುತ್ತದೆ. ಈ ಊರಿನ ಉತ್ತರಕ್ಕಿರುವ ಸಣ್ಣ ಗುಡ್ಡಗಳಲ್ಲೇ ಮುಖ್ಯವಾದ ಹಳೆಯ ಗಣಿಗಳಿರುವುದು. ೧೯೦೦ ಇಸವಿಯ ಸುಮಾರಿಗೆ ಈ ಪ್ರದೇಶದಲ್ಲಿ ವಿಶೇಷ ಕೆಲಸ ನಡೆಯಿತು. ಇಲ್ಲಿನ ಮುಖ್ಯಕೂಪ ನಾನ್ನೂರು ಅಡಿಗೂ ಕೆಳಗೆ ಇಳಿದಿದೆ. ಇಲ್ಲಿನ ಬೆಣಚುಕಲ್ಲಿನಲ್ಲಿ ಚಿನ್ನ ಹೆಚ್ಚು ಪ್ರಮಾಣದಲ್ಲಿ ಸೇರಿದ್ದರೂ, ಸಿರದ ಅಗಲ ಹೆಚ್ಚಿರಲಿಲ್ಲ. ಅಲ್ಲದೆ ಬೆಣಚಿನ ಸಿರ ಕೆಳಗೆ ಇಳಿದಂತೆ ಕಿರಿದಾಗುತ್ತ ಹೋಯಿತಂತೆ. ಮುಂದೆ ಕೆಲಸಮಾಡಿದರೂ ಗಣಿ ಯಿಂದ ಪಡೆಯಬಹುದಾದ ಚಿನ್ನ ಸೇರಿರುವ ಬೆಣಚು ತೀರ ಅಲ್ಪವೆಂದು ೧೯೦೫ ರ ಸಮಾರಿಗೆ ಈ ಗಣಿಗಳಲ್ಲಿನ ಕೆಲಸವನ್ನು ನಿಲ್ಲಿಸಿಬಿಟ್ಟರು. ಗಣಿಗಳಿಂದ ಎತ್ತಿಹಾಕಿದ್ದ ಮಣ್ಣು ಕಲ್ಲುಗುಡ್ಡೆಗಳನ್ನು ಹುಡುಕಾಡಿ, ಚಿನ್ನ ಹತ್ತಿರುವ ಬೆಣಚುಕಲ್ಲನ್ನು ಪಡೆಯು ತ್ತಾರೆ. ಮೇಲೆ ಬಿದ್ದಿದ್ದ ಗುಡ್ಡೆಗಳೆಲ್ಲವನ್ನೂ ಜಾಲಿಸಿದುದರ ಫಲವಾಗಿ ಈ ವರ್ಷ ೨೦ ತೊಲ ಬಂಗಾರ ಬಂದಿತು. ಮುಂದೆ ಈ ಪ್ರದೇಶದಲ್ಲಿ ಕೆಲಸ ಹೆಚ್ಚು ನಡೆಯುವ ಸಂಭವವಿದೆ.

ಮೈಸೂರು ಜಿಲ್ಲೆಯಲ್ಲಿನ ಹಳೆಯ ಗಣಿಗಳು

ಮೈಸೂರು ಜಿಲ್ಲೆಯಲ್ಲಿ ಹಳೆಯ ಚಿನ್ನದ ಗಣಿಗಳು ನಂಜನಗೂಡಿಗೆ ದಕ್ಷಿಣ ಕ್ಕಿರುವ ಒಳಗೆರೆ ಮತ್ತು ಅಂಬಳೆಯ ಸಮೀಪವೂ, ಶ್ರೀರಂಗಪಟ್ಟಣದ ಮೂಡುಗಡೆ ಇರುವ ಹುಂಚನಕೆರೆಯ ಹತ್ತಿರವೂ ಇವೆ. ಈ ಎರಡು ಪ್ರದೇಶಗಳಲ್ಲಿ, ೧೯೦೦ ರಿಂದ ಹಿಡಿದು ೧೯೧೦ರ ವರೆಗೆ, ಹತ್ತು ವರ್ಷಗಳಕಾಲ ವಿಶೇಷ ರೀತಿಯ ಶೋಧನಕಾರ್ಯ ನಡೆಯಿತು. ಹುಂಚನಕೆರೆಯ ಹತ್ತಿರ ಅಧಿಕಪ್ರಮಾಣದಲ್ಲಿ ಚಿನ್ನ ಸೇರಿರುವ ಬೆಣಚಿನ ಸಿರಗಳು ಪತ್ತೆಯಾದವು. ಆದರೆ ಅವು ತೀರ ಚಿಕ್ಕವಾದ್ದರಿಂದ ಕೆಲಸ ಮುಂದು ವರಿಯದೆ ಅಲ್ಲಿಗೇ ನಿಂತುಹೋಯಿತು.

ಹತ್ತು ವರ್ಷಗಳ ಅವಧಿಯಲ್ಲಿ ವಿಶೇಷವಾಗಿ ಕೆಲಸ ನಡೆದದ್ದು ಅಂಬಳೆ ಮತ್ತು ಒಳಗೆರೆಗಳ ಹತ್ತಿರ. ಒಳಗೆರೆಯ ಸಮೀಪದಲ್ಲಿ ಪುರಾತನರು ಕೆಲಸಮಾಡಿ ಬಿಟ್ಟ ದೊಡ್ಡದೊಂದು ಗಣಿ ಇತ್ತು. ಈ ನಿವೇಶನದಲ್ಲಿ ಕೆಲಸಮಾಡಿದವರಿಗೆ ಮೊದಲು ಚಿನ್ನ ಹೆಚ್ಚಿನ ಪ್ರಮಾಣದಲ್ಲಿಯೇ ಸಿಕ್ಕಿತು. ೧೯೦೬ರಲ್ಲಿ ಒಂದು ಕಂಪನಿಯವರು ಕೆಲಸ ಕೈಹಿಡಿದು ಒಂದು ಕಡೆ ೨೦೦ ಅಡಿ ಆಳ ಒಂದು ಕೂಪವನ್ನಿಳಿಸಿದರು. ಮೇಲುಗಡೆ ಸುಮಾರು ೨೦ ಅಡಿ ಅಗಲವಾಗಿ ಕಂಡುಬಂದ ಬೆಣಚಿನ ಸಿರ ಕೆಳಗೆ ಹೋದಂತೆ ಕಿರಿದಾಗುತ್ತ ಹೋಯಿತು. ಒಂದೊಂದು ಕಡೆ ಚಿನ್ನ ವಿಶೇಷವಾಗಿ ಸೇರಿದ್ದಂತೆ ಕಂಡುಬಂದರೂ, ಒಟ್ಟು ಕಲ್ಲಿನಲ್ಲಿ ಚಿನ್ನ ಸೇರಿರುವ ಪ್ರಮಾಣವು ಅಲ್ಪವಾಗಿ (ಟನ್ನಿಗೆ ನಾಲ್ಕು ಪೆನಿವೇಟಿನಷ್ಟು) ಕಂಡಿತು. ಆಶಾಜನಕವಾದ ವರದಿ ಬರಲಿಲ್ಲವಾದ್ದರಿಂದ ೧೯೧೩ರಲ್ಲಿ ಈ ಗಣಿಗಳಲ್ಲಿ ನಡೆಯುತ್ತಿದ್ದ ಕೆಲಸ ನಿಂತುಹೋಯಿತು.

ಹಾಸನ ಜಿಲ್ಲೆಯಲ್ಲಿನ ಹಳೆಯ ಗಣಿಗಳು

ಹಾಸನ ಜಿಲ್ಲೆಯಲ್ಲಿ ಹಳೆಯ ಗಣಿಗಳು ಹಾರನಹಳ್ಳಿಯ ಸಮೀಪವಿರುವ ಎಳವಾರಿಯ ಹತ್ತಿರವೂ, ಸುಗ್ಗಿಹಳ್ಳಿಗೆ ದಕ್ಷಿಣಕ್ಕಿರುವ ಕೆಂಪಿನಕೋಟೆಯ ಹತ್ತಿರವೂ ಇವೆ. ಕೆಂಪಿನಕೋಟೆಯ ಹತ್ತಿರ ಪುರಾತನರು ಕೆಲಸಮಾಡಿ ಕೈಬಿಟ್ಟ ಗಣಿ ಭಾರಿಯದು. ಇಲ್ಲಿ ಶೋಧನೆಗಳು ೧೮೯೩ರಿಂದ ಹಿಡಿದು ಒಟ್ಟು ಮೂರು ವರ್ಷಕಾಲ ನಡೆದವು. ಆಗ ಐನೂರು ಅಡಿ ಆಳಕ್ಕೆ ಎರಡು ಮುಖ್ಯಕೂಪಗಳನ್ನು ತೋಡಿ, ಹಳೆಯ ಗಣಿಗಳ ತಳಗಿನ ಪ್ರದೇಶವನ್ನೆಲ್ಲ ಶೋಧಿಸಿದರು. ಬೆಣಚುಕಲ್ಲಿನ ಸಿರ ಯಾವುದೂ ಪತ್ತೆಯಾಗಲಿಲ್ಲವಾದರೂ ಪದರುಶಿಲೆಗಳೊಂದಿಗೆ ಎಳೆಎಳೆಯಾಗಿ ಬೆರೆತಿದ್ದ ಬೆಣಚಿನಲ್ಲಿ ಚಿನ್ನ ಸೇರಿರುವುದು ಕಂಡುಬಂದಿತು. ಕೆಲವು ಭಾಗಗಳಲ್ಲಿ ಎಂಟು ಹತ್ತು ಪೆನಿವೇಟಿನಷ್ಟು ಚಿನ್ನ ದೊರೆಯಿತು. ಆದರೆ ಬಹುಭಾಗದ ಕಲ್ಲಿನಲ್ಲಿ ಟನ್ನಿಗೆ ಒಂದೆರಡು ಪೆನಿವೇಟುಗಳಿಗಿಂತ ಹೆಚ್ಚು ದೊರೆಯುವಂತೆ ಕಾಣಲಿಲ್ಲ. ಅದೇ ಕಾರಣವಾಗಿ ಕೆಂಪಿನಕೋಟೆಯ ಹತ್ತಿರ ನಡೆಯುತ್ತಿದ್ದ ಕೆಲಸ ಅಲ್ಲಿಗೇ ನಿಂತುಹೋಯಿತು. ಚಿನ್ನ ಸೇರಿರುವ ಕಲ್ಲನ್ನೆ ಆಯ್ದು ಬಂಜರು ಕಲ್ಲಿನಿಂದ ಪ್ರತ್ಯೇಕಿಸಿದ್ದಾದರೆ, ಕಲ್ಲಿನಲ್ಲಿ ಚಿನ್ನ ಸೇರಿರುವ ಪ್ರಮಾಣವನ್ನು ಹೆಚ್ಚಿಸಬಹುದು. ಆದುದರಿಂದ ಕೆಂಪಿನಕೋಟೆಯ ಹತ್ತಿರದ ಗಣಿಗಳನ್ನು ಪುನಃ ಶೋಧನೆಮಾಡುವ ಅಗತ್ಯವಿದೆ.

ಶೋಧನಕಾರ್ಯಗಳ ಫಲಿತಾಂಶ ವಿಮರ್ಶೆ. ಚಿನ್ನಕ್ಕಂದೇ ನಮ್ಮ ಪೂರ್ವಿಕರು ತೋಡಿದ ಗಣಿಗಳ ಪರಿಚಯವನ್ನೂ ೧೯೦೦ರಿಂದ ಹಿಡಿದು ೧೯೧೪ರ ವರೆಗೆ ನಡೆದ ಪರಿಶೋಧನಕಾರ್ಯಗಳ ವಿವರವನ್ನೂ, ಫಲಿತಾಂಶವನ್ನೂ ಅರಿತದ್ದಾಯಿತು.

ಕೋಲಾರ ಚಿನ್ನದ ಪ್ರದೇಶದಲ್ಲಿ ಚಿನ್ನ ಸೇರಿರುವ ಬೆಣಚಿನ ಸಿರಗಳು ನಾಲ್ಕು ಐದು ಮೈಲಿ ದೂರ ಹಬ್ಬಿವೆ. ಆ ಉದ್ದಕ್ಕೂ ಚಿನ್ನ ವಿಶೇಷವಾಗಿ ಸೇರಿದೆ. ಮೇಲಾಗಿ ಅಲ್ಲಲ್ಲೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಚಿನ್ನ ಸೇರಿರುವ ಸಮೃದ್ಧಿಯಾದ ಪ್ರದೇಶಗಳಿವೆ. ಕೋಲಾರದ ಗಣಿಗಳ ವೈಶಿಷ್ಟ್ಯವೇ ಇದು. ಇಂಥ ವಿಶೇಷರೀತಿಯ ವಿನ್ಯಾಸ, ಹಳೆಯ ಗಣಿಗಳಿರುವ ಮಿಕ್ಕ ಯಾವೆಡೆಗಳಲ್ಲೂ ಕಂಡುಬರಲಿಲ್ಲ. ಹಳೆಯ ಗಣಿಗಳಲ್ಲಿ ಬಹುಮಟ್ಟಿನವು ಬೆಣಚುಕಲ್ಲಿನ ತುಕಡಿಗಳ ಮೇಲೆಯೇ ಇರುವುದಾಗಿ ಕಂಡುವು. ಬೆಣಚುಕಲ್ಲಿನ ಸಿರ ಆಕಡೆ ಈಕಡೆ ಹಬ್ಬಿರಲಿಲ್ಲ; ಹಬ್ಬಿದಹಾಗೆ ಕಂಡುಬಂದರೂ ಅಂಥ ಬೆಣಚು ಬಂಜರುಬೆಣಚಾಗಿ ಕಾಣಿಸಿತು. ಬೆಣಚುಕಲ್ಲಿನ ಸಿರಗಳು ಎಷ್ಟೋಕಡೆ ಮೇಲೆ ಇದ್ದಷ್ಟು ಅಗಲವಾಗಿ ಕೆಳಗೆ ಇರಲಿಲ್ಲ. ಈ ಎಲ್ಲ ಕಾರಣಗಳ ಪರಿಣಾಮವಾಗಿ ಕೋಲಾರದ ಗಣಿಯ ಪ್ರದೇಶ ಒಂದನ್ನು ಬಿಟ್ಟು ಬೇರೆ ಯಾವ ಕಡೆಯೂ ಕೆಲಸ ಸುಸೂತ್ರವಾಗಿ ನಡೆಯದೆ ಹೋಯಿತು.

ಪರಿಸ್ಥಿತಿಯಲ್ಲಿ ಬದಲಾವಣೆ — ಮುಂದೆ ಶೋಧನೆ ನಡೆಯುವ ಅಗತ್ಯ. ಮೇಲೆ ತಿಳಿಸಿದ ಶೋಧನಕಾರ್ಯಗಳು ನಡೆದು ಈಗ ಮುವ್ವತ್ತು ವರ್ಷಗಳು ಸಂದಿವೆ. ಆಗಿನ ಕಾಲಕ್ಕೂ ಈಗ್ಗೂ ಪರಿಸ್ಥಿತಿ ಬಹುವಾಗಿ ಬದಲಾಯಿಸಿದೆ. ಪ್ರಯಾಣ ಸೌಕರ್ಯಗಳು ಈಗ ಹೆಚ್ಚಿವೆ. ಶಿವಮೊಗ್ಗ ಪ್ರಾಂತದಲ್ಲಿ ರೈಲುಮಾರ್ಗಗಳ ಅನುಕೂಲತೆ ಹೆಚ್ಚಿದೆ. ಚಿನ್ನವನ್ನು ಕಲ್ಲಿನಿಂದ ಪ್ರತ್ಯೇಕಿಸಿ ಶುದ್ಧಮಾಡುವ ರೀತಿಯಲ್ಲಿ ನವೀನವಾದ ವಿಧಾನಗಳು ಬಳಕೆಗೆ ಬಂದಿವೆ. ೧೦೦ರಲ್ಲಿ ೯೯ಕ್ಕೂ ಹೆಚ್ಚಿನಭಾಗದ ಚಿನ್ನವನ್ನು ಈಗ ಪಡೆಯಲು ಸಾಧ್ಯವಾಗಿದೆ. ಮೇಲಾಗಿ ಕೆಲವು ವರ್ಷಗಳಿಂದೀಚೆಗೆ ಚಿನ್ನದ ಧಾರಣೆ ಒಂದಕ್ಕೆ ನಾಲ್ಕರಷ್ಟು ಏರಿಹೋಗಿದೆ. ಈಗಿನ ಪರಿಸ್ಥಿತಿಯಲ್ಲಿ ನಮ್ಮ ದೇಶದ ಹಳೆಯ ಗಣಿಗಳನ್ನು ಊರ್ಜಿತಮಾಡಲು ವಿಶೇಷ ಅನುಕೂಲತೆಗಳಿವೆ. ಹೊನ್ನಾಳಿ ಚಿನ್ನದ ಪ್ರದೇಶ, ಜಲಗಾರಗುಂಡಿ, ಬೆಳ್ಳಾರ, ಕೆಂಪಿನಕೋಟೆ, ಬಳಗೆರೆ ಈ ಸ್ಥಳಗಳಲ್ಲಿ ಹೆಚ್ಚಿನ ಕೆಲಸ ನಡೆಯಬೇಕಾಗಿದೆ. ಯುದ್ಧದ ಕಾರ್ಮೋಡಗಳು ತೊಲಗಿ, ಬೇಕಾಗುವ ಯಂತ್ರಸಾಧನಗಳು ಕಷ್ಟವಿಲ್ಲದೆ ದೊರೆಯುವಂತಾಗಬೇಕು. ಬಂಡವಾಳ ಸುಲಭವಾಗಿ ಕೂಡಬೇಕು. ಚಿನ್ನದ ಕೈಗಾರಿಕೆಯಲ್ಲಿ ಲಕ್ಷಗಳು ಲೆಕ್ಕಕ್ಕಿಲ್ಲ. ಅದಕ್ಕೆ ವಿಶೇಷ ಹಣಬೇಕು. ಕಣ್ಣೊರೆಸುವ ಸಣ್ಣಸಣ್ಣ ಪ್ರಯತ್ನಗಳಿಂದ ಯಾವುದೂ ನಿಶ್ಚಯವಾಗಲಾರದು. ದುಡ್ಡಿದ್ದ ದೊಡ್ಡಪ್ಪನವರುಗಳು ಬಂದು ತಮ್ಮ ಅದೃಷ್ಟದ ತೊಲೆಯನ್ನು ತೂಗಿ ನೋಡಬೇಕು. ವಿದ್ಯುಚ್ಛಕ್ತಿಯ ಸಹಾಯ ಮನೆಬಾಗಿಲಿಗೆ ಬಂದಿರುವಾಗ, ಚಿನ್ನದ ಬೆಲೆ ಹೆಚ್ಚಿರುವಾಗ, ಒಂದೆರಡು ಪ್ರದೇಶಗಳಲ್ಲಿಯಾದರೂ ಸಣ್ಣ ರೀತಿಯಲ್ಲಿ ಚಿನ್ನವನ್ನು ಲಾಭದಾಯಕವಾಗಿ ಪಡೆಯಲು ಸಾಧ್ಯವಿದೆ.



ಪುರಾತನ ಚಿನ್ನದ ಗಣಿಗಳನ್ನು ತೋರಿಸುವ ನಕ್ಷೆ


ಹಟ್ಟಿ
ಕೃಷ್ಣಾ
ಬೆಳಗಾಂವಿ
ಗೋವ
ಧಾರವಾಡ
ಗದಗು
ಹುಬ್ಬಳ್ಳಿ
ಸೊಂಡೂರು
ಬಳ್ಳಾರಿ
ಅನಂತಪುರ
ಹೊನ್ನಾಳಿ
ಚಿತ್ರದುರ್ಗ
ಶಿವಮೊಗ್ಗ
ಪೆನುಕೊಂಡ
ಚಿಕ್ಕನಾಯಕನಹಳ್ಳಿ
ಮಂಗಳೂರು
ಬೆಂಗಳೂರು
ಕೋಲಾರ
ಶ್ರೀರಂಗಪಟ್ಟಣ
ಮೈಸೂರು
ವೈನಾಡು
ಕಲ್ಲಿಕೋಟೆ
ನೀಲಗಿರಿ
ಧಾರವಾಡ ಶಿಲೆಗಳು

ಚಿನ್ನದ ಪ್ರದೇಶಗಳು

ಚಿನ್ನದ ಕೈಗಾರಿಕೆಗಿರುವ ಭವಿಷ್ಯ

ನಮ್ಮ ದೇಶದಲ್ಲಿ ಚಿನ್ನದ ಕೈಗಾರಿಕೆಯ ಭವಿಷ್ಯ ಆಶಾಜನಕವಾಗಿದೆಯೆಂದು ಖಚಿತವಾಗಿ ಹೇಳಲಾಗದಿದ್ದರೂ ನಿರಾಶೆಗೆ ಎಡೆಯೇ ಇಲ್ಲ. ಕೋಲಾರ ಪ್ರದೇಶದಲ್ಲಿನ ಗಣಿಗಳು ಇನ್ನು ಇಪ್ಪತ್ತು ಮುವ್ವತ್ತು ವರ್ಷಗಳ ಕಾಲ ಸುಸೂತ್ರವಾಗಿ ನಡೆಯು ವುದರಲ್ಲಿ ಸಂದೇಹವಿಲ್ಲ. ಹೊನ್ನಾಳಿ ಗಣಿಗಳು, ಜಲಗಾರಗುಂಡಿ, ಕೆಂಪಿನಕೋಟೆ, ಬೆಳ್ಳಾರ ಈ ಎಡೆಗಳಲ್ಲಿ ಕಲ್ಲಿನಲ್ಲಿ ಚಿನ್ನ ಸೇರಿರುವ ಪ್ರಮಾಣ ತೀರ ಅಲ್ಪವೆಂದು ಚಿನ್ನವನ್ನು ಕಲ್ಲಿನಿಂದ ಪ್ರತ್ಯೇಕಿಸಲು ತಗಲುವ ಖರ್ಚು ಹೆಚ್ಚೆಂದು, ಒಂದಲ್ಲ ಒಂದು ಕಾರಣದಿಂದ ಈಗ ಮುವ್ವತ್ತು ವರ್ಷಕ್ಕೆ ಹಿಂದೆ ಕೆಲಸಮಾಡಿದವರು ಕೆಲಸ ಮುಂದು ವರಿಸುವುದನ್ನು ಬಿಟ್ಟರು. ಈಗ ಪರಿಸ್ಥಿತಿ ಎಲ್ಲ ರೀತಿಯಲ್ಲೂ ಉತ್ತಮಗೊಂಡಿರುವುದ ರಿಂದ ಮೇಲಿನ ಗಣಿಗಳಿಂದ ಚಿನ್ನವನ್ನು ಲಾಭದಾಯಕವಾಗಿ ಪಡೆಯಲು ಸಾಧ್ಯ ವಾಗಬಹುದು.

ಕೊನೆಯ ಮಾತು

ಚಿನ್ನದ ಕೈಗಾರಿಕೆಯಲ್ಲಿ ಹೆಸರು ಗಳಿಸಿದ್ದವರು ನಮ್ಮ ಪುರಾತನರು. ನಮ್ಮ ದುರದೃಷ್ಟದಿಂದ ಮಿಕ್ಕೆಲ್ಲ ಕಲೆಗಳಂತೆ ಈ ಕಲೆಯೂ ಮರೆತುಹೋಯಿತು. ಕೋಲಾರ ದಂಥ ದೊಡ್ಡ ಗಣಿಗಳಲ್ಲಿ ಕೆಲಸಮಾಡುವುದು ನಮಗೆ ಈಗ ಸಾಧ್ಯವಾಗದಿದ್ದರೂ ದೇಶದಲ್ಲಿನ ಮಿಕ್ಕ ಗಣಿಗಳಲ್ಲಿ ನಮ್ಮವರೇ ಕೆಲಸಮಾಡುವಂತಾಗಿ ನಾಡಿನ ಸಂಪತ್ತು ಒಳಗೆ ಉಳಿಯುವಂಥ ಕಾಲಬರಲಿ.

"ಏನು ಚೆಲುವಿನ ನಾಡು! ಚೆಲುವು ಚೆಲ್ಲುವ ನಾಡು! ಕನ್ನಡದ ನಾಡು!
ಏನು ಚಿನ್ನದ ನಾಡು! ನಮ್ಮೊಲುಮೆಯಾ ನಾಡು! ನಮ್ಮಿನಿಯ ನಾಡು."

ಬಿ. ಪಿ. ರಾಧಾಕೃಷ್ಣ.

Sri Lalitha Jewellery Co. NAGARTHPET BANGALORE CITY
Manufacturing Jewellers, Gold & Silversmiths

ಕಟ್ಟು ... ಸಂಪಾದಕ ... ೧೯೪೫

ಅಶ್ವತ್ಥನಾರಾಯಣರಾ...

ಮಾಸ ಪತ್ರಿಕ

ಉಡುಪುಗಳಿಗೆ
ಕೆ ... ರಾವ್
... ನ್ಸ್
ನಗರ್ತ ... ಬೆಂಗಳೂರು ಸಿಟಿ

New Style
STUDS & RINGS
in Precious Stones
Enquire:
V. GURUNATH
477, AVENUE ROAD
BANGALORE CITY.

ಮನ... ವಶ್ರೇಷ್ಠ ಮತ್ತು
ಕ... ತ್ತಿನ ಜವಳಿಗೆ
(... ಸುಬ್ಬರಾಯರ)
ರುಕ್ಮಿಣಿ ಹಾಲ್
ಮನೆಮಾತಾಗಿದೆ
310, ಚಿಕ್ಕಪೇಟೆ :: ಬೆಂಗಳೂರು ಸಿಟಿ.

ಎಳೆತನದಿಂದಲೇ ನಿಮ್ಮ ಮಕ್ಕಳು ಒಳ್ಳೆಯ ನಡೆತೆಗಳ
ಅಭ್ಯಾಸವನ್ನು ಪಡೆಯಲಿ.
ಆ ನಡೆತೆಗಳು ಮುಂದೆ ಶಾಶ್ವತವಾಗಿಯೂ
ಸ್ವಾಭಾವಿಕವಾಗಿಯೂ ಇರುವುವು.
ಜಬ್‌ಕೋ
ಮಾಲುಗಳ
ಉಪಯೋಗವು ಮಕ್ಕಳ ಸ್ವದೇಶಿ ನಡವಳಿಕೆಯನ್ನು
ಸ್ವಾಭಾವಿಕ ಮತ್ತು ಶಾಶ್ವತಗೊಳಿಸುವುದು.
ಜಯಭಾರತಂ ಕಂಪೆನಿ, ಮಲ್ಲೇಶ್ವರಂ-ಬೆಂಗಳೂರ

1944



A Kannada Religious monthly Bulletin of Mysore State Varnasrama Swarajya Sangha Doorvasapuram Shimoga Dist

ಸಂರಕ್ಷಕರು — ದ್ವಾರಕಾ ಜಗದ್ಗುರು ಸಂಸ್ಥಾನ ಮುಳುಬಾಗಿಲು ಕೃಷ್ಣಾನಂದ ಮಠಾಧೀಶ್ವರರಾದ

ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳು

ಸಂಪಾದಕ.
ಗುಂಡ್ಮಿ ಮಹಾಬಲಭಟ್ಟ
ವೇದಾಂತಶಿರೋಮಣಿ ವೇದಾಂತ ವಿಶಾರದ
ಸಂಘದ ಕಾರ್ಯದರ್ಶಿ ದೂರ್ವಾಸಪುರ.
ತೀರ್ಥಹಳ್ಳಿ ತಾಲ್ಲೂಕು

ಉಪ ಸಂಪಾದಕ
ಸಿ. ವೆಂಕಟರಮಣಶಾಸ್ತ್ರಿ
ಕರ್ನಾಟಕ ಕವಿತಿಲಕ, ವಚನರಚನಾಚತುರ
ಸಂಘದ ಪ್ರಚಾರಕ
ಚಾಮರಾಜನಗರ

ಸಂಪುಟ ೩ | ಪ್ರಬೋಧ—ಭಾದ್ರಪದ | ಸಂಚಿಕೆ ೫
Vol 3 | September 1944 | No 5

WORLD NEWS PAPER EXIBITION
MEGARAVALLI 577524
Shimoga Dist, Karanataka S...

1948

63

ಕನ್ನಡ ವಾರಪತ್ರಿಕೆ

ಸಂಪಾದಕರು. ಕೆ. ಶ್ಯಾಮರಾವ್

WORLD NEWS PAPER EXIBITION

ಕಾರ್ಯದರ್ಶಿ: ನೇತಾಜಿ ತರುಣ ರೈತ ಸಂಘ
ಬೇಗುವಳ್ಳಿ ಪೋಸ್ಟ್ (*Via* ಮಂಡಗದ್ದೆ)
ಶಿವಮೊಗ್ಗ ಜಿಲ್ಲೆ

(ಸಂಚಿಕೆ ೫೫)

[ಸಂಪುಟ ೫]

೮-೮-೪೮
ಭಾನುವಾರ

Date. 8-8-48

ರಿ. ನಂ. ೪೬೭೨

...ಮತ್ತು
...ರಾಜಕೀಯ

...ಮತ್ತು ...

ಬ್ರಿಟಿಷ್ ಬಂಡವಾಳಗಾರರ ಕಾಮಧೇನು

ಒಟ್ಟೆ ನಿಯಂತ್ರಣ

ಅಮೇರಿಕೆಯಲ್ಲಿ ಈ ವರ್ಷ ನಡೆಯಲಿರುವ ಅಧ್ಯಕ್ಷರ
ಚುನಾವಣೆಯಲ್ಲಿ ಹುರಿಯಾಳಾಗಿ ನಿಂತಿರುವ
ಶ್ರೀ. ಡೆವಿ ಮತ್ತು ಉಪಾಧ್ಯಕ್ಷಸ್ಥಾನಕ್ಕೆ
ಹುರಿಯಾಳಾಗಿರುವ ಮಿ ವಾರೆನ್

ಸಕ್ಕರೆ ಸಿಂಡಿಕೇಟಿನ ಹಾವಳಿ !

ಬೆಲೆ 2 ಆಣೆ

Vol. 4] ಬೆಂಗಳೂರು ಗುರುವಾರ [illegible] No. 24

BHA 57

SUBHA

ಚಂದೀರಾಮ್ ಬ್ರದರ್ಸ್

ಪೌತ ಪೇರೆಡ್ ಬೆಂಗಳೂರು

ಬೆನಾರಸ್ ಸೀರೆ

ನಾನಾ ವಿಧವಾದ ಬಣ್ಣ [illegible]

ಈಗತಾನೇ ಬಂದಿವೆ [illegible]

Shimoga Dist. Karnataka State, INDIA

ನಾನು ಜವಹರಲಾಲರನ್ನು ಮಹಾತ್ಮರನ್ನು [illegible] ಭೇಟಿ ಮಾಡಿದ್ದೇನು. ಪುನಃ ಪ್ರಾಂತದಲ್ಲಿ [illegible] ವರನ್ನು ಭೇಟಿ ಮಾಡಲು ಅಶಯವುಳ್ಳವ ನಾಗಿರುತ್ತೇನೆ. ನಾವು ಭಾರತೀಯರೊ [illegible]

[illegible] ಸ್ಟ್ರೀಟ್, ಬೆಂಗಳೂರು

[illegible] ಮಗ್ರ ಏಷ್ಯಾ ಸ್ವಾತಂತ್ರ ಸಂಗ್ರಾಮಕ್ಕೆ ಕರೆ!

ಏಷ್ಯಾ ದೇಶಗಳು ಕೂಡಿ [illegible]

ರಾಜಾಜಿ ಬೇಡ

[illegible] ಕಾಂಗ್ರೆಸ್ [illegible] ಪ್ರತಿಕೂಲ

ಮಧುರೆ ಅ. ೩೦

[illegible] ವಾದಿಗಳ ಪ್ರತಿಬಂಧಕ [illegible] ಗೂ ಗಳ ಅಗಸ್ಟ್ [illegible] ತಿರೋಧಕ ಶಕ್ತಿಗಳೊಡನೆ [illegible] ಕಲೆತು ವ್ಯವಹಾರ [illegible] ರಿಂದ ರಾಜಾಜಿ, ತಮಿಳು ನಾ [illegible] ಸಕರಾಗದಂತೆ ನೋಡಬೇಕು. [illegible] ತಮಿಳುನಾಡು ಕಾಂಗ್ರೆಸ್ ಪ್ರಚಾರ [illegible] ನಿರ್ಧಾರ ಮಾಡಿತು.

ನಾಯಕತ್ರಯರು

[illegible] ನವಂಬರ್ ೧೧ನೇ ತಾರೀಖು

ಲಂಡನ್ ಅ ೩೦

ಅಟ್ಲಿ-ಟ್ರೂಮನ್ ಭೇಟಿ ವಾಷಿಂಗ್ಟನ್ [illegible] ಮುಂದಿನ ತಿಂಗಳು ೧೧ನೇ ತಾರೀಖು [illegible] ಯುವುದು. ಪ್ರಪಂಚದ ಸಮಸ್ಯೆಯಾಗಿ [illegible] ಅಟಾಮಿಕ್ ಬಾಂಬ್ ವಿಷಯ ಮಾ [illegible] ಡುವರು [illegible] ಮಾರ್ಷಲ್ ಸ್ಟಾಲಿನ್ ರೊ ಸಹ ಈ ವಿಷ [illegible] ಕವಾಗಿ ಚರ್ಚೆ ಮಾಡಲು ಆಹ್ವಾನಿಸಿ [illegible] ಶಿವರೋ-ಕೊಡಲಿರುವರೋ ಆ ವಿಷ [illegible] ನಿಶ್ಚಿತ [illegible]

ಫ್ರೆಂಚ್ [illegible]

[illegible] ಕಾಂಗ್ರೆಸ್ [illegible] ದ್ವಾರಕ್ಕಾಗಿ

ಸೈಗಾನ್ ಅ ೩೦

[illegible] ಗೆ ದಕ್ಷಿಣದಲ್ಲಿಯೇ ಕಾಂಗ್ರೆಸ್ [illegible] ಪ್ರವಾಸದಲ್ಲಿ ಇಳಿದು. ಕೊಚಿನ್ [illegible] ನೈರುತ್ಯ ಪ್ರಾಂತದಿಂದ ಅನ್ನಾ [illegible] ಸೈನಿಕರನ್ನು ಹೊರಡಿಸಲು ಕತ್ತರಿ [illegible] ಹವನ್ನು ರಚಿಸಲು ಫ್ರೆಂಚ್ ಸೈನ್ಯಗಳು [illegible] ಯತ್ನಿಸುತ್ತಿವೆ ಎಂದು ರಾಯಿಟರ್ [illegible] ದಾರನ ವರದಿ.

ಚರ್ಚಿಲ್ ಆಶ್ಚರ್ಯ

ಚರ್ಚಿಲ್‌ಗೆ ಉತ್ತರವಿಲ್ಲ

ಲಂಡನ್ ಅ ೩೦

ಪ್ರತಿಪಕ್ಷ ನಾಯಕ ಚರ್ಚಿಲ್ ಕೇಳಿದ [illegible]

ಇಸ್ಲಾಂ—ಸ್ವಾತಂತ್ರ

ಗಾಂಧೀಟೋಪಿ ಕಿತ್ತರು

ಸಿಕ್ ನಾಗರ್ ಅ. ೨೭

ಆಸ್ಸಾಂ ಪ್ರಾಂತದ ಕಾಂಗ್ರೆಸ್ ಅಧ್ಯಕ್ಷ ಮೌಲ್ವಿ ಮಹಮದ್ ಟಯೆಬುಲ್ಲಾ ರವರು ಬೀದಿಯಲ್ಲಿ ಬರುತ್ತಿರುವಾಗ ಲೀಗ್ ರುಗಳು ಲೀಗಿಗೆ ಸೇರಿ ಎಂದರು.

ಕಾಂಗ್ರೆಸ್ ಬಿಡಬೇಕಾಗಿಲ್ಲ. ಇಸ್ಲಾಂ ಎಂದರೆ ಸ್ವಾತಂತ್ರ, ಸ್ವಾತಂತ್ರ ಎಂದರೆ ಇಸ್ಲಾಂ ಎಂದರವರು.

ಅವರ ಟೋಪಿ ಕಿತ್ತು ಲೀಗರುಗಳು ಕಾಲಿನಿಂದ ತುಳಿದರು. ಈ ಕೃತ್ಯ ಖಂಡಿ ಸಲ್ಪಟ್ಟಿದೆ.

ನಷ್ಟ ಕೊಡಿರಿ

ನೀವು ಮಾಸ್ಕ್ ಕೊಡಲಿಲ್ಲ

ಲಂಡನ್ ಅ. ೨೮

[illegible] ಬಾಂಬ್ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ ರಾಬರ್ಟ್ ಎಂಬಾತನು ೨೭ ಸಾವಿರ ಪೌಂಡ್ ಡ್ಯಾಮೇಜ್ ಕೇಳಿದ್ದಾನೆ. ಕೆಲಸಗಾರರೆಲ್ಲರಿಗೂ ಮಾಸ್ಕ್ ಕೊಟ್ಟಿದ್ದರು. ನನಗೆ ಕೊಡಲಿಲ್ಲ ನನ್ನ ದೇಹಸ್ಥಿತಿಯು ಕೆಟ್ಟು ಹೋಗಿದೆ ಎನ್ನುತ್ತಾನೆ.

ಗಾಂಧೀಜೀ ಬರೆದ ಎರಡು ಪತ್ರಗಳು

[illegible] ಕಾಗದ ತಲಪಿದೆ

ಪೂನಾ ಅ [illegible]

ಗಾಂಧೀಜೀಯವರು ವೈಸರಾಯಿಗೆ ಎರಡು ಪತ್ರಗಳನ್ನು ಬರೆದಿರುವುದಾಗಿ ತಿಳಿದು ಬಂದಿರುತ್ತದೆ.

ಕಾಗದಗಳು ಈ ದಿನ ವೈಸ್‌ರಾಯರಿಗೆ ತಲುಪಿರಬಹುದು. ಇದರಲ್ಲಿ ಏನಿದೆ ಎಂದು ಯಾರಿಗೂ ತಿಳಿಯದು. ಅಜಾದ್ ಹಿಂದ್ ಫೌಜ್‌ನವರ ವಿಷಯಗಳಿಗೆ ಸಂಬಂಧಪಟ್ಟಿವೆಂದು ಗಾಂಧೀ ಸಮಾಚಾರ ವರ್ತಿಗಳು ಹೇಳುತ್ತಾರೆ.

ಪುಣೆಗೆ ಬಂದನಂತರ ಗಾಂಧೀ ಬರೆದ ಕಾಗದವು ಇದೇ ಮೊದಲನೆಯದು.

ಪಂಡಿತ ನೆಹರೂ

ಚುನಾವಣೆಗೆ ಇಲ್ಲ

ಅಲಹಾಬಾದ್ ಅ. ೩೦

ರಂಗೂನ್ ೩೦

ಬರ್ಮಾ ಸ್ವಾತಂತ್ರೋದ್ಯಮದ ನಾಯಕನೂ ಮತ್ತು ಪ್ರಜಾ ಸ್ವಾತಂತ್ರ್ಯ ಲೀಗ್‌ನ ನಾಯಕನೂ ಆದಂತಹ ಶ್ರೀ [illegible] ವರು ಈ ದಿನ ಏಷ್ಯಾದ [illegible] ಸ್ವತಂತ್ರ ದೇಶಗಳ ಸ್ವಾತಂತ್ರೋದ್ಯಮ [illegible] ಸಾಧಿಸುವುದನ್ನು ಗೊತ್ತುಮಾಡುವ [illegible] ಕ್ಕಾಗಿ ಈ ದೇಶಗಳ ನಾಯಕರು ಒಂದು ಏಷ್ಯಾಟಿಕ್ ಕಾನ್ಫರೆನ್ಸ್ ನಡೆಸಬೇಕೆಂದು ಹೇಳಿದರು.

ಮುಂದುವರಿಯುತ್ತಾ ಅವರು ಹೇಳಿದೇನೆಂದರೆ ಆಗ್ನೇಯ ಏಷ್ಯಾ ದೇಶಗಳ [illegible] ಗೆ ಈಗ ಬಹಳ [illegible] ಶ್ಯಕತೆಯಿದೆ. ಭಾರತ, ಬರ್ಮಾ, ಮಲಯಾ, ಸಯಾಂ, ಇಂಡೋ ಚೈನಾ, ಇಂಡೋನೇಷಿಯಾ, ಸಿಲೋನ್, ಫಿಲಿಪೈನ್ಸ್ ಮತ್ತು ಜಪಾನ್ [ಪ್ರಜಾಪ್ರಭುತ್ವ ಸರ್ಕಾರ] ಈ ರಾಷ್ಟ್ರಗಳ ಸಮಾವೇಶವಾಗಬೇಕು. ನಾವು [illegible]

ಸ್ವತಂತ್ರರಾಗ [illegible] ಕು. ಪರಸ್ಪರ [illegible] ತಂತ್ರ ಸಂಗ್ರಾಮ [illegible] ಮಾಡಬೇಕು.

ಶ್ರೀ ಅಂಗ್ ಸಾನ್ ರು ಬರ್ಮಾ ರಾಷ್ಟ್ರೀಯ ಪಡೆಯ ಸೇನಾಧಿಪತಿಗಳ [illegible] ಮಿತ್ರರಿಗೆ ಸಹಾಯವಾಡಿದ [illegible] ಪ್ರೇಮಿ ಸೇನೆ [illegible] ಮಹಾದಳಪತಿಗಳಾಗಿದ್ದರು. ಅನಂತರ ಅವರು ತಮ್ಮ ಸೈನಿಕ ಜೀವನವನ್ನು ಬಿಟ್ಟರು. ಫ್ಯಾಸಿಸ್ಟ್ ವಿರೋಧೀ ಪ್ರಜಾ ಸ್ವಾತಂತ್ರ ಲೀಗ್‌ನ ಅಧ್ಯಕ್ಷರಾಗಿದ್ದಾರೆ. ಬರ್ಮಾದ ಸಕಲ ರಾಜಕೀಯ ಪಕ್ಷಗಳೂ ಈ ಲೀಗ್‌ಗೆ ಸೇರಿರುತ್ತವೆ.

ಕಡಮೆ ನೋಡಲಾಗದ ಪರತ್ರಗಳನ್ನು ಇವರು ಬರ್ಮಾ ಗವರ್ನರ್‌ಗೆ ಕೊಟ್ಟು ಮುಗ್ಗಟ್ಟು ನಿರ್ಮಿಸಿರುವರು.

(೨ ನೇ ಪುಟ ನೋಡಿರಿ)

ದ್ವಿತೀಯ ಸಂಗ್ರಾಮ ಮುಗಿದಿಲ್ಲ!

ಲಂಡನ್ ಅ ೩೦

ಸ್ಪೆಯಿನ್ನನ್ನು ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಸೇರಿಸಬೇಕೆಂದು ಫ್ರಾಂಕೋ ಆಶಿಸುತ್ತಿರುವನು. ತನಗೆ ಅಧಿನಿವೇಶ ಪ್ರತಿಪತ್ತಿಯನ್ನು ಕೊಡಬೇಕೆಂದು ಅತ ಕೋರಬಹುದು.

[illegible] ಮಂದಿ ಪ್ರಧಾನೋದ್ಯೋಗಿಗಳನ್ನು ಕುರಿತು ಮಾತನಾಡುತ್ತಾ ಫ್ರಾಂಕೋ ಈ ರೀತಿ ಹೇಳಿದನಂತೆ.

ಪ್ರಪಂಚದ ಭಿನ್ನ ಭಿನ್ನ ಪ್ರದೇಶದಲ್ಲಿರುವ ಕಲ್ಲೋಲಕ್ಕ [illegible] ಯನ್ನು ನೋಡಿದರೆ ದ್ವಿತೀಯ ಜಗ [illegible] ಗ್ರಾಮವು [illegible] ಮುಗಿದಿಲ್ಲ ವೆಂದು ಫ್ರಾಂಕೋ ಹೇಳಿದನಂತೆ.

ಬ್ರಿಟಿಷರೊಡನೆ

ಇಂಡೋ ನೇಷಿಯಾ ಕಲಹ

ಭಾರತ ಸೈನಿಕೋದ್ಯೋಗಿಯ ದಾರುಣ ಹತ್ಯೆ

ಬಟೇವಿಯಾ ಅ. ೩೦

ಸೂರಾಬಾಯದಲ್ಲಿ ಗೂರ್ಖಾ ನೇ ಭಾರತೀಯ ಕಾಲ್ಬಲ ದಳಪತಿಯಾದ ಬ್ರಿಗೇಡಿಯರ್ ಜನರಲ್ ಎ ಡಬ್ಲ್ಯು ಎಸ್ ಮಲಬೀದಾರುಣವಾಗಿ ಹತ್ಯೆಮಾಡಲ್ಪಟ್ಟಂತೆ ಜಾವಾದಲ್ಲಿರುವ ಮಿತ್ರ ಸೇನಾನಿ ಕ್ರಿಸ್ಟ್‌ಸನ್ ಈ ದಿನ ಪ್ರಕಟಿಸಿದನು.

ಇಂಡೋನೇಷಿಯಾ ತೀವ್ರವಾದಿಗಳೊಡನೆ ಯುದ್ಧ ವಿರಾಮದ ವಿಷಯ [illegible]

ಸೂರಾಬಾಯಿಯಲ್ಲಿ ವಿಪ್ಲವಕಾರರು ಶರಣಾಗತರಾಗದಿದ್ದರೆ-ಸಕಲ ಶಕ್ತಿಗಳನ್ನೂ ಪ್ರಯೋಗ ಮಾಡುವುದಾಗಿ ಕ್ರಿಸ್ಟ್‌ಸನ್ ಹೇಳಿದ್ದಾನೆ.

ಅಲ್ಲಿ ಪರಿಸ್ಥಿತಿ ವಿಷಯವಾಗಿಯೇ ಇದೆ. ಒಬ್ಬ ಯೂರೋಪಿಯನ್ನನೂ ಹೊರಗಡೆ ಬರುವ ಹಾಗಿಲ್ಲ.

ಈ ಅನ್ವೇಷಣೆ

ಫಿಲಿಪೈನ್ಸ್‌ನಲ್ಲಿ ಅಶಾಂತಿಯ ವಿಚಾರಣೆ

ಲಂಡನ್ [illegible]

ಬಲವತ್ತಾಗಿರುವುದೇ ಆದಂತಹ [illegible] ಗಳಿಂದ ಈಗ ಫಿಲಿಪೈನ್ಸ್‌ನಲ್ಲಿರುವ ಅಮೇರಿಕನ್ ಸರ್ಕಾರಕ್ಕೆ ಹೆದರಿಕೆಬಂದಿದೆ. ಈ ವಿಷಯದಲ್ಲಿ ಕೂಡಲೇ ವಿಚಾರಣೆಯನ್ನು ನಡೆಸಬೇಕೆಂದು ಟ್ರೂಮನ್ ಅಜ್ಞೆ ಮಾಡಿರುತ್ತಾನೆ.

ಗವರ್ನರ್ ರದ್ದು

ಮಾನವನಾಗಿದ್ದ ಕಾರಣ

ಅಲಹಾಬಾದ್ ಅ ೩೦

[illegible] ಗೆಂದರು.

ಆಗಸ್ಟ್ [illegible] ಕಾಲದಲ್ಲಿ ಮಾನವತ್ವದಿಂದ ನಡೆ [illegible] ಹೇಳಿದ ಬಿಹಾರ್ ಗವರ್ನರ್ [illegible] ರು. [illegible] ನಡೆದುಕೊಳ್ಳಬೇಕೆಂದ [illegible] ರು. ಆದರೆ ಜನಗಳು ಕಳೆತು [illegible] ನ್ಯಾಯಗಳನ್ನು ಪರಿಶೀಲಿ [illegible] ಮರೆಯಲ್ಪಡುವುದಿಲ್ಲ.

ಶ್ರೀ ವಿಜಯಲಕ್ಷ್ಮೀ

ಟ್ರೂಮನ್ ಭೇಟಿಮಾಡುವರು!

ವಾಷಿಂಗ್ಟನ್ ಅ ೩೦

ಶ್ರೀ ವಿಜಯಲಕ್ಷ್ಮೀ ಪಂಡಿತರು ಬುಧವಾರದ ದಿನ ಮಧ್ಯಾಹ್ನ ೧೨-೪೫ಕ್ಕೆ ಟ್ರೂಮನ್‌ರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡುವರು. ಶ್ರೀ ಮ [illegible] ಯ ವರೊಡನೆ ಟ್ರೂಮನ್‌ರು ಊಟಮಾಡುವರೆಂದೂ ಹೇಳಲಾಗುತ್ತದೆ.

ಅಮೇರಿಕಾದ ಅಧ್ಯಕ್ಷ ಭಾರತ ರಾಷ್ಟ್ರೀಯತಾವಾದಿಗಳನ್ನು ಭೇಟಿ ಮಾಡುವುದು ಇದೇ ಹೊದಲು.

ನವಂಬರ್ ೩

ಅಜಾದ್ ಹಿಂದ್ ದಿನ

ಕಲ್ಕತ್ತಾ ಅ. ೩೦

ಭಾರತದ ಸಮಸ್ತ ಕಾರ್ಮಿಕರಿಂದಲೂ ಅಜಾದ್ ಹಿಂದ್ ಫೌಜ್ ದಿನಾಚರಣೆಯು ನವಂಬರ್ ೩ನೇ ತಾರೀಖು ಆಚರಿಸಲ್ಪಡಬೇಕೆಂದು ಅಖಿಲಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷ ಮೃನಾಲಕಾಂತಿ ಬೋಸ್ ಹೇಳಿದ್ದಾರೆ.

ಆ ದಿನ ಮೆರವಣಿಗೆಗಳನ್ನು ನಡೆಯಿಸಬೇಕು. ಸಭೆಗಳನ್ನು ಮುಂದೆ ಬೋಸ್ [illegible] ಬಿಡುಗಡೆಗಾಗಿ ತೀರ್ಮಾನಗಳನ್ನು [illegible] ಬೇಕು.

[illegible] ವರ್ಧಂತಿ ಹರ್ಷದಾಯಕ

[illegible]

ಚಿತ್ರಗುಪ್ತ

CHITRAGUPTA

ಸಂಪುಟ ೬

ಸಂಚಿಕೆ ೨೭

SINIMA
April

ಕಾರ್ಯನಿರತ ಪತಿ
ROYAL'S IRCO 15 JEWEL

ಛಾಯಾ =ಮಾಸಪತ್ರಿಕೆ=
ಯುವ ಜನರ ಬಾಳಿ ಕರವಾಳ!!
ಮನರಂಜನೆ, ಮನೋವಿಕಾಸಕ್ಕೆ ಓದಿರಿ
ಬಿಡಿಪ್ರತಿ ೪ ಆಣೆ
ಕಛೇರಿ: ದೇಶಬಂಧು ಪ್ರೆಸ್
ಕೋಟೆ, ಬೆಂಗಳೂರು ಸಿಟಿ

Regd No. M. 4159 PHONE: 2155

ದೇಶಬಂಧು

DESHABANDHU

ರಾಷ್ಟ್ರೀಯ ದಿನ ಪತ್ರಿಕೆ NATIONALIST DAILY

೪ ಪುಟಗಳು

ಬೆಲೆ ೧ ಆಣೆ

ಸಂಪುಟ ೮ ವ್ಯಯ ಸಂವತ್ಸರ ಕಾ॥ ಬ॥ ಪಂಚಮಿ ಬುಧವಾರ ತಾ॥ 13-11-1946 ಸಂಚಿಕೆ ೩೦೦

ಚೀಣಾ ರಾಷ್ಟ್ರ ಸಭೆ ಮುಂದೆ ಹಾಕಲ್ಪಟ್ಟಿತು

ಎ ಪಿ ಐ ನಾಂಕಿಂಗ್ ನ ೧೨

ಈ ದಿನ ಆರಂಭವಾಗಬೇಕಾಗಿದ್ದ ಚೀಣಾ ರಾಷ್ಟ್ರ ಸಭೆಯ ಅಧಿವೇಶನ ಇನ್ನೂ ೩ ದಿನ ಮುಂದಕ್ಕೆ ಹಾಕಲ್ಪಟ್ಟಿರುವುದಾಗಿ ಪ್ರಕಟಿಸಲ್ಪಟ್ಟಿದೆ. ಈ ರೀತಿ ಅಧಿವೇಶನವನ್ನು ಮುಂದೆ ಹಾಕಿರುವುದು ೩ನೆಯ ಸಲ

ಬ್ರಿಟಿಷ್ ಸೈನ್ಯವನ್ನು ಹಿಂದಕ್ಕೆ ಕರೆಸಿದರೆ ಭಾರತಕ್ಕೆ ಹಾನಿ

ಮೈಸೂರಿನಲ್ಲಿ

ಜವಾಬ್ದಾರಿ ಸರ್ಕಾರ ಬೇಡಿಕೆ

ಈಡೇರಿಸಿಕೊಳ್ಳಲು ಕಾಂಗ್ರೆಸ್ ಕೈಗೊಳ್ಳುವ ಕಾರ್ಯಕ್ರಮ

೧೭ನೆ ತಾರೀಖು ವರ್ಕಿಂಗ್ ಸಮಿತಿಯಲ್ಲಿ ನಿರ್ಧಾರ

ಶ್ರೀ ಕೆ. ಚೆಂಗಲರಾಯರೆಡ್ಡಿಯವರ ವಿವರಣೆ

(ಸ್ವ. ಸು. ತಂತಿ) ಮೈಸೂರು ನ ೧೩

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಚೆಂಗಲರಾಯರೆಡ್ಡಿಯವರನ್ನು ಮೈಸೂರಿನಲ್ಲಿ ರಾತ ವೃತ್ತ ಪತ್ರಿಕೋದ್ಯೋಗಿಗಳ ಸಂಘದವರು ನಿನ್ನೆಯ ದಿನ ಬರಮಾಡಿಕೊಂಡು ಸತ್ಕರಿಸಿದರು.

ಆ ಸಮಯದಲ್ಲಿ ಕಾಂಗ್ರೆಸ್ ಅಧ್ಯಕ್ಷರು 'ಮೈಸೂರು ಸಂಸ್ಥಾನದಲ್ಲಿ ಶ್ರೀ

ಜಪಾನ್ ತಪ್ಪುದಂಡ ಹಂಚಿಕೆ

ಅಮೆರಿಕದ ನಿರ್ಧಾರ

ರಾಯಿಟರ್ ವಾಷಿಂಗ್ಟನ್ ನ ೧೩

ಜಪಾನ್ ತಪ್ಪುದಂಡ ಹಂಚಿಕೆಯಲ್ಲಿ ಇತರ ರಾಷ್ಟ್ರಗಳು ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾಗದಿದ್ದರೆ ಅಮೆರಿಕ ಸರ್ಕಾರವು ತನ್ನ ತಾತ್ಕಾಲಿಕ ಯೋಜನೆಯನ್ನು ಜಾರಿಗೆ ತರುವುದು ಎಂದು ಬ್ರಿಟನ್, ರಷ್ಯ ಮತ್ತು ದೂರಪೂರ್ವದ ಇತರ ರಾಷ್ಟ್ರಗಳಿಗೆ ತಿಳಿಸಿದೆ.

೪೦ ಕೋಟಿ ಡಾಲರ್ ಎಮರ್ಜನ್ಸಿ ಆಹಾರ ನಿಧಿ

ಅಮೇರಿಕದ ವಿರೋಧ

ರಾಯಿಟರ್ ವಾಷಿಂಗ್ಟನ್ ನ ೧೨

ಯು. ಎನ್. ಆರ್. ಆರ್. ಎ. ಸಂಸ್ಥೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬರುವ ವ್ಯವಸ್ಥೆಗೆ ೪೦ ಕೋಟಿ ಡಾಲರ್ ಎಮರ್ಜನ್ಸಿ ಆಹಾರ ನಿಧಿಯನ್ನಾಗಿಡಬೇಕೆಂದು ಲಾಗಾರ್ಡಿಯರವರು ಸೂಚಿಸಿದ ಸಲಹೆಯನ್ನು ಅಮೆರಿಕ ಸರಕಾರ ನಿರಾಕರಿಸಿದೆ

ಗಲಭೆಗಳ ವರದಿಗಳು

ಪ್ರಕಟಿಸಬೇಕಾದ ವಿಚಾರದಲ್ಲಿ ಒಪ್ಪಂದ

ಇಂಡಿಯಾ ಸರಕಾರದವರು ಸಂಪಾದಕರುಗಳ ಸಲಹೆಗಳನ್ನು ಅಂಗೀಕರಿಸಿದ್ದಾರೆ

ಎ ಪಿ ಐ ನವದೆಹಲಿ ನ ೧೨

ಗಲಭೆಗೆ ಸಂಬಂಧಪಟ್ಟ ಸುದ್ದಿಗಳನ್ನು ವೃತ್ತಪತ್ರಿಕೆಗಳು ಯಾವ ರೀತಿ ಪ್ರಕಟಿಸಬಹುದೆಂಬ ಬಗ್ಗೆ ದೆಹಲಿ ವೃತ್ತಪತ್ರಿಕಾ ಕರ್ತರ ಸಮಿತಿಯು ತಯಾರಿಸಿದ ಸಲಹೆಗಳನ್ನು ಭಾರತ ಸರಕಾರ ತಾತ್ಕಾಲಿಕವಾಗಿ ಅಂಗೀಕರಿಸಿದೆ.

ಈಗ ಕೋಮುವಾರು ಗಲಭೆಗಳು ಉಂಟಾದ ಪರಿಸ್ಥಿತಿ ಸರಿಹೋಗುವವರೆಗೆ ಯಾವ ಪತ್ರಿಕೆಗಳೂ ಕೋಮುವಾರು ದ್ವೇಷವನ್ನು ಉದ್ರೇಕಿಸುವಂತಹ ಸುದ್ದಿಗಳನ್ನು ಪ್ರಕಟಿಸಕೂಡದೆಂದೂ ಮತ್ತು ಶಾಂತಪರಿಸ್ಥಿತಿಯುಂಟಾಗುವಂತೆ ಸಹಕಾರಿಯಾಗುವಂತೆ ನಡೆಸುಕೊಳ್ಳಬೇಕೆಂದೂ ಆ ಸಲಹೆಯಲ್ಲಿ ತಿಳಿಸಲಾಗಿದೆ

ಸರದಾರ್ ವಲ್ಲಭಭಾಯ್ ಪಟೇಲರಿಂದ ಕರೆಯಲ್ಪಟ್ಟ ದಹಲಿ ವೃತ್ತಪತ್ರಿಕಾ ಸಂಪಾ

ಭಿಪ್ರಾಯ ಪಟ್ಟಿದೆ ಇದರಿಂದ ಸಾಕಷ್ಟು ಉಪಯೋಗವಾಗದೆಂದು ಕಂಡು ಬಂದರೆ ಈ ಸಮಿತಿ ಪುನಃ ಪರಿಶೀಲಿಸಿ ಬೇರೆ ಸಲಹೆಗಳನ್ನು ರಚಿಸುವುದು ಇದರಿಂದ ಪ್ರಯೋಜನ ಕಂಡುಬರದಿದ್ದರೆ ಸರಕಾರವು ಸೂಕ್ತಕಂಡ ಕಾರ್ಯಕ್ರಮವನ್ನು ಕೈಗೊಳ್ಳುವುದು

ಸರದಾರರ ಭಾಷಣ

ಸಮ್ಮೇಳನದಲ್ಲಿ ಸರದಾರ್ ಪಟೇಲರು ಭಾಷಣ ಮಾಡುತ್ತ ದೇಶದಲ್ಲಿ ಹಿಂಸಾಕೃತ್ಯಗಳಿಗೆ ಉತ್ತೇಜನ ಕೊಡಲು ಪ್ರಯತ್ನಿಸಿ ಲಕ್ಷಾಂತರ ಜನರ ಜೀವನಗಳನ್ನು ಅಪಾಯಕ್ಕೀಡು ಮಾಡುವಂತಹ ಕೃತ್ಯಗಳು ನಡೆದರೆ ಯಾವ ಸರಕಾರವೂ ಕೈಕಟ್ಟಿಕೊಂಡು ಸುಮ್ಮನಿರಲು ಸಾಧ್ಯವಿಲ್ಲ ಎಂದರು

ಗಲಭೆಗಳ ಸುದ್ದಿಗಳನ್ನು ಪ್ರಕಟಿಸಲಾಗದೆಂದು ನೆಂದಿದ್ದ ಸಂಪಾದಕರಿಗೆ ಪಟೇಲರು ಹೇಳಿದರು. ಈ ಸಂಬಂಧದಲ್ಲಿ ಒಂದು ಒಪ್ಪಂ

ಬ್ರಿಟಿಷ್ ಸೈನ್ಯ ಭಾರತವನ್ನು ಬಿಡಲಾಗದು

ಕಾಮನ್ಸ್ ಸಭೆಯಲ್ಲಿ ಚರ್ಚಿಲ್‌ರವರ ವಾದ

ರಾಯಿಟರ್ ಲಂಡನ್ ನ ೧೨

ಪಾರ್ಲಿಮೆಂಟಿನ ನೂತನ ಅಧಿವೇಶನವು ಬ್ರಿಟಿಷ್ ದೊರೆಗಳಿಂದ ಆರಂಭಿಸಲ್ಪಟ್ಟ ಮೇಲೆ ಅಟ್ಲಿ ಮತ್ತು ವಿರೋಧಪಕ್ಷದ ಚರ್ಚಿಲ್‌ರವರು ಭಾಷಣ ಮಾಡಿದರು.

ಸೈನ್ಯ ಕರೆಸುವುದು ಭಾರತಕ್ಕೆ ಕೇಡು

"ಈಗಿನ ಪರಿಸ್ಥಿತಿಯಲ್ಲಿ ಭಾರತದಿಂದ ಬ್ರಿಟಿಷ್ ಸೈನ್ಯವನ್ನು ಹಿಂದಕ್ಕೆ ಕರೆಸುವುದರಿಂದ ಭಾರತಕ್ಕೆ ಹಾನಿಯುಂಟು" ಎಂದು ಚರ್ಚಿಲ ರವರು ಅಭಿಪ್ರಾಯಪಟ್ಟರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತ ಭಾರತದ ಜನಜೀವನವು ಅಧೋಗತಿಗಿಳಿಯುತ್ತಿರುವುದರಿಂದಲೂ, ಭಾರತ ಭೂಪಟದಲ್ಲಿ ರಕ್ತದ ಕಲೆಗಳು ಕಾಣಲಾರಂಭಿಸಿರುವು

ಪೂರ್ವ ಬಂಗಾಳದಲ್ಲಿ

ನಿರಾಶ್ರಿತರು

ಸ್ವಸ್ಥಾನಕ್ಕೆ ಹೋಗುತ್ತಿದ್ದಾರೆ

ಗಾಂಧೀಜಿಯವರ ಪ್ರವಾಸದ ಫಲ

ಎ ಪಿ ಐ ತಂತಿ ದತ್ತಾಪುರ ನ ೧೨

ಪೂರ್ವ ಬಂಗಾಳದಲ್ಲಿ ನಾನಾ ನಿರಾಶ್ರಿತ ಶಿಬಿರಗಳಲ್ಲಿದ್ದ ಜನರು ತಮ್ಮ ತಮ್ಮ ಸ್ಥಳಗಳಿಗೆ ಹೋಗುತ್ತಿದ್ದಾರೆ. ದತ್ತಾಪುರ ಮತ್ತು ಖಿಲ್‌ಪುರಗಳಲ್ಲಿದ್ದ ೧೫೦೦ ಮಂದಿ ನಿರಾಶ್ರಿತರು ಚೌಮುಹನಿ ಮುಖಾಂತರ ನಿನ್ನೆ ತಮ್ಮ ಸ್ವಸ್ಥಾನಗಳಿಗೆ ಹೋದರು. ತಮಗೆ ರಕ್ಷಣೆ ದೊರೆತರೆ ಹೊರತು ಅಲ್ಲಿ ವಾಸಿಸಲು ಸಾಧ್ಯವಿಲ್ಲವೆಂದು ನೇಕರು ಹೇಳಿದರು. ಮಾರ್ವಾರಿ ಸಂಘದರು ೫೦೦೦ ಮಂದಿ ನಿರಾಶ್ರಿತರನ್ನು ಸ್ವಸ್ಥಾನಗಳಿಗೆ ಕಳುಹಿಸಿದ್ದಾರೆ.

ಗಾಂಧೀಜಿಯವರು ಇನ್ನೆಷ್ಟು ದಿನ ಬಂಗಾಳದಲ್ಲಿರುವರೆಂಬುದು ಗೊತ್ತಿಲ್ಲ

ಗಾಂಧೀಜಿಯವರು ಒಳನಾಡಿನಲ್ಲಿ ಇನ್ನೂ

ಕ್ರಿಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಕಾಂಗ್ರೆಸ್ ಕೈಗೊಳ್ಳಬೇಕೆಂದಿರುವ ಪ್ರತ್ಯಕ್ಷಕಾರ್ಯ ಕ್ರಮವನ್ನು (ಡೈರೆಕ್ಟ್ ಆಕ್ಷನ್) ನವೆಂಬರ್ ೧೬ನೆ ತಾರೀಖು ಬೆಂಗಳೂರಿನಲ್ಲಿ ಸೇರಲಿರುವ ಕಾಂಗ್ರೆಸ್ ವರ್ಕಿಂಗ್ ಸಮಿತಿಯು ನಿರ್ಧರಿಸಲಿದೆ." ಎಂಬದಾಗಿ ಪ್ರಕಟಣೆ ಹೊರಡಿಸಿದರು.

ಇನ್ನೊಂದು ಪ್ರಶ್ನೆಗೆ ಶ್ರೀ ರೆಡ್ಡಿಯವರು ಉತ್ತರ ಕೊಡುತ್ತ "ಕೋಮುವಾರು ಘರ್ಷಣೆಗೆ ಅವಕಾಶವಿಲ್ಲದ ರೀತಿಯಲ್ಲಿ ಹೋರಾಟವನ್ನು ನಡೆಸುವ ಯೋಚನೆ ಮಾಡಲಾಗುವುದು" ಎಂಬುದಾಗಿ ನುಡಿದರು.

ವಿದ್ಯಾರ್ಥಿ ಕಾಂಗ್ರೆಸ್ಸಿನ ಸಹಾಯ ಭರವಸೆ

ನಿನ್ನೆ ಸಾಯಂಕಾಲ ಟೌನ್ ಹಾಲಿನಲ್ಲಿ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಸಂಸ್ಥೆಯವರು ಶ್ರೀ ಕೆ. ಚಂಗಲರಾಯರೆಡ್ಡಿಯವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು- ಮೈಸೂರು ಕಾಂಗ್ರೆಸ್ ನಡೆಸುವ ಹೋರಾಟದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಭಾಗವಹಿಸಿ ಪೂರ್ಣ ಬೆಂಬಲವನ್ನು ಕೊಡುವುದಾಗಿ ಬಿನ್ನವತ್ತಳೆಯಲ್ಲಿ ಸೂಚಿಸಿತ್ತು.

ಶ್ರೀ ಕೆ. ಚಂಗಲರಾಯರೆಡ್ಡಿಯವರು ಭಾಷಣ ಮಾಡುತ್ತಾ ವಿದ್ಯಾರ್ಥಿಗಳು ಶಿಸ್ತಿನಿಂದ ವರ್ತಿಸಬೇಕೆಂದೂ ಏಕಮತ್ಯದಿಂದ ಕೂಡಿರಬೇಕೆಂದೂ ನಾಯಕರ ಸೂಚನೆಗೆ ಕಾದಿರಬೇಕೆಂದೂ ಕಾವೇ ಆತುರದಿಂದ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಕೂಡದೆಂದೂ ಬುದ್ಧಿವಾದವಿತ್ತರು.

ಶ್ರೀ ಕೃಷ್ಣಮೆನನ್ ರಷ್ಯಕ್ಕೆ ಭೇಟಿಕೊಡುವರು

ರಾಯಿಟರ್ ನ್ಯೂಯಾರ್ಕ್ ನ ೧೩

ಶ್ರೀ ಕೃಷ್ಣಮೆನನ್‌ರವರು ರಷ್ಯದ ಆಹ್ವಾನವನ್ನು ಮನ್ನಿಸಿ ರಷ್ಯಕ್ಕೆ ಸದ್ಯದಲ್ಲಿಯೇ ಭೇಟಿ ಕೊಡುವುದರ ಜೊತೆಗೆ ಯೂರೋಪಿನ ಇತರ ಕಡೆಗಳಿಗೂ ನೆಹರುರವರ ಪ್ರಾರ್ಥನೆ ಪ್ರಕಾರ ಭೇಟಿ ಕೊಡುವರು. ಡೆನ್ಮಾರ್ಕ್, ಸ್ವೀಡನ್, ನಾರ್ವೇ, ಸ್ವಿಟ್ಜರ್ಲೆಂಡ್, ಮತ್ತು ಜೆಕೊಸ್ಲೊವೇಕಿಯ ದೇಶಗಳಿಗೆ ಅವರು ಭೇಟಿ ಕೊಡುತ್ತಾರೆ.

ಒದಲಾವಣೆಯಿಲ್ಲ

ರಾಯಿಟರ್ ನಾಂಕಿಂಗ್ ನ ೧೩

ಚೀಣದ ವಿವಿಧ ರಾಜಕೀಯ ಪಕ್ಷಗಳು ಸಮಾವೇಶ ನಡೆಸುತ್ತಿದ್ದರೂ ರಾಜಕೀಯ ಪರಿಸ್ಥಿತಿಯಲ್ಲಿ ಮುಖ್ಯ ಒದಲಾವಣೆಗಳೇನೂ ಕಂಡುಬಂದಿಲ್ಲವೆಂದು ವರದಿಯಾಗಿದೆ.

ಸರ್ಕಾರವನ್ನು ಮೊದಲು ಪುನರ್ರಚಿಸುವವರೆಗೆ ಕಮ್ಯೂನಿಸ್ಟರೂ ಮತ್ತು ಡೆಮೊಕ್ರಾಟಿಕ್ ಪಕ್ಷದವರೂ ಬಹಿಷ್ಕರಿಸಬೇಕೆಂದು ನಿರ್ಧರಿಸಿರುವರು.

ನಿನ್ನೆ ಸೇರಬೇಕಾಗಿದ್ದ ರಾಷ್ಟ್ರಸಭೆ ಕಮ್ಯೂನಿಸ್ಟರೊಡನೆ ಒಂದು ಒಪ್ಪಂದವಾಗಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲು ೨೩ ದಿನಗಳವರೆಗೆ ಮುಂದೆ ಹಾಕಲ್ಪಟ್ಟಿತ್ತು. ಪ್ರಾಯಶಃ ಡಿಸೆಂಬರ್ ೧೨ರವರೆಗೆ ಸಭೆ ನಡೆಯಲಾರದೆಂದು ಕಾಣುವುದು.

ಅಮೆರಿಕದಲ್ಲಿ ಭಾರತ ರಾಯಭಾರಿ

ಎ ಪಿ ಐ ನವದೆಹಲಿ ನ ೧೩

ವಾಷಿಂಗ್‌ಟನ್ನಿನಲ್ಲಿ ಭಾರತ ಸರ್ಕಾರದ ರಾಜಕೀಯ ಪ್ರತಿನಿಧಿಯಾಗಿ ನೇಮಕ ಮಾಡಲ್ಪಟ್ಟಿದ್ದ ಸರ್ ಗಿರಿಜಾ ಶಂಕರ ಬಾಜ್‌ಪೈರವರನ್ನು ರಾಯಭಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಅದೇರೀತಿ ಭಾರತದಲ್ಲಿರುವ ಅಮೆರಿಕ ಪ್ರತಿನಿಧಿ ರಾಯಭಾರಿ ಸ್ಥಾನವನ್ನು ಪಡೆಯುವರು.

ಅಂ. ರಾ. ವ್ಯಾಪಾರ ಪ್ರತಿನಿಧಿಗಳಿಗೆ ಭಾರತೀಯರ ಸತ್ಕಾರ

ರಾಯಿಟರ್ ಲಂಡನ್ ನ ೧೩

ಲಂಡನ್ನಿನಲ್ಲಿ ನಡೆಯುವ ಅಂತರರಾಷ್ಟ್ರೀಯ ವ್ಯಾಪಾರ ಸಮ್ಮೇಳನದ ಪ್ರಿಪರೇಟರಿ ಸಮಿತಿಯ ಭಾರತ ಪ್ರತಿನಿಧಿಗಳು ಇತರ ಪ್ರತಿನಿಧಿಗಳಿಗೆ ಒಂದು ಸತ್ಕಾರವನ್ನೇರ್ಪಡಿಸಿದ್ದರು. ಈ ಸಮಾರಂಭಕ್ಕೆ ಭಾರತ ಕಾರ್ಯದರ್ಶಿಯವರು ಪ್ರಮುಖ ಅತಿಥಿಗಳಾಗಿದ್ದರು. ಇತರ ರಾಜಕೀಯ ಮುಖಂಡರನ್ನೂ ಆಹ್ವಾನಿಸಲಾಗಿತ್ತು.

ಸಲ್ಪಟ್ಟಿತು.

ಅಧಿಕೃತ ವರದಿಗಳಿಂದ, ಅಥವಾ ವಾರ್ತಾ ಸಂಸ್ಥೆಗಳಿಂದ ಅಥವಾ ಪತ್ರಿಕೆಗಳ ಸ್ವಂತ ಬಾತ್ಮೀದಾರರಿಂದ ಗಲಭೆಗೆ ಸಂಬಂಧಪಟ್ಟ ಸುದ್ದಿಗಳು ಬಂದಾಗ ಸಂಪಾದಕರಿಂದ ಸತ್ಯಾಸತ್ಯಗಳ ಪರಿಶೀಲಿಸಲ್ಪಟ್ಟ ಕೃತ್ಯ ನಡೆಸಿದ ಕೋಮಿನವರ ಅಥವಾ ಒಂದು ನಿರ್ದಿಷ್ಟ ಘಟನೆಯಲ್ಲಿ ನಡೆದ ಸಾವುನೋವುಗಳನ್ನು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿಯಾಗಲೀ ಪ್ರಕಟಿಸಲಾಗದು. ಸಾವುನೋವುಗಳ ಸಂಖ್ಯೆಯನ್ನು ಶಿರೋನಾಮೆಯಲ್ಲಾಗಲೀ ಅಥವಾ ಇತರ ಕಡೆಗಳಲ್ಲಿ ಪ್ರಾಧಾನ್ಯವಾಗಿ ಕಾಣುವಂತಾಗಲೀ ಪ್ರಕಟಿಸಕೂಡದೆಂದು ಆ ಸಲಹೆಯಲ್ಲಿ ಸೂಚಿಸಲಾಗಿದೆ.

ಸರ್ಕಾರದಿಂದ ಅಂಗೀಕೃತವಾದ ಕಡೆಗಳಿಂದ ಬಂದ ಸಾವುನೋವುಗಳ ಸಂಖ್ಯೆಯನ್ನು ಸುದ್ದಿಯ ಮಧ್ಯದಲ್ಲಿ ಕೊಡಬಹುದು ಹಾಗೆ ಸಂಖ್ಯೆಯನ್ನು ಕೊಡುವಾಗ ವರದಿ ಎಲ್ಲಿಂದ ಬಂತೆಂಬುದನ್ನು ತಿಳಿಸಬೇಕು. ಸರ್ಕಾರದ ಮುಖಾಂತರ ಅಂಕಿಅಂಶಗಳು ತಿಳಿಯದಿದ್ದಲ್ಲಿ ಪ್ರಕಟವಾದ ಸಂಖ್ಯೆಗಳು ಸರ್ಕಾರದಿಂದ ಸಮರ್ಥಿಸಲ್ಪಟ್ಟಿಲ್ಲವೆಂದು ಸ್ಪಷ್ಟವಾಗಿ ತಿಳಿಸಬೇಕು.

ಯಾವ ಸಂದರ್ಭಗಳಲ್ಲಿಯೂ ಸತ್ತವರ ಚಿತ್ರಗಳನ್ನು ಪ್ರಕಟಿಸಲಾಗದು. ಕೋಮುವಾರು ಪರಿಸ್ಥಿತಿಯ ಬಗ್ಗೆ ಯಾರೊಬ್ಬರಾಗಲೀ ಅಥವಾ ರಾಜಕೀಯ ಸಂಸ್ಥೆಗಳಾಗಲೀ ಕೊಟ್ಟ ಹೇಳಿಕೆಗಳು ಸರ್ಕಾರದಿಂದ ರಚಿಸಲ್ಪಟ್ಟ ಒಂದು ಕೇಂದ್ರಸಮಿತಿಯ ಒಪ್ಪಿಗೆ ಪಡೆದ ವಿನಹ ಹಂಚಲ್ಪಡಕೂಡದು ಅಥವಾ ವೃತ್ತ ಪತ್ರಿಕೆಗಳಿಂದ ಪ್ರಕಟಿಸಲ್ಪಡಕೂಡದು.

ವೃತ್ತ ಪತ್ರಿಕೆಗಳು ತಮ್ಮ ಅಭಿಪ್ರಾಯಗಳನ್ನು ಕೋಮುವಾರು ಪ್ರಶ್ನೆಯ ರಾಜಕೀಯ ದೃಷ್ಟಿಯಿಂದ ವ್ಯಕ್ತಪಡಿಸಬಹುದಾದರೂ, ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ರೀತಿಯಿಂದ ಹಿಂಸಾಕೃತ್ಯ ಅಥವಾ ಅರಾಜಕತ್ವವನ್ನು ಉತ್ತೇಜನಗೊಳಿಸುವ ಲೇಖನ, ವ್ಯಾಖ್ಯಾನ ಅಥವಾ ಸಂಪಾದಕೀಯಗಳನ್ನ ಪ್ರಕಟಿಸಲಾಗದು.

ಈ ಸಲಹೆಗಳು ಪರಿಸ್ಥಿತಿಯನ್ನೆದುರಿಸಲು ಸಾಲದೆಂದೂ, ಆದರೆ ಒಮ್ಮೆ ಪ್ರಯೋಗಿಸಲು ಅವಕಾಶ ಕೊಡಲುಸಿದ್ಧವೆಂದೂ ಸರಕಾರ ಅ-

ದರೂ ಸಹ ಸರಕಾರವು ಸೂಕ್ತ ಕಾರ್ಯವನ್ನು ಕೈಗೊಳ್ಳಬೇಕಾಗುವುದು ಎಂದರು.

ಇದು ನನ್ನ ಕಡೆಯ ವಿನಂತಿಯೆಂದೂ ಇನ್ನೂ ಮುಂದೆ ಸರ್ವಾಧಿಕಾರವಾದ ಪರಿಣಾಮವುಂಟಾಗುವುದೆಂದೂ ಆಶಿಸಿದ್ದೇನೆ ಎಂದರು

ಸಮಿತಿಯ ಸಲಹೆಯು ಒಮ್ಮತದಿಂದ ಮಾಡಲ್ಪಟ್ಟಿದೆ. ಈ ಸಲಹೆಯಂತೆ ಭಾರತದ ಪ್ರತಿಯೊಂದು ವೃತ್ತ ಪತ್ರಿಕೆ ಮತ್ತು ವಾರ್ತಾ ಸಂಸ್ಥೆಗಳು ನಡೆಯಬೇಕು." ಎಂದು ಸಲಹೆ ಮಾಡಲಾಯಿತು.

ಸಿಂಧ್‌ನಿಂದ ೧೫,೦೦೦ ಟನ್ ಅಕ್ಕಿ

ಎ ಪಿ ಐ ಕರಾಚಿ ನ ೧೩

ಸಿಂಧ್ ಸರಕಾರವು ಮೊದಲು ನಿರ್ಧರಿಸಿದ್ದ ೧೦ ಸಾವಿರ ಟನ್ ಅಕ್ಕಿ ಕೋಟಾವನ್ನು ಈಗ ೧೫ ಸಾವಿರ ಟನ್ನಿಗೆ ಹೆಚ್ಚಿಸಿದೆ ಅದನ್ನು ಆಹಾರ ಅಭಾವವಿರುವ ಪ್ರದೇಶಗಳಿಗೆ ಈ ತಿಂಗಳ ಅಂತ್ಯದಲ್ಲಿ ಹಂಚಲಾಗುವುದು.

ಕೊಚಿನ್‌ಗೆ ೩,೫೦೦ ಟನ್ ಮತ್ತು ತಿರುವಾಂಕೂರಿಗೆ ೪,೫೦೦ ಟನ್ ರವಾನಿಸಲಾಗುವುದು.

ಭಾರತ ಸೈನ್ಯವನ್ನು ಭಾರತೀಯರ ಮಯವಾಗಿ ಮಾಡುವ ವಿಚಾರ

ಪರಿಶೀಲನೆಗೆ ಸಮಿತಿ ರಚನೆ

ಎ ಪಿ ಐ ನವದೆಹಲಿ ನ ೧೩

ಭಾರತ ಸೈನ್ಯದಲ್ಲಿ ಎಲ್ಲರೂ ಭಾರತೀಯರೇ ಇರಬೇಕೆಂಬ ತತ್ವವನ್ನು ಬೇಗನೆ ಅನುಷ್ಠಾನಕ್ಕೆ ತರುವ ವಿಚಾರದಲ್ಲಿ ಸಲಹೆ ಕೊಡಲು, ಒಂದು ಸಮಿತಿಯ ರಚನೆಯಾಗಿದೆ

ಸರ್ ಗೋಪಾಲಸ್ವಾಮಿ ಅಯ್ಯಂಗಾರರು ಸಮಿತಿ ಅಧ್ಯಕ್ಷರು ಪಂಡಿತ ಹೃದಯನಾಥ ಕುಂಜ್ರು, ಶ್ರೀ ಮಹಮದ್ ಇಸ್ಮೈಲ್, ಮತ್ತು ಸರ್ದಾರ್ ಸಂಪೂರ್ಣಾನಂದ್ ಇವರು ಸದಸ್ಯರು. ಅಲ್ಲದೆ ಮೂವರು ಹಿರಿಯ ಸೈನ್ಯಾಧಿಕಾರಿಗಳೂ ಇರುವರು

ರವಾಗಿ ಸಭೆಯಲ್ಲಿ ಚರ್ಚೆಗೆ ಒತ್ತಾಯಪಡಿಸಬಹುದು" ಎಂದರು

ಇನ್ನೂ ಅಂಧಕಾರ ಕವಿದಿದೆ

ಚರ್ಚಿಲ್‌ರವರು ಇತರವಿಷಯಗಳನ್ನು ಕುರಿತು ಮಾತನಾಡುತ್ತ "ಜರ್ಮನಿ ಶರಣಾಗತವಾಗಿ ೧೮ ತಿಂಗಳುಗಳಾದರೂ, ಅಮೆರಿಕ ಎಡಬಿಡದೆ ಸಹಾಯ ಮಾಡುತ್ತಿದ್ದರೂ ಸಹ ಪ್ರಪಂಚವು ಇನ್ನೂ ಅಂಧಕಾರಮಯವಾಗಿದೆ. ಅಸ್ಥಿರತೆ ಮತ್ತು ಕಳವಳಕ್ಕಾಸ್ಪದ ವುಂಟಾಗಿದೆ ಯೂರೋಪಿನಲ್ಲಿ ರಷ್ಯ ಪ್ರಬಲ ಸೈನ್ಯವನ್ನು ಯುದ್ಧ ಸನ್ನದ್ಧ ಮಾಡಲಿದೆ ವಿಶ್ವ ಸಂಸ್ಥೆಯು ತನ್ನ ತತ್ವಕ್ಕನುಗುಣವಾಗಿ ನಡೆಯಲಸಮರ್ಥವಾಗಿದೆ." ಎಂದರು.

ಜರ್ಮನಿಯ ವಿಚಾರವಾಗಿ ಮಾತನಾಡುತ್ತ "ಅದು ಪುನಃ ಶಸ್ತ್ರಧಾರಣೆ ಮಾಡಲವಕಾಶವಿದಂತೆ ಮಾಡಿ, ಅವರ ಆಡಳಿತವನ್ನು ಅವರೇ ನಡೆಸಿಕೊಂಡು ಹೋಗಲು ಆದಷ್ಟು ಜಾಗ್ರತೆ ಅವಕಾಶ ಕೊಡಬೇಕು" ಎಂದರು.

ಆಟ್ಲಿಯವರ ಉತ್ತರ

ಆಟ್ಲಿಯವರು ಆಕ್ಷೇಪಣೆಗಳಿಗೆ ಉತ್ತರಕೊಡುತ್ತ "ಬ್ರಿಟಿಷ್ ಸರ್ಕಾರವು ಒಂದು ವಿಶ್ವ ಸರಕಾರ ಸ್ಥಾಪನೆಗೆ ಮತ್ತು ವಿಶ್ವ ಭದ್ರತೆಗೆ ಕೆಲಸ ಮಾಡುತ್ತಿದೆ ಆದಕ್ಕೆ ವಿಶ್ವ ಸಂಸ್ಥೆಯು ಒಳ್ಳೆಯ ಸಾಧನೆ ಇದುವರೆಗೆ ವಿಶ್ವ ಭದ್ರತೆಯನ್ನು ಸ್ಥಾಪಿಸಲಾಗಲಿಲ್ಲ ಅದು ಪೂರ್ಣವಾಗುವವರೆಗೆ ವಿಶ್ವ ಸಂಸ್ಥೆಯ ಸದಸ್ಯತ್ವ ಪಡೆದ ಬ್ರಿಟನ್ ತನ್ನ ಕರ್ತವ್ಯ ಪಾಲನೆಗಾಗಿ ತನ್ನ ಸೈನ್ಯವನ್ನಿಟ್ಟಿರಲೇ ಬೇಕು.' ಎಂದು ಹೇಳಿದರು.

ಪ್ಯಾಲೆಸ್ಟೈನ್ ಪ್ರಶ್ನೆ

ಆಟ್ಲಿಯವರು ಪ್ಯಾಲೆಸ್ಟೈನ್ ಸಮಸ್ಯೆಯ ಬಗ್ಗೆ ಮಾತನಾಡುತ್ತಾ "ಬ್ರಿಟಿಷ್ ಸರ್ಕಾರವು ಅರಬ್ ಮತ್ತು ಯಹೂದಿಯರ ಆಚಾರ ವಿಚಾರಗಳಲ್ಲಿ ಗೌರವವುಳ್ಳದಾಗಿದೆ-ಅಮೆರಿಕದ ಸಹಕಾರದಿಂದ ಒಂದು ಒಪ್ಪಂದವನ್ನುಂಟು ಮಾಡಲು ಪೂರ್ಣ ಪ್ರಯತ್ನಿಸಲಾಗಿದೆ-ಪುನಃ ಅದಕ್ಕೆ ಪ್ರತಿನಿಧಿಗಳು ಸೇರುವ ಆಶೆಯಿದೆ" ಎಂದರು

ಯವರು ನಿನ್ನೆ ರಾಮಗಂಜ್ ಠಾಣಾದಲ್ಲಿ ಇನ್ನೊಂದು ಗ್ರಾಮಕ್ಕೆ ಭೇಟಿ ಇತ್ತರು. ಅಲ್ಲಿಳ ಗುಡಿಸಲುಗಳು ಸುಡಲ್ಪಟ್ಟಿದ್ದವು. ಮೂರು ಮನೆಗಳ ವಿನಹ ಇನ್ನುಳಿದ ಎಲ್ಲ ಮನೆಗಳೂ ಲೂಟಿ ಮಾಡಲ್ಪಟ್ಟಿದ್ದವು ದತ್ತಾಪುರಕ್ಕೆ ಮಹಾತ್ಮರು ಮಧ್ಯಾಹ್ನ ಹಿಂದಿರುಗಿದರು.

ಡಚ್ ಮತ್ತು ಇಂಡೋನೇಷಿಯ ಒಪ್ಪಂದ

ರಾಯಿಟರ್ ಬಟೇವಿಯ ನ ೧೩

ನಿನ್ನೆ ಡಚ್ ಮತ್ತು ಇಂಡೋನೇಷಿಯ ಸಂಧಾನದ ಮಾತುಕತೆ ಅತಿ ಮುಖ್ಯ ಪ್ರಶ್ನೆಗಳು ಇತ್ಯರ್ಥವಾದವೆಂದು ನಂಬಲರ್ಹವಾದ ಕಡೆಗಳಿಂದ ವರದಿ ಬಂದಿದೆ

ಸುಮಾರು ೫ ಗಂಟೆಗಳ ಕಾಲ ನಡೆದ ಚರ್ಚೆಯಿಂದ ಸಂಧಾನ ಸ್ವಲ್ಪ ಆಶಾದಾಯಕವಾಗಿ ಕಂಡು ಬಂತು ಅನಂತರ ಪುನಃ ೧೭ ಪ್ರಶ್ನೆಗಳು ಸುಮಾರು ೩ ೧/೨ ಗಂಟೆ ಕಾಲ ಚರ್ಚಿಸಲ್ಪಟ್ಟವು.

ಈ ನೂತನ ಸಲಹೆಗಳ ಮೇಲೆ ಡಚ್ ಸಾರ್ವಭೌಮರು ನೆದರ್‌ಲ್ಯಾಂಡ್ಸ್ ಇಂಡೋನೇಷಿಯ ಯೂನಿಯನ್ ಸ್ಥಾಪಿಸಲು ಒಪ್ಪಿಗೆ ಕೊಡಲಾಗಿದ್ದರೂ ಒಂದು ಸಂಯುಕ್ತ ರಾಜ್ಯಾಡಳಿತ ವ್ಯವಸ್ಥೆಯೇರ್ಪಡಿಸುವವರೆಗೆ ಯೂನಿಯನ್ನನ್ನು ಅಂಗೀಕರಿಸಲಾಗದೆಂದು ಹೇಳಲಾಗಿದೆ. ಇನ್ನೂ ೨-೩ ವರ್ಷ ತಾತ್ಕಾಲಿಕ ಆಡಳಿತ ವ್ಯವಸ್ಥೆಯಲ್ಲಿ ಡಚ್ ಮತ್ತು ಇಂಡೋನೇಷಿಯದಲ್ಲಿ ನಿಕಟ ಸಹಕಾರವೇರ್ಪಡುವ ಸಂಭವವಿದೆ.

ರಾಜಕೀಯ ಸಮಿತಿಯಲ್ಲಿ ಸ್ಪೇನ್ ಚರ್ಚೆ

ರಾಯಿಟರ್ ನ್ಯೂಯಾರ್ಕ್ ನ ೧೩

ಸ್ಪೇನಿನೊಡನೆ ರಾಜಕೀಯ ಮತ್ತು ಆರ್ಥಿಕ ಸಂಬಂಧ ತ್ಯಾಗಮಾಡಬೇಕೆಂಬ ಸೂಚನೆಯನ್ನು ವಿಶ್ವಸಮ್ಮೇಳನದಲ್ಲಿ ಅಮೆರಿಕ ಪ್ರತಿನಿಧಿ ವಿರೋಧಿಸಲು ನಿರ್ಧರಿಸಿದೆ.



1946

ತಾಲ್ಲೂಕು ಕ[illegible]ನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6-[illegible]-1962.

ಪತ್ರಿಕೆ ಹೆಸರು

ಆರಂಭ ದಿನಾಂಕ

ಪ್ರಕಟನಾ ಸ್ಥಳ

ಸಂಪಾದ[illegible] ಹೆಸರು

ಮಾಲೀಕರ ಹೆಸರು

ಸೌಜನ್ಯ ಕೃಪೆ

ಸ್ವತಂತ್ರ

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು ____________________

ಆರಂಭದ ದಿನಾಂಕ ____________________

ಪ್ರಕಟನಾ ಸ್ಥಳ ____________________

ಸಂಪಾದಕರ ಹೆಸರು ____________________

ಮಾಲಿಕರ ಹೆಸರು ____________________

ಸೌಜನ್ಯ ಕೃಪೆ ____________________

ನವೆಂಬರ ೧೯೪೬

ಬೆಲೆ ೪ ಆಣೆ

ಜೂನ್
೧೯೪೭

WORLD NEWS PAPER EXHIBITION
MEGARAVALLI
Shimoga Dist, Karnataka State, INDIA

ಉಷಾ

1946

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು ....

ಆರಂಭ ದಿನಾಂಕ ....

ಪ್ರಕಟನಾ ಸ್ಥಳ ....

ಸಂಪಾದಕರ ಹೆಸರು ....

ಮಾಲಿಕರ ಹೆಸರು ....

ಸೌಜನ್ಯ ಕೃಪೆ ....



ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು

ಆರಂಭ ದಿನಾಂಕ

ಪ್ರಕಟನಾ ಸ್ಥಳ

ಸಂಪಾದಕರ ಹೆಸರು

ಮಾಲಿಕರ ಹೆಸರು

ಸೌಜನ್ಯ ಕೃಪೆ

64

ಉತ್ತಮ ಮುದ್ರಣಕ್ಕೆ
★
ಈಸ್ಟರ್ನ್ ಪ್ರೆಸ್
ಬೆಂಗಳೂರು ಸಿಟಿ

ವಾಹಿನಿ
ಬೆಂಗಳೂರು, ೧೪-೪-೧೯೪೬

All Kinds of
PAPERS & BOARDS
at Controlled Price
★
Available at
MUTHUKUMARAN
STATIONERY STORES
Sultanpet Bangalore City

ವಿಶ್ವ ವಿಹಂಗಮ ವಿಹಾರ

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ
ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.
ಪತ್ರಿಕೆ ಹೆಸರು ....
ಆರಂಭ ದಿನಾಂಕ ....
ಪ್ರಕಟನಾ ಸ್ಥಳ ....
ಸಂಪಾದಕರ ಹೆಸರು ....
ಮಾಲೀಕರ ಹೆಸರು ....
ಸೌಜನ್ಯ ಕೃಪೆ ....

...ಒತ್ತಾಯದಿಂದ ವಿನಿಮಯ ಮಾಡುತ್ತಾರೆನ್ನುವಿರಾ? ಇಲ್ಲ. 'ಪ್ರಜೆಗಳೇ ಸ್ವಯಂಪ್ರೇರಣೆಯಿಂದ ಸ್ಥಾನ ಬದಲಾವಣೆ ಮಾಡಿಕೊಳ್ಳಬಹುದು. ಒತ್ತಾಯವಿಲ್ಲ' ಎಂದು ಉದಾರವಾಗಿ ಭರವಸೆ ಕೊಡುತ್ತಾರೆ ಜಿನ್ನಾ ಸಾಹೇಬರು. ಪಾಪ, ಅವರಿಗೂ ಗೊತ್ತು ತಮ್ಮ ಪಾಕೀಸ್ತಾನದಿಂದ ಹಿಂದುಗಳು ಹೊರಟು ಹೋದರೆ, ತಮ್ಮ ದರ್ಪವನ್ನಿನ್ನಾರ ಮೇಲೆ ನಡೆಸುವುದು ಎಂದು, ಹಾಗೂ ಹಿಂದೂಸ್ತಾನದಲ್ಲುಳಿಯುವ ಮುಸ್ಲಿಮರೂ ಜಿನ್ನಾ ನಿರ್ಮಿತ 'ಸ್ವರ್ಗವಾದ' ಪಾಕೀಸ್ತಾನಕ್ಕೆ ವಲಸೆ ಹೋಗಲು ಕಾತುರರಾಗಿಲ್ಲವೆಂದೂ ಜಿನ್ನರಿಗೆ ಗೊತ್ತು. ಆದಕ್ಕೇ ಅವರು 'ಪಾಕೀಸ್ತಾನದಲ್ಲಿ ಮುಸ್ಲಿಮರಲ್ಲದವರಿಗೂ ಸಂಪೂರ್ಣ ನಾಗರಿಕ ಹಕ್ಕುಗಳು ದೊರೆಯುವುವೆಂದೂ, ಬಲವಂತ ಮತಪರಿವರ್ತನೆ ಇರುವುದಿಲ್ಲವೆಂದೂ' ಭರವಸೆ ಕೊಡುತ್ತಾರೆ. ಬರೀ ಈ ಭರವಸೆಗೆ ಬೆರಗಾಗಿ ಶೇಕಡ ...ರಷ್ಟರ ಮುಸ್ಲಿಮೇತರರು ...ರಷ್ಟರ ಮುಸ್ಲಿಮರ ಪ್ರಭುತ್ವಕ್ಕೆ ಒಳಗಾಗುತ್ತಾರೆಂದು ನಂಬುವುದು ಆತ್ಮ ವಂಚನೆ. ಪ್ರಜೆಗಳ ಅಭಿಪ್ರಾಯವನ್ನೇ ಲೆಕ್ಕಿಸದೆ ನಿರ್ಮಿತವಾದ ಸರಕಾರ... ಸ್ಥಾನದಲ್ಲಿ ಅಲ್ಪಸಂಖ್ಯಾತರಿಗೆ ನಾಗರಿಕ ಹಕ್ಕುಗಳು ಶುದ್ಧ ಅಪ್ರಯೋಜಕ. ಅಂತೂ, ಜಿನ್ನರು ಕಳೆದಿರುವ ಅಸಾಧ್ಯ

ಈ ...ರ್ಶ ಶುದ್ಧತೆ ಜಿನ್ನರಿಗೆ ರುಚಿಸುವುದಿಲ್ಲ. ಅವರಿಗೆ ಈ ಸಮಸ್ಯೆಯ ನ್ಯಾಯಾನ್ಯಾಯ ವಿವೇಚನೆ ಬೇಕಿಲ್ಲ. "ಪಾಕೀಸ್ತಾನ ಬೇಕು; ಅದು ಆಗಬೇಕು" ಬೇರೆ ಯಾವ ಅಂಶವನ್ನೂ ಗಮನಿಸಬೇಕಾಗಿಲ್ಲ. ಅಂತೆಯೇ, "ಮುಕ್ಕಾಲುಪಾಲು ಹಿಂದುಗಳನ್ನೊಳಗೊಂಡ ಕಲ್ಕತ್ತೆ ಪಾಕೀಸ್ತಾನಕ್ಕೆ ಹೇಗೆ ಸೇರೀತು." ಎಂದೊಬ್ಬ ಪತ್ರಿಕಾ ಪ್ರತಿನಿಧಿ ಕೇಳಿದ್ದಕ್ಕೆ "ತಲೆಗಳ ಎಣಿಕೆ ಬೇಕಿಲ್ಲ. ಪೂರ್ಣ ಸ್ವತಂತ್ರ ರಾಜ್ಯವನ್ನು ನಿರ್ಮಿಸಿಸುವ ಸಮಸ್ಯೆ ಇದು. ಕೇವಲ ತಲೆಗಳ ಎಣಿಕೆ ಅಲ್ಲದೆ ಬೇರೆ

...ಲೆ, ಜಿನ್ನರ ಪ... ...ಅಲ್ಲಿ ಉಳಿಯುವ ಹಿಂದುಗಳ ...ಲಿಗೆ, ಈಗ ನಮ್ಮೆಲ್ಲರನ್ನು ಆಳುತ್ತಿರುವ ಬ್ರಿಟನ್ನಿನಷ್ಟೆ, ಪರಪ್ರಭುತ್ವ ತಾನೆ. ಅಂದ ಮೇಲೆ ಜಿನ್ನರ ಪಾಕೀಸ್ತಾನದ ಪಾಲಿಗೆ ಸೇರುವ ಹಿಂದೂಗಳು, ಸಿಖ್ಖರು ಮತ್ತು ಕ್ರಿಶ್ಚಿಯನ್ನರು ತೆಪ್ಪಗೆ ಒಂದು ಪ್ರಭುತ್ವ ದಡಿಯಿಂದ ಇನ್ನೊಂದರಡಿಗೆ ಸರಿಯಲು ಒಪ್ಪುತ್ತಾರೆಯೇ ಎಂಬುದು ಜಿನ್ನರಿಗೆ ಹೊಳೆದಿಲ್ಲವೇನು?

ಎಂದ ಮೇಲೆ. ಜಿನ್ನರು ಪಾಕೀಸ್ತಾನ್ ಹಿಂದೂಸ್ತಾನದ ಹಿಂದೂ ಮುಸ್ಲಿಂ ಪ್ರಜಾಸಮುದಾಯಗಳನ್ನು

ಶ್ರೀಗನ್ನಡ

ಮಾತೃ

ಮಾಸಪತ್ರಿಕೆ.

ನವೆಂಬರ ೧೯೬೨.

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು

ಆರಂಭ ದಿನಾಂಕ

ಪ್ರಕಟನಾ ಸ್ಥಳ

ಸಂಪಾದಕರ ಹೆಸರು

ಮಾಲಿಕರ ಹೆಸರು

ಸೌಜನ್ಯ ಕೃಪೆ.

Regd. No. B. 5205.

ಉತ್ತರ ಕನ್ನಡ ಜಿಲ್ಲಾ ಗ್ರಾಮ-ಸೇವಾ-ಸಮಿತಿಯ ಮುಖಪತ್ರ.

★ ಗ್ರಾಮ-ಸೇವಕ ★

ವರ್ಷ ೧.] ಜುಲೈ-ಅಗಸ್ಟ. [ಅಂಕ ೧೧ ವ ೧೨.

सेवा का मूल्य

यह महत्व की बात नही है कि हमने सेवा कितने लोगों की की। निरहंकार सेवा हुई कि नहीं इसी से सेवा का मूल्य आंका जाता है। संख्या अल्प होते हुअे भी अगर उसका छेद शून्य हो, तो उसका मूल्य अनंत हो जाता है। उसी प्रकार अल्प सेवा को, निरहंकारिता का छेद प्राप्त होनेसे उसका मूल्य अनंत हो जाता है। यथार्थ सेवा से संतोष की मात्रा बढ़ती है। उसे ~~संतोष से सेवा~~ वास्तविक है या आभासिक है यह जाना जा सकता है।

विनोबा.

★

ತಾ೧. …ಹಳಿ)

…जानता हूं कि अभी मुझे कहीं बिकट रास्ता तै क… …कर लेना चाहिये। जबतक मनुष्य अपनी गि… …सारे जीवों के …न में नही करेगा, उसे मोक्ष नहीं मिलेगा। नम्रता … …का ही नाम अहिंसा है।

गांधीजी.

ಅನುಕ್ರಮಣಿಕೆ—

ಸಮಿತಿಯ ಸಮಾಚಾರಗಳು — ಪಾನು ೮೬
ಪ್ರಾರ್ಥನೆಯ ರಹಸ್ಯ (ಶ್ರೀ॥ ವಿನೋಬಾಜಿ) — " ೮೭
ಜಾತಿ-ಪಾತಿಯನ್ನು ಹೇಗೆ ನಷ್ಟಗೊಳಿಸಬೇಕು (ಸ್ವಾಮಿ…) — " ೮೯
ಸ್ವತಂತ್ರ ಭಾರತದ ಸಮಸ್ಯೆಯು (ಶ್ರೀ॥ ಧೀರೇಂದ್ರ ಮಜು…) — " ೯೨
೫. ಗ್ರಾಮಸೇವಾ ಸಮಿತಿಯ ೧೯೪೬-೪೭ರ ವ್ಯವಹಾರ ಪತ್ರಿ…

ಸಂಪಾದಕ ವ ಪ್ರಕಾಶಕರು :— ತಿ. ಶ್ರೀ. ನಾಯಕ ಇವರಿಂದ ಗ್ರಾಮಸೇವಾ ಸಮಿತಿಯ ಅಂಕೋಲೆಯ ಕಾರ್ಯಾಲಯದಲ್ಲಿ ಪ್ರಕಟಿಸಲಾಯಿತು. ೩೦-೮-೧೯೪೮.
ಮುದ್ರಕ :— ಆರ್. ವಿ. ಮಹಾಲೆ, ಮಾಲಕ, ಜೈ ಹಿಂದ ಪ್ರಿಂಟಿಂಗ ವರ್ಕ್ಸ, ಅಂಕೋಲಾ.

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ಣಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು ....

ಆರಂಭ ದಿನಾಂಕ ....

ಪ್ರಕಟನಾ ಸ್ಥಳ ....

ಸಂಪಾದಕರ ಹೆಸರು ....

ಮಾಲಿಕರ ಹೆಸರು ....

ಸೌಜನ್ಯ ಕೃಪೆ ....

ಸಂಪುಟ ೧ ಡಿಸೆಂಬರ್ ೧೯೪೭ ಸಂಚಿ

A Kannada Monthly devoted to Rural Problems

ಓಂ ವಿವೇಕಾಭ್ಯುದಯ

ಮಂಡಲ ೩೫	೨೦ನೆಯ ತಾರೀಖು ನವಂಬರ ೧೯೬೧	ಕಿರಣ

ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪಿತ ೧೯೦೬)

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು, ಸಕಾಲಕ್ಕೆ ಅವರಿಗೆ ಒದಗಿಸಿ ಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೊದ [illegible]

ಕಾಲದಲ್ಲಿಯೂ [illegible]

ಕೆನರಾ ಬ್ಯಾಂಕ [illegible]

ವರ್ಷದ ಅನುಭವ [illegible]

ಸಹಾಯವನ್ನೀಯ [illegible]

ನಿಮ್ಮ ಖ [illegible]

ದಾದರೊಂದು ಶಾ [illegible]

C [illegible]

ಶ್ರೀ ಅಜ್ಜಿ [illegible]
ನವರು ತಾ. ೧ [illegible]
ದಯ"ನ ಶ್ರೇಯ [illegible]
. ಧನ್ಯವಾದಗಳು.

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ಣಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು ______

ಆರಂಭ ದಿನಾಂಕ ______

ಪ್ರಕಟನಾ ಸ್ಥಳ ______

ಸಂಪಾದಕರ ಹೆಸರು ______

ಮ್ಯಾನೇಜರ ಹೆಸರು ______

ಸೌಜನ್ಯ ಕೃಪೆ ______

ಕೊರವಂಜಿ

1947

Koravanji

ಮೇ

೧೯೬೨

★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು:

ಶ್ರೀ|| ಸಂಪಾರ್

ಶ್ರೀ|| ಹಾ. ವೆಂ. ಸೂರಿ

ಶ್ರೀ|| ಬಚ್ಚ

ಶ್ರೀ|| ಪ್ರಸಾದ್

ಶ್ರೀ|| ಹಾ. ರಾ.

ಶ್ರೀ|| ಅ ರಾ. ಸೇ.

ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ

ತಿಳಿನಗೆಯ ಮಾಸಪತ್ರಿಕೆ

ಕೊರವಂಜಿ

Koravanji

ಏಪ್ರೆಲ್

೧೯೫೦



★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಒಚ್ಚ
ಶ್ರೀ|| ಅ. ರಾ. ಸೇ.
ಶ್ರೀ|| ಪ್ರಸಾದ್
ಶ್ರೀ|| ಶ್ರೀರಂಗ
ಶ್ರೀ|| ಯ. ಚ್ಚಂಪಿ
ಶ್ರೀ|| ದೂನು
ಶ್ರೀ|| ಎ. ಆರ್. ವಾಮನರಾವ್
ಶ್ರೀ|| ಅ. ರಾ. ಸೆ.
ಶ್ರೀ|| ಪ್ರಕಾಶ್
ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿಪ್ರತಿ

ತಿಳಿನಗೆಯ ಮಾಸಪತ್ರಿಕೆ

ಧರ್ಮಸಂದೇಶ

ಸಂಪುಟ ೧ ★ ಶ್ರೀ ಸರ್ವಜಿತ್ : ಮಾರ್ಗಶಿರ ★ ಸಂಚಿಕೆ ೩.

ವಿಷಯಾನುಕ್ರಮಣಿಕೆ

ಹನುಮತ್ಪಂಚರತ್ನ ಸ್ತೋತ್ರಮ್	(ಶ್ರೀಮಚ್ಛಂಕರ ಭಗವತ್ಪಾದಾಚಾರ್ಯ ವಿರಚಿತ)	೩
ಸಂಪಾದಕೀಯ—ಹರಿಜನ ದೇವಾಲಯ ಪ್ರವೇಶ	... ಸಂಪಾದಕರು	೪
ಕಲ್ಪಸೂತ್ರ	ಶ್ರೀ ಭಾರತೀರಮಣಾಚಾರ್ಯ, ಎಂ.ಎ.	೬
ಬ್ರಹ್ಮಚರ್ಯದ ರಕ್ಷಣೆ	ಶ್ರೀ ಸಾಹಿತ್ಯಭೂಷಣ ವಿಶ್ವೇಶ್ವರ ಶರ್ಮ	೮
ದೇವಾಲಯ ಪ್ರವೇಶ ಸಮಸ್ಯೆ	"ಆಗಮ ಧರ್ಮರಕ್ಷಣಾ ಧುರೀಣ" ಆಗಮಪಂಡಿತ ಶ್ರೀಮಾನ್ ಆಗಮಿಕ ಕೃಷ್ಣದೀಕ್ಷಿತರು .	೧೧
ಭಾರತದಲ್ಲಿ ಗೋರಕ್ಷಣೆ	ವೇದಾಂತಶಿರೋಮಣಿ, ಧರ್ಮಶಾಸ್ತ್ರಭೂಷಣ ಸಾಹಿತ್ಯಾಲಂಕಾರ, ಕವಿತಿಲಕ ಶ್ರೀಮಾನ್ ರಾಜಾ ಎಸ್. ಗುರುರಾಜಾಚಾರ್ಯರು	೧೫
ಹಸಿದವರಿಗೆ !	(ಶ್ರೀರಾಮಕೃಷ್ಣಪರಮಹಂಸರು)	೧೮
ಪ್ರಪ್ರಸ್ಥಾನ (ಅರವಟ್ಟಿಗೆ)	ಶ್ರೀ ಸದಾಶಿವಭಟ್ಟರು	೧೯
ನೀತಿ ಕುಸುಮಾಂಜಲಿ (ಕವಿತೆ)	ಹಿಂದೂ ಸಂಘ, ಕೋಟೆ, ಬೆಂಗಳೂರು	೨೨
ಸುಧಾರಣೆಯ ಗುಟ್ಟು	ಶ್ರೀ ಕೊತುಗೋಡು ನಾಗಭೂಷಣಭಟ್ಟರು	೨೩
ಗೀತಾಹೃದಯ	ಶ್ರೀ ಚಿದಂಬರ, ಗುರುಸೇವಾ ಸಮಿತಿ	೨೫
ಪ್ರಚಲಿತ ವಿಷಯಗಳು	... .	೨೮
ಸಾದರ ಸ್ವೀಕಾರ	... ...	೩೨

ವಾರ್ಷಿಕ ಚಂದಾ : ೫—೦—೦ ★ ಜಿ. ಎಸ್. ಕೃಷ್ಣರಾವ್ ಸಂಪಾದಕರು

ಶಿವಮೊಗ್ಗ ೧೯೪೭ ನೇ ಸೆಪ್ಟಂಬರ್
೧೫ ನೇ ಸೋಮವಾರ ಸರ್ವಜಿತು
ಸಂವತ್ಸರ ಭಾದ್ರಪದ ಶುದ್ಧ
೧ ನೇ ಸೋಮವಾರ.

ಪ್ರಜಾಮಿತ್ರ.

ಪ್ರಭಾವಶಾಲಿ ಕನ್ನಡ ವಾರಪತ್ರಿಕೆ.
ನಿಮ್ಮ ಜೀವನವು ಪರರಿಗೆ ಬೆಳಕು ಬೀರುವ ಜ್ಯೋತಿಯಾಗಲಿ.

ಸಂಪಾದಕರು :-
ಮಹೇಂದ್ರ ನಾಥ್,
ಎ. ಎಂ. ಪಾಟೀಲ್,
ಬಿ. ಎ. (ಆನರ್ಸ್) ಎಲ್‌ಎಲ್. ಬಿ.

ಪ್ರತಿ ೧ ಆಣೆ

ಶ್ರೀಮನ್ ಮಹಾರಾಜರ ಸಂದೇಶ.

[illegible] ಮಾಡಿಕೊಡಬೇಕು ಸುಧಾರಣೆಗಳು.

[illegible] ಅಪೇಕ್ಷೆ

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ
ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.
ಪತ್ರಿಕೆ ಹೆಸರು .... ಪ್ರಜಾಮಿತ್ರ 119
ಆರಂಭ ದಿನಾಂಕ ....
ಪ್ರಕಟನಾ ಸ್ಥಳ ....
ಸಂಪಾದಕರ ಹೆಸರು ....
ಮ್ಯಾಲಿಕರ ಹೆಸರು ....
ಸೌಜನ್ಯ ಕೆ .... [illegible]

[illegible] ದರು.

ಶ್ರೀಮನ್ ಮಹಾರಾಜರವರ ಸಂದೇಶ ಈ ರೀತಿ ಇದೆ:—

ಈ ವರ್ಷದ ಜನವರಿ ೮ ನೇ ತಾರೀಖು ತಿಂಗಳ ಹಿಂದೆ ನಾವು ಪ್ರಜೆಗಳಿಗೆ ಒಂದು ಸಂದೇಶವನ್ನು ಕಳುಹಿದೆವು. ಸಂಸ್ಥಾನದಲ್ಲಿ ಇನ್ನಷ್ಟು ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರಲು, ನಮ್ಮ ಸಂಸ್ಥಾನದ ಆಡಳಿತ ನಿರ್ವಹಣೆಯಲ್ಲಿ ನಮ್ಮ ಪ್ರಜೆಗಳಿಗೆ ಇನ್ನೂ ಹೆಚ್ಚಿನ ಭಾಗದವಕಾಶ ಕಲ್ಪಿಸಿಕೊಡಲು, ಕಾರ್ಯಕ್ರಮ ಕೈಕೊಳ್ಳಬೇಕೆಂದು ಅದರಲ್ಲಿ ತಿಳಿಸಿದ್ದೇವೆ.

ನಮ್ಮ ಪ್ರಜಾವರ್ಗದ ನ್ಯಾಯಸಮ್ಮತವಾದ ಆಶೋತ್ತರಗಳನ್ನು ಅಂಗೀಕರಿಸಿ, ಸೂಕ್ತ ಕಂಡವುಗಳನ್ನು ಈಡೇರಿಸಿಕೊಡಲು ಮೈಸೂರಿನ ರಾಜಮನೆತನ ಸದಾಸಿದ್ಧವಾಗಿರುತ್ತದೆಂದು ನಾವು ನೆನಪಿಗೆ ತಂದಿದ್ದೇವೆ.

ವಂಶಪಾರಂಪರ್ಯವಾಗಿ ನಮ್ಮ ಪೂಜ್ಯ ಪೂರ್ವಿಕರಿಂದ ನಮಗೆ ಬಂದುಬಂದಿರುವ ರಾಜಕೀಯ ಪ್ರಗತಿ ನಂದಾದೀಪ ನಮ್ಮ ಕಾಲದ ಕಾಲಾನುಗುಣವಾಗಿ ಇನ್ನಷ್ಟು ಜಾಜ್ವಲ್ಯಮಾನ್ಯವಾಗಿ ಪ್ರಜ್ವಲಿಸುತ್ತಿ ಬರುತ್ತದೆಂದು ನಾವು ಹೇಳಿದ್ದೇವೆ.

ನಮ್ಮ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳ ಬಗ್ಗೆ ಸಲಹೆಗಳನ್ನು ನಮ್ಮ ಪ್ರಜಾವರ್ಗದ ಸಮಸ್ತ ಪಕ್ಷ ಸಂಘಗಳೊಡನೆ ಸಮಾಲೋಚನೆ ನಡೆಯಿಸಿದ ಅನಂತರ ಮತ್ತು ಇಂಡಿಯಾದೇಶದ ಇತರ ಕಡೆಗಳಲ್ಲಾಗುತ್ತಿರುವ ಸಂಭವಗಳು ಮತ್ತು [illegible]

[illegible] ಲಭಿಸಿತು. ನಮ್ಮ ದಿವಾನರು ಪ್ರಜಾ ಇಂಗಿತವನ್ನು ಉಪೇ[illegible] [illegible]ದೆ, ಸಂಸ್ಥಾನದ ಮತ್ತು ಸಂಸ್ಥಾನ ಪ್ರಜೆಗಳ ಪ್ರಧಾನ ಹಿತಗ[illegible] ಸಹಾ ಗಮನದಲ್ಲಿಟ್ಟುಕೊಂಡು ಸಮಾಲೋಚನೆ ಇತ್ತಿದ್ದಾರೆ.

ನಮ್ಮ ಮೈಸೂರು ಸಂಸ್ಥಾನ ಇಂಡಿಯಾ ಡೋಮಿನಿಯನ್ನಿಗೆ [illegible]ರುವುದು ಸಮಸ್ತ ಪ್ರಜೆಗಳಿಗೆ ವೇದ್ಯವೇ ಆಗಿದೆ. ಇಂಡಿಯಾ [illegible] ಕಾನ್ಸಿಟ್ಯುಯೆಂಟ್ ಅಸೆಂಬ್ಲಿ (ಸಭೆ)ಯಲ್ಲಿ ನಮ್ಮ ಪ್ರಜೆಗಳ ಪ್ರತಿನಿಧಿಗಳು [illegible] ವಹಿಸಲು ಈಗ ಅವಕಾಶ ಲಭಿಸಿರುವುದು ನಮಗೆ ಸಂತೋಷವನ್ನುಂಟುಮಾಡಿದೆ.

ನಮ್ಮ ದಿವಾನರು ಸೂಚಿಸಿದ ಸಲಹೆಗಳನ್ನು [illegible] ಕಾರ್ಯವನ್ನು ನಿರ್ವಹಿಸಬೇಕಾಗಿ ಬಂದದ್ದು ಅನಿವಾರ್ಯವಾಯಿತು. ಅವರು ಈಚೆಗೆ ಹೊರಡಿಸಿರುವ ಹೇಳಿಕೆಗೆ ನಮ್ಮ ಅನುಮತಿ ಇದೆ.

ಹೊಸ ರಾಜ್ಯಾಂಗ ವ್ಯವಸ್ಥೆಯಲ್ಲಿ ಜವಾಬ್ದಾರಿ ಸರ್ಕಾರದ ಏರ್ಪಾಟಿಗೆ ಅವಕಾಶವಿರಬೇಕೆಂದು ನಮ್ಮ ಅಭಿಲಾಷೆ.

ರಾಜ್ಯಾಂಗ ಸುಧಾರಣೆಗಳನ್ನು ರೂಪಿಸಲು ದಿವಾನರಿಗೆ ಸಹಾಯ ನೀಡಲು ನೇಮಿತವಾದ ಸಲಹಾ ಸಮಿತಿಯು ನಮಗೆ ಸಲ್ಲಿಸಿರುವ ರಾಜಭಕ್ತಿ ನಿರ್ಣಯವನ್ನು ನಾವು ಆದರದಿಂದ ಅವಗಾಹನೆಗೆ ತೆಗೆದುಕೊಂಡಿದ್ದೇವೆ. ನಮ್ಮ ಪ್ರಕಟಿತ ಉದ್ದೇಶಕ್ಕೆ ಅನುಗುಣವಾಗಿ ವಿಶದವಾದ ಸಲಹೆಗಳನ್ನು ಸಲ್ಲಿಸಲು ದಿವಾನರಿಗೆ ಸಹಾಯವಾಗುವಂತೆ ಈ ಸಮಿತಿಯೊಡನೆ ಇಂತಹದೇ ಇತರ ಸಂಸ್ಥೆಗಳೊಡನೆಯೂ ಎಲ್ಲರೂ ಸಹಕರಿಸಬೇಕೆಂಬುದು ನಮ್ಮ ಆಶೆ. ಜನಕ್ಕೆ ನೀಡಿರುವ ನಮ್ಮ ಸಂದೇಶದಲ್ಲಿ, ಸೂಚಿತವಾಗುವ ಯಾವುದೇ ರಾಜ್ಯಾಂಗ ಸುಧಾರಣೆಗಳಲ್ಲಾದರೂ ನಮ್ಮ ಹೃದಯಸ್ಥವಾದ ಒಂದು ಪರಮೋದ್ದೇಶವನ್ನು ಈಡೇರಿಸುವಂಥವಾಗಿರಬೇಕೆಂದು ನಾವು ಹೇಳಿದ್ದೇವೆ, ಅದೇನೆಂದರೆ, ಎಲ್ಲರಿಗೂ ಸಮಾನಾವಕಾಶವಿರಬೇಕು. ಜನರಲ್ಲಿ ನೆಮ್ಮದಿ ಸುಖ ಮತ್ತು ಸಂಪದವನ್ನು ಬೆಳೆಸುವಂಥದಾಗಿರಬೇಕು. ಜವಾಬ್ದಾರಿ ಸರ್ಕಾರದ ರಾಜ್ಯಾಂಗ ರಚನೆಯನ್ನು ಕೈಕೊಂಡ ಗೂಢಾರ್ಥವು ಉತ್ತ[illegible] ಈ ಮೂಲಭೂತ ಉದ್ದೇಶ ದೃಷ್ಟಿಯಲ್ಲಿ ಅವನ್ನು ಹಿರಿಯ ಮತ್ತು ಅಲ್ಪವಿದ್ಯಾವಂ[illegible] ಸೂಕ್ತ ಏರ್ಪಾಡುಗಳಾಗುತ್ತವೆಂದು [illegible]

1947

ಧರ್ಮಸಂದೇಶ

ಸಂಪುಟ ೧ ★ ಶ್ರೀ ಸರ್ವಜಿತ್: ಮಾರ್ಗಶಿರ ★ ಸಂಚಿಕೆ ೩

68

67

WORLD ... MEGR... INDIA
Shimoga Dist, K...

❋

ವಿಷಯಾನುಕ್ರಮಣಿಕೆ

ಹನುಮತ್ಪಂಚರತ್ನ ಸ್ತೋತ್ರಮ್	(ಶ್ರೀಮಚ್ಛಂಕರ ಭಗವತ್ಪಾದಾಚಾರ್ಯ ವಿರಚಿತ)	೩
ಸಂಪಾದಕೀಯ—ಹರಿಜನ ದೇವಾಲಯ ಪ್ರವೇಶ	... ಸಂಪಾದಕರು	೪
ಕಲ್ಪಸೂತ್ರ	ಶ್ರೀ ಭಾರತೀರಮಣಾಚಾರ್ಯ, ಎಂ.ಎ.	೬
ಬ್ರಹ್ಮಚರ್ಯದ ರಕ್ಷಣೆ	ಶ್ರೀ ಸಾಹಿತ್ಯಭೂಷಣ ವಿಶ್ವೇಶ್ವರ ಶರ್ಮ	೮
ದೇವಾಲಯ ಪ್ರವೇಶ ಸಮಸ್ಯೆ	"ಆಗಮ ಧರ್ಮರಕ್ಷಣಾ ಧುರೀಣ" ಆಗಮಪಂಡಿತ ಶ್ರೀಮಾನ್ ಆಗಮಿಕ ಕೃಷ್ಣದೀಕ್ಷಿತರು	೧೧
ಭಾರತದಲ್ಲಿ ಗೋರಕ್ಷಣೆ	ವೇದಾಂತಶಿರೋಮಣಿ, ಧರ್ಮಶಾಸ್ತ್ರಭೂಷಣ ಸಾಹಿತ್ಯಾಲಂಕಾರ, ಕವಿತಿಲಕ ಶ್ರೀಮಾನ್ ರಾಜಾ ಎಸ್. ಗುರುರಾಜಾಚಾರ್ಯರು	೧೫
ಹಸಿದವರಿಗೆ !	(ಶ್ರೀರಾಮಕೃಷ್ಣ ಪರಮಹಂಸರು)	೧೮
ಪ್ರಪಾದಾನ (ಅರವಟ್ಟಿಗೆ)	ಶ್ರೀ ಸದಾಶಿವಭಟ್ಟರು	೧೯
ನೀತಿ ಕುಸುಮಾಂಜಲಿ (ಕವಿತೆ)	ಹಿಂದೂ ಸಂಘ, ಕೋಟೆ, ಬೆಂಗಳೂರು	೨೨
ಸುಧಾರಣೆಯ ಗುಟ್ಟು	ಶ್ರೀ ಕೂತುಗೋಡು ನಾಗಭೂಷಣಭಟ್ಟರು	೨೩
ಗೀತಾಹೃದಯ	ಶ್ರೀ ಚಿದಂಬರ, ಗುರುಸೇವಾ ಸಮಿತಿ	೨೫
ಪ್ರಚಲಿತ ವಿಷಯಗಳು	... ...	೨೮
ಸಾದರ ಸ್ವೀಕಾರ	... ...	೩೨

❋

ವಾರ್ಷಿಕ ಚಂದಾ: ೩—೦—೦ ★ ಜಿ. ಎಸ್. ಕೃಷ್ಣರಾವ್ ಸಂಪಾದಕರು

1948

॥ ಸಿರಿಗನ್ನಡಂ ಗೆಲ್ಗೆ ॥

Reg. No. M. 3975

ಪ್ರತಿ ಶುಕ್ರವಾರ ಹೊರಡುತ್ತದೆ

Licensed to post without Prepayment. LICENSE No. 6

ಮೈಸೂರು ವಿದ್ಯಾ ಇಲಾಖೆಯ ಟಿ.ಬಿ.ಸಿ. ೭೪/೩೮-೩೯ನೆಯ (T.B.C. 74 of 38-9) ನಿರೂಪದ ಪ್ರಕಾರ 'ಕನ್ನಡನುಡಿ' ಯನ್ನು ಸಂಸ್ಥಾನದ ಎಲ್ಲಾ ಹೈಸ್ಕೂಲು, ಮಿಡಲ್ ಸ್ಕೂಲು ಮತ್ತು ಟ್ರೈನಿಂಗ್ ಸಂಸ್ಥೆಗಳ ಪುಸ್ತಕ ಭಂಡಾರಗಳಿಗೆ ತರಿಸಿ ಕೊಳ್ಳಬಹುದೆಂದು ಮಂಜೂರಾಗಿದೆ

ಕನ್ನಡ ನುಡಿ

ಸಂಪಾದಕ:
ಮೋ. ಶಂ. ಸುಬ್ರಹ್ಮಣ್ಯ ಶಾಸ್ತ್ರೀ

ವಾರ್ಷಿಕ ಚಂದಾ: ರೂ. ೩-೮-೦
ಅಂಚೆವೆಚ್ಚ ಸೇರಿ
ಸಾರ್ವಜನಿಕ ಸಂಸ್ಥೆ
ವಾಚನಾಲಯಗಳಿಗೆ ಮಾತ್ರ
ಪರಿಷತ್ತಿನ ಸದಸ್ಯರಿಗೆ ಉಚಿತ

ಸಂಪುಟ	ಕನ್ನಡ ಸಾಹಿತ್ಯ ಪರಿಷತ್ತಿನ ವಾರಪತ್ರಿಕೆ	ಸಂಚಿಕೆ
೧೦	ಬೆಂಗಳೂರು: ಶುಕ್ರವಾರ, ಜನವರಿ ೩೦, ೧೯೪೮	೧೧-೧೨

ಕಾಶಿಯಲ್ಲಿ ನಡೆದ

ಹೊರನಾಡ ಕನ್ನಡಿಗರ ೩ನೆಯ ಸಮ್ಮೇಳನದಲ್ಲಿ

ತಾ|| ೨೮-೧-೪೮ರಂದು

ಶ್ರೀ. ರಂಗನಾಥ ದಿವಾಕರರು ಮಾಡಿದ ಅಧ್ಯಕ್ಷ ಭಾಷಣ

ಕನ್ನಡನಾಡಿನ ಗಡಿಗಳಿಂದ ಒಂದು ಸಾವಿರ ಮೈಲಿಗಿಂತ ದೂರದಲ್ಲಿರುವ ಈ ಕಾಶೀ ಪಟ್ಟಣದಲ್ಲಿ ನಾವು ಹಲವಾರು ಕನ್ನಡಿಗರು ಈಗ ಕೂಡಿದ್ದೇವೆ. ಈ ಪಟ್ಟಣವು ಇಷ್ಟು ದೂರವಿದ್ದರೂ ಇದು ಅತಿ ಪ್ರಾಚೀನ ಒಂದು ಕ್ಷೇತ್ರವಾದುದರಿಂದಲೂ ನಮ್ಮ ಪುರಾತನ ಸಂಸ್ಕೃತಿಯ ಕೇಂದ್ರವಿದ್ದುದರಿಂದಲೂ ಇದು ನಮಗೆ ತೀರ ಸಮೀಪವೇ ಸೈ. ನಾವು ಎಲ್ಲಿಯೆ ಇರಲಿ; ಈ ಪಟ್ಟಣಕ್ಕೆ ನಮ್ಮ ಅಂತಃಕರಣದಲ್ಲಿ ತೀರ ಪ್ರಿಯವಾದ ಸ್ಥಾನವಿದೆ. ಅದೇ ರೀತಿ ಇಲ್ಲಿಂದ ಸಾವಿರ ಮೈಲುಗಳಾಚೆ ಇರುವ ಕರ್ನಾಟಕವು, ಅದರ ಭಾಷೆ ಸಂಸ್ಕೃತಿಗಳು, ಅದರ ಅಣುರೇಣುಗಳು ನಮಗೆ ಅತ್ಯಂತ ಪ್ರಿಯ. ಭೂಮಂಡಲದಲ್ಲಿ ಎಲ್ಲಿಯೇ ವಾಸಿಸುತ್ತಿದ್ದರೂ ಆ ನಾಡುನುಡಿಗಳ ಸೇವೆ ನಮ್ಮಿಂದ ಯಾವ ರೀತಿ ಆದೀತು ಎಂಬುದನ್ನು ನಿರ್ಧರಿಸಿ ಅದರಂತೆ ಕಾರ್ಯ ಮಾಡುವುದಕ್ಕಾಗಿಯೆ ನಾವು ಇಲ್ಲಿ ಈಗ ಕೂಡಿದ್ದು.

ಮಹತ್ವ

೧೯೪೬ರಲ್ಲಿ ಪುಣೆಯಲ್ಲಿ ನಡೆದ ಒಂದು ಸ್ನೇಹಸಮ್ಮೇಲನದಲ್ಲಿ ಈ ಸಂಸ್ಥೆಯು ಜನ್ಮತಾಳಿದನಂತರ ೧೯೪೭ರಲ್ಲಿ ಮುಂಬೈ ಪಟ್ಟಣದಲ್ಲಿ ಇದಕ್ಕೆ ಒಂದು ಮೂರ್ತಸ್ವರೂಪ ಬಂದಿತು. ಅದೇ ಈಗ ಬಲಿತು ಬೆಳೆದು ಹೆಚ್ಚು ಕಾರ್ಯಕಾರಿಯಾಗಬೇಕೆಂಬ ಭಾವದಿಂದ ನೀವೆಲ್ಲರೂ ಇಲ್ಲಿ ಮೇಳಕಟ್ಟಿರುವಿರಿ. ಈ ಹತ್ತಿಂಟು ವರುಷಗಳಲ್ಲಿ ಹೊರನಾಡಿನಲ್ಲಿ ಕಾಯಂ ನೆಲೆಸಿದ, ನೆಲೆಸಬಹುದಾದ ಇಲ್ಲವೆ ತಾತ್ಪೂರ್ತಿಕ ವಾಸಿಸುವ ಕನ್ನಡಿಗರ ಸಂಖ್ಯೆ ಮಿತಿಮೀರಿ ಬೆಳೆದಿದೆ. ಹಿಂದುಸ್ತಾನದ ಎಲ್ಲ ದೊಡ್ಡ ಪಟ್ಟಣಗಳಲ್ಲಿ ಅಲ್ಲಲ್ಲಿ ಕನ್ನಡಿಗರ ಸಂಖ್ಯೆ ೩೦,೦೦೦ ಮಾತ್ರ ಇತ್ತೆಂದು ಪ್ರೋ. ಪಟ್ಟವರ್ಧನರು ಆಗಿನ ತಮ್ಮ ಭಾಷಣದಲ್ಲಿ ಹೇಳಿರುವರು. ಆದರೆ ಈಗ ಮುಂಬೈ, ಮದ್ರಾಸ ಮುಂತಾದ ಎಲ್ಲ ಪಟ್ಟಣಗಳಲ್ಲಿ ಕನ್ನಡಿಗರ ಸಂಖ್ಯೆ ಮೊದಲಿನ ಎರಡರಷ್ಟಂತೂ ಆಗಿಯೇ ತೀರಿರುವದೆಂದು ಹೇಳಬಹುದು. ಹೀಗಾಗಿರುವದರಿಂದ ಹೊರನಾಡ ಕನ್ನಡಿಗರ ಮೇಲಿನ ಹೊಣೆ ಹೆಚ್ಚಾಗಿದೆ ಎಂಬುದು ಸ್ಪಷ್ಟ.

ಈ ಅಧಿವೇಶನವು ಇನ್ನೂ ಒಂದು ದೃಷ್ಟಿಯಿಂದ ಮಹತ್ವದ್ದಿರುವದು. ಸ್ವಾತಂತ್ರ್ಯಪ್ರಾಪ್ತಿಯನಂತರ ಹೊರನಾಡ ಕನ್ನಡಿಗರು ಕೂಡಿದುದು ಇದು ಮೊದಲನೆಯ ಸಾರಿ. ಪಾರತಂತ್ರ್ಯ ಹೋಗಿ ಸ್ವಾತಂತ್ರ್ಯ ದೊರೆಯುವುದೆಂದರೆ ನವಜನ್ಮ ಪ್ರಾಪ್ತಿಯೆ ಸೈ. ನಾವು ಇನ್ನು ಜಗತ್ತಿನಲ್ಲೆಲ್ಲ ತಲೆಯೆತ್ತಿ, ಎದೆಯುಬ್ಬಿಸಿ ಎಲ್ಲ ರಾಷ್ಟ್ರದವರೊಡನೆ ನಿಲ್ಲಬಲ್ಲೆವು. ನಮ್ಮ ಕ್ಷಿತಿಜ ಈಗ ವಿಸ್ತಾರ ಹೊಂದಿರುವದು. ನಮ್ಮ ದೃಷ್ಟಿ ವಿಶಾಲವಾಗಿರುವದು. ನಮ್ಮ ಪ್ರತಿನಿಧಿಗಳು ಈಗ ಜಗತ್ತಿನ ಮೂಲೆಮೂಲೆಗಳಿಗೆ ಹೋಗಿ ನಮ್ಮ ರಾಷ್ಟ್ರದ ಕೀರ್ತಿಯನ್ನು ಬೆಳಗುತ್ತಿರುವರು. ಕನ್ನಡಿಗರು ಕೂಡ ರಾಷ್ಟ್ರದ ನವಜೀವನದಲ್ಲಿ ಸಾಕಷ್ಟು ಸಹಭಾಗಿಗಳಾಗುವದು ಅತ್ಯವಶ್ಯವೆಂಬುದನ್ನು ಪ್ರತ್ಯೇಕವಾಗಿ ಹೇಳುವದವಶ್ಯವಿಲ್ಲ.

ಈ ಸಮ್ಮೇಲನವೆಂದರೆ ಹೊರನಾಡ ಕನ್ನಡಿಗರ ಹೊಸ ಜಾಗೃತಿಯ ಒಂದು ಲಕ್ಷಣವು. ಯಾವದೊಂದು ಜನಾಂಗದ ನವಚೈತನ್ಯವು ಮೊದಲು ಜಾಗೃತಿ, ನಂತರ ಸ್ವಾಭಿಮಾನ, ಅನಂತರ ಆತ್ಮಜ್ಞಾನ ಈ ರೂಪಗಳಿಂದ ತೋರ್ಪಡುವದು. ಇನ್ನೇ ಮುಂದೆ ಸಂಘಟನೆ ಶಿಸ್ತುಗಳ ಸ್ವರೂಪವನ್ನು ತಾಳಿ ವಿವಿಧ ಸಂಘ ಸಂಸ್ಥೆಗಳ ಮುಖಾಂತರ ಕಾರ್ಯಶಾಲಿಯಾಗುವವು ಹಾಗೂ ಜನಾಂಗದ ಕರ್ತೃತ್ವವನ್ನು ಬೆಳೆಸುವವು.

ನಮ್ಮ ನಾಡು ಹಾಗೂ ಕರ್ತವ್ಯ

ನಾವು ಹಿಂದುಸ್ತಾನದವರು ಹಲವುಕಾಲ ಹಿಂದುಸ್ತಾನದ ಹೊರಗೆ ಹೋದರೂ ನಾವು ಹಿಂದೀಯರು ಎಂಬುದನ್ನು ಮರೆಯದೆ ನಮ್ಮ ಕೆಲಸ ಕಾರ್ಯಗಳನ್ನು ನಡೆಸುವೆವು. ಅದೇರೀತಿ ನಾವು ಕರ್ನಾಟಕದವರು ಹಿಂದೂಸ್ತಾನದಲ್ಲಿ ಎಲ್ಲಿಯೆ ಹೋದರೂ ಏನೇ ಮಾಡುತಿದ್ದರೂ ನಾವು ಕರ್ನಾಟಕಸ್ಥರು ಎಂಬ ಎಚ್ಚರವು ನಮಗೆ ಇರುವದು ಅವಶ್ಯವು. ಕರ್ನಾಟಕವನ್ನು ಕಾಯಂಬಿಟ್ಟು ನಾವು ಎರಡನೆ ಪ್ರಾಂತದಲ್ಲಿ ನೆಲೆಸಿಬಿಟ್ಟರೂ ನಮ್ಮ ಮೂಲವನ್ನು ನಾವು ಮರೆಯಲಾರೆವು, ಮರೆಯ ಕೂಡದು. ನಾವು ಕುಲ ಗೋತ್ರಗಳ ನೆನಪನ್ನಿಟ್ಟುಕೊಳ್ಳುವಂತೆ, ಅಭಿಮಾನದಿಂದ ಅವುಗಳನ್ನು ಹೇಳುವಂತೆ ನಮ್ಮ ನಾಡುನುಡಿಗಳ ಬಗ್ಗೆ ನಾವು ಸಚೇತರಾಗಿರುವದು ಸ್ವಾಭಾವಿಕವು, ಅವಶ್ಯವು.

ಇನ್ನು ಈ ಪ್ರಾಂತೀಯ ಅಭಿಮಾನ ಹಾಗೂ ಜಾಗೃತಿಗಳು, ಅದೇರೀತಿ ನಮ್ಮ ನಮ್ಮ ಭಾಷೆಗಳ ಅಭಿಮಾನವು ಹಿಂದುಸ್ತಾನದಲ್ಲಿಯ ಇತರ ನೆರೆಪ್ರಾಂತಗಳಿಗೆ ಹಾಗೂ ನೆರೆಭಾಷೆಗಳಿಗೆ ಯಾವದೇ ಬಾಧೆ ತರಕೂಡದೆಂಬುದನ್ನೂ ನಾವು ಲಕ್ಷದಲ್ಲಿಟ್ಟು ಕೊಂಡು ನಡೆಯಬೇಕು. ಹಿಂದುಸ್ತಾನದಲ್ಲಿಯ ಯಾವದೇ ಪ್ರಾಂತ ಇಲ್ಲವೆ ಭಾಷೆ ಇದು ನಮಗೆ ಯಾರಿಗೂ ಪರಪ್ರಾಂತ ಇಲ್ಲವೆ ಪರಭಾಷೆ ಎನಿಸಕೂಡದು. ಯಾಕಂದರೆ ಇವೆಲ್ಲ ನೆರೆ ಭಾಷೆಗಳು. ನಾವೆಲ್ಲರೂ ಸಹೋದರರು ಹಾಗೂ ನಮ್ಮ ಭಾಷೆಗಳೆಲ್ಲ ಸಹೋದರಿಗಳು. ಈ ಭಾವನೆಯಿಂದ ನಾವೆಲ್ಲರೂ ನಡಕೊಂಡರೆ ಮಾತ್ರ ಒಂದೇ ಕುಟುಂಬದವರಂತೆ ಪರಸ್ಪರರಿಗೆ ಪೋಷಕರಾಗಿ ಬಾಳಿ ಬೆಳೆದು ಬೆಳಗುವೆವು. ಇಲ್ಲದೆ, ಹೋದರೆ ಯಾದವೀಕಲಹಗಳ ಮೂಲಕ ನಾವು ನಿರ್ನಾಮರಾಗಿ ಹೋಗುವೆವು.

ವಾಯುಮಂಡಲದಲ್ಲಿ ಸ್ವೈರವಾಗಿ ಹಾರಾಡುವ ಗಾಳೀ ಪಟಕ್ಕೆ ಸೂತ್ರವು ಹೇಗೊ ಹಾಗೆ ಸುತ್ತಲು ಹಿಂದಂದ, ಕನ್ನಡಿಗರಿಗೆ

ಧರ್ಮಬೋಧ

ಧಾರ್ಮಿಕ ಮಾಸಪತ್ರಿಕೆ

ಲಾವಕಶ್ಚ ವರಾಹಶ್ಚ ಮಹಿಷಃ ಕುಂಜರಸ್ತಥಾ ।
ಕರ್ತಾ ಕಾರಯಿತಾ ಚೈವ ಪಂಚೈತೇ ಸಮಭಾಗಿನಃ ॥

ಒಂದು ಕೆರೆಯನ್ನು ನಿರ್ಮಿಸಿದ ಸುಕೃತಕ್ಕೆ, ಒಂದು ಗುಬ್ಬಚ್ಚಿ ಹಕ್ಕಿಯೂ, ಹಂದಿಯೂ, ಕೋಣವೂ, ಆನೆಯೂ, ಮಾಡಿದವನೂ, ಮಾಡಿಸಿದವನೂ ಈ ಐದುಮಂದಿಯೂ ಸರಿ ಪಾಲುಗಾರರಾದರು ಎಂಬುದು ಶ್ಲೋಕಾರ್ಥ.

(ಒಂದು ಕಾರ್ಯಕ್ಕೆ ಶಕ್ಯವಿರುವ ಸಹಾಯವನ್ನಿತ್ತವರೆಲ್ಲರೂ ಕೊನೆಯಲ್ಲಿ ದೊರಕುವ ಸುಕೃತದಲ್ಲಿ ಸಮಭಾಗಿಗಳಾಗುತ್ತಾರೆಂಬುದು ಭಾವಾರ್ಥ.)

ಸಂಪಾದಕ:
ವೆಂಕಟರಮಣಾಚಾರ್ಯ
ಶಿರೋಮಣಿ, ವಿದ್ವಾನ್

ಸಂಪುಟ

ಸಂಚಿಕೆ ೨

धर्मबोध मासपत्रिका, उडुपि, द. भारत.

1948

॥ ಶ್ರೀಃ ॥

ಧರ್ಮ ಸಂದೇಶ

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ
—ಗೀತಾ

ಸಂಪುಟ ೧	ಶ್ರೀ ಸರ್ವಜಿನ್ನಾಮ ಸಂವತ್ಸರ ಪುಷ್ಯ ಶುದ್ಧ ೨ (ಜನವರಿ ೧೯೪೮)	ಸಂಚಿಕೆ ೪

ಹರಿಹರಾಷ್ಟೋತ್ತರಶತನಾಮ ಸ್ತೋತ್ರಮ್

(ಪುಣ್ಯಶೀಲ – ಸುಶೀಲೌ) ಗಣಾವೂಚತುಃ॥ ಪುಣ್ಯಶೀಲ – ಸುಶೀಲರೆಂಬ ದೇವದೂತರು ಶಿವಶರ್ಮನೆಂಬ ದ್ವಿಜವರ್ಯನಿಗೆ ಹೇಳಿದ:

ಗೋವಿಂದ ಮಾಧವ ಮುಕುಂದ ಹರೇ ಮುರಾರೇ। ಶಂಭೋ ಶಿವೇಶ ಶಶಿಶೇಖರ ಶೂಲಪಾಣೇ॥
ದಾಮೋದರಾಚ್ಯುತ ಜನಾರ್ದನ ವಾಸುದೇವ। ತ್ಯಾಜ್ಯಾ ಭಟಾಯ ಇತಿ ಸಂತತ ಮಾಮನಂತಿ

ಗಂಗಾಧರಾಂಧಕರಿಪೋ ಹರ ನೀಲಕಂಠ। ವೈಕುಂಠ ಕೈಟಭರಿಪೋ ಕಮಠಾಬ್ಜಪಾಣೇ॥
ಭೂತೇಶ ಖಂಡಪರಶೋ ಮೃಡ ಚಂಡಿಕೇಶ। ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ

ವಿಷ್ಣೋನೃಸಿಂಹ ಮಧುಸೂದನ ಚಕ್ರಪಾಣೇ। ಗೌರೀಪತೇ ಗಿರಿಶ ಶಂಕರ ಚಂದ್ರಚೂಡ॥
ನಾರಾಯಣಾಸುರನಿಬರ್ಹಣ ಶಾರ್ಙ್ಗಪಾಣೇ। ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ

ಮೃತ್ಯುಂಜಯೋಗ್ರ ವಿಷಮೇಕ್ಷಣ ಕಾಮಶತ್ರೋ। ಶ್ರೀಕಾಂತ ಪೀತವಸನಾಂಬುದನೀಲ ಶೌರೇ॥
ಈಶಾನ ಕೃತ್ತಿವಸನ ತ್ರಿದಶೈಕನಾಥ। ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ

ಲಕ್ಷ್ಮೀಪತೇ ಮಧುರಿಪೋ ಪುರುಷೋತ್ತಮಾದ್ಯ। ಶ್ರೀಕಂಠ ದಿಗ್ವಸನ ಶಾಂತ ಪಿನಾಕಪಾಣೇ॥
ಆನಂದಕಂದ ಧರಣೀಧರ ಪದ್ಮನಾಭ। ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ

ಸರ್ವೇಶ್ವರ ತ್ರಿಪುರಸೂದನ ದೇವದೇವ। ಬ್ರಹ್ಮಣ್ಯದೇವ ಗರುಡಧ್ವಜ ಶಂಖಪಾಣೇ॥
ತ್ರ್ಯಕ್ಷೋರಗಾಭರಣ ಬಾಲಮೃಗಾಂಕಮೌಲೇ। ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ

ಶ್ರೀರಾಮ ರಾಘವ ರಮೇಶ್ವರ ರಾವಣಾರೇ। ಭೂತೇಶ ಮನ್ಮಥರಿಪೋ ಪ್ರಮಥಾಧಿನಾಥ॥
ಚಾಣೂರಮರ್ದನ ಹೃಷೀಕಪತೇ ಮುರಾರೇ। ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ

ಶೂಲಿನ್ ಗಿರೀಶ ರಜನೀಶಕಲಾವತಂಸ। ಕಂಸಪ್ರಣಾಶನ ಸನಾತನ ಕೇಶಿನಾಶ॥
ಭರ್ಗ ತ್ರಿನೇತ್ರ ಭವ ಭೂತಪತೇ ಪುರಾರೇ। ತ್ಯಾಜ್ಯಾಭಟಾಯ ಇತಿಸಂತತ ಮಾಮನಂತಿ॥

ಗೋಪೀಪತೇ - ಯದುಪತೇ ವಸುದೇವಸೂನೋ। ಕರ್ಪೂರಗೌರ ವೃಷಭಧ್ವಜ ಫಾಲನೇತ್ರ॥
ಗೋವರ್ಧನೋದ್ಧರಣ ಧರ್ಮಧುರೀಣ ಗೋಪ। ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ

ಸ್ಥಾಣೋ ತ್ರಿಲೋಚನ ಪಿನಾಕಧರ ಸ್ಮರಾರೇ। ಕೃಷ್ಣಾನಿರುದ್ಧ ಕಮಲಾಕರ ಕಲ್ಮಷಾರೇ॥
ವಿಶ್ವೇಶ್ವರ ತ್ರಿಪಥಗಾರ್ದ್ರಜಟಾಕಲಾಪ। ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ

1949

ಮೈಸೂರು

ಆರೋಗ್ಯ

ಜನಾರೋಗ್ಯ ಇಲಾಖೆಯ ಪ್ರಚಾರ ಶಾಖೆಯಿಂದ ಹೊರಡುವ ಮಾಸಪತ್ರಿಕೆ.

69 ದಸರಾ ಸಂಚಿಕೆ

Vol. 2] SEPTEMBER 1949 [No. 9



Photo M GOPAL

ಂಗಳೂರಿನಲ್ಲಿರುವ ಜನಾರೋಗ್ಯ ಇಲಾಖೆಯ ಕೇಂದ್ರ ಕಛೇರಿ. ಡೈರೆಕ್ಟರವರ ಕಛೇರಿ ಮತ್ತು ಜನಾರೋಗ್ಯ ಪ್ರಚಾರ ಶಾಖೆ, ಮಲೇರಿಯಾ ಶಾಖೆ, ಸಾಂಕ್ರಾಮಿಕ ಜಾಡ್ಯಗಳ ಶಾಖೆ, ಜನನ ಮರಣಗಳ ಶಾಖೆ ಇವುಗಳ ಕಛೇರಿಗಳೂ ಇಲ್ಲಿಯೇ ಇವೆ. ಇಲ್ಲಿಯೇ "ಮೈಸೂರು ಆರೋಗ್ಯ" ಮಾಸ ಪತ್ರಿಕೆಯು ಪ್ರಕಟಿಸಲ್ಪಡುವುದು.

Bureau of Health Education Ba

ಏಪ್ರಿಲ್ 1948 ೧೯೪೮.

ಮಲೆನಾಡು

ಸಂಚಿಕೆ ೧ ಸಂಪುಟ ೧

... EXIBITION
... VARA ... 57524,
Shimoga Dist, Karnataka State, INDIA

L. N. SHANKARANARAYANA BHATT
Land-Holder, *Lagadamane.*
ARALASURALI P. O. (Shimoga Dt.

ಸಂಪಾದಕ:

ಎಮ್. ಎಸ್. ಭಿಡೆ, ಮುಂಬಾಜೆ.

ಮದ್ರಾಸು ಸಮಾಚಾರ

ಸಂಪುಟ [illegible] ಸಂಚಿಕೆ 21

ಭಾರತದ ಪುನರುದ್ಧಾರ



ಮದರಾಸಿನ ಬ್ರಾಡ್ವೇಯಲ್ಲಿರುವ ಕೇಂದ್ರ ಪೋಲಿಟೆಕ್ನಿಕ್ ಶಾಲೆ

ದಕ್ಷಿಣ ಕನ್ನಡ ಜಿಲ್ಲೆಯ ಕುಂಬಳೆಯಲ್ಲಿ ಶಿಕ್ಷಣ ಅಭಿವೃದ್ಧಿ ಸಮಿತಿಯಲ್ಲಿ ರಾಜ್ಯ ಪ್ರಧಾನ ಮಂತ್ರಿಗಳು ಭಾಷಣಮಾಡಿದ್ದಾರೆ.
ಮಾನ್ಯ ಮಂತ್ರಿ ಶ್ರೀ ಎ. ಬಿ ಶೆಟ್ಟರೂ ದಯಮಾಡಿಸಿದ್ದರು.

ನಮ್ಮ ಆಸ್ಥಾನ ಕವಿ

ಶ್ರೇಷ್ಠ ಕವಿಗಳು ಉದಾತ್ತ ವಿಚಾರಿಗಳು- ಸಮ್ಯಕ್‌ಜೀವಿಗಳು.

ಮಾನ್ಯ ಮಂತ್ರಿ ಶ್ರೀ ಎ- ಬಿ- ಶೆಟ್ಟಿ-

ಯಾವ ನಾಡಿನ ಇತಿಹಾಸವನ್ನು ನೋಡಿದರೂ ರಾಜಕೀಯ ವಾತಾವರಣವೇ ಜನತೆಯ ಸ್ಥಿತಿಗತಿಗಳಿಗೆ ಕಾರಣವಾದಂತೆ ಕಾಣುತ್ತಿದೆ. ಶತಮಾನಗಳಿಂದ ಪರಕೀಯರ ದಾಸ್ಯಕ್ಕೆ ತಲೆಬಾಗಿದ್ದ ನಮ್ಮ ನಾಡಿನಲ್ಲಂತೂ ರಾಜಕೀಯ ಪರಿಸ್ಥಿತಿಯು ಜನತೆಯ ಪ್ರಗತಿಯನ್ನೇ ತಡೆದಿದೆ. ಸಂಸ್ಕೃತಿ ಸಾಹಿತ್ಯಗಳ ಅಭಿವೃದ್ಧಿಯನ್ನು ನಿಲ್ಲಿಸಿದೆ. ಜನತೆಯನ್ನು ಅಜ್ಞಾನ ಅನಾರೋಗ್ಯ ಅಸೂಯೆಗಳ ಕೆಸರಲ್ಲಿ ಅದ್ದಿದೆ. ಜನ ಸಾಮಾನ್ಯರ ಏಳಿಗೆಯಾಗಬೇಕು. ಇದಕ್ಕೆ ಜ್ಞಾನದ ನಂದಾದೀಪವೇ ಬೇಕು. ಇದನ್ನು ಉರಿಸಿಕೊಂಡು ಬಂದವರೆಂದರೆ ಕವಿಗಳು, ಲೇಖಕರು, ಸಾಧುಸಂತರು. ಅದರಲ್ಲೂ ಜ್ಞಾನ ಪ್ರಸಾರದ ಕಾರ್ಯದಲ್ಲಿ ಕವಿಗಳ ಕೈವಾಡವೇ ಎಲ್ಲಕ್ಕಿಂತ ಹಿರಿದು. ರವಿ ಕಾಣದುದನ್ನೂ ಕವಿ ಕಂಡು ಜನತೆಯ ಹಿತಕ್ಕಾಗಿ ತೋರಿಸಬಲ್ಲನು. ಇದರಿಂದಲೇ ಕವಿಗಳಿಗೆ ಜಗತ್ತಿನಲ್ಲೇ ಗಣನೀಯ ಸ್ಥಾನ ಸಲುತ್ತಿದೆ. ಶತ ಶತಮಾನಗಳು ಗತಿಸಿದರೂ ವಾಲ್ಮೀಕಿ, ಕಾಳಿದಾಸ, ಭವಭೂತಿ, ಶೇಕ್ಸ್‌ಪಿಯರ್, ಮಿಲ್ಟನ್, ಗಯಟೆ ಮೊದಲಾದ ಕವಿಗಳ ಅಮರ ಕಾವ್ಯಗಳನ್ನು ಓದಿ, ಕೇಳಿ ಆನಂದ ಪಡುತ್ತಿದ್ದೇವೆ. ರವೀಂದ್ರ, ಇಕ್ಬಾಲ್ ಮೊದಲಾದವರಿಗೆ ತಲೆ ಬಾಗುತ್ತಿದ್ದೇವೆ. ಇವರೆಲ್ಲರ ಕಾವ್ಯ ವಾಹಿನಿಗಳು ಹರಿದು ಜನಮನವನ್ನು ತಣಿಸಿವೆ. ಜ್ಞಾನದ ಬೆಳೆಯನ್ನು ಹುಲುಸಾಗಿ ಬೆಳೆಸಿವೆ.

ಪುರಾತನ ಕಾಲದಲ್ಲಿ

ಇಂತಹ ಕವಿ ಪುಂಗವರನ್ನು ಜನತೆ ಗೌರವಿಸಿ ಪ್ರೀತಿಸಿದರೆ, ರಾಜಮಹಾರಾಜರು ಆಶ್ರಯವಿತ್ತು, ಮನ್ನಿಸಿ ಪೋಷಿಸಿದ್ದಾರೆ. ಇಂಗ್ಲೆಂಡಿನಲ್ಲಿ ಎಲಿಜಬೆತ್ ರಾಣಿಯ ಕಾಲದಲ್ಲಿ ಶೇಕ್ಸ್‌ಪಿಯಾರನಂತಹ ಜಗನ್ಮಾನ್ಯ ಕವಿಯು ಬೆಳಕಿಗೆ ಬಂದರೆ ಫ್ರಾನ್ಸಿನಲ್ಲಿ 14 ನೆಯ ಲೂಯಿಯ ಕಾಲದಲ್ಲಿ ಕೊರ್ನೈಲ್, ರಸೀನ್ ಮೊದಲಾದವರಿಗೆ ಆಶ್ರಯ ದೊರೆಯಿತು. ಕನ್ನಡ ನಾಡಿನಲ್ಲೂ ರಾಷ್ಟ್ರಕೂಟ ದೊರೆಯಾದ III ನೆಯ ಕೃಷ್ಣನ ಕಾಲದಲ್ಲಿ ಪಂಪ-ಪೊನ್ನರಂತಹ ಕವಿ ಶ್ರೇಷ್ಠರು ಜನಪ್ರಿಯರಾದರು. ತೈಲಪನ ಕಾಲದಲ್ಲಿ ರನ್ನನು ಕವಿಚಕ್ರವರ್ತಿಯೆನಿಸಿ ಉತ್ತಮ ಕೃತಿಗಳಿಂದ ಸುಪ್ರಸಿದ್ಧನಾದನು. ಇತ್ತ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಂತೂ ಕುಮಾರ ವ್ಯಾಸ-ತಿಮ್ಮಣ್ಣ ಮೊದಲಾದ ಕವಿಗಳಿಗೆ ಆಶ್ರಯ ದೊರೆಯಿತು. ಕೃಷ್ಣ ದೇವರಾಯನ ಆಸ್ಥಾನದಲ್ಲಿ ಆ ಭಾಷೆ ಈ ಭಾಷೆ ಎನ್ನದೆ ವಿವಿಧ ಭಾಷೆಗಳ ಕವಿಗಳಿಗೆ ಸ್ಥಾನವಿದ್ದಿತು. "ಅಷ್ಟದಿಗ್ಗಜ" ಗಳೆಂಬ ಬಿರುದಿನಿಂದ ಕವಿಗಳು ಮೆರೆಯುತ್ತಿದ್ದರು. ಹೀಗೆ ಕವಿಗಳನ್ನು ಪೋಷಿಸಿ ಮನ್ನಿಸುವುದು ಎಲ್ಲಾ ದೇಶಗಳಲ್ಲೂ ರೂಢಿಯಲ್ಲಿರುವುದು ಮಾತ್ರವಲ್ಲ, ಇದು ಸಾಹಿತ್ಯ-ಸಂಸ್ಕೃತಿಗಳ ಪುರೋಭಿವೃದ್ಧಿಗೆ ಅತ್ಯಾವಶ್ಯಕವೂ ಆಗಿದೆ. ಈ ಧೋರಣೆಯಂತೆ ನಮ್ಮ ಸರಕಾರವೂ ನಮ್ಮ ಪ್ರಾಂತದ ಬೇರೆ ಬೇರೆ ಭಾಷೆಗಳ ಕವಿಗಳಿಗೆ ಸನ್ಮಾನವಿತ್ತು, ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಥಾನ ಕವಿಗಳನ್ನು ಆರಿಸಿ ನೇಮಿಸುವುದಕ್ಕೆ ಮುಂದಾಯಿತು.

ಕನ್ನಡದ ಆಸ್ಥಾನ ಕವಿ.

ಕನ್ನಡದಲ್ಲಿ ಆಸ್ಥಾನ ಕವಿಗಳಾಗಿ ಈಗಲೆ ಶ್ರೀಯುತ ಮಂಜೇಶ್ವರ ಗೋವಿಂದ ಪೈಗಳನ್ನು ನೇಮಿಸಲಾಗಿದೆ. ಇವರ ಕುರಿತು ವಿದ್ವನ್ಮಂಡಲಿಗೆಲ್ಲಾ ಚೆನ್ನಾಗಿ ತಿಳಿದಿದ್ದರೂ ಜನ ಸಾಮಾನ್ಯರಿಗೆ ಇವರ ವಿಷಯ ತಿಳಿಯುವುದು ಅವಶ್ಯವಾಗಿದೆ. ಸಾಮಾನ್ಯವಾಗಿ ಇವರನ್ನು ಜನರು ಮಂಜೇಶ್ವರದವರೆಂದು ತಿಳಿದಿದ್ದರೂ ಇವರು ಮಂಗಳೂರಿನವರು. ಮಂಗಳೂರಿನ ಸುಪ್ರಸಿದ್ಧ ಸಾವುಕಾರ್ ತಿಮ್ಮಪ್ಪ ಪೈಗಳೇ ಇವರ ತಂದೆ. ತಾಯಿಯ ಹೆಸರು ಶ್ರೀಮತಿ ದೇವಕಮ್ಮ. ಇವರ ಹಿರಿಯರು ಸಾಹಿತ್ಯ ಕ್ಷೇತ್ರದಲ್ಲಿ ವ್ಯವಸಾಯ ಮಾಡದಿದ್ದರೂ ವಾಣಿಜ್ಯ ಕ್ಷೇತ್ರದಲ್ಲಿ ಪ್ರಸಿದ್ಧಿಗೆ ಬಂದವರು.

ಸರಸ್ವತೀ ನದಿಯ ತೀರ

ಇವರು ಉತ್ತರ ದೇಶದ ಪಂಚಗೌಡರಲ್ಲೊಂದಾದ ಸಾರಸ್ವತ ಬ್ರಾಹ್ಮಣಶಾಖೆಗೆ ಸೇರಿದವರು. ಇವರ ಪುರಾತನರು ಸರಸ್ವತೀ ನದಿಯ ತೀರದಿಂದ ಬಂದವರೆಂದು ಈ ಶಾಖೆಯವರಿಗೆ ಸಾರಸ್ವತರೆಂದು ಹೆಸರು. ಪಶ್ಚಿಮ ಕರಾವಳಿಯ ಗೋವೆಯೇ ಇವರ ಹಿರಿಯರ ಮೂಲಸ್ಥಾನ. 14 ನೆಯ ಶತಮಾನದಲ್ಲಿ ವಿಜಯನಗರದ ಅಧೀನದಲ್ಲಿ ಗೋವಾ ಪ್ರಾಂತವಿತ್ತು. ಆಗ ಸಾರಸ್ವತರೆಲ್ಲಾ ಸುಖ ಸಂಪತ್ತಿನಿಂದ ಬಾಳುತ್ತಿದ್ದರು. 16 ನೆಯ ಶತಮಾನದಿಂದ ಮಹಮ್ಮದೀಯರ ಕಾಟ ಹೆಚ್ಚಿತು. ಅಲ್ಲಿಂದ ಹಿಂದುಗಳಿಗೆ ಗೋವೆಯು ಸುಖಕರವಾಗಲಿಲ್ಲ. ಕೊನೆಗೆ ಪೋರ್ಚುಗೀಸರ ಅಧಿಕಾರಕ್ಕೆ ತುತ್ತಾದಾಗ ಮತಾಂತರ ಹೊಂದದವರಿಗೆ ಮರಣ ದಂಡನೆಯೇ ಪ್ರಾಯಶ್ಚಿತ್ತವಾಗಿತ್ತು. ಇದರಿಂದ ಅನೇಕ ಕುಟುಂಬಗಳೊಂದಿಗೆ ಶ್ರೀಮಾನ್ ಪೈಗಳ ಹಿರಿಯರೂ ಗೋವೆಯನ್ನು ಬಿಟ್ಟು ದಕ್ಷಿಣ ಕನ್ನಡಕ್ಕೆ ವಲಸೆಬಂದರು. ಮಂಗಳೂರಲ್ಲಿ ನೆಲಸಿದ ಇವರ ಮನೆತನಕ್ಕೆ ಭಾಪೈ ಕುಟುಂಬವೆಂದು ಹೆಸರಾಯಿತು. 'ಪೈ' ಎಂದರೆ ಪತಿ ಎಂಬ ಸಂಸ್ಕೃತದ ತದ್ಭವ, ಇಲ್ಲವೇ ಅಪ್ಪಯ್ಯ ಎಂಬ ಗೌರವ ವಾಚಕವೇ ಕೊಂಕಣಿ ಭಾಷೆಯಲ್ಲಿ ಪೈ ಎಂದಾಯಿತೆಂದು ಶ್ರೀಮಾನ್ ಪೈಗಳೇ ಹೇಳಿದ್ದಾರೆ.

ಇತಿಹಾಸದಿಂದ ಸ್ಫೂರ್ತಿ

ಈ ಪುರಾತನ ವಂಶದಲ್ಲೇ 1883 ನೇ ಮಾರ್ಚಿ 23 ಕ್ಕೆ ಶ್ರೀ ಗೋವಿಂದಪೈಗಳ ಜನ್ಮವಾಯಿತು. ಇವರ ಹಿರಿಯರ ವ್ಯಕ್ತಿತ್ವ, ಇತಿಹಾಸಗಳ ಪರಿಚಯವೇ ಇವರಲ್ಲಿ ಚಿಕ್ಕಂದಿನಿಂದಲೇ ಸ್ಫೂರ್ತಿಯನ್ನಿತ್ತಿವೆಯೆಂಬುದಕ್ಕೆ ಸಂದೇಹವಿಲ್ಲ. ಮನೆತನ ಮಂಗಳೂರಿನ ದಾದರೂ ಇವರು ಹುಟ್ಟಿದುದೂ ಬಳೆದುದೂ ಮಂಜೇಶ್ವರದಲ್ಲಿ. ಮಂಜೇಶ್ವರದ ಕೀರ್ತಿಯು ಸಾಹಿತ್ಯ ಕ್ಷೇತ್ರದಲ್ಲಿ ಶ್ರೀಮಾನ್ ಪೈಗಳಿಂದಲೆ ಹೆಚ್ಚಾದುದೆನ್ನಬೇಕು. ಹೊರಗಿನವರಿಗೆ "ಹೊಸಗನ್ನಡ ಸಾಹಿತ್ಯದಲ್ಲಿ ಪ್ರೇಮಪುಳ್ಳವರು ಪಶ್ಚಿಮ ಘಟ್ಟಗಳನ್ನು ಇಳಿದರೆ ಮಂಜೇಶ್ವರ ಪುತ್ತೂರುಗಳನ್ನು ಮರೆಯುವುದಿಲ್ಲ" ಎಂದು ಶ್ರೀ ಜಿ. ಪಿ. ರಾಜರತ್ನಂ ಇವರು ಹೇಳಿದ ಮಾತು ಹದಿನಾರಾಣೆ ಸತ್ಯವೆನ್ನಬಹುದು. ಶ್ರೀ ಪೈಗಳ ಪ್ರಾಥಮಿಕ ಶಿಕ್ಷಣವೆಲ್ಲಾ ಮಂಜೇಶ್ವರದ ಬಾಸೆಲ್ ಮಿಶನ್ ಶಾಲೆಯಲ್ಲೇ ನಡೆಯಿತು. ಬಳಿಕ ಮಂಗಳೂರಿನ ಮಿಶನ್ ಹೈಸ್ಕೂಲಿನಲ್ಲಿ I ನೇ ಫಾರ್ಮಿನಿಂದ IV ನೆಯ ಫಾರ್ಮ್‌ವರೆಗೆ ಕಲಿತು V, VI ನೇ ಫಾರ್ಮುಗಳನ್ನು ಕೆನರಾ ಹೈಸ್ಕೂಲಿನಲ್ಲಿ ಮುಗಿಸಿದರು. ಮಂಗಳೂರಿನ ಗವರ್ನಮೆಂಟು ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ಓದಿ ತಮ್ಮ ಬಿ. ಎ. ಅಭ್ಯಾಸಕ್ಕೆ ಮದರಾಸಿನ ಕ್ರಿಶ್ಚಿಯನ್ ಕಾಲೇಜನ್ನು ಸೇರಿದರು. ಇಂಗ್ಲಿಷಿನಲ್ಲಿ ಪ್ರಥಮದಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಸುವರ್ಣ ಪದಕವನ್ನು ಪಡೆದಿದ್ದಾರೆ. ಸಂಸ್ಕೃತದಲ್ಲೂ ಉತ್ತಮ ಶ್ರೇಣಿಯಲ್ಲೇ ತೇರ್ಗಡೆಯಾಗಿದ್ದಾರೆ. ಇವರ ತೀರ್ಥರೂಪರ ಮರಣವು ಅಭ್ಯಾಸಕ್ಕೆ ಅಡ್ಡಿಯಾಗಿ ಪದವಿ ಪಡೆಯುವ ಅರ್ಧದಲ್ಲೇ ಹಿಂತೆರಳಬೇಕಾಯಿತು.

ಕವಿತಾವತಾರ

ಶ್ರೀ ಪೈಗಳ ಕವಿತಾಶಕ್ತಿಯು ಬಾಲ್ಯದಲ್ಲೇ ಬೆಳಕಿಗೆ ಬಂದಿತ್ತು. ಹನ್ನೆರಡನೆಯ ವಯಸ್ಸಿನಲ್ಲೇ ಕವಿತೆಗಳನ್ನು ಬರೆಯತೊಡಗಿದ್ದರು. ಕನ್ನಡನಾಡಿನ ಮಹಾಕವಿಗಳ ಸಾಲಿಗೆ ಸೇರಿದ ಮುದ್ದಣನ ಪರಿಚಯವು ಶ್ರೀ ಪೈಗಳಿಗೆ ಇದ್ದುದು ಮಾತ್ರವಲ್ಲ, ಪೈಗಳು ಕನ್ನಡಿಸಿದ ಶೇಕ್ಸ್‌ಫಿಯರ್ ಕವಿಯ "ಟ್ವೆಲ್ಫ್ತ್ ನೈಟ್" ನಾಟಕದ ಮೊದಲ ಅಂಕವನ್ನು ಮುದ್ದಣ ಕವಿಯೇ ಓದಿ ನೋಡಿ ಪ್ರೋತ್ಸಾಹಿಸಿದ್ದರು. ಸಣ್ಣ ಕತೆಗಳ ತಾತನೆನಿಸಿದ ಶ್ರೀ ದಿವಂಗತ ಪಂಜೆ ಮಂಗೇಶರಾಯರು ಇವರ ಕನ್ನಡ ಅಧ್ಯಾಪಕರು. ಮೊದಲ ಬಾರಿ ಇವರ ಕವನಗಳು ಬೆಳಕಿಗೆ ಬಂದುದ ಸುಮಾರು 49 ವರುಷಗಳ ಹಿಂದೆ ಮಂಗಳೂರಿನ 'ಸುವಾಸಿನಿ' ಎಂಬ ಪತ್ರಿಕೆಯಲ್ಲಿ. ಪೈಗಳು ಕವಿತೆಯನ್ನು ತಮ್ಮ ಕೈವಶಮಾಡಲು ಹೆಚ್ಚು

ಶ್ರಮಪಡಿಸಿದ್ದಾರೆ. ತಮ್ಮ ಮನಸಿಗೆ ಒಪ್ಪಿಯಾದ ಕವನಗಳೆಂದರೆ ಪೈಗಳ ಕೈಯಲ್ಲೇ ಅವಕ್ಕೆ ಮೃತ್ಯು.

ಸಮನ್ವಯ ಸಿದ್ಧಿ

ಇವರ ಮೊತ್ತಮೊದಲು ಪ್ರಕಟವಾದ ಪುಸ್ತಕವೆಂದರೆ ಗೊಮ್ಮಟಜಿನ ಸ್ತುತಿ. ಕನ್ನಡನಾಡಿನ ವೈಶಿಷ್ಟ್ಯವೆನಿಸಿದ ಗೊಮ್ಮಟನನ್ನು ತನ್ನ ಕಾವ್ಯ ವಸ್ತುವಾಗಿ ಆರಿಸಿಕೊಂಡ ಪೈಗಳ ಭಾವಾವೇಶವು ಸ್ತುತ್ಯವಾಗಿದೆ. ಇದು 1928 ರಲ್ಲಿ ಪ್ರಕಟವಾಯಿತು. ಎರಡು ವರುಷಗಳ ಮೇಲೆ 'ಗಿಳಿವಿಂಡು' ಎಂಬ ಹೆಸರಿಂದ ಇನ್ನೊಂದು ಕವನ ಸಂಗ್ರಹವು ಬೆಳಕಿಗೆ ಬಂದಿತು ಇದನ್ನು ಕುರಿತು ಶ್ರೀ ಜಿ ಪಿ. ರಾಜರತ್ನಂ, ಇವರು "ಗೋವಿಂದ ಪೈಗಳ ಬಹುಮುಖವಾದ ಪಾಂಡಿತ್ಯ, ಅವರ ಶಬ್ದ ಪ್ರಭುತ್ವ, ಅವರ ಭಾವವಿಲಾಸ, ಅವರ ವಿಶಾಲತೆ, ಅವರ ಉದಾರತೆ ಇವಕ್ಕೆಲ್ಲ ಈ ಸಂಗ್ರಹದಲ್ಲಿ ಸಾಕಷ್ಟು ಸಾಕ್ಷಿ ಇದೆ. ಅವರ ಜೀವನಕ್ಕೆ ಮೂಲಾಧಾರವಾದ ದೈವಭಕ್ತಿ, ಅದರ ಪ್ರತ್ಯಕ್ಷ ಫಲಗಳಾದ ರಾಷ್ಟ್ರಪ್ರೇಮ ಕರ್ಣಾಟಪ್ರೇಮ, ತುಳುನಾಡ ಅಭಿಮಾನ, ಇವು ಅನ್ಯೋನ್ಯವಾಗಿ ಹೆಣೆದುಕೊಂಡ ಆ ಸಮನ್ವಯ ಸಿದ್ಧಿ" ಇತ್ಯಾದಿಗಳನ್ನು ಈ ಸಂಗ್ರಹದಲ್ಲಿ ಕಾಣಬಹುದೆಂದು ಹೇಳಿದ್ದಾರೆ.

ಇವರ ಇನ್ನೊಂದು ಉತ್ಕೃಷ್ಟ ಕೃತಿಯೆಂದರೆ 'ಗೊಲ್ಗೊಥಾ' ಇದು ಕ್ರಿಸ್ತನ ಕೊನೆಯ ದಿನದ ಕುರಿತಾಗಿ ಬರೆದುದು "ಕೇವಲ ಮುನ್ನೂರ ಎಪ್ಪತ್ತೇಳು ಪಂಕ್ತಿಗಳಷ್ಟೇ ವಿಸ್ತಾರವಾದರೂ ಸಿಂಹಾವಲೋಕನ ಕ್ರಮದಿಂದ ಯೇಸುವಿನ ಮೂವತ್ತು ವರ್ಷಗಳ ಸಾತ್ವಿಕ ಜೀವನವನ್ನೂ ಕೈಗನ್ನಡಿಯೊಳಗಿನ ಆನೆಯಂತ ಇದರೊಳಗೆ ಅಡಗಿಸಿದ್ದಾರೆ" ಎಂದು ಶ್ರೀ ರಾಜರತ್ನಂ ಅವರು ಹೊಗಳಿದ್ದಾರೆ ಗ್ರೀಕ್ ನಾಟಕಗಳ ಸರಣಿಯಲ್ಲಿ ಬರೆದ ಇವರ ಇನ್ನೊಂದು ಪದ್ಯನಾಟಕವು ಏಕಲವ್ಯನ ಕಥೆಯನ್ನು ಚಿತ್ರಿಸಿ 'ಹೆಬ್ಬೆರಳು' ಎಂಬ ಹೆಸರಿಂದ ಪ್ರಕಟವಾಗಿದೆ ಇದರಲ್ಲಿ ಚಾತುರ್ವರ್ಣ್ಯಗಳ ವ್ಯವಸ್ಥೆಯಿಂದ ಹಿಂದೆ ನಿರ್ಮಾಣವಾದ ಭಾರತೀಯ ಜನಾಂಗವು ಮುಂದೆ ಬಾಳಬದುಕಬೇಕಾದರೆ ಪಂಚಮರೆನಿಸಿಕೊಂಡ ಅಸ್ಪೃಶ್ಯರನ್ನೂ ಕೂಡಿಕೊಂಡೇ ಹೋಗಬೇಕು ಎಂದು ಸೂಚಿಸಿದ್ದಾರೆ ಶ್ರೀ ಪೈಗಳ ರಾಷ್ಟ್ರಪ್ರೇಮವು ಈ ಪುಸ್ತಕವನ್ನೋದಿದವರಿಗೆ ಚೆನ್ನಾಗಿ ತಿಳಿದೀತು. ಬುದ್ಧನ ಕೊನೆಯ ದಿನವನ್ನು ಕುರಿತು ಬರೆದ ಇನ್ನೊಂದು ಕವನ 'ವೈಶಾಖಿ'

ಅಪ್ರಕಟಿತ ಕೃತಿಗಳು

ಇವಿಷ್ಟು ಪೈಗಳ ಪ್ರಕಟವಾದ ಪುಸ್ತಕಗಳಾದರೆ ಅಪ್ರಕಟಿತವಾದ ಪುಸ್ತಕಗಳೂ ಲೇಖನಗಳೂ ಎಷ್ಟೋ ಕವಾಟದಲ್ಲಿ ನಿದ್ರಿಸುತ್ತಿವೆ 1942 ರ ಕಳವಳದಲ್ಲಿ ಕಾಂಗ್ರೆಸ್ ಕೆಲಸಗಾರರ ಮೇಲೆ ಬ್ರಿಟಿಷ್ ಸರಕಾರವು ನಡೆಸಿದ ದಬ್ಬಾಳಿಕೆಯನ್ನು ಸಹಿಸದೆ ಇವರ ಹೃದಯವು ಕುದಿಯುತ್ತಿತ್ತು ಎಂಬುದಕ್ಕೆ ಇವರ 'ಚಿತ್ರಭಾನು' ಎಂಬ ನಾಟಕ ಸಾಕ್ಷಿ ಮಹಾತ್ಮರ ಕೊನೆಯ ದಿನಗಳನ್ನು ಬರೆಯುವುದೆಂದರೆ ಶ್ರೀ ಪೈಗಳಿಗೆ ಬಹಳ ಇಷ್ಟ. ಕೃಷ್ಣನ ಕಡೆಯ ದಿನವನ್ನು 'ಪ್ರಭಾಸ' ಎಂಬ ಹೆಸರಿಂದ ಚಿತ್ರಿಸಿದರೆ ಗಾಂಧೀಜಿಯವರ ಕೊನೆಯ ದಿನಗಳನ್ನು "ಕವನ ದೇಹಲಿ" ಎಂದು ಕರೆದಿದ್ದಾರಂತೆ.

ಕನ್ನಡನಾಡಿನ ಸುಪ್ರಸಿದ್ಧ ಪತ್ರಿಕೆಗಳೆಲ್ಲಾ ಪೈಗಳ ಕವನಗಳನ್ನು ಪ್ರಕಟಿಸದೆ ಇಲ್ಲ. ಅದರಲ್ಲೂ ವಿಶೇಷಾಂಕಗಳಲ್ಲಿ ಪೈಗಳ ಲೇಖನಗಳಿಗೆ ಅಗ್ರಸ್ಥಾನವಿದೆ. ಇವರು ತಮ್ಮ ಪತ್ನಿಯ ನಿಧನದ ಕುರಿತು ಬಾಷ್ಪಾಂಜಲಿಯಾಗಿ ರಚಿಸಿದ ಕವನಗಳು "ನಂದಾದೀಪ" ಎಂಬ ಹೆಸರಿಂದ ಹೊರಬರುವವಂತೆ ಹೀಗೆ ಇವರ ಅಪ್ರಕಟಿತ ಕವನಗಳೂ ಲೇಖನಗಳೂ ಪ್ರಕಟವಾದರೆ ಎಷ್ಟೋ ಪುಸ್ತಕಗಳಾಗಬಹುದು

ಸಂಶೋಧನೆಯಲ್ಲಿ ನೈಪುಣ್ಯ

ಶ್ರೀಮಾನ್ ಪೈಗಳು ಕೇವಲ ಕವಿಗಳು ಮಾತ್ರವಲ್ಲ; ಪ್ರಥಮಶ್ರೇಣಿಯ ಸಂಶೋಧಕರೂ ಆಗಿದ್ದಾರೆ. ಇವರಿಗೆ ಭಾರತೀಯ ಇತಿಹಾಸ ಸಾಹಿತ್ಯಗಳಲ್ಲಿ ಸಂಶೋಧನೆಯೆಂದರೆ ಅತ್ಯಾಸಕ್ತಿ ಇವರಿಗೆ ಸಂಶೋಧನೆಯಲ್ಲಿ ಅಭಿರುಚಿ ಹುಟ್ಟಲು ಇವರ ಪುರಾತನರ ಇತಿಹಾಸವೇ ಕಾರಣವಾಗಿದೆ ಗೋವೆಯ ಇತಿಹಾಸವನ್ನು ಬರೆಯಬೇಕೆಂದು ಪೋರ್ಚುಗೀಸ್ ಭಾಷೆಯನ್ನೂ ಕೊಂಚ ಕಲಿತರಂತೆ. ಇವರು ಪ್ರಾರಂಭದಲ್ಲಿ ಸಂಶೋಧಕ ಲೇಖನಗಳನ್ನೆಲ್ಲಾ ಇಂಗ್ಲಿಷಿನಲ್ಲೇ ಬರೆದರು. ಮೊದಲು ಬರೆದುದೆಲ್ಲಾ ತಮ್ಮ ವಂಶದವರ ಕುರಿತೇ ಆಗಿತ್ತು ಹೀಗೆ ತಮ್ಮ ವಂಶದ ಇತಿಹಾಸ ಸಂಶೋಧನೆಯ ಕಡೆಗೆ ತಿರುಗಿದ ಪೈಗಳ ಮನಸ್ಸು ಭಾರತದ ಇತಿಹಾಸದ ಕಡೆಗೆ ತಿರುಗಿತು ಪೈಗಳ ಮಾತಿನಲ್ಲೇ ಹೇಳುವುದಾದರೆ "ವೃಥಾ ಬಾವಿಯಲ್ಲಿ ಗಾಳ ಹಾಕಿದರೇನು! ಹಾಕಿದರೆ ಹಾಕಬೇಕು ಕಡಲಲ್ಲಿ ಬೀಸುಬಲೆಯನ್ನು" ಎಂದು ನಿರ್ಧರಿಸಿ ಸಮಗ್ರಭಾರತದ ಇತಿಹಾಸಕ್ಕೆ ಕೈಹಾಕಿದರಂತೆ. ಹೀಗೆ ಇಂಗ್ಲಿಷಿನಲ್ಲಿ ಅನೇಕ ಲೇಖನಗಳನ್ನು ಬರೆದು ಕೊನೆಗೆ ಕನ್ನಡದಲ್ಲೂ ತಮ್ಮ ಸಂಶೋಧನೆಯ ಶಕ್ತಿಯನ್ನು ಹೊರ ಹೊಮ್ಮಿಸಿದ ಪೈಗಳು ನೂರಕ್ಕೂ ಮಿಕ್ಕ ಸ್ವತಂತ್ರ ಲೇಖನಗಳನ್ನು ಬರೆದಿದ್ದಾರೆ ಕಾಲವಿಚಾರದಲ್ಲಿ ಪೈಗಳ ಸಿದ್ಧಾಂತವೇ ಕೊನೆಯದೆಂದರೆ ಅತಿಶಯವಲ್ಲ ಇವರ ವಿದ್ವತ್ತು, ಸಂಶೋಧನೆಗಳ ಫಲವಾಗಿ ಮದ್ರಾಸು ವಿಶ್ವವಿದ್ಯಾಲಯದ ಆಶ್ರಯದಲ್ಲಿ 1930 ನೇ ಇಸವಿಯಲ್ಲಿ ಮೂರು ಉಪನ್ಯಾಸಗಳನ್ನಿತ್ತರು ಮುಂಬಯಿ ಸರಕಾರದ ಕನ್ನಡ ಸಂಶೋಧನಾ ಶಾಖೆಯ ಆಶ್ರಯದಲ್ಲಿ 1940 ರಲ್ಲಿ ಸಂಶೋಧನಾತ್ಮಕ ಉಪನ್ಯಾಸಗಳನ್ನಿತ್ತರು. ಪೈಗಳು ತಮ್ಮ ಸಾಹಿತ್ಯವ್ಯವಸಾಯದ ಕುರಿತು ತಾವೇ "ಕವಿತಾ ಮಾರ್ಗ ಬೇರೆ - ಸಂಶೋಧನಾ ಮಾರ್ಗ ಬೇರೆ, ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು ವಿಶಿಷ್ಟವಾದ ದೈವ ಕೃಪೆಯುಳ್ಳವರು ಅವೆರಡನ್ನೂ ಕೈಕೊಂಡು ಹೊತ್ತನ್ನು ಹಿಡಿತದಿಂದ ಬಳಸಿದರೆ ಸಮನ್ವಯಿಸಬಹುದು.. ಕೀಲವೂ ತಪ್ಪಿತು. ಕಾಲೂ ತಪ್ಪಿತು" ಎಂದು ಹೇಳಿದ ಪೈಗಳ ಮಾತಿನಿಂದ ಅವರ ಹೃದಯವು ಪ್ರಕಟವಾಗಿದೆ

ಕನ್ನಡದಲ್ಲಿ ಏಕೆ ದ್ರಾವಿಡ ಭಾಷೆಗಳಲ್ಲೇ ಪ್ರಾಸರಹಿತ ಕವನಗಳನ್ನು ಬರೆದವರಲ್ಲಿ ಇವರೇ ಮೊದಲಿಗರೆನ್ನಬಹುದು ಇಂಗ್ಲಿಷಿನ 'ಸೊನೆಟ್' ಜಾತಿಯ ಕವಿತೆಗಳನ್ನು ಕನ್ನಡದಲ್ಲಿ ಬರೆಯುವುದಕ್ಕೆ ಮದರಾಸು ಪ್ರಾಂತದಲ್ಲಿ ಇವರೇ ಆದಿ ಕವಿಗಳು. ಇವರ ಶೈಲಿಯು ಗಂಭೀರವಾಗಿರುವಂತೆ ಕಾವ್ಯ ವಸ್ತುಗಳೂ ಕೃಷ್ಣ, ಬುದ್ಧ, ಕ್ರಿಸ್ತ, ಗಾಂಧೀಜಿ, ಭಾರತಮಾತೆ, ಕನ್ನಡತಾಯಿಯೆಂದು ಮಹತ್ವಪೂರ್ಣವಾದುವು

ಭಾಷೆಗಳಲ್ಲಿ ಅತಿ ಮಮತೆ

ಯಾವ ವಿಷಯವನ್ನಾದರೂ ಆಮೂಲಾಗ್ರವಾಗಿ ತಿಳಿಕೊಳ್ಳುವುದಲ್ಲದೆ ಹಠಹಿಡಿದು ಕಲಿಯುವುದು ಇವರ ಸ್ವಭಾವಸಿದ್ಧವಾದುದು ಭಾಷೆಗಳನ್ನು ಕಲಿಯುವುದೆಂದರೆ ಇವರಿಗೆ ಅತಿ ಮಮತೆ. ಜರ್ಮನ್, ಫ್ರೆಂಚ್, ಲ್ಯಾಟಿನ್ ಇತ್ಯಾದಿ ಪಾಶ್ಚಿಮಾತ್ಯ ಭಾಷೆಗಳಲ್ಲದೆ ಅರೇಬಿಕ್, ಪರ್ಶಿಯನ್, ಹಿಬ್ರು ಮೊದಲಾದ ಭಾಷೆಗಳನ್ನೂ ಅಭ್ಯಾಸಮಾಡಿದ್ದಾರೆ ಆರ್ಯಭಾಷೆಗಳಲ್ಲಿ ಸಂಸ್ಕೃತ, ಬಂಗಾಳಿ, ಹಿಂದೀ ಇತ್ಯಾದಿಗಳನ್ನು ತಿಳಿದಂತೆ ಇತರ ದ್ರಾವಿಡ ಭಾಷೆಗಳಲ್ಲೂ ಸಾಕಷ್ಟು ತಿಳುವಳಿಕೆ ಇದೆ ಒಟ್ಟಿನಲ್ಲಿ ಇವರು ಸುಮಾರು 22 ಭಾಷೆಗಳನ್ನು ಅಭ್ಯಾಸಮಾಡಿದ್ದಾರೆ

ಪ್ರತ್ಯಕ್ಷ ಅನುಭವ

ಶ್ರೀ ಗೋವಿಂದ ಪೈಗಳ ಜ್ಞಾನಭಂಡಾರವು ಕೇವಲ ಪುಸ್ತಕಗಳಿಂದ ಮಾತ್ರ ಸಂಗ್ರಹಿಸಲ್ಪಟ್ಟುದಲ್ಲ ಹಿಂದುಸ್ಥಾನವನ್ನು ಎರಡು ಸಲ ಸಂಪೂರ್ಣ ಸಂಚರಿಸಿ ಜೈನಕ್ಷೇತ್ರಗಳನ್ನೆಲ್ಲಾ ಕಣ್ಣಾರೆ ಕಂಡು ಅಲ್ಲಿಯ ಚಾರಿತ್ರಿಕ ಹಿನ್ನೆಲೆಯನ್ನು ಮನನಮಾಡಿದ್ದಾರೆ. ಇವರ ಪಾಂಡಿತ್ಯ ಪ್ರತಿಭೆಗಳು ಕನ್ನಡ ನಾಡಿನ ವಿದ್ವಾಂಸರಿಗೆಲ್ಲಾ ಚೆನ್ನಾಗಿ ತಿಳಿಯದೆ ಇಲ್ಲ ಇವರನ್ನು ಕುರಿತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಹಾಗೂ ಕನ್ನಡನಾಡಿನ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ತಮ್ಮ ಜೀವನ ಪತ್ರಿಕೆಯ ಸಂಪಾದಕೀಯದಲ್ಲಿ 'ಮದ್ರಾಸು ಪ್ರಾಂತದ ಇಂದಿನ ಸರಕಾರ ಆಯಾಭಾಷೆಯ ಶ್ರೇಷ್ಠಸಾಹಿತಿಗಳಲ್ಲಿ ಒಬ್ಬರನ್ನು ಆರಿಸಿ ಅವರಿಗೆ ರಾಜಕವಿಗಳ ಸ್ಥಾನವನ್ನು ನೀಡಿ ಗೌರವ ತೋರಿದೆ ಇದರಲ್ಲಿ ಕನ್ನಡದ ವಿಶ್ವಾಸ ಹಿರಿಯರಾದ ಶ್ರೀ ಮಂಜೇಶ್ವರದ ಗೋವಿಂದ ಪೈಗಳವರ ಹೊಣೆ ಗೌರವವಾಗಿ ಬಂದಿದೆ ಇದು ಬಹು ಸಂತೋಷದ ಸಂಗತಿ ಗೋವಿಂದ ಪೈಗಳು ಶ್ರೇಷ್ಠ ಕವಿಗಳು ಉದಾತ್ತ ವಿಚಾರಿಗಳು, ಸಮ್ಯಕ್ ಜೀವಿಗಳು ಇಂಥ ಮಹನೀಯರನ್ನು ತನ್ನ ಕವಿಪಂಕ್ತಿಯಲ್ಲಿ ಗಣಿಸಬಹುದಾಗಿರುವುದು ಕನ್ನಡಕ್ಕೆ ಒಂದು ಹೆಮ್ಮೆ ಇವರ ಗುಣವನ್ನೂ ಶಕ್ತಿಯನ್ನೂ ಗುರುತಿಸಿ ರಾಜಕವಿಗಳಾಗಿ ನೇಮಿಸಿದ ಬಗ್ಗೆ ನಾವು ಮದರಾಸು ಸರಕಾರವನ್ನು ಮೊದಲಾಗಿ ಅಭಿನಂದಿಸುತ್ತೇವೆ" ಎಂದು ಸಾರಿದ್ದಾರೆ ಈ ಮಾತಿನಲ್ಲಿ ಸಂಪೂರ್ಣ ಸತ್ಯವಿದೆ. ಇಂತಹ ಮಹನೀಯರನ್ನು ಕನ್ನಡನಾಡು ಗೌರವಿಸುವಂತೆ ಸರಕಾರವೂ ಗೌರವಿಸಿ ಮುಂದಿನ ಸಾಹಿತಿಗಳಿಗೆ ಪ್ರೋತ್ಸಾಹ ತೋರಿಸಿದೆ. ಶ್ರೀಮಾನ್ ಗೋವಿಂದ ಪೈಗಳಿಗೆ ದೇವರು ಇನ್ನಷ್ಟು ಶಕ್ತಿ ಉತ್ಸಾಹಗಳನ್ನಿತ್ತು ಸಾಹಿತ್ಯ ಸೇವೆ ಸಲ್ಲಿಸುವಂತಾಗಲಿ! – – (ಮದರಾಸು ರೇಡಿಯೋ.)



ಶ್ರೀ ಗೋವಿಂದ ಪೈಗಳು

ಕನ್ನಡವು ಕಸ್ತೂರಿಯು ಕನ್ನಡವು ಸವಿಜೇನು,
ಕನ್ನಡವು ಇನಿದಿನಿದು ನುಣ್ಪು ಚೆಲು ಚೆಲುವು,
ಕನ್ನಡದ ನುಡಿಸೇವೆ ಕನ್ನಡದ ಜನಸೇವೆ
" ಕನ್ನಡವೆ ನಮ್ಮ ತನು ಕನ್ನಡವೆ ನಮ್ಮ ಮನ
ಕನ್ನಡವೆ ನಮ್ಮ ಧನ" ಎಂದ ಕವಿವರರು.

ಭಾವನೆಯು ಐಹೊಳೆಯು ಹರಿತಕ್ಕೆ ಛಂದಗಳ
ಪ್ರಾಸಗಳ ಕಗ್ಗಲ್ಲ ನುಗ್ಗುವೀ ಶ್ರಮವೇಕೆ ?
" ಕವಿಯೆ ಸ್ವಾತಂತ್ರ್ಯಮಧು ಕುಡಿವ ಮಧುಕರನಲ್ತೆ "
ಎಂದು " **ಗಿಳಿವಿಂಡೊಂದು** " ನುಡಿದು ಸಾರಿತ್ತು.

ಅನ್ಯಮತ ಧರ್ಮಗಳ ತತ್ವಗಳ ಸಮರಸದೆ,
ಅನ್ಯತೆಯೆ ಇರದೆಂದು ಏಸುವಿನ ಕೊನೆಯದಿನ,
'ಗೊಲ್ಗೊಥದೆ' ಹೊರಬಂದು ಜಗಕೆ ಸಾರಿತ್ತು.

ಹಿಂಸೆ ಹಿಂಸೆಗೆ ಮುಕ್ತಿ - ಹಿಂಸೆ ನಾಶಕ ಶಕ್ತಿ,
ಸತ್ಯದಮಶಮಗಳೇ ಲೋಕ ನಡೆಸುವ ಶಕ್ತಿ,
ಇತರರನು ತುಳಿದರಿಗೆ ತುಳಿತವೇ ಫಲವಹುದು,
ಜನಜನಾಂಗದ ಕ್ಷೇಮ ಸ್ವಾತಂತ್ರ್ಯದಲ್ಲಿಹುದು,

ಧರ್ಮದಿಯಹಿಂಸೆಯೇ ಪರಮಧರ್ಮವಿದೆಂದು
ಹೃದಯದಿಂ ಹೊರಹೊಮ್ಮಿ **ವೈಶಾಖಿ** ಮೆರೆದತ್ತು.

ಕನ್ನಡವ ಬಿಟ್ಟನಗೆ ಅನ್ಯಜೀವನವಿಲ್ಲ,
ಕನ್ನಡವೆ ಸರ್ವಸ್ವ ವೆಂದವರಿಗಾಗಿ,
ಕನ್ನಡವು ಭಾರತದ ಸಂಸ್ಕೃತಿಯು ಬಿಡದೆಂದು,
ಕನ್ನಡಿಗರಲಿ ರಾಷ್ಟ್ರಭಕ್ತಿ ತುಂಬಿಹರು

ಕವಿಗಳೆನಿಬರೊ ಬಂದು ರಸದ ಹೊನಲಲಿ ಮಿಂದು,
ಹುಣ್ಣಿಮೆಯ ರಾತ್ರಿಯಲಿ ಚಂದಿರನ ಬಟ್ಟಲಲಿ,
ತಾರೆಗಳ ಹೂವುಗಳ ಕೊಯ್ದು ಕೊಟ್ಟಿಹರು,
ಆಗಸದ ಮಂದಿರದ ಚಂದ್ರಿಕೆಯು ಪರದೆಯಲಿ,
ಪ್ರಕೃತಿ ಚೆಲುವಿನ ಚಿತ್ರ ತೋರಿ ತಣಿದಿಹರು-

ಆ ಕಾವ್ಯ ಆ ವಸ್ತು ಆ ಬಂಧ ಆ ಛಂದ,
ಆ ಕಾಲಕಾಕವಿಗೆ ಆ ಜನಕೆ ಮಿಗಿಲೆಂದು,
ಆಧುನಿಕ ಕಾವ್ಯವಾಹಿನಿಯ ಹರಿಸಿರೆ ಜನತೆ,
ಆದರಿಸೆ ' **ರಾಷ್ಟ್ರಕವಿ** ' ಯಾಗಿ ಬಾಳಿರಲಿ !

—ಸಿ. ಕೆ. ತಿರುಮಲೇಶ್.

ರೈತರಿಗೆ

ಪಂಪು ಸೆಟ್

ಬೇಸಾಯಗಾರರಿಗೆ ನೀರಾವರಿ ಉದ್ದೇಶಕ್ಕೋಸ್ಕರ ಇಲೆಕ್ಟ್ರಿಕ್ ಪಂಪುಸೆಟ್ಟುಗಳೇ ಎಣ್ಣೆ ಇಂಜಿನ್ ಸೆಟ್ಟುಗಳೇ ಬೇಕೆಂದಾದರೆ, ಜಿಲ್ಲಾ ಎಗ್ರಿಕಲ್ಚರಲ್ ಆಫಿಸರಿಗೆ ಅರ್ಜಿ ಮಾಡಬೇಕು ಅರ್ಜಿ ಫಾರ್ಮಿನ ಪ್ರತಿಗಳು ಸ್ಥಳೀಕ ಎಗ್ರಿಕಲ್ಚರಲ್ ಡೆಮೊನ್-ಸ್ಟ್ರೇಟರಲ್ಲಾಗಲೀ ಜಿಲ್ಲಾ ಎಗ್ರಿಕಲ್ಚರಲ್ ಆಫಿಸರಲ್ಲಾಗಲೀ ದೊರೆಯುತ್ತದೆ ಈ ಅರ್ಜಿಗಳನ್ನು ಸಂಬಂಧಪಟ್ಟ ತಾಲೂಕಿನ ತಹಸೀಲ್ದಾರರಿಗೆ ವಿಚಾರಣೆಗೆ ಕಳುಹಿಸಲಾಗುತ್ತದೆ ತಹಸೀಲ್ದಾರರು ಅರ್ಜಿದಾರನ ಸ್ಥಿತಿಗತಿಗಳನ್ನು ವಿಚಾರಿಸಿ ಅವನಿಗೆ ಕೊಡಬಹುದೋ ಇಲ್ಲವೋ ಎಂದು ನಿಶ್ಚಯಿಸುತ್ತಾರೆ. ಸಂಶಯವಿದ್ದಲ್ಲಿ ಕಲೆಕ್ಟರ ಸಲಹೆ ಕೇಳಲಾಗುತ್ತದೆ ಅರ್ಜಿಯನ್ನು ಒಪ್ಪಿದರೆ, ಎಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನ ಆಫೀಸರರು ಅರ್ಜಿದಾರನ ಆಸ್ತಿಯನ್ನು ಸಂದರ್ಶಿಸಿ ಸ್ಥಳೀಕ ಸ್ಥಿತಿಗತಿಗಳನ್ನು ಪರೀಕ್ಷಿಸುತ್ತಾರೆ. ಅನಂತರ ಅರ್ಜಿದಾರನಿಗೆ ಬೇಕಾಗುವ ಯಂತ್ರ ಹಾಗೂ ಸಲಕರಣೆಗಳ ಬೆಲೆ, ಅವನ್ನು ಸಾಗಿಸುವ ಹಾಗೂ ಸ್ಥಾಪಿಸುವ ವೆಚ್ಚಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಕೊಡಲಾಗುತ್ತದೆ. ಇದಕ್ಕೆ ಒಪ್ಪುವುದಾದರೆ ಅರ್ಜಿದಾರನು ಒಂದು ಒಪ್ಪಂದ ಕರಾರು ಬರೆಯಬೇಕಾಗಿದೆ ಅರ್ಜಿದಾರನು ಪಂಪುಸೆಟ್ಟನ್ನು ಯಾವ ಆಸ್ತಿಯಲ್ಲಿರಿಸಲು ಇಚ್ಛಿಸುತ್ತಾನೋ ಆ ಆಸ್ತಿಯ ಯಜಮಾನನಲ್ಲವಾದರೆ, ಸರಕಾರವು ಯಜಮಾನನ ಒಪ್ಪಿಗೆಯನ್ನು ಪಡೆಯುತ್ತದೆ ಯಂತ್ರ ಸಲಕರಣೆಗಳನ್ನು ಸಾಗಿಸುವುದಕ್ಕೆ ಮತ್ತು ಆಸ್ತಿಯಲ್ಲಿ ಅವನು ಸ್ಥಾಪಿಸುವುದಕ್ಕೆ ಬೇಕಾದ ವೆಚ್ಚದಲ್ಲಿ ಸ್ವಲ್ಪಾಂಶವನ್ನು ಮುಂಚಿತವಾಗಿ ಕೊಡಬೇಕಾಗಿದೆಯಲ್ಲದೆ, ಯಂತ್ರ ಸಲಕರಣೆಗಳ ಬೆಲೆಯಲ್ಲಿ ಶೇಕಡ 10 ರಷ್ಟಕ್ಕೆ ಮೀರದಷ್ಟು ಮೊಬಲಗನ್ನು ಸಹ ಠೇವಣಾತಿಯಲ್ಲಿಡಬೇಕಾಗಿದೆ ಈ ಠೇವಣಾತಿಯ ಮೇಲೆ ಬಡ್ಡಿ ಕೊಡಲಾಗುವುದಿಲ್ಲ ಜಿಲ್ಲಾ ಎಗ್ರಿಕಲ್ಚರಲ್ ಆಫಿಸರು ಬಡ್ಡಿ ದೊರೆಯುವ ಭದ್ರತಾ ಪತ್ರಗಳನ್ನು ಠೇವಣಾತಿಯಾಗಿ ಅಂಗೀಕರಿಸಬಹುದು

ಯಂತ್ರ ಸಲಕರಣೆಗಳ ಬೆಲೆಯನ್ನು ಮಾಸಿಕ ಇಲ್ಲವೇ ವಾರ್ಷಿಕ ಕಂತುಗಳಲ್ಲಿ ಬಡ್ಡಿ ಸಮೇತ ಮರು ಪಾವತಿಮಾಡಬೇಕಾಗಿದೆ ಬೆಲೆ ರೂ 1.500 ಕ್ಕೆ ಮೀರದ ಇಲೆಕ್ಟ್ರಿಕ್ ಮೋಟರ್ ಪಂಪುಸೆಟ್ ಇಲ್ಲವೇ ಬೆಲೆ ರೂ 3,000 ಕ್ಕೆ ಮೀರದ ಎಣ್ಣೆ ಇಂಜಿನ್ ಪಂಪುಸೆಟ್‌ಗಳಾದರೆ ಮೂರು ವರ್ಷದೊಳಗೂ, ಇತರ ವಿಷಯಗಳಲ್ಲಿ ಸರಕಾರದಿಂದ ಮುಂಚಿತವಾಗಿ ಅನುಮತಿ ಪಡೆದು ಐದು ವರ್ಷದೊಳಗೂ ಸರಕಾರವು ಗೊತ್ತುಪಡಿಸಿದ ಬಡ್ಡಿ ಸಮೇತ ತೆರಬೇಕಾಗಿದೆ ಒಪ್ಪಿಗೆ ಕರಾರು ಅವಶ್ಯವಿದ್ದಲ್ಲಿ ಆಸ್ತಿ ಯಜಮಾನನ ಒಪ್ಪಿಗೆ, ಮುಂಗಡ ಠೇವಣಾತಿಗಳು ಮೊದಲಾದ ಪ್ರಾಥಮಿಕ ಕೆಲಸಗಳು ಮುಗಿದನಂತರ ಆದಷ್ಟು ಬೇಗನೆ ಸರಕಾರವು ಯಂತ್ರಸಲಕರಣೆಗಳನ್ನು ಸ್ಥಾಪಿಸುವ ಏರ್ಪಾಡು ಮಾಡುತ್ತದೆ. ಕೆಲಸ ಮುಗಿದನಂತರ ವೆಚ್ಚದ ಪಟ್ಟಿಯನ್ನು ಅರ್ಜಿದಾರನಿಗೆ ಒಪ್ಪಿಸಲಾಗುತ್ತದೆ ಠೇವಣಾತಿ ಮೊಬಲಗನ್ನು ಕೊನೆಯ ಒಂದು - ವಾ - ಹೆಚ್ಚಿಗೆ ಕಂತುಗಳಿಗೆ ಸರಿಪಡಿಸಿಕೊಳ್ಳಲಾಗುತ್ತದೆ. ಇಲೆಕ್ಟ್ರಿಕ್ ಪಂಪಿಂಗ್ ಸೆಟ್‌ಗಳನ್ನು ಒದಗಿಸ ಬೇಕಾದರೆ ಅರ್ಜಿದಾರನು ವಿದ್ಯುತ್ ಸರಬರಾಯಿಗಾಗಿ ಮುಂಚಿತವಾಗಿ ಒಪ್ಪಿಗೆ ಪಡೆಯಬೇಕು ಯಂತ್ರ ಸಲಕರಣೆಗಳ ಪೂರ್ಣ ಬೆಲೆ ತೆರುವವರಿಗೆ ಅವು ಸರಕಾರದ ಸ್ವತ್ತಾಗಿರುವುವು. ಕೆಲವು ಸಂದರ್ಭಗಳಲ್ಲಿ ಅರ್ಜಿದಾರನೇ ಯಂತ್ರವನ್ನು ಸ್ಥಾಪಿಸುವ ಏರ್ಪಾಡು ಮಾಡಿಕೊಳ್ಳಬಹುದು ಆದರೆ ಅವಕ್ಕೆ ಬೇಕಾದ ಹಂಚಿಕೆ ಇತ್ಯಾದಿಗಳನ್ನು ಡೈರೆಕ್ಟರ್ ಆಫ್ ಎಗ್ರಿಕಲ್ಚರ್ ಅವರು ಮಂಜೂರು ಮಾಡಬೇಕಾಗಿದೆ ಅಲ್ಲದೆ ಸ್ಥಾಪಿಸುವ ಕೆಲಸದ ಮೇಲ್ವಿಚಾರವನ್ನು ಎಗ್ರಿಕಲ್ಚರಲ್ ಇಲಾಖೆಯ ಆಫೀಸರು ನಡೆಸಬೇಕಾಗಿದೆ. ದುರುಸ್ತಿ ಹಾಗೂ ಇತರ ಹೆಚ್ಚಿಗೆ ಕೆಲಸವನ್ನು ಎಗ್ರಿಕಲ್ಚರಲ್ ಇಲಾಖೆಯು ಕೈಕೊಳ್ಳುತ್ತದೆ. ಆದರೆ ಅದರ ನಿಜವಾದ ವೆಚ್ಚ ಮತ್ತು ಶೇಕಡ 16¼ ಯಷ್ಟು ಮೊಬಲಗು ತೆರಬೇಕಾಗಿದೆ ಮಂಜೂರಾತಿ ಪಡೆದನಂತರ 6 ತಿಂಗಳೊಳಗೆ ಅರ್ಜಿದಾರನು ಯಂತ್ರ ಸ್ಥಾಪಿಸದಿದ್ದರೆ ಆ ಬಗ್ಗೆ ಅವನು ತಿರುಗಿ ಹೊಸ ಅರ್ಜಿ ಹಾಕಬೇಕಾಗಿದೆ

ಕೃಷಿ ಸುಧಾರಣೆ

ಮದ್ರಾಸ್ ಸರಕಾರವು ಸಾಗುವಳಿ ಭೂಮಿಯ ಮೇಲೆ ನಿಯಂತ್ರಣ ಹೇರುವ ಹಾಗೂ ಅವುಗಳನ್ನು ಕೃಷಿ ಸುಧಾರಣೆಗಾಗಿ ವಶಪಡಿಸಿಕೊಳ್ಳುವ ಅಧಿಕಾರವನ್ನು ಪಡೆಯುವ ಮಸೂದೆಯನ್ನು ಪ್ರಕಟಿಸಿದೆ

ಈ ಮಸೂದೆಯನ್ನು ಬ್ರಿಟನಿನ ಕೃಷಿ ಮಸೂದೆಯ ಮಾದರಿಯ ಮೇಲೆ ರಚಿಸಲಾಗಿದೆ ಎಂದು ಹೇಳಲಾಗಿದೆ ಸಾಗುವಳಿಯು ಮದ್ರಾಸ್ ಪ್ರಾಂತದಲ್ಲಿ ಹಿಂದೆ ಬಂದ ಪರಂಪರೆಯಂತೆ ನಡೆಯುತ್ತಿರುವದರಿಂದ ಅದರಲ್ಲಿ ಸುಧಾರಣೆ ಮಾಡಲು ಶಕ್ಯವಾಗಿಲ್ಲ, ಆದುದರಿಂದ ರೈತರಿಗೆ ಯಾವ ಪದ್ಧತಿಯಂತೆ ಭೂಸಾಗುವಳಿ ಮಾಡಬೇಕೆಂಬುದನ್ನು ನಿರ್ದೇಶಿಸುವ ಹಾಗೂ ಇಂಥ ಕ್ಷೇತ್ರದಲ್ಲಿ ಇಂಥ ನಿರ್ದಿಷ್ಟ ಬೆಳೆಗಳನ್ನೇ ಬೆಳೆಯಿಸಬೇಕೆಂದು ಒತ್ತಾಯ ಪಡಿಸುವ ಅಧಿಕಾರವು ಸರಕಾರಕ್ಕಿರುವ ದವಶ್ಯವೆಂದು ಈ ಮಸೂದೆಯಲ್ಲಿ ಸರಕಾರವು ಈ ಅಧಿಕಾರಗಳನ್ನು ಪಡೆಯುವ ಕಲಮುಗಳನ್ನು ಸೇರಿಸಲಾಗಿದೆ.

ಸರಕಾರದ ಆದೇಶದಂತೆ ಕೃಷಿಯನ್ನು ವೃದ್ಧಿಗೊಳಿಸಿ ಪ್ರಗತಿ ಸಾಧಿಸಲು ತಪ್ಪಿದ ರೈತರಿಂದ ಭೂಮಿಯನ್ನು ತೆಗೆದು ಬೇರೆ ರೈತರಿಗೆ ಕೊಡಲು ಇಲ್ಲವೆ ಸರಕಾರವೇ ಅಂಥ ಭೂಮಿಗಳನ್ನು ಸಾಗುವಳಿ ಮಾಡುವ ಜವಾಬುದಾರಿಕೆಗೆ ಸಂಬಂಧಪಟ್ಟ ಕಲಮುಗಳೂ ಈ ಮಸೂದೆಯಲ್ಲಿ ಇವೆ

ರೈತರಿಗೆ ಸಾಗುವಳಿಯ ಹುಟ್ಟುವಳಿಗೆ ನಿರ್ದಿಷ್ಟ ಬೆಲೆ ದೊರೆಯುವಂತೆ ಸರಕಾರವು ಭರವಸೆ ಕೊಡುವದು ಅವಶ್ಯವಿರುವದರಿಂದ ಈ ಮಸೂದೆಯಲ್ಲಿ ಒಕ್ಕಲಿಗರು ಭೂಮಿಯಲ್ಲಿ ಬೆಳೆದ ಹುಟ್ಟುವಳಿಗೆ ಯೋಗ್ಯ ಬೆಲೆಯ ಆಶ್ವಾಸನ ಕೊಟ್ಟು ಆ ಬೆಲೆಗೆ ತಾನೇ ರೈತರಿಂದ ಕೊಳ್ಳುವದು, ಇಲ್ಲವೆ ಆ ಬೆಲೆಯಂತೆ ರೈತರಿಂದ ಸರಕನ್ನು ಕೊಳ್ಳಲು ಅಧಿಕೃತ ಏಜಂಟರನ್ನು ನಿಯಮಿಸುವದೇ ಮೊದಲಾದ ವ್ಯವಸ್ಥೆಗಳೂ ಈ ಮಸೂದೆಯಲ್ಲಿದೆ.

ಸರಕಾರವು ವಶಪಡಿಸಿಕೊಂಡ ಭೂಮಿಗಳನ್ನು ವ್ಯವಸ್ಥಿತ ರೀತಿಯಿಂದ ಸಾಗುವಳಿ ಮಾಡುವ ವ್ಯವಸ್ಥೆ ಮಾಡಲು ಕೃಷಿ ಸುಧಾರಣಾ ಮಂಡಲಗಳನ್ನು ಸ್ಥಾಪಿಸಿ ಈ ಮಂಡಲಗಳ ಅಧೀನದಲ್ಲಿ ಸಾಕಷ್ಟು ಹಣವನ್ನು ಕೊಡುವ ಏರ್ಪಾಡೂ ಈ ಮಸೂದೆಯಲ್ಲಿದೆ

ಪ್ರಾಂತದಲ್ಲಿ ಎಷ್ಟೋ ಭೂಮಿಯು ಸಾಗುವಳಿಗೆ ತಕ್ಕದಾಗಿದ್ದರೂ ಅದನ್ನು ಸಾಗುವಳಿ ಮಾಡದೆ ಪಡಿಲಿಡುವದರಿಂದ ಇಂಥ ಭೂಮಿಯನ್ನು ಸಾಗುವಳಿ ಮಾಡಿಸುವದು ಅವಶ್ಯವಿದೆ ಸಾಗುವಳಿಯಾದ ಭೂಮಿಯಲ್ಲಿ ಕೂಡಾ ಪ್ರಾಂತದ ಜನರಿಗೆ ಅತ್ಯಂತ ಅವಶ್ಯವಿರುವ ಆಹಾರ ಧಾನ್ಯವನ್ನು ಬಿತ್ತಿ ಬೆಳೆಯದೆ ರೊಕ್ಕದ ಪೈರಾದ ಹತ್ತಿ, ತಂಬಾಕು ಮೊದಲಾದವುಗಳನ್ನು ಬೆಳೆಯಲಾಗುತ್ತಿದೆ ಇದೆಲ್ಲವನ್ನು ನಿಯಂತ್ರಿಸಿ ದೇಶದ ಹಿತದ ದೃಷ್ಟಿಯಿಂದ ಅವಶ್ಯವಿರುವ ಆಹಾರ ಮತ್ತು ಇತರ ಆವಶ್ಯಕ ಪೈರುಗಳನ್ನು ಬೆಳೆಸುವಂತೆ ಮಾಡುವದೇ ಈ ಮಸೂದೆಯ ಉದ್ದೇಶ ಅತೃಪ್ತಿಕರವಾದ ರೀತಿಯಲ್ಲಿ ಸಾಗುವಳಿ ಮಾಡುವವರ ಭೂಮಿಯನ್ನು ತೆಗೆದು ಬೇರೊಬ್ಬರಿಗೆ ಒಪ್ಪಿಸಲು ಅಧಿಕಾರಿಗಳಿಗೆ ಅಧಿಕಾರ ಕೊಡಲಾಗಿದೆ ಅಧಿಕಾರಿಗಳು ಈ ಕಾನೂನಿನನ್ವಯ ಕಾಲಕಾಲಕ್ಕೆ ಕೊಡುವ ಸೂಚನೆಗಳಂತೆ ವರ್ತಿಸದವರಿಗೆ ದಂಡ ವಿಧಿಸಲಾಗುವದು. ಈ ಕಾನೂನಿನಂತೆ ಯಾವದೇ ಕ್ರಮ ಅಥವಾ ವಿಧಿಸಿದ ಆಜ್ಞೆಯ ವಿರುದ್ಧ ವಿಚಾರಣೆಗೆ ಯಾವದೇ ಸಿವಿಲ್ ಕೋರ್ಟಿಗೆ ಅಧಿಕಾರವಿಲ್ಲವೆಂದೂ ಮಸೂದೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ

ನಮ್ಮ ಶಿಕ್ಷಣ ಕ್ರಮ

ವಿಶ್ವದ ಜನತೆಯ ಜನ್ಮಸಿದ್ಧ ಹಕ್ಕಿನಂತಿದ್ದರೇನೇ ವಿಶ್ವವಿದ್ಯಾಲಯವೆಂಬ ಹೆಸರು ಒಪ್ಪುವುದು

ಶ್ರೀ ವಿಠಲದಾಸ ಶೆಟ್ಟಿ, ವಿಟ್ಲ.

ಯಾವ ವಿಚಾರದಲ್ಲೇ ಆಗಲಿ, ಮಾನಸಿಕವಾಗಿರಲಿ, ಧಾರ್ಮಿಕವಾಗಿರಲಿ, ಸಾಮಾಜಿಕವಾಗಿರಲಿ, ರಾಜಕೀಯವಿರಲಿ, ಯಾವುದೇ ಇರಲಿ, ಪಾಶ್ಚಿಮಾತ್ಯರ ಹಾದಿಯೊಂದಾದರೆ ಹಿಂದೀಯರ ಹಾದಿ ಮತ್ತೊಂದು. ಇದು ಮೊದಲಿಂದಲೂ ನಡೆದು ಬಂದ ರೂಢಿ. ನಾವು ದೇವಾಲಯದೊಳಗೆ ಕಾಲಿಡುವ ಮೊದಲು ಪಾದರಕ್ಷೆಯನ್ನು ಕೆತ್ತಿಡುವುದಾದರೆ, ಅವರು ತಮ್ಮ ತಲೆಯ ಟೊಪ್ಪಿಯನ್ನು ಕಳಚುತ್ತಾರೆ. ನಮ್ಮ ದೇಶದಲ್ಲಿ ವಿಧವೆಯರ ಸಂಖ್ಯೆಯು ಏರುತ್ತಿರುವಾಗ, ಅವರಲ್ಲಿ ವಿವಾಹವಾಗದಿರುವ ತರುಣಿಯರ ತಂಡವು ಬೆಳೆಯುತ್ತಿದೆ. ನಾವು, ಕತ್ತೆ, ಗೂಗೆಗಳಂತಹ ಪ್ರಾಣಿಗಳನ್ನು ಅಪಶಕುನವೆಂದೆಣಿಸುವಾಗ ಅವರು ಅವುಗಳೇ ಶುಭ ಸೂಚನೆ ಎನ್ನುತ್ತಾರೆ. ನಾವು ನಮ್ಮ ಧರ್ಮ ಗ್ರಂಥ, ಮಂತ್ರ, ಔಷಧಿಗಳನ್ನು ಗುಪ್ತವಾಗಿಟ್ಟು ಜಗತ್ತಿನಿಂದ ಮಾಯವಾಗುವಂತೆ ಯತ್ನಿಸುತ್ತಿರುವಾಗ ಅವರು ತಾವು ಕಂಡು ಹಿಡಿದ ವಿಜ್ಞಾನದ ವಿಚಿತ್ರಗಳನ್ನು ಪ್ರಚಾರಗೊಳಿಸಿ ಅದರಿಂದ ಲೋಕ ಕಲ್ಯಾಣವಾಗುವಂತಹ ಸಾಹಸಗಳನ್ನು ನಡೆಯಿಸುತ್ತಾರೆ. ಹೀಗಿದೆ ನಮ್ಮೊಳಗಿನ ತಾರತಮ್ಯ, ವ್ಯತ್ಯಾಸಗಳು.

ಸಾಗದ ಹಾದಿ

ಸ್ಥಿತಿಯು ಹೀಗಿರುವಾಗ ಅವರ ಅನುಕರಣೆಯಾದ ನಮ್ಮ ಶಿಕ್ಷಣ ಕ್ರಮ, ವಿದ್ಯಾಲಯಗಳು, ವಿಶ್ವವಿದ್ಯಾಲಯಗಳು, ಇವುಗಳ ರೀತಿ ನೀತಿಗಳು, ನಮಗೆ ವಿಚಿತ್ರವಾಗಿ ಕಾಣಿಸುವುದರಲ್ಲಿ ಸೋಜಿಗವೇನಿದೆ ? ಒಂದಾನೊಂದು ಕಾಲದಲ್ಲಿ ವಿದ್ಯಾಭ್ಯಾಸದ ಮಟ್ಟಿಗೆ ಅವರ ಹಾದಿಯಲ್ಲೇ ನಾವು ಮುಂದೆ ಸಾಗಿದವರಾದರೂ, ಈಗೀಗ ಸಾಗದ ಹಾದಿಗೆ ನಾವು ಸಾಗುತ್ತೇವೆ. ಇದು ನಮ್ಮ ಹಳೆಯ ಹಾದಿಯೂ ಅಲ್ಲ ; ಅವರ ಹೊಸ ಹಾದಿಯೂ ಅಲ್ಲ. ಈ ಹಾದಿಯಿಂದ ಸಾಗಿದರೆ ನಮ್ಮ ಋಷಿಗಳೂ ಸಿಗಲಾರರು ಅವರ ವಿಜ್ಞಾನಿಗಳೂ ದೊರೆಯಲಾರರು. ಇದು 'ಶಕಾರ' ಮರುಭೂಮಿಯ ಹಾದಿ.

ಅವನತಿಯ ಕಾರಣ

ಪಾಶ್ಚಿಮಾತ್ಯ ರಾಷ್ಟ್ರಗಳ ವಿವಿಧ ಕ್ಷೇತ್ರಗಳಲ್ಲಿ ದಿನ ದಿನವೂ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿರುವಾಗ, ನಾವು ನಮ್ಮ ಶಿಕ್ಷಣ ಕ್ರಮ ವಿದ್ಯಾಲಯಗಳ ರೀತಿ ನೀತಿ ನಿಯಮಗಳನ್ನು ವೇದದಂತೆ ಕಾಪಾಡಿ ಕರ್ಮಠರಾಗಿ ಕುಳಿತಿದ್ದೇವೆ. ಅವರು ತಮ್ಮ ಶಿಕ್ಷಣ ಕ್ರಮ, ಪರೀಕ್ಷೆ ಮುಂತಾದುವುಗಳನ್ನು ಸಡಿಲಿಸುತ್ತಿರುವಾಗ, ನಾವು ನಮ್ಮ ಪರೀಕ್ಷೆಗಳನ್ನು ಬಿರುಸುಗೊಳಿಸಿ, ಸಾವಿರಾರು ಜನ ಯುವಕರ ಕತ್ತು ಹಿಸುಕುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಮ್ಮ ದೇಶದಲ್ಲಿ ವಿದ್ಯಾರ್ಥಿಗಳಗಾಗಿ ಆಗಾಗ ನಡೆಯುತ್ತಿರುವ ಪರೀಕ್ಷೆಗಳು ಮುಗಿದು ಜಯಾಪಜಯಗಳ ಪಟ್ಟಿಯು ಬಹಿರಂಗವಾದ ಮರುದಿನದ ಪತ್ರಿಕೆಯಲ್ಲೇ ಓದುತ್ತೇವೆ, "ವಿದ್ಯಾರ್ಥಿಯೊಬ್ಬ ತಾನು ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲವೆಂದು ಆತ್ಮಹತ್ಯೆ ಮಾಡಿಕೊಂಡ" "ವಿದ್ಯಾರ್ಥಿನಿಯೊಬ್ಬಳು ತಾನು ತೇರ್ಗಡೆಯಾಗದ ಸುದ್ದಿಯನ್ನು ಕೇಳಿದೊಡನೆಯೇ ಹೃದಯ ಸ್ತಂಭನದಿಂದ ಮಡಿದಳು" 'ಒಬ್ಬ ಊರು ಬಿಟ್ಟು ನಡೆದ' 'ಇನ್ನೊಬ್ಬಳಿಗೆ ಹುಚ್ಚು ಹಿಡಿಯಿತು' ಇತ್ಯಾದಿ, ದುರಂತದ ಕತೆ ಕರುಳನ್ನು ಕೊಯ್ಯುತ್ತಿದೆ. ಇದಲ್ಲದೆ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಸಾವಿರಾರು ತರುಣ ತರುಣಿಯರು ತಾವು ಯಾವುದೋ ಒಂದು ಭಯಂಕರ ಅಪಗಡದಲ್ಲಿ ಸಿಕ್ಕಿ ಬಿದ್ದು ಸರ್ವನಾಶ ಹೊಂದಿದೆವೆಣಿಸಿ, ಸಿಡುಮಿಡಿಗೊಳ್ಳುತ್ತಾ, ಮಿಡುಕುತ್ತಾ, ಮಮ್ಮಲನೆ ಮರುಗುತ್ತ, ತಮ್ಮನ್ನು ಯಾರಿಗೂ ಯಾವುದಕ್ಕೂ ಬೇಡದ ವ್ಯಕ್ತಿಗಳೆಂದೆಣಿಸಿ ಜೀವನದಲ್ಲೇ ನಿತ್ಸಾರ ತಾಳಿ ನಿರಾಶಾವಾದಿಗಳಾಗುತ್ತಾರೆ. ಇದರಿಂದಾಗಿ ಅನೇಕ ಕುಟುಂಬಗಳೇ ದುಃಖಕ್ಕೀಡಾಗುತ್ತಿವೆ. ಇಂಥಾ ವ್ಯಕ್ತಿಗಳು ಸಮಾಜದಲ್ಲಿ ತುಂಬಿದರೆಂದರೆ ಅದು ಆ ಸಮಾಜದ ಅವನತಿಗೆ ಕಾರಣವಾಗುವುದು. ಕೊನೆಗೆ ಇಡೀ ರಾಷ್ಟ್ರದ ಪ್ರಗತಿಯನ್ನೇ ತಡಗಟ್ಟನಿಲ್ಲಿಸಲು ಅವರು ಕಾರಣ ಭೂತರಾಗುವರು. ಬ್ರಿಟನಿನ ಪ್ರಖ್ಯಾತ ವಿದ್ಯಾ ಶಾಸ್ತ್ರಜ್ಞನಾದ, ಸರ್ ಫಿಲಿಪ್ ಹಾರ್ ಟೋಗ್, ಎಂಬವನು 1936 ನೇ ಇಸವಿಯಲ್ಲಿ ಅಲ್ಲಿಯ ರಾಷ್ಟ್ರೀಯ ಅಧ್ಯಾಪಕ ಸಂಘದ ಸಭೆಯಲ್ಲಿ ಮಾತಾಡುತ್ತಾ, "ಶಾಲೆ ಮತ್ತು ಕಾಲೇಜು ಪರೀಕ್ಷೆಗಳಿಂದಾಗುವ ಅತ್ಯಂತ ಹಾನಿಯೆಂದರೆ ಅಂಥಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದದ ವಿದ್ಯಾರ್ಥಿಗಳಿಗೆ" ಎಂದಿದ್ದಾನೆ. ಈ ಮಾತು ನಮಗೆ ಇಂದಿಗೂ ಅನ್ವಯಿಸುತ್ತದೆ.

ಬದಲಾವಣೆ ಬೇಕು

ನಮ್ಮ ರಾಷ್ಟ್ರದ ತರುಣರ ವಿದ್ಯಾಭ್ಯಾಸವು ಒಂದು ದೊಡ್ಡ ಹುಣ್ಣು. ಇದರ ರೀತಿ, ನೀತಿ, ನಿಯಮ, ಕ್ರಮಗಳನ್ನು ಬದಲಾಯಿಸುವ ಜವಾಬ್ದಾರಿಯನ್ನು ಕೇವಲ ಅಧ್ಯಾಪಕವೃಂದಕ್ಕೂ, ವಿಶ್ವವಿದ್ಯಾಲಯಗಳಿಗೂ ಒಪ್ಪಿಸಿದರೆ ಸಾಲದು. ಇದು ಪ್ರತಿಯೊಬ್ಬನೂ ಹೊರಲೇ ಬೇಕಾದ ಹೊರೆ. ಒಂದು ವಿಶ್ವವಿದ್ಯಾಲಯವು ಇನ್ನೊಂದರೊಡನೆ ಸ್ಪರ್ಧಿಸಿ ಪರೀಕ್ಷೆಗಳನ್ನು ಮಿತಿಯಿಂದ ಬಿರುಸುಗೊಳಿಸಿ ಬೊಳ್ಳು ಗೌರವಕ್ಕಾಗಿ ಸಾವಿರಾರು ಜನ ಯುವಕ ಯುವತಿಯರ ಭಾವೀ ಜೀವನವನ್ನು ಗರ್ಭದಲ್ಲೇ ಹಿಸುಕುವ ನಿದರ್ಶನಗಳು ಕಾಣ ಬರುತ್ತಿವೆ. ಈ ರೀತಿಯ ಸ್ವಭಾವವು ಬೆಳೆದು ಬಂದರೆ, ಒಂದು ರಾಷ್ಟ್ರ, ಜನಾಂಗ ಮಾತ್ರವಲ್ಲ ಇಡೀ ಮಾನವ ವರ್ಗದ ಪುರೋಗತಿಯೇ ತಡೆದು ನಿಲ್ಲಬಹುದು. ಎಳೆಯ ಪ್ರಾಯದ ತರುಣರಲ್ಲಿ ಮೊಳೆಕೆಯಲ್ಲಿರುವ ಸವಿಗನಸುಗಳನ್ನು ಸಿಡಿದೊಡೆದರೆ ಮುಂದೆ ನಿರಾಶಾವಾದಿಗಳಾಗಿ, ತಮ್ಮಲ್ಲಿರುವ ಮಹತ್ವಾಕಾಂಕ್ಷೆಗಳು ಮಾಯವಾಗಿ, ತಮ್ಮಲ್ಲಿ ತಮಗಿರುವ ವಿಶ್ವಾಸವು ನಾಶವಾಗಿ, ಉತ್ತೇಜನ ರಹಿತವಾದ ಮಾನವಕುಲವು ಬೆಳೆದು ಇದರಿಂದಾಗಿ ಜಗತ್ತಿಗೇ ಹಾನಿಯಾಗಬಹುದು. ಇದೇ ವಿಚಾರವನ್ನು ವಿಸ್ತಾರವಾಗಿ ವಿವರಿಸುತ್ತಾ, ಇದೇ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾ, ಜಗತ್ತಿನಲ್ಲೇ ಪ್ರಸಿದ್ಧನಾದ ಮನೋಶಾಸ್ತ್ರಜ್ಞ, 'ಸಿಗ್‌ಮಂಡ್-ಫ್ರಾಯ್ಡ್' ಎಂಬವನು ಹೇಳಿದ ಮಾತುಗಳನ್ನು ಇಲ್ಲಿ ಕೊಡಲಾಗಿದೆ. "ಮನುಷ್ಯನು ಮಾಡುವ ಕಾರ್ಯಕಲಾಪಗಳು ಎರಡು ಧ್ಯೇಯಗಳಿಂದ ಮೊಳೆದೋರುತ್ತಿವೆ. ಒಂದನೆಯದಾಗಿ ಕಾಮಾತುರ ಪ್ರೇರಣೆಯಿಂದ, ಎರಡನೆಯದಾಗಿ ಮಹಾಶ್ರೇಷ್ಠ ಅಥವಾ ಗೌರವವಂತನಾಗ ಬೇಕೆಂಬ ಅಪೇಕ್ಷೆಯಿಂದ. ಮಹಾ ಶ್ರೇಷ್ಠ ಅಥವಾ ಗೌರವವಂತನಾಗಬೇಕೆಂಬ ಅಪೇಕ್ಷೆಯು ಮನುಷ್ಯತ್ವದ ಸಹಜಗುಣ. ಇಂತಹ ಮಹಾಕಾಂಕ್ಷೆ, ಶ್ರೇಷ್ಠನಾಗ ಬೇಕೆಂಬ ಅಚಲವಾದ ಇಚ್ಛೆ ಮೊದಲಾದ ಗುಣಗಳು ಮನುಷ್ಯತ್ವದಲ್ಲಿ ವ್ಯಾಪಿಸದಿರುತ್ತಿದ್ದರೆ, ಜಗತ್ತಿನಲ್ಲಿ ನಾವು ಇಂದು ಕಾಣುವ ನಾಗರಿಕತೆ, ಪ್ರಗತಿ ಮೊದಲಾದುವು ಈ ಮಟ್ಟಕ್ಕೆ ಬಾರದೆ, ಮನುಷ್ಯನು ಇನ್ನೂ ಗುಹೆಗಳಲ್ಲಿಯೋ ಪರ್ವತಗಳಲ್ಲಿಯೋ ವಾಸಿಸುತ್ತಿರಬಹುದಿತ್ತು." ಇಂಥಾ ಮಹಾಕಾಂಕ್ಷೆಗಳು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಾರದ ಎಷ್ಟು ತರುಣ ತರುಣಿಯರಲ್ಲಿ ಅಳಿಯದೆ ಉಳಿಯಬಹುದು ಎಂಬುದನ್ನು ಓದುಗರೇ ಊಹಿಸಿಕೊಳ್ಳಬೇಕಾಗಿದೆ. ನಮ್ಮ ರಾಷ್ಟ್ರದ ಹಾಗೂ ಮಾನವ ವರ್ಗದ ಹಿತ ದೃಷ್ಟಿಯಿಂದ ಒಡನೆಯೇ ನಮ್ಮ ವಿದ್ಯಾರ್ಥಿಗಳಗಾಗಿರುವ ಪರೀಕ್ಷೆಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಬೇಕಾಗಿದೆ ; ಪಾಶ್ಚಿಮಾತ್ಯ ರಾಷ್ಟ್ರಗಳು ಈ ಹಾದಿಯಲ್ಲಿ ಎಷ್ಟೋ ನಮ್ಮಿಂದ ಮುಂದೆ ಸಾಗಿದ್ದಾರೆ ಎಂಬುದು ನಿರ್ವಿವಾದ.

ಹಳೆಯ ಕಾಲದ್ದು

ಈಗ ನಮ್ಮ ದೇಶದಲ್ಲಿ ಪ್ರಚಲಿತವಾಗಿರುವ ಶಿಕ್ಷಣ ಕ್ರಮವು ಇಂಗ್ಲೆಂಡಿನಲ್ಲಿರುವ 'ಆಕ್ಸ್‌ಫರ್ಡ್' ಮತ್ತು 'ಲಂಡನ್' ವಿಶ್ವವಿದ್ಯಾಲಯಗಳ ಹಳೆಯ ಕಾಲದ ಸಾರ್ವವಿಷಯಕ ಪರಿಜ್ಞಾನ ನೀಡುವ ಸೂತ್ರದ (Liberal Education) ಅನುಕರಣೆಯಾಗಿದೆ. ಕಾಲವು ಬದಲಾದಂತೆಯೇ ಆ ವಿಶ್ವವಿದ್ಯಾಲಯಗಳ ಶಿಕ್ಷಣ ಕ್ರಮವೂ ಬದಲಾಗುತ್ತಾ

ಬಂದಿದೆ. ಆದರೆ ನಾವು ಮಾತ್ರ 'ಅಪ್ಪನೆಟ್ಟ ಆಲದ ಮರ' ದಡಿಯಲ್ಲೇ ಕುಳಿತು ತಪಸ್ಸು ಮಾಡುತ್ತಿದ್ದೇವೆ. ನಮ್ಮ ವಿದ್ಯಾಭ್ಯಾಸದ ಈ ಶೋಚನೀಯ ಸ್ಥಿತಿಯನ್ನು ಕಂಡು ಸಹಿಸಲಾರದೆ ಮಹಾತ್ಮಾಜಿಯವರು 1938 ರಲ್ಲಿ 'ಹರಿಜನ' ಪತ್ರಿಕೆಯಲ್ಲಿ ಬರೆದ ಮಾತು ಇಂದಿಗೂ ಕಟು ಸತ್ಯವಾಗಿ ನಮ್ಮ ಕಣ್ಣ ಮುಂದಿದೆ. "ಬಾಯಿಪಾಠದಿಂದತನ್ನ ಮಿದುಳು ತುಂಬಿರುವ ಮತ್ತು ಆಂಗ್ಲೇಯರಂತೆ ಇಂಗ್ಲಿಷನ್ನು ಬರೆಯಲಿಕ್ಕೂ ಮಾತಾಡಲಿಕ್ಕೂ ಪ್ರಯತ್ನಪಟ್ಟು ಅಸಾಧ್ಯವಾಗಿ ದುರ್ಬಲ ಹೊಂದಿದ ಮನಸ್ಸಿನಿಂದ ಕೂಡಿರುವ ಬಿ.ಎ. ಮತ್ತು ಎಂ.ಎ. ಡಿಗ್ರಿಯವರ ಒಂದು ಸೈನ್ಯದಂತಿರುವ ತರುಣರ ತಂಡವೆಂದೂ ಸ್ವತಂತ್ರ ಭಾರತದಲ್ಲಿರಲಾರದು ಎಂಬುದು ನನ್ನ ದೃಢವಾದ ವಿಶ್ವಾಸ. ಇಂತವರಲ್ಲಿ ಒಹುಮಂದಿಗೆ ಕೆಲಸವಾಗಲೀ, ನೌಕರಿಯಾಗಲೀ, ಇರುವುದಿಲ್ಲ. ಇರುವುದಾದರೆ ಅದು ಬರಿಯ ಗುಮಾಸ್ತಿಕೆಯಾಗಿರುವುದು. ಇದು ತಾವು 12 ವರ್ಷ ಶಾಲೆ, ಕಾಲೇಜುಗಳಲ್ಲಿ ಪಡೆದ ವಿದ್ಯಾ ಅಥವಾ ವಿಜ್ಞಾನದ ಪ್ರಯೋಜನ. ತನ್ನ ವ್ಯಕ್ತಿತ್ವಕ್ಕಾಗಲೀ ಅಥವಾ ತನ್ನ ರಾಷ್ಟ್ರಕ್ಕಾಗಲೀ ಏನೊಂದೂ ಪ್ರಯೋಜನಕಾರಿ ಯಾಗದ ಶಿಕ್ಷಣ ಕ್ರಮವನ್ನು ಆದರಿಸಿ ಮಾತಾಡುವುದು ಮಹಾ ಪಾತಕ."

ವಿಶ್ವವಿದ್ಯಾಲಯ

ಇಂದು ನಮ್ಮ ದೇಶ ಸ್ವತಂತ್ರವಾಗಿದೆ. ಮುಂದಿನ ತರುಣರು ಬರಿಯ ಗುಮಾಸ್ತಗಿರಿಯ ಗುಲಾಮರಾಗುವವರಲ್ಲ. ಮುಂದಿನ ಜನಾಂಗವನ್ನು ಕಟ್ಟಿ ಅಳಿಸದೆ ಉಳಿಸುವ ಜವಾಬ್ದಾರಿ ಅವರದಿದೆ; ಇದಕ್ಕಾಗಿ ತಯಾರಾಗೊಳಿಸುವ ವಿದ್ಯಾಭ್ಯಾಸ ಬೇಕಾಗಿದೆ ನಮ್ಮ ಕೋಟಿಗಟ್ಟಳೆ ತರುಣ ತರುಣಿಯರಿಗೆ. ಈ ದೃಷ್ಟಿಯಿಂದ ನಮ್ಮ ಜನತಾ ಸರಕಾರಗಳು ಮುಂದೆ ಸಾಗಬೇಕಾಗಿದೆ. ಈ ಅಭಿಪ್ರಾಯವನ್ನು ಒಪ್ಪದವರು ಅನೇಕರಿರಬಹುದು. ರಾಜಕೀಯ ಕಾರ್ಯಕರ್ತರು ಹಾಗೂ ರಾಜಕೀಯ ಪಕ್ಷಗಳ ಆಧೀನವಿರುವ ಸರಕಾರ ವಿದ್ಯಾಭ್ಯಾಸದ ವಿಚಾರದಲ್ಲಿ ಕೈಹಾಕದೆ, ವಿದ್ಯಾಕ್ಷೇತ್ರದಲ್ಲೇ ದುಡಿದ ಕೆಲವರಿಗೆ ಈ ಕೆಲಸವನ್ನು ಬಿಟ್ಟು ಬಿಡಬೇಕು ಎನ್ನುವವರು ವಿರಳವಲ್ಲ. ಅಲ್ಲದೆ, 'ವಿಶ್ವವಿದ್ಯಾಲಯಗಳು ಸರ್ವ ಸ್ವತಂತ್ರವಾಗಿರಬೇಕು' ಎಂಬ ಘೋಷಣೆ ಈಗಾಗ ಗಟ್ಟಿಯಾಗಿ ಕೇಳಬರುತ್ತಿದೆ. ವಿಶ್ವವಿದ್ಯಾಲಯಗಳ ಸ್ವತಂತ್ರತೆಗೆ ಧಕ್ಕೆ ತಗಲುವ ಯಾವ ಕಾರ್ಯಕ್ರಮವನ್ನು ಕೈಕೊಂಡರೂ ಅದು ಪ್ರಗತಿಪರ, ಅಥವಾ ಪುರೋಗತಿ ಲಕ್ಷಣವಲ್ಲ ಎಂಬುದನ್ನು ಒಪ್ಪಿಕೊಳ್ಳಬಹುದಾದರೂ, ನಮ್ಮ ದೇಶದ ಈಗಿನ ಪರಿಸ್ಥಿತಿಯಲ್ಲಿ, ವಾತಾವರಣದಲ್ಲಿ ಅದು ಸಮಂಜಸವೆನಿಸದು. ಪರಕೀಯ ರಾಜ್ಯಭಾರಕಾಲದಲ್ಲಿ ಸಂಗ್ರಹವಾದ ಹೊಲಸು ಒಮ್ಮೆ ತೊಳೆದು ಹೋಗಬೇಕಾದರೆ, ನಿರಂಕುಶ ಪ್ರಭುತ್ವದಡಿಯಲ್ಲಿ ಬೆಳೆದುಬಂದ ವಿಶ್ವವಿದ್ಯಾಲಯಗಳೇ ಇರಲಿ, ಇನ್ನು ಯಾವುದೇ ಇರಲಿ, ಒಮ್ಮೆ ಅವುಗಳಿಗೆ ಜನತಾ ಸರಕಾರವು ಹಗ್ಗ ಹಾಕಿ ಹತೋಟಿಯಲ್ಲಿಟ್ಟುಕೊಳ್ಳ ಬೇಕಾಗುತ್ತದೆ. ಇಲ್ಲದಿದ್ದರೆ ದೇಶಕ್ಕೆ ಹಾನಿಯಾಗಬಹುದು. ಆದುದರಿಂದ ನಮ್ಮ ಜನತಾ ಸರಕಾರಗಳು ನಿರ್ದಾಕ್ಷಿಣ್ಯವಾಗಿ ನಮ್ಮ ವಿಶ್ವವಿದ್ಯಾಲಯಗಳ ಶಿಕ್ಷಣ ಕ್ರಮದಲ್ಲಿಯೂ ಬದಲಾವಣೆಗಳನ್ನು ಮಾಡುವ ಹೊಣೆಯನ್ನು ಹೊರಬೇಕಾಗಿದೆ.

ಭಾರತದಲ್ಲಿ ಹೆಚ್ಚು ಕಡಮೆ 23 ವಿಶ್ವವಿದ್ಯಾಲಯಗಳಿವೆ, ಜನಸಂಖ್ಯೆ 360 ಮಿಲಿಯ. ಬ್ರಿಟನಿನಲ್ಲಿ 12 ವಿಶ್ವವಿದ್ಯಾಲಯಗಳಿವೆ, ಜನಸಂಖ್ಯೆ 41 ಮಿಲಿಯ. ಕೆನಡಾದಲ್ಲಿ 13 ವಿಶ್ವವಿದ್ಯಾಲಯಗಳಿವೆ, ಜನಸಂಖ್ಯೆ 8½ ಮಿಲಿಯ. ಅಮೇರಿಕದಲ್ಲಿ 1,720 ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯ ದಂತಹ ವಿದ್ಯಾ ಕೇಂದ್ರಗಳಿವೆ, ಜನಸಂಖ್ಯೆ 130 ಮಿಲಿಯ. ಈ ತಾರತಮ್ಯಗಳನ್ನು ತುಲನೆ ಮಾಡಿ ನೋಡಿದರೆ ತಿಳಿಯುತ್ತಿದೆ ನಾವು ಈ ಕ್ಷೇತ್ರದಲ್ಲಿ ಎಷ್ಟು ಹಿಂದುಳಿದಿದ್ದೇವೆ ಎಂಬುದು. ನಮ್ಮ ದೇಶದಲ್ಲಿ ಶೇಕಡ 90 ಜನ ನಿರಕ್ಷರಜ್ಞರಾಗಿದ್ದಾರೆ. ಹೆಚ್ಚು ಕಡಮೆ 200 ಜನರಲ್ಲಿ ಒಬ್ಬನಿಗೆ ವಿಶ್ವವಿದ್ಯಾಲಯದಲ್ಲಿ ಪ್ರವೇಶ ದೊರೆಯುತ್ತಿದೆ. ಈ ಪೈಕಿ ಶೇಕಡ 25 ಜನರು ಪರೀಕ್ಷೆಗಳಲ್ಲಿ ತೇರ್ಗಡೆಯಾಗಲಾರದೆ ತಮ್ಮ ವಿದ್ಯಾಭ್ಯಾಸವನ್ನು ಅರ್ಧದಲ್ಲೇ ನಿಲ್ಲಿಸುವವರು. ಶೇಕಡ 15 ಜನರ ಆರ್ಥಿಕ ಸ್ಥಿತಿಯು ಹಾಳಾಗಿ ಅಡಚಣೆಯು ಬಲವಾಗಿ ಅಭ್ಯಾಸವನ್ನು ಅರ್ಧದಲ್ಲೇ ನಿಲ್ಲಿಸಿ ಯಾವುದೋ ಸರಕಾರಿ ಕಚೇರಿಯಲ್ಲಿ ಗುಮಾಸ್ತರಾಗಿ ಸೇರುವವರು; ಅಥವಾ ಸಣ್ಣ ಪುಟ್ಟ ವ್ಯಾಪಾರ ಮಾಡಿ ಜೀವನಸಾಗಿಸುವವರು. ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ಪಾಸಾಗಿ ಪದವೀಧರರಾಗಿ ಬಂದವರ ಸ್ಥಿತಿ ಇನ್ನೂ ವಿಚಿತ್ರ ಮತ್ತು ಚಿಂತಾ ಜನಕವಾಗಿರುತ್ತದೆ. ಸರಕಾರದ ನೌಕರಿಯೊಂದಕ್ಕಲ್ಲದೆ, ಬೇರೆ ಯಾವುದಕ್ಕೂ ತಾವು ಯೋಗ್ಯರಲ್ಲ, ಮತ್ತು ಬೇರೆ ಯಾವ ರೀತಿಯ ಕೆಲಸಮಾಡಿದರೂ ತಮ್ಮ ಗೌರವಕ್ಕೆ ಕುಂದುತರಬಹುದು ಎಂಬ ಭಾವನೆಯು ಅವರಲ್ಲಿ ಬೆಳೆದು ಪರಿಪೂರ್ಣವಾಗಿರುತ್ತದೆ ಕೆಲವರಿಗೆ ಸರಕಾರೀ ಹುದ್ದೆಗಳು ಸಿಕ್ಕಿದವೆಂದರೆ ಸಂತೃಪ್ತರಾಗಿ ಸಂತೋಷ ಚಿತ್ತರಾಗುತ್ತಾರೆ. ಬಾಕಿ ಕೆಲವರು ದೇಶದ ದೊಡ್ಡ ದೊಡ್ಡ ಪಟ್ಟಣಗಳನ್ನು ಸೇರಿ ಯಾವುದಾದರೂ ಕಂಪೆನಿಯಲ್ಲಿ ಕಾರಕೂನರಾಗಿಯೋ ಅಥವಾ ಬೇರೆ ಯಾವ ರೀತಿಯಲ್ಲೋ ದುಡಿದು ಜೀವಿಸುತ್ತಾರೆ. ಹಳ್ಳಿಯಲ್ಲೇ ಹುಟ್ಟಿ ಬೆಳೆದ ಹುಡುಗನೊಬ್ಬ ವಿಶ್ವವಿದ್ಯಾಲಯದ ಪದವೀಧರನೆಂದಾದರೆ ಸಾಕು. ಅಂದಿನಿಂದ ಅವನು ಮರಳಿ ತನ್ನ ಹುಟ್ಟು ಹಳ್ಳಿಗೆ ಒಂದು ನೆಲಸುವ ಆಶೆಯನ್ನೇ ಬಿಟ್ಟು ಬಿಡ ಬೇಕಾಗುತ್ತದೆ. ವ್ಯವಹಾರ ದೃಷ್ಟಿಯಿಂದಲಾದರೂ, ತನ್ನ ಸ್ವಂತ ವ್ಯಕ್ತಿತ್ವದ ಪುರೋಗತಿ ಏಳಿಗೆಯ ದೃಷ್ಟಿಯಿಂದಲಾದರೂ ಆತನು ಮರಳಿ ಹಳ್ಳಿಯಲ್ಲಿ ಜೀವಿಸುವುದರಿಂದ ಎಂದೆಂದೂ ಒಳಿತಾಗದು. ಹಳ್ಳಿಗಳ ಸಮಾಜಗಳಲ್ಲಿ ಕೂಡಾ ಇದೊಂದು ನವೀನ ರೂಢಿಯಾಗಿ ಬಿಟ್ಟಿದೆ ಎಷ್ಟು ಜನ ವಿದ್ಯಾರ್ಥಿಗಳು ಹಳ್ಳಿಯಿಂದ ಪೇಟೆಗಳಿಗೆ ಅಥವಾ ಪಟ್ಟಣಗಳಿಗೆ ಹೋಗಿ ವಿದ್ಯಾಭ್ಯಾಸವನ್ನು ಪಡೆಯುತ್ತಾರೋ, ಅವರ ಪೈಕಿ ಶೇಕಡ 95 ಜನರು ಮರಳಿ ಹಳ್ಳಿಯಲ್ಲಿ ಒಂದು ನೆಲಸುವ ಆಶೆಯನ್ನೇ ಬಿಟ್ಟು ಬಿಡುತ್ತಾರೆ. ಇದರಿಂದಾಗಿ ಹಳ್ಳಿಗಳೆಲ್ಲಾ ಮತ್ತೂ ಮತ್ತು ಅವಿದ್ಯಾವಂತರ ನೆಲೆಬೀಡಾಗಿಯೇ ಉಳಿಯುತ್ತಿವೆ. ಹೀಗಿದೆ ಇಂದಿನ ತನಕದ ನಮ್ಮ ವಿದ್ಯಾಭ್ಯಾಸದ ಇತಿಹಾಸ.

ವಿದ್ಯಾಸೌಕರ್ಯ

ನಾವು ಯಾರ ಅನುಕರಣೆಯನ್ನು ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಈಗಲೂ ಗೌರವವಾಗಿ ಇಟ್ಟುಕೊಂಡು ನಮ್ಮ ಧರ್ಮ ಗ್ರಂಥಗಳಂದ ಹೆಚ್ಚಿನ ಮಹತ್ವದ ಮನ್ನಣೆಯನ್ನು ಕೊಡುತ್ತಿದ್ದೇವೋ ಅಂಥಾ ವಿದ್ಯಾಭ್ಯಾಸ ಕ್ರಮದ ಮೂಲಕಾರಕರಾದ ಬ್ರಿಟಿಷರು ಅದರಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಯನ್ನು ಮಾಡಿರುವರೆಂಬುದನ್ನು ಈ ಮೊದಲೇ ಹೇಳಿದೆಯಷ್ಟೆ. ಏನೆಲ್ಲಾ ಬದಲಾವಣೆಯಾಗಿದೆ ಎಂಬುದನ್ನು ವಿಸ್ತಾರವಾಗಿ ವಿವರಿಸುವುದು ಈ ಚಿಕ್ಕ ಲೇಖನದಲ್ಲಿ ಸಾಧ್ಯವಲ್ಲವಾದರೂ, ಕೆಲವು ವಿಷಯಗಳನ್ನು ಎತ್ತಿತೋರಿಸುವುದು ಆವಶ್ಯವಾಗಿ ಕಾಣುತ್ತದೆ. ಮೊದಲನೆಯದಾಗಿ ಇಂಗ್ಲೆಂಡಿನಲ್ಲಿ, ನಮ್ಮ ದೇಶದಲ್ಲಿ ವಿಶ್ವವಿದ್ಯಾಲಯಗಳ ಪದವಿಗಿರುವ ಮನ್ನಣೆಯೇ ಇರಲಾರದು. ನಮ್ಮಲ್ಲಿ ಯಾವ ರೀತಿಯ ಉಚ್ಚ ತರಗತಿಯ ಔದ್ಯೋಗಿಕ ಅಥವಾ ಲಾಕ್ಷಣಿಕ ಶಿಕ್ಷಣವು ಸಿಗಬೇಕಾದರೆ, ನಮ್ಮಂದವಟ್ಟ ವಿದ್ಯಾರ್ಥಿಯು ಅಗತ್ಯವಾಗಿ ವಿಶ್ವವಿದ್ಯಾಲಯದ ಯಾವುದೋ ಒಂದು ನಿಯಮಿತ ಪರೀಕ್ಷೆಯಲ್ಲಿ ಪಾಸಾದವನೋಆಗಿರಬೇಕಾಗುತ್ತದೆ. ಆದರೆ ಇಂಗ್ಲೆಂಡಿನ ಪ್ರಕೃತದ ಸ್ಥಿತಿಯೇ ಬೇರೆ, ಹೆಚ್ಚು ಕಡಮೆ ಒಂದೆರಡು ವಿಷಯಗಳನ್ನು ಬಿಟ್ಟು ಬಾಕಿ ಎಲ್ಲಾ ರೀತಿಯ ಉಚ್ಚ ಶಿಕ್ಷಣ ವಿಶ್ವವಿದ್ಯಾಲಯದ ಮೆಟ್ಟಿಲನ್ನೇ ಹತ್ತದೆ ಪಡೆದುಕೊಳ್ಳಬಹುದಾಗಿದೆ. ಮಾತ್ರವಲ್ಲ ಹೆಚ್ಚಿನ ಅಂಥಾ ಔದ್ಯೋಗಿಕ ಶಿಕ್ಷಣಾಲಯಗಳು ಸ್ವತಂತ್ರವಾಗಿದ್ದು ಅವುಗಳ ಪರೀಕ್ಷೆಗಳೂ ಕೂಡ ಸ್ವತಂತ್ರವಾಗಿ ನಡೆಸಲ್ಪಡುತ್ತವೆ. ಉದಾಹರಣೆಗಾಗಿ : (Inns of Court for Barristers ; The Incorporated Law Society for Solicitors; The Chartered Institute of Accountants) ಇತ್ಯಾದಿಗಳು ಹೆಚ್ಚು ಕಡಮೆ ಸರ್ವ ಸ್ವತಂತ್ರವಾಗಿದೆ 'ಲಂಡನ್ ಮೆಟ್ರಿಕ್' ಅಥವಾ 'ಸೀನಿಯರ್ ಕೇಂಬ್ರಿಜ್' ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಈ ವಿದ್ಯಾ ಕೇಂದ್ರಗಳಲ್ಲಿ ಪ್ರವೇಶವಿದೆ ಈ ಪರೀಕ್ಷೆಗಳನ್ನು ಖಾಸಗಿಯಾಗಿ ಅಭ್ಯಾಸಮಾಡಿ ತೇರ್ಗಡೆ ಹೊಂದುವ ಸವುಲತ್ತು ಎಲ್ಲರಿಗೂ ಇಂಗ್ಲೆಂಡಿನಲ್ಲಿದೆ ನಮ್ಮ ಹಿಂದಿನ ಐ.ಸಿ.ಎಸ್ ಪರೀಕ್ಷೆಗೆ ಕೂಡಾ ಪ್ರವೇಶ ದೊರೆಯ ಬೇಕಾದರೆ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ಸಾಕು. ಮಾತ್ರವಲ್ಲ ಲಂಡನ್ ವಿಶ್ವವಿದ್ಯಾಲಯದ ಬಿ.ಎ, ಬಿ.ಎಸ್.ಸಿ. ಎಲ್.ಎಲ್.ಬಿ. ಮೊದಲಾದ ಪರೀಕ್ಷೆಗಳಿಗೆ ಖಾಸಗಿ ಅಭ್ಯಾಸ ಮಾಡಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಪದವಿಯನ್ನು ಪಡೆಯುವ ಅನುಕೂಲವೂ ಬ್ರಿಟನಿನಲ್ಲಿದೆ.

ತೀರ ವ್ಯತಿರಿಕ್ತ

ನಮ್ಮ ಆರ್ಥಿಕ ಮುಗ್ಗಟ್ಟಿನಿಂದಾಗಿ ವಿಶ್ವವಿದ್ಯಾಲಯದ ಅಭ್ಯಾಸವೇ ನಮಗೊಂದು ಹೊರಲಾರದ ಭಾರವಾಗಿರುವಾಗ, ಯಾವ ರೀತಿಯಲ್ಲೂ ಸಾಧಾರಣ ಜನರು ಖಾಸಗಿಯಾಗಿ ಅಭ್ಯಾಸ ಮಾಡಿ ವಿಶ್ವವಿದ್ಯಾಲಯದ ಪದವೀಧರರಾಗದಂತಹ ಅನಾವಶ್ಯಕ ನಿರ್ಬಂಧಗಳನ್ನು ಕಿತ್ತು ಹಾಕದಿರುವುದು ಅತ್ಯಂತ ಶೋಚನೀಯವಾಗಿರುತ್ತದೆ. ಅಮೇರಿಕ ಮೊದಲಾದ ನಾಗರಿಕ ರಾಷ್ಟ್ರಗಳಲ್ಲಿ ಎಷ್ಟೋ ಜನ ಕೂಲಿ ಕೆಲಸಗಾರರು, ಹೋಟೇಲು ಹುಡುಗರು, ಕಾರಕೂನ ಮೊದಲಾದವರು ತಮ್ಮ ತಮ್ಮ ಕೆಲಸಗಳನ್ನು ನಡೆಯಿಸಿ ಜೀವನ ಮಾಡುತ್ತಿದ್ದಂತೆಯೇ ವಿಶ್ವವಿದ್ಯಾಲಯಗಳ ಪರೀಕ್ಷೆಗಳಿಗೆ ಖಾಸಗಿಯಾಗಿ ಅಭ್ಯಾಸ ಮಾಡಿ ಉತ್ತೀರ್ಣರಾಗುವುದು ವಾಡಿಕೆಯಾಗಿದೆ. ಆದರೆ ಭಾರತದ ರೀತಿ ಇದಕ್ಕೆ ತೀರ

ವ್ಯತಿರಿಕ್ತವಾಗಿದೆ. ಶಾಲಾ ಕಾಲೇಜುಗಳ 'ಜೈಲು ವಾಸ' ಅನುಭವಿಸದವನಿಗೇ ವಿಶ್ವವಿದ್ಯಾಲಯದ ಪದವಿಗಳು ಎಂಬುದು ಶಾಸನವಾಗಿದೆ. ಇದರಿಂದಾಗಿ ಅನೇಕ ವ್ಯಕ್ತಿಗಳಿಗೆ ಮಾತ್ರವಲ್ಲ ಇಡೀ ರಾಷ್ಟ್ರದ ವಿದ್ಯಾ ಸಂಪತ್ತಿಗೆ ಹಾನಿಯಾಗುತ್ತಿದೆ. ಇದೇ ವಾದವನ್ನು ಪುಷ್ಟೀಕರಿಸುತ್ತಾ ಸರ್ ಪಿ. ಸಿ. ರೇಯವರು ಬೆನಾರಿಸ್ ವಿಶ್ವವಿದ್ಯಾಲಯದ 1929 ರಲ್ಲಿ ಜರಗಿದ 'ಕಾನ್ವೊಕೇಶನ್' (convocation) ಭಾಷಣದಲ್ಲಿ ಹೀಗೆಂದಿದ್ದಾರೆ, "ಉಪನ್ಯಾಸ ಪದ್ಧತಿಯು (lecture system) ಶಿಕ್ಷಣ ಕ್ರಮವು ತೋರುವಳಕೆಗೆ ಉತ್ತಮವೆಂದು ಕಾಣುತ್ತಿದೆಯಾದರೂ, ಒಬ್ಬ ವಿದ್ಯಾರ್ಥಿಯು ತನ್ನ ಸಮಯವನ್ನು ತನಗೆ ಬೇಕಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವರೇ ಇಷ್ಟಪಟ್ಟು ಅಂಥಹ ಕಷ್ಟಾಯ ಉಪನ್ಯಾಸಗಳಿಂದ ಗೈರುಹಾಜರಿಯಾಗುವುದರಿಂದ ತನ್ನ ಅನೇಕ ಕೆಲಸಗಳನ್ನು ಬೇಗನೆ ಪೂರೈಸಿ ಹಲವು ವಿಷಯದಲ್ಲಿ ಬಾಕಿಯವರಿಂದ ಮುಂದುವರಿಯುವನೆಂಬುವುದಕ್ಕೆ ಸಂಶಯವಿಲ್ಲ" ಇದೇ ಅಭಿಪ್ರಾಯವನ್ನು ಅನುಮೋದಿಸಿ ಲೋಕಪ್ರಸಿದ್ಧ ಮೇಧಾವಿ, ಎ ಹಕ್ಸ್‌ಲೀ (A. Huxley) ಯವರು "ಉಪನ್ಯಾಸ ಪದ್ಧತಿಯು ಶಿಕ್ಷಣ ಕ್ರಮವು ಚಾಪಖಾನೆ (Printing press) ಯನ್ನು ಕಂಡು ಹಿಡಿಯುವುದಕ್ಕೆ ಮೊದಲಿನ ಬಹಳ ಪುರಾತನ ಮತ್ತು ಮಧ್ಯ ಕಾಲಗತಿಯುದ್ದಂಪ ತೋರಿ ಬರುತ್ತದೆ. ಅಂಥಹ ಉಪನ್ಯಾಸ ಕ್ರಮವು ಹಾಳು ಬಿದ್ದ ತೊಬು ಅಥವಾ ಕೊಬ್ಬಿನಬತ್ತಿಯಂತೆ ಕಾಲಗಣನಾ ದೋಷದ್ದಾಗಿರುತ್ತದೆ" ಎಂದಿದ್ದಾರೆ.

ಪುರೋಗತಿಯ ಲಕ್ಷಣ

ವಿಶ್ವವಿದ್ಯಾಲಯಗಳ ಪದವಿಗಳು (Degrees) ಕೆಲವೇ ಐಶ್ವರ್ಯವಂತರ ಕುಟುಂಬದ ಸೊತ್ತಿನಂತಿದ್ದು ಅದೇ ವರ್ಗದವರ ಮಕ್ಕಳ ವಿದ್ಯಾಭಿವೃದ್ಧಿಗಾಗಿರುವುದಾದರೆ, ಭಾವೀ ಭಾರತದಲ್ಲಿ ಅದಕ್ಕೆ ಬಾಳಿಕೆ ಇರಲಾರದು. ವಿಶ್ವವಿದ್ಯಾಲಯಗಳಾಗಲಿ, ಶಾಲಾ ಕಾಲೇಜುಗಳಾಗಲಿ ಬರಿಯ ಒಂದು ವರ್ಣದವರಿಗೋ ವರ್ಗದವರಿಗೋ ಇರುವಂತಹದ್ದಲ್ಲ. ಅವುಗಳು ಒಂದು ರಾಷ್ಟ್ರದ, ಏಕೆ? ಇಡೀ ವಿಶ್ವದ ಜನತೆಯ ಜನ್ಮ ಹಕ್ಕೆನಿಸಿದ್ದರೆ ಮಾತ್ರವೇ ಅದಕ್ಕೆ ವಿಶ್ವವಿದ್ಯಾಲಯವೆಂಬ ಹೆಸರು ಯೋಗ್ಯವಾಗಿ ಕಾಣಬಹುದು. ಅದೇ ಜಗತ್ತಿನ ಪುರೋಗತಿಯ ಲಕ್ಷಣವಾಗಿರುತ್ತದೆ. ಆಗ ಮಾತ್ರ ವಿಶ್ವವಿದ್ಯಾಲಯಗಳು ಸರ್ವ ಸ್ವತಂತ್ರವಾಗಿರಲು ಯೋಗ್ಯವಾಗಿರುವವು. ದುಡಿಯುವ ಕೂಲಿಗೆ, ಉಳುವ ರೈತನಿಗೆ ಬಿಡುವಿದ್ದಾಗ ಖಾಸಗಿ ವಿದ್ಯಾಭ್ಯಾಸ ಮಾಡಿ ವಿಶ್ವವಿದ್ಯಾಲಯದ ಪದವಿಯನ್ನು ಪಡೆಯುವ ಸೌಕರ್ಯಗಳಿದ್ದಾಗ ಮಾತ್ರ ಅವು ಜಗತ್ತಿಯ ವಿಶ್ವವಿದ್ಯಾಲಯಗಳಾಗಿರುತ್ತವೆ. ಆಗ ಮಾತ್ರ ಅವು ಯಾರನ್ನೂ ಲೆಕ್ಕಿಸದೆ ಸಂಪೂರ್ಣ ಸ್ವತಂತ್ರವಾಗಿ ಜೀವಿಸಬಲ್ಲವು. ಆ ತನಕ ಅವುಗಳು ಆಳುವ ಸರಕಾರದ ಕಡಿವಾಣಕ್ಕೆ ಬಾಯೊಡ್ಡ ಬೇಕಾಗುತ್ತದೆ.

ಜಯಂತಿಯ ವಿನಂತಿ

(ಭಾಮಿನಿ.)

ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ಕಾಸರಗೋಡು.

ಎಂತು ಸ್ವಾತಂತ್ರ್ಯೋತ್ಸವದ ವ।
ರ್ಧಂತಿಯಲಿ ಸಂತೋಷಗೊಳ್ಳಲಿ ?।
ಶಾಂತಿಯಿಲ್ಲದೆ ಭಾರತಾಂಬಿಕೆ ದುಃಖದಿಂದಿರಲು-॥
ಎಂತು ರಾಷ್ಟ್ರ ಧ್ವಜದ ನೆಳಲಲಿ।
ನಿಂತು ಜಯ ಜಯ ಘೋಷವೆಸಗಲಿ ?।
ಕ್ರಾಂತಿಕಾರಕರಾದ ಹಲವರು ಗುಲ್ಲನೆಬ್ಬಿಸಲು ! ॥ 1 ॥

ಕವಿದ ಸ್ವಾರ್ಥಾಕಾಂಕ್ಷೆಯಿಂದಲಿ।
ವಿವಿಧ ಪಕ್ಷಂಗಳನು ವಿರಚಿಸಿ।
ಸವಿನುಡಿಯ ಬೆಡಗಿಂದ ಸಾಮಾನ್ಯರಲಿ ತಲೆಗೆಡಿಸಿ॥
ಶಿವ ಶಿವಾ ! ಭಾರತಕೆ ಹಾನಿಯ।
ಹವಣಿಸುವ ಪಂಥದಲಿ ನಡೆವರು।
ನವ ಮುಖಂಡಾಸ್ಥಾನದಾಸೆಯ ಸ್ವಾರ್ಥ ಸಾಧಕರು ॥ 2 ॥

ಅಂದು ಪರ ಸರಕಾರವಿರುತಿರೆ।
ಮುಂದುವರಿದಿದಿರಾದ ನಡೆಯು।
ನಿಂದು ಜನತೆಯು ನೆಹರು ಸರಕಾರದಲಿ ತೋರುವಿರೇ ? ॥
ಬಂಧುಗಳೆ ! ನೆಹರು ಪ್ರಧಾನರ।
ಹಿಂದಿನಾ ತ್ಯಾಗವನು ತಿಳಿಯಿರೆ ?
ಗೊಂದಲವನೆಬ್ಬಿಸಲಿಕೆಮಕಾಲವೆ ಮಹಾ ಜನರೇ ! ॥ 3 ॥

ಪರರ ಭೇದೋಪಾಯದಿಂ ಧರೆ।
ಯೆರಡು ಖಂಡಗಳಾಗೆ ನಡೆದ।
ಧ್ವರದ ಬಲಿಯನು ಮರೆತಿರೇ ?-ಜ್ವಾಲಾಮುಖಿಯ ಶಿಖಿಯು-॥
ಭರದ ಭೂಕಂಪದ ಗತಿಯ-ಸಂ।
ಗರದ ಹತ್ತಿಯ ಸ್ಥಿತಿಯನಡಗಿಸಿ।
ಧರೆಗೆ ಶಾಂತಿಯನೊದಗಿಸುವ ಸಾಹಸವು ಕಿರಿದೇನು ? ॥ 4 ॥

ಭಾರತದ ವಿಭಜನೆಯೊಳಾದಾ।
ದಾರುಣಾವಸ್ಥೆಯ ನಿವಾರಿಸಿ।
ಧಾರಿಣಿಗೆ ಶಾಂತಿಯನು ಕೊಡಿಸುವ ಕಾರ್ಯದೆಡೆಯಲ್ಲಿ ॥
ಭೂರಿಕರುಣಾ ನಿಧಿಯು ಗಾಂಧಿಯು।
ಘೋರ 'ಬಲಿ' ಯಾದಾದ ನಷ್ಟವ।
ಸೈರಿಸುವುದೇ ಕಷ್ಟವೆಂದಿರೆ—ಮಡಿಯಲಿನ್ನೇನು ? ॥ 5 ॥

ಹೊಟ್ಟೆಗನ್ನವ ನೀವ-ಜನರಿಗೆ-।
ಬಟ್ಟೆಗಳ ನೊದಗಿಸುವ-ಸ್ಥಾನ।
ಭ್ರಷ್ಟರಿಗೆ ನೆಲೆ ಗೈವ-ಪಾಕಿಸ್ಥಾನವನ್ನೊದ್ದಿಸುವ॥
ಕಷ್ಟಗಳ ನಿದಿರಿಸುವ-ಬಹು ಸಂ॥
ಕಷ್ಟದಲಿ ಸರಕಾರವಿರುತಿರೆ।
ದುಷ್ಟ ಜನರೀ ಸಮಯದಲಿ ಗಲಭೆಗಳನೆಸಗುವುದೇ ? ॥ 6 ॥

ರಾಷ್ಟ್ರ ಜನಕನ ಬಯಕೆಯೇನೀ।
ರಾಷ್ಟ್ರದೊಳ ಗವಗಾದುದೇನೀ।
ರಾಷ್ಟ್ರದವರವನಂತ್ಯದಲಿ ಘೋಷಿಸಿದ ಮತವೇನು ? ॥
ರಾಷ್ಟ್ರದುಜ್ವಲ ಮಣಿ ಜವಾಹರ।
ರಾಷ್ಟ್ರ ಜನಕ ಪ್ರಿಯನ ಭಾರತ।
ರಾಷ್ಟ್ರ ಸರಕಾರ ಪ್ರಕಾಶವ ಕೆಡಿಸಲೆಳಸುವುದೇ ? ॥ 7 ॥

ಭಾರತದ ರಾಷ್ಟ್ರೀಯ ಸಭೆಯ ವಿ।
ಚಾರಕನುಗುಣವಾಗಿ ವರ್ತಿಸಿ।
ಭಾರತದ ಸರಕಾರದಲಿ ವಿಶ್ವಾಸವನ್ನಿರಿಸಿ—॥
ಸೇರಿ ಸಮ್ಮತದಿಂದ ರಾಷ್ಟ್ರೋ।
ದ್ಧಾರ ಕಾರ್ಯದೆ ಜನರೊಲಿದು ನವ।
ಭಾರತ ಸ್ವಾತಂತ್ರ್ಯ ಸಾಮ್ರಾಜ್ಯದಲಿ ರಾಜಿಸಲಿ ! ॥ 8 ॥

ತಿಲಕರವಿ ಯಸ್ತಮಿಸೆ-ಧರೆಯಲಿ।
ಬೆಳಕ ತೋರಿದ ಗಾಂಧಿ ಚಂದ್ರನು।
ಮುಳುಗೆ-ರಾಷ್ಟ್ರ ಜ್ಯೋತಿ ನೆಹರುಧ್ರುವನು ತೇಜದಲಿ ॥
ಇಳೆಯ ನೌಕೆಯ ನಡೆಯಿಸುವ ಗುರು।
ಬಲದ ನಿಜನಾವಿಕ ಪಟೇಲಗೆ।
ನೆಲೆಯ ಕಾಣಿಸಿ ಬೆಳಗಿರಲಿ—ಲಕ್ಷ್ಮೀಶನೊಲ್ಮೆಯಲಿ ! ॥ 9 ॥

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ

ಬೆಲ್ಲ ತಯಾರಿ

ಮಾಜಿ ಮೂರ್ತೆದಾರರಿಗೆ ನಿರುದ್ಯೋಗದ ಭೀತಿ ಇಲ್ಲ

1-10-47 ರಂದು ಈ ಜಿಲ್ಲೆಯಲ್ಲಿ ಮದ್ಯಪಾನ ನಿರೋಧ ಶಾಸನವು ಜಾರಿಗೆ ಬಂದುದರ ಫಲವಾಗಿ ಉದ್ಯೋಗ ವಿರಹಿತರಾದ ಮೂರ್ತೆದಾರರ ಕಷ್ಟನಿವಾರಣೆಗಾಗಿ ಅನೇಕ ಬೆಲ್ಲ ತಯಾರಿಸುವವರ ಸಹಕಾರ ಸಂಘಗಳು ತಲೆದೋರಿದವು. 1939 ನೇ ಸಿಹಿಹೆಂಡ ಶಾಸನದ ಪ್ರಕಾರ ಸಿಹಿಹೆಂಡ ತೆಗೆಯುವುದಕ್ಕೂ ಬೆಲ್ಲ ತಯಾರಿಸುವುದಕ್ಕೂ ಲೈಸೆನ್ಸು ಪಡೆದ ಮಾಜಿ ಮೂರ್ತೆದಾರರ ಮೇಲೆ ಪ್ರತ್ಯಕ್ಷ ಹಾಗೂ ಪರಿಣಾಮಕಾರೀ ಹತೋಟಿಯನ್ನಿಡುವ ಉದ್ದೇಶದಿಂದ, ಸರಕಾರವು ಲೈಸೆನ್ಸು ಕೊಡುವ ಪದ್ಧತಿಯನ್ನು ಆ ಉದ್ದೇಶಕ್ಕಾಗಿಯೇ ರಚಿಸಲ್ಪಟ್ಟ ಸಹಕಾರ ಸಂಘಗಳನ್ನು ನಿರ್ವಹಿಸುವುದು ಅವಶ್ಯವೆಂದು ನಿಶ್ಚಯಿಸಿತು. ಹೇಗೆಂದರೆ, ಮುಂಚೆ ಬೆಲ್ಲ ತಯಾರಿಸುವುದಕ್ಕೋಸ್ಕರ ಹೆಂಡ ತೆಗೆಯುವ ವೃತ್ತಿಯಲ್ಲಿದ್ದವರೆಲ್ಲರಿಗೂ ಅದೇ ಕಸಬನ್ನು ಮುಂದರಿಸ ಬೇಕೆಂದಾದರೆ ಅವರು ಸಹಕಾರ ಸಂಘಗಳನ್ನು ರಚಿಸಿ ಅವುಗಳ ಸದಸ್ಯರಾಗಿ ನಂತರ ಲೈಸೆನ್ಸಿಗೆ ಅರ್ಜಿಮಾಡಬೇಕಾಗಿದೆ.

ಹೀಗೆ ಈ ಜಿಲ್ಲೆಯಲ್ಲಿ ತಾಳೆಯ ಬೆಲ್ಲ ಹಾಗೂ ತೆಂಗಿನ ಬೆಲ್ಲ ತಯಾರಿಸುವುದಕ್ಕೋಸ್ಕರ ಮಾಜಿ ಮೂರ್ತೆದಾರರ ಅನೇಕ ಸಹಕಾರ ಸಂಘಗಳು ರಚಿಸಲ್ಪಟ್ಟಿವೆ. ತಾಳೆಯ ಬೆಲ್ಲವು ಆಯಾ ಋತುವಿನಲ್ಲಿ ಮಾತ್ರ ಇರುವುದಾಗಿದೆ. ಈ ಮರಗಳನ್ನು ಅಕ್ಟೋಬರದಿಂದ ಮೇ ತಿಂಗಳ ಅಂತ್ಯದವರೆಗೆ ಮಾತ್ರ ಕಟ್ಟಲಾಗುತ್ತದೆ. ಈ ಉದ್ಯೋಗವು ಸುಮಾರು ನಾಲ್ಕು - ವಾ - ಐದು ತಿಂಗಳುಗಳ ಕಾಲ ನಿಂತಿರುತ್ತದೆ. ಆದರೆ ತೆಂಗಿನ ಮರ ಕಟ್ಟುವುದು ವರ್ಷಪಿಡೀ ಇರುತ್ತದೆ. ಇಲ್ಲಿ ಆರು ತಿಂಗಳಿಗೊಮ್ಮೆ ಮರಗಳನ್ನು ಬದಲಾಯಿಸುತ್ತಿದ್ದರೆ ಮಾತ್ರ ಸಾಕು. ಆರು ತಿಂಗಳ ಕಾಲ ಒಂದು ಮರವನ್ನು ಕಟ್ಟಿದರೆ ಉಳಿದ ಆರು ತಿಂಗಳಕಾಲ ಅದನ್ನು ಹಾಗೆಯೇ ಬಿಡಬೇಕು. ಹೀಗೆ ತಾಳೆಯ ಮರ ಕಟ್ಟುವವರಿಗೆ ವರ್ಷದಲ್ಲಿ ಸುಮಾರು 7 - ವಾ - 8 ತಿಂಗಳ ಕಾಲ ಮಾತ್ರ ಕೆಲಸವಿರುವುದಾದರೆ ತೆಂಗಿನ ಮರಕಟ್ಟುವವರಿಗೆ ವರ್ಷಪಿಡೀ ಕೆಲಸವಿರುತ್ತದೆ.

ತೆಂಗಿನ ಮರದಿಂದ ದೊರೆಯುವ ಹೆಂಡದ ಪ್ರಮಾಣವು ತಾಳೆಯ ಹೆಂಡದ ಪ್ರಮಾಣಕ್ಕಿಂತ ತುಂಬಾ ಕಡಮೆಯೆಂದು ತಿಳಿದು ಬಂದಿದೆ. ಅರ್ಧ ಪಟ್ಟು ಇಲ್ಲವೇ ಮೂರರಲ್ಲಿ ಒಂದು ಪಾಲಷ್ಟು ಮಾತ್ರ ದೊರೆಯುತ್ತದೆ. ಆದುದರಿಂದ ತೆಂಗಿನ ಬೆಲ್ಲ ತಯಾರಿಸುವವನ ಸಂಪಾದನೆಯು ತಾಳೆ ಬೆಲ್ಲ ತಯಾರಿಸುವವನಿಗಿಂತ ಅತಿ ಕಡಮೆಯಾಯಿತು. ಒಳ್ಳೆಯ ಹವಾಮಾನದಲ್ಲಿ ತಾಳೆ ಬೆಲ್ಲ ತಯಾರಿಸುವವನು, 15 - ವಾ - 20 ಮರಗಳನ್ನು ಕಟ್ಟಿ ದಿನಕ್ಕೆ 2 - ವಾ - 3 ರೂಪಾಯಿ ಬೆಲೆಯ ಬೆಲ್ಲ ತಯಾರಿಸ ಬಲ್ಲನು. ಆದರೆ ತೆಂಗಿನ ಬೆಲ್ಲ ತಯಾರಿಸುವವನ ಆದಾಯವು ದಿನಕ್ಕೆ ಒಂದು ರೂಪಾಯಿ - ವಾ - ಒಂದೂ ಕಾಲು ರೂಪಾಯಿಗಿಂತ ಹೆಚ್ಚಾಗದು.

ಇಂತಹ ಸಂಘಗಳು 1-1-48 ರಂದು 31, 30-6-48 ರಂದು 59, 1-1-49 ರಂದು 81, 30-6-49 ರಂದು 82 ಈ ರೀತಿಯಲ್ಲಿ ಹೆಚ್ಚುತ್ತಾ ಬಂದಿವೆ. ಬೆಲ್ಲ ತಯಾರಿಸುವವರ 82 ಸಹಕಾರ ಸಂಘಗಳಲ್ಲಿ 11 ತೆಂಗಿನ ಬೆಲ್ಲ ತಯಾರಿಸುವವರದ್ದು. 31-5-49 ರಂದ ಈ ಸಂಘಗಳಲ್ಲಿ ಒಟ್ಟು 7,578 ಸದಸ್ಯರಿದ್ದು ಅವರ ಪಾಲು ವಂತಿಗೆಯು ರೂ. 47,341 ರಷ್ಟಿತ್ತು. ಅಲ್ಲದೆ 6.256 ಲೈಸೆನ್ಸುಗಳನ್ನು ಸದಸ್ಯರು ಪಡೆದಿದ್ದರು. ಲೈಸೆನ್ಸುಗಳು ಕೊಟ್ಟ ತಾರೀಕಿನಿಂದ ಒಂದು ವರ್ಷದ ವರೆಗೆ ಸಿಂಧುವಾಗಿರುತ್ತವೆ. ಮುಂಚಿನ ಲೈಸೆನ್ಸಿನ ಅವಧಿ ಮುಗಿಯುವುದರೊಳಗೆ ಸದಸ್ಯರು ವಿಧಿಸಿದ ಫಾರ್ಮುಗಳಲ್ಲಿ ಅರ್ಜಿ ಹಾಕುತ್ತಾರೆ. ಅವರಿಗೆ ಹೊಸ ಲೈಸೆನ್ಸುಗಳನ್ನು ಕೊಡಲಾಗುತ್ತದೆ. ಈ ಸಹಕಾರ ಸಂಘಗಳ ಕಾರ್ಯಕಲಾಪಗಳ ಮೇಲ್ವಿಚಾರ ನಡೆಸಲು 8 ಸೀನಿಯರ್ ಕೋಪರೇಟಿವ್ ಇನ್ಸ್ಪೆಕ್ಟರರು ನೇಮಿಸಲ್ಪಟ್ಟಿದ್ದಾರೆ. ಈ ಸಂಘಗಳ ಕಾರ್ಯಕಾರಿ ಸದಸ್ಯರು ಸಾಧಾರಣವಾಗಿ ಸಾಕಷ್ಟು ವಿದ್ಯಾವಂತರಲ್ಲದಿರುವುದರಿಂದಲೂ ಸಂಘಗಳ ಕೆಲಸಗಳನ್ನು ನೋಡಿಕೊಂಡು ಬರಲು ಸಾಕಷ್ಟು ಅನುಭವವಿಲ್ಲದಿರುವುದರಿಂದಲೂ ಇವರು ಸಹಾಯ ಮಾಡುತ್ತಾರೆ. ಲೆಕ್ಕ ಪತ್ರಗಳನ್ನಿಡುವುದು, ಲೈಸೆನ್ಸುಗಳನ್ನು ಮಾಜಿ ಮೂರ್ತೆದಾರರು ದುರುಪಯೋಗಪಡಿಸದಂತೆ ನೋಡಿಕೊಳ್ಳುವುದು, ತಯಾರಿಸಿದ ಬೆಲ್ಲವನ್ನು ಮಾರಾಟ ಮಾಡುವುದು, ಮೊದಲಾದ ಹಲವಾರು ಕೆಲಸಗಳಲ್ಲಿಯೂ ಇನ್ಸ್ಪೆಕ್ಟರರು ಸಹಾಯ ಕೊಡಬೇಕಾಗುತ್ತದೆ. 1948-49 ರ ಬೆಲ್ಲ ತಯಾರಿಸುವ ಋತುವಿನಲ್ಲಿ ಈ ಸಂಘಗಳು ರೂ. 8,00,688 ಬೆಲೆ ಬಾಳುವ 159,426 ಮಣಗಳಷ್ಟು ಬೆಲ್ಲ ತಯಾರಿಸಿವೆ. ಕೆಲವರು ತಾವು ತಯಾರಿಸಿದ ಬೆಲ್ಲವನ್ನು ಸಂಪೂರ್ಣವಾಗಿ ಸಹಕಾರ ಸಂಘಗಳಿಗೆ ಒಪ್ಪಿಸಲಿಲ್ಲ. ಇಲ್ಲದಿದ್ದರೆ ಉತ್ಪತ್ತಿಯು ಇನ್ನಷ್ಟು ಹೆಚ್ಚಾಗುತ್ತಿತ್ತು. ಹವಾಮಾನ ಹಾಗೂ ಮರಗಳ ಸ್ಥಿತಿಗಳಿಗೆ ಅನುಗುಣವಾಗಿ ಹೆಂಡದ ಪ್ರಮಾಣವು ಬದಲಾಗುತ್ತಿರುವುದರಿಂದ, ಪ್ರತಿ ಸದಸ್ಯನು ತಯಾರಿಸುವ ಬೆಲ್ಲವೆಷ್ಟೆಂದು ಖಂಡಿತ ನಿಶ್ಚಯಿಸಲು ಸಾಧ್ಯವಾಗುವುದಿಲ್ಲ.

ಸಂಘವು ಸದಸ್ಯರ ಪ್ರತಿನಿಧಿಯಾಗಿ ವರ್ತಿಸುತ್ತದೆ ಮಾತ್ರ. ಹೆಚ್ಚಿಗೆ ಬೆಲೆಯ ಪೂರ್ಣ ಪ್ರಯೋಜನವು ಸದಸ್ಯರಿಗೇನೇ ದೊರೆಯುತ್ತದೆ. ಅವರಿಗೆ ಬೆಲ್ಲ ಮಾರಾಟ ಮಾಡುವ ತೊಂದರೆಯಿಲ್ಲ. ಮಾರಾಟ ಬೆಲೆಯಲ್ಲಿ ರೂಪಾಯಿಗೆ ಒಂದಾಣೆಯಂತೆ ಕಮಿಶನ್ ಮಾತ್ರ ಸಂಘಕ್ಕೆ ತೆರಬೇಕಾಗಿದೆ. ಮಾರಾಟದ ವಿಷಯವನ್ನು ಸಂಘವೇ ಮಾಡಿಕೊಳ್ಳುತ್ತದೆ. ಕೆಲವು ವೇಳೆ ಸದಸ್ಯನೇ ಕೊಂಡುಕೊಳ್ಳುವವನನ್ನು ಕಂಡುಹಿಡಿದು, ಬೆಲೆ ನಿಶ್ಚಯಿಸಿ, ಸಂಘದ ಮೂಲಕ ತನ್ನ ಬೆಲ್ಲವನ್ನು ವಿಕ್ರಯಿಸುತ್ತಾನೆ.

ಈ ಜಿಲ್ಲೆಯಲ್ಲಿ ಬೆಲ್ಲ ಮಾರಾಟ ಮಾಡಲು ಹೆಚ್ಚು ಕಷ್ಟವಿಲ್ಲ. ತಾಳೆ ಬೆಲ್ಲವು ಅತಿ ಪೋಷಕವಸ್ತುವೆಂದು ತಿಳಿಯಲಾಗಿದೆ. ದನವು ಕರು ಹಾಕಿದಕೂಡಲೇ ಸಹ ಈ ಬೆಲ್ಲವನ್ನು ಕೊಡುತ್ತಾರೆ. ಕ್ರೈಸ್ತರೂ, ಬ್ರಾಹ್ಮಣೇತರರೆಲ್ಲರೂ ಕಬ್ಬಿನ ಬೆಲ್ಲಕ್ಕಿಂತ ತಾಳೆ ಬೆಲ್ಲವೇ ಉತ್ತಮವೆಂದು ತಿಳಿಯುತ್ತಾರೆ. ಅಲ್ಲದೆ, ಕಬ್ಬಿನ ಬೆಲ್ಲವು ಸಾಕಷ್ಟು ದೊರೆಯದಿರುವುದರಿಂದ ತಾಳೆ ಬೆಲ್ಲಕ್ಕೆ ತುಂಬಾ ಬೇಡಿಕೆಯಿದೆ. ಬೆಲೆ ಸಹ ಕಡಮೆ. ಕಬ್ಬಿನ ಬೆಲ್ಲಕ್ಕೆ ಮಣಕ್ಕೆ ಹತ್ತು ರೂಪಾಯಿ ಬೆಲೆಯಿರುವಾಗ ತಾಳೆ ಬೆಲ್ಲ ಏಳು - ವಾ - ಎಂಟು ರೂಪಾಯಿಗೆ ದೊರೆಯುತ್ತದೆ. ಈ ಜಿಲ್ಲೆಯಲ್ಲಿರುವ ಎಲ್ಲಾ ಸಂಘಗಳು ತಯಾರಿಸಿದ ಸುಮಾರು 137,892 ಮಣಗಳಷ್ಟು ಬೆಲ್ಲದಲ್ಲಿ 31-5-49 ರಂದು 336 ಮಣ ಮಾತ್ರ ವಿಕ್ರಯಕ್ಕೆ ಬಾಕಿ ಇತ್ತು. ಆಯಾಯ ಊರಲ್ಲೆ ಬೆಲ್ಲ ಮಾರಾಟವಾಗುತ್ತದೆ. ರಫ್ತಿಗೆ ನಿರ್ಬಂಧವಿಲ್ಲದಿರುವುದರಿಂದ ಸ್ವಲ್ಪ ಅಂಶ ಮೈಸೂರು ಸಂಸ್ಥಾನಕ್ಕೆ ಸಹ ಹೋಗುತ್ತದೆ. ತಾಳೆ ಬೆಲ್ಲ ತಯಾರಿಸುವುದು ಒಂದು ಹೊಸ ವೃತ್ತಿಯಲ್ಲ. ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಈ ಗುಡಿ ಕೈಗಾರಿಕೆಯಿದೆ. ಮದ್ಯಪಾನ ನಿರೋಧ ಶಾಸನದಿಂದಾಗಿ ಹೆಂಡ ಕುಡಿಯುವುದು ನಿಂತಿರುವುದರಿಂದ ಈ ಕೈಗಾರಿಕೆಗೆ ಹೆಚ್ಚಿಗೆ ಪ್ರೋತ್ಸಾಹ ದೊರೆತಂತಾಗಿದೆ. ಆದರೆ ಶುದ್ಧವಾದ ಬೆಲ್ಲ ತಯಾರಿಸುವುದಿಲ್ಲ. ಅದಕ್ಕೆ ಒಂ ನಮೂನೆಯ ವಾಸನೆ ಇದೆ. ಎಲ್ಲರಿಗೂ ಇ ಹಿಡಿಯುವುದಿಲ್ಲ. ಬೆಲ್ಲದಲ್ಲಿರುವ ಈ ವಾಸ ಯನ್ನು ತೆಗೆಯಲು ಬಹುಶಃ ಸ್ವಲ್ಪಸಂಶೋಧನೆ ನ ಯಬೇಕು. ಸುಮಾರು 4 ಅಂಗುಲ ದಪ್ಪದಲ್ಲಿ ಉ ಟಾದತಾಳೆ ಎಲೆಯ ಚಕ್ರವನ್ನು ತಯಾರಿಸಿ ಅದನ್ನ ನೆಲದ ಮೇಲಿಟ್ಟು ಒಳಗೆ ಬೆಲ್ಲ ಹೊಯ್ಯುವುದು ಈ ಜಿಲ್ಲೆಯಲ್ಲಿ ವಾಡಿಕೆಯಾಗಿದೆ. ಅದು ಚಪ್ಪಟೆಯಾಗಿದೆ. ನಂತರ 25 ಬೆಲ್ಲಗಳನ್ನಿಟ್ಟು ತಾಳೆ ಎಲೆಯಿಂದ ಕಟ್ಟುಕಟ್ಟಲಾಗುತ್ತದೆ. ಬೇರೆ ಅ ಸುಲಭ ಅಚ್ಚಿನಲ್ಲಿ ಬೆಲ್ಲ ಹೊಯ್ಯುವಂತೆ ಎಷ್ಟು ಒತ್ತಾಯಿಸಿದರೂ, ಇಲ್ಲಿಯ ಮಾಜಿ ಮೂರ್ತೆದಾರರು ಕೇಳುವಂತಿಲ್ಲ. ಅವರು ಮುಂಚಿನಿಂದಲಃಗಾಯಿತು ಅನುಸರಿಸುತ್ತಿದ್ದ ಅಚ್ಚಿನಲ್ಲಿಯೇ ಮಾಡಲು ಇಷ್ಟಪಡುತ್ತಾರೆ. ಈ ವಿಷಯದಲ್ಲಿಯೂ ಸುಧಾರಿತ ಕ್ರಮದಲ್ಲಿ ಬೆಲ್ಲ ತಯಾರಿಸುವುದರಲ್ಲಿಯೂ, ಅವರ ದೃಷ್ಟಿಕೋನವು ಬದಲಾಗಲು ಸ್ವಲ್ಪ ಸಮಯ ಹೋಗಬೇಕು.

ನಮ್ಮ ಪ್ರಾಂತದಲ್ಲಿ

ಫಿರ್ಕಾಭಿವೃದ್ಧಿ

ಮನೆಮನೆಯಲಿ ನವನವೀನ ಚೇತನ ತಲೆಯೆತ್ತುತ ಮುಂಬರುತಿಹುದು

ರೆವೆರೆಂಡ್ ರಾಲ್ಫ್ ರಿಚಾರ್ಡ್ ಕೈಥಾನ್

(15–7–49 ಸಂಚಿಕೆಯಿಂದ ಮುಂದುವರಿದುದು.)

ಸರಕಾರದ ಇತರ ಇಲಾಖೆಗಳಿಂದ ಈ ಎಲ್ಲಾ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲವೇ ಎಂದು ಕೆಲವರು ಕೇಳಬಹುದು. ಮುಂಚೆ ಈ ರೀತಿಯ ಕೆಲವು ಕೆಲಸಗಳನ್ನು ವ್ಯವಸಾಯ ಇಲಾಖೆಯಂ ತಿರುವ ಸರಕಾರದ ವಿವಿಧ ರಾಷ್ಟ್ರನಿರ್ಮಾಣ ಇಲಾಖೆಗಳೇ ನಡೆಸಿದ್ದು ನಿಜ. ಈ ಇಲಾಖೆಗಳು ಈಗ ಫಿರ್ಕಾಭಿವೃದ್ಧಿ ಇಲಾಖೆಯೊಡನೆ ಸಹಕರಿಸು ವುದೂ ನಿಜ. ಈ ತಜ್ಞಸಹಾಯವನ್ನು ಅಲ್ಪ ವೆಂದು ತಿಳಿಯಲು ಇಚ್ಛಿಸಲಾಗದು. ಮುಖ್ಯ ವಾಗಿ, ಹಳ್ಳಿಗನಿಗೆ ನಿಜವಾಗಿ ಬೇಕಾದುದನ್ನು ಕಂಡು ಹಿಡಿಯುವುದಕ್ಕೂ ಹಳ್ಳಿಗೆ ಬೇಕಾದುದನ್ನು ಒದಗಿಸುವುದರಲ್ಲಿ ನಿಸ್ವಾರ್ಥ ಸೇವೆ ನಡೆಸುವುದಕ್ಕೂ ಯತ್ನಿಸುತ್ತಿರುವಾಗ ಈ ಸಹಾಯ - ಸಹಕಾರ ಗಳನ್ನು ಕಡೆಮೆಯೆಂದು ತಿಳಿಯಲು ಸಾಧ್ಯವಿಲ್ಲ.

ಹಳ್ಳಿಗನ ಪೂರ್ಣ ಸಹಕಾರವನ್ನು ಪಡೆಯುವ ವರೆಗೆ ನಮಗೆ ನಮ್ಮ ಕೆಲಸದಲ್ಲಿ ಹೆಚ್ಚು ಮುಂದರಿ ಯಲು ಸಾಧ್ಯವಿಲ್ಲವೆಂದು ಗ್ರಾಮ ಸೇವಕರೆಲ್ಲರೂ ಒಪ್ಪುವರೆಂದು ನಾನು ಭಾವಿಸುತ್ತೇನೆ. ಮೊದಲನೆಯ ದಾಗಿ, ನಾವು ಕೆಲಸವನ್ನು ಮುಂದರಿಸ ಬೇಕಾದರೆ, ಸರಕಾರಕ್ಕೆ ಇದೊಂದು ದೊಡ್ಡ ಕೆಲಸವೇ ಸರಿ. ಎರಡನೆಯದಾಗಿ, ಹಳ್ಳಿಗನು ಇಡೀ ಕಾರ್ಯಕ್ರಮದ ಅತಿನಿಜವಾದ ಅಂಕವಲ್ಲವಾದರೆ ಹಳ್ಳಿಗೆ ಹೆಚ್ಚಿನ ಶಾಶ್ವತ ಸುಧಾರಣೆ ದೊರೆಯಲಾರದು. ಇಡೀ ಹಳ್ಳಿಯಲ್ಲಿ ವಾಸಿಸುವವರೆಲ್ಲರ ಏಳಿಗೆಗೋಸ್ಕರ ಹಳ್ಳಿಗನು ಅತ್ಯುತ್ಸಾಹದಿಂದ ಬಾವಿಯನ್ನೋ ರಸ್ತೆಯನ್ನೋ ಶಾಲೆಯನ್ನೋ ಚರಂಡಿಯನ್ನಾಗಲೀ ಕಟ್ಟುವಾಗ, ಈ ಸೌಕರ್ಯಗಳನ್ನೆಲ್ಲಾ ಅವನು ಹೆಚ್ಚೆಚ್ಚು ಉಪ ಯೋಗಿಸಬಹುದು ಹಾಗೂ ಅವು ಕೆಟ್ಟುಹೋಗ ದಂತೆ ನೋಡಿಕೊಳ್ಳಬಹುದು. ನಾವು ರಚನಾತ್ಮಕ ಕಾರ್ಯಕ್ರಮವೆಂದು ಕರೆಯುವುದು ಇದನ್ನೇ. ಹಳ್ಳಿ ಗನು ತನ್ನ ಇಡೀ ಜೀವನಕ್ಕೆ ಪೂರ್ಣಸ್ವಾತಂತ್ರ್ಯ ದೊರೆಯುವಂತೆ ಸ್ವತಹ ಯತ್ನಿಸುತ್ತಾನೆ. ಹಳ್ಳಿ ಗನು ಸ್ವಾವಲಂಬಿಯಾಗುವಂತೆಯೂ ಆತ್ಮಾವಲಂಬಿ ಯಾಗುವಂತೆಯೂ ಸ್ವತಹ ಪ್ರಯತ್ನಿಸುತ್ತಾನೆ ಒಟ್ಟಾರೆ ಅವನು ಒಬ್ಬ ರಚನಾತ್ಮಕ ಹಾಗೂ ಹೊಣೆಗಾರಿ ಪ್ರಜೆಯಾಗುತ್ತಾನೆ.

ಒಂದೇ ಕಡೆಗೆ ಬಾಗುವ ಸನ್ನೆಕೋಲು

ಶ್ರೀ ಜಿ ರಾಮಚಂದ್ರನವರು ಅತ್ಯುತ್ಸಾಹ ಪೂರಿತರಾಗಿ ತಮ್ಮ ಪ್ರವಾಸ ಮುಗಿಸಿಬಂದಿರುವರು ಅವರು ಕಂಡಂತಹ ಫಲಗಳು ಇನ್ನೆಲ್ಲಿರ ಮಟ್ಟಿಗಿರ ಬಹುದೆಂದು ಅವರು ನಿರೀಕ್ಷಿಸಿರಲಿಲ್ಲ. ಒಳ್ಳೆಯ ಸುಧಾರಿತ ಹಳ್ಳಿಯ ನಿರ್ಮಾಣದಲ್ಲಿ ಸರಕಾರ, ರಚನಾತ್ಮಕ ಕೆಲಸಗಾರ, ಹಳ್ಳಿಯವರೆಲ್ಲರೂ ಅನ್ಯೋನ್ಯ ಸಹಕಾರದಿಂದ ವರ್ತಿಸುವರೆಂದು ಅವರು ಭಾವಿಸಿಲ್ಲ. ಈ ಪ್ರತ್ಯೇಕ ದಶ ಯಲ್ಲಿಯೇ ಫಿರ್ಕಾ ಅಥವಾ ಗ್ರಾಮಾಭಿ ವೃದ್ಧಿ ಕಾರ್ಯಕ್ರಮವು ಅದರ ಅಪೂರ್ವ ಸಹಾಯವನ್ನು ನೀಡುವುದಾಗಿದೆ. ವಿವಿಧ ಇಲಾಖೆ ಗಳು ಅವುಗಳ ವಿವಿಧ ಸಹಾಯಗಳನ್ನು ಹೊಂದಿಸಿ ಕೊಳ್ಳುವಂತೆ ಅದು ಸಹಕರಿಸುತ್ತದೆ. ಅತಿ ಪ್ರಾಮುಖ್ಯ ಕಾರ್ಯದಲ್ಲಿ ಸಹಕಾರವೂ ಸ್ವಸಂ ತೋಷದಿಂದ ವರ್ತಿಸುವ ರಚನಾತ್ಮಕ ಕೆಲಸಗಾ ರನೂ ಸಮಾನ ಪಾಲುಗಾರರಾಗಿರುವಂತೆ ಸಹಕರಿ ಸುತ್ತದೆ. ಆದರೆ ಇನ್ನೂ ಅತಿ ಮುಖ್ಯ ವಿಷಯ ವೆಂದರೆ, ಈ ರಾಷ್ಟ್ರ ನಿರ್ಮಾಣ ಕಾರ್ಯ ಕ್ರಮದಲ್ಲಿ ಹಳ್ಳಿಗನು ಒಬ್ಬ ಅತಿ ಪ್ರಾಮುಖ್ಯ ವ್ಯಕ್ತಿಯೆಂದು ತಿಳಿಯುವಂತೆ ಅದು ಮಾಡುತ್ತದೆ. ಅದು ಅವನಿಗೆ ಹೊಸ ಆಶಯವನ್ನು ಕೊಡುತ್ತದೆ. ಈ ಅತಿ ಕಷ್ಟಕಾರ್ಯವನ್ನು ನೆರವೇರಿಸುವುದರಲ್ಲಿ ಅದು ಅವನ ಸಹಕಾರವನ್ನು ಪಡೆಯುತ್ತದೆ. ರಚ ನಾತ್ಮಕ ಅಥವಾ ಹಳ್ಳಿಯ ಕೆಲಸಗಾರನ ಕೆಲಸ ಕ್ಕೋಸ್ಕರ ಸರಕಾರವು "ಒಂದೇ ಕಡೆಗೆ ಬಾಗುವ ಸನ್ನೆಕೋಲು" ಆಗುತ್ತದೆ ಮಾತ್ರವಲ್ಲ, ಹಳ್ಳಿ ಗನ ಯತ್ನ ಸಾಹಸಗಳನ್ನು ಪಡೆಯುವುದರಲ್ಲಿ ನಿರ್ಣಾಯಕ ವಿಷಯವಾಗಿಯೂ ಇದೆ. ಅದಕ್ಕೆ ಬೇಕಾದ ಹಾದಿಯನ್ನು ಈಗ ನಿಜವಾಗಿಯೂ ಕಂಡು ಹಿಡಿಯಲಾಗಿದೆಯೆನ್ನ ಬಹುದು.

"ನಾನು ನೋಡಿದ ಅನೇಕ ಹಳ್ಳಿಗಳಲ್ಲಿ ಅನೇಕ ಕೆಲಸಗಳು ಪೂರ್ತಿಯಾಗಿವೆ ಅವುಗಳಿಗೆ ಸರಕಾರದಿಂದ ದೊರೆತ ಧನ ಸಹಾಯ ಬರೇ ರೂ. 500 - ವಾ - ಕಡಿಮೆ. ಒಟ್ಟು ವೆಚ್ಚವು ಸುಮಾರು ರೂ. 3,000 ರಿಂದ ರೂ. 4,000 ಗಳಷ್ಟಿತ್ತು. ಸರಕಾರವು ಹಣ ಕೊಡದಿರುತ್ತಿದ್ದರೆ ಹಳ್ಳಿಗರು ಯಾವ ಕೆಲಸವನ್ನು ಕೈಕೊಳ್ಳುವುದಕ್ಕೂ ಹಿಂಜರಿ ಯುತ್ತಿದ್ದರು. ಆದುದರಿಂದ ಸರಕಾರದ ಧನ ಸಹಾಯಗಳು ಅತಿಪರಿಣಾಮಕಾರಿಯಾಗಿ ಉತ್ಸಾಹ ವಿತ್ತಿದೆ." ಎಂದು ಶ್ರೀ ಜಿ. ರಾಮಚಂದ್ರನ್ ಅವರು ಬರೆದಿರುತ್ತಾರೆ.

ಮುಂದಿನ ಕಾರ್ಯ

ಕೆಲಸವು ಒಳ್ಳೆ ರೀತಿಯಲ್ಲಿ ಆರಂಭಿಸಲ್ಪಟ್ಟಿದೆ. ನೆರವೇರಿದ ಕೆಲಸಗಳ ಕುರಿತು ನಾನು ವಿಚಾರಿಸಿದಂತೆ ಫಲಿತಾಂಶಗಳ ಕುರಿತು ನನಗೆ ತುಂಬಾ ತೃಪ್ತಿಯಾ ಗಿದೆ. ಈ ವರೆಗೆ ಹಳ್ಳಿಗನ ಸಹಕಾರವು ನಮಗೆ ಯಾವುದಕ್ಕೆ ದೊರೆಯುತ್ತಿದ್ದಿಲ್ಲವೋ, ಆ ವಿಷಯ ಗಳಲ್ಲೆಲ್ಲಾ ಈಗ ಸಹಕಾರವು ದೊರೆಯುವಂತಾ ಗಿದೆ. ನಾವು ಈ ಕಾರ್ಯವನ್ನು ಆರಂಭಿಸಿದುದು ಒಂದು ಸುಸಂದರ್ಭವೆಂದೇ ನನ್ನ ಅಭಿಪ್ರಾಯ.

ನಾವು ಈಗಾಗಲೇ ಪಡೆದ, ಅಮೂಲ್ಯ ಅನುಭ ವದ ಮೇಲೆ ನಮ್ಮ ಕೆಲಸಗಳನ್ನು ಮುಂದರಿಸುತ್ತಿರ ಬೇಕು. ತರಿಗೆಯು ಏರುತ್ತಾ ಹೋಗುತ್ತಿದೆಯೆಂಬ ದೂರು ಇದೆ. ಹಿಂದುಸ್ಥಾನದಲ್ಲಿ ಪ್ರತಿ ಹಳ್ಳಿಗೆ ಅತ್ಯಾವಶ್ಯಕವೆಂದು ನಾವು ತಿಳಿಯುವ ಸೌಕರ್ಯ ಗಳು ದೊರೆಯುವುದಾದರೆ, ನಾವೆಲ್ಲರೂ ನಮ್ಮ ಸರಕಾರದೊಡನೆ ಸಂತೋಷದಿಂದ ನೆರವಾಗಬೇಕು. ನಾವು ನಮ್ಮ ಕೆಲಸವನ್ನು ಅತಿ ಸಮರ್ಥರಾಗಿ ಮಾಡಬೇಕೆಂದು ಎಲ್ಲರೂ ಒಪ್ಪಿ ಕೊಂಡಿರುವರು. ಸರಕಾರದ ಕೆಲವು ಇಲಾಖೆಗಳು ಇಂದಿನ ಜನ ತೆಯ ಸೇವೆಯನ್ನು ಒಳ್ಳೆಯ ರೀತಿಯಲ್ಲಿ ನಿರ್ವ ಹಿಸುವಂತೆ ಅವನ್ನು ತಿರುಗಿ ರಚಿಸಬೇಕು. ಹಳ್ಳಿ ಗಳ ಅಪಾರ ಮೂಲಾಶ್ರಯಗಳನ್ನು ನಾವು ಉಪ ಯೋಗಿಸಬೇಕು. ಆದರೆ ಸರಕಾರವು ಯತ್ನಿಸದೆ ಮತ್ತು ವೆಚ್ಚ ಮಾಡದೆ ಇದನ್ನು ಮಾಡಲು ಸಾಧ್ಯ ವಿಲ್ಲ. ಹಳ್ಳಿಗನಿಂದ ವಸೂಲಿ - ಮಾಡಲ್ಪಟ್ಟ ಮೊಬಲಗಿನಿಂದ ನಾವು ತುಂಬಾ ಪ್ರಯೋಜನ ಹೊಂದಿರುತ್ತೇವೆ. ಅವನು ತೆತ್ತ ತೆರಿಗೆಗಳು ಹೆಚ್ಚಾಗಿ ನಗರಗಳಿಗಾಗಿ ವೆಚ್ಚವಾಗಿವೆ. ಈಗ ಹಳ್ಳಿಗರ ತೆರಿಗೆಯನ್ನು ಹಳ್ಳಿಗಳಿಗೋಸ್ಕರವಾಗಿ ಖರ್ಚು ಮಾಡುವಾಗ ಮುಖ್ಯವಾಗಿ ಈ ಯತ್ನದಲ್ಲಿ ಹಳ್ಳಿ ಗಳು ಉದಾರ ಸಹಕಾರವನ್ನೀಯಲು ಸಿದ್ಧವಾಗಿರು ವಾಗ ನಾವು ಗೊಣಗುಟ್ಟಬಾರದು.

ಕೆಲಸಗಾರರಿಗೆ ತರಬೇತಿ

ಸರಕಾರದ ಸ್ಪೆಶಲ್ ಸಬ್ ಕಮಿಟಿಯು ಇತ್ತೀ ಚೆಗೆ ಸಭೆ ಸೇರಿತ್ತು. ಕೆಲಸಗಾರರ ತರಬೇತಿಯ ಕುರಿತು ತುಂಬಾ ಆಸಕ್ತಿ ತೆಗೆದುಕೊಳ್ಳ ಬೇಕೆಂದು ಅವರು ಹೇಳಿರುವರು. ಒಂದು ಯೋಜನೆಯನ್ನು ತಯಾರಿಸಲಾಗಿದೆ. ಇದರ ಪ್ರಕಾರ ಕೆಲವು ಮಂದಿಗೆ ಪ್ರಥಮದಲ್ಲಿ ತರಬೇತಿ ಕೊಡಲಾಗುವುದು. ಇವರು ಕೆಲಸಗಾರರಿಗೆ ಮುಂದೆ ತರಬೇತಿ ಕೊಡು ವರು. ಅಕ್ಟೋಬರದೊಳಗೆ ಈ ಕಾರ್ಯ ಕ್ರಮವು ಆರಂಭವಾಗಿ ಒಂದು ವರ್ಷದವರೆಗಿರ ಬಹುದು. ಆ ನಂತರ ಕಾಯಂ ತರಬೇತಿ ಕೇಂದ್ರಗಳನ್ನು ಆರಂಭಿಸ ಲಾಗುವುದು.

ಈ ತರಬೇತಿಯು ಸರಕಾರ ಹಾಗೂ ರಚ ನಾತ್ಮಕ ಕೆಲಸಗಾರರ ನಾಯಕತ್ವದಲ್ಲಿ ಕೆಲಸವು ನಡೆಯುತ್ತಿರುವ ಸ್ಥಳಗಳಲ್ಲಿ ಮಾತ್ರ ಕೊಡಲ್ಪ ಡುವುದು. ಅವರಿಂದ ತರಬೇತಿ ಪಡೆಯುವ ವಿದ್ಯಾ

ರ್ಥಿಗಳಿಗೆ ಈಗಿನ ಹಳ್ಳಿಯ ಕಾರ್ಯಗಳ--ಪ್ರತಿಯೊಂದು ವಿಷಯವನ್ನು ತಿಳಿಯಲು ಅವಕಾಶ ದೊರೆಯುವುದು. ಕೃಷಿ, ಹಳ್ಳಿಯ ಗುಡಿಕೈಗಾರಿಕೆ, ಎಲ್ಲರಿಗೂ ನಿರ್ಮಾಪಕ ಶಿಕ್ಷಣ, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ, ಹರಿಜನ ಮತ್ತು ಮಹಿಳೋದ್ಧಾರ ಇತ್ಯಾದಿ ವಿಷಯಗಳ ಅಭಿವೃದ್ಧಿಗೋಸ್ಕರ ಸಮರ್ಥರಾದ ಕೆಲಸಗಾರರಾಗಿ ಇವರು ತರಬೇತಿ ಪಡೆಯುವರು. ಈ ಪ್ರಾಂತದಲ್ಲಿ ನಮಗೆ ಮಹಿಳೋದ್ಧಾರ ಶಾಖೆಯೊಂದು ರಚಿಸಲ್ಪಟ್ಟು ಅದು ಈಗಾಗಲೇ ಹಳ್ಳಿಗಳಲ್ಲಿ ಕೆಲಸಮಾಡುತ್ತಿದೆ. ಹಳ್ಳಿಯ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರವನ್ನು ಕೊಡುತ್ತಿದೆ. ಎಲ್ಲಾ ಯತ್ನಗಳನ್ನು ಹೊಂದಿಸಿಕೊಳ್ಳುವುದು ಕಷ್ಟದ ಕೆಲಸ. ತರಬೇತಿಯೊಡನೆ ನಾವು ಈ ಕೆಲಸವನ್ನು ನಿರ್ವಹಿಸ ಬೇಕಾಗಿದೆ.

ನವಜೀವನ ಬೇರೂರಬೇಕು

ಈ ವರೆಗೆ ನಮ್ಮ ಕೆಲಸಗಾರರು ಸುಲಭದ ಕೆಲಸವನ್ನು ಕೈಕೊಂಡಿದ್ದರು ಇದು ಸ್ವಾಭಾವಿಕ ಹಾಗೂ ವಿವೇಕವೇ. ಈಗಿನ ಕೆಲಸವನ್ನು ನಾವು ನಿರ್ವಹಿಸಿ ನಮ್ಮ ಸಾಮರ್ಥ್ಯವನ್ನೂ ನಂಬಿಕೆಯನ್ನೂ ತಿಳಿದಿರುವೆವು ಆದರೆ ಇನ್ನು ನಾವು ಹಳ್ಳಿಯ ಸಂಸ್ಥೆಯನ್ನು ಹಲವು ಉದ್ದೇಶದ ಸಹಕಾರ ಸಂಘಗಳನ್ನಾಗಿಯೂ ಪಂಚಾಯತ್‌ಗಳನ್ನಾಗಿಯೂ ಮಾರ್ಪಡಿಸಿ ಕೆಲಸ ಮುಂದರಿಸ ಬೇಕು. ಪ್ರತಿಯೊಂದು ವಿಧದ ನಿರ್ಮಾಪಕ ವಿದ್ಯಾಭ್ಯಾಸಕ್ಕೋಸ್ಕರ ನಾವು ಹಳ್ಳಿಯನ್ನು ವ್ಯವಸ್ಥೀಕರಿಸಬೇಕು. ನಮ್ಮ 7 ಲಕ್ಷ ಹಳ್ಳಿಗಳ ಪ್ರತಿ ಮೂಲೆ ಮೂಲೆಯಲ್ಲಿ ನವಜೀವನವು ಬೇರೂರ ಬೇಕು.

ಸ್ವತಂತ್ರ ಸಮಾಜ

ಈ ರೀತಿ ಹಳ್ಳಿಯ ಉದ್ಧಾರದ ಕಾರ್ಯವನ್ನು ಮನಃಪೂರ್ವಕವಾಗಿ ಕೈಕೊಳ್ಳುವುದರಿಂದ ಹಳ್ಳಿಗಳಲ್ಲಿ ಉಂಟಾಗುವ ಗೊಂದಲವನ್ನು ನಾವು ತಪ್ಪಿಸಿಕೊಳ್ಳಬಹುದು. ಈಗ ಇರುವುದಕ್ಕಿಂತಲೂ ಹೆಚ್ಚಿಗೆ ಆಸಕ್ತಿ ನಾವು ವಹಿಸಬೇಕು. ಅದರಿಂದ ಚೈನಾ ದೇಶದ ಉದಾಹರಣೆಯನ್ನು ತಪ್ಪಿಸಬಹುದು. ತಲೆತಲಾಂತರಗಳಿಂದ ಹಳ್ಳಿಗರು ಪರಿಹಾರಕ್ಕೋಸ್ಕರ ಬೊಬ್ಬಿಡುತ್ತಿದ್ದರು. ಅವರು ತಡೆಯುತ್ತಿದ್ದ ತಾಳ್ಮೆಯು ಹೆಚ್ಚು ಕಾಲ ಹಾಗೆಯೇ ಇರಲಾರದು. ನಮ್ಮ ಹಳ್ಳಿಗಳ ಸಂಭಾವ್ಯ ಮೂಲಾಶ್ರಯಗಳನ್ನು ನಾವು ಗಾಂಧೀಜೀಯವರು ನಮಗೆ ಕೊಟ್ಟ ಮಹಾ ರಚನಾತ್ಮಕ ಕಾರ್ಯಕ್ರಮದಲ್ಲಿ ಸೇರಿಸಿ ಕೊಳ್ಳಬೇಕು. ಹಾಗೆ ಮಾಡಿ ಮಾನವ ಜಾತಿಯ ಚರಿತ್ರೆಯಲ್ಲಿಯೇ ಈ ವರೆಗೆ ಎಲ್ಲಿಯೂ ಸ್ಥಾಪಿಸಲ್ಪಡದಂತಹ ಅತಿ ಸ್ವತಂತ್ರ ಸಮಾಜವನ್ನು ನಿರ್ಮಿಸಬೇಕು. ಇಲ್ಲವೇ, ನಾವು ಹಳ್ಳಿಗಳನ್ನು ಅಸಡ್ಡೀಕರಿಸಿ ಗೊಂದಲದಲ್ಲಿ ಬೀಳಬಹುದು. ಅಂತಹ ಗೊಂದಲದಿಂದ ಹೊರಬರಲು ನಮಗೆ ಅನೇಕ ವರ್ಷಕಾಲ ಹಿಡಿಯಬಹುದು. ಇಂದಿನ ಕಾಲದಲ್ಲಿ ಯಾವುದಕ್ಕೂ ಸಾಧ್ಯವಿದೆ. ಹಿಂದುಸ್ಥಾನದ ಧನಿಕರಾದ ಪ್ರಜೆಗಳು ಅವರ ನಿಜವಾದ ನಾಗರಿಕತೆಯ ಮೂಲಾಧಾರದ ಕಡೆಗೆ ಸ್ವಲ್ಪ ಕಣ್ಣು ತಿರುಗಿಸಬೇಕಾದ ಕಾಲವಿದು. ಹಳ್ಳಿಯ ಕಡೆಗೆ ದೃಷ್ಟಿಸಲಿ!

ಫಿರ್ಕಾಭಿವೃದ್ಧಿ

ಪ್ರತಿ ಜಿಲ್ಲೆಗೆ ಎರಡು ಹೆಚ್ಚಿಗೆ ಫಿರ್ಕಾಗಳು

ತಮಿಳು ನಾಡಿನಲ್ಲಿರುವ ಫಿರ್ಕಾಗಳನ್ನೂ ಕೇಂದ್ರಗಳನ್ನೂ ಸಂದರ್ಶಿಸಿ ಅವುಗಳ ಕಾರ್ಯಕಲಾಪಗಳನ್ನು ಪರಿಶೀಲಿಸುವಂತೆಯೂ ಫಿರ್ಕಾಭಿವೃದ್ಧಿ ಕಾರ್ಯವನ್ನು ಸುಧಾರಿಸುವ ವಿಷಯದಲ್ಲಿ ಸರಕಾರಕ್ಕೆ ತನ್ನ ಅಭಿಪ್ರಾಯ ಸೂಚನೆಗಳನ್ನು ತಿಳಿಸುವಂತೆಯೂ ಕಳೆದ ಮಾರ್ಚಿ ತಿಂಗಳಲ್ಲಿ ಶ್ರೀ ಜಿ. ರಾಮಚಂದ್ರನ್, ಎಂ.ಎಲ್.ಎ., ಅವರನ್ನು ನೇಮಿಸಲಾಗಿತ್ತು. ಈ ವಿಷಯದಲ್ಲಿ ಅವರು ಒಪ್ಪಿಸಿದ ವರದಿಯನ್ನು ಪ್ರಾಂತಿಕ ಫಿರ್ಕಾಭಿವೃದ್ಧಿ ಬೋರ್ಡಿನ ಸ್ಥಾಯಿ ಸಲಹಾ ಉಪಸಮಿತಿಯು ಪರಿಶೀಲಿಸಿರುತ್ತದೆ. ಜೂನ್ 13 ನೇ ಮತ್ತು 14 ನೇ ತಾರೀಕುಗಳಲ್ಲಿ ಜರಗಿದ ಈ ಸಭೆಯಲ್ಲಿ ಗ್ರಾಮಾಭಿವೃದ್ಧಿ ಶಾಖೆಯ ಮಂತ್ರಿಯವರು ಅಧ್ಯಕ್ಷಸ್ಥಾನ ವಹಿಸಿದ್ದರು. ವರದಿಯಲ್ಲಿ ಸೂಚಿಸಿದ ಶಿಫಾರಸುಗಳನ್ನು ಪರಿಶೀಲಿಸುತ್ತಾ ಸಮಿತಿಯು ಆರಿಸಲ್ಪಟ್ಟ ಫಿರ್ಕಾಗಳಲ್ಲಿಯೂ ಕೇಂದ್ರಗಳಲ್ಲಿಯೂ ವಾಸಿಸುವ ಹಳ್ಳಿಗರು ಫಿರ್ಕಾಭಿವೃದ್ಧಿ ಕಾರ್ಯದಲ್ಲಿ ಉತ್ಸಾಹ ತೋರಿಸುವುದರಿಂದ ಈ ಯೋಜನೆಗೆ ಇನ್ನಷ್ಟು ಪ್ರೋತ್ಸಾಹ ಕೊಡುವುದು ಅವಶ್ಯವೆಂದೂ, ಅದನ್ನು ಆದಷ್ಟು ಬೇಗನೇ ವಿಸ್ತರಿಸುವುದು ಒಳ್ಳೆಯದೆಂದೂ ನಿಶ್ಚಯಿಸಿರುತ್ತದೆ ಇದರಿಂದ ಪ್ರತಿ ಜಿಲ್ಲೆಯಲ್ಲಿ ಎರಡೆರಡು ಹೆಚ್ಚಿಗೆ ಫಿರ್ಕಾಗಳನ್ನು ಆರಿಸಬೇಕೆಂದೂ ಇವು ಈಗಿರುವ ಫಿರ್ಕಾಗಳಿಗೆ ಹೊಂದಿಕೊಂಡಿದ್ದರೆ ಒಳ್ಳೆ ದೆಂದೂ ಅಭಿಪ್ರಾಯ ಪಟ್ಟಿದೆ.

ಸ್ಥಾಯಿ ಸಲಹಾ ಉಪಸಮಿತಿಯ ಶಿಫಾರಸನ್ನು ಸರಕಾರವು ಅಂಗೀಕರಿಸಿ, ಮದ್ರಾಸು, ವಿಶಾಖಪಟ್ಟಣಗಳು ಹೊರತು ಉಳಿದ ಎಲ್ಲಾ ಜಿಲ್ಲೆಗಳಲ್ಲಿಯೂ ಈ ರೀತಿ ಎರಡು ಫಿರ್ಕಾಗಳನ್ನು ಆರಿಸಬೇಕೆಂದೂ, ಇಲ್ಲಿ ತೀವ್ರ ಗ್ರಾಮ ಪುನರ್ನಿರ್ಮಾಣ ಕಾರ್ಯಗಳನ್ನು ಜರಗಿಸ ತರಬೇಕೆಂದೂ ಅಪ್ಪಣೆ ಕೊಟ್ಟಿದೆ. ವಿಶಾಖಪಟ್ಟಣ ಜಿಲ್ಲೆಯಲ್ಲಿ ನಾಲ್ಕು ಫಿರ್ಕಾಗಳನ್ನು ಆರಿಸಲಾಗುವುದು. ಉತ್ತರದಲ್ಲಿ ಎರಡು, ದಕ್ಷಿಣದಲ್ಲಿ ಎರಡು.

ಫಿರ್ಕಾ ಡೆವಲಪ್‌ಮೆಂಟ್ ಆಫೀಸರರು ಕಳೆದ ಎರಡು ವರ್ಷಗಳಿಂದ ಫಿರ್ಕಾದಲ್ಲಿರುವುದರಿಂದ ಹಾಗೂ ತುಂಬಾ ಅನುಭವಗಳಿರುವುದರಿಂದ, ಎರಡು ಹೆಚ್ಚಿಗೆ ಫಿರ್ಕಾಗಳ ಮೇಲ್ವಿಚಾರ ನೋಡಲು ಅವರಿಗೆ ಸಾಧ್ಯವಾಗಬೇಕೆಂದು ಸರಕಾರವು ಅಭಿಪ್ರಾಯ ಪಡುತ್ತದೆ. ಆದುದರಿಂದ ಹೆಚ್ಚಿಗೆ ಫಿರ್ಕಾ ಡೆವಲಪ್‌ಮೆಂಟ್ ಆಫೀಸರರನ್ನು ನೇಮಿಸಲಾಗುವುದಿಲ್ಲ. ಆದರೆ, ಹೆಚ್ಚಿಗೆ ಫಿರ್ಕಾಗಳಿಗೋಸ್ಕರ ಐದು ಹೆಚ್ಚಿಗೆ ಗ್ರಾಮ ಸೇವಕರನ್ನು ನೇಮಿಸಲಾಗುವುದು. ಈಗಿರುವ ಹಾಗೂ ಹೆಚ್ಚಿಗೆ ಗ್ರಾಮ ಸೇವಕರು ಮೂರು ಫಿರ್ಕಾಗಳಲ್ಲಿಯೂ ಕೆಲಸಮಾಡುವರು ಹಳ್ಳಿಗಳನ್ನು ಯೋಗ್ಯ ರೀತಿಯಲ್ಲಿ ತಿರಿಗಿ ಗುಂಪು ಗುಂಪುಗಳನ್ನಾಗಿ ವಿಂಗಡಿಸಲಾಗುವುದು. (21-7-49.)

ಸಂಧಿಕಾಲವೆಂದರೆ ಅನಿಶ್ಚಿತತೆ, ಸ್ಥಿತ್ಯಂತರ, ಇತ್ಯಾದಿಗಳ ಸಮ್ಮಿಶ್ರಣಗಳಿಂದ ಕೂಡಿದ್ದಾಗಿರುತ್ತದೆ. ದ್ವಿತೀಯ ಜಾಗತಿಕ ಯುದ್ಧ ಸಮಾಪ್ತಿಯ ನಂತರ ಜನರ ಅಂತರಂಗವು ಪ್ರಕ್ಷುಬ್ಧವಾಗಿ ಸಕಲ ದೇಶಗಳಲ್ಲಿ ಅನಿಷ್ಟ ಶಕ್ತಿಗಳು ಜನಿಸಿ ಅಸ್ವಾಭಾವಿಕವಾದ ಅದ್ಭುತ ಕೃತಿಗಳನ್ನೆಸಗಿವೆ ಇದಲ್ಲದೆ ನಮ್ಮ ದೇಶದ ವಿಚ್ಛೇದನದಿಂದ ಭೀಕರ ಆಘಾತವಾಗಿ ಮಹತ್ವದ ಸ್ಥಿತ್ಯಂತರಗಳೂ ಸಂಭವಿಸಿವೆ ಅನೇಕ ಗಂಡಾಂತರಗಳನ್ನು ನಾವು ಎದುರಿಸಿ ಪಾರಾಗಿದ್ದೇವೆ ನಮ್ಮ ಮನಶ್ಶಕ್ತಿಯು ಪ್ರಬಲವಾಗಿದ್ದು, ನಮ್ಮ ಉದ್ದೇಶಗಳು ಸ್ಪಷ್ಟವಾಗಿದ್ದು, ಧ್ಯೇಯಗಳು ಭದ್ರವಾಗಿದ್ದರೆ ಸದ್ಯದ ಪರಿಸ್ಥಿತಿಯಿಂದಲೂ ನಾವು ಪಾರಾಗಿ ಪ್ರಜಾರಾಜ್ಯವನ್ನು ಸುಲಭವಾಗಿ ನಡೆಸಿಕೊಂಡು ಹೋಗಲು ಸಿದ್ಧರಾಗಬಹುದೆಂದು ನನಗೆ ಅನಿಸುತ್ತದೆ.

—ವಲ್ಲಭಭಾಯಿ ಪಟೇಲ.

ಸ್ವಾತಂತ್ರ್ಯದಿನಾಚರಣೆ

ಘ.ಹೊ. ಗವರ್ನರರೂ ಮಾನ್ಯ ಪ್ರಧಾನ ಮಂತ್ರಿಗಳೂ ವಂದನಾಸ್ವೀಕಾರ ಮಾಡುತ್ತಿರುವದು.



ತಿರುವಾಂಕೂರು ಸೈನ್ಯವು ಶಿಸ್ತಿನಿಂದ ಸಾಗುತ್ತಿರುವುದು.

WORLD NEWSPAPER EXIBITION

ಕಲಿಯುಗ

ಸಂಪಾದಕರು : ಡಾ॥ ಎಂ. ಗೋಪಾಲಕೃಷ್ಣರಾಯರು
ಸಂಚಾಲಕರು : ಶ್ರೀಕಾಂತ ಮತ್ತು ಕಂಪನಿ

ಸಂಪುಟ ೧೩ | ಜುಲೈ ೧೯೪೯ | ಸಂಚಿಕೆ ೭

ನಮ್ಮ ನಿಯಮಗಳು

'ಕಲಿಯುಗ'... ...ಾಗಿ ಕಳಿಸಿ

...ೊಳಗಾಗಿ
...ಸಬೇಕು.
...ಪ್ರತಿಗಳು
...ಪ್ರತಿಗಳ
ಅಲ್ಲದೆ
ಒಂದು
...ಲಿಸಿದರೆ
...ಕೆಂಟರಿಗೆ
...ಹಣವನ್ನು
ವಿಳಾಸಕ್ಕೆ
...ಾದಕರು

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ
ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.
ಪತ್ರಿಕೆ ಹೆಸರು ....
ಆರಂಭ ದಿನಾಂಕ ....
ಪ್ರಕಟನಾ ಸ್ಥಳ ....
ಸಂಪಾದಕರ ಹೆಸರು ....
ಮಾಲಿಕರ ಹೆಸರು ....
ಸೌಜನ್ಯ ಕೃಪೆ ....

ಕಲಿಯುಗ ಧಾರವಾಡ' ಈ ವಿಳಾಸದೊಡನೆ ಮಾಡಬೇಕು.

ಕಾರ್ಯದರ್ಶಿ
ಕಲಿಯುಗ ಕಾರ್ಯಾಲಯ
ಧಾರವಾಡ

Namma Nadu 1949 Weekly

ನಮ್ಮ ನಾಡು

ಸಂಪಾದಕ : ಬಿ. ಎಲ್. ಆರಾಧ್ಯ. ಬೆಲೆ : 0--1--6 ಆಣೆ. ವಾರ ಪತ್ರಿಕೆ.

ಸಂಪುಟ : ೧] ಮೈಸೂರು, ಭಾನುವಾರ, ಡಿಸೆಂಬರ್ 18, 1949. [ಸಂಚಿಕೆ : ೧.

WORLD NEWS PAPER ... MEGARAVALLI 577 ... Shimoga Dist. Karnataka INDIA

ಆಳುವ ಮಹಾಸ್ವಾಮಿಯವರಾದ ಶ್ರೀ ಜಯಚಾಮರಾಜ ಒಡೆಯಂ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್., ಐ., ರವರು

Regd No M 1299 — 32 ನೇ ವರ್ಷ — ತ|| 18—7—49

ಸತ್ಯವಾದಿ
SATYAVADI

ಸಂಪಾದಕರು: ಅರಮನೆ ಸಿರಸ್ತೇದಾರ್ ಎಂ. ವಿ ಸುಬ್ರಾಯರು | ಬಿಡಿ ಪ್ರತಿ 3 ಪೈ

ಪಶ್ಚಿಮ ಬಂಗಾಳ ಮಹಾಚುನಾವಣೆ ಅಕ್ಟೋಬರ್ ವೇಳೆಗೆ

ಬಿರುದಾಂಕಿತರು

ಶ್ರೀಮನ್ಮಹಾರಾಜರವರಿಂದ ಬಿರುದಾಂಕಿತರು.

ರಾಜಕಾರ್ಯಪ್ರಸಕ್ತ ಶ್ರೀಗಳಾದ ಬಿ ಎಸ್ ರಾಘವೇಂದ್ರರಾವ್, ಶ್ರೀ ವೇದವ್ಯಾಸಾಚಾರ್ಯ, ಶ್ರೀ ಬಿ ಜಿ ಸೋರೆ ಮೊದಲಿಯಾರ್ ಎಂ ಟ್ಟಿ

ಲೋಕಪ್ರಕಾಶ. ಲೋಕಸೇವಾನಿರತ ನಿವೃತ್ತ ವಿ ಆರ್ ಚಿಕ್ಕಸಂಜಪ್ಪಶೆಟ್ಟಿ 1961 ರ ರಾವ ... ಶ್ರೀ ಪುಟ್ಟಶೆಟ್ಟಿ 31 ರ ಹೊ ... ವಿ ವೀರಪ್ಪ ವಿ ಶಿವಾನಶೆಟ್ಟಿ

ಖಾವಿ ... ಶ್ರೀ ಎಂ. ... ಸ್ವಾಮಿ

ಧರ್ಮಪ್ರಸಕ್ತ : ಶ್ರೀ ಸಿ ಕೆ ವೆಂ...

... ಶ್ರೀಗಳಾದ ಬಿ ... ಹೊಂಬಾಳೆ ರಂಗಯ್ಯ ಗಟ್ಟಿ ... ಎಸ್ ಬೋರೇಗೌಡ ಎಸ್ ಚನ್ನಪ್ಪ

ಲೋಕಸೇವಾನಿರತ ಶ್ರೀ ಎಂ ಹನುಮಯ್ಯ

ಪಂಡಿತ ರತ್ನ : ಆಸ್ಥಾನ ವಿದ್ವಾನ್ ಶ್ರೀ ಪುರುಷೋತ್ತಮ ಶಾಸ್ತ್ರಿ ಆಸ್ಥಾನ ವಿದ್ವಾನ್ ಶ್ರೀ ಬಿ ಶಿವಮೂರ್ತಿ ಶಾಸ್ತ್ರಿ ಆಸ್ಥಾನ ವಿದ್ವಾನ್ ಶ್ರೀ ವೆಂಕಟರಮಣ ... ಶ್ರೀ ... ಪುಟ್ಟಸ್ವಾಮಯ್ಯ

ಲಂಡನ್ನಲ್ಲಿ ಇದುವರೆಗೆ ಸಕ್ಕರೆ ತಲಾ ಹತ್ತು ಔನ್ಸ್‌ಗಳು ದೊರೆಯುತ್ತಿದ್ದವು ಈಗ ಎಂಟು ಔನ್ಸ್‌ಗಳಿಗೆ ಇಳಿಸಲಾಗಿದೆ.

ಚೀನಾ ರಾಷ್ಟ್ರೀಯ ಮಂಡಳವ ... ಚಿಯಾಂಗ್ ಕೈಷೇಕ್ ಬೇಕೆನಗೂ ... ಚೀನಾ ಕಮ್ಯೂನಿಸ್ಟ ... ಇನ್ನ ಸಂಧಾನದ ಮಾತು ಇಲ್ಲ ... ರಾಜ್ಯ ಸತ್ತರೆ ಸ್ವರ್ಗ ... ಗುರು

ಪ್ರಭಾತ ಫಿಲಂಸ್

15-7-49 ರಿಂದ

ಭಕ್ತಿ ರಸ ಪ್ರಧಾನವಾದ

ರಾಮಭಕ್ತ
ಹನುಮಾನ್

(ಅಮೋಘ ಹಿಂದಿ ಚಿತ್ರ)

ಪಾತ್ರ— ತ್ರಿಲೋಕ್ ಕಾಪೂರ್, ಶೋಭನಾ ಸಮರ್ಥ್

ಪ್ರತಿ ದಿನ 3 ಪ್ರದರ್ಶನಗಳು

— ದಿವ್ಯ ವಾಣಿ —

ವಿಶ್ವದಲ್ಲಿ ಮತಗಳ ಸಂಖ್ಯೆಯು ಅನಂತಗಳು. ಅವೆಲ್ಲವೂ ಮಾಯಾಬದ್ಧವಾಗಿವೆ ಮತವಿಲ್ಲದ ಮತವೇ ಸತ್ಯವಾದದ್ದು (ಸದಾನಂದಯೋಗಿ)

ನೆಹ್ರು ಪರ ಅರ್ಪಣೆ

ಬಾಂಬು ಸಿಡಿತದಿಂದ ಗೌರವಸಿಂಗ ಎಂಬ ಪೋಲೀಸನು ಸತ್ತನಷ್ಟೆ. ಆತನ ಶವ ಸಂಸ್ಕಾರ ಅತ್ಯಂತ ಗೌರವದಿಂದ ಜರುಗಿತು. ಪಂ|| ನೆಹ್ರು ಸರಕಾರಿಗಳ ವರ್ಗ ... ಪುಷ್ಪಹಾರ ಅರ್ಪಿಸಿದರು ಇನ್ಸ್‌ಪೆಕ್ಟರ್ ಜನರಲ್‌ರವರು ತಾವೇ ಹಣ ಹೊತ್ತಿದ್ದರು ಪೋಲೀಸ ಪೋಲೀಸ್ ಅಧಿಕಾರಿಗಳು ಎಲ್ಲರೂ ಅಂತ್ಯಯಾತ್ರೆಯಲ್ಲಿ ಭಾಗವಹಿಸಿದ್ದರು.

ಸ್ನೇಹವಿಲ್ಲ

ಅಮೇರಿಕಾ ಸೆನೇಟ್ ವಿನಿಯೋಗ ಸಮಿತಿ ಮಾರ್ಷಲ್ ಯೋಜನೆ ಪ್ರಕಾರ ಸ್ಪೇನಿಗೆ 5 ಕೋಟಿ ಡಾಲರ್ ಸಾಲ ಕೊಡಬೇಕೆಂದು ಸೂಚಿಸಿದೆ ಆದರೆ ಸ್ಪೇನಿಗೂ ಅಮೇರಿಕಾಕ್ಕೂ ಸ್ನೇಹವಿಲ್ಲ ಎಂದು ಅಧ್ಯಕ್ಷ ಟ್ರೂಮನ್ ತಿಳಿಸಿದ್ದಾರೆ.

ವೃತ್ತಾಂತ ಸಂಗ್ರಹ

ಹೈದರಾಬಾದ್ ಶಾಸನ ರಚನಾ ಸಭೆ ... 27 ರಿಂದ ಪ್ರಾರಂಭವಾಗುವುದೆಂದು ವದಂತಿ ವಾರ್ತೆ

ಸೊಲ್ಲಾಪುರ ಸಾರ್ವಜನಿಕ ಸಭೆಯಲ್ಲಿ ಬೊಂಬಾಯಿನ ಮಾನ್ಯ ಪ್ರಧಾನಿ ಶ್ರೀ ಬಿ ಜಿ ಖೇರ್ ಭಾಷಣ ಮಾಡುತ್ತಾ ಕಮ್ಯೂನಿಸ್ಟರ ಪ್ರಚಾರಕ್ಕೆ ಬಲಿಬೀಳದಿರಿ ಎಂದು ತಿಳಿಸಿದರು.

ಆಹಾರ ಧಾನ್ಯ ಮತ್ತು ಔಷಧಿಗಳಿಗೆ ಬೆಂಕಿ ಮುಂತಾದ ಅಪಾಯಗಳನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಉಗ್ರಶಾಸನ ಜಾರಿ ಮಾಡಬೇಕೆಂದು ದೆಹಲಿ ಪೌರಸಭೆ ನಿರ್ಣಯಿಸಿದೆ

ಸಾಂಕ್ರಾಮಿಕ ರೋಗಗಳ ಕಾರಣ ಶ್ರೀಮನ್ಮಹಾರಾಜರವರ ಚಿತ್ರದುರ್ಗ ಪ್ರವಾಸ ಮುಂದುವರಿದಿದೆ

ಮೈಸೂರು ಅರಮನೆಯಲ್ಲಿ ತಾ 16 ರಲ್ಲಿ ಶ್ರೀಮನ್ಮಹಾರಾಜರವರ ಮೂವತ್ತೊಂದನೆ ವರ್ಧಂತ್ಯುತ್ಸವ ಶಾಸ್ತ್ರೋಕ್ತವಾಗಿ ವೈಭವದಿಂದ ಜರುಗಿತು 31 ಕುಶಾಲ ತೋಪುಗಳು ಬಕೇರಿಯಿಂದ ಹಾರಿದವು ದಿವಾನರು, ಮಂತ್ರಿಗಳು ಮತ್ತು ಪ್ರಮುಖರು ಮಹಾಪ್ರಭುಗಳಿಗೆ ನಜರು ಒಪ್ಪಿಸಿದರು

ಗೂರಲು ನಿವಾರಣೆಗೆ

ಗೂರಲು ರೋಗ ನಿವಾರಣೆಗೆ ಅತಿ ಶಕ್ತಿಯುತವಾದ, ಬಹು ಗುಣಕಾರಿಯಾದ ಮತ್ತು ಲೋಕಪ್ರಖ್ಯಾತವಾದ ಚಿತ್ರಕೂಟದ ಕಾಮಾಡ್ ಗುಟ್ಟಗಳ ಮಾಲಿಕೆಯನ್ನು ತಾ || 8-8-49 ಪೂರ್ಣಿಮಾ ದಿವಸ ಒಂದೇ ಹೊತ್ತು ಸೇವಿಸುವುದರಿಂದ ಗೂರಲು ರೋಗವು ಸಂಪೂರ್ಣವಾಗಿ ಗುಣವಾಗುವುದು ಪತ್ರವ್ಯವಹಾರ ಇಂಗ್ಲೀಷಿನಲ್ಲಿ

MAHATMA TAPSI BABA
RAMGUFA
P. O. CHITRAKOT
(Banda) U.P.

ಹಣ ಸೌಲಭ್ಯ

ಸುಲಭ ಸೌಲಭ್ಯಗಳ ಮೇಲೆ ಹಣವನ್ನು ಸಾಲ ರೂಪವಾಗಿ ಒದಗಿಸಲೇರ್ಪಡಿಸಲಾಗುವುದು ಸಾಲದ ಅವಶ್ಯಕತೆಗೆ ಇಂದೇ ಇಂಗ್ಲೀಷಿನಲ್ಲಿ ವ್ಯವಹಾರ ಮಾಡಿ

J G S MONGA
Post Box 119, Baroda

ಸಚಿವರಿಗಿತ್ತ ಕೆಲಸ !

ಕಾಶಿ ಅಂಚೆ ಕಚೇರಿಯಲ್ಲಿ ಭಾಂಗಿಯೊಂದನ್ನು ತೂಗುವ ಕೆಲಸ ಭಾರತ ಸರ್ಕಾರದ ಸಚಿವ ಶ್ರೀ ರಫಿ ಅಹಮದ ಕಿದ್ವಾಯಿಯವರಿಗೇ ವಹಿಸಲ್ಪಟ್ಟ ವರದಿಯೊಂದು ಇದೀಗ ಬಂದಿದೆ ಸಚಿವರ ಭೇಟಿ ಅನಿರೀಕ್ಷಿತ ಘಟನೆ ಭಾಂಗಿಯನ್ನು ಕಳಿಸಲು ಅವರು ಕೊಟ್ಟರು. ಅಂಚೆ ಮಾಸ್ತರರು ಅವರನ್ನು ಗುರುತಿಸಲಿಲ್ಲ! ತೂಕ ಮಾಡಿಕೊಳ್ಳಲು ಕಕ್ಕಡಿ ಮತ್ತು ಬಟ್ಟು ಕೊಡಬೇಕೆಂದು ಅವರು ಸೇವಕನಿಗೆ ಆಜ್ಞಾಪಿಸಿದರು

ಬೆಂಗಳೂರು ಪ್ರಾಂತ ಸಭೆಯಲ್ಲಿ ಪತ್ರಿಕೆಗಳ ರಾಷ್ಟ್ರೀಕರಣ ನಿರ್ಣಯ ವಾಪಸು ಪಡೆಯಲಾಯಿತು

ಅಕ್ಕಿಯನ್ನು ಉಪಯೋಗಿಸಕೂಡದೆಂದು ಜಯಪುರ ಹೋಟಲುಗಳು ನಿರ್ಧರಿಸಿವೆ

ಒಂದು ಲಕ್ಷ ರೂ ಯುಕ್ತ ಪ್ರಾಂತ್ಯ ವ್ಯವಸಾಯ ಇಂಜನಿಯರ್ ಕಚೇರಿಯಲ್ಲಿ ದುರುಪಯೋಗವಾಗಿರುವುದಾಗಿ ವರದಿ

ಮೈಸೂರು ಜಿಲ್ಲಾ ಮಾಲದಾರು ಕಾರ್ಮಿಕ ಸಂಘದ ಆಡಳಿತ ವರ್ಗ ಕಾರ್ಯಕ ಸಚಿವರನ್ನು ಕಂಡು ಕುಂದುಕೊರತೆಗಳನ್ನು ವಿವರಿಸಲು ಆ ಬಗೆಗೆ ವಿಚಾರಿಸುವುದಾಗಿ ಅವರು ಭರವಸೆ ಇತ್ತರು ಎಂದು ಕಾರ್ಯದರ್ಶಿ ಶ್ರೀ ಟಿ ಎನ್. ಸುಬ್ಬಣ್ಣನವರು ತಿಳಿಸಿದ್ದಾರೆ

ಅಕ್ಟೋಬರ ವೇಳೆಗೆ ಪಶ್ಚಿಮ ಬಂಗಾಳ ಸಾರ್ವತ್ರಿಕ ಚುನಾವಣೆ ಜರುಗಲಿದೆ ಅಲ್ಲಿಯವರೆಗೆ ತಾತ್ಕಾಲಿಕ ಸರ್ಕಾರ ರಚನೆಯಾಗಲಿದೆ ವಿದೇಶಗಳಲ್ಲಿ ಮುಖ್ಯ ಪ್ರಧಾನಿ ಶ್ರೀ ಬಿ ಸಿ ರಾಯರನ್ನು ಕಳಿಸಿರುವ ವರದಿ ಇದೆ

ಅಪೇರಾ—

14-7-49 ರಿಂದ

ವಿವಿಧ ಸ್ವಾರಸ್ಯ ದೃಶ್ಯಗಳಿಂದ ಕೂಡಿ ಪ್ರೇಕ್ಷಕರನ್ನು ಆತ್ಮಾನಂದಗೊಳಿಸುವ

ಪಿಳ್ಳೆಕುಂವಳಿ

ದೊರೈರಾಜ್, ಒಾಲಯ್ಯ, ರಾಜಲಕ್ಷ್ಮಿ, ಕಾಳಿ ಎನ್ ರತ್ನಂ, ರಾಜಾಕಾಂತಂ ಪೆರುಮಾಳ್ ಪಾತ್ರವಹಿಸಿರುವ

ಅಮೋಘ ತಮಿಳು ಚಿತ್ರ

ಪ್ರತಿ ದಿನ 3 ಆಟಗಳು

ಅಧ್ಯಾತ್ಮಪ್ರಕಾಶ

"ಏತಜ್ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ನಾತಃಪರಂ ವೇದಿತವ್ಯಂ ಹಿ ಕಿಂಚಿತ್"

ಸಂಪುಟ ೧೮ ★ 1949 ಸಂಚಿಕೆ ೯

ವಿಷಯಗಳು

WORLD ... PAPER EXHIBITION
Shimoga Dist, Karnataka

ಈ ತಿಂಗಳ ಸಂದೇಶ	೧೯೩
ಕಾರ್ಯಾಲಯದ ಸುದ್ದಿ	೨೦೦
ಷತೀಮಳ ದಾನ	೨೦೧
ಶಾಸ್ತ್ರದೃಷ್ಟಿ	೨೦೩
ಶಾಂಕರವೇದಾಂತ ನಿಘಂಟು	೨೦೭
ನೈಮಿಷಾರಣ್ಯ	೨೦೮
ಶಂಕರನ ಪತ್ರಗಳು	೨೧೩
ಉಪಕಾರಸ್ಮರಣೆ	೨೧೭
ಭಗವದ್ಗೀತೆಯ ಉಪನ್ಯಾಸಗಳು (ಸ್ವತಂತ್ರ ಪುಟಗಳು)	೫೧೩-೫೨೮

ಪತ್ರಿಕೆಗೆ ಚಂದ

ರೂ. ೩-೪-೦

ಪೋಷಕರಿಗೆ ರೂ. ೫-೪-೦ ಮತ್ತು ಮೇಲೆ

WORLD PAPER EXHIBITION
577424
INDIA

ಆದಷ್ಟು ಜನ

ಹೊಸ ಚಂದಾದಾರರನ್ನು ಮಾಡಿ

ಪ್ರೋತ್ಸಾಹಿಸಿ.

ಸಂಪಾದಕರು ಮತ್ತು ಪ್ರಕಾಶಕರು: ವೈ. ನರಸಪ್ಪನವರು.
ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ.

May 1949.

Copy Right

WORLD NEWS...
...Dist. K...

"ಪಂಡಿತಾಸ್ಸಮದರ್ಶಿನಃ"

ಪಂಡಿತಮಂಡಲ ಪತ್ರಿಕೆ

ಶ್ರೀ ಸರ್ವಧಾರಿನಾಮ ಸಂವತ್ಸರದ

ವಸಂತ-ಶರತ್ ಸಂಚಿಕೆ ೧೯೪೮-೪೯

೧೧

ವಿದ್ಯಾಶಾಲಾ ಪಂಡಿತ ಮಂಡಲ

ಬೆಂಗಳೂರು

ಸಂಪುಟ ೯] [ಸಂಚಿಕೆ ೧

NAVAJYOTHI NEW-PAPER

ನವಜ್ಯೋತಿ

ರಾಷ್ಟ್ರೀಯ ಕನ್ನಡ ಪಕ್ಷ ಪತ್ರಿಕೆ. 71

Raj Gopala Achar.

ಭಾರತದ ಹಿರಿಯ ತಲೆ........

ಗವರ್ನರ್ ಜನರಲ್ ರಾಜಾಜಿ.

(........ ಕೃಪೆಯಿಂದ)

C. Krishna Bhatt & Sons

೨೪ ಪುಟಗಳು

Agumbe

seen

ಒಳಗೇನಿದೆ?

ಓಟು ಅಥವಾ ಮತದಾನ (ಸಂಪಾದಕೀಯ)

ಇಂದು ಯುವಕರ ಕರ್ತವ್ಯ (ಲೇಖನ)

ಮಸಣದಲ್ಲಿ (ಸಣ್ಣ ಕತೆ)

ಮಲೆನಾಡಿನ ಸಂಪತ್ತು (ಲೇಖನ)

ಮಕ್ಕಳ ಮಂಟಪ

ಚಿತ್ರರಂಗ

ವಾರ್ತೆಗಳು

ಇತ್ಯಾದಿ, ಇತ್ಯಾದಿ

Navajyothi Navajyothi K. Narayana

1949 | *Navajyothi* | ಬೆಲೆ 2 ಆಣೆ

SHIMOGA

॥ ಕನ್ನಡ ಚೆಲ್ನುಡಿ ಉನ್ನತಿಗೇರಲಿ ॥

ಸುಪ್ರಭಾತ

ಮಹಿಳಾ ಸಾಹಿತ್ಯದ ಪ್ರಗತಿಗಾಗಿ ಪ್ರಕಟವಾಗುವ
ಮಾಸ ಪತ್ರಿಕೆ.

ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತ್
ವರು ಚೀನದಲ್ಲಿ ಭಾರತದ ರಾಯಭಾರಿಯಾಗುವ
ಸಂಭವವಿದೆಯೆಂದು ತಿಳಿದುಬರುತ್ತದೆ.

ಕಾಣಿಕೆ -

ಕಮಲ ೧
ಮೇ, 1952.
ದಳ ೩

ರಾಮರಾಜ್ಯ

1950

WORLD NEWS PAPER
MEGARAVALLI
Shimoga Dist, Karnataka

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ
ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.
ಪತ್ರಿಕೆ ಹೆಸರು ರಾಮರಾಜ್ಯ
ಆರಂಭ ದಿನಾಂಕ
ಪ್ರಕಟನಾ ಸ್ಥಳ ಬೆಂಗಳೂರು
ಸಂಪಾದಕರ ಹೆಸರು
ಮಾಲೀಕರ ಹೆಸರು
ಸೌಜನ್ಯ ಕೃಪೆ



ತೀಕ್ಷ್ಣಮತಿ ರಾಜಾಜಿ

ಸಾಪ್ತಾಹಿಕ

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.

ಪತ್ರಿಕೆ ಹೆಸರು ______
ಆರಂಭ ದಿನಾಂಕ ______
ಪ್ರಕಟನಾ ಸ್ಥಳ ______
ಸಂಪಾದಕರ ಹೆಸರು ______
ಮ್ಹಾಲಿಕರ ಹೆಸರು ______
ಸೌಜನ್ಯ ಕೃಪೆ ______

ಮಹಿಳಾ ಸಾರಥಿಗಳು

...ಡ್ರ್ ಮೋಟಾರು ಡ್ರೈವರರಲ್ಲಿ ಅನೇಕ ಮಹಿಳೆಯ...
...ರು, ಈ ವರ್ಷ, ಮೊಂಟಿಕಾರ್ಲೊ ಎಂಬಲ್ಲಿ ನಡೆವ...
...ಡಾಟದ ಸ್ಪರ್ಧೆಯಲ್ಲಿ ಭಾಗವಹಿಸುವರು. ಅಲ್ಲಿಗೆ...
...ಲ್ಲಿ ಎರಡು ಸಾವಿರ ಮೈಲುಗಳ ತನಕ, ಊಟತಿಂದಿ...
...ನಗಳನು ಮೂರು ದಿನಗಳ ತನಕ ಓಡಿಸುವರು.

॥ ವಂದೇ ಮಾತರಂ ॥

ಮಿತ್ರ

ಬಾಪೂಜೀ ಸ್ಮಾರಕ ಸಂಚಿಕೆ

Shimoga Dist. Karanataka State, INDIA

1950

ತಾಲ್ಲೂಕು ಕನ್ನಡನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ಣಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು ....

ಆರಂಭ ದಿನಾಂಕ ....

ಪ್ರಕಟನಾ ಸ್ಥಳ ....

ಸಂಪಾದಕರ ಹೆಸರು ....

ಮಾಲಿಕರ ಹೆಸರು ....

ಸೌಜನ್ಯ ಕೃಪೆ ....

ಬೆಲೆ:
೦—೮—೦

ಸಂಪುಟ ೧] ಜನವರಿ ೧೯೫೦ [ಸಂಚಿಕೆ ೫

ಬಾಪೂಜಿಯವರು ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿ ಇದೇ ಜನವರಿ ೩೦ ಕ್ಕೆ ಎರಡುವರ್ಷಗಳಾಗು

ಯುಗಾಂತರ

1950

ಈ ಸಂಚಿಕೆಯಲ್ಲಿ

1 ● ಮಣ್ಣು ಮತ್ತು ಮಾನವ

2 ● ಹೆಚ್ಚು ಬರಗಾಲ ಬೆಳೆಯಿರಿ

3 ● ಯಾಂಕೀಡಾಲರ್ ಕೈಂಕರ್ಯ?

4 ● ಓ ನನ್ನ ಜನವೇ

5 ● ನವೆಂಬರ್ ಕ್ರಾಂತಿ



ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ಣಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು ....

ಆರಂ: ದಿನಾಂಕ ....

ಪ್ರಕಟಣ ಸ್ಥಳ ....

ಸಂಪಾದಕರ ಹೆಸರು ....

ಮ್ಯಾನೇಜರ ಹೆಸರು ....

ಸೌಜನ್ಯ ಕೃಪೆ ....

೫೦ [ಸಂಚಿಕೆ ೩—೪

ಬೆಲೆ ... ಆಣೆ

ಕಿರಣ

1950

1950

79

WORLD NEWS PAPER
MEGARAVALLI - 57
Shimoga Dist. Karanataka State INDIA

KIRAN

4
ANNAS

WORLD N... EDITION
... 577 24
Shimoga Dist, Karnataka State, INDIA

ವೈದಿಕ ಸನಾತನ

1950

ಧರ್ಮಪತ್ರಿಕಾ.

ಸಂಪುಟ ೪ | ವಿಕೃತಿ ಸಂವತ್ಸರ ಆಶ್ವೀಜ ಮಾಸ ತಾ. ೧೪-೧೦-೫೦ | ಸಂಚಿಕೆ ೩

ಕಾರ್ಯಾಲಯ,
ಶ್ರೀ ಸೀತಾರಾಮ ಮಂದಿರ,
ಹಲಸೂರುಪೇಟೆ, ಬೆಂಗಳೂರು 2.

[ವಾರ್ಷಿಕ ಚಂದಾ 3-0-0

ವಿಶ್ವಕರ್ಮ

ಸಂಪುಟ ೩ ನವೆಂಬರ್ ೧೯೫೦ ಸಂಚಿಕೆ ೧

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ
ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.
ಪತ್ರಿಕೆ ಹೆಸರು [illegible]
ಆರಂಭ ದಿನಾಂಕ
ಪ್ರಕಟನಾ ಸ್ಥಳ [illegible]
ಸಂಪಾದಕರ ಹೆಸರು [illegible]
ಮ್ಯಾಲಿಕರ ಹೆಸರು
ಸೌಜನ್ಯ ಕೃಪೆ
WORLD NEWS PAPER EXIB[illegible]
MEGARAVALLI
Shimoga-Dist, Karna[illegible]
INDIA

ವೇಣುಗೋಪಾಲ

ಬೆಲೆ ೭ ಆಣೆ. ವಾ.ಚಂ. ೪ ರೂ.

ಚಿತ್ರಗುಪ್ತ

ಬೆಲೆ:
ರೂ. 1-4-0

ದೀಪಾವಳಿ ಸಂಚಿಕೆ 1956

ವಿಮರ್ಶಕ

ಪ್ರಗತಿಶೀಲ
ಕನ್ನಡಮಾಸಪತ್ರಿಕೆ,
ಉಡುಪಿ, ದ. ಭಾರತ.
ವಾರ್ಷಿಕ ಚಂದಾ 3 ರೂ.
ಬಿಡಿಸಂಚಿಕೆ: 4 ಆಣೆ.

VIMARSHAKA A Progressive Kannada monthly UDIPI. S. India.

JULY 1950 1950 ಜುಲೈ

ಪತ್ರಿಕೋದ್ಯೋಗಿಗಳಿಗಾಗಿ ತರಬೇತಿ ಕೇಂದ್ರಗಳು-
—ಸಂಪಾದಕೀಯ.

ರಕ್ಷ್ಯಾವ ರೈತರು-
—ಶ್ರೀ ಮ। ರಾಜೀವ, ಬಿ. ಎ., ಮಂಗಳೂರು.

ದಕ್ಷಿಣಕನ್ನಡದಲ್ಲಿ ಸಮಾಜವಾದ-
—ಶ್ರೀ ಪಿ. ಶ್ರೀನಿವಾಸ ಸೆಟ್ಟಿ, ಬಿ. ಎ. ಎಲ್. ಎಲ್. ಬಿ, ಕುಂದಾಪುರ.

ರಿಜಿಸ್ಟ್ರಿ ನಂಬ್ರ 690?

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.

ಪತ್ರಿಕೆ ಹೆಸರು
ಆರಂಭ ದಿನಾಂಕ
ಪ್ರಕಟನಾ ಸ್ಥಳ
ಸಂಪಾದಕರ ಹೆಸರು
ಮಾಲಿಕರ ಹೆಸರು
ಸೌಜನ್ಯ ಕೃತಿ

ಟ್, ಬಿ. ಎ. (ಆನರ್ಸ್)

ಸೌಕರ್ಯಗಳಿಗೆ

ಬೈಲ್, ಮಂಗಳೂರು.

AS

Court Road, UDIPI. Kodialabail, MANGALORE.

A high class Boarding Lodging & Restuarant.

ಸಮದರ್ಶಿ

SAMADARSHI

ಎಪ್ರಿಲ್ ೧೯೫೦

1950

ಈ ಸಂಚಿಕೆಯಲ್ಲಿ:

ಕಲಾಕಾರನು ಆತ್ಮದ ಶಿಲ್ಪಿ

[illegible] ವೀರ ಹುತಾತ್ಮರು.

ಜೂಲಿಯಸ್ ಫ್ಯೂಚಿಕ್.

ಕರ್ನಾಟಕ ವೀರ ಹುತಾತ್ಮ ನಾಯಕರು

೨೬ ಜನವರಿ ೧೯೫೦

ನಾರದರು ಕೇಳಿದ ಮಾತುಕತೆಗಳು.

ಬರಹಗಾರ ನಿರಂಜನ್.

ಇಟಲಿಯ ಜಮೀನಿಲ್ಲದ ರೈತರು ಜಮೀನನು ಸ್ವಾಧೀನಮಾಡಿಕೊಳ್ಳುತ್ತಿದ್ದಾರೆ.

ಪ್ರಗತಿಶೀಲ ಮಾಸಪತ್ರಿಕೆ

PROGRESSIVE KANNADA MONTHLY

ಬೆಲೆ ೪ ಆಣೆ

ಸಂಪಾದಕ: ಟಿ. ಯಸ್. ಹೆಗ್ಡೆ

ಸರ್ಕಾರದವರು ಗ್ರಾಮಪಂಚಾಯಿತಿಗಳಿಗೂ, ಸಹಕಾರ ಸಂಘಗಳಿಗೂ
ಈ ಪತ್ರಿಕೆಯನ್ನು ಮಂಜೂರು ಮಾಡಿದ್ದಾರೆ.

ನಾಡಕಹಳೆ

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962 13

ಪತ್ರಿಕೆ ಹೆಸರು ನಾಡಕಹಳೆ

ಆರಂಭ ದಿನಾಂಕ

ಪ್ರಕಟನಾ ಸ್ಥಳ ತೀರ್ಥಹಳ್ಳಿ

ಸಂಪಾದಕರ ಹೆಸರು ಶ್ರೀ ಕಾಳಿಂಗಯ್ಯನ [illegible]

ಮಾಲಿಕರ ಹೆಸರು

ಸೌಜನ್ಯ ಕೃಪೆ ಶ್ರೀ [illegible]

ಗಿಡನೆಡಿಗೆಯ ಕಾರ್ಯಕ್ರಮ ಫಲಪ್ರದವಾಗಲಿ!

ಭಾರತಿ

ಸರ್ವೋತ್ತಮ ಸಣ್ಣಕತೆಗಳ ಸಂಕಲನ ಪತ್ರಿಕೆ

5 ಆಣೆ



ರಾಯಕರ

1952

೪೪ನೇ ಕನ್ನಡ ಸಾಹಿತ್ಯ ಸಮ್ಮೇಲನ, ತುಮಕೂರು.

ಕರ್ಣಾಟಕ ವೃತ್ತಪತ್ರಿಕಾ ಪ್ರದರ್ಶನ

28, 29, 30 ದಶಂಬರ್, 1963.

ಪತ್ರಿಕೆಯ ಹೆಸರು: "ಭಾರತಿ"

ಪ್ರಕಟನಾ ಸ್ಥಳ: ಮುಂಬಯಿ

ಸಂಪಾದಕರ ಹೆಸರು: ಕೆ. ಸಾವಿತ್ರಿ

ಇತರ ವಿವರಗಳು: ಈಗ ಪ್ರಕಟವಾಗುತ್ತಿಲ್ಲ

ಸೌಜನ್ಯ ಕೃಪೆ:—ಶ್ರೀ ಶ್ರೀಪತಿರಾವ್ ಪಲಿಮಾರ್ಕಾರ್, ಬಿ.ಎ.,ಬಿ.ಟಿ.
ಮಂಗಳೂರು—3 (ದ. ಕ.)

NEWS PAPER EXHIBITION

ಸರ್ವಧಾರಿ ಸಂ|| ಶ್ರಾವಣ ಶುದ್ಧ ಪೌರ್ಣಮಿ

ಸನಾತನ

ಸಂಪಾದಕ:-ಸ್ಮಾರ್ತಪ್ರಯೋಗ ನಿಪುಣ ವಿದ್ವಾನ್ ಬಿ. ಯರ್. ಸುಬ್ರಹ್ಮಣ್ಯ ಜ್ಯೋಸ್ಯರು.

ಸಂಪುಟ ೨] ತಾರೀಖು ೧೯-೮-೧೯೪೮ [ಸಂಚಿಕೆ ೧

ಸಂಪಾದಕೀಯ.

ಈ ಸರ್ವಧಾರಿ ಶ್ರಾವಣ ಶುದ್ಧ ೧೫ (ತಾ|| ೧೯-೮-೪೮) ಸಮಯಕ್ಕೆ ವೈದಿಕ ಸನಾತನ ಧರ್ಮ ಪತ್ರಿಕೆಗೆ ಎರಡನೆ ವರ್ಷ ಪ್ರಾರಂಭವಾಗುತ್ತೆ. ಕಳೆದ ವರ್ಷ ೫೫ ಲೇಖನಗಳ ಪ್ರಚಾರವಾಯಿತು. ಲೇಖನಗಳು ಬರೆದ ವಿದ್ವಾಂಸರಿಗೂ ಮಾನ್ಯ ಅಭಿಮಾನಿಗಳಿಗೂ ವಂದನೆಗಳು. ಸನಾತನಿಗಳೂ ವಾಚಕರೂ ಆದ ಚಂದಾದಾರ ಮಹಾಶಯರಿಗೆ ಅಭಿನಂದನೆಗಳು. ಧರ್ಮ ಸಂಸ್ಥಾಪಕರಾದ ಶ್ರೀಮತಸ್ವವೇದಾನುಯಾಯಿ ಮಠಾಧಿಪತಿಗಳ ಆಶೀರ್ವಾದ ಹಿಂದೂ ಸನಾತನ ಧರ್ಮ ಪ್ರಚಾರಕ ಮಠಗಳ ಅಭಿಮಾನ, ತಮ್ಮ ತಮ್ಮ ಶಿಷ್ಯ ವರ್ಗದಲ್ಲಿ ಈ ನಮ್ಮ ಪತ್ರಿಕೆ ಪ್ರಚಾರವಾಗುವಂತೆ ಮಾಡಿದುದು ಅತ್ಯಂತ ಸಹಾಯವಾಗಿದೆ. ಮಠಗುರುಗಳಿಂದಲೇ ನಡೆಯಬೇಕಾದ ಧರ್ಮಪ್ರಚಾರ ಕಾರ್ಯದಲ್ಲಿ ಸಣ್ಣದಾಗಿ ಉಪಕ್ರಮಿಸಿರುವ ಈ ಪತ್ರಿಕೆಗೆ ಬೆಂಬಲವು ಶ್ರೀಮನ್ಮಠಾಧೀಶ್ವರರದೇ ಆಗಿ ಅವರ ಅನುಗ್ರಹ ಸಹಾಯ ಸಂಪತ್ತುಗಳು ವಿಶೇಷವಾಗಿ ಆಗಬೇಕಾಗಿವೆ

ಶ್ರೀ ಜಗದ್ಗುರು ಶಂಕರಾಚಾರ್ಯ ಪಶ್ಚಿಮಾಮ್ನಾಯ ಶ್ರೀ ದ್ವಾರಕಾ ಪೀಠಾಧಿಪ ಶ್ರೀ ಶ್ರೀ ಅಭಿನವ ಸಚ್ಚಿದಾನಂದ ಸ್ವಾಮಿಗಳ ಪ್ರೇರಣೆ, ಆಶೀರ್ವಾದ, ದ್ರವ್ಯ ಸಹಾಯ, ಶ್ರೀಮುಖದ ಮೂಲ್ಕ ಶಿಷ್ಯವೃಂದಕ್ಕೆ ಆಜ್ಞೆ, ಇವುಗಳು ಪತ್ರಿಕಾ ಪ್ರಾರಂಭಾಭಿವೃದ್ಧಿಗಳಿಗೆ ಮೂಲ ಕಾರಣ. ಭಗವಂತನು ಸಾಮಾನ್ಯರಿಗೆ ಎಷ್ಟು ದುರ್ಲಭನೋ ಹಾಗೆ ಆತನ ಧರ್ಮ ತತ್ವಗಳೂ ಮನಸ್ಸಿಗೆ ಗ್ರಹಣ ಸಾಧ್ಯವಾಗಿಲ್ಲ ಭಕ್ತಿ ಜ್ಞಾನ ವೈರಾಗ್ಯಗಳು ಮನಶುದ್ಧಿಯಿಲ್ಲದೆ ಲಭಿಸದು. ಮನಶುದ್ಧಿ ಧರ್ಮ ಬೋಧನೆಯಿಂದ ಆಗಬೇಕು ವಿದ್ವಾಂಸರಿಂದ ಬರೆಯಲ್ಪಟ್ಟ ಧರ್ಮ ತತ್ವಗಳು ಪತ್ರಿಕಾ ಮುಖೇನ ಪ್ರಚಾರವಾಗಬೇಕು. ಇಹಲೋಕದ ಸುಖಕ್ಕೂ ಧರ್ಮವೇ ಮುಖ್ಯ. ಸಮಸ್ತ ವಸ್ತುಗಳನ್ನೂ ಧರ್ಮವು ಆವರಿಸಿಕೊಂಡಿದೆ. ಬೆಂಕಿಗೆ ಸುಡುವದೂ, ನೀರಿಗೆ ಸೀತಳ, ವಾಯುವಿಗೆ ಚಲನ, ಇತಾದಿಗಳು ಅವುಗಳ ಧರ್ಮಗಳಾಗಿವೆ. ವರ್ಣಾಶ್ರಮಾಚಾರಗಳು ಮಾನವನ ಧರ್ಮ. ಪ್ರಾಣಿ ವರ್ಗದಲ್ಲಿ ಮನುಷ್ಯನಿಗೆ ತಿಳುವಳಿಕೆ ಇದೆ. ವರ್ಣ ಧರ್ಮ, ಆಶ್ರಮ ಧರ್ಮ, ಆಚಾರ ಧರ್ಮ ಈ ಶಕ್ತಿ ಮನುಷ್ಯನಿಗಿದೆ. ಆದರೊಡನೆ—ದೇಶ ಧರ್ಮ—ಕುಲ ಪರಂಪರಾಧರ್ಮಗಳು ಗ್ರಾಹ್ಯವಿದೆ. ಸ್ವಧರ್ಮವ್ಯಾವುದೆಂಬುದನ್ನೂ ತನ್ನ ದೇಶದ ಪ್ರಚಾರದಲ್ಲಿರುವ ವಿದ್ಯಾವಂತರಾದ ಹಿರಿಯರಿಂದ ತಿಳಿಯಬೇಕು; ಇತರ ದೇಶದವರ ವಿದ್ಯಾಬುದ್ಧಿ ಪ್ರಚಾರದಿಂದಲ್ಲ. ನಮ್ಮ ದೇಶದ ಅತ್ಯುತ್ತಮ ಧರ್ಮಗಳು ಸ್ವಾಭಿಮಾನೀವಿದೇಶಿಯ ವಿಧರ್ಮಿಗಳಿಂದ ಅಳಿಸಲ್ಪಟ್ಟಿತು. ಅದಕ್ಕೆ ಸಾಧನವೇನೆಂದರೆ ತಮ್ಮ ಬಳಕೆಯಲ್ಲಿನ ಭಾಷಾವೇಷಗಳ ಸಂಯೋಗನೆಯ ಮೂಲಕ ಸ್ವಕೀಯ ಧರ್ಮಗಳಲ್ಲಿ ತಿರಸ್ಕಾರ ಬುದ್ಧಿಯುಂಟಾಗುವಂತೆ ಮಾಡಿದ ಚಾತುರ್ಯ. ದೈವವಶಾತ್ ನಮಗೆ ಸ್ವರಾಜ್ಯ ಬಂದು ಸ್ವದೇಶಿಯರ ಆಡಳಿತದಲ್ಲಿದೆ. ಬೇರೂರಿರುವ ಪರಧರ್ಮ ಸುಧಾರಣೆ ಹೋಗಿ ಸ್ವಧರ್ಮ ಸ್ಥಾಪನೆಯಾಗಬೇಕು. ಸ್ವಧರ್ಮವನ್ನರಿತರೆ ವಿದೇಶಿಯರ ಭ್ರಮೆ ನಿವೃತ್ತಿಯಾಗುತ್ತೆ ಸ್ವಧರ್ಮ ತತ್ವಗಳು ತಿಳಿಯುವುದು ಹ್ಯಾಗೆ? ಪತ್ರಿಕಾ ಪ್ರಚಾರದಿಂದಲ್ಲವೆ? ಆದಕ್ಕೆಲ್ಲರೂ ಸಹಕರಿಸಿ ಕಾರ್ಯ ತತ್ಪರರಾದರೆ ಸ್ವಧರ್ಮದ ಸಿದ್ಧಿಯಾಗುತ್ತೆ. ದೇಶ, ಕಾಲ, ರಾಜ್ಯ, ಕ್ಷೇಮಗಳು ತಾವಾಗಿಯೇ ಲಭಿಸುತ್ತವೆ. ಇದೇ ನಮ್ಮ ವೈದಿಕ ಸನಾತನ ಧರ್ಮ ಪತ್ರಿಕೆಯ ಧ್ಯೇಯ. ದೇಶ ಬಾಂಧವರೆ, ಪತ್ರಿಕೆಗೆ ಚಂದಾದಾರರಾಗಿರಿ.! ಪತ್ರಿಕಾಚಲನ ಕಾರ್ಯಕ್ಕಾಗಿಯೇ ಏರ್ಪಡಿಸಿರುವ "ಸನಾತನ ಲಿಮಿಟೆಡ್,,ನ ಷೇರನ್ನು ಭರ್ತಿಮಾಡಲು ಸಹಾಯಕರಾಗಿರಿ!! ಧರ್ಮವನ್ನು ರಕ್ಷಿಸಿರಿ !!!

"ಧರ್ಮೇಣಪಾಪಮಪನುಗತಿ। ಧರ್ಮೆ ಸರ್ವ ಪ್ರತಿಷ್ಠಿತಂ||

[ಸಂಪಾದಕ]

ಭಾರತಿ

ಸರ್ವೋತ್ತಮ ಸಣ್ಣಕತೆಗಳ ಸಂಕಲನ ಪತ್ರಿಕೆ 5 ಆಣೆ

೪೪ ನೇ ಕನ್ನಡ ಸಾಹಿತ್ಯ ಸಮ್ಮೇಳನ, ತುಮಕೂರು.

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

28, 29, 30 ದಶಂಬರ್, 1963.

ಪತ್ರಿಕೆಯ ಹೆಸರು: "ಭಾರತಿ"

ಪ್ರಕಟನಾ ಸ್ಥಳ: ಮುಂಬಯಿ

ಸಂಪಾದಕರ ಹೆಸರು: ಕೆ. ಸಾವಿತ್ರಿ

ಇತರ ವಿವರಗಳು: ಈಗ ಪ್ರಕಟವಾಗುವುದಿಲ್ಲ

ಸೌಜನ್ಯ ಕೃಪೆ:—ಶ್ರೀ ಶ್ರೀಪತಿರಾವ್ ಪಲಿಮಾರ್ಕಾರ್,
ಮಂಗಳೂರು—3 (ದ. ಕ.) ಬಿ.ಎ.,ಬಿ.ಟಿ.

1952

ಸರ್ವಧಾರಿ ಸಂ|| ಶ್ರಾವಣ ಶುದ್ಧ ಪೌರ್ಣಮಿ

ಸನಾತನ

ಸಂಪಾದಕ:—ಸ್ಮಾರ್ತಪ್ರಯೋಗ ನಿಪುಣ ವಿದ್ವಾನ್ ಬಿ. ಯಸ್. ಸುಬ್ರಹ್ಮಣ್ಯ ಜ್ಯೋಯಿಸ್ಯರು.

ಸಂಪುಟ ೨] ತಾರೀಖು ೧೯-೮-೧೯೪೮ [ಸಂಚಿಕೆ ೧

ಸಂಪಾದಕೀಯ.

ಈ ಸರ್ವಧಾರಿ ಶ್ರಾವಣ ಶುದ್ಧ ೧೫ (ತಾ|| ೧೯-೮-೪೮) ಸಮಯಕ್ಕೆ ವೈದಿಕ ಸನಾತನ ಧರ್ಮ ಪತ್ರಿಕೆಗೆ ಎರಡನೆ ವರ್ಷ ಪ್ರಾರಂಭವಾಗುತ್ತೆ. ಕಳೆದ ವರ್ಷ ೫೫ ಲೇಖನಗಳ ಪ್ರಚಾರವಾಯಿತು. ಲೇಖನಗಳು ಬರೆದ ವಿದ್ವಾಂಸರಿಗೂ ಮಾನ್ಯ ಅಭಿಮಾನಿಗಳಿಗೂ ವಂದನೆಗಳು. ಸನಾತನಿಗಳೂ ವಾಚಕರೂ ಆದ ಚಂದಾದಾರ ಮಹಾಶಯರಿಗೆ ಅಭಿನಂದನೆಗಳು. ಧರ್ಮ ಸಂಸ್ಥಾಪಕರಾದ ಶ್ರಿಮತಸ್ವವೇದಾನುಯಾಯಿ ಮಠಾಧಿಪತಿಗಳ ಆಶೀರ್ವಾದ ಹಿಂದೂ ಸನಾತನ ಧರ್ಮ ಪ್ರಚಾರಕ ಮಠಗಳ ಅಭಿಮಾನ, ತಮ್ಮ ತಮ್ಮ ಶಿಷ್ಯ ವರ್ಗದಲ್ಲಿ ಈ ನಮ್ಮ ಪತ್ರಿಕೆ ಪ್ರಚಾರವಾಗುವಂತೆ ಮಾಡಿದುದು ಅತ್ಯಂತ ಸಹಾಯವಾಗಿದೆ. ಮಠಗುರುಗಳಿಂದಲೇ ನಡೆಯಬೇಕಾದ ಧರ್ಮಪ್ರಚಾರ ಕಾರ್ಯದಲ್ಲಿ ಸಣ್ಣದಾಗಿ ಉಪಕ್ರಮಿಸಿರುವ ಈ ಪತ್ರಿಕೆಗೆ ಬೆಂಬಲವು ಶ್ರೀಮನ್ಮಠಾಧೀಶ್ವರರದೇ ಆಗಿ ಅವರ ಅನುಗ್ರಹ ಸಹಾಯ ಸಂಪತ್ತುಗಳು ವಿಶೇಷವಾಗಿ ಆಗಬೇಕಾಗಿವೆ.

ಶ್ರೀ ಜಗದ್ಗುರು ಶಂಕರಾಚಾರ್ಯ ಪಶ್ಚಿಮಾಮ್ನಾಯ ಶ್ರೀ ದ್ವಾರಕಾ ಪೀಠಾಧಿಪ ಶ್ರಿ ಶ್ರಿ ಅಭಿನವ ಸಚ್ಚಿದಾನಂದ ಸ್ವಾಮಿಗಳ ಪ್ರೇರಣೆ, ಆಶೀರ್ವಾದ, ದ್ರವ್ಯ ಸಹಾಯ, ಶ್ರಿಮುಖದ ಮೂಲ್ಕ ಶಿಷ್ಯವೃಂದಕ್ಕೆ ಆಜ್ಞೆ; ಇವುಗಳು ಪತ್ರಿಕಾ ಪ್ರಾರಂಭಾಭಿವೃದ್ಧಿಗಳಿಗೆ ಮೂಲ ಕಾರಣ. ಭಗವಂತನು ಸಾಮಾನ್ಯರಿಗೆ ಎಷ್ಟು ದುರ್ಲಭನೋ ಹಾಗೆ ಆತನ ಧರ್ಮ ತತ್ವಗಳೂ ಮನಸ್ಸಿಗೆ ಗ್ರಹಣ ಸಾಧ್ಯವಾಗಿಲ್ಲ ಭಕ್ತಿ ಜ್ಞಾನ ವೈರಾಗ್ಯಗಳು ಮನಶುದ್ಧಿಯಿಲ್ಲದೆ ಲಭಿಸದು. ಮನಶುದ್ಧಿ ಧರ್ಮ ಬೋಧನೆಯಿಂದ ಆಗಬೇಕು. ವಿದ್ವಾಂಸರಿಂದ ಬರೆಯಲ್ಪಟ್ಟ ಧರ್ಮ ತತ್ವಗಳು ಪತ್ರಿಕಾ ಮುಖೇನ ಪ್ರಚಾರವಾಗಬೇಕು. ಇಹಲೋಕದ ಸುಖಕ್ಕೂ ಧರ್ಮವೇ ಮುಖ್ಯ. ಸಮಸ್ತ ವಸ್ತುಗಳನ್ನೂ ಧರ್ಮವು ಆವರಿಸಿಕೊಂಡಿದೆ. ಬೆಂಕಿಗೆ ಸುಡುವದೂ, ನೀರಿಗೆ ಸೀತಳ, ವಾಯುವಿಗೆ ಚಲನ, ಇತ್ಯಾದಿಗಳು ಅವುಗಳ ಧರ್ಮಗಳಾಗಿವೆ. ವರ್ಣಾಶ್ರಮಾಚಾರಗಳು ಮಾನವನ ಧರ್ಮ. ಪ್ರಾಣಿ ವರ್ಗದಲ್ಲಿ ಮನುಷ್ಯನಿಗೆ ತಿಳುವಳಿಕೆ ಇದೆ. ವರ್ಣ ಧರ್ಮ, ಆಶ್ರಮ ಧರ್ಮ, ಆಚಾರ ಧರ್ಮ ಈ ಶಕ್ತಿ ಮನುಷ್ಯನಿಗಿದೆ. ಅದರೊಡನೆ—ದೇಶ ಧರ್ಮ—ಕುಲ ಪರಂಪರಾಧರ್ಮಗಳು ಗ್ರಾಹ್ಯವಿದೆ. ಸ್ವಧರ್ಮವ್ಯಾವುದೆಂಬುದನ್ನೂ ತನ್ನ ದೇಶದ ಪ್ರಚಾರದಲ್ಲಿರುವ ವಿದ್ಯಾವಂತರಾದ ಹಿರಿಯರಿಂದ ತಿಳಿಯಬೇಕು; ಇತರ ದೇಶದವರ ವಿದ್ಯಾಬುದ್ಧಿ ಪ್ರಚಾರದಿಂದಲ್ಲ. ನಮ್ಮ ದೇಶದ ಅತ್ಯುತ್ತಮ ಧರ್ಮಗಳು ಸ್ವಾಭಿಮಾನೀವಿದೇಶಿಯ ವಿಧರ್ಮಿಗಳಿಂದ ಅಳಿಸಲ್ಪಟ್ಟಿತು. ಅದಕ್ಕೆ ಸಾಧನವೇನಂದರೆ ತಮ್ಮ ಬಳಕೆಯಲ್ಲಿನ ಭಾಷಾವೇಷಗಳ ಸಂಯೋಗನೆಯ ಮೂಲಕ ಸ್ವಕೀಯ ಧರ್ಮಗಳಲ್ಲಿ ತಿರಸ್ಕಾರ-ಬುದ್ಧಿಯುಂಟಾಗುವಂತೆ ಮಾಡಿದ ಚಾತುರ್ಯ. ದೈವವಶಾತ್ ನಮಗೆ ಸ್ವರಾಜ್ಯ ಬಂದು ಸ್ವದೇಶಿಯರ ಆಡಳಿತದಲ್ಲಿದೆ. ಬೇರೂರಿರುವ ಪರಧರ್ಮ ಸುಧಾರಣೆ ಹೋಗಿ ಸ್ವಧರ್ಮ ಸ್ಥಾಪನೆಯಾಗಬೇಕು. ಸ್ವಧರ್ಮವನ್ನರಿತರೆ ವಿದೇಶಿಯರ ಭ್ರಮೆ ನಿವೃತ್ತಿಯಾಗುತ್ತೆ. ಸ್ವಧರ್ಮ ತತ್ವಗಳು ತಿಳಿಯುವುದು ಹ್ಯಾಗೆ? ಪತ್ರಿಕಾ ಪ್ರಚಾರದಿಂದಲ್ಲವೆ? ಅದಕ್ಕೆಲ್ಲರೂ ಸಹಕರಿಸಿ ಕಾರ್ಯ ತತ್ಪರರಾದರೆ ಸ್ವಧರ್ಮದ ಸಿದ್ಧಿಯಾಗುತ್ತೆ. ದೇಶ, ಕಾಲ, ರಾಜ್ಯ, ಕ್ಷೇಮಗಳು ತಾವಾಗಿಯೇ ಲಭಿಸುತ್ತವೆ. ಇದೇ ನಮ್ಮ ವೈದಿಕ ಸನಾತನ ಧರ್ಮ ಪತ್ರಿಕೆಯ ಧ್ಯೇಯ. ದೇಶ ಬಾಂಧವರೆ, ಪತ್ರಿಕೆಗೆ ಚಂದಾದಾರರಾಗಿರಿ.! ಪತ್ರಿಕಾಚಲನ ಕಾರ್ಯಕ್ಕಾಗಿಯೇ ಏರ್ಪಡಿಸಿರುವ "ಸನಾತನ ಲಿಮಿಟೆಡ್,,ನ ಷೇರನ್ನು ಭರ್ತಿಮಾಡಲು ಸಹಾಯಕರಾಗಿರಿ!! ಧರ್ಮವನ್ನು ರಕ್ಷಿಸಿರಿ !!!

"ಧರ್ಮೇಣಪಾಪಮಪನುದತಿ। ಧರ್ಮೆ ಸರ್ವ ಪ್ರತಿಷ್ಠಿತಂ||

[ಸಂಪಾದಕ]

....ಶ್ರಾದ್ಧ ವಿಧಾನ...

''ಯೇನಪಿತುಃ ಪಿತರೋಯೇ ಪಿ ತಾಮುಹಾಯು ಆ ವಿವಿಶುರುರ್ವಂತರಿಕ್ಷಂ! ಯು ಅಕ್ಷಿಯಂ ಪೃಥಿವೀಮುತದ್ಯಾಂ ತೇಭ್ಯಃ ಪಿತೃಭ್ಯೋನವುನಾವಿಧೇವು|| ಅಥರ್ವ ೧೮-೨-೪೯

ಪಿತೃ, ಪಿತಾವುಹ ಪ್ರಪಿತಾವುಹ ವೊದಲಾದವರಲ್ಲಿ ಯಾರು ವೃತರಾಗಿ ವಿಶಾಲವಾದ ಅನ್ತರಿಕ್ಷವನ್ನು ಪ್ರವೇಶಿಸಿದರೊ, ಯಾರು ಮತ್ತೆ ಈ ಲೋಕದಲ್ಲಿಯೇ ಜನ್ಮತಾಳಿರುವವರೋ, ಯಾರು. ದಿವ್ಯಲೋಕವನ್ನು ಪ್ರವೇಶಿಸಿದರೋ. ಅಂತಹ ಪಿತೃಗಳನ್ನು ನಾವು ಭಕ್ತಿಯಿಂದ ನಮಸ್ಕರಿಸೋಣ....

ವರ್ಣಾಶ್ರಮಿಗಳು ವಿವಿಧ ವಿಭಕ್ತ ಕುಟುಂಬಗಳಾಗಿದ್ದರೆಂದು ಬೇರೆ ಹೇಳಬೇಕಾಗಿಲ್ಲ.

ವೈದಿಕ ಧರ್ಮಾನುಯಾಯಿಗಳು ಯಾರೇ ಆಗಲಿ ಎಲ್ಲಿಯೇ ಇರಲಿ, ಯಾವ ಒಳ ಪಂಗಡಗಳಿಗೇ ಸೇರಿರಲಿ ಅವರೆಲ್ಲಾ ಗೌರವಯುತವಾಗಿಯೂ ಆದರ್ಶಪ್ರಾಯವಾಗಿಯೂ ಅಭಿಮಾನಾಸ್ಪದವಾಗಿಯೂ ಕಾಣುವ ಧರ್ಮವೆಂದರೆ ಬ್ರಾಹ್ಮಣ ಧರ್ಮ ಅಥವಾ ವೈದಿಕ ಧರ್ಮ.

ಸನಾತನ ಧರ್ಮಾನುಯಾಯಿಗಳಿಗೆ ವಿದಿತವಾಗಿರುವುದು. ಷೋಡಶಕರ್ಮಗಳು ಆದರಲ್ಲೂ ಶ್ರಾದ್ಧ ಕರ್ಮ. ಅತಿಮುಖ್ಯವಾದುದು. ಶ್ರಾದ್ಧ ದಿನವು ಬರುವುದಕ್ಕೆ ೧ ತಿಂಗಳ ಮುಂಚೆನಿಂದಲೂ ಯೋಚನೆ ಮಾಡತೊಡಗುವರು.

ಎಂಥಾ ನಾಗರಿಕ ವ್ಯಕ್ತಿಯಾದರೂ ಮಾತಾಪಿತೃಗಳ ಶ್ರಾದ್ಧ ದಿನಗಳಲ್ಲಿ ವೈದಿಕ ಧರ್ಮವನ್ನು ಪಾಲಿಸಿ ಅದರಂತೆ ನಡೆಯುವರು. ಶ್ರಾದ್ಧದ ವಿಷಯದಲ್ಲಿ ಅನೇಕ ವಿಧಗಳು. ದೇಶಾಚಾರ, ಕುಲಾಚಾರ, ಸಂಪ್ರದಾಯ (ಆಂಧ್ರ-ಕರ್ಣಾಟಕ—ದ್ರಾವಿಡ) ಇತ್ಯಾದಿ- ಶ್ರಾದ್ಧವನ್ನು ಯಾತಕ್ಕೆ ಮಾಡಬೇಕು, ಶ್ರಾದ್ಧದಿಂದ ಏನು ಪ್ರಯೋಜನ, ಎಂಬುದನ್ನು ತಿಳಿದುಕೊಂಡು ಮಾಡುವುದು ಉತ್ತಮ.

ಶ್ರಾದ್ಧ ಪ್ರಶಂಸಾ

"ಆರೋಗ್ಯಂ ಚೈವಸೌಭಾಗ್ಯಂ ಶತೃಣಾಂಚಪರಾಜಯುವ್ ಸರ್ವಾನ್ಕಾಮಾನ್ಪ್ರಿಯಾಂ ವಿದ್ಯಾಧನಮಾಯುರ್ಯಥಾಕ್ರಮ|| ''ಯೇ ಯಜಂತಿಪಿತೄನ್ ದೇವಾನ್ ಬ್ರಾಹ್ಮಣಾನ್ ಸಹುತಾಶನಾನ್, ಸರ್ವಭೂತಾಂತರಾತ್ಮಾನಂ ವಿಷ್ಣುಮೇವ ಯಜಂತಿತೆ||...... ''ಆಯುಃ ಪುತ್ರಾನ್ಯಶಸ್ವರ್ಗಂ ಕೀರ್ತಿಂಪುಷ್ಟಿಂಬಲಂಶ್ರಿಯಂ! ಪಶೂನ್ಸುಖಂಧನಂಧಾನ್ಯಂಪ್ರಾಪ್ನುಯಾತ್ಪಿತೃಪೂಜನಾತ್..

ಶ್ರಾದ್ಧ ಅಕರಣೇದೋಷಃ

''ನತತ್ರವೀರಾಜಾಯಂತೇ ನಾರೋಗಾನಶತಾಯುಷಃ! ನಚ ಶ್ರೇಯೋದಿಗಚ್ಛಂತಿಯತ್ರ ಶ್ರಾದ್ಧಂ ವಿವರ್ಜಿತಂ|| ''ನ ಸಂತಿಪಿತರಶ್ಚೇತಿ ಕೃತ್ವಾಮನಸಿಯೋನರಃ| ಶ್ರಾದ್ಧಂನಕುರುತೇ ತತ್ರತಸ್ಯರಕ್ತಂಪಿಬಂತಿತೇ||

ಮೇಲಿನ ಆಧಾರಗಳಿಂದ ತಿಳಿಯುಬಹುದೇನೆಂದರೆ ಶ್ರಾದ್ಧವನ್ನು ಮಾಡುವುದರಿಂದ ಆರೋಗ್ಯ-ಭಾಗ್ಯ, ಶತ್ರುನಾಶ, ಕೀರ್ತಿ, ಪುತ್ರವೃದ್ಧಿ, ಇತ್ಯಾದಿ ಶುಭಫಲಗಳುಂಟಾಗುವದು. ಮಾಡದೆ ಬಿಟ್ಟಲ್ಲಿ ಒಳ್ಳೆಯ ಮಕ್ಕಳು ಜನಿಸದೆ, ಜನಿಸಿದರೂ ಅಲ್ಪಾಯುಸ್ಸು, ಅನಾರೋಗ್ಯದಿಂದ ಕೂಡಿದವರಾಗಿರುತ್ತಾರೆ. ಆದುದರಿಂದ ಶ್ರಾದ್ಧವನ್ನು ಬ್ರಾಹ್ಮಣ ಮುಖೇನ ಅಗ್ನಿ ಮುಖೇನ ಈ ಎರಡು ವಿಧದಿಂದಲೂ ಮಾಡುವುದರಿಂದ ಶ್ರೀ ಮಹಾವಿಷ್ಣುವನ್ನೇ ಪೂಜಿಸಿದಂತಾಗುವುದೆಂದು ಅಭಿಪ್ರಾಯ.

—ಬ್ರಾಹ್ಮಣನನ್ನೇ ಏಕೆ ಪೂಜಿಸಬೇಕು—ವೇದದಲ್ಲಿ,, ಯಾವ ಸ್ಸರ್ವೈದೇವತಾಸ್ತಾತೀರ್ವಾ ವೇದ ವಿದಿಬ್ರಾಹ್ಮಣೇವಸನ್ತಿ"...................ಬ್ರಹ್ಮನೇ ವೊದಲಾದ ದೇವತೆಗಳೆಲ್ಲರೂ ವೇದವನ್ನು ತಿಳಿದ ಬ್ರಾಹ್ಮಣನಲ್ಲಿ ಇರುವರು: ಆದುದರಿಂದ ಶ್ರೋತ್ರಿಯನಾದ ಬ್ರಾಹ್ಮಣನನ್ನೇ ಶ್ರಾದ್ಧದ ದಿನ ಅರ್ಚಸತಕ್ಕದ್ದು" ಶ್ರಾದ್ಧಕ್ಕೆ ಅರ್ಹರು, ಅನರ್ಹರು, ಎಂದು ಶಾಸ್ತ್ರಕಾರರು ನಿರ್ಣಯಿಸಿರುವರು.

---ಅಗ್ನಿಯಲ್ಲಿ ಏತಕ್ಕೆ ಆಹುತಿ ಕೊಡಬೇಕು---

''ಯೇನಿಖಾತಾಯೇ ಪರೋಪ್ತಾಯೇದಗ್ಧಾಯೇಚೋದಿತಾಃ| ಸರ್ವಾಂಸ್ತಾನಗ್ನ ಆವಹಪಿತೄನ್ಹವಿಷೇ ಅತ್ತವೇ,:

ಅಥರ್ವ. ೧೮. ೨. ೩೪

"ಹೇ ಅಗ್ನಿದೇವ, ಯಾವ ಪಿತೃಗಳು ಹೂಳಲ್ಪಟ್ಟಿರುವರೋ, ಯಾರು ನೀರಿನಲ್ಲಿ ಬಿಡಲ್ಪಟ್ಟಿರುವರೋ, ಯಾರು ಸುಡಲ್ಪಟ್ಟಿರುವರೋ, ಯಾರು ಮೇಲೆ ಇಡಲ್ಪಟ್ಟಿರುವರೋ, ಅವರೆಲ್ಲರನ್ನೂ ಹವಿಸ್ಸು ಸ್ವೀಕರಿಸುವದಕ್ಕಾಗಿ ಕರೆತಾ" ಎಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ.

ಇದರಿಂದ ಹೂಳುವದು, ನೀರಿನಲ್ಲಿ ಇಟ್ಟು ಬಿಡುವುದು, ಸುಡುವುದು ಮತ್ತು ಎತ್ತರವಾದ ಪ್ರದೇಶದಲ್ಲಿ ಇಟ್ಟು ಬಿಡುವುದು ಈ ನಾಲ್ಕು ಪದ್ಧತಿಗಳೂ ವೇದ ಸಮ್ಮತವೆಂದು ತೋರಿಬರುವುದು. ಆ ತತ್ವವನ್ನು ಅನುಸರಿಸಿ ನಾಲ್ಕು ಪದ್ಧತಿಗಳೂ ರೂಢಿಯಲ್ಲಿರುತ್ತೆ.

ಶ್ರಾದ್ಧಕ್ಕೆ ಪಿತೃಯಜ್ಞ ಎಂಬುದಾಗಿ ಹೆಸರಿರುವುದು. ಈ ಯಜ್ಞದಲ್ಲಿ ಉಪಯೋಗಿಸುವ ಅಗ್ನಿಗೆ ಕವ್ಯವಾಹನ ಎಂದು ಹೆಸರು. ಪಿತೃಗಳನ್ನು ಉದ್ದೇಶಿಸಿಕೊಡುವ ಅನ್ನಕ್ಕೆ "ಕವ್ಯ" ವೆಂದು ಹೆಸರಿರುತ್ತೆ. ವೇದದಲ್ಲಿ ಪಿತೃಗಳಿಗೆ ''ಕವಿ'' ಎಂಬ ಹೆಸ

ರಿರುವುದು.

ನಮ್ಮ ಪೂರ್ವಜರಾದ ಸಾಮ್ಯ ಪಿತೃಗಳೂ, ಅಗ್ನಿಷ್ವಾತ್ತ ಪಿತೃಗಳೂ ದೇವಯಾನ ಮಾರ್ಗದಿಂದ ನಮ್ಮಲ್ಲಿಗೆ ಬರಲಿ,

ಯಾವ ಪಿತೃಗಳು ಈ ಲೋಕದಲ್ಲಿ ಜನ್ಮತಾಳಿರುವರೋ ಯಾರು ಬೇರೆ ಲೋಕಗಳಿಗೆ ಹೋಗಿರುವರೋ ಯಾವ ಪಿತೃಗಳನ್ನು ನಾವು ತಿಳಿದಿಲ್ಲವೋ ಅವರೆಲ್ಲರನ್ನೂ ನೀನು ತಿಳಿದಿರುತ್ತೀಯೆ.

ಆದುದರಿಂದ ಅವರವರಿಗೆ ತಲಪಿಸಿ ನಮಗೆ ವೀರಸಂತತಿಯನ್ನೂ ಧನಧಾನ್ಯಾದಿಗಳನ್ನೂ, ಅನುಗ್ರಹಿಸುವಂತೆ ಮಾಡು ಎಂದು ಅಗ್ನಿಯನ್ನು ಪ್ರಾರ್ಥಿಸುವ ಮಂತ್ರಗಳು ವೇದದಲ್ಲಿ ಅನೇಕವಿರುವುದರಿಂದ ಅಗ್ನಿ ಮುಖದಿಂದಲೂ ಬ್ರಾಹ್ಮಣ ಮುಖದಿಂದಲೂ ಶ್ರಾದ್ಧವನ್ನು ಆಚರಿಸುವುದು ಸೂಕ್ತವೆಂದು ಕಂಡು ಬರುವುದು.

ಇಂಥಾ ಸರ್ವೋತ್ಕೃಷ್ಟವಾದ ಶ್ರಾದ್ಧವನ್ನು ಆಚರಿಸುವುದು ಮಾನವನ ಕರ್ತವ್ಯವೆಂದು ಧಾರಾಳವಾಗಿ ಹೇಳಬಹುದು.

ಪ್ರಪಂಚದಲ್ಲಿರುವ ನಾನಾ ಪಂಗಡದವರು ಒಂದಲ್ಲ ಮತ್ತೊಂದು ರೀತಿ ಶ್ರಾದ್ಧಕ್ಕೆ ಮನ್ನಣೆ ಕೊಟ್ಟಿರುತ್ತಾರೆ.

ಪಿತೃಗಳನ್ನು ಉದ್ದೇಶಿಸಿ ಮಾಡುವ ಪ್ರತಿಯೊಂದು ಸತ್ಕಾರವೂ ಶ್ರಾದ್ಧವೆನಿಸಿಕೊಳ್ಳುತ್ತದೆ.

ಮೃತ ದಿನದಲ್ಲಿ ಅನ್ನದಾನ ಮಾಡುವುದು, ದೇಶಭಕ್ತರ ಹೆಸರಿನಲ್ಲಿ ಸ್ಮಾರಕಗಳನ್ನು ನಿರ್ಮಿಸುವುದು, ಅವರ ಪುಣ್ಯ ದಿನಗಳನ್ನು ಆಚರಿಸುವುದು, ಪ್ರಸಿದ್ಧಪುರುಷನು ನಿರ್ಯಾಣವಾದಲ್ಲಿ ಸಭೆಗಳ ಮೂಲಕ ಶಾಂತಿಯನ್ನು ಕೋರಿ ತಮ್ಮ ಪ್ರೀತಿಯನ್ನು ಸಲ್ಲಿಸುವದು ಇವೂ ಶ್ರಾದ್ಧಗಳೇ.

ಉದಾಹರಣೆಗೆ ಕೆಲವನ್ನು ಮಾತ್ರ ಕೊಟ್ಟಿದೆ.

ನಮ್ಮ ಭಾರತವಾಸಿಗಳಲ್ಲದೆ ಇತರ ದೇಶದವರು ಕೂಡ ಮೃತಾತ್ಮಗಳನ್ನು ಸ್ಮರಿಸುತ್ತಾರೆ. ಆಫ್ರಿಕಾ ಖಂಡದವರು ದೀರ್ಘ ಕಾಲ ಮಳೆ ಬರದೆ ಕ್ಷಾಮ ತೋರಿಬಂದರೆ ತಮ್ಮ ರಾಜನ ಸಮೇತ ಸ್ಮಶಾನಕ್ಕೆ ಹೋಗಿ ಭಕ್ತಿಯಿಂದ ಸುವೃಷ್ಟಿ ಅನುಗ್ರಹಿಸುವಂತೆ ಪ್ರಾರ್ಥಿಸುತ್ತಾರೆ.

ಅಮೇರಿಕಾದ (ರೆಡ್ ಇಂಡಿಯನ್)ವರು ಬೇಟೆಗೆ ಹೋಗುವಾಗ ಮೃತಾತ್ಮಗಳನ್ನು ಬೇಡಿಕೊಳ್ಳುತ್ತಾರೆ. ವಿಷಜಂತುಗಳು ಕಡಿದರೆ ಔಷಧವನ್ನು ಉಪಯೋಗಿಸುವುದರ ಬದಲು ಮೃತರ ಸಮಾಧಿ ಬಳಿಗೆ ಹೋಗುವುದು ಇಂದಿಗೂ ವ್ಯವಹಾರದಲ್ಲಿದೆ ಎಂದು ತಿಳಿದುಬರುತ್ತೆ.

ಬ್ರಿಟಿಷ್ ರೈತರು ಬೀಜವನ್ನು ಬಿತ್ತುವಾಗ ಹೊಲದ ಮಧ್ಯದಲ್ಲಿ ಬಾಳೆಯ ಹಣ್ಣನ್ನೂ ಕಬ್ಬನ್ನೂ ಇಟ್ಟು ಬೆಳೆಯು ಚೆನ್ನಾಗಿ ಬೆಳೆಯುವಂತೆ ಮಾಡಬೇಕೆಂದು ಮೃತಾತ್ಮಗಳನ್ನು ಬೇಡಿಕೊಳ್ಳುತ್ತಾರೆ.

ಮಹಮ್ಮದೀಯರಲ್ಲಿ ಕೂಡ ಸತ್ತ ಮನುಷ್ಯರ ಆತ್ಮವು ಪ್ರಳಯದವರೆಗೂ ಸಮಾಧಿಯಲ್ಲಿಯೇ ಇರುತ್ತವೆಂದೂ ಅನಂತರ ಪುಣ್ಯಪಾಪಗಳ ವಿಮರ್ಶೆಯಿಂದ ಶರೀರಧಾರಿಗಳಾಗಿ ಹೊರಗೆ ಬರುವುವೆಂದೂ ನಂಬುತ್ತಾರೆ.

ವೀರಶೈವರು ಸಮಾಧಿಯಲ್ಲಿ, ವಿಭೂತಿ ಬಿಲ್ವಪತ್ರೆಯನ್ನು ಶಿವಾರ್ಚನೆಗಾಗಿ ಯಿಡುವರು.

ವಿಶೇಷವಾಗಿ ಹೇಳುವುದಾದರೆ, ಉಪನಯನ, ವಿವಾಹ, ಮುಂತಾದ ಶುಭಕಾರ್ಯಗಳಲ್ಲಿ ಕೂಡ ಪೂರ್ವಜರ ಆತ್ಮಗಳನ್ನು ಆಹ್ವಾನಿಸುವ ಪದ್ಧತಿ ಇದೆ. ಇದಕ್ಕೆ ನಾಂದೀ ಶ್ರಾದ್ಧವೆನ್ನುತ್ತಾರೆ.

ಸ್ತ್ರೀ ವರ್ಗದ ಆತ್ಮಶಾಂತಿಗಾಗಿ 'ಸುಮಂಗಲೀ ಪ್ರಾರ್ಥನೆ' ಅಥವಾ ಹೂವೀಳ್ಯ ಎಂದು ಮುತ್ತೈದೆಯರನ್ನು ಸತ್ಕರಿಸುತ್ತಾರೆ.

''ಹೀಗೆ ಮಾಡುವುದರಿಂದ ಆತ್ಮಗಳು ತೃಪ್ತಿಹೊಂದಿ ಇಷ್ಟಾರ್ಥಗಳು ನೆರವೇರುವುದೆಂದು ಪೂರ್ವಜರ ದೃಢವಿಶ್ವಾಸ.

ಅಂತೂ ಶ್ರಾದ್ಧ ಪದ್ಧತಿಯು ಮನುಷ್ಯನನ್ನು ಎಂದೂ ಬಿಟ್ಟುಕೊಟ್ಟಿಲ್ಲ. ಮಗನಾದವನು ವರ್ಷಕ್ಕೆ ಒಂದು ಸಲವಾದರೂ ತನ್ನ ತಾಯಿ ತಂದೆಗಳನ್ನು ಸ್ಮರಿಸಿಕೊಂಡು ಅವರ ಹೆಸರಿನಲ್ಲಿ ಯೋಗ್ಯತೆಗನುಸಾರವಾಗಿ ಧರ್ಮಾತ್ಮರನ್ನು ಸತ್ಕರಿಸುವುದೇ ಶ್ರಾದ್ಧ ಪದ್ಧತಿಯ ಮುಖ್ಯೋದ್ದೇಶ್ಯ. ಧರ್ಮಾತ್ಮರ ತೃಪ್ತಿಯೇ ತನ್ನ ತಾಯಿತಂದೆಗಳ ತೃಪ್ತಿಯೆಂದು ತಿಳಿದು ವೈದಿಕ ವಿಧಾನದಿಂದ ಅವರವರ ಗೃಹ್ಯೋಕ್ತ ಸಂಪ್ರದಾಯದಂತೆ ಯಥಾವಿಧಿ-ಶಾಸ್ತ್ರದಲ್ಲಿ ಹೇಳಿರುವಂತೆ ನಡೆಯಿಸಿ ಪಿತೃದೇವತೆಗಳ ಆಶೀರ್ವಾದವನ್ನು ಪಡೆಯುವವರಂತಾಗಿ ಸನಾತನ ಧರ್ಮವನ್ನು ಉದ್ಧರಿಸುವ ಶಕ್ತಿವುಂಟಾಗಿ ನಮ್ಮ ಪೂರ್ವಜರಂತೆ ಚಿರಕಾಲ ಬಾಳುವಂತಾವರಾಗಲಿ ಎಂದು ವೇದಪುರುಷನನ್ನು ಪ್ರಾರ್ಥಿಸೋಣ

(ಮುಂದಿನ ಲೇಖನ ಶ್ರಾದ್ಧವಿಧಿ ಮೊದಲಾದ ಧರ್ಮ ಶಾಸ್ತ್ರ ವಿಚಾರಗಳು)

❋ ❋ ❋

ಮಗನಾದವನು ತಾಯಿ ತಂದೆಗಳನ್ನೂ, ಗಂಡನು ಸಾಧ್ವಿಯಾದ ಪತ್ನಿಯನ್ನೂ, ತಂದೆಯು ತನ್ನ ಚಿಕ್ಕ ಮಕ್ಕಳನ್ನೂ, ಶಿಷ್ಯನು ಗುರುವನ್ನೂ, ಸಮರ್ಥನಾದ ಮನುಷ್ಯನು ಸದ್ಬ್ರಾಹ್ಮಣರನ್ನೂ, ಮತ್ತು ಶರಣಾಗತರನ್ನೂ ರಕ್ಷಣೆಮಾಡದಿದ್ದರೆ ಅವನು ಬದುಕಿದ್ದರೂ ಸತ್ತ ಹೆಣಕ್ಕೆ ಸಮಾನನು ಶ್ರೀ ಕೃಷ್ಣ.

ಬೇಡುವುದು ಬ್ರಾಹ್ಮಣನಿಗೆ ಯೋಗ್ಯವಲ್ಲ

ಬ್ರಾಹ್ಮಣ ಇಂದು ಯಾರಿಗೂ ಬೇಡವಾಗಿದ್ದಾನೆ. ಕಾರಣ, ಅವನ ನಡತೆಯೇ. ಅವನ ಅಧಃಪತನಕ್ಕೆ ಇತರರನ್ನು ದೂಷಿಸುವುದಕ್ಕೆ ಮೊದಲು ತಾನು ತನ್ನ ಆತ್ಮಗೌರವವನ್ನು ಮರೆತಿರುವುದಕ್ಕಾಗಿ ಪಶ್ಚಾತ್ತಾಪ ಪಡಬೇಕು. ಅಲ್ಪದ ಆಶೆಗಾಗಿ, ಅನ್ಯಾಯವನ್ನು ನ್ಯಾಯವೆಂದೂ, ಅಧರ್ಮವನ್ನು 'ಧರ್ಮವೆಂದೂ ವಾದಿಸುವುದು ಇತ್ತೀಚೆಗೆ ಸರ್ವ ಸಾಧಾರಣ ವಿಷಯ. ಬ್ರಾಹ್ಮಣ ಬೇಡುವುದನ್ನು ಕಲಿತ ದಿನ ಅವನ ಸಾತ್ವಿಕತೆ, ವರ್ಚಸ್ಸು ಇವು ಹಾಳಾದವು. ಬ್ರಾಹ್ಮಣನ ದಿಟ್ಟತನಕ್ಕೆ ದೃಷ್ಟಾಂತರ ಆಪಸ್ತಂಭ ಮಹರ್ಷಿ. ಎಲ್ಲರೂ ಮಹರ್ಷಿಗಳಾಗಲು ಸಾಧ್ಯವಿಲ್ಲದಿದ್ದರೂ ಆತನ ದಿಟ್ಟತನವನ್ನು ಹೊಂದಲು ಸಾಧ್ಯ. ದಿಟ್ಟತನದಿಂದ ಆತ್ಮಗೌರವ ತಾನೇ ತಾನಾಗಿ ಹುಟ್ಟುವುದು. ಆತ್ಮಗೌರವವುಳ್ಳ ಮನುಷ್ಯನನ್ನೂ, ಕುಲವನ್ನೂ ದೇಶವನ್ನೂ ಯಾರೂ ಜಗ್ಗಿಸಲಾರರು.

ಒಬ್ಬ ರಾಜ. ಅವನ ದೇಶದಲ್ಲಿ ಕ್ಷಾಮ ಬಂದಿತು. ಅದಕ್ಕೆ ಪರಿಹಾರ ಆಪಸ್ತಂಭ ಮಹರ್ಷಿಯೆಂದು ತಿಳಿದು ಅವರಲ್ಲಿಗೆ ಹೋದ. ರಾಜ ಆಶ್ರಮಕ್ಕೆ ಹೋದಾಗ ಋಷಿಗಳು ಇರಲಿಲ್ಲ. ಅವರು ಬಂದ ಮೇಲೆ ರಾಜ ಬಂದ ವಿಚಾರ ತಿಳಿದು ರಾಜನೇ ತನ್ನಲ್ಲಿಗೆ ಬಂದಾಗ, ತಾನೇ ರಾಜನಲ್ಲಿಗೆ ಹೋಗುವುದು ಧರ್ಮವೆಂದು ಅರಮನೆಗೆ ಹೊರಟರು ಆಪಸ್ತಂಭ ಋಷಿಗಳು. ಆದರೆ ಮಹಾರಾಜನಿನ್ನೂ ಹಿಂತಿರುಗಿ ಬಂದಿರಲಿಲ್ಲ. ಋಷಿಗಳು. ಸಿಂಹಾಸನದ ಮೇಲೆ ಮಂತ್ರಾಕ್ಷತೆ ಹಾಕಿ ಹಿಂತಿರುಗಿದರು. ರಾಜ ಅರಮನೆಗೆ ಬರುತ್ತಾ ಎಲ್ಲೆಲ್ಲಿಯೂ ಸಮೃದ್ಧಿ ಬೆಳೆದಿದ್ದುದನ್ನು ನೋಡಿ ಆಶ್ಚರ್ಯಪಡುತ್ತಾ ಅರಮನೆಗೆ ಬಂದ. ಮಹರ್ಷಿಗಳು ಬಂದು ಹೋದ ವಿಚಾರ ತಿಳಿದು ಋಷಿಗಳಿಗೆ ಮರ್ಯಾದೆ ಮಾಡಬೇಕೆಂದು ಅಷ್ಟೈಶ್ವರ್ಯಗಳನ್ನು ತೆಗೆದುಕೊಂಡು ಹೋದ. ಇವನ್ನೆಲ್ಲಾ ಋಷಿಗಳು ತಿರಸ್ಕರಿಸಿದರು. 'ನನ್ನ ಕರ್ತವ್ಯವನ್ನು ನಾನು ಮಾಡಿದೆ. ಅದಕ್ಕೇಕೆ ನನಗೆ ಬಹುಮಾನ ? ' ಎಂದು ಹೇಳಿಬಿಟ್ಟರು. 'ನಾನು ರಾಜ. ನನ್ನ ಮಾತನ್ನು ಒಬ್ಬ ಸನ್ಯಾಸಿ ಧಿಕ್ಕರಿಸಿಬಿಟ್ಟನಲ್ಲಾ' ಎಂದು ರಾಜನಿಗೆ ಕೋಪ ಬಂದು ತನ್ನ ಬ್ರಹ್ಮಾಸ್ತ್ರವನ್ನು ಋಷಿಗಳ ಮೇಲೆ ಪ್ರಯೋಗಿಸಿಬಿಟ್ಟ. ಆದರೆ ಋಷಿಗಳಿಗೆ ಆ ಅಸ್ತ್ರದಿಂದ ಏನೂ ಆಗಲಿಲ್ಲ. ರಾಜನಿಗೆ ಪಶ್ಚಾತ್ತಾಪ ಬಂದು ಋಷಿಗಳಿಗೆ ಶರಣಾಗತನಾದ.

ಈ ಕಥೆಯನ್ನು ಹೇಳಿದ್ದು ತಮ್ಮ ತಮ್ಮ ಜೀವನಕ್ಕೆ ಬೇಕಾದ್ದಕ್ಕಿಂತಲೂ ಬ್ರಾಹ್ಮಣ ಹೆಚ್ಚು ಅಪೇಕ್ಷಿಸುತ್ತಿರಲಿಲ್ಲ. ಹಾಗೂ ಯಾರನ್ನೂ ಬೇಡುತ್ತಿರಲಿಲ್ಲ. ಲೋಕಕ್ಕೆ ತನ್ನ ಕೈಲಾದ ಸಹಾಯ ಮಾಡುತ್ತಿದ್ದ. ಅದಕ್ಕೇ ಬ್ರಾಹ್ಮಣ ಲೋಕಮರ್ಯಾದಿತನಾಗಿದ್ದ. ಈಗಲೂ ಬ್ರಾಹ್ಮಣ ತನ್ನ ಹಿಂದಿನ ಸ್ಥಾನಮಾನಗಳನ್ನು ಸಂಪಾದಿಸಿಕೊಳ್ಳಬೇಕಾದರೆ ತನ್ನ ಧರ್ಮವನ್ನು ತಾನು ಅನುಸರಿಸಬೇಕು. ಇಲ್ಲದಿದ್ದರೆ ಇತರರು ಬ್ರಾಹ್ಮಣರನ್ನು ಹಿಂದೂಡುವುದೆಂಬುದು ಸುಳ್ಳಾಗಿ, ತನಗೆ ತಾನೇ ಹಾಳಾಗುವನು.

ಬ್ರಾಹ್ಮಣ ತನ್ನ ಬ್ರಾಹ್ಮಣತ್ವದ ಶ್ರೇಷ್ಠತೆಯನ್ನು ತನ್ನ ನಡತೆಯಿಂದಲೇ ಉಳಿಸಿಕೊಳ್ಳಬೇಕು.

ಲೇಖಕರಿಗೆ ಸೂಚನೆ

ಪತ್ರಿಕೆಗಾಗಿ ಬರೆದು ಕಳುಹಿಸುವ ಲೇಖನಗಳನ್ನು ಸ್ಫುಟವಾಗಿ ಬರೆದು ಕಳುಹಿಸಬೇಕು. ಬರುವ ಲೇಖನಗಳನ್ನು ಹಾಗೆಯೆ ಆಗಲಿ ಅಥವಾ ತಿದ್ದುಪಡಿ ಮಾಡಿ ಪ್ರಕಟಿಸುವುದಕ್ಕೂ, ಇಲ್ಲವೆ ಪ್ರಕಟಿಸದೆ ಇರುವುದಕ್ಕೂ ಸಂಪಾದಕರು ಅಧಿಕಾರ ಹೊಂದಿದ್ದಾರೆ.

ಸಾದರ ಸ್ವೀಕಾರ

ಸನಾತನ ವೈದಿಕ ಧರ್ಮ ಸಭೆಕ್ಕೆ ಲೀಡರಾಗಿದ್ದ ದಿವಂಗತ ಎನ್. ಸೂರಪ್ಪನವರ ಪುತ್ರ ಶ್ರೀ ಎನ್. ಗುಂಡಪ್ಪನವರು 'ಕೃಷ್ಣ ಯಜುರ್ವೇದ ಸಂಹಿತೆ' ಸಪ್ತಕಾಂಡ (ಎರಡು ಭಾಗಗಳು), 'ಕೃಷ್ಣ ಯಜುಃಬ್ರಾಹ್ಮಣ,' 'ಯಜುರಾರಣ್ಯಕೆ' ಎಂಬ ನಾಲ್ಕು ಪುಸ್ತಕಗಳನ್ನು ಕೊಟ್ಟಿರುವುದನ್ನು ಸಂಘದ ಪರವಾಗಿ ಆದರದಿಂದ ಸ್ವೀಕರಿಸಿದ್ದೇವೆ.

ವಾಚಕರಿಗೆ ಸೂಚನೆ:—'ಸನಾತನ' ಧರ್ಮತತ್ವ ಎಂಬ ಲೇಖನವು ಪುಟ ಮುಗಿದ ನಂತರ ಹಿಂದಿನ ಪುಟದಲ್ಲಿ ಮುಂದುವರೆದಿದೆಯೆಂಬ ವಿಷಯವನ್ನು ವಾಚಕರು ದಯವಿಟ್ಟು ಗಮನಿಸಬೇಕು.

Karimane Estate.

॥ ವಂದೇ ಮಾತರಂ ॥

ಮಿತ್ರ

ರಾಷ್ಟ್ರೀಯ ಮಾಸಪತ್ರಿಕೆ, ಶಾಂತಿಗ್ರಾಮ.

ಸಂಪುಟ ೧] ಸೆಪ್ಟಂಬರ್ ೧೯೪೯ [ಸಂಚಿಕೆ ೧

ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹ।
ಶರೀರಶ್ರಮ ಅಸ್ವಾದ ಸರ್ವತ್ರ ಭಯವರ್ಜನ।
ಹೀ ಏಕಾದಶ ಸೇವಾವಿ ನಮ್ರತ್ವೇ ವ್ರತ ನಿಶ್ಚಯೇ॥

ಸಂಪಾದಕ ಮಂಡಲಿಯ ಸದಸ್ಯರು:

ಕೆ. ಅಚ್ಯುತರಾವ್, ಕರಿಮನೆ.
ಗುಡ್ಡೇತೋಟ ಸುಬ್ಬರಾವ್.
ಎಂ ಎಸ್. ರಾಮರಾವ್, ಅರಳೀಕಟ್ಟೆ.

ಬಿಡಿ ಸಂಚಿಕೆ ಬೆಲೆ: 0—8—0.

ಕೃತಜ್ಞತೆ.

ಸದಾ ನಮ್ಮ ಕರ್ತವ್ಯಮಾರ್ಗದಲ್ಲಿ ಒಂದು ದಿವ್ಯಜ್ಯೋತಿಯಾಗಿ ಮಾರ್ಗದರ್ಶಕರಾಗಿರುವ ಕೆಂಗೇರಿ ಗುರುಕುಲಾಶ್ರಮ ವಿದ್ಯಾಪೀಠದ ಆಚಾರ್ಯವರ ಪೂಜ್ಯ ಸ್ವಾಮಿ ವಿಶ್ವಾನಂದಜೀಯವರು ನಮ್ಮ ಪ್ರಯತ್ನವನ್ನು ಹರಸಿ ಉತ್ಸಾಹಿತರನ್ನಾಗಿ ಮಾಡಿದ್ದಾರೆ. ಅನೇಕರು ಅಭಿಮಾನಪೂರ್ವಕ ಸಂದೇಶಗಳನ್ನು ಬರೆದು ಕಳಿಸಿ ಪ್ರೋತ್ಸಾಹನೀಡಿದ್ದಾರೆ ಮಿತ್ರವರ್ಗದವರು ಕಾಲಕಾಲಕ್ಕೆ ತಕ್ಕ ಸಲಹೆಗಳನ್ನು ನೀಡಿ ನಮ್ಮನ್ನು ಕರ್ತವ್ಯೋನ್ಮುಖರನ್ನಾಗಿ ಮಾಡಿದ್ದಾರೆ. ನಮ್ಮ ಆದರದ ವಿನಂತಿಯನ್ನು ಮನ್ನಿಸಿ ದೊಡ್ಡಮನಸ್ಸಿನಿಂದ ನಮ್ಮ ಸನ್ಮಾನ್ಯ ಮಿತ್ರವರ್ಯರುಗಳು "ಮಿತ್ರ" ನ ಸಲಹಾಸಮಿತಿಯ ಸದಸ್ಯರಾಗಿರಲು ಒಪ್ಪಿ ತಮ್ಮ ಪೂರ್ಣ ಬೆಂಬಲ ನೀಡಿದ್ದಾರೆ. ನಮ್ಮ ಬೇಡಿಕೆಯನ್ನು ಮನ್ನಿಸಿ ಸಹೋದರ-ಸಹೋದರಿಯರನೇಕರು ಸಕಾಲಕ್ಕೆ ಲೇಖನಗಳನ್ನು ಒದಗಿಸಿಕೊಟ್ಟಿದ್ದಾರೆ. ಶ್ರೀ ವಿಜಯಾನಂದ ಪ್ರೆಸ್ ಮಾಲೀಕರಾದ ಶ್ರೀ|| ಎಂ. ಆರ್. ಲಕ್ಷ್ಮಯ್ಯನವರು ಸಕಾಲಕ್ಕೆ ಅಂದವಾದ ಮುದ್ರಣಕಾರ್ಯವನ್ನು ಮುಗಿಸಿಕೊಟ್ಟು ಉಪಕಾರ ನೀಡಿದ್ದಾರೆ. ಇವರೆಲ್ಲರಿಗೂ ನಾವು ಅತ್ಯಂತ ಆಭಾರಿಗಳಾಗಿದ್ದೇವೆ.

ಇಂತು ಸಜ್ಜನ ವಿಧೇಯರಾದ,
ಸಂಪಾದಕ ಮಂಡಲಿಯ ಸದಸ್ಯರು.

"ಮಿತ್ರ" ನ ಸಲಹಾಸಮಿತಿಯ ಸದಸ್ಯರುಗಳು :

ಶ್ರೀಯುತರುಗಳಾದ—

1. ಪಂಡಿತ್ ಪ್ರಿಯವ್ರತ್ ಜಿ. ಕೋವಿದ್, ಕೆಂಗೇರಿ, ಬೆಂಗಳೂರು.
2. ಹೆಚ್. ವೆಂಕಟರಮಣಅಯ್ಯರ್, ಖಾದಿ ವಸ್ತ್ರಾಲಯ, ಚಿಕ್ಕಮಗಳೂರು
3. ಬಿ. ಕೆ. ನರಸಿಂಹಮೂರ್ತಿ, ಬಿ. ಎ., ಬಿ. ಎಲ್., ವಕೀಲರು, ಚಿಕ್ಕಮಗಳೂರು.
4. ಹೆಚ್. ಜಿ. ಗೋವಿಂದೇಗೌಡರು, ವರ್ತಕರು, ಕೊಪ್ಪ.
5. ಎಸ್. ಆರ್. ನಾಗಪ್ಪಶೆಟ್ಟರು, ಶಿವಮೊಗ್ಗ.
6. ಬಸವಾನಿ ರಾಮಶರ್ಮ, ತೀರ್ಥಹಳ್ಳಿ.
7. ಕೆ. ಶಿವರಾಮ ಜೋಯಿಸ್, ಕಮ್ಮರಡಿ.

ಕೃಪಾಪೂರಿತ ಸ್ವೀಕಾರ ಪತ್ರ ವಿಮರ್ಶೆಗಾಗಿ

ರಾಷ್ಟ್ರೀಯ ಮಾಸಪತ್ರಿಕೆ.

ಮಿತ್ರ

ಸಂಪುಟ ೧] :: :: [ಸಂಚಿಕೆ ೧

— ಮೊರೆ —

(ಪದ್ಯಗಂಧಿ ಗದ್ಯ)

ಹೇಪ್ರಭು! ನೀನೆಲ್ಲಿರುವಿ;
ನೀ ಎನ್ನ ಹೃದಯದೊಳಿರುವಿಯಂತೆ!
ಎನಗೆ ನೋಡಲುಕಂಗಳದಯೆಪಾಲಿಸಿರುವಿ;
ದೇವಾ ನೀನಿತ್ತ ಕಂಗಳಿಂದ
ನಾನಿನ್ನ ನೋಡಲಾರೆ ;
ಎಲ್ಲೆಡೆಯೂ ಅಲೆವೆ ;
ಆದರೆ ನೀನೆಲ್ಲಿ ದಯಾನಿಧಿ ?
ನನ್ನ ನಾಲ್ಕೂಕಡೆಗಳಲಿ ಅಂದಕಾರವೆ ಅಂಧಕಾರ ||
ಈ ಘೋರ ರಾತ್ರಿಯಲಿ ದಾರಿಗಾಣದನಾನು
ನಿನ್ನ ಮರೆಹೊಕ್ಕಿರುವೆನೆಲೆ ದೇವಾ !
ಶರಣು ಬಂದೀನನ್ನ ರಕ್ಷಿಸು
ಎನ್ನಂತರಂಗದ ತೆರೆಯುಹರಿ
ಮನವೆಂಬ ಪರದೆಯನು
ಮುಚ್ಚಿರುವ ಮಬ್ಬನು ಹೋಗಲಾಡಿಸು
ನಿಷ್ಪಕ್ಷಪಾತಿಯಾದನೀನು
ನನ್ನನೀಕತ್ತಲೆಯಿಂದ ದಾಟಿಸಲಾರೆಯಾ ?
ನಿನ್ನ ಶರಣಾದೆನಗೆ

ಈ ಅಂಧಕಾರವದಾಟುವಶಕ್ತಿಯನು ದಯೆಪಾಲಿಸು.
ಜಗದೀಶನೆ ನಿನಗಿದು ಹಿರಿಯ ಹೊರೆಯೆ ?
ಎಂತಹಕಷ್ಟಗಳಲ್ಲಿಯೂಕೂಡ, ನಿನ್ನನಾಮರೆಯದಂತೆ
ನಿನ್ನೀಭಕ್ತನಿಗೆ ಸದ್ಬುದ್ಧಿಯನೀಡು
ಇದೆನ್ನ ಹೃದಯದ ವಿನಮ್ರಪ್ರಾರ್ಥನೆಯು.

ಶ್ರೀ|| ಕೆ. ಆಶಾದೇವಿ ಬಾಲಕೃಷ್ಣ.

—: ಪ್ರಾರ್ಥನೆ :—

ಧರೆಯಮೋಗಡೆ ಪೊರೆವ ಸಾಗರಗಳನು ।
ಸಿರಿಯನೀಯುವತರುಲತೆಗಳೆಲ್ಲವನು ॥
ಪಿರಿದಾದ ಪರ್ವತದ ಸಾಲುಸಾಲುಗಳನ್ನು ।
ಹರಿಯುತಿಹನದಿಗಳನು ಪೆತ್ತಿರುವ ದೇವವಂದಿಪೆನು ॥

ನೀಲಗಗನದಲಿ ತೇಲುತಿಹಮೋಡಗಳ ।
ಮಾಲೆಗಳಾಗಿ ಮಿರುಗುತಿಹ ತಾರೆಗಳ ।
ಕಾಲತೋರುವ ಚಂದ್ರಸೂರ್ಯರನಿತ್ತ ।
ಕಾಲನೇಮಿಯೆ ನಿನ್ನ ಪದಯುಗಕೆವಂದಿಪೆನು ॥

ಮೆರೆಯುತಿಹ ಕರ್ನಾಟ ದೇಶದಸಿರಿಯ ।
ಗಿರಿಗಳೆಡೆಯಲಿ ಬನದಮಧ್ಯದಲಿರುವ ।
ಕಿರಿದುಕೊಗ್ರೆಯಕಳಚಿ ಶಾಂತಿಯಬೆಳಸಿ ।
ಪೊರೆಮಡುವ ವಿಶ್ವಮಿತ್ರಗೆ ಬಲವ ನೀಯೆಂದು ಬೇಡುವನು ॥

—ಕೆಕ್ಕೆ.

ಸಂದೇಶ

ಕೆಂಗೇರಿ ಗುರುಕುಲಾಶ್ರಮದ ಆಚಾರ್ಯ ಪೂಜ್ಯಸ್ವಾಮಿ ವಿಶ್ವಾನಂದಜೀಯವರ ಸಂದೇಶ.

ಸಾದರ ಅಭಿನಂದನೆಗಳು. "ಮಿತ್ರ"ಯೆಂಬ ಪತ್ರಿಕೆಯನ್ನು ಪ್ರಾರಂಭಿಸಬೇಕೆಂದಿರುವ ನಿಮ್ಮ ಉದ್ದೇಶ ಸ್ತುತ್ಯವಾದುದು. ಉತ್ಸಾಹದಲ್ಲಿ ಪ್ರಾರಂಭವಾದ ನಿಮ್ಮ ಪತ್ರಿಕೆಯು ವಿಶೇಷ ಜನಪ್ರಿಯವಾಗಿ ನಿಮ್ಮ ಪ್ರಾಂತದಲ್ಲೆಲ್ಲಾ ಹೆಸರುವಾಸಿಯಾಗಲೆಂದು ಹಾರೈಸುತ್ತೇನೆ ಜಗತ್ಪೂಜ್ಯ ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರ ಉದಾತ್ತ ತತ್ವಗಳು, ಸೇವಾಭಾವನೆ, ಪರಸ್ಪರ ಸೌಹಾರ್ದಗಳನ್ನು ವೃದ್ಧಿಗೊಳಿಸುವ ಮನೋಭಾವನೆ ಇವುಗಳಿಂದ ಕೂಡಿದ ಲೇಖನಗಳೂ ವಾರ್ತೆಗಳೂ ಪ್ರಕಟವಾಗಿ ಜನರ ಅಭ್ಯುದಯ ಮತ್ತು ಜಾಗೃತಿಗೆ ಕಾರಣವಾಗಿ ಜನತೆಯ ನಿಜವಾದ "ಮಿತ್ರ" ಆಗಲೆಂದು ಆಶಿಸುತ್ತೇನೆ. ನೀವೆಲ್ಲಾ ಕ್ಷೇಮವಷ್ಟೆ. ಆಶೀರ್ವಾದಗಳು

—ಸ್ವಾಮಿಜಿ.

— ಸುಸ್ವಾಗತವು —

ಶ್ರೀ॥ ನಾ. ಸು. ನಾಗೇಂದ್ರ ಸಾರ್ವೆ ಅವರಿಂದ—

ಅದೋ ಮಿತ್ರನು ಉದಯಿಸುತ್ತಿದ್ದಾನೆ! ದಿಗ್‌ದಿಗಂತಗಳಿಗೂ ಅವನ ಬೆಳಕು ವ್ಯಾಪಿಸುತ್ತಿದೆ! ಮೃಗಪಕ್ಷಿಗಳೂ ಸಹ ಚೇತನಗೊಂಡು ತಮ್ಮ ವೃತ್ತಿಯಲ್ಲಿ ತೊಡಗಿವೆ.

ಓ ಮಲೆನಾಡಿನ ಬಂಧುಗಳಿರಾ! ಏಳಿರಿ. ನಿಮ್ಮ ಅಜ್ಞಾನದ ಸುಷುಪ್ತಿಯು ಸಾಕು. ಮಿತ್ರೋದಯವಾದರೂ ಇನ್ನೂ ನಿದ್ರೆಯೆ! ಎಂತ ಜಗತ್ತು ನಿಮ್ಮನ್ನು ಮೂದಲಿಸುತ್ತಿದೆ. ಇನ್ನಾದರೂ ಎಚ್ಚೆತ್ತು ಜಗದ್ವ್ಯಾಪಾರದಲ್ಲಿ ಮುಂದಾಗಿ.

ಮಿತ್ರಾ ನಿನ್ನ ಬೆಳಕು ಮೂಲೆಮೂಲೆಗಳಲ್ಲಿಯೂ ವ್ಯಾಪಿಸಲಿ ಆದರಿಂದ ಮಲೆನಾಡಿನ ಅಂಧಕಾರವು ಹರಿಯಲಿ. ನೀನು ನಮ್ಮ ಕಷ್ಟ-ಸುಖಗಳಲ್ಲಿ, ದುಃಖ ಸಂತೋಷಗಳಲ್ಲಿ ನಮಗೆ ಮಿತ್ರನಾಗಿರು. ನಿನ್ನ ಬೆಳಕಿನಿಂದ ಮಲೆನಾಡು

ರಮಣೀಯವಾಗಲಿ ಹೆಗಲಿಗೆ ಹೆಗಲು ಕೊಟ್ಟು ನಮ್ಮನ್ನು ಹೊಸ ಪ್ರಪಂಚಕ್ಕೆ ನಡೆಸು. " ಓ ಮಿತ್ರಾ! ನಿನಗೆ ಸುಸ್ವಾಗತವು" ಎಂತ ಮಿತ್ರನನ್ನು ಕರೆಯ ಬಾರದೆ? ಜೈ ಹಿಂದ್.

ತಾವು "ಮಿತ್ರ" ಎಂಬ ಕನ್ನಡ ಪತ್ರಿಕೆಯನ್ನು ಪ್ರಾರಂಭಿಸಲು ಅಣಿ ಯಾಗುವದಕ್ಕಾಗಿ ನನ್ನ ಅನಂತ ಧನ್ಯವಾದಗಳು "ಮಿತ್ರ" ನಿಂದು ಮಲೆನಾಡಿನ ಹಳ್ಳಿಯೊಂದರಲ್ಲಿ ಜನ್ಮ ತಾಳುತ್ತಿರುವುದು ಹಳ್ಳಿಗರ ಭಾಗ್ಯೋದಯವೆಂದೇ ಹೇಳ ಬೇಕು. ಜನ್ಮ ತಾಳುತ್ತಿರುವ ಸನ್ಮಿತ್ರನು ಮುಂದೆ ಮಲೆನಾಡಿನ ಬಂಧುಗಳಿಗೂ, ಇನ್ನಿತರ ಸಮಸ್ತ ನಾಡಿಗರಿಗೂ ಮಿತ್ರನಾಗಿ ಬಾಳಿ ಚಿರಕಾಲ ಯಶಸ್ವಿಯಾಗಿ ನಾಡ ಸೇವೆ ಸಲ್ಲಿಸುವಂತಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ

ಇಂತು ತಮ್ಮವ,
ಕೆ. ರಾ. ಶಂಕರನಾರಾಯಣ.

"ಮಿತ್ರ" ಪತ್ರಿಕೆಯ ಸಂಪಾದಕರ ಸ|| ಕ್ಕೆ

ಸಂಪಾದಕ ಮಹಾಶಯ,

ಹಿರಿದಾದ ಕರ್ನಾಟಕದ ಹಿರಿದಾದ ಮಲೆನಾಡ ಮಧ್ಯದ ಶಾಂತಿ ಗ್ರಾಮದಿಂದ ಹೊರಡುವ, ಪ್ರಥಮ ಏಕೈಕ ಕನ್ನಡ ನಿಯತ ಕಾಲಿಕ ಪತ್ರಿಕೆಯು, ಕನ್ನಡ ಮಾತೆಯ ಮಕ್ಕಳಿಂದ ಮನ್ನಡೆ ಪಡೆದು ನಿರಂತರ ದೇಶ ಮಾತೆಯ ಸೇವೆ ಮಾಡಲೆಂದು ಆಶಿಸುತ್ತೇನೆ "ಮಿತ್ರ" ಪತ್ರಿಕೆಯು ಸ್ವಲ್ಪ ಕಾಲದಲ್ಲೇ "ವಿಶ್ವಮಿತ್ರ" ನಾಗಿ ಪರಿಣಮಿಸಲೆಂದು ದೇವರನ್ನು ಪ್ರಾರ್ಥಿಸುತ್ತೇನೆ

ಇಂತು ಕನ್ನಡಾಂಬೆಯ ಸೇವಕರ ಸೇವಕ,
ಕೆ. ಎಸ್. ಚನ್ನಕೇಶವಯ್ಯ.

ಶ್ರೀವರ್ತಾ ಕೂಡಿಗೆ ಎಸ್ಟೇಟ್ ಎಂ. ಎಸ್. ರಂಗರಾಯರು,
ಶ್ಯಾನುಭೋಗ್ ಇವರಿಂದ ಶುಭಾಶಯ.

ಪ್ರಿಯ ಸ್ನೇಹಿತರೆ,

"ಮಿತ್ರ" ಯೆಂಬ ಕನ್ನಡ ನಿಯತಕಾಲಿಕ ಪತ್ರಿಕೆಯನ್ನು ಪ್ರಾರಂಭಿಸ ಬೇಕೆಂಬ ತಮ್ಮ ಸಂಕಲ್ಪಕ್ಕೆ ಜಗತ್ಕರ್ತನು ಸಕಲ ವಿಧವಾದ ಶಕ್ತಿ ಸಾಮರ್ಥ್ಯಗಳನ್ನು ಅನುಗ್ರಹಿಸಲೆಂದು ಅಂತಃಕರಣಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಮಲೆನಾಡಿನ

ಕುಂದುಕೊರತೆಗಳನ್ನು ಜನತೆಯ ಮುಂದಿಟ್ಟು ಸರ್ವರ ಸಹಕಾರ, ಸಹಾನುಭೂತಿ ಹೊಂದಲು ಅನುಕೂಲ ಕಲ್ಪಿಸಿದ ತಮ್ಮ ಶ್ರಮಕ್ಕೆ ಮಲೆನಾಡಿನವರೆಲ್ಲರೂ ಕೃತಜ್ಞರಾಗಿರಬೇಕಾಗಿದೆ.

ಜಗನ್ನಿಯಾಮಕನು ತಮ್ಮ ಈ ಮಹತ್ಕಾರ್ಯಕ್ಕೆ ಯಶಸ್ಸನ್ನು ಕೊಡಲೆಂದು ಪ್ರಾರ್ಥಿಸಿ ಈ ಮೂಲಕ " ಮಿತ್ರ "ನಿಗೆ ಶುಭಾಶಯಗಳನ್ನು ಕೋರಿರುತ್ತೇನೆ

ಇಂತು,

ಎಂ. ಎಸ್. ರಂಗರಾವ್.

ಕರ್ಣಾಟಕ ಏಕೀಕರಣ ಸಮಸ್ಯೆ.

ಲೇಖಕರು: ಶ್ರೀ॥ ಪ್ರಿಯವ್ರತ ಕೆಂಗೇರಿ ಗುರುಕುಲ ಆಶ್ರಮ, ಬೆಂಗಳೂರು.

ಭಾಷಾನುಗುಣ ಪ್ರಾಂತರಚನೆಯ ಕೂಗು ಇಂದು - ನೆನ್ನೆಯದಲ್ಲ ಇಪ್ಪತ್ತೊಂಬತ್ತು ವರ್ಷಗಳ ಹಿಂದೆ ಕಾಂಗ್ರೆಸ್ ಭಾಷಾನುಗುಣ ಪ್ರಾಂತರಚನೆಯ ಆದರ್ಶವನ್ನು ಅಂಗೀಕರಿಸಿ, ಅವಕಾಶ ಒದಗಿದಾಗ ಅದನ್ನು ಕಾರ್ಯರೂಪಕ್ಕೆಳಿಸುವ ಸಂಕಲ್ಪಮಾಡಿತು ಅಷ್ಟೇ ಅಲ್ಲ; ಕಾಂಗ್ರೆಸ್ಸಿನ ಅಂಗರಚನೆ ಹಾಗೂ ಆಡಳಿತ ದೃಷ್ಟಿಯಿಂದ ಭಾಷಾವಾರು ಪ್ರಾಂತ್ಯ ವಿಭಾಗ ಅಂದಿನಿಂದಲೇ ಅಸ್ತಿತ್ವಕ್ಕೆ ಬಂದಿತು. ವಸ್ತುಸ್ಥಿತಿ ಹೀಗಿದ್ದೂ ಭಾಷಾವಾರು ಪ್ರಾಂತ್ಯರಚನೆಯ ಆದರ್ಶವನ್ನೇ ಅಣಕಿಸುವ ಮಂದಿ ಕಾಂಗ್ರೆಸ್ಸಿನಲ್ಲಿ ಇಂದಿಗೂ ಕಂಡುಬರುವುದು ಸೋಜಿಗ.

ಭಾರತ ಸ್ವತಂತ್ರವಾಗಿ ಕಾಂಗ್ರೆಸ್ ರಾಜ್ಯಾಡಳಿತ ಸೂತ್ರ ವಹಿಸಿದ ಮೇಲೆ, ಭಾಷಾವಾರು ಪ್ರಾಂತ್ಯರಚನೆಯ ಸಮಸ್ಯೆಯನ್ನು ಪರಿಶೀಲಿಸಿ ವರದಿ ಮಾಡಲಿಕ್ಕೆಂದು **" ಧಾರ್ ಸಮಿತಿ "** ನಿಯೋಜಿಸಲ್ಪಟ್ಟಿತು. ಭಾಷಾನ್ವಯ ಪ್ರಾಂತ್ಯರಚನೆಯ ಆದರ್ಶವನ್ನು ಸಾಧಿಸಲು ಸೂಕ್ತ ವಿಧಾನ ಉಪಾಯಗಳನ್ನು ಆ ಸಮಿತಿ ಸೂಚಿಸುವುದೆಂದು ಜನ ನಿರೀಕ್ಷಿಸಿದ್ದರು. ಆದರೆ " ಧಾರ್ ಸಮಿತಿ " ಭಾಷಾನುಗುಣ ಪ್ರಾಂತ್ಯ ರಚನೆ ಕಾರ್ಯ " ರಾಷ್ಟ್ರ ವಿಘಾತುಕ " ವಾದುದೆಂದು ತೀರ್ಪುಕೊಟ್ಟಿತು. ಧಾರ್ ಸಮಿತಿಯ ವಿಚಿತ್ರ ವರದಿಯನ್ನು ಪುನಃ ಪರಿಶೀಲಿಸಲು " ತ್ರಿಮೂರ್ತಿ "ಗಳ ಸಮಿತಿ ನೇಮಿಸಲ್ಪಟ್ಟಿತು. ತ್ರಿಮೂರ್ತಿಗಳು ತಮ್ಮ ವರದಿಯಲ್ಲಿ ಮೊದಲು ಧಾರ್ ಸಮಿತಿಯವರ " ಮೋರೆ ಉಳಿಸುವ " ವ್ಯರ್ಥ ಪ್ರಯತ್ನಮಾಡಿ ಕೊನೆಗೆ ಭಾಷಾನುಗುಣ ಪ್ರಾಂತ ರಚನೆಯ ವಿಷಯದಲ್ಲಿ ಜನಕ್ಕೆ ಉತ್ಕಟೇಚ್ಛೆ ಹಾಗೂ ತೀವ್ರಾಭಿಲಾಷೆ ಇದ್ದಲ್ಲಿ ಅವರ ಬೇಡಿಕೆಯನ್ನು ಅಲ್ಲಗಳೆಯಲು ಶಕ್ಯವಿಲ್ಲವೆಂದು ಘೋಷಿಸಿದರು

ರಮಣೀಯವಾಗಲಿ. ಹಗಲಿಗೆ ಹಗಲು ಕೊಟ್ಟು ನಮ್ಮನ್ನು ಹೊಸ ಪ್ರಪಂಚಕ್ಕೆ ನಡಿಸು. "ಓ ಮಿತ್ರಾ! ನಿನ್ನಗೆ ಸುಸ್ವಾಗತವು ಎಂತ ಮಿತ್ರನನ್ನು ಕರೆಯ ಬಾರದೆ? ಜೈ ಹಿಂದ್.

ತಾವು "ಮಿತ್ರ" ಎಂಬ ಕನ್ನಡ ಪತ್ರಿಕೆಯನ್ನು ಪ್ರಾರಂಭಿಸಲು ಅಣಿಯಾದುದಕ್ಕಾಗಿ ನನ್ನ ಅನಂತ ಧನ್ಯವಾದಗಳು. "ಮಿತ್ರ" ನೆಂದು ಮಲೆನಾಡಿನ ಹಳ್ಳಿಯೊಂದರಲ್ಲಿ ಜನ್ಮ ತಾಳುತ್ತಿರುವುದು ಹಳ್ಳಿಗರ ಭಾಗ್ಯೋದಯವೆಂದೇ ಹೇಳಬೇಕು. ಜನ್ಮ ತಾಳುತ್ತಿರುವ ಸನ್ಮಿತ್ರನು ಮುಂದೆ ಮಲೆನಾಡಿನ ಬಂಧುಗಳಿಗೂ, ಇನ್ನಿತರ ಸಮಸ್ತ ನಾಡಿಗರಿಗೂ ಮಿತ್ರನಾಗಿ ಬಾಳಿ ಚಿರಕಾಲ ಯಶಸ್ವಿಯಾಗಿ ನಾಡಸೇವೆ ಸಲ್ಲಿಸುವಂತಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಇಂತು ತಮ್ಮವ,
ಕೋ. ರಾ. ಶಂಕರನಾರಾಯಣ.

"ಮಿತ್ರ" ಪತ್ರಿಕೆಯ ಸಂಪಾದಕರ ಸ|| ಕ್ಕೆ

ಸಂಪಾದಕ ಮಹಾಶಯ,

ಹಿರಿದಾದ ಕರ್ನಾಟಕದ ಹಿರಿದಾದ ಮಲೆನಾಡ ಮಧ್ಯದ ಶಾಂತಿ ಗ್ರಾಮದಿಂದ ಹೊರಡುವ, ಪ್ರಥಮ ಏಕೈಕ ಕನ್ನಡ ನಿಯತ ಕಾಲಿಕ ಪತ್ರಿಕೆಯು, ಕನ್ನಡ ಮಾತೆಯ ಮಕ್ಕಳಿಂದ ಮನ್ನಣೆ ಪಡೆದು ನಿರಂತರ ದೇಶ ಮಾತೆಯ ಸೇವೆ ಮಾಡಲೆಂದು ಆಶಿಸುತ್ತೇನೆ "ಮಿತ್ರ" ಪತ್ರಿಕೆಯು ಸ್ವಲ್ಪ ಕಾಲದಲ್ಲೇ "ವಿಶ್ವಮಿತ್ರ" ನಾಗಿ ಪರಿಣಮಿಸಲೆಂದು ದೇವರನ್ನು ಪ್ರಾರ್ಥಿಸುತ್ತೇನೆ.

ಇಂತು ಕನ್ನಡಾಂಬೆಯ ಸೇವಕರ ಸೇವಕ,
ಕೆ. ಎಸ್. ಚನ್ನಕೇಶವಯ್ಯ.

ಶ್ರೀಮಾನ್ ಕೊಡಿಗೆ ಎಸ್ಟೇಟ್ ಎಂ. ಎಸ್. ರಂಗರಾಯರು, ಶ್ಯಾನುಭೋಗ್ ಇವರಿಂದ ಶುಭಾಶಯ.

ಪ್ರಿಯ ಸ್ನೇಹಿತರೆ,

"ಮಿತ್ರ" ಯೆಂಬ ಕನ್ನಡ ನಿಯತಕಾಲಿಕ ಪತ್ರಿಕೆಯನ್ನು ಪ್ರಾರಂಭಿಸಬೇಕೆಂಬ ತಮ್ಮ ಸಂಕಲ್ಪಕ್ಕೆ ಜಗತ್ಕರ್ತನು ಸಕಲ ವಿಧವಾದ ಶಕ್ತಿ ಸಾಮರ್ಥ್ಯಗಳನ್ನು ಅನುಗ್ರಹಿಸಲೆಂದು ಅಂತಃಕರಣಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಮಲೆನಾಡಿನ

ಕುಂದುಕೊರತೆಗಳನ್ನು ಜನತೆಯ ಮುಂದಿಟ್ಟು ಸರ್ವರ ಸಹಕಾರ, ಸಹಾನುಭೂತಿ ಹೊಂದಲು ಅನುಕೂಲ ಕಲ್ಪಿಸಿದ ತಮ್ಮ ಶ್ರಮಕ್ಕೆ ಮಲೆನಾಡಿನವರೆಲ್ಲರೂ ಕೃತಜ್ಞರಾಗಿರಬೇಕಾಗಿದೆ.

ಜಗನ್ನಿಯಾಮಕನು ತಮ್ಮ ಈ ಮಹತ್ಕಾರ್ಯಕ್ಕೆ ಯಶಸ್ಸನ್ನು ಕೊಡಲೆಂದು ಪ್ರಾರ್ಥಿಸಿ ಈ ಮೂಲಕ "ಮಿತ್ರ" ನಿಗೆ ಶುಭಾಶಯಗಳನ್ನು ಕೋರಿರುತ್ತೇನೆ

ಇಂತು,

ಎಂ. ಎಸ್. ರಂಗರಾವ್.

ಕರ್ನಾಟಕ ಏಕೀಕರಣ ಸಮಸ್ಯೆ.

ಲೇಖಕರು: ಶ್ರೀ॥ ಪ್ರಿಯವ್ರತ ಕೆಂಗೇರಿ ಗುರುಕುಲ ಆಶ್ರಮ, ಬೆಂಗಳೂರು.

ಭಾಷಾನುಗುಣ ಪ್ರಾಂತರಚನೆಯು ಕೂಗು ಇಂದು - ನೆನ್ನೆಯದಲ್ಲ ಇಪ್ಪತ್ತೊಂಬತ್ತು ವರ್ಷಗಳ ಹಿಂದೆ ಕಾಂಗ್ರೆಸ್ ಭಾಷಾನುಗುಣ ಪ್ರಾಂತರಚನೆಯ ಆದರ್ಶವನ್ನು ಅಂಗೀಕರಿಸಿ, ಅವಕಾಶ ಒದಗಿದಾಗ ಅದನ್ನು ಕಾರ್ಯರೂಪಕ್ಕಿಳಿಸುವ ಸಂಕಲ್ಪಮಾಡಿತು ಅಷ್ಟೇ ಅಲ್ಲ; ಕಾಂಗ್ರೆಸ್ಸಿನ ಅಂಗರಚನೆ ಹಾಗೂ ಆಡಳಿತ ದೃಷ್ಟಿಯಿಂದ ಭಾಷಾವಾರು ಪ್ರಾಂತ್ಯ ವಿಭಾಗ ಅಂದಿನಿಂದಲೇ ಅಸ್ತಿತ್ವಕ್ಕೆ ಬಂದಿತು. ವಸ್ತುಸ್ಥಿತಿ ಹೀಗಿದ್ದೂ ಭಾಷಾವಾರು ಪ್ರಾಂತ್ಯರಚನೆಯ ಆದರ್ಶವನ್ನೇ ಅಣಕಿಸುವ ಮಂದಿ ಕಾಂಗ್ರೆಸ್ಸಿನಲ್ಲಿ ಇಂದಿಗೂ ಕಂಡುಬರುವುದು ಸೋಜಿಗ.

ಭಾರತ ಸ್ವತಂತ್ರವಾಗಿ ಕಾಂಗ್ರೆಸ್ ರಾಜ್ಯಾಡಳಿತ ಸೂತ್ರ ವಹಿಸಿದ ಮೇಲೆ ಭಾಷಾವಾರು ಪ್ರಾಂತ್ಯರಚನೆಯ ಸಮಸ್ಯೆಯನ್ನು ಪರಿಶೀಲಿಸಿ ವರದಿ ಮಾಡಲಿಕ್ಕೆಂದ **"ಧಾರ್ ಸಮಿತಿ"** ನಿಯೋಜಿಸಲ್ಪಟ್ಟಿತು. ಭಾಷಾನ್ವಯ ಪ್ರಾಂತ್ಯರಚನೆಯ ಆದರ್ಶವನ್ನು ಸಾಧಿಸಲು ಸೂಕ್ತ ವಿಧಾನ ಉಪಾಯಗಳನ್ನು ಆ ಸಮಿತಿ ಸೂಚಿಸುವುದೆಂದು ಜನ ನಿರೀಕ್ಷಿಸಿದ್ದರು. ಆದರೆ "ಧಾರ್ ಸಮಿತಿ" ಭಾಷಾನುಗುಣ ಪ್ರಾಂತ್ಯ ರಚನೆ ಕಾರ್ಯ "ರಾಷ್ಟ್ರ ವಿಘಾತುಕ" ವಾದುದೆಂದು ತೀರ್ಪುಕೊಟ್ಟಿತು. ಧಾರ ಸಮಿತಿಯ ವಿಚಿತ್ರ ವರದಿಯನ್ನು ಪುನಃ ಪರಿಶೀಲಿಸಲು "ತ್ರಿಮೂರ್ತಿ"ಗಳ ಸಮಿತಿ ನೇಮಿಸಲ್ಪಟ್ಟಿತು. ತ್ರಿಮೂರ್ತಿಗಳು ತಮ್ಮ ವರದಿಯಲ್ಲಿ ಮೊದಲು ಧಾರ್ ಸಮಿತಿಯವರ "ಮೋರೆ ಉಳಿಸುವ" ವ್ಯರ್ಥ ಪ್ರಯತ್ನ ಮಾಡಿ ಕೊನೆಗೆ ಭಾಷಾನುಗುಣ ಪ್ರಾಂತ ರಚನೆಯ ವಿಷಯದಲ್ಲಿ ಜನಕ್ಕೆ ಉತ್ಕಟೇಚ್ಛೆ ಹಾಗೂ ತೀವ್ರಾಭಿಲಾಷ ಇದ್ದಲ್ಲಿ ಅವರ ಬೇಡಿಕೆಯನ್ನು ಅಲ್ಲಗಳೆಯಲು ಶಕ್ಯವಿಲ್ಲವೆಂದು ಘೋಷಿಸಿದರು.

ತ್ರಿಮೂರ್ತಿಗಳ ತೀರ್ಮಾನದ ಫಲವಾಗಿ ಅದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಅಧ್ಯಕ್ಷ ಡಾ|| ಪಟ್ಟಾಭಿಯವರ ಶ್ರದ್ಧೋತ್ಸಾಹದ ಪರಿಣಾಮವಾಗಿ ಮುಂದಿಯ ಮೂವತ್ತು ವರ್ಷಗಳ ಕನಸು ನನಸಾಗುವ ಸನ್ನಿವೇಶವಿಂದು ಸಂಪ್ರಾಪ್ತವಾಗಿದೆ! ಕನ್ನಡಿಗರು ತಮ್ಮ ಕರ್ನಾಟಕ ಏಕೀಕರಣದ ಉದಾತ್ತ ಆದರ್ಶವನ್ನು ಸುಲಭವಾಗಿ ಸಾಧಿಸಿಕೊಳ್ಳಬಹುದಾದ ಸುವರ್ಣ ಅವಕಾಶ ದೊರೆತಿದೆ. ಆದರೇನು? 'ದೇವರು ವರಕೊಟ್ಟರೂ ಪೂಜಾರಿಕೊಡ' ಎಂಬಂತಾಗಿದೆ ನಮ್ಮ ಸ್ಥಿತಿ! ಕೈಗೆ ಬಂದ ತುತ್ತು ಬಾಯಿಗೆ ಬಾರದೆಹೋದೀತೋ ಎಂಬಂತಾಗಿದೆ ನಮ್ಮ ಗತಿ! ಕರ್ನಾಟಕಕ್ಕೆ ಮೈಸೂರು ಸೇರಬೇಕೋ, ಮೈಸೂರಿಗೆ ಕರ್ನಾಟಕ ಸೇರಬೇಕೋ, ಮಹಾ ಮೈಸೂರು ನಿರ್ಮಾಣವಾಗಬೇಕೋ, ಒಕ್ಕೂಟ ಕರ್ನಾಟಕ ಮೈಸೂರು ಎಂಬೆರಡು ಪ್ರತ್ಯೇಕ ಕರ್ನಾಟಕ ಪ್ರಾಂತ್ಯಗಳಿರಬೇಕೋ ಎಂಬ ವಿಚಾರ ಗೊಂದಲದಲ್ಲಿ ಸಿಕ್ಕಿ ಪೇಚಾಡುತ್ತಿದ್ದೇವೆ ನಾವು! ಅನೇಕವೇಳೆ ನಮ್ಮ ಸಂಕುಚಿತ ಹಾಗೂ ಸ್ವಾರ್ಥ ಭಾವನೆಗಳನ್ನು ಮರೆ ಮಾಡಲು ಹೊಸ ಹೊಸ ವಾದಾಂಶಗಳನ್ನು ಮುಂದಿಟ್ಟು ಏಕೀಕರಣದ ದಿಶೆಯಲ್ಲಿ ಅಡ್ಡಿ-ಆತಂಕಗಳನ್ನು ತಂದೊಡ್ಡುತ್ತಿದ್ದೇವೆ. ಒಟ್ಟಿನಲ್ಲಿ ಇದೆಲ್ಲಾ ಕರ್ನಾಟಕ ಮಾತೆಯ ದೌರ್ಭಾಗ್ಯದ ಕುರುಹು!

ಕರ್ನಾಟಕ ಏಕೀಕರಣ ಸಾಧನೆಯ ರಾಜ ಮಾರ್ಗದ ನಿರ್ದೇಶ ತ್ರಿಮೂರ್ತಿಗಳ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿತವಾಗಿದೆ. ಈಗಿನ ರಾಜ್ಯಾಂಗ ವಿಧಿಗನುಸಾರವಾಗಿ ಕರ್ನಾಟಕ ಏಕೀಕರಣವಾಗಬೇಕಾದರೆ ಮೈಸೂರು ಒಕ್ಕೂಟ ಕರ್ನಾಟಕ (Union Karnatak) ದಲ್ಲಿ ವಿಲೀನವಾಗಬೇಕೆಂಬುದೇ ಆ ನಿರ್ದೇಶ! ಈ ರಾಜಮಾರ್ಗವನ್ನು ಬಿಟ್ಟು ಅನೇಕರು ಅಡ್ಡದಾರಿ ಹಿಡಿಯಲು ಹೊರಟಿರುವುದು ವಿಷಾದಕರವಾದುದು! "ಮೈಸೂರಿನ ವೈಶಿಷ್ಟ್ಯದ ರಕ್ಷಣೆ" 'ಮಹಾ ಮೈಸೂರಿನ ನಿರ್ಮಾಣ' 'ರಾಜಭಕ್ತಿ" "ಜನಮತ ಗಣನೆ" ಮೊದಲಾದ ವಿವಿಧಾಸ್ತ್ರಗಳನ್ನು ವಿಲೀನ ವಿರೋಧಿಗಳು ಪುಂಖಾನುಪುಂಖವಾಗಿ ಪ್ರಯೋಗಿಸುತ್ತಿದ್ದಾರೆ! ಭಾಷಾನ್ವಯ ಪ್ರಾಂತ ವಿಭಾಗದಿಂದ ಭಾರತರಾಷ್ಟ್ರದ ಐಕ್ಯತೆಗೆ ಧಕ್ಕೆ ತಗಲುವುದೆಂದು ವಾದಿಸುತ್ತಿದ್ದ ಮಹನೀಯರಿಂದು ಮೈಸೂರು ಪ್ರತ್ಯೇಕವಾಗಿರಬೇಕೆಂದು ಕೂಗೆಬ್ಬಿಸಿದ್ದಾರೆ! ಹಿಂದೆ ಕರ್ನಾಟಕ ಏಕೀಕರಣವಾಗಲೇಬೇಕೆಂದು ಗುಡಿ-ಗೋಪುರಗಳ ಮೇಲಿನಿಂದ ಸಿಂಹನಾದ ಆರ್ಭಟಮಾಡುತ್ತಿದ್ದ ಪುಢಾರಿಗಳಿಂದು ಏಕೀಕರಣ ವಿಷಯದಲ್ಲಿ ತೆರೆದ ಹೃದಯದಿಂದ ಮಾತನಾಡಲು ಹಿಂಜರಿಯುತ್ತಿದ್ದಾರೆ! ಐನೂರು ಅರವತ್ತು ಚಿಲ್ಲರೆ ಸಂಸ್ಥಾನಗಳ ಹಣೇಬರಹವನ್ನು, "ಹೋ, ಹೋ" ಎನ್ನುವುದರೊಳಗೆ ನಮ್ಮ ವೀರ ಸರದಾರರು ತೀರ್ಮಾನಿಸಿಬಿಟ್ಟರೆಂದು ಹರ್ಷೋದ್ಗಾರ ತೆಗೆಯುವ ಮಂದಿ, ಮೈಸೂರಿನ ಭವಿಷ್ಯವನ್ನು ತೀರ್ಮಾನಿಸುವ ಜವಾಬ್ದಾರಿಯನ್ನು ಮೈಸೂರಿನವರಿಗೆ ಬಿಡಬೇಕೆಂದೂ ಸರದಾರರು ಈ ವಿಷಯದಲ್ಲಿ ಹಸ್ತಕ್ಷೇಪಮಾಡಬಾರದೆಂದೂ ಪಲ್ಲವಿ ಹಾಡುತ್ತಿದ್ದಾರೆ! ಇವೆಲ್ಲದರ ಒಳರಹಸ್ಯವೇನಿರಬಹುದು?

ಒಕ್ಕೂಟ ಕರ್ಣಾಟಕದಲ್ಲಿ ಮೈಸೂರು ವಿಲೀನವಾಗಬಾರದೆಂದು ವಾದಿಸುವವರ ವಾದ-ವೈಖರಿ ವಿಚಿತ್ರವಾಗಿದೆ! 'ಒಕ್ಕೂಟ-ಕರ್ಣಾಟಕ ಎಲ್ಲಾ ದೃಷ್ಟಿಯಿಂದಲೂ ಹಿಂದುಳಿದಿದೆ. ಮೈಸೂರು ಮುಂದುವರಿದ ನಾಡು ಈ ಪರಿಸ್ಥಿತಿಯಲ್ಲಿ ಮೈಸೂರು ಕರ್ಣಾಟಕದಲ್ಲಿ ಸೇರುವುದು ನಾಚಿಗೆಗೇಡು'—ಎಂಬುದೊಂದು ವಾದ. 'ಹರಿಜನರು ಎಲ್ಲದೃಷ್ಟಿಯಿಂದಲೂ ಹಿಂದುಳಿದಿದ್ದಾರೆ. ನಾವು ಅವರೊಡನೆ ಮಿಳಿತರಾಗಿ ಅವರ ಉದ್ಧಾರಕ್ಕಾಗಿ ಪ್ರಯತ್ನಿಸುವುದು ಅಪಮಾನಕರ''—ಎಂಬುದಾಗಿ ಸವರ್ಣೀಯರು ಮಾಡಬಹುದಾದ ವಾದ ಎಷ್ಟು ಹಾಸ್ಯಸ್ಪದವೋ, ವಿಲೀನ ವಿರೋಧಿಗಳ ಈ ವಾದವೂ ಅಷ್ಟೇ ಹಾಸ್ಯಾಸ್ಪದವಾದುದು! ಕರ್ಣಾಟಕದಲ್ಲಿ ಮೈಸೂರು ಸಮಾವೇಶವಾದರೆ 'ಲಿಂಗಾಯಿತರ' ಬಹುಮತ ಪ್ರಾಬಲ್ಯಕ್ಕೆ ಅವಕಾಶ ಕೊಟ್ಟಂತಾಗುವುದೆಂಬುದು ಇನ್ನೊಂದು ವಾದ. ನನಗೆ ತಿಳಿದಮಟ್ಟಿಗೆ ಏಕೀಕೃತ ಕರ್ಣಾಟಕದಲ್ಲಿ ಲಿಂಗಾಯಿತರ ಬಹುಸಂಖ್ಯಾತರಾಗುವರೆಂಬುದು ಸತ್ಯ ದೂರವಾದ ಮಾತು. ಒಂದುವೇಳೆ ಹಾಗಾದರೂ ಅದರಲ್ಲಿ ದೋಷವೇನು? ಮೈಸೂರಿನ ಈಗಿನ ಸ್ಥಿತಿಯಲ್ಲಿ ಒಕ್ಕಲಿಗರು ಬಹುಸಂಖ್ಯಾತರೂ, ಪ್ರಬಲರು ಆಗಿರುವರೆಂದು ಬ್ರಾಹ್ಮಣರೇ ಮೊದಲಾದ ಅಲ್ಪಮತೀಯರು ಆಕ್ಷೇಪಿಸಿದರೆ ಅದನ್ನು ಗಣನೆಗೆ ತಂದುಕೊಳ್ಳಲು ಸಾಧ್ಯವೇ? ಕೋಮುವಾರು ಪಿತ್ತವನ್ನು ನೆತ್ತಿಗಂಟಿಸಿಕೊಂಡು ಈ ರೀತಿಯ ವಾದ ಮಾಡುವ ಕಾಲವಿದಲ್ಲ.

ಮೈಸೂರಿನಲ್ಲಿಯೇ ಒಕ್ಕೂಟ ಕರ್ಣಾಟಕ ವಿಲೀನವಾಗಲು ಅನುಕೂಲಿಸುವಂತೆ ರಾಜ್ಯಾಂಗ ವಿಧಿಯಲ್ಲಿ ಸೂಕ್ತ ಪರಿಶೋಧನೆ ಮಾಡಬಾರದೇಕೆ? ಎಂಬುದು ಇನ್ನೊಂದು ಗುಂಪಿನ ವಾದ. ಈ ಜಾತಿಯ ಜನ ಕಾಲ-ಸ್ಫೂರ್ತಿಯ ಗತಿ ವಿಧಿಯನ್ನು ಗಮನಿಸಬೇಕು. ಮಂದಿಯ ಮನಸ್ಸಿನಲ್ಲಿ ಜನತಂತ್ರ ವಿಚಾರಗಳ ಪ್ರವಾಹ, ಸ್ರೋತ ಯಾವ ರೀತಿಯಲ್ಲಿ ಹರಿಯುತ್ತಿದೆ ಎಂಬುದನ್ನು ಮನಗಾಣಬೇಕು. ಭಾರತದ ಪ್ರಾಂತ್ಯಗಳ ಸ್ವರೂಪ-ಲಕ್ಷಣಗಳಲ್ಲಿ ಏಕರೂಪತೆಯನ್ನುಂಟುಮಾಡುವುದರ ಔಚಿತ್ಯವನ್ನು ಅರಿಯಬೇಕು.

ನಮ್ಮ ಶ್ರೀಮನ್ಮಹಾರಾಜರೇ ಪ್ರಾಂತಾಧಿಪತಿಗಳಾಗುವುದಾದರೆ ಕರ್ಣಾಟಕ ಪ್ರಾಂತ ರಚನೆಯಾಗಲಿ ಎಂಬುದಾಗಿ ಹೇಳುವವರೂ ಇದ್ದಾರೆ. ಈ ರೀತಿಯ ಸದ್ಭಾವನೆ ಮೈಸೂರು ಮಂದಿಯಲ್ಲಿರುವುದು ಸ್ವಾಭಾವಿಕವೇ ಆದರೂ, ಈ ಸಂಬಂಧದಲ್ಲಿ ಘಟನಾ ಕ್ರಮ (Constitutional Procedure) ಹೇಗಿರಬೇಕೆಂಬುದನ್ನು ಗಮನಿಸುವುದಾವಶ್ಯಕ.

ಪ್ರಾಂತಾಧಿಕಾರಿಗಳನ್ನು ನಿಯೋಜಿಸುವುದು ಮಹಾ ಮಂಡಲಾಧೀಶ್ವರರ (Governor General) ವಿವೇಚನೆಗೆ ಅಧಿಕಾರಕ್ಕೆ ಒಳಪಟ್ಟ ಅಂಶ. ಸ್ವತಂತ್ರ ಭಾರತದಲ್ಲಿ ಈ ವರೆಗೆ ಪ್ರಾಂತಾಧಿಕಾರಿಗಳನ್ನು ನಿಯೋಜಿಸುವ ಸಂಬಂಧದಲ್ಲಿ ಒಂದು

ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿರುವುದು ಗೋಚರವಾಗುತ್ತದೆ. ಯಾವುದೇ ಒಂದು ಪ್ರಾಂತ್ಯಕ್ಕೆ ಸೇರಿದವರನ್ನು ಅದೇ ಪ್ರಾಂತ್ಯಕ್ಕೆ ಪ್ರಾಂತಾಧಿಕಾರಿಯಾಗಿ ನೇಮಿಸಬಾರದೆಂಬುದೇ ಆ ಸಂಪ್ರದಾಯ. ಕರ್ನಾಟಕ ಪ್ರಾಂತ್ಯದ ವಿಷಯದಲ್ಲಿ "ವಿನಾಯಿತಿ" ದೊರೆತು, ನಮ್ಮ ಶ್ರೀಮನ್ಮಹಾರಾಜರು "ಏಕೀಕೃತ ಕರ್ನಾಟಕ ಪ್ರಾಂತಾಧಿಕಾರಿಗಳಾಗಿ ನಿಯೋಜಿಸಲ್ಪಡುವುದಾದರೆ; ಅದನ್ನು ಕನ್ನಡಿಗರೆಲ್ಲರೂ ಸಂತೋಷದಿಂದ ಸ್ವಾಗತಿಸುವರೆಂಬುವುದರಲ್ಲಿ ಸಂಶಯವಿಲ್ಲ. ಆದರೆ; ಹಾಗಾಗದಿದ್ದಲ್ಲಿ ಕರ್ನಾಟಕ ಪ್ರಾಂತ ರಚನೆಯೇ ಬೇಡವೆಂದು ಆಗ್ರಹಮಾಡುವುದರಲ್ಲಿ ಅರ್ಥವಿಲ್ಲ

ಇನ್ನು "ಮಹಾ ಮೈಸೂರು" ನಿರ್ಮಾಣವಾಗಬೇಕೆನ್ನುವವರ ವಿಷಯದಲ್ಲಿ ಒಂದು ಮಾತು. ಈ ಗುಂಪಿಗೆ ಸೇರಿದ ಮಂದಿ "ಭಾಷಾನುಗುಣ ಪ್ರಾಂತ" ಎಂಬ ಪದ ಪ್ರಯೋಗದ ಅರ್ಥ ವಿಶೇಷವನ್ನು ಗಮನಿಸುವುದೊಳಿತು. ಮೈಸೂರು, ಎಂಬ ಶಬ್ದದಿಂದ ಯಾವುದೊಂದು ನಿರ್ದಿಷ್ಟ ಭಾಷಾನುಗುಣ ಪ್ರಾಂತ್ಯದ ಭಾವ ಸೂಚಿತವಾಗುವುದಿಲ್ಲ. "ಕರ್ನಾಟಕ" ವೆಂದೊಡನೆಯೇ ನಿರ್ದಿಷ್ಟವಾದೊಂದು ಭಾಷಾನ್ವಯ ಪ್ರಾಂತ್ಯದ ಸ್ಪಷ್ಟಭಾವಸ್ಫುಟವಾಗಿ ವ್ಯಕ್ತವಾಗುತ್ತದೆ. ಅಲ್ಲದೆ ಸುಮಾರು 30 ವರ್ಷಗಳಿಂದ ಕನ್ನಡಿಗರು ತಮ್ಮ ಹೃದಯಾಂತರಾಳದಲ್ಲಿ ಅಂಕಿತ ಮಾಡಿಕೊಂಡಿರುವ ಮಹಾನ್ ಆದರ್ಶ ಒಂದರ ಚಿತ್ರ ಕಣ್ಣೆದುರಿಗೆ ಬಂದು ನಿಲ್ಲುತ್ತದೆ! ಇದೇ ಸಂದರ್ಭದಲ್ಲಿ "ರಾಜಸ್ಥಾನ ಒಕ್ಕೂಟ" "ಮಧ್ಯಭಾರತ ಒಕ್ಕೂಟ" ಎಂಬುದಕ್ಕೆ ಬದಲು "ಮಹಾ ಜಯಪುರ" "ಮಹಾ ಗ್ವಾಲಿಯರ್" ಎಂದು ಕರೆದಿದ್ದರೆ ಹೇಗಿರುತ್ತಿತ್ತು ಎಂಬುದನ್ನು ವಿಚಾರಮಾಡುವುದೊಳಿತು. ಜುಲೈ ತಾ|| ೧ ರಂದು ರೂಪತಾಳಲಿರುವ ಇನ್ನೊಂದು ಒಕ್ಕೂಟ "ಕೇರಳ ಒಕ್ಕೂಟವೇ" ಹೊರತು "ಮಹಾ ತಿರುವಾಂಕೂರ್" ಅಥವಾ "ಮಹಾ ಕೊಚ್ಚಿ" ಅಲ್ಲವಷ್ಟೇ?

ಮುಖ್ಯವಾಗಿ ಮೈಸೂರಿನವರು ಮನಸ್ಸುಮಾಡಿದರೆ, ಈಗಿಂದೀಗಲೇ ಕರ್ನಾಟಕ ಏಕೀಕರಣದ ಆದರ್ಶವನ್ನು ಸಾಧಿಸಿಕೊಳ್ಳಬಹುದು. ಈ ಏಕೀಕೃತ ಕರ್ನಾಟಕದ ರಚನೆಯಿಂದ ಕನ್ನಡಿಗರೆಲ್ಲರ (ಅವರು ಒಕ್ಕೂಟ ಕರ್ನಾಟಕದವರೇ ಆಗಿರಲಿ, ಮೈಸೂರಿನವರೇ ಆಗಿರಲಿ) ಕಲ್ಯಾಣಸಿದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ಆದಕಾರಣ ಮೈಸೂರು ಮಂದಿ ಸಂಕುಚಿತ - ಸಂಕೀರ್ಣ - ಸ್ವಾರ್ಥಭಾವನೆಗಳಿಗೆ ಎಡೆಗೊಡದೆ, ಮೈಸೂರು ಕರ್ನಾಟಕದಲ್ಲಿ ಸಮಾವೇಶವಾಗುವಂತೆಯೂ, ತನ್ಮೂಲಕ ಕರ್ನಾಟಕ ಏಕೀಕರಣದ ಸಾಧನೆಯಾಗುವಂತೆಯೂ, ಶ್ರಮಿಸಬೇಕಾಗಿ ಸವಿನಯ ಪ್ರಾರ್ಥನೆ.

— ಪ್ರಿಯವ್ರತ, ೨೫—೬—೪೯.

ಸಜೀವ ಸ್ಮಾರಕ.

ಲೇಖಕರು—ಶ್ರೀವರ್ಮಾ ಕೆ. ವಿ. ಬಾಲಕೃಷ್ಣ.

ಜಗದ್ವಂದ್ಯ ಪೂಜ್ಯ ರಾಷ್ಟ್ರಪಿತನ ಬಲಿದಾನವಾಗಿ ಹತ್ತೊಂಬತ್ತು ತಿಂಗಳು ಕಳೆಯುತ್ತ ಬಂದಿದೆ. ಬಾಪೂವಿನ ಮರಣವಾರ್ತೆ ಪ್ರಪಂಚವನ್ನು ಸಿಡಿಲಿನಂತೆ ಎರಗಿತು. ಒಂದು ಸಲ ಜಗತ್ತೇ ತತ್ತರಿಸಿದಂತೆ ಆಯಿತು. ಆ ದುಃಖದ ಆವೇಗದ ಭರದಲ್ಲಿ ಬಾಪೂವನ್ನು ತಿಳಿದವರು, ತಿಳಿಯದವರು ಅವರ ತತ್ವದಲ್ಲಿ ನಂಬುಗೆ ಇರುವವರೂ ಹಾಗೂ ಇಲ್ಲದವರು ಸಮಸ್ತರೂ ಜಗತ್ತಿಗಾದ ಅಪಘಾತವನ್ನು ತಮ್ಮ ಸ್ವಂತ ನಷ್ಟವೆಂದೇ ಬಗೆದು ದುಃಖಿಸಿದರು. ಬಾಪೂ ಆತ್ಮಕ್ಕೆ ಶಾಂತಿ ಕೋರಿದರು. ಆಗಿನ ವಾತಾವರಣವನ್ನು ನೆನೆಸಿಕೊಂಡರೆ ಈಗಲೂ ಕಣ್ಣೀರಿಳಿಯುವುದು. ಜನದ ಉದ್ವೇಗವನ್ನು ಜ್ಞಾಪಿಸಿಕೊಂಡರೆ ಶರೀರಸ್ಥ ಬಾಪೂ ಮಹಿಮೆಗಿಂತ-ಪ್ರಭಾವಕ್ಕಿಂತ ಅಶರೀರ ಬಾಪೂವಿನ ಮಹಿಮೆ-ಪ್ರಭಾವಗಳು ಮಿಗಿಲಾಗಬಹುದೆಂದೆನಿಸಿತು.

ಕಾಲಕಳೆದಂತೆ ಮರವಿನಿಂದ ದುಃಖವು ಮಾಸಿತು. ದುಃಖದ ಜೊತೆಗೆ ನಾವು ತೀರಿಸಬೇಕಾದ ಬಾಪೂವಿನ ಋಣದ ಭಾರದ ನೆನಹು ಕೂಡ ಮಾಸುತ್ತಾ ಬಂದಿರುವಂತೆ ತೋರುತ್ತಿದೆ. ಬಾಪೂ ಜೀವಿತ ಕಾಲದಲ್ಲಿ ಅವರು ಈ ವಿಶಾಲ ಭಾರತದ ಯಾವ ಮೂಲೆಯಲ್ಲಿರಲಿ, ಇಡೀ ದೇಶದಲ್ಲಿಯೇ ಅವರ ದಿವ್ಯ ಸನ್ನಿಧಿಯು ಭಾಸವಾಗುತ್ತಿತ್ತು. ಜನರ ಅಂತಃಕರಣದಲ್ಲಿ ಕರ್ತವ್ಯಭಾವ ಪ್ರಚೋದಿತವಾಗುತ್ತಿತ್ತು.

ಆದೇ ಬಾಪೂ ರಹಿತ ಭಾರತವನ್ನು ನೋಡೋಣ: ಗಾಂಧೀ ಸ್ಮಾರಕ ನಿಧಿ ಸಂಗ್ರಹ ಭರದಿಂದ ಸಾಗುತ್ತಿದೆ. ಗಾಂಧೀ ಮಂದಿರಗಳ ಸ್ಥಾಪನೆ ಬಿಡುವಿಲ್ಲದೆ ನಡೆಯುತ್ತಿದೆ. ಪ್ರತಿಯೊಂದು ಖಾಸಗಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬಾಪೂ ಭಾವಚಿತ್ರ ಅನಾವರಣವೇ; ಸರ್ಕಾರಿ, ರಾಜಕೀಯ ಹಾಗೂ ಸಾರ್ವಜನಿಕ ಸಂಸ್ಥೆಗಳೆಲ್ಲವುಗಳಿಗೂ ಗಾಂಧೀಜಿಯ ಮುಖ ಚಿನ್ಹೆ ಪೂಜ್ಯವಾಗಿದೆ. ಗಾಂಧೀಜಿಯವರ ಬೃಹತ್ ಜೀವನ ಚರಿತ್ರೆ ಸಿದ್ಧವಾಗುತ್ತಿದೆ. ಅವರ ಬಾಯಿನಿಂದ ಹೊರಬಿದ್ದ ಎಲ್ಲ ಮಾತುಗಳನ್ನೂ ವೇದವಾಕ್ಯದಂತೆ ಗ್ರಹಿಸಿ ಹೊತ್ತಿಗೆಗಳನ್ನು ಸಿದ್ಧಗೊಳಿಸಲಾಗುತ್ತಿದೆ; ಅವರ ಸಂಪರ್ಕವಿರುವ ಎಲ್ಲ ವಸ್ತುಗಳನ್ನೂ ಸಂಗ್ರಹಿಸಿ ಪ್ರದರ್ಶಿಸಲಾಗುತ್ತಿದೆ; ಒಟ್ಟಿನಲ್ಲಿ ಬಾಪೂವಿನ ಹೆಸರು ಭೌತಿಕ ಅರ್ಥದಲ್ಲಿ ಆಚಂದ್ರಾರ್ಕವಾಗಿ ನೆಲೆಗೊಳ್ಳುವಂತೆ ವಿಶಾಲ ಭಾರತದ ಜನತೆ, ಸರ್ಕಾರಗಳ ಸಮಸ್ತ ಶಕ್ತಿಯನ್ನು ವಿನಿಯೋಗಿಸಿ ಪ್ರಯತ್ನಿಸಲಾಗುತ್ತಿದೆ. ಬಾಪೂ ವಿಷ್ಣುವಿನ ಏಕಾದಶಾವತಾರವೆಂದೆನಿಸಲು ಅಡ್ಡಿಯೇನಿಲ.

ಆದರೆ ಬಾಪೂ ಸಮಗ್ರ ಜೀವನದ ತಪಸ್ಸಿನ ಉದ್ದೇಶ; ಅವರು ಹಗಲಿರುಳೂ ಕಾಣುತ್ತಿದ್ದ ಕನಸು; ಸತ್ಯ ಅಹಿಂಸೆಗಳ ಆಧಾರದ ಮೇಲೆ ರಚಿತವಾದ ಸಂಪೂರ್ಣ ಮನೋಭಾವದಿಂದ ಕೂಡಿದ ಸ್ವಾವಲಂಬೀ ಜನಸಮೂಹಗಳಿಂದಾದ ರಾಷ್ಟ್ರ, ಜಗತ್ತಿನ ನಿರ್ಮಾಣ ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತಿದೆ.

ಬಾಪೂ ಅನ್ನುತ್ತಿದ್ದರು : "Imitation is the highest tribute" "ಅನುಕರಣೆಯೇ ಸರ್ವೋತ್ತಮವಾದ ಸನ್ಮಾನ" ಎಂದು ಕೋಟ್ಯಾಂತರವಿರುವ ಭಾರತೀಯರಿಂದ ಅವರು ಬಯಸಿದುದು ಇದೇ. ಭಾರತದಲ್ಲೇನು ಬುದ್ಧಿಶಾಲಿಗಳಿಗೆ ಕೊರತೆಯಿಲ್ಲ. ಗಾಂಧೀ ತತ್ವದಿಂದಲೇ ಜಗತ್ಕಲ್ಯಾಣ ಸಾಧ್ಯ ಎಂದು ಆಮೂಲಾಗ್ರವಾಗಿ ಪರಿಶೋಧನೆ ಮಾಡಿ ಜಗತ್ತಿಗೇ ತಿಳಿಸುವ ಶಕ್ತಿ ಇರುವ ವ್ಯಕ್ತಿಗಳು ನಮ್ಮಲ್ಲಿ ನೂರಾರು ಜನ, ಸಾವಿರಾರು ಜನ ಇದ್ದಾರೆ. ಅಷ್ಟೇ ಸುಲಲಿತವಾದ ಶೈಲಿಯಲ್ಲಿ ಉಲ್ಲೇಖಿಸಲಾರದಿದ್ದರೂ ಅರ್ಥಮಾಡಿಕೊಂಡವರು ಲಕ್ಷೋಪಲಕ್ಷವಿದ್ದಾರೆ. ಆದರೆ ಬಾಪೂ ಬಯಸಿದುದು ಒಂದೇ; ಅವರ ಜೀವನದ ಅನುಕರಣೆ ಇವರೆಲ್ಲಾ ತನ್ನಂತಾಗಲಿ ಎಂದು. ಅದೇ ಅವರು ಬಯಸಿದ ಸ್ಮಾರಕ.

ಪಂಡಿತ ಮೋತೀಲಾಲ್ ನೆಹ್ರೂ, ಲಾಲಾ ಲಜಪತರಾಯ್, ಸ್ವಾಮಿ ಶ್ರದ್ಧಾನಂದಜೀ ಇವರೇ ಆದಿಯಾಗಿ ಬಾಪೂ ಜೊತೆಗೆ ಸ್ವಾತಂತ್ರ್ಯ ರಥಕ್ಕೆ ಹೆಗಲು ಕೊಟ್ಟು ಎಳೆದ ದಿಗ್ಗಜಗಳೂ ಒಬ್ಬೊಬ್ಬರಾಗಿ ಲಯದ ಬಸಿರಿನಲ್ಲಿ ಸೇರಿದರು. ಅಂತಹ ಸಮಯದಲ್ಲಿ ದುಃಖಭರದಿಂದ ತಪಿಸುತ್ತಿದ್ದ ದೇಶವನ್ನು ಬಾಪೂ ಸಂತಯಿಸುತ್ತಿದ್ದರು, "ಅವರು ಧೀರರು, ತಮ್ಮ ಕರ್ತವ್ಯ ಮಾಡುತ್ತ ಮಾಡುತ್ತಲೇ ದೇಹತ್ಯಾಗ ಮಾಡಿದರು. ನಾವು ಅವರ ಕಾರ್ಯವನ್ನು ಮುಂದುವರಿಸಿ ಅವರು ಯಾವ ಉದಾತ್ತ ತತ್ವಗಳಿಗಾಗಿ ಹೋರಾಡಿ ಮಡಿದರೋ, ಅವನ್ನು ಉಳಿಸಿ, ಬೆಳಸಿ, ಅನುಸರಿಸಿ ಅವರಿಗೆ ಶಾಶ್ವತವಾದ ಸ್ಮಾರಕ ರಚಿಸೋಣ" ಎಂದು.

ಬಾಪೂ ಬದುಕಿದ್ದಾಗ ಇದ್ದುದಕ್ಕಿಂತ ಈಗ ನಮ್ಮ ಜವಾಬ್ದಾರಿ ಗುರುತರವಾಗಿದೆ. ಅವರ ದಿವ್ಯ ನಾಮಕ್ಕೆ ಅಪಯಶಸ್ಸು ಬರದಂತೆ ಅವರ ಉತ್ತರಾಧಿಕಾರಿಗಳಾದ ನಾವು ನಡೆದುಕೊಳ್ಳಬೇಕಾಗಿದೆ. ಕಣ್ಣೆದುರಿಗಿದ್ದಾಗ ಅವರು ನಮ್ಮ ತಪ್ಪು ತಿದ್ದುತ್ತಿದ್ದರು. ಅದೃಶ್ಯರಾಗಿ ಈಗ ಎಲ್ಲರ ಹೃದಯದಲ್ಲಿ ನೆಲಸಿದ್ದಾರೆ. ಆದ್ದರಿಂದ ಈಗ ನಾವು ನಮ್ಮ ಕಾರ್ಯ ಸರಿಯೋ, ತಪ್ಪೋ ಇದು ಬಾಪೂ ಮೆಚ್ಚತಕ್ಕಂತಹುದೇ ಇಲ್ಲವೇ ಎಂದು ತಿಳಿಯಲು ಹೊರಗೆ ನೋಡಬೇಕಾಗಿಲ್ಲ. ನಮ್ಮ ಅಂತಃಕರಣವನ್ನು ನೋಡಬೇಕು.

ಸ್ಥಂಭಗಳು, ಸೌಧಗಳು, ಚಿತ್ರಗಳು, ಸ್ನಾನಘಟ್ಟಗಳು, ಶಿಲಾಪ್ರತಿಮೆಗಳು ಇವೆಲ್ಲಾ ನಿರ್ಜೀವ ಸ್ಮಾರಕಗಳು. ಅವುಗಳ ಹತ್ತಿರ ಹೋದವರಿಗೆ ಮಾತ್ರ ಯಾರ

ಹೆಸರಿನಲ್ಲಿ ನಿರ್ಮಿತವಾಗಿದೆಯೋ ಅವರ ವಿಷಯ ಸ್ವಲ್ಪ ತಿಳಿಯುತ್ತದೆ. ಆದರೆ ಆ ಮಹಾತ್ಮನ ಸಂದೇಶವನ್ನು ಮನೋಗತ, ದೇಹಗತ ಮಾಡಿಕೊಂಡ ಲಕ್ಷಾಂತರ, ಕೋಟ್ಯಾಂತರ ಜೀವ ಪೂರ್ಣ ಮಾನವ ವ್ಯಕ್ತಿಗಳು ಸಂಚರಿಸುವ ಸಜೀವ ಸ್ಮಾರಕಗಳು ಇಂತಹವರು ಎಲ್ಲೆಲ್ಲಿದ್ದರೆ ಅಲ್ಲಲ್ಲಿ ಒಂದೊಂದು ಬಾಪೂ ಸ್ಮಾರಕ, ಸಜೀವ ಸ್ಮಾರಕವಿದ್ದಂತೆ. ಇಂತಹ ಸ್ಮಾರಕವೇ ಬಾಪೂ ಅಪೇಕ್ಷಿಸುವಂತಹುದು. ಸ್ತಂಭ, ಚಿತ್ರ, ಪ್ರತಿಮೆಗಳು ಅವಶ್ಯಕವಾದರೂ ಅವು ಕೇವಲ ದೇವಾಲಯಗಳ ಮೂರ್ತಿಗಳಿದ್ದಂತೆ; ನಿರ್ಜೀವ ಪಾಷಾಣಮೂರ್ತಿ ದೇವರಲ್ಲ. ಬಾಪೂ ತತ್ವವನ್ನು ಜೀವನದಲ್ಲಿ ತರಲೆಳೆಸುವ ಉಜ್ವಲ ಅಭಿಲಾಷೆಯಿರುವ ಜನಗಳಲ್ಲದೆ; ನಾವು ನಿರ್ಮಿಸುವ ಸ್ಮಾರಕಗಳಿಂದಲೇ ಬಾಪೂ ಆತ್ಮಕ್ಕೆ ಶಾಂತಿಯಿಲ್ಲ. ಅವರ ಆತ್ಮಕ್ಕೆ ನಿಜವಾದ ಶಾಂತಿ ದೊರಕಲು ಭಾರತೀಯರೆಲ್ಲ ಅವರ ಸಜೀವ ಸ್ಮಾರಕಗಳಾಗಬೇಕು. ಭಗವಂತನ ದಯೆ, ಬಾಪೂ ಆಶೀರ್ವಾದಗಳಿಂದ ಇದು ಸಿದ್ಧಿಸಲಿ.

ರಾಷ್ಟ್ರಪಿತನ ಅಮೃತವಾಣಿ.

ನಾನು ಅಸ್ಪೃಶ್ಯರ ಒಡನಾಡಿದ್ದೇನೆ. ತಪ್ಪದೆ ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇನೆ. ನಾನು ಮೋಕ್ಷಾಭಿಲಾಷಿ. ಪುನರ್ಜನ್ಮವೇ ಬೇಡವೆಂದು ದೇವರಲ್ಲಿ ಮೊರೆಯಿಡುತ್ತಿದ್ದೇನೆ. ಒಂದು ವೇಳೆ ನನಗೆ ಪುನರ್ಜನ್ಮ ಬಂದರೆ ನನ್ನನ್ನು ಅಸ್ಪೃಶ್ಯನನ್ನಾಗಿ ಹುಟ್ಟಿಸಲೆಂದು ದೇವರಲ್ಲಿ ಮೊರೆಯಿಟ್ಟಿದ್ದೇನೆ. ಇದರಿಂದ ನನಗೆ ಅವರ ಕಷ್ಟ, ದುಃಖ ಅಳಲಿನ ಆಳ, ಇವು ಗೋಚರವಾಗುತ್ತವೆ. ಆದ್ದರಿಂದ ನನಗೆ ಪುನರ್ಜನ್ಮ ಕೊಡುವುದಾದರೆ ವರ್ಣರಹಿತ ಅಸ್ಪೃಶ್ಯನನ್ನಾಗಿಯೇ ಹುಟ್ಟಿಸೆಂದು ದೇವರಲ್ಲಿ ಸದಾ ಮೊರೆಯಿಡುತ್ತೇನೆ.

—ಗಾಂಧೀಜಿ.

ಯಂಗ್ ಇಂಡಿಯಾ, ಏಪ್ರಿಲ್ 27, 1921.

ಕಸ್ತೂರಿಬಾ ಗಾಂಧಿ ಸ್ಮಾರಕ ಟ್ರಸ್ಟ್, ಮೈಸೂರು.

ಸಂಕ್ಷಿಪ್ತ ಪರಿಚಯ.

[ಬರೆದವರು—**ಕೆ. ವಿ. ಶ್ರೀಕಂಠಯ್ಯ, ಬಿ. ಎಸ್‌ಸಿ., ಆನರ್ಸ್,**
ರಾಷ್ಟ್ರಭಾಷಾವಿಶಾರದ.]

೧೯೪೩ ರಲ್ಲಿ ಶ್ರೀ॥ ಕಸ್ತೂರಿಬಾ ಗಾಂಧಿಯವರು ಸೆರೆಮನೆಯಲ್ಲಿ ಸ್ವರ್ಗಸ್ಥರಾದಾಗ ಆಕೆಯ ಸ್ಮಾರಕಕ್ಕಾಗಿ ಭಾರತದೇಶದ ಆದ್ಯಂತವೂ ನಿಧಿಸಂಗ್ರಹ ಕಾರ್ಯವು ನಡೆಯಿತು. ೭೫ ಲಕ್ಷ ರೂಪಾಯಿಗಳ ಸಂಗ್ರಹಕ್ಕೆ ಬದಲಾಗಿ ೧೩೩ ಲಕ್ಷ ರೂ.ಗಳು ೧೯೪೪ ರ ಡಿಸೆಂಬರ್ ತಿಂಗಳೊಳಗೆ ಕೂಡಿತು. ಈ ಧನವನ್ನು ನಿಧಿಯಾಗಿ ಏರ್ಪಡಿಸಿ ಮಹಾತ್ಮಾ ಗಾಂಧಿಯವರು ನಿಧಿಯ ವಿನಿಯೋಗವು ಹಳ್ಳಿಯ ಹೆಂಗಸರ ಮತ್ತು ಮಕ್ಕಳ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಮಾತ್ರವೇ ಆಗಬೇಕೆಂದು ನಿರ್ಧರಿಸಿ ಅದಕ್ಕಾಗಿ ೨೭ ಜನ ಭಾರತ ಮುಖಂಡರು ಹಾಗೂ ದೇಶ ಸೇವಕರನ್ನು ಧರ್ಮದರ್ಶಿಗಳನ್ನಾಗಿ ಮಾಡಿದರು.

ಮೈಸೂರು ಸೀಮೆಯಲ್ಲಿ ಮೊಟ್ಟಮೊದಲನೆಯದಾಗಿ ೧೯೪೫ ನೇ ಇಸವಿಯಲ್ಲಿ ಹಳ್ಳಿಗಳಿಗೆ ಹೋಗಿ ನೆಲಸಿ, ಕೆಲಸಮಾಡಲು ಗ್ರಾಮಸೇವಕಿಯರನ್ನು ತರಬೇತು ಮಾಡಲು ಪಡವಾರಹಳ್ಳಿಯ ಬಳಿ ಒಂದು ಶಿಬಿರವನ್ನು ಪ್ರಾರಂಭಿಸಲಾಯಿತು. ಈ ಶಿಕ್ಷಣ ಶಿಬಿರವು ಮೈಸೂರು ಮತ್ತು ಕರ್ನಾಟಕದ ಜಂಟಿ ಸಮಿತಿಯ ಮೇಲ್ವಿಚಾರಣೆಯಲ್ಲಿ ನಡೆಯಿತು. ಈ ವಿದ್ಯಾಲಯದಲ್ಲಿ ಮೈಸೂರಿನ ೧೨ ಮಂದಿ ಮಹಿಳೆಯರೂ, ಕರ್ನಾಟಕದ ೧೦ ಮಂದಿ ಮಹಿಳೆಯರೂ ಶಿಕ್ಷಣಪಡೆದರು. ಈ ಗ್ರಾಮಸೇವಕಿಯರು ಹಳ್ಳಿಗಳಲ್ಲಿ ನೆಲಸಿ ಸೇವಾಕಾರ್ಯವನ್ನು ನಡೆಯಿಸಿಕೊಂಡು ಬರುತ್ತಿರುವರು. ೧೯೪೬ ರಲ್ಲಿ ಮಹಾತ್ಮಾ ಗಾಂಧೀಯವರು ಪ್ರತಿ ಪ್ರಾಂತದಲ್ಲಿಯೂ ಮಹಿಳಾ ಪ್ರತಿನಿಧಿಗಳನ್ನು ನೇಮಕಮಾಡಿದರು. ಮೈಸೂರು ಸೀಮೆಗೆ ಶ್ರೀಮತಿ ಯಶೋಧರ ದಾಸಪ್ಪನವರು ಪ್ರಾಂತೀಯ ಪ್ರತಿನಿಧಿಗಳಾಗಿ ಆರಿಸಲ್ಪಟ್ಟರು. ಇವರ ಸಂಪೂರ್ಣ ಮೇಲ್ವಿಚಾರಣೆಯಲ್ಲಿ ಎರಡನೆಯ ಗ್ರಾಮಸೇವಿಕಾ ವಿದ್ಯಾಲಯವು ಮೈಸೂರಿಗೆ ಆರುವರೆ ಮೈಲಿ ದೂರದಲ್ಲಿರುವ **ಬೆಳವಾಡಿ** ಎಂಬ ಗ್ರಾಮದಲ್ಲಿ ನಡೆಯಿತು. ಈ ವಿದ್ಯಾಲಯದಲ್ಲಿ ೨೪ ಮಂದಿ ಮೈಸೂರು ಮಹಿಳೆಯರೂ, ೭ ಮಂದಿ ಕರ್ನಾಟಕದ ಮಹಿಳೆಯರೂ ತರಬೇತುಪಡೆದರು. ನಂತರ ಮೂರನೆ ವಿದ್ಯಾಲಯವು ಅರಸೀಕೆರೆ ಬಳಿ ಇರುವ ಮಾಲೇಕಲ್ ತಿರುಪತಿಯಲ್ಲಿ ೧೯೪೮ ನೇ ಆಗಸ್ಟ್ ತಿಂಗಳಿನಲ್ಲಿ ಪ್ರಾರಂಭವಾಗಿ ೧೯೪೯ ನೇ ಜೂನ್ ತಿಂಗಳಿನಲ್ಲಿ ಮುಕ್ತಾಯಗೊಂಡಿತು. ೧೯೪೮ ನೇ ಇಸವಿಯ ಕೊನೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಜಿಲ್ಲೆಗೆ ಎರಡರಂತೆ

ಹದಿನೆಂಟು ಗ್ರಾಮಸೇವಾ ಕೇಂದ್ರಗಳೂ, ಎರಡು ಮಾತೃರಕ್ಷಾ ಮಂದಿರಗಳೂ ಇದ್ದವು. ೧೯೪೯ ರಲ್ಲಿ ಹತ್ತು ಹೊಸ ಗ್ರಾಮಸೇವಾ ಕೇಂದ್ರಗಳನ್ನು ತೆರೆಯುವ ಯೋಜನೆ ಇರುವುದು. ಇನ್ನು ಒಂದೆರಡು ತಿಂಗಳೊಳಗೆ ಈ ಯೋಜನೆಯು ಕಾರ್ಯರೂಪಕ್ಕೆ ಬರಲಿರುವುದು.

ಗ್ರಾಮಸೇವಾ ಕೇಂದ್ರಗಳಲ್ಲಿ ಮಕ್ಕಳಿಗಾಗಿ ಬಾಲವಾಡಿ ಅಥವಾ ಶಿಶುವಿಹಾರ, ಹಿರಿಯ ಹೆಣ್ಣುಮಕ್ಕಳಿಗೆ ಉದ್ಯೋಗ ತರಗತಿ, ವಿಶೇಷವಾಗಿ ಚರಕ, ತಕಲಿಗಳಿಂದ ನೂಲುವುದು, ವಯಸ್ಕರ ಶಿಕ್ಷಣ ತರಗತಿಗಳನ್ನು ನಡೆಸುವುದು, ಗ್ರಾಮನೈರ್ಮಲ್ಯ, ಪ್ರಾರ್ಥನೆ, ಭಜನೆ, ವೈದ್ಯಕೀಯ ಸಹಾಯ (ಆಯುರ್ವೇದ ಔಷಧಿಗಳಿಂದ) ಇವೇ ಮೊದಲಾದ ಕಾರ್ಯಕ್ರಮಗಳಮೂಲಕ ಹಳ್ಳಿಯ ಜನತೆಯಲ್ಲಿ ಜಾಗ್ರತಿಯನ್ನುಂಟುಮಾಡಿ, ಜೀವನದಲ್ಲಿ ಉತ್ಸಾಹವನ್ನುಂಟುಮಾಡಲು ಪ್ರಯತ್ನಿಸಲಾಗುತ್ತಿದೆ. ಈ ಕೇಂದ್ರಗಳು ಜನಪ್ರಿಯವಾಗಿ ಹಳ್ಳಿಯ ಹೆಂಗಸರ, ಮಕ್ಕಳ ಉನ್ನತಿಗೆ ಬಹುಮಟ್ಟಿಗೂ ಸಾಧಕವಾಗಿರುವುದರಿಂದ ಅನೇಕ ಹಳ್ಳಿಗಳಿಂದ ತಮ್ಮತಮ್ಮ ಗ್ರಾಮಗಳಲ್ಲಿ ಕೇಂದ್ರವನ್ನು ಸ್ಥಾಪಿಸಬೇಕೆಂಬ ಕೇಳಿಕೆಗಳು ಬರುತ್ತಿವೆ. ಆದುದರಿಂದ ಗ್ರಾಮಸೇವಕಿಯರ ತರಬೇತು ಭರದಿಂದ ಸಾಗಬೇಕಾಗಿದೆ. ನಾಲ್ಕನೆಯ ಗ್ರಾಮಸೇವಿಕಾ ಶಿಕ್ಷಣ ತರಗತಿಗಳು ಇದೇ ಆಗಸ್ಟ್ ಹದಿನೈದನೇ ತಾರೀಖಿನಿಂದ ಪ್ರಾರಂಭವಾಗಲಿರುವುವು.

ಕಸ್ತೂರಿಬಾ ಗಾಂಧೀ ಸ್ಮಾರಕ ನಿಧಿಯ ಕೆಲಸಕಾರ್ಯಗಳು ಎಂದೆಂದಿಗೂ ಸತತವಾಗಿ ಅಮರಜ್ಯೋತಿಯಂತೆ ಬೆಳಗಿ ಮುಂದುವರಿಯಲು ಪೂಜ್ಯ ಬಾಪೂಜೀಯವರು ದೂರದರ್ಶಿತ್ವದ ಯೋಜನೆಯೊಂದನ್ನು ಆಗಲೇ ನಿರ್ದೇಶಿಸಿರುವರು. ಪ್ರತಿ ಗ್ರಾಮಸೇವಾ ಕೇಂದ್ರದ ಖರ್ಚಿಗಾಗಿ ಮೊದಲನೇ ವರ್ಷದ ಖರ್ಚಿನ ಶೇಕಡಾ ೮೫ ರಷ್ಟನ್ನೂ, ಎರಡನೇ ಮತ್ತು ಮೂರನೇ ವರ್ಷ ಶೇಕಡಾ ೭೫ ರಷ್ಟನ್ನೂ, ನಾಲ್ಕನೇ ವರ್ಷ ಶೇಕಡಾ ೫೦ ರಷ್ಟನ್ನೂ, ಐದನೇ ವರ್ಷ ಶೇಕಡಾ ೨೫ ರಷ್ಟನ್ನೂ, ಶೇಖರಿಸಿದ ನಿಧಿಯಿಂದ ಕೇಂದ್ರ ಕಛೇರಿಯು (ವಾರ್ಧಾ ಕಛೇರಿ) ಒದಗಿಸುವುದು. ಉಳಿದ ಖರ್ಚಿನ ಹಣವನ್ನು ಆಯಾ ಪ್ರದೇಶದಲ್ಲಿಯೇ ಧನಸಂಗ್ರಹ ಮಾಡಿಕೊಂಡು ಕೆಲಸವನ್ನು ಮುಂದುವರಿಸಬೇಕು. ಹೀಗೆ ಐದು ವರ್ಷಗಳ ನಂತರ ಆ ಕೇಂದ್ರವು ಸಂಪೂರ್ಣವಾಗಿ ಸ್ವಾವಲಂಬಿಯಾಗಬೇಕು. ಈ ಯೋಜನೆಯಿಂದ ಹೊಸಹೊಸ ಕೇಂದ್ರಗಳನ್ನು ಸ್ಥಾಪಿಸಲು ಅನುಕೂಲವಾಗುವುದೊಂದೇ ಅಲ್ಲದೆ ಹಳೆಯ ಕೇಂದ್ರಗಳು ಅಲ್ಲಿಯ ಜನರಿಗೆ ಪ್ರಿಯವಾಗಿ ಕೇಂದ್ರವು ಗ್ರಾಮದವರ ಅಭಿವೃದ್ಧಿಗಾಗಿ, ಒಳ್ಳಿತಕ್ಕಾಗಿ ಇದೆ ಎಂಬ ಭಾವನೆಯು ಗ್ರಾಮಸ್ಥರಲ್ಲಿ ಉಂಟಾಗಲು ಸಾಧ್ಯವಾಗುವುದು. ಆಗಲೇ ಕಸ್ತೂರಿಬಾ ಗಾಂಧೀ ಸ್ಮಾರಕ ನಿಧಿಯ ವಿನಿಯೋಗದ ಉದ್ದೇಶವು ಕೈಗೂಡಿತೆಂದು ಸ್ಪಷ್ಟವಾಗುವುದು. ಮಹಾತ್ಮಾ ಗಾಂಧೀಯವರ ಒಂದೊಂದು

ಯೋಜನೆಯಲ್ಲಿಯೂ ಕ್ರಾಂತಿಕಾರಕವಾದ ವಿಷಯಗಳಿವೆ ಎಂಬುದಕ್ಕೆ ಈ ಗ್ರಾಮ ಸೇವಾ ಕೇಂದ್ರಗಳ ಯೋಜನೆಯೂ ಒಂದಾಗಿದೆ. ಈ ಮೂರುನಾಲ್ಕು ವರ್ಷಗಳ ಅನುಭವದಲ್ಲಿಯೇ ಯೋಜನೆಯ ವೈಶಿಷ್ಟ್ಯವು ಕಾಣಬರುತ್ತಿದೆ. ಹಳ್ಳಿಗಳಲ್ಲಿ ಸಾವಿರಾರು ವರ್ಷಗಳಿಂದ ಬೇರೂರಿದ್ದ ಹಲವು ದುಷ್ಟ ಅಭ್ಯಾಸಗಳು ಹಳ್ಳಿಗರ ಸ್ವಪ್ರಯತ್ನದಿಂದಲೇ ನಾಶವಾಗಿದೆ. ಕೆಲವು ಕಡೆ ಕುಡಿತವನ್ನು ತಾವೇ ನಿಲ್ಲಿಸಿರುವರು. ಜಾತಿ ವೈಷಮ್ಯ, ಅಸ್ಪೃಶ್ಯತಾ ಭಾವನೆಗಳು ನಿರ್ನಾಮವಾಗುತ್ತಿದೆ. ಹೆಂಗಸರ ಸ್ಥಿತಿಯು ಸುಧಾರಿಸುತ್ತಿದೆ. ಅವರಲ್ಲಿ "ನಾವೂ ಸ್ವತಂತ್ರ ವ್ಯಕ್ತಿಗಳು, ನಮ್ಮ ಉನ್ನತಿಯೂ, ವಿಕಾಸವೂ ಉಂಟಾಗಬೇಕು" ಎಂಬ ಹೊಸ ಹುರುಪು ಮೂಡುತ್ತಿದೆ.

ಟ್ರಸ್ಟಿನ ಧ್ಯೇಯಕ್ಕೆ ರೂಪುಗೊಟ್ಟು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಒಂದು ಆದರ್ಶಗ್ರಾಮವನ್ನು ಕಸ್ತೂರಿಬಾ ಗ್ರಾಮ ನಿರ್ಮಿಸಲು ಕಾರ್ಯಾರಂಭವಾಗಿದೆ. ಅರಸೀಕೆರೆ ಬಳಿ ಎಂಭತ್ತೈದು ಎಕರೆ ವಿಸ್ತೀರ್ಣದ ಜಮೀನನ್ನು ಮೈಸೂರು ಸರ್ಕಾರದವರು ದಾನವಾಗಿ ದಯಪಾಲಿಸಿರುವರು. ಆ ಜಮೀನಿನಲ್ಲಿ ಗ್ರಾಮಸೇವಿಕಾ ವಿದ್ಯಾಲಯ, ಗ್ರಾಮೋದ್ಯೋಗಶಾಲೆ, ಗೋಶಾಲೆ, ಅನಾಥ ಮಹಿಳಾಶ್ರಮ, ಖಾದಿ ಸರಂಜಾಮಾಲಯ, ಮಾತೃರಕ್ಷಾಮಂದಿರ, ಔಷಧಾಲಯ ಮುಂತಾದ ರಚನಾತ್ಮಕ ಕಾರ್ಯಗಳ ಕೇಂದ್ರವೊಂದು ನಿರ್ಮಿತವಾಗುವುದು. ಈ ಕಾರ್ಯವು ಜನ-ಮನ-ಧನ ಸಹಾಯವು ಸಿಕ್ಕಿದಂತೆಲ್ಲಾ ಶೀಘ್ರವಾಗಿ ಧ್ಯೇಯ ಸಾಧನೆಯ ಕಡೆಗೆ ಮುಂದುವರಿದು ಗ್ರಾಮಸೇವಾ ಕಾರ್ಯವು ಸಫಲಗೊಳ್ಳುವುದು.

ಎಚ್ಚೆತ್ತ ಮಲೆನಾಡು.

[ಲೇಖಕರು—ಶ್ರೀಮಾನ್ ಕೆ. ವಿ. ಪಟವರ್ಧನ್, ತೀರ್ಥಹಳ್ಳಿ]

ನೂರಾರು ಮೈಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಪಶ್ಚಿಮಘಟ್ಟಗಳಲ್ಲಿ ಹುದುಗಿರುವ ಸಾವಿರಾರು ಹಳ್ಳಿಗಳ ಸಮಸ್ಯೆಗಳೆಲ್ಲ ಒಂದೇರೀತಿಯವು. ಅದು ಯಾವ ರಾಜಕೀಯ ವಿಭಾಗಕ್ಕೆ ಸೇರಿರಲಿ ಅಲ್ಲಿಯ ಪರಿಸ್ಥಿತಿ ಮಾತ್ರ ಒಂದೇ. ವ್ಯತ್ಯಾಸಗಳು ಇದ್ದರೆ ಅವು ಸ್ವಲ್ಪ ಮಾತ್ರ. ಮಳೆ, ಬೆಳೆ, ಭೂಮಿಯ ಮೇಲ್ಮೈ ಲಕ್ಷಣ, ಜನಜೀವನ, ಲೇವಾದೇವಿ ಪದ್ಧತಿ, ವ್ಯಾಪಾರ-ಸಾಪಾರಗಳು, ಜನತೆಯ ಭಾವನೆ, ಸಂಸ್ಕೃತಿಗಳಲ್ಲೇ ಹೆಚ್ಚಿನ ಸಾಮ್ಯವಿದೆ. ಆದುದರಿಂದ ಮಲೆನಾಡಿಗರೆಲ್ಲರೂ ಒಂದೇ.

ನಮ್ಮ ಹಳ್ಳಿಗಳಲ್ಲಿ ರಾಜಕೀಯ ಗೊಂದಲಗಳಿಲ್ಲ. ಅಷ್ಟಾಗಿ ಇರಬೇಕಾದ್ದಿಲ್ಲ. ಹೆಚ್ಚು ಚಿಂತೆಕೊಡುತ್ತಿರುವವುಗಳೆಂದರೆ ಆರ್ಥಿಕ ಸಮಸ್ಯೆಗಳು. ಈ ಮೂಲ ಸಮಸ್ಯೆಯೇ ಅನೇಕ ಇತರ ತೊಡಕುಗಳಿಗೆ ಮೂಲವಾಗಿದೆ. ನಾವು ವಿದ್ಯೆ, ವ್ಯವಹಾರ, ವಾಣಿಜ್ಯ, ಆರೋಗ್ಯಗಳಲ್ಲಿ ನಮ್ಮ ನೆರೆನಾಡಿಗಿಂತ ಬಹಳ ಹಿಂದಿದ್ದೇವೆ. ಸುಭಿಕ್ಷವಾದ, ಎಂದೂ ಬರಗಾಲವನ್ನು ಕಾಣದ ಸಮೃದ್ಧಳಾದ ಪ್ರಕೃತಿಮಾತೆಯ ಮುದ್ದುಮಕ್ಕಳಾದ ನಮಗೆ ಈ ಬಡತನವೇ ? ಈ ರೋಗಗಳೇ ? ಈ ಅಜ್ಞಾನ ವ್ಯಾಧಿಯೇ ? ಈ ಜಡತೆಯೇ ? ಇದೇ ಬುದ್ಧಿವಂತರ ತಲೆತಿನ್ನುತ್ತಿರುವ ಸಮಸ್ಯೆ. "ನಮ್ಮನ್ನು ಬಾಗಿಸಿರುವ ಈ ಸಾಲದ ಹೊರೆಯೇಕೆ ? ನಮ್ಮ ಹೊಟ್ಟೆಗಳಲ್ಲೆಲ್ಲ ಜ್ವರಗಡ್ಡೆಗಳೇಕೆ ? ವರ್ಷದಲ್ಲಿ ಬಹುಕಾಲ ಹಸಿವಿನಿಂದ ಬಳಲಬೇಕಾದ ನಮ್ಮ ರೈತರ ಸ್ಥಿತಿ ಹೀಗೇಕಾಗಿದೆ ?" ಈ ಪ್ರಶ್ನೆಗಳು ನಮ್ಮಲ್ಲಿ ಉದ್ಭವಿಸಿವೆ. "ಇವೆಲ್ಲ ನಮ್ಮ ಜನ್ಮಾಂತರದ ಪಾಪಗಳ ಫಲ. ಹುಟ್ಟಿದ ಘಳಿಗೆಯ ಪರಿಣಾಮ. ನಮ್ಮ ಪಣೆಯಲ್ಲಿ ಬರೆದಿರುವುದೇ ಹೀಗೆ" ಎಂಬ ಹಿಂದಿನ ಕುರುಡುನಂಬಿಕೆ ನಮ್ಮಲ್ಲಿ ಸಡಿಲುತ್ತಾ ಬಂದಿದೆ. ಸಡಿಲಬೇಕಾದದ್ದೇ.

ನಮ್ಮಲ್ಲಿ ವಿದ್ಯೆಯಿಲ್ಲವೆಂಬುದು ನಿಜವಾದರೂ ನಮ್ಮನ್ನು ಮುತ್ತಿಕೊಂಡಿರುವ ಕುಂದುಕೊರತೆಗಳ ಅನುಭವವಿರುವ ನಮಗೆ ನಮ್ಮ ಸಮಸ್ಯೆಗಳ ಸ್ವರೂಪ ಚನ್ನಾಗಿ ಗೊತ್ತೇಯಿದೆ. ಪರಿಹಾರ ಕಾರ್ಯದಲ್ಲಿ ನಾವೇ ಕೈಗೊಳ್ಳಬೇಕಾಗಿರುವ ಪ್ರಯತ್ನಗಳು ಹಲವು. ನಮ್ಮ ನೆರೆನಾಡಿನ ಸಹೋದರರ ಸಹಾಯ ಸಹಾನುಭೂತಿಯಿಂದಾಗಬೇಕಾಗಿರುವುವು ಕೆಲವು. ಸರ್ಕಾರದಿಂದ ದೊರಕಿಸಿಕೊಳ್ಳಬೇಕಾದ ಅನುಕೂಲತೆಗಳು ಹಲವು. ಇವುಗಳಿಗೆಲ್ಲಾ ನಮ್ಮಲ್ಲಿ ಸುಸಂಘಟಿತವಾದ ಪ್ರಯತ್ನ ಬೇಕು. ನಾವೆಲ್ಲರೂ ಒಂದೇ, ನಮ್ಮ ಸಮಸ್ಯೆಗಳೂ ಒಂದೇ ಎಂಬ ಭಾವವು ನಮ್ಮಲ್ಲಿ ಬೇರೂರಿ ಬೆಳೆಯುವುದು ತೀರ ಅಗತ್ಯವಾಗಿದೆ. ಈ ಸತ್ಯವನ್ನು ಹೆಚ್ಚುಹೆಚ್ಚಾಗಿ, ದಿನದಿನವೂ ಮನಗಾಣುತ್ತಿದ್ದೇವೆ. ನಮ್ಮ ಸ್ಥಳೀಯ ವಿದ್ಯಮಾನಗಳ ಅರಿವುಳ್ಳ ನಮ್ಮ ನಿಜವಾದ ಚಿತ್ರವನ್ನು ಬಿಂಬಿಸಬಲ್ಲ ಪತ್ರಿಕೆಯೊಂದರ ಅವಶ್ಯಕತೆ ಇದೆ. ಲಕ್ಷಾಂತರ ಹೃದಯಗಳ ವಾಣಿಯನ್ನು ಕೂಗಿಹೇಳುವ ಒಂದೇ ಒಂದು ಶಕ್ತಿಯುತ ಬಾಯಿಯೆಂದರೆ ಪತ್ರಿಕೆಯೇ. ಇದನ್ನು ಪ್ರಕಟಿಸುವ ಮೊದಲ ಪ್ರಯತ್ನವು ಈಗ ನಡೆಯಬೇಕಾದ ಕೆಲಸ. ಬಿದ್ದುಹೋಗಿರುವ ನಾವು ಎದ್ದೇಳಲು ಮಾಡಬೇಕಾದ ಈ ಪ್ರಯತ್ನದಿಂದ ಜನತೆಯ ಎಚ್ಚೆತ್ತ ಶಕ್ತಿಗಳಿಗೆ ಒಂದು ರೂಪು ಕೊಡುತ್ತೇವೆ. ಸಂಘಟನೆ ಇದರಿಂದ ಸಾಧ್ಯವಾಗುತ್ತದೆ.

ಹಳ್ಳಿಯಲ್ಲಿ ಬೀಳುತ್ತಿರುವ ಮನೆಗಳು ಏಳುತ್ತಬರಬೇಕು. ಮಕ್ಕಳು ಸ್ವಲ್ಪ ಹಾಲನ್ನಾದರೂ ಉಪಯೋಗಿಸಲು ಸಾಧ್ಯತೆ ಬೇಕು. ರೈತರೆಲ್ಲರೂ ವರ್ಷವೆಲ್ಲ ದುಡಿದು ಒಳ್ಳೆಯ ಆಹಾರ ಪಡೆಯುವಂತಾಗಬೇಕು. ಸಾಲದ ಕತ್ತಲೆಯಲ್ಲಿ ಬಿದ್ದು

ಒದ್ದಾಡುವ ನಮ್ಮಲ್ಲಿ ಸಂಪದ್ಶಕ್ತಿ ಬೆಳೆದು ಬೆಳಕಾಗಬೇಕು. ನಾವು ಗಳಿಸಿದ್ದು ಜರಡಿಯಲ್ಲಿಯ ನೀರಿನಂತೆ ನೂರಾರು ರಂಧ್ರಗಳಲ್ಲಿ ಸೋರಿಹೋಗುತ್ತಿರುವುದನ್ನು ನಾವು ತಡೆಯಬೇಕು. ನಮ್ಮ ಜಮೀನುಗಳಲ್ಲಿ ಹೆಚ್ಚು ಬೆಳೆ ತೆಗೆಯುವ ಪ್ರಯತ್ನ ಮಾಡುವುದರ ಜೊತೆಗೆ ಅದಕ್ಕೆ ಒಳ್ಳೆಯ ಬೆಲೆಯನ್ನು ಪಡೆಯುವುದು ಪಡೆದ ಹಣವನ್ನು ಸರಿಯಾಗಿ ವಿನಿಯೋಗಿಸುವುದು ಈಗ ಆಗಬೇಕಾದ ಕಾರ್ಯ. ನಮ್ಮ ಪುರೋಭಿವೃದ್ಧಿಗೆ ಕಂಟಕವಾಗಿರುವ ಒಳಹೊರಗಿನ ವಿರೋಧಕ ಶಕ್ತಿಗಳನ್ನು ಧೈರ್ಯದಿಂದ, ತಾಳ್ಮೆಯಿಂದ, ಸತ್ಯ ಅಹಿಂಸೆಗಳಿಂದ ಎಲ್ಲರೂ ಒಟ್ಟಾಗಿ ಎದುರಿಸಬೇಕು. ಆಗಮಾತ್ರ ನಮ್ಮ ಇಷ್ಟಾರ್ಥ ನೆರವೇರುತ್ತದೆ. ನಮ್ಮ ಸಮಸ್ಯೆಗಳನ್ನು ಕ್ರಮೇಣ ಒಂದೊಂದಾಗಿ ಚರ್ಚಿಸಿ ಪರಿಹಾರದ ಮಾರ್ಗವನ್ನು ಹುಡುಕಿತೆಗೆದು ಕಾರ್ಯಗತ ಮಾಡೋಣ.

ಜೈ ಹಿಂದ್ !

ಮೈಸೂರು ಸಂಸ್ಥಾನದಲ್ಲಿರುವ ಮಲೆನಾಡಿನಲ್ಲಿ ವ್ಯವಸಾಯಗಾರನೂ, ವ್ಯವಸಾಯವೂ ಕ್ಷೀಣಿಸುತ್ತಿರಲು ಕಾರಣವೇನು?

ಲೇಖಕರು—ಶ್ರೀಮಾನ್ ಕೊತುಗೋಡು ನಾಗಭೂಷಣಭಟ್ಟರು,
(ಪ್ರಜಾಪ್ರತಿನಿಧಿಸಭೆಯ ಸದಸ್ಯರು.)

1. ಮಲೆನಾಡಿನ ವಸ್ತುಸ್ಥಿತಿ:

ಮೈಸೂರು ಸಂಸ್ಥಾನದ ಪಶ್ಚಿಮಭಾಗದಲ್ಲಿ ಸಹ್ಯಾದ್ರಿಪರ್ವತದ ತಪ್ಪಲಲ್ಲಿ ವರ್ಷಕ್ಕೆ 35 ರಿಂದ 350 ಅಂಗುಲಗಳವರೆಗೆ ಮಳೆ ಬೀಳುವ ಪ್ರದೇಶವೆಲ್ಲಾ ಮಲೆನಾಡು. ಈ ಮಲೆನಾಡಿಗೂ, ಬೈಲುಸೀಮೆಗೂ ನಡುವೆ ಇರುವ ಪ್ರದೇಶವೆಲ್ಲಾ ಅರ್ಧ ಮಲೆನಾಡು. ಈ ಅರ್ಧ ಮಲೆನಾಡಿನಲ್ಲಿ 35" ರಿಂದ 65" ಅಂಗುಲಗಳವರೆಗೆ ಮಳೆಯಾಗುತ್ತೆ. ಗಿರಿನದಿಗಳಿಂದಲೂ, ಅರಣ್ಯವನಗಳಿಂದಲೂ ಅಡಿಕೆ, ಕಾಫಿ, ಟೀ ತೋಟಗಳಿಂದಲೂ, ಭತ್ತದಗದ್ದೆ ಬಯಲುಗಳಿಂದಲೂ ಶೋಭಿಸುವ ನಾಡೇ ಮಲೆನಾಡು. ಅತಿವೃಷ್ಟಿಯ ನಾಡು ಅಲ್ಲೊಂದು, ಇಲ್ಲೊಂದು ಮನೆಯಿರುವ ಜನಸಾಂದ್ರತೆ ತುಂಬಾ ವಿರಳವಾಗಿರುವ, ಮಾರ್ಗಾನುಕೂಲ ತೀರಾ ಕಷ್ಟಸಾಧ್ಯವಾಗಿರುವ, ಮಲೇರಿಯಾ ಮುಂತಾದ ರೋಗರುಜಿನಗಳಿಂದ ತುಂಬಿರುವ ನಾಡೇ

ಮಲೆನಾಡು. ಸಂಪೂರ್ಣ ಮಲೆನಾಡೆಂದರೆ ಮಂಜರಾಬಾದು, ನರಸಿಂಹರಾಜಪುರ, ಕೊಪ್ಪ, ಶೃಂಗೇರಿ, ಮೂಡಿಗೆರೆ, ನಗರ, ಸಾಗರ ಮತ್ತು ತೀರ್ಥಹಳ್ಳಿ ಇವು ಮಲೆನಾಡು ತಾಲ್ಲೂಕುಗಳು. ಈ ತಾಲ್ಲೂಕುಗಳಲ್ಲಿ 1881 ರಲ್ಲಿ 3·04 ಲಕ್ಷ ಇದ್ದ ಜನಸಂಖ್ಯೆ 1941 ರಲ್ಲಿ 4 ಕ್ಕೆ ಏರಿರುತ್ತೆ. ಈ 8 ತಾಲ್ಲೂಕುಗಳಲ್ಲಿ ಮಂಜರಾಬಾದು, ನರಸಿಂಹರಾಜಪುರ, ಮೂಡಿಗೆರೆ ಮತ್ತು ನಗರ ಈ ನಾಲ್ಕು ತಾಲ್ಲೂಕುಗಳಲ್ಲಿ ಇನ್ನೂ ಇಳಿಮುಖವಾಗಿಯೇ ನಡೆದಿದೆ. ಬೇಲೂರು, ಆಲೂರು, ಚಿಕ್ಕಮಗಳೂರು, ಸೊರಬ, ಷಿಕಾರಿಪುರ, ಶಿವಮೊಗ್ಗ ಮತ್ತು ಕುಂಸಿ ಇವು ಅರೆಮಲೆನಾಡು ತಾಲ್ಲೂಕುಗಳು. ಇವುಗಳ ಜನಸಂಖ್ಯೆಯು ಮಾತ್ರ ಒಂದೇ ಸ್ಥಿತಿಯಲ್ಲಿದೆಯೆಂದೇ ಹೇಳಬಹುದು. 60 ವರ್ಷಗಳ ಹಿಂದೆ ಇವುಗಳ ಜನಸಂಖ್ಯೆ 3·94 ಲಕ್ಷ ಇದ್ದದ್ದು ಈಗ 4·02 ಲಕ್ಷ ಏರಿರುತ್ತೆ. ಅಂದರೆ ಶೇಕಡಾ 2 ರಷ್ಟು ಮಾತ್ರ ಜಾಸ್ತಿಯಾಗಿರುತ್ತೆ. ಆದರೆ ಮೈಸೂರು ಸಂಸ್ಥಾನದ ಒಟ್ಟು ಜನಸಂಖ್ಯೆ ಅದೇ ಕಾಲದಲ್ಲಿ ಶೇಕಡಾ 75% ರಷ್ಟು ಹೆಚ್ಚಿರುತ್ತೆ. ಅರ್ಧ ಮಲೆನಾಡಿನಲ್ಲೂ, ಮಲೆನಾಡಿನಲ್ಲೂ ಹಳ್ಳಿಗಳಲ್ಲಿ ಜನಸಂಖ್ಯೆ ಬಹಳ ಇಳಿಮುಖವಾಗಿಯೇ ಹೋಗುತ್ತಿದೆ. ಅತಿವೃಷ್ಟಿ, ಅನಾರೋಗ್ಯಕರವಾದ ವಾತಾವರಣ, ಮಲೇರಿಯಾ ಮುಂತಾದ ರೋಗಗಳ ಹಾವಳಿ, ಹೊಳೆ-ಹಳ್ಳಗಳಿಗೆ ಸಾರ, ಸೇತುವೆಗಳು ಇಲ್ಲದಿರುವುದರಿಂದ ಮಾರ್ಗಾನುಕೂಲಗಳ ಸೌಕರ್ಯಗಳ ಕೊರತೆ, ಸುತ್ತಲೂ ಬಳಸಿ ಬರುತ್ತಿರುವ ಕಾಡು, ಕೆಲಸಗಾರರು ಇಲ್ಲದಿರುವುದು, ಇದ್ದವರೂ ಕ್ಷೀಣಿಸುತ್ತಿರುವುದು, ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದೆ ದಿನೇ ದಿನೇ ಅಧಿಕವಾಗುತ್ತಿರುವ ಸಾಲದ ಹೊರೆಯಿಂದಲೂ, ರೈತರು ಕೊಳ್ಳುವ ಎಲ್ಲಾ ಪದಾರ್ಥದ ಬೆಲೆಯು 5-6 ರಷ್ಟು ಜಾಸ್ತಿಯಾಗಿರುವುದರಿಂದಲೂ ಭತ್ತ-ಅಡಿಕೆ ಮಾತ್ರ ಬೆಳೆಯುವ ಮಲೆನಾಡಿನ ರೈತರು ಕ್ಷೀಣಿಸಲು ಮುಖ್ಯ ಕಾರಣವಾಗಿರುತ್ತೆ. ಹೊರಲಾರದ್ದ ಕಂದಾಯವೂ, ತೆರಲಾರದ ತೆರಿಗೆಯೂ ಮಲೆನಾಡಿನ ರೈತರ ಆರ್ಥಿಕ ಹ್ರಾಸಕ್ಕೆ ಮುಖ್ಯ ಕಾರಣವಾಗಿರುತ್ತೆ.

ಮಲೆನಾಡಿನ ಯಾವ ತಾಲ್ಲೂಕಿನಲ್ಲೂ, ಯಾವ ಕೈಗಾರಿಕೆಯೂ ಇರುವುದಿಲ್ಲ. ಚಿಕ್ಕಮಗಳೂರು, ತೀರ್ಥಹಳ್ಳಿ, ಸಾಗರ, ಶಿರಾಳಕೊಪ್ಪ, ತರೀಕೆರೆ, ಶಿವಮೊಗ್ಗ ಇವೆಲ್ಲ ಮಲೆನಾಡಿನ ಮುಖ್ಯ ವ್ಯಾಪಾರ ಕ್ಷೇತ್ರಗಳು.

(ಮುಂದುವರಿಯುವುದು)

ಪಾಶ್ಚಾತ್ಯ ವೈದ್ಯವನ್ನು ಹೆಚ್ಚಾಗಿ ಪ್ರೋತ್ಸಾಹಿಸುವ ಅಗತ್ಯವೇನಿದೆ ?

ಲೇಖಕಿಯರು—ಡಾ॥ ಶ್ರೀ॥ ಆರ್. ವಿಶಾಲಾಕ್ಷಮ್ಮ, L.A.M. & S.,
ಲೇಡಿ ಮೆಡಿಕಲ್ ಆಫೀಸರ್, ಗೌರ್ನಮೆಂಟ್ ಆಯುರ್ವೇದ ಆಸ್ಪತ್ರೆ, ಮೈಸೂರು.

ಹಿಂದೂಸ್ಥಾನಕ್ಕೆ ಆಂಗ್ಲೇಯರು ಕಾಲಿಟ್ಟು ಆಳ್ವಿಕೆಗೆ ಪ್ರಾರಂಭಿಸುವ ಮೊದಲು ನಮ್ಮ ದೇಶೀಯ ವೈದ್ಯವೇ ಪ್ರಾಮುಖ್ಯತೆ ಹೊಂದಿತ್ತೆಂದು ನಿರ್ವಿವಾದವಾಗಿ ಎಲ್ಲರೂ ಗ್ರಹಿಸಿಕೊಳ್ಳಬಹುದಾಗಿದೆ. ಆಂಗ್ಲೇಯರ ಆಡಳಿತ ಕಾಲದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ತಯಾರಾದ ವಿಧವಿಧವಾದ ಔಷಧಗಳು ಇಲ್ಲಿಗೆ ಆಮದು ಆಗಲು ಪ್ರಾರಂಭವಾಯಿತು. ಇದರ ಜೊತೆಗೆ ನಾವು ಮತ್ತು ಎಲ್ಲಾ ರೋಗಗಳ ಪರಿಜ್ಞಾನವನ್ನು ಪಡೆದ ನಮ್ಮ ಹಿಂದೀ ವೈದ್ಯ ಕರ್ತೃಗಳಾದ ಮಹಾ ಪಂಡಿತರುಗಳಿಗೂ ಊಹಿಸಲವಕಾಶವಿರದ ಹಲವಾರು ಸಾಂಕ್ರಾಮಿಕ ರೋಗಗಳೂ ಆಮದಾಗಿ ಬಂದವು. ಪಾಶ್ಚಾತ್ಯ ದೇಶದ ನಡೆನುಡಿ, ಉಡಿಗೆತೊಡಿಗೆ, ಆಹಾರ ಮತ್ತು ಶಿಷ್ಟಾಚಾರಗಳನ್ನು ನಮ್ಮವರು ತಿಳಿದೂ ತಿಳಿಯದೆಯೂ ಅನುಕರಿಸುತ್ತಾ ಬಂದಿರುವಂತೆ ಅವರ ವೈದ್ಯ ವಿಧಾನಗಳನ್ನು ಆದರದಿಂದ ಸ್ವಾಗತಿಸುತ್ತಾ ಬಂದಾಯಿತು. ನಮ್ಮ ದೇಶದ ಹವಾಮಾನಗಳಿಗೆ ಪಾಶ್ಚಾತ್ಯರ ಆಚಾರ-ವ್ಯವಹಾರಗಳು ಹೊಂದಿಕೆಯಾಗುವುದಿಲ್ಲೆಂಬ ಅರಿವು ನಮಗಿದ್ದಾಗ್ಯೂ, ಅವರು ದೇಶವಾಣಿಜ್ಯಗಳಲ್ಲಿ ಅಭಿಮಾನ ಇಟ್ಟುಕೊಂಡು ಈ ದೇಶದಲ್ಲಿ ಆಡಳಿತ ನಡೆಸುತ್ತಾ ಬಂದಂತೆಲ್ಲಾ ತಮ್ಮ ವೈದ್ಯಕ್ಕ್ಯೆ ಬೇಕಾದ ಪ್ರೋತ್ಸಾಹಗಳನ್ನೆಲ್ಲಾ ಕೊಡುತ್ತಾ ಬಂದರು. ಇದರಿಂದಾಗಿ ಆಸ್ಪತ್ರೆಗಳ ಸಂಖ್ಯೆಯೂ, ಪಾಶ್ಚಾತ್ಯ ವೈದ್ಯ ಕಲಿಯುವ ಜನರೂ ಹೆಚ್ಚುತ್ತಾ ಬರುವುದು ಅನಿವಾರ್ಯವಾಯಿತಲ್ಲದೆ, ಪರದೇಶದಿಂದ ಆಮದಾಗುವ ಮತ್ತು ನೋಡಲು ಆಕರ್ಷಣೀಯವಾದ ಔಷಧಗಳ ಆಮದು ಕೋಟಿಗಟ್ಟಲೆ ರೂಪಾಯಿಗಳಷ್ಟು ಹೆಚ್ಚಾಯಿತು. ಇದೂ ಸಾಲದೆ ವಿದೇಶಿ ಬಂಡವಾಳದಿಂದ ನಮ್ಮ ದೇಶದಲ್ಲಿಯೂ ಪಾಶ್ಚಾತ್ಯ ಔಷಧಗಳ ತಯಾರಿಕೆ ಹೆಚ್ಚುತ್ತಾ ಬಂದಿದೆ. ಮತ್ತು ವಿದೇಶಿ ರೀತಿಯ ಔಷಧಗಳನ್ನೇ ನಮ್ಮವರು ತಯಾರಿಸಲು ಪ್ರಾರಂಭಿಸಿರುವರೆಂಬುದನ್ನು ಇಲ್ಲಿ ಅಲ್ಲಗಳೆಯುವಂತಿಲ್ಲ.

ಇವೆಲ್ಲವನ್ನೂ ಪಾಶ್ಚಾತ್ಯರನ್ನೇ ನಾವು ಅನುಕರಣೆಮಾಡುತ್ತಾ ಬಂದರೂ ಅವರ ದೇಶಾಭಿಮಾನದ ಜೊತೆಗಿರುವ ಅವರ ವಾಣಿಜ್ಯನೀತಿಯನ್ನು ಮಾತ್ರ ನಾವು ಅನುಸರಿಸುವ ಯೋಚನೆಯನ್ನೇ ಬಿಟ್ಟು ಪಾಶ್ಚಾತ್ಯ ವೈದ್ಯಕ್ಕೆ ಪ್ರತ್ಯಕ್ಷ ಪರೋಕ್ಷ ಪ್ರೋತ್ಸಾಹಗಳನ್ನೆಲ್ಲಾ ಕೊಡುತ್ತಾ ಅದನ್ನು ಪ್ರಚಾರಕ್ಕೆ ತಂದು ನಮ್ಮ ಶಾಸ್ತ್ರೀಯವಾದ ಆಯುರ್ವೇದ ವೈದ್ಯವು ಮೂಲೆಪಾಲಾಯಿತು. ನಮ್ಮ ದೇಶಿ ಔಷಧ ಮತ್ತು ಗಿಡಮೂಲಿಕೆಗಳ ಅದ್ಭುತ ಗುಣಗಳು ಕೇವಲ ಕಟ್ಟುಕಥೆಗಳೆಂದು ಭಾವಿಸುವವರೇ

ಹೆಚ್ಚಾಗಿದ್ದಾರೆಂದಲ್ಲಿ ಎಷ್ಟುಮಾತ್ರಕ್ಕೂ ಅತ್ಯುಕ್ತಿಯಾಗದು. ಪರದೇಶದ ಔಷಧಗಳಲ್ಲಿ ನಂಬಿಕೆ ಎಷ್ಟರಮಟ್ಟಿಗೆ ಮಿತಿಮೀರಿದೆಯೆಂದರೆ, ಪಾಶ್ಚಾತ್ಯ ಔಷಧಗಳ ಪ್ರಸಿದ್ಧ ಪಂಡಿತರುಗಳೇ ನಮ್ಮ ಆಯುರ್ವೇದ ಔಷಧಗಳು ರೋಗಗಳನ್ನು ಶಾಶ್ವತವಾಗಿ ನಿರ್ಮೂಲಗೊಳಿಸುವ ಗುಣವನ್ನೇ ಹೊಂದಿರುವವೆಂದು ಒಪ್ಪಿಕೊಂಡಾಗ್ಯೂ ನಮ್ಮವರೇ ಅದನ್ನು ಒಪ್ಪಿಕೊಳ್ಳಲು ಮನಸ್ಸಿಲ್ಲವಾಗಿದೆ. ಉದಾಹರಣೆಗಾಗಿ ಇಂಗ್ಲೀಷ್ ಔಷಧಗಳ ಆಸ್ಪತ್ರೆ ಮತ್ತು ಸ್ಥಳೀಯ ವೈದ್ಯಗಳಿಗೂ ಹೋಲಿಸಿ The British Medical Journal ನಲ್ಲಿ ಆಂಗ್ಲೇಯ ವೈದ್ಯರೊಬ್ಬರು ಹೀಗೆ ಬರೆದಿದ್ದಾರೆ: "The native practitioners perform a useful service in the villages more especially in the medical side of practice." "ಮುಖ್ಯವಾಗಿ ಸ್ಥಳೀಯ ವೈದ್ಯರೇ ಔಷಧ ಪ್ರಯೋಗಗಳಲ್ಲಿ ಹಳ್ಳಿಯೊಳಗೆ (ಇಂಗ್ಲೀಷ್ ವೈದ್ಯಗಳಿಗಿಂತ) ಪ್ರಯೋಜನಕಾರಿಯಾಗಿ ಚಿಕಿತ್ಸೆ ನಡೆಸುತ್ತಾರೆ." ಇನ್ನೊಬ್ಬ ಪ್ರಸಿದ್ಧ ಡಾಕ್ಟರ್ George Eclarke, M. A., M. D., Philadelphia, America, ಇವರು ಹೇಳುವುದು ಇನ್ನೂ ಗಮನಾರ್ಹವಾಗಿದೆ: "I would rather trust ancient Hindu practic than the Allopathic practice of what we are want to learn in this enlightened age. If the physicians of the present day would drop from the pharmacopoeia all the modern drugs and chemicals and treat their patients according to Charaka, there would be less work for the undertakers and few invalids in the world." "ತಿಳುವಳಿಕೆಯುಳ್ಳ ಈ ಕಾಲದಲ್ಲಿ ನಾವು ಕಲಿಯಲಪೇಕ್ಷೆಪಡುವ ಅಲೋಪಥಿಕ್ ರೀತಿಯ (ಅಲೋಪಥಿ ಅಂದರೆ ಈಗಿನ ಆಸ್ಪತ್ರೆಗಳಲ್ಲಿನ ಇಂಗ್ಲೀಷ್ ವೈದ್ಯ. ಅರ್ಥಾತ್ ರೋಗದ ಕಾರಣಕ್ಕೆ ವಿರೋಧಸಂಸ್ಥಿತಿಯನ್ನುಂಟುಮಾಡುವ ಚಿಕಿತ್ಸಾಕ್ರಮ) ವೈದ್ಯಕ್ಕಿಂತ ಪುರಾತನವಾದ ಹಿಂದೀಯರ ವೈದ್ಯವನ್ನೇ ಹೆಚ್ಚಾಗಿ ನಂಬುತ್ತೇನೆ. ಈಗಿನಕಾಲದ ವೈದ್ಯರು ಇಂಗ್ಲೀಷ್ ವೈದ್ಯಗ್ರಂಥದ ಎಲ್ಲಾ ನವೀನ ರೀತಿಯ ಔಷಧ ಮತ್ತು ರಸಾಯನಿಕ ವಸ್ತುಗಳನ್ನು ತ್ಯಜಿಸಿ, ರೋಗಿಗಳನ್ನು 'ಚರಕ' ಗ್ರಂಥದಲ್ಲಿ ಹೇಳಿದ ರೀತಿಯಲ್ಲಿ ಚಿಕಿತ್ಸೆ ನಡೆಸಿದ್ದೇ ಆದರೆ ಚಿಕಿತ್ಸಾಕಾರರಿಗೆ ಸುಲಭವಾಗುವುದಲ್ಲದೆ ಪ್ರಪಂಚದಲ್ಲಿ ರೋಗಿಗಳ ಸಂಖ್ಯೆಯೇ ಕಡಿಮೆಯಾಗುವುದು" ಎಂದಿರುವರು.

ವೈದ್ಯಶಾಸ್ತ್ರದಲ್ಲಿ ಜಗತ್ತಿನಲ್ಲಿಯೇ ಮೊಟ್ಟಮೊದಲನೆಯ ಪ್ರಮಾಣಭೂತ ಗ್ರಂಥವೆಂದರೆ "ಚರಕ" ವಾಗಿದೆ.

ಚಿಕಿತ್ಸಿತಂ ವಹ್ನಿವೇಶ । ಸ್ವಸ್ಥಾತು ರಹಿತಂಪ್ರತಿ ॥
ಯದಿಹಾಸ್ತಿ ತದನ್ಯತ್ರ । ಯನ್ನೇಹಾಸ್ತಿ ನ ತತ್ಕ್ವಚಿತ್ ॥

"ಅಗ್ನಿವೇಶನೆ ! ಇಲ್ಲಿ ತಿಳಿಸಿರುವ ಆರೋಗ್ಯ ಹಾಗೂ ರೋಗ ನಿರ್ಮೂಲನ ವಿಧಾನಗಳೇ ಇತರ ಕಡೆಯಲ್ಲಿಯೂ ಹೇಳಲ್ಪಟ್ಟಿವೆಯಲ್ಲದೆ ಇಲ್ಲಿ ತಿಳಿಸದಿರುವ ವಿಧಾನಗಳ್ಯಾವುವೂ ಇತರ ಯಾವ ಕಡೆಯಲ್ಲಿಯೂ ದೊರೆಯುವುದಿಲ್ಲ" ಎಂದು ಆತ್ರೇಯ ಋಷಿಗಳೇ ಹೇಳಿದ್ದಾರೆ. ಆಯುರ್ವೇದವು ವಿಜ್ಞಾನದ ತಳಹದಿಯ ಮೇಲೆ ಮಾತ್ರವೇ ನಿಂತಿಲ್ಲ. ಋಷಿಗಳ ಈಶ್ವರೀ ಜ್ಞಾನಕ್ಕೆ ಗೋಚರವಾದ ಪರಮ ಸತ್ಯದ ಮೇಲೆಯೂ ನಿಂತಿದೆ. ನಮಗೆ ಗೋಚರಿಸುವಷ್ಟು ಮಾತ್ರವೇ ಜಗತ್ತು ಅಲ್ಲ. ನಮಗೆ ಅಗೋಚರವಾದ ಜಗತ್ತೂ, ಜ್ಞಾನವೂ ಅಪರಿಮಿತವಾಗಿದೆ. ಈ ಜ್ಞಾನವನ್ನು ನಮ್ಮ ಋಷಿಮುನಿಗಳು ಯೋಗದ ಸಹಾಯದಿಂದ, ತಪಸ್ಸಿನ ಶಕ್ತಿಯಿಂದ ಕಂಡುಹಿಡಿದು ಮಾನವರ ಹಿತಕ್ಕಾಗಿ ಧಾರೆಯೆರೆದಿದ್ದಾರೆ.

ಆಯುರ್ವೇದ ಔಷಧ ವಿಧಾನವು ಪ್ರತಿ ವ್ಯಕ್ತಿಗೂ ಅವನವನ ತ್ರಿದೋಷ ವ್ಯತ್ಯಾಸಗಳಿಗನುಗುಣವಾಗಿ ಚಿಕಿತ್ಸೆಯನ್ನು ನಡೆಸುವುದು. ಪಾಶ್ಚಾತ್ಯ ವೈದ್ಯ ವಿಧಾನಗಳಲ್ಲಿ ರೋಗದ ಹೆಸರು ತಿಳಿವವರೆಗೂ ಚಿಕಿತ್ಸೆ ನಡೆಸುವಂತಿಲ್ಲ. ನಡೆಸುವ ಚಿಕಿತ್ಸೆಯೆಲ್ಲ ಕಣ್ಣುಮುಚ್ಚಿಕೊಂಡು ಕಲ್ಲು ಬೀರಿದಂತೆ. ರೋಗದ ಹೆಸರು ತಿಳಿದರೆ ಪ್ರತಿ ವ್ಯಕ್ತಿಯ ಪ್ರಕೃತಿಗೆ ಹೊಂದಿಕೊಳ್ಳುವ ಬೇರೆಬೇರೆ ಔಷಧಗಳನ್ನು ಕೊಡುವಂತಿಲ್ಲ. ಈ ವಿಚಾರವನ್ನು ಯೋಚಿಸುತ್ತಾ ಹೋದರೆ ಬುದ್ಧಿಯಿರುವವರಿಗೆಲ್ಲಾ ಈಗಿನ ಪಾಶ್ಚಾತ್ಯ ವೈದ್ಯ ವಿಧಾನದಿಂದಾಗುವ ಕೆಡಕು ತಿಳಿಯದೇ ಇರದು. ಆದರೆ ಗುಲಾಮಗಿರಿಯಲ್ಲಿ ಬೆಳೆಸಿದ ನಮ್ಮ ಬುದ್ಧಿಗೆ ಥಳುಕಿನ ಔಷಧಗಳೂ, ವೈದ್ಯರೂ ಬೇಕಾಗುವುದೇ ವಿನಹ ವಾಸಿಯಾಗುವ ಔಷಧಗಳಾಗಲೀ, ವೈದ್ಯಶಾಸ್ತ್ರದ ಮಹತ್ವವನ್ನರಿತು ವೈದ್ಯವೃತ್ತಿಗಿಳಿದು ರೋಗನಿವಾರಿಸಲು ಸಿದ್ಧರಾದ ವೈದ್ಯರ ಸಹಾಯವಾಗಲೀ ಬೇಕೆನಿಸುವುದಿಲ್ಲ. ಪ್ರತಿಯೊಂದು ಹಳ್ಳಿಯ ಮೂಲೆಮೂಲೆಗೂ ವಿದೇಶಿ ಔಷಧಗಳನ್ನು ತುಂಬಿಸಿದ ಆಸ್ಪತ್ರೆಗಳಿಲ್ಲದಿದ್ದರೆ ಜೀವನವೇ ಕಷ್ಟವಾಗುವುದೆಂಬ ಭಾವನೆ ಜನರಲ್ಲಿ ಹೆಚ್ಚುತ್ತಿದೆ. ಇದಕ್ಕೆಲ್ಲಾ ಮುಖ್ಯ ಕಾರಣ ಒಂದೇ ಒಂದು ಎಂದರೆ- ನಾವು ವಾಸಮಾಡುವ ಕಡೆಗಳಲ್ಲಿಯೇ ಪ್ರಕೃತಿದೇವಿಯು ಯಥೇಚ್ಛವಾಗಿ ಬೆಳೆಸಿರುವ ಅಮೋಘ ಗುಣಗಳುಳ್ಳ ಗಿಡಮೂಲಿಕೆಗಳನ್ನು ತಿಳಿದುಕೊಳ್ಳಲು ನಮಗಿರುವ ಉದಾಸೀನಭಾವ, ಅದರ ಬಗ್ಗೆ ಇರುವ ಅಜ್ಞಾನ ಮತ್ತು ವಿದೇಶೀ ಔಷಧಗಳಿಗೆ ನಾವು ಕೊಡುತ್ತಿರುವ ಪ್ರೋತ್ಸಾಹವಲ್ಲದೆ ಇನ್ನೇನಿದೆ ?

ನಮ್ಮ ದೇಶದ ನಗರಗಳಲ್ಲಿ ಹೆಚ್ಚುತ್ತಿರುವ ಕ್ಷಯರೋಗ, ಮಕ್ಕಳ ಬುದ್ಧಿ ವಿಕಾರಗಳೂ, ನಮ್ಮ ಜನರು ಅನುಸರಿಸುತ್ತಿರುವ ಪರಕೀಯ ಚಿಕಿತ್ಸಾಕ್ರಮದಿಂದ ಹೆಚ್ಚುತ್ತಿರುವುವು. ಇಂಜಕ್ಷನ್ ಚುಚ್ಚುವುದರಿಂದ ಮಕ್ಕಳ ಮನಸ್ಸಿನ ಮೇಲಾಗುವ ಪರಿಣಾಮವು ಬಹಳ ಕೆಡಕಾದುದು. ಅನೇಕ ಮಕ್ಕಳು ವೈದ್ಯರ ದರ್ಶನದಿಂದಲೇ ಹೃದಯಸ್ತಂಭನೆಯಾಗಿ ಮೃತರಾದ ಸಂಭವಗಳಿವೆ. ಜಗತ್ತಿನ ಆದಿಯಿಂದ

ಪಾಶ್ಚಾತ್ಯರು ಈ ದೇಶಕ್ಕೆ ಬರುವವರೆಗೂ ನಮ್ಮ ಜನಾಂಗವು ಇಂಜಕ್ಷನ್ ಇಲ್ಲದೆ ಬದುಕಿಬಾಳಲಿಲ್ಲವೇ? ಇಂದು ನಮ್ಮ ಜನರ ಆಯುಃಪ್ರಮಾಣವು ಕಡಿಮೆಯಾಗುತ್ತಿರುವುದಕ್ಕೆ ಕಾರಣವೇನು? ಬರಿಯ ಹಳ್ಳಿಯ ವೈದ್ಯರ ಚಿಕಿತ್ಸೆಯಿಂದಲೇ ಬದುಕುತ್ತಿರುವ ಹಳ್ಳಿಗಾಡಿನ ಜನರ ಆರೋಗ್ಯವು ನಗರವಾಸಿಗಳ ಆರೋಗ್ಯಕ್ಕಿಂತ ಉತ್ತಮವಾಗಿರುವುದು. ಹೃದಯರೋಗದಿಂದ ಸಾಯುವವರ ಸಂಖ್ಯೆ ಹಳ್ಳಿಗಾಡಿನಲ್ಲಿ ಎಷ್ಟು ಕಡಿಮೆ? ಅಲ್ಪಸ್ವಲ್ಪ ಕಾಹಿಲೆಗಳಿಗೂ ರಕ್ತನಾಳಗಳಲ್ಲಿ ಇಂಜಕ್ಷನ್ನಿಂದ ಔಷಧಗಳನ್ನು ಸೇರಿಸುವುದರಿಂದ ಹೃದಯ ಶಕ್ತಿಯು ಕುಂದದೆ ಇರುವುದೇ? ಪಾಶ್ಚಾತ್ಯ ವೈದ್ಯವನ್ನು ಅಭ್ಯಸಿಸುತ್ತಿರುವ ನಮ್ಮ ದೇಶಬಾಂಧವರಲ್ಲಿ ಎಷ್ಟು ಜನರು ನಮ್ಮ ದೇಶದ ಗಿಡಮೂಲಿಕೆಗಳನ್ನು ಪರಿಶೀಲಿಸಿದ್ದಾರೆ? ದೇಶದ ಕಂದಮೂಲಗಳ ಗುಣಗಳನ್ನು ಅರಿಯಲು ಪ್ರಯತ್ನಿಸುತ್ತಿದ್ದಾರೆಯೇ? ಹೊರದೇಶದಿಂದ ಬಂದ ಔಷಧಗಳನ್ನು ಮಾರುವ ಕೆಲಸಕ್ಕಿಂತಲೂ ಇವರು ದೇಶಕ್ಕೆ ಸಲ್ಲಿಸುತ್ತಿರುವ ಸೇವೆಯೇನು? ಬರಿಯ ವೇಷಭೂಷಣಗಳಿಂದ ಜನರ ಮೇಲೆ ಪರಿಣಾಮ ಮಾಡುವ ಕಾಲವು ಹಿಂದೆ ಬೀಳುತ್ತಿದೆ. ಇದನ್ನೆಲ್ಲಾ ನಮ್ಮವರು ಎಷ್ಟು ಬೇಗ ಅರಿಯುವರೋ ಅಷ್ಟು ಕ್ಷೇಮ ಮತ್ತು ಲಾಭವು ದೇಶಕ್ಕಿದೆ. ಪ್ರತಿಹಳ್ಳಿಗೂ ವೈದ್ಯಸಹಾಯ ದೊರಕಿಸಲು ಸಾಧ್ಯ. ಮುಖ್ಯವಾಗಿ ಪ್ರತಿ ಮನೆಯಲ್ಲೂ ನಮ್ಮ ಅಕ್ಕತಂಗಿಯರು ಸುತ್ತುಮುತ್ತಲೂ ಧಾರಾಳವಾಗಿ ದೊರೆಯುವ ನಾರು-ಬೇರು ಗಿಡಮೂಲಿಕೆಗಳಿಂದಲೇ ಎಷ್ಟೋ ಕಾಹಿಲೆಗಳನ್ನು ವಾಸಿಮಾಡಲು ತಿಳಿದುಕೊಳ್ಳಬಹುದು. ಚಿಕ್ಕಪುಟ್ಟ ಕಾಹಿಲೆಗಳಿಗೆಲ್ಲಾ ಆಸ್ಪತ್ರೆಗಳನ್ನೇ ಆಶ್ರಯಿಸುವ ಹಂಬಲವನ್ನು ಬಿಡಬೇಕು. ತರಹೆವಾರಿ ಜಾಹಿರಾತಿನಿಂದ ಬರುವ ವಿದೇಶಿ ಔಷಧಗಳಿಗೆ ಮರುಳಾಗದೆ ನಮ್ಮ ಗಿಡಮೂಲಿಕೆಗಳ ಗುಣಗಳನ್ನರಿತು ಅವುಗಳನ್ನು ಉಪಯೋಗಿಸಲು ಶ್ರದ್ಧೆವಹಿಸಿದರೆ, ಪ್ರತಿಮನೆಯಲ್ಲೂ ಅನಾವಶ್ಯಯವಾಗುವ ಹಣವನ್ನು ಉಳಿಸಿದಂತಾಗುವುದಲ್ಲದೆ, ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಮಲೆನಾಡಿನಲ್ಲಿ.

ಲೇಖಕ—**ಶ್ರೀಮಾನ್ ಕೆ. ಆರ್. ಶಂಕರನಾರಾಯಣ.**

ಟಿಪ್ಪಣಿ :— ಉತ್ಸಾಹಿ ತರುಣ ಲೇಖಕರಾದ ಶ್ರೀಮಾನ್ ಶಂಕರನಾರಾಯಣರು ಅಚ್ಚ ಮಲೆನಾಡಿನ ಸ್ವಾಭಾವಿಕ ಜನಜೀವನದ ಪ್ರತಿಬಿಂಬದ ಒಂದು ಭಾಗವನ್ನು ಈ ಬರಹದ ಮೂಲಕ ಹೊರಗೆಡಹಿದ್ದಾರೆ. ಪುಟ್ಟಣ್ಣನಂಥ ಅಜ್ಞ ಮುಗ್ಧ ವ್ಯಕ್ತಿಗಳು ಮಲೆನಾಡಿನಲ್ಲಿ ಎಷ್ಟು ಜನರಿಲ್ಲ? **ಸಂ।**

(ಚಾವಡಿ ಹರಟೆ)—(ಸಂಭಾಷಣೆ)

ಸಾಯಂಕಾಲ ೪ ಘಂಟೆ ಸಮಯ. ಜಮೀನ್ದಾರ್ ಶ್ಯಾಮಯ್ಯನವರು, "ಜನವಾಣಿ" ವರ್ತಮಾನ ಪತ್ರಿಕೆಯನ್ನೋದುತ್ತ ಚಾಪೆಯ ಮೇಲೆ ಕುಳಿತಿರುವರು. ಅಷ್ಟುಹೊತ್ತಿಗೆ ಅವರ ಅಚ್ಚುಮೆಚ್ಚಿನ ಒಕ್ಕಲು ಪುಟ್ಟಣ್ಣನು ಕಂಬಳಿ ಹೆಗಲ ಮೇಲೆ ಹಾಕಿಕೊಂಡು ಬರುವನು. ಬಂದು ಶ್ಯಾಮಯ್ಯನವರಿಗೆದುರಾಗಿ ಕೆಳಭಾಗದಲ್ಲಿ ಕಂಬಳಿ ಹಾಸಿ ಕುಳಿತುಕೊಳ್ಳುವನು.

ಶ್ಯಾಮಯ್ಯ—ಏನು ಪುಟ್ಟಣ್ಣಾ ಅಪರೂಪ? ಗದ್ದೆ ಸಾಗುವಳಿ ಎಷ್ಟಾಯಿತು?

ಪು—ಹೂ! ಎಂತಾತದೆ. ಹೀಂಗೆ ಆದ್ರೆ ನಮ್ಮ ಗಡಿ ಕೊಟ್ಟಾಂಗೆ. ಮನೇಲಿ ಎಲ್ಲಾ ಜಡ. ನಮ್ಮನಿ ಪುಟ್ಟು ಹುಡುಗ್ಯ ಮೊನ್ನೆ ಜಡ ಜೋರಾಗಿ ಉಳಿದೇ ಕಷ್ಟಾಗಿತ್ತು. ಕಡಿಗೆ ಎಂತೊಟೆಸ್ತಿ ಮಾಡಿ ಬಂದಿಟ್ ಈಗ ಹುಶಾರಾಗ್ಯಾದೆ. ಆದರೂ ಒಂದರ್ಧ ಗದ್ದಿ ಸಾಗೊಳಿ ಮಾಡೀನಿ. ಇನ್ನಿದ್ ಎಂತಾತದೆ ನೋಡಬೇಕು. ಈಗ ಎಲೆ ತಿನ್ನು ಕಿಟ್ಟು ಕೂಡ ಇಲ್ಲ. ಬಂದಿಟ್ ತಕುಂಡು ಹೋಗಾಣೂಂತ ಬಂದೀನಿ.

ಶ್ಯಾ—ಕಿಟ್ಟೂ, ಆ ಪುಟ್ಟನಿಗಷ್ಟು ಎಲೆ ತಿನ್ನಲಿಕ್ಕೆ ಕೊಡು.

ಪು—(ಎಲೆಯುಡಿಕೆ ಕತ್ತರಿಸುತ್ತ) ಅಯ್ಯಾ!

ಶ್ಯಾ—ಏನೋ ......

ಪು—ನೀವು ಕಾಂಗ್ರೆಸ್ ಅಂತೀರಲ್ಲ ಅವರೀಗೆ ರಾಜ್ಯ ಆದ ಮೇಲೆ ಬಂದಿಟ್ಟೂ ಸುಖ ಇಲ್ಲ ಕಣ್ರಿ, ನೋಡ್ರಿ. ಕಾಂಗ್ರೆಸ್ಸಿನವರಿಗೆ ರಾಜ್ಯ ಆದ ಮೇಲೆ ಎಲ್ಲಾ ಸುಖ ಆತದೆ, ಕಂಟ್ರೋಲ್ ಹೋತದೆ, ಬಡವರಿಗೆಲ್ಲಾ ಒಳ್ಳೇದಾತದೆ ಅಂತಿದ್ರಲ್ಲ ಈಗ ಎಲ್ಲಿ ಸುಖ ಆಗ್ಯಾದೆ ಹೇಳಿ. ದಿನಾಲೂ ಪೇಪರು ಓದ್ತೀರಲ್ಲ.

ಶ್ಯಾ—ಹೌದು ಪುಟ್ಟ, ನೀನು ಹೇಳಿದ್ದು ಸರಿ. ಆದರೆ ಎಲ್ಲಾ ಒಂದೇ ಸಾರಿಗೆ ಮಾಡುವುದಕ್ಕೆ ಆಗುತ್ತದೆಯೇ? ಒಂದು ಜಮೀನು ಹಾಳುಬಿದ್ದಿದ್ದರೆ ಅದನ್ನು ರೂಢಿಮಾಡಲು ಎಷ್ಟು ಕಷ್ಟಪಡಬೇಕಾಗುತ್ತೆ? ಹಾಗೆಯೇ ಈ ರಾಜ್ಯವೂ ಕೂಡ

ಇಷ್ಟು ದಿವಸ ಫರಂಗಿಯವರ ಕೈಯ್ಯಲ್ಲಿ ಸಿಕ್ಕಿತ್ತು. ಅವರು ನಮ್ಮ ದೇಶವನ್ನೆಲ ಸೂರೆಮಾಡಿ ಹಾಳುಮಾಡಿಬಿಟ್ಟಿದ್ದರು. ಆದರ ಫಲ ಇದು.

ಪು—ಅಯ್ಯಾ! ಫರಂಗ್ಯೋರು ಅಂದರೆ ಯಾರ್ರ. ಅವರೂ ನಮ್ಮ ಹಾಂ ಇರತಾರೇನು?

ಶ್ಯಾ—ಹೌದು, ಅವರೂ ಕೂಡ ನಮ್ಮ ಹಾಗೆಯೇ ಮನುಷ್ಯರು. ಅವರ ಮಾತ್ರ ಬಣ್ಣದಲ್ಲಿ ಕೆಂಪು, ಅಷ್ಟೇ ವ್ಯತ್ಯಾಸ.

ಪು—ಓಹೊ! ಕೆಂಪಿನೋರ? ಅವರನ್ನ ನೋಡೀನಿ.

ಶ್ಯಾ—ಎಲ್ಲಿ?

ಪು—ನಮ್ಮ ಮೇರ್ಶಿಕರ್ಾ, ಆಗ ಒಬ್ಬ ದೊರೆ ಇದ್ದನಲ್ಲ ಅವನಲ್ಲವೆ?

ಶ್ಯಾ—ಅವನನ್ನು ನೋಡಿದ್ದಿಯೊ?

ಪು—ನೋಡ್ಯೊ ನೋಡೀನಿ, ಒಂದೆರಡುಸಾರಿ ಶಿಕಾರಿಗೂ ಹೋಗೀನಿ ಅವ ಜೊತೀಲಿ.

ಶ್ಯಾ—ನೀನು ಬಹಳ ಗಟ್ಟಿಗ ಬಿಡು. ಫರಂಗಿಯವರ್ಯಾರೆಂದು ನಿನಗೀಗ ಗೊತ್ತಾಯಿತಲ್ಲ. ಅವರು ನಮ್ಮ ರಾಜ್ಯವನ್ನು ಹಾಳುಮಾಡಿದರು ಎಂದು ಹೇಳಿದೆ ನಲ್ಲ. ಅಂತೆಯೇ ಹೋದವರ್ಷದತನಕವೂ ನಮ್ಮ ರಾಜ್ಯವನ್ನಾಳುತ್ತಿದ್ದರು. ಹೋದ ವರ್ಷ ತಾನೇ ನಮಗೆ ಬಿಟ್ಟುಕೊಟ್ಟರು. ಈಗ ನಮ್ಮ ರಾಜ್ಯವನ್ನು ಕಾಂಗ್ರೆಸ್ ಸರ್ಕಾರವು ಆಳುತ್ತಿದೆ. ನಾವು ನಿಯಮಿಸಿದ ಮಂತ್ರಿಗಳೇ ರಾಜ್ಯವಾಳುತ್ತಿದ್ದಾರೆ. ಈಗ ನಾವೆಲ್ಲರೂ ಕಾಂಗ್ರೆಸ್ ಸರ್ಕಾರಕ್ಕೆ ಸೇರಿದ್ದೇವೆ. ನಾನೂ ಕಾಂಗ್ರೆಸ್ಸೆ ನೀನೂ ಕಾಂಗ್ರೆಸ್ಸೆ.

ಪು—ಹಾಗಾದರೆ ನಮ್ಮ ರಾಜ್ಯ ನಮಗೆ ಫರಂಗ್ಯೋರು ಸುಮ್ಮನೆ ಬಿಟ್ಟು ಕೊಟ್ರ?

ಶ್ಯಾ—ಇಲ್ಲ ನೀನು ಗಾಂಧೀಜಿಯವರನ್ನು ಬಲ್ಲೆಯಾ?

ಪು—ಹೂಂ, ನೋಡೀನಿ.

ಶ್ಯಾ—ಓಹೋ, ಇಲ್ಲಿಗೆ ಬಂದಿದ್ದರೊ? ಗಾಂಧೀಜಿಯವರು.

ಪು—ಇಲ್ಲ ಕಣ್ರಿ. ಮೊನ್ನೆ ನಿಮ್ಮನಿ ಸಣ್ಣಯ್ಯ ಬುಕ್ಕಿನಾಗಿದ್ದೊಂದು ಅಜ್ಜಯ್ಯನ ಚಿತ್ರ ತೋರಿಸಿ, ಇದೇ ಗಾಂಧಿಯವರದ್ದೆಂದು ಹೇಳಿದ್ದರು.

ಶ್ಯಾ—ಅದೇ ಗಾಂಧಿಯವರು ಈಗಿರುವ ಕಾಂಗ್ರೆಸ್ ಸಂಸ್ಥೆಯನ್ನು ಮುನ್ನಡೆಯಿಸಿ ಹಿಂದೂಸ್ಥಾನಕ್ಕೆ ಸ್ವರಾಜ್ಯಬರಲೆಂದು ಸತತವೂ ದುಡಿದು ಫರಂಗಿಯವರೊಡನೆ ಸತ್ಯಾಗ್ರಹ ಹೂಡಿ ಫರಂಗಿಯವರಿಂದ ರಾಜ್ಯವನ್ನು ಬಿಡಿಸಿ, ನಮಗೆ

ಕೊಟ್ಟರು. ಇದಕ್ಕಾಗಿ ಅವರು ಅನೇಕಬಾರಿ ಜೈಲನ್ನನುಭವಿಸಿದರು. ತಮ್ಮ ಸತ್ಯ, ಅಹಿಂಸೆ, ಪ್ರೇಮ ಈ ಮೂರು ಅಸ್ತ್ರಗಳೇ ಅವರಿಗೆ ಮುಖ್ಯಬೆಂಬಲ. ಈ ಮೂರು ಅಸ್ತ್ರಗಳ ಬಲದಿಂದಲೇ ಫರಂಗಿಯವರನ್ನು ಗೆಲಿದರು. ಕೊನೆಯವರೆಗೂ ಪ್ರತಿಫಲಾಪೇಕ್ಷೆಯಿಲ್ಲದೆ, ಬಡವಬಲ್ಲಿದರೆಂಬ ಭೇದವಿಲ್ಲದೆ ದುಡಿದು ಕಡೆಗೆ ಹಿಂದೂಸ್ಥಾನಕ್ಕಾಗಿಯೇ ಮಡಿದರು.

ಪ್ರ—ಅಯ್ಯೋ! ಈಗ ಇಲ್ಲವ ಗಾಂಧಿಯವರು?

ಶ್ಯಾ—ಇಲ್ಲ. ಅವರನ್ನು ಯಾರೋ ಒಬ್ಬ ಕೊಲೆಪಾತಕಿಯು ಗುಂಡಿಟ್ಟು ಕೊಂದನು. ಅವನು ಹಿಂದೂ ಅಂದರೆ ನಮ್ಮವನೆ!

ಪ್ರ—ಅಯ್ಯೋ! ಎಂತಹ ಕೆಟ್ಟ ಕೆಲಸ. ನಮಗೆ ಇಷ್ಟು ರಾಜ್ಯ ಬಿಡಿಸಿ ಕೊಟ್ರೂ ಗುಂಡ್ಹಾಕಿ ಕೊಂದ್ರಲ್ಲ. (ಕಣ್ಣೀರಿಡುವನು.)

ಶ್ಯಾ—ಏನು ಮಾಡುವುದು, ದೈವೇಚ್ಛೆ! ಭಾರತಾಂಬೆಯ ದುರ್ದೆಸೆ.

ಪ್ರ—ಏನೇ ಹೇಳಿ, ಗಾಂಧಿಯವರು ಭಾಳ ಒಳ್ಳೇರು. ನಮ್ಮೋರು ಕೆಟ್ಟ ಕೆಲಸ ಮಾಡಿಬಿಟ್ರೇಳಿ. ಮುಂದೆ ಅಮ್ಯಾಗೆ ಏನು ಮಾಡಿದ್ರು?

ಶ್ಯಾ—ಆಮೇಲೆ ಅವರಂತೆಯೇ ಗಟ್ಟಿಗರಾದ ಒಬ್ಬರಿದ್ದಾರೆ. ಅವರೇ ನೆಹರೂರವರು. ಅವರೀಗ ನಮ್ಮ ಮುಖ್ಯ ಮಂತ್ರಿಗಳಾಗಿದ್ದಾರೆ. ಅವರು ಪ್ರಜೆಗಳ ಕ್ಷೇಮಕ್ಕಾಗಿಯೇ ಅನುದಿನವೂ ದುಡಿಯುತ್ತಿದ್ದಾರೆ.

ಪ್ರ—ಅಷ್ಟಾಗ್ಯೂ ನಮಗಿಷ್ಟು ಸುಖ ಆಗಕಿಲ್ಲ.

ಶ್ಯಾ—ಹಾಗಾದರೆ ನಾನು ಹೇಳುತ್ತೇನೆ ಕೇಳು. ಕಾಯಿಲೆ ಔಷಧಿ ಕೊಟ್ಟ ಕೂಡಲೆ ಗುಣವಾಗುವುದಿಲ್ಲ. ಹಾಗೆಯೇ ನಮಗೆ ದೇಶ ಸಿಕ್ಕಿದ ಕೂಡಲೇ ಎಲ್ಲವೂ ಸರಿಹೋಗುವುದಿಲ್ಲ. ಇನ್ನೂ ನಾಲ್ಕಾರು ವರ್ಷಗಳು ಹೋಗಬೇಕು. ಆಮೇಲೆ ಎಲ್ಲಾ ಸರಿಹೋಗುತ್ತೆ.

ಪ್ರ—ಹಾಂಗಾರೆ ಇನ್ನೆಲ್ಲಾ ಸರಿ ಆತದೆ ಅಂತೀರಾ?

ಶ್ಯಾ—ಸರಿಯಾಗುತ್ತವೆ. ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಂತ ನಡತೆಗಳನ್ನು ಸರಿಪಡಿಸಿಕೊಳ್ಳಬೇಕು. ಇನ್ನೊಬ್ಬರನ್ನು ದೂರುವ ಮೊದಲು ತನ್ನ ಬುಡ ಗಟ್ಟಿಯಾಗಿದೆಯೇ? ಎಂಬುದನ್ನು ನೋಡಿಕೊಳ್ಳಬೇಕು. ಒಂದು ಒಳ್ಳೆಯ ಕೆಲಸವನ್ನು ತಾನು ಮೊದಲು ಕಾರ್ಯತಃ ಮಾಡಿತೋರಿಸಿ ಆಮೇಲೆ ಉಳಿದವರಿಗೆ ಹೇಳುವ ಜನರು ದೇಶವೆಲ್ಲಾ ತಯಾರಾಗಬೇಕು. ಅದೇ ಗಾಂಧೀಜಿಯವರಿಚ್ಛೆ. ಬಡವಬಲ್ಲಿದರು, ಮೇಲು-ಕೀಳೆಂಬ ಭಾವನೆಗಳು ಸರ್ವತ್ರ ತೊಲಗಬೇಕು. ಇನ್ನೊಬ್ಬರಿಂದ ನಮಗೆ ಅಪಕಾರವಾದ್ದನ್ನು ನಾವೂ ಇನ್ನೊಬ್ಬರಿಗೆ ಮಾಡಬಾರದು. ಇನ್ನೊಬ್ಬರಿಂದ ನಮಗೆ ಆಗಬೇಕಾದುದನ್ನು ನಾವು ಇನ್ನೊಬ್ಬರಿಗೆ ಮಾಡಲು ಸಿದ್ಧರಿರಬೇಕು.

ನಮ್ಮವರೆಲ್ಲರೂ ನುಡಿಯುವಂತೆ ನಡೆಯುವ ಜನರಾದರೆ ಸ್ವಲ್ಪಕಾಲದಲ್ಲೇ ನಮ್ಮ ಭೂಮಿ ಸ್ವರ್ಗವಾದೀತು. ಗಾಂಧೀಜಿಯವರ ಆತ್ಮಕ್ಕೂ ಶಾಂತಿಯಾದೀತು. ನಮಗೆಲ್ಲಾ ಶಾಶ್ವತ ಸುಖಶಾಂತಿಗಳೂ ಬಂದಾವು.

ಪು—ಹೀಂಗೆಲ್ಲಾ ಆದರೆ ಭಾಳಾ ಒಳ್ಳೇದಾತಡೆ ನೋಡಿ. ನಂಗೆ ಬೈಗಾತು. ನಿಮ್ಮ ಕಥಿ ಕೇಳ್ತಾ ಕುಂತ್ಗೊಂಡು ಬೈಗಾದ್ದೇ ಗೊತ್ತಾಗಲಿಲ್ಲ. ಹೋಗ್ತೀನಿ. ನಾಳೆ ಹಿಂಗೇ ಬರ್ತೀನಿ. ಈವೊತ್ತು ಏಟೋ ತಿಳ್ಕಂಡ್ಹಂಗಾತು.

ಶ್ಯಾ—ಆಯಿತು ಹೋಗು. ನಾಳೆ ಸಾಯಂಕಾಲದ ಹೊತ್ತಿಗೆ ಬಾ.

ಪು—ಆಯಿತು ಬುದ್ಧಿ, ಹೋಗಿಬರ್ತೀನಿ. ಕಾಲಿಗೆ ಬಿದ್ದೆ ಬುದ್ಧಿ. (ಹೋಗುವನು)

॥ ಜೈ ಹಿಂದ್ ॥

ಪ್ರಶ್ನೋತ್ತರ.

ಉತ್ತರ ಇದೆಯೇ ?

೧. ಚಂದ್ರಕಾಂತ ಯಾರ ಪತಿ ?

೨. ಕುಟಿಕುರ ಯಾರ ವೈದ್ಯಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ?

—By ವಿಶ್ವಾಮಿತ್ರ.

ಶಾಂತಿಗ್ರಾಮ.

ಮೈಸೂರುದೇಶದ ಪಶ್ಚಿಮದಿಕ್ಕಿಲಿ ಇರುವುದು ಹಳ್ಳಿಯ ಊರೊಂದು ।
ಮೆರೆವುದು ಶಾಂತಿಗ್ರಾಮದ ಹೆಸರಲಿ ಕರೆವರು ಅಲ್ಲಿಯ ಜನರಿಂದು ॥
ಹರಿವುದು ಅಲ್ಲಿಯೆ ಶಿಲೆಯೊಳು ತುಂಬಿದ ಭರದಲಿ ಓಡುವ ನದಿಯೊಂದು ।
ಕಣ್ಣಿಗೆ ತಂಪನು ಮನಸಿಗೆ ಕಂಪನು ಪೊಂದಲು ಇರುವುದು ಮರವೊಂದು ॥
ಕೊಳೆಯನು ತೊಳೆಯಲು ತಳದಲಿ ಇರುವುದು ಜಲದೊಳು ಅಡಗಿದ ಕಲ್ಲೊಂದು ।
ಅಲ್ಲಿಯೆ ಬರೆದೆನು ಒಮ್ಮನದಿಂದಲಿ ನಲ್ಮೆಯ ಕವನವ ನಾನಿಂದು ॥
ಇರುವುದು ದಡದಲಿ ಚಂದದಿ ಹೊದಿಸಿದ ಹುಲ್ಲಿನ ಹೊದಿಕೆಯ ಮನೆಯೊಂದು ।
ಇದರಲಿ ಸ್ಥಾಪಿತವಾಗಿದೆ ಸಂಘವು ಸಹಕಾರ್ ತತ್ವದ ಮೇಲಿಂದು ॥
ಸೋದರರಿಬ್ಬರ ಸಾಹಸದಿಂದಲಿ ಸ್ಥಾಪಿತವಾಗಿದೆ ಈ ಸಂಘ ।
ನೀತಿಯ ನರಿತಿಹ ನಾಡಿನ ಜನರಿಗೆ ಆಗಿದೆ ಹೆಚ್ಚಿನ ಆನಂದ ॥
ಬಡವರು ಬಲ್ಲಿದರೆಂಬುವ ಭೇದವ ನಿಡದೆಲೆ ನಡೆವುದು ಈ ಸಂಘ ।
ಮಾನಿತರೆಲ್ಲರ ಮಾನ್ಯತೆ ಪಡೆದಿಹ ನೀಡಿದ ಸೇವೆಯ ಫಲದಿಂದ ॥
ಕೂಡಿದ ಮನದಲಿ ಮಾಡಿದ ಸೇವೆಗೆ ನೀಡಲಿ ದೇವನು ಮಂಗಳವ ।
ಕರವನು ಜೋಡಿಸಿ ಮುಗಿವೆನು ಕೈಗಳ ಬಿಡದೆಲೆ ತೋರಿಸು ನಿನ್ನಿರವ ॥

—ಶ್ರೀಮಾ. ಜಿ. ಶಿವರಾಮ ಪಟವರ್ಧನ್.

ವಿಧಾಯಕ ಚಟುವಟಿಕೆಗಳು

ದಿನಾಂಕ 1—8—1949 ರಂದು ಕೊಪ್ಪಾ ತಾಲ್ಲೂಕು ಹರಿಜನ ಸೇವಕ ಸಂಘದ ಕಾರ್ಯಕರ್ತರು, ಕರಿಮನೆಗ್ರಾಮದ ಈರಪ್ಪ ಎಂಬ ಒಂದು ಕಾಲಿಲ್ಲದ ಬಾಲಕನೊಬ್ಬನನ್ನ ಚಿಕ್ಕಮಗಳೂರಿನ ಕೈಗಾರಿಕಾ ಪಾಠಶಾಲೆಗೆ ಮರಗೆಲಸ ಕಲಿಯುವುದಕ್ಕೋಸ್ಕರ ಸೇರಿಸಿದ್ದಾರೆ. ಇವನಿಗೆ ಊಟ-ವಸತಿ ಬಗ್ಗೆ ಚಿಕ್ಕಮಗಳೂರಿನ ಎ. ಕೆ. ಬೋರ್ಡಿಂಗ್ ಹೋಂನಲ್ಲಿ ವ್ಯವಸ್ಥೆ ಪಡಿಸಲಾಗಿದೆ.

ಕೊಪ್ಪ ತಾಲೂಕು ಮೇಗುಂದ ಹೋಬಳಿ ಗುಡ್ಡೇತೋಟಗ್ರಾಮಕ್ಕೆ ವಿದ್ಯಾಭ್ಯಾಸದ ಇಲಾಖೆಯವರು ಕರುಣಿಸಿದ, ನೂತನ ಪ್ರಾಥಮಿಕ ಪಾಠಶಾಲೆಯು ದಿನಾಂಕ 9—8—1949 ರಿಂದ ಪ್ರಾರಂಭವಾಗಿದೆ. ಇಲಾಖೆಯವರ ಈ ಸ್ತುತ್ಯ ಏರ್ಪಾಡಿಗಾಗಿ ಗ್ರಾಮಸ್ಥರು ಅತ್ಯಂತ ಕೃತಜ್ಞರಾಗಿದ್ದಾರೆ. ಮತ್ತು ಸಂಭ್ರಮ ಉತ್ಸಾಹಗಳಿಂದ ಶಾಲೆಯನ್ನು ಸ್ವಾಗತಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯವರು ಕೊಪ್ಪ ತಾಲೂಕು ಮೇಗುಂದ ಹೋಬಳಿ ಮೇಗೂರು ಗ್ರಾಮದಲ್ಲಿ ಒಂದು, ಗುಡ್ಡೇತೋಟ ಗ್ರಾಮದಲ್ಲಿ ಒಂದು ಈ ರೀತಿ ಎರಡು ಪುಸ್ತಕಭಂಡಾರಗಳನ್ನು ತೆರೆದಿರುತ್ತಾರೆ. ಈ ಎರಡೂ ಗ್ರಾಮಸ್ಥರೂ ಪುಸ್ತಕಭಂಡಾರಗಳಿಗೆ ಸಹಾಯನಿಧಿ ನೀಡಿರುತ್ತಾರೆ.

ದಿನಾಂಕ 10—8—1949 ರಂದು ಕೊಪ್ಪ ತಾಲೂಕು ಜಯಪುರದಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾದ ಜನಾಬ್ ಮಹಮದ್ ಅಹಮದ್ ಬಿ. ಎ., ರವರಿಂದ ಸಮಗ್ರ ಗ್ರಾಮಸೇವಾ ಸಹಕಾರ ಸಂಘ ಮತ್ತು ಗ್ರಾಮಪಂಚಾಯತಿ ಭವನಗಳ ಪ್ರಾರಂಭೋತ್ಸವಗಳು ನೆರವೇರಿಸಲ್ಪಟ್ಟವು. ಶ್ರೀ॥ ಕೂಡುಗೋಡು ನಾಗಭೂಷಣಭಟ್ಟರ ಸಹಕಾರತತ್ವದ ಮೇಲಿನ ಭಾಷಣ ಅರ್ಥಪೂರ್ಣವಾಗಿ ಗಂಭೀರವಾಗಿತ್ತು. ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ॥ ಬಿ. ಎಂ. ಪುಟ್ಟಣ್ಣಗೌಡರ ವಾಗ್ಝರಿ ವಿಚಾರಪ್ರಚೋದಕವಾಗಿತ್ತು. ಸೊಸೈಟಿಗಳ ಇನ್ಸ್‌ಪೆಕ್ಟರ್ ಶ್ರೀ॥ ಕೆ. ರಾಜಾರಾಯರಿಂದ ವರದಿಯು ಒಪ್ಪಿಸಲ್ಪಟ್ಟಿತು. ತಾಲ್ಲೂಕು ಅಮಲ್ದಾರ್ ಶ್ರೀ॥ ಹೆಚ್. ಹನುಮಯ್ಯನವರು, ರೆವಿನ್ಯೂ ಇನ್ಸ್‌ಪೆಕ್ಟರುಗಳಾದ ಶ್ರೀ॥ ಬಿ. ಸಿದ್ದಪ್ಪ ಮತ್ತು ಶ್ರೀ॥ ಡಿ. ನಾರಾಯಣರಾವ್, ತಾಲೂಕು ಅಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀ॥ ಹೆಚ್ ದುಗ್ಗಪ್ಪಗೌಡರು ಇವರ ಅವಿಶ್ರಾಂತ ಪರಿಶ್ರಮದಿಂದ ಉತ್ಸವವು ಯಶಸ್ವಿಯಾಗಿ ಶಿಸ್ತಿನಿಂದ ನಡೆಯಿಸಲ್ಪಟ್ಟಿತು.

ದಿನಾಂಕ 11—8—1949 ರಂದು ಕೊಪ್ಪ ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಯ ಸಭೆಯು ಶ್ರೀ॥ ಬಿ. ಎಂ. ಪುಟ್ಟಣ್ಣಗೌಡರ ಅಧ್ಯಕ್ಷತೆಯಲ್ಲಿ ನಡೆದು ಅನೇಕ ಮುಖ್ಯ ವಿಷಯಗಳ ಚರ್ಚೆ ನಡೆದು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಕೊಪ್ಪ ತಾಲೂಕು ಮೇಗುಂದ ಹೋಬಳಿಯ ಕೇಂದ್ರ ಜಯಪುರದಲ್ಲಿ ಹೋಬಳಿ ರೆ॥ಇ॥ ರವರುಗಳಾದ ಶ್ರೀ॥ ಬಿ. ಸಿದ್ದಪ್ಪನವರು, ಶ್ರೀ॥ ನಾರಾಯಣರಾವ್, ಪ್ರಾಥಮಿಕಶಾಲಾ ಉಪಾಧ್ಯಾಯರಾದ ಶ್ರೀ॥ ಅನಂತಮೂರ್ತಿಗಳು, ಕಾಂಗ್ರೆಸ್ ಕಮಿಟಿ ಸದಸ್ಯರಾದ ಶ್ರೀ॥ ಆನಂದಶೆಟ್ಟರು ಇವರ ನೇತೃತ್ವದಲ್ಲಿ ಆಗಸ್ಟ್ 15 ರಂದು ಸ್ವತಂತ್ರ ದಿನಾಚರಣೆಯ ಕಾರ್ಯಕ್ರಮಗಳು, ಪ್ರಭಾತಫೇರಿ, ಮೆರವಣಿಗೆ, ಪ್ರಾರ್ಥನೆ ಮತ್ತು ಬಹಿರಂಗ ಸಭೆ, ಇತ್ಯಾದಿ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ನಡೆಯಿಸಲ್ಪಟ್ಟಿತು.

ಶಾಂತಿಗ್ರಾಮ.

ಮೈಸೂರುದೇಶದ ಪಶ್ಚಿಮದಿಕ್ಕಿಲಿ ಇರುವುದು ಹಳ್ಳಿಯು ಊರೊಂದು ।
ಮೆರೆವುದು ಶಾಂತಿಗ್ರಾಮದ ಹೆಸರಲಿ ಕರೆವರು ಅಲ್ಲಿಯ ಜನರಿಂದು ॥
ಹರಿವುದು ಅಲ್ಲಿಯೆ ಶಿಲೆಯೊಳು ತುಂಬಿದ ಭರದಲಿ ಓಡುವ ನದಿಯೊಂದು ।
ಕಣ್ಣಿಗೆ ತಂಪನು ಮನಸಿಗೆ ಕಂಪನು ಹೊಂದಲು ಇರುವುದು ಮಾರ್ಗವೊಂದು ॥
ಕೊಳೆಯನು ತೊಳೆಯಲು ತಳದಲಿ ಇರುವುದು ಜಲದೊಳು ಅಡಗಿದ ಕಲ್ಲೊಂದು ।
ಅಲ್ಲಿಯೆ ಬರೆದೆನು ಒಮ್ಮನದಿಂದಲಿ ನಲ್ಮೆಯ ಕವನವ ನಾನಿಂದು ॥
ಇರುವುದು ದಡದಲಿ ಚಂದದಿ ಹೊದಿಸಿದ ಹುಲ್ಲಿನ ಹೊದಿಕೆಯ ಮನೆಯೊಂದು ।
ಇದರಲಿ ಸ್ಥಾಪಿತವಾಗಿದೆ ಸಂಘವು ಸಹಕಾರ್ ತತ್ವದ ಮೇಲಿಂದು ॥
ಸೋದರರಿಬ್ಬರ ಸಾಹಸದಿಂದಲಿ ಸ್ಥಾಪಿತವಾಗಿದೆ ಈ ಸಂಘ ।
ನೀತಿಯ ನರಿತಿಹ ನಾಡಿನ ಜನರಿಗೆ ಆಗಿದೆ ಹೆಚ್ಚಿನ ಆನಂದ ॥
ಬಡವರು ಬಲ್ಲಿದರೆಂಬುವ ಭೇದವ ಸಿಡಿದೆತ್ತಿ ನಡೆವುದು ಈ ಸಂಘ ।
ಮಾನಿತರೆಲ್ಲರ ಮಾನ್ಯತೆ ಪಡೆದಿದೆ ನೀಡಿದ ಸೇವೆಯ ಫಲದಿಂದ ॥
ಕೂಡಿದ ಮನದಲಿ ಮಾಡಿದ ಸೇವೆಗೆ ನೀಡಲಿ ದೇವನು ಮಂಗಳವ ।
ಕರವನು ಜೋಡಿಸಿ ಮುಗಿವೆನು ಕೈಗಳ ಬಿಡದೆಲೆ ತೋರಿಸು ನಿನ್ನಿರವ ॥

— ಶ್ರೀಮಾನ್ ಬಿ. ಶಿವರಾಮ ಪಟವರ್ಧನ

ವಿಧಾಯಕ ಚಟುವಟಿಕೆಗಳು.

ದಿನಾಂಕ 1—8—1949 ರಂದು ಕೊಪ್ಪಾ ತಾಲ್ಲೂಕು ಹರಿಜನ ಸೇವಕ ಸಂಘದ ಕಾರ್ಯಕರ್ತರು, ಕರಿಮನೆಗ್ರಾಮದ ಈರಪ್ಪ ಎಂಬ ಒಂದು ಕಾಲಿಲ್ಲದ ಬಾಲಕನೊಬ್ಬನನ್ನ ಚಿಕ್ಕಮಗಳೂರಿನ ಕೈಗಾರಿಕಾ ಪಾಠಶಾಲೆಗೆ ಮರಗೆಲಸ ಕಲಿಯುವುದಕ್ಕೋಸ್ಕರ ಸೇರಿಸಿದ್ದಾರೆ. ಇವನಿಗೆ ಊಟ-ವಸತಿ ಬಗ್ಗೆ ಚಿಕ್ಕಮಗಳೂರಿನ ಎ. ಕೆ. ಬೋರ್ಡಿಂಗ್ ಹೋಂನಲ್ಲಿ ವ್ಯವಸ್ಥೆ ಪಡಿಸಲಾಗಿದೆ.

ಕೊಪ್ಪ ತಾಲೂಕು ಮೇಗುಂದ ಹೋಬಳಿ ಗುಡ್ಡೇತೋಟಗ್ರಾಮ ವಿದ್ಯಾಭ್ಯಾಸದ ಇಲಾಖೆಯವರು ಕರುಣಿಸಿದ ನೂತನ ಪ್ರಾಥಮಿಕ ಪಾಠಶಾಲೆ [illegible] ದಿನಾಂಕ 9—8—1949 ರಿಂದ ಪ್ರಾರಂಭವಾಗಿದೆ. ಇಲಾಖೆಯವರ ಈ ಸ್ತು[illegible] ಪ್ರಾರ್ಥಿಗಾಗಿ ಗ್ರಾಮಸ್ಥರು ಅತ್ಯಂತ ಕೃತಜ್ಞರಾಗಿದ್ದಾರೆ ಮತ್ತು ಸಂಭ್ರ[illegible] ಉತ್ಸಾಹಗಳಿಂದ ಶಾಲೆಯನ್ನು ಸ್ವಾಗತಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯವರು ಕೊಪ್ಪ ತಾಲೂಕು ಮೇಗುಂದ ಹೋಬಳಿ ಮೇಗೂರು ಗ್ರಾಮದಲ್ಲಿ ಒಂದು, ಗುಡ್ಡೇತೋ[illegible] ಗ್ರಾಮದಲ್ಲಿ ಒಂದು ಈ ರೀತಿ ಎರಡು ಪುಸ್ತಕಭಂಡಾರಗಳನ್ನು ತೆರೆದಿರುತ್ತಾರೆ. [illegible] ಎರಡೂ ಗ್ರಾಮಸ್ಥರೂ ಪುಸ್ತಕಭಂಡಾರಗಳಿಗೆ ಸಹಾಯನಿಧಿ ನೀಡಿರುತ್ತಾರೆ.

ದಿನಾಂಕ 10—8—1949 ರಂದು ಕೊಪ್ಪ ತಾಲೂಕು ಜಯಪುರದಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾದ ಜನಾಬ್ ಮಹಮದ್ ಅಹಮದ್, ಬಿ. ಎ., ರವರಿಂದ ಸಮಗ್ರ ಗ್ರಾಮಸೇವಾ ಸಹಕಾರ ಸಂಘ ಮತ್ತು ಗ್ರಾಮಪಂಚಾಯತಿ ಭವನಗಳ ಪ್ರಾರಂಭೋತ್ಸವಗಳು ನೆರವೇರಿಸಲ್ಪಟ್ಟವು. ಶ್ರೀ॥ ಕೂತುಗೋಡು ನಾಗಭೂಷಣಭಟ್ಟರ ಸಹಕಾರತತ್ವದ ಮೇಲಿನ ಭಾಷಣ ಅರ್ಥಪೂರ್ಣವಾಗಿ ಗಂಭೀರವಾಗಿತ್ತು. ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ॥ ಬಿ. ಎಂ. ಪುಟ್ಟಣ್ಣಗೌಡರ ವಾಗ್ಝರಿ ವಿಚಾರಪ್ರಚೋದಕವಾಗಿತ್ತು. ಸೊಸೈಟಿಗಳ ಇನ್‌ಸ್ಪೆಕ್ಟರ್ ಶ್ರೀ॥ ಕೆ. ರಾಜಾರಾಯರಿಂದ ವರದಿಯು ಒಪ್ಪಿಸಲ್ಪಟ್ಟಿತು. ತಾಲ್ಲೂಕು ಅಮಲ್ದಾರ್ ಶ್ರೀ॥ ಹೆಚ್. ಹನುಮಯ್ಯನವರು, ರೆವಿನ್ಯೂ ಇನ್‌ಸ್ಪೆಕ್ಟರುಗಳಾದ ಶ್ರೀ॥ ಬಿ. ಸಿದ್ದಪ್ಪ ಮತ್ತು ಶ್ರೀ॥ ಡಿ. ನಾರಾಯಣರಾವ್, ತಾಲೂಕು ಅಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀ॥ ಹೆಚ್. ದುಗ್ಗಪ್ಪಗೌಡರು ಇವರ ಅವಿಶ್ರಾಂತ ಪರಿಶ್ರಮದಿಂದ ಉತ್ಸವವು ಯಶಸ್ವಿಯಾಗಿ ಶಿಸ್ತಿನಿಂದ ನಡೆಯಿಸಲ್ಪಟ್ಟಿತು.

ದಿನಾಂಕ 11—8—1949 ರಂದು ಕೊಪ್ಪ ತಾಲೂಕು ಗ್ರಾಮಾಭಿವೃದ್ಧಿ ಸಮಿತಿಯ ಸಭೆಯು ಶ್ರೀ॥ ಬಿ. ಎಂ. ಪುಟ್ಟಣ್ಣಗೌಡರ ಅಧ್ಯಕ್ಷತೆಯಲ್ಲಿ ನಡೆದು ಅನೇಕ ಮುಖ್ಯ ವಿಷಯಗಳ ಚರ್ಚೆ ನಡೆದು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಕೊಪ್ಪ ತಾಲೂಕು ಮೇಗುಂದ ಹೋಬಳಿಯ ಕೇಂದ್ರ ಜಯಪುರದಲ್ಲಿ ಹೋಬಳಿ ರೆ॥ಇ॥ ರವರುಗಳಾದ ಶ್ರೀ॥ ಬಿ. ಸಿದ್ದಪ್ಪನವರು, ಶ್ರೀ॥ ನಾರಾಯಣರಾವ್, ಪ್ರಾಥಮಿಕಶಾಲಾ ಉಪಾಧ್ಯಾಯರಾದ ಶ್ರೀ॥ ಅನಂತಮೂರ್ತಿಗಳು, ಕಾಂಗ್ರೆಸ್ ಕಮಿಟಿ ಸದಸ್ಯರಾದ ಶ್ರೀ॥ ಆನಂದಶೆಟ್ಟರು ಇವರ ನೇತೃತ್ವದಲ್ಲಿ ಆಗಸ್ಟ್ 15 ರಂದು ಸ್ವತಂತ್ರ ದಿನಾಚರಣೆಯ ಕಾರ್ಯಕ್ರಮಗಳು, ಪ್ರಭಾತಫೇರಿ, ಮೆರವಣಿಗೆ, ಪ್ರಾರ್ಥನೆ ಮತ್ತು ಬಹಿರಂಗ ಸಭೆ ಇತ್ಯಾದಿ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ನಡೆಯಿಸಲ್ಪಟ್ಟಿತು.

ಉದ್ದೇಶ್ಯ ಮಲೆನಾಡನ್ನು ಹೊರಗಿನ ಪ್ರಪಂಚಕ್ಕೆ ಪರಿಚಯಮಾಡಿಸಿ, ಹೊರ ಪ್ರಪಂಚವನ್ನು ನಮ್ಮ ಮಲೆನಾಡಿಗೆ ಪರಿಚಯಮಾಡಿಸುವುದು. ಅದರಲ್ಲೂ ಮುಖ್ಯವಾಗಿ ಪೂಜ್ಯಪಿತ ಗಾಂಧೀಜಿಯವರು ಆಶಿಸುತ್ತಿದ್ದ ಹಳ್ಳಿಯವರ ಉದ್ಧಾರಕ್ಕಾಗಿ, ಅವರ ಕಷ್ಟಸುಖಗಳಿಗಾಗಿ ಗಾಂಧೀಜಿಯವರ ತತ್ವದಂತೆ ಹಳ್ಳಿಗರು ನಡೆದರೆ ನಮ್ಮ ಮಲೆನಾಡು ಮಾತ್ರವಲ್ಲ, ಸಮಸ್ತ ದೇಶವೇ ಸುಖಶಾಂತಿಯಿಂದ ಬಾಳಲು ಸಾಧ್ಯವೆಂದು ಅನುಭವಿಗಳು ಹೇಳುತ್ತಿರುವುದನ್ನು ತಿಳಿಯುವುದಕ್ಕಾಗಿ, ಸಾಧಿಸುವುದಕ್ಕಾಗಿ "ಮಿತ್ರ" ನು ಈಗ ಜನ್ಮತಾಳುತ್ತಿದ್ದಾನೆ.

"ಮಿತ್ರ" ನ ಬಾಳು ಮುಂದೆ ಸಾಗಬೇಕಾದರೆ ಮಲೆನಾಡಮ್ಮನ ಮಕ್ಕಳಾದ ಸೋದರರೆಲ್ಲರೂ ಸಹಕರಿಸಿ ತಮ್ಮ "ಮಿತ್ರ" ನನ್ನು ಪ್ರಕಾಶದಿಂದ ಮೆರೆಯಲು ಅವಕಾಶ ಕಲ್ಪಿಸಬೇಕು. "ಮಿತ್ರ" ನ ಪ್ರತಿಯೊಂದು ದೃಷ್ಟಿಕೋನವೂ ಮಲೆನಾಡಮ್ಮನ ಏಳಿಗೆ ಮತ್ತು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಯೋಗ್ಯಪ್ರಸಾರ ಇವುಗಳೇ ಆಗಿರುವುದರಿಂದ "ಮಿತ್ರ" ನ ಗೆಳೆಯರು ತಮ್ಮ ಬಿಚ್ಚಿದ ಹೃದಯದಿಂದ ಅವನನ್ನು ಜೋಪಾನ ಸಲಹಬೇಕು.

ನಾಡಿನ ವಿದ್ವಜ್ಜನರು ತಮ್ಮ ಅನುಭವದ ಹಾದಿಯಲ್ಲಿ "ಮಿತ್ರ" ನನ್ನು ಕೊಂಡೊಯ್ದು, ಅವನ ಕುಂದುಕೊರತೆಗಳನ್ನು ವಿಚಾರಿಸಿ, ಯೋಗ್ಯ ಸಲಹೆಗಳನ್ನು ನೀಡಿ, ಸದಾ ಅವನ ಏಳಿಗೆಗಾಗಿ ಸಹಾಯನೀಡಬೇಕು. ಅವರ ಅನುಭವದ ರಸ ಘಟ್ಟಿ ನಿರಂತರವಾಗಿ, ಧಾರಾಳವಾಗಿ, ಹನಿಹನಿಯಾಗಿ "ಮಿತ್ರ" ನ ಮೂಲಕ ಹರಿದು ಜನತೆಗೆ ಒದಗಬೇಕೆಂಬುದೇ ನಮ್ಮ ಹಂಬಲ(?)ಆಸೆ.

ಗ್ರಾಹಕರು :—ಪತ್ರಿಕೆಗಳು ಗ್ರಾಹಕರ ಸಹಕಾರದಿಂದಲೇ ಪೂರ್ಣಾವಸ್ಥೆಗೆ ಸಿದ್ಧವಾಗುತ್ತವೆಂಬುದೇ "ಮಿತ್ರ" ನ ನಂಬಿಕೆ. "ಮಿತ್ರ" ನ ಚಂದಾದಾರರು ಮಾತ್ರ ಆಗುವುದಲ್ಲದೆ, ಇತರ ರೀತಿಯಲ್ಲೂ ಸಹಾಯಕರಾಗಬೇಕು. ತಮ್ಮ ಸ್ನೇಹಿತರನ್ನು ಗ್ರಾಹಕರಾಗಲು ಪ್ರಯತ್ನಿಸುವುದು, ಬರಹಗಾರರನ್ನು ಒಟ್ಟುಮಾಡು ಮಾಡುವುದು, ತಮಗೆ ತಿಳಿದವರನ್ನು ಬರಹಗಾರರನ್ನಾಗಿಸುವುದು, ಪ್ರಕಟನೆಗಳನ್ನು ಒದಗಿಸಿಕೊಡಲು ಸಿದ್ಧರಾಗುವುದು, ಇತ್ಯಾದಿ ಸರ್ವವಿಧ ಸಹಕಾರದಿಂದಲೂ "ಮಿತ್ರ" ನಿಗೆ ತನು-ಮನ-ಧನಗಳಿಂದ ಸಹಕಾರವನ್ನು ಪೂರ್ಣವಾಗಿ ನೀಡಿದರೇನೇ ತಮ್ಮೆಲ್ಲರ ಮುಂದೆ "ಮಿತ್ರ" ನು ಚಿರಕಾಲ ಯಶಸ್ವಿಯಾಗಿ ಬಾಳಬಲ್ಲನು.

ಬರಹಗಾರರು :—ಮುಖ್ಯವಾಗಿ ತಾವು ಹಳ್ಳಿಯ ಏಳಿಗೆಗಾಗಿ ಶ್ರಮಿಸಲು ಸಿದ್ಧನಾದವನು "ಮಿತ್ರ" ನ ಸಂತೋಷ ಹೆಚ್ಚಿ "ಮಿತ್ರ" ನು ಬೆಳಕಿಗೆ

ಬರುತ್ತಾನೆ. ಅಲ್ಲದೆ " ಮಿತ್ರ " ನ ದೃಷ್ಟಿ ಸದಾಕಾಲವೂ ರಚನಾತ್ಮಕವಾಗಿರುವುದರಿಂದ ರಚನಾತ್ಮಕ ಸಲಹೆಗಳನ್ನೊಳಗೊಂಡ ಲೇಖನಗಳಿಗೆ ಮುಖ್ಯ ಗಮನವಿರುತ್ತೆ. ಇನ್ನುಳಿದ ವಿಷಯುಗಳಾದರೂ ಮಲೆನಾಡಿನ ಹಳ್ಳಿಗಳ ಅಭಿವೃದ್ಧಿ ಮತ್ತು ಸಾಮಾಜಿಕ ಅಭಿವೃದ್ಧಿಯಕಡೆಗಿದ್ದಷ್ಟೂ ಶ್ರೇಯಸ್ಕರ. ಹಿಂದೆ ತಿಳಿಸಿದಂತೆ ಮಲೆನಾಡಿನ ಏಳಿಗೆ ಹಾಗೂ ಗಾಂಧೀಜಿಯವರ ರಚನಾತ್ಮಕ ಕಾರ್‍ಯಕ್ರಮ ಪ್ರಸಾರಾತ್ಮಕವಾಗಿರಬೇಕು ಖಾದಿಯ ಬೆಳವಣಿಗೆ, ಅಸ್ಪೃಶ್ಯತಾ ನಿವಾರಣೆ, ಸ್ವಾವಲಂಬನ, ಗ್ರಾಮನಿರ್ಮಲೀಕರಣ, ಗೋಸಂಪತ್ತು ಹೆಚ್ಚಿಸುವಿಕೆ, ರಾಷ್ಟ್ರಭಾಷಾ ಪ್ರಸಾರ, ಅವಶ್ಯಕ ಸಾಮಾಜಿಕ ಸುಧಾರಣೆ, ಬಡ ವಿಧವೆಯರ ಸಂಕಷ್ಟ ಪರಿಹಾರ, ಹಳ್ಳಿಯ ಕೈಗಾರಿಕೆ, ದೇಶೀ ವೈದ್ಯದಲ್ಲಿ ಸುಲಭ ಚಿಕಿತ್ಸೆಗಳು ಮತ್ತು ಆಯುರ್ವೇದ ವಿಚಾರ ಇತ್ಯಾದಿ ವಿಷಯುಗಳ ಪರಲೇಖನಗಳಿಗೆ " ಮಿತ್ರ " ನು ಸುಸ್ವಾಗತವೀಯುವನು.

ಶಿವಮೊಗ್ಗಾ ಅಡಿಕೆ ಪೇಟೆ ಧಾರಣೆ.

ದೇಶಾವರ ಕಡಿಹಸ್ಸ	....	31—0—0	ರಿಂದ	33—8—0	ರ ವರೆಗೆ
ನಂ. 2	....	28—8—0	,,	30—8—0	,,
ಕೊಪ್ಪ-ಶೃಂಗೇರಿ	....	28—0—0	,,	31—0—0	,,
ತೊರಸಾಲು	....	25—0—0	,,	29—0—0	,,
ಬೆಟ್ಟೆ	....	17—0—0	,,	19—0—0	,,
ವಂತಿಬೆಟ್ಟೆ	....	20—0—0	,,	21—0—0	,,
ಗೊರಬಲು	....	12—0—0	,,	13—0—0	,,
ಶೀಗೆಕಾಯಿ	....	7—0—0	,,	7—8—0	,,

ಚಂದಾದಾರರಿಗೆ ಸೂಚನೆ.

ಚಂದಾ ವಿವರ :

ವರ್ಷ ಒಂದಕ್ಕೆ	....	6—0—0
6 ತಿಂಗಳಿಗೆ	....	3—4—0
3 ತಿಂಗಳಿಗೆ	....	1-12—0

ಚಂದಾ ಹಣವನ್ನು ಎಂ. ಒ. ಮೂಲಕ ರವಾನಿಸಿ " ಮಿತ್ರ " ನ ಚಂದಾದಾರರಾಗುವುದು ಉಭಯತರಿಗೂ ಕ್ಷೇಮಕರ. ವಿ ಪಿ ಕಳುಹಿಸಲಾಗುವುದಿಲ್ಲ. " ಮಿತ್ರ " ನಿಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳನ್ನೂ ಈ ಕೆಳಗಿನ ವಿಳಾಸಕ್ಕೆ ಮಾಡಬೇಕಾಗಿ ವಿನಂತಿ.

ವ್ಯವಸ್ಥಾಪಕ—ಸಂಪಾದಕ,

" ಮಿತ್ರ "

ಶಾಂತಿಗ್ರಾಮ, ಪೋಸ್ಟ್ ಜಯಪುರ, (ಮೈಸೂರು.)



ಸಂಪಾದಕರು:

ಶ್ರೀ ಕಾಳಿಂಗಯ್ಯನ ಪುಟ್ಟುರಾಯರು

ಮೇ—ಜೂ

೧೯೫೦

ಚಿತ್ರವಾಣಿ
ಕನ್ನಡ ಮಾಸಪತ್ರಿಕೆ

ಸಂಪುಟ ೧. | ಆಗಸ್ಟ್ ೧೯೫೦. | ಸಂಚಿಕೆ ೬

ಒಲ್ಲದ ಗೊಬ್ಬರ.

ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಶಾಖೆಯ ಆಶ್ರಯದಲ್ಲಿ ಡಾಕ್ಯುಮೆಂಟರಿ ಚಿತ್ರಗಳು ತಯಾರಾಗಿ ಭಾ
ರತಾದ್ಯಂತ ಬಲಾತ್ಕಾರವಾಗಿ ಈ ಚಿತ್ರಗಳ ಪ್ರದರ್ಶನ ನಡೆಯುತ್ತಿರುವುದು ಸರಿಯಷ್ಟೆ. ಈ ಚಿತ್ರಗಳಿಗೆ ಹಚ್ಚುವ ಭಾಷೆಗಳಲ್ಲಿ
ಕನ್ನಡಕ್ಕೆ ಸ್ಥಾನವಿಲ್ಲವೆಂದೂ ಅದರಿಂದ ಕನ್ನಡಿಗರಿಗೆ ಅಪಾರ ನಷ್ಟವೆಂದೂ ಈಗಾಗಲೇ ಇತರ ಕನ್ನಡ ಚಲನ ಚಿತ್ರ ಪತ್ರಿಕೆ
ಗಳು ಅಗ್ರಲೇಖನಗಳನ್ನು ಬರೆದು ಉಗ್ರವಾಗಿ ಟೀಕಿಸಿದ್ದವು. ಆದರೆ ಈ ಬಗ್ಗೆ ಸರಕಾರದ ಗಮನವಾಗಲೀ, ಸಮಂಜ
ಸವಾದ ಉತ್ತರವಾಗಲೀ ಸಂಬಂಧಪಟ್ಟವರಿಂದ ಬಂದಂತೆ ನಮಗೆ ಕಂಡುಬಂದಿಲ್ಲ. ಒಮ್ಮೆ ಜನತೆ ನಾಯಕರ ಉದ್ಘೋ
ಷಣಗಳನ್ನು ಕೇಳಿ 'ಜವಾಬ್ದಾರಿ ಸರಕಾರ' 'ಜವಾಬ್ದಾರಿ ಸರಕಾರ' ಎಂದು ಹಾತೊರೆದು ಅದಕ್ಕಾಗಿ ತನುಮನಧ
ನಗಳನ್ನರ್ಪಿಸಿ ತಮ್ಮ ಸಂಪೂರ್ಣ ಸಹಾನುಭೂತಿ ಬೆಂಬಲಗಳನ್ನು ನೀಡಿತು. ಅದರ ಪರಿಣಾಮವಾಗಿ ತ್ಯಾಗವೀರರನೇಕರ
ಮಿತ್ರರು, ದರಿದ್ರರಾದರು, ಕೆಲವರಂತೂ ಸಂಸಾರಗಳನ್ನು ತೊರೆದು ಸಂನ್ಯಾಸಿಗಳಾದರು. ಮತ್ತೆ ಕೆಲವರು ಸೆರೆವಾಸಗಳಲ್ಲಿ
ಸೀಲ್ತರಗತಿಯ ಭೋಗಗಳನ್ನೂ ಹೊರಗೆ ಬಂದಾಗ ಜನರ ಪೂಜ್ಯತೆಯನ್ನೂ ಪಡೆಯುತ್ತಿದ್ದು ಇಂದು ಅದೇಜನರ ವಿಶ್ವಾಸದ
ಮೇಲೆ, ಪೂಜ್ಯ ಭಾವನೆಯ ಮೇಲೆ, ಗೌರವದ ಮೇಲೆ ಮಂತ್ರಿಪದವಿಗೂ ಏರಿದರು. ಅವರಿಂದ ಇಂದು ಜನತೆ ಅವರ
ಕೂಗಿಕೂಗಿ ಗಂಟಲು ಕಿತ್ತುಕೊಂಡು ಅರಚುತ್ತಿದ್ದ 'ಜವಾಬ್ದಾರಿ' ತನವನ್ನು ನಿರೀಕ್ಷಿಸಿದರೆ ತಪ್ಪೇನಲ್ಲ. ಕನ್ನಡ ಪತ್ರಿಕೆ
ಗಳು 'ಅರ್ಥವಾಗದ ಭಾಷೆಯ ಡಾಕ್ಯುಮೆಂಟರಿಗಳು ನಮಗೆ ಬೇಡ. ನಮ್ಮ ಹಣವನ್ನು ನ್ಯಾಯವಾಗಿ ತೆಗೆದುಕೊಳ್ಳಿ.
ಎಂದು ಸರಕಾರವನ್ನು ಅಂಗಲಾಚಿಕೊಂಡರೆ ಅದೂ ತಪ್ಪೇನಲ್ಲ ಅಂದರೆ ಅಂತಹ ಕೂಗುಗಳಿಗೆ ಗಮನವೇ ಕೊಡದೆ ಕಿವುಡ
ರಂತೆ ಅಧಿಕಾರಿವರ್ಗದವರು ವರ್ತಿಸಿದರೆ, ಕನ್ನಡ ನಾಡಿನ ಬಡ ರೈತನ, ಬಡಕೂಲಿಯ, ಏಕಮಾತ್ರ ಮನರಂಜನೆಯಾದ
ಚಿತ್ರಗಳಲ್ಲಿ ಸರಕಾರದ ಮಹಾ ಮಹಾ ಸಾಹಸಗಳನ್ನು ಅರ್ಥವಾಗದ ಭಾಷೆಯಲ್ಲಿ ತೂರಿ ದುಂಡಾವರ್ತಿಯಿಂದ ಅವನ ಹಣ
ವನ್ನು ಕಸಿದುಕೊಂಡು ಅದಕ್ಕಾಗಿ ಪಶ್ಚಾತ್ತಾಪ ಪಡದಿದ್ದರೆ ಅದು ತಪ್ಪು. ಪರಮ ಅನ್ಯಾಯ; 'ಜವಾಬ್ದಾರಿ' ಎಂಬ
ನಾಯಕರ ಒಂದಾನೊಂದು ಕಾಲದ ಮಹಾಮಂತ್ರಕ್ಕೆ ದ್ರೋಹ. ಭಾರತದಲ್ಲಿ ಸುಮಾರು ೩೦೦೦ ಚಿತ್ರ ಮಂದಿರಗಳೂ
ಅದರಲ್ಲಿ ಕರ್ಣಾಟಕದಲ್ಲೇ ಸುಮಾರು ೩೦೦ ಚಿತ್ರಮಂದಿರಗಳೂ ಇವೆಯಂತೆ. ಅಲ್ಲಿಗೆ ಇಡೀ ಭಾರತದ ಹತ್ತನೇ ಒಂದು
ಭಾಗದಷ್ಟು ಕರ್ಣಾಟಕದಲ್ಲಿ ಚಿತ್ರಮಂದಿರಗಳಿವೆ. 'ಅಂದಮೇಲೆ ನಮ್ಮ ಭಾಷೆಯಲ್ಲಿ ನಮಗೆ ಬೋಧಿಸಿ. ನಿಮ್ಮ ಅರಣ್ಯ
ರೋಧನ ನಮಗೆ ಅರ್ಥವಾಗುವುದಿಲ್ಲ' ಎಂದು ನಾವು ನ್ಯಾಯವಾಗಿ ಕೂಗಿದರೆ ಆ ನಮ್ಮ ಕೂಗನ್ನೇ ಅರಣ್ಯರೋಧನವನ್ನಾಗಿ
ಮಾಡಿರುವ ಭಾರತದ ವಾರ್ತಾ ಸಚಿವರದು ಯಾವ ನ್ಯಾಯ? ಕರ್ಣಾಟಕದ ಪ್ರತಿನಿಧಿಯಾಗಿ, ಕನ್ನಡಿಗರ ಒಲುಮೆಯ
ಬಲದ ಮೇಲೆ ನಿಂತಿರುವ ಮಾನ್ಯಮಂತ್ರಿ ಶ್ರೀ ರಂ.ರಾ. ದಿವಾಕರರು ಒಂದು ಕ್ಷಣ ತಮ್ಮ ಕರ್ಣಾಟಕವನ್ನು ನೆನಪ

ತ್ರಿವರ್ಣ ಮುಖಚಿತ್ರ ಎಂ. ವಿ. ರಾಜಮ್ಮ ★ ಮುದ್ರಣ: ಕಲಾನಿಧಿ ಪ್ರೆಸ್.

ಜಯಂತಿ

ವ್ಯವಹಾರ, ಆದರ್ಶ

❋

'ಆದರ್ಶ' ಎಂಬ ನುಡಿಯು ಕೇಳಿದೊಡನೆ ಅಣಕುನಗೆ ನಗುವ ಅಣ್ಣಂಗಳಿ,
ಆದರ್ಶವೆಂಬುದು ನಿಮ್ಮ ವ್ಯವಹಾರದಿಂದ ಭಿನ್ನವಾದುದಲ್ಲ ಕೇಳಿಭೋ !
ಬೀಜ ಮೊಳೆತು ಬೆಳೆದು ನಿಂತ ಮರನ ವ್ಯವಹಾರವೆಂಬಿರಾದೊಡೆ
ಅದುವೆ ಹೂತು ಕಾತು ತನಿವಣ್ಣನೀಯಬೇಕೆಂಬಾಶೆ ಆದರ್ಶವೈಯಾ !
ಹೂ-ಹಣ್ಣುಗಳನೀಯದ ಬಂಜೆಗಿಡ-ಮರ ಸಾವಿರ-ಸಾವಿರವಿದ್ದರೂ
ಅವುಗಳ ಪ್ರಯೋಜನವೇನಯ್ಯಾ, ಉರಿವ ಉರುವಲಿಂಗವಲ್ಲದೆ ?
ಕಮ್ಮಲಿರು- ತನಿವಣ್ಣುಗಳ ಪಡೆಯಬೇಕೆಂಬ ಪೇರಾಸೆಯೊಳು
ನೆಟ್ಟ ಗಿಡ-ಮರಂಗಳಿಗೆ ಮೊದಲಿಂದಲೂ ಹದವನೀವುದು
ನಗೆಯು ಮಾತಾಯಿತೆ ತಂದೆ !
ಇಂದಿನ ಕಾಲದ ಕೃಷಿಗಾಗಿ ಹಿಂದಣ ಕಾಲದ ಹದದ ಬೀಜಂಗಳ-
ನಾಯ್ವುದೆ ಆದರ್ಶ !
ಇಂದು ಗೈದ ಕೃಷಿ ಮುಂದಿನವರಿಗೆ ಒಳ್ಳೆಯ ಬೀಜಂಗಳ-
ನೊದಗಿಸಲೆಂಬುದೆ ಆದರ್ಶ !
ಇಂತಹ ಕಲ್ಯಾಣಸಾಧಕ ಆದರ್ಶಬೋಧೆಯ ನುಡಿಕೇಳಿ
ಅಣಕು ನಗೆ ನಗುವವರ ಕಂಡು ಕನಲಿನಿಂತಿಹ ಕಾಣಯ್ಯಾ
ನಮ್ಮ ಕಾಲರಾಯ !

—ಸಾಮಾಜಿಕ

ಸಂಪುಟ ೨೨ ⁘ ಸಪ್ಟೆಂಬರ್ ೧೯೫೮ ⁘ ಸಂಚಿಕೆ ೩

JAYANTI

1942

The Mysore Co-operative Journal

ಮೈಸೂರು ಸಹಕಾರ ಪತ್ರಿಕೆ

ಬೆಂಗಳೂರು ಸಿಟಿ.

ಆಗಸ್ಟ್ ೧೯೪೩

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.

ಪತ್ರಿಕೆ ಹೆಸರು ....

ಪ್ರಾರಂಭ ದಿನಾಂಕ ....

ಪ್ರಕಟನಾ ಸ್ಥಳ ....

ಸಂಪಾದಕರ ಹೆಸರು ....

ಮಾಲಿಕರ ಹೆಸರು ....

ಸೌಜನ್ಯ ಕೃಪೆ ....

S could secure



COLONY. The new departure in terms and conditions will be of immense interest to all Housing Societies.

MANAGING AGENTS :—
H. SANJIV ROW & CO.,
SAMPIGE ROAD,
MALLESWARAM,
BANGALORE CITY.

Phone No. 2309.]

ಕರ್ನಾಟಕಕ್ಕಾಗಿ ದುಡಿದ ನಾಯಕರು.

ಶ್ರೀ ಸಿದ್ದವನ ಹಳ್ಳಿ ನಿಜಲಿಂಗಪ್ಪನವರು.

ಶ್ರೀ ಕೆಂಗಲ್ ಹನುಮಂತಯ್ಯನವರು.

ಕರ್ನಾಟಕದಲ್ಲಿ ಹೆಸರಾಂತ ರಾಜಕಾರಣದಲ್ಲಿ ಹೆಸರಾದ ಶ್ರೀಮಾನ್ ಸಿದ್ದವನಹಳ್ಳಿ ನಿಜಲಿಂಗಪ್ಪನವರು, ವಿಶಾಲ ಮೈಸೂರಿಗಾಗಿ ತಮ್ಮ ಮೂವತ್ತು ವರ್ಷದ ರಾಜಕಾರಣವನ್ನು ಮೀಸಲಾಗಿಟ್ಟು ಅದರ ಸಂಪೂರ್ಣ ಪದ್ಧತೆಯನ್ನು ಪಡೆದ ಕರ್ನಾಟಕದ ವೀರ ಅಭಿಮನ್ಯು ವಾಗಿದ್ದಾರೆ. ಯಾವ ಅಧಿಕಾರ ಲಾಲಸೆಗೂ ಬಗ್ಗಿ ಬೀಳದೆ, ತಮ್ಮ ತುಂಬು ಜೀವನದ ಗಾಂಭೀರ್ಯವನ್ನು ಕರ್ನಾಟಕದಲ್ಲಿ ಕಾಪಾಡಿಕೊಂಡು ಬಂದವರಲ್ಲಿ ಮೊದಲಿಗರು. ಯಾವಾಗಲೂ ಅಜಾತ ಶತ್ರುವಂತಿರುವ ಇವರು, ಕರ್ನಾಟಕದಲ್ಲಿ ಮಾತ್ರವಲ್ಲದೆ, ಇಂಡಿಯಾ ದೇಶದಲ್ಲಿಯೇ ಗಣನೀಯ ವ್ಯಕ್ತಿಯಾಗಿದ್ದಾರೆ. ವಿಶಾಲ ಮೈಸೂರಿನ ಮುಖ್ಯ ಮಂತ್ರಿಗಳು.

ಭಾರತದಲ್ಲಿ ರಾಜ್ಯ ಸರ್ಕಾರದಲ್ಲಿ ಅತಿ ಚಿಕ್ಕ ವಯಸ್ಸಿನ ಮುಖ್ಯ ಮಂತ್ರಿ ಎಂದರೆ ಮೈಸೂರಿನ ಮಾಜೀ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು. ಇವರ ನಾಲ್ಕು ವರ್ಷದ ಆಡಳಿತ ಮೈಸೂರಿನ ಇತಿಹಾಸದಲ್ಲಿ ಅಮರವಾಗಿ ಉಳಿಯಲಿದೆ. ಇವರ ರಚನಾತ್ಮಕ ಕೆಲಸ ಕಾರ್ಯ, ವಿಧಾನ ಸೌಧದಂತಹ ಶಾಶ್ವತ ಕೆಲಸಗಳು, ಭಾರತಕ್ಕೆ ಮಾದರಿಯಾಗಿದೆ. ಯಾರ ದಯಾ ದಾಕ್ಷಿಣ್ಯಕ್ಕೂ ಒಳಗಾಗದೆ, ತ್ರಿಕರ್ಣಪೂರ್ವಕವಾಗಿ ನಾಯಕತ್ವವನ್ನು ನಡೆಸಿದ ಗಣ್ಯ ಹಿರಿಯ ನಾಯಕರು, ಕನ್ನಡನಾಡು ಒಂದಾಗಲು ದುಡಿದವರಲ್ಲಿ ಶ್ರೀ ಕೆ. ಹನುಮಂತಯ್ಯನವರು ಒಬ್ಬರಾದರೂ, ಆ ಕಾರಣದಿಂದಲೇ ತಮ್ಮ ಸ್ಥಾನ ಪಲ್ಲಟವಾಯಿತೆಂದು ಹನುಮಂತಯ್ಯನವರೇ ಒಪ್ಪಿಕೊಳ್ಳುತ್ತಾರೆ.

PRAJA-MATA 27—5—34

ಪ್ರಜಾಮತ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಪ್ರತಿ ಭಾನುವಾರವೂ ಪ್ರಕಟವಾಗುವುದು.

ಸಂಪಾದಕ:—ಬಿ. ಎನ್. ಗುಪ್ತ. ವಾರ್ಷಿಕ ಚಂದಾ ೪—೪—೦

ಸಂಪುಟ ೭] ಮದರಾಸು—ಭಾವ ಸಂ|| ನಿಜ ವೈಶಾಖ ಶು|| ೧೪ (೨೭-೫-೧೯೩೪) ಭಾನುವಾರ [ಸಂಚಿಕೆ ೧೩೦

ತಿರುವಾಡುತುರೈ

ಟಿ. ಎನ್. ರಾಜರತ್ನಂ ಪಿಳ್ಳೆ

ಮತ್ತು

ಅವರ ಸಹೋದ್ಯೋಗಿಗಳು

ಈ ಸುಪ್ರಸಿದ್ಧ ಸಂಗೀತಗಾರರ

ಮೊದಲನೆಯ ರಿಕಾರ್ಡನ್ನು

ನಾವು ಜೂನ್ ತಿಂಗಳ ಮೊದಲನೆಯ ವಾರದಲ್ಲಿ

ಪ್ರಕಟಿಸಲಿರುವೆವು.

ಸರಸ್ವತಿ ಸ್ಟೋರ್ಸ್, ಮದರಾಸು.

ಪ್ರಜಾಮತ ಕಾರ್ಯಾಲಯ

ಮನೋಮೋಹಕ ಸಂಗೀತ!

ಸುಂದರ ಸನ್ನಿವೇಶ!

ನೈಸರ್ಗಿಕ ಪ್ರತಿಬಿಂಬ!

ಯಥಾರ್ಥ ಶಬ್ದಗ್ರಹಣ!

"His Master's Voice"

ವಿಶೇಷ ಲಕ್ಷಣಗಳುಳ್ಳದ್ದು ಈ

ಪಾರ್ವತಿ ಪರಿಣಯಂ

ಪ್ರಹ್ಲಾದ ಖ್ಯಾತಿಯ

ಮಾಸ್ಟರ್ ಕೃಷ್ಣಮೂರ್ತಿ

ಯವರನ್ನೊಳಗೊಂಡ

ಶೈನಿಂಗ್ ಸ್ಟಾರ್ಸ್ ಸೊಸೈಟಿ

ಯವರ ಈ

ತಮಿಳು ನಾಟಕ

"ಹಿಸ್ ಮಾಸ್ಟರ್ಸ್ ವಾಯ್ಸ್"

ರಿಕಾರ್ಡುಗಳಲ್ಲಿ

ಉಚಿತ ಪುಸ್ತಕೆ: ಈ ನಾಟಕದ ಎಲ್ಲಾ ಹಾಡುಗಳನ್ನೂ ಸಂವಾದಗಳನ್ನೂ ನಿಮ್ಮ ಭಾಷೆಯಲ್ಲಿ ಅಚ್ಚುಹಾಕಿರುವ ಪುಸ್ತಕವನ್ನು ನೀವು ನಮ್ಮ ವ್ಯಾಪಾರಿಗಳಲ್ಲಾಗಲೀ ಅಥವಾ ಸೀದಾ ನಮ್ಮಿಂದಾಗಲೀ ತರಿಸಿಕೊಳ್ಳಬಹುದು.

ದಿ ಗ್ರಾಮಫೋನ್ ಕಂಪನಿ, ಲಿಮಿಟೆಡ್—ಬೆಂಗಳೂರು.

ಮದರಾಸಿನ:ಮಿಂಟ್ ಬೀದಿಯ ... ನಂಬರು ಮನೆಯಲ್ಲಿರುವ "ಪ್ರಜಾಮತ" ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು, ಜಹಂಗೀರ್ ಬೀದಿಯಲ್ಲಿರುವ ... ನಂಬರು ಗೃಹದಲ್ಲಿರುವ "ಪ್ರಜಾ

WORLD NEWS PAPER EXIBITION
KODAVALLI - 677524,
Shimoga Dist, Karnataka State.

1949

ಸಂಪಾದಕ:—ಎಚ್. ಕೆ. ವೀರಣ್ಣಗೌಡ

PHONE-2657

ಚಿತ್ರಗುಪ್ತ

CHITRAGUPTA

RgdNo.M 4605

(ಇದರೊಡನೆ "ವಾರ್ತಾ" ಸಮ್ಮಿಳಿತವಾಗಿದೆ) ಪ್ರತಿ ದಿನ ಸಂಜೆ ಪ್ರಕಟವಾಗುವುದು

ಹೊಸ ಸಂಪುಟ ೧ ಸಂಚಿಕೆ ೧೧ | ಬೆಂಗಳೂರು, ಜನವರಿ ೭, ಶುಕ್ರವಾರ ೧೯೪೯ | ಪುಟ ೪ ಬೆಲೆ ೧ ಆಣೆ

ಅಸ್ಸಾಂ ಗೌರ್ನರ್ ಸ್ಥಾನಕ್ಕೆ ಸರ್ ಮಿರ್ಜಾ ?

ಡೆಹಲಿ ಜ ೬

ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮೈಲ್, ಈಗಿನ ದಿವಾನ್ ಸರ್ ಎ ರಾಮಸ್ವಾಮಿ ಮೊದಲಿಯಾರ್ ಮತ್ತು ಮದರಾಸಿನ ಮಾಜಿ ಸಚಿವರಾದ ಡಾಕ್ಟರ್ ಸುಬ್ಬರಾಯನ್ ಇವರ ಗಳ ಹೆಸರ ಗಳು ಅಸ್ಸಾಮ್ ಗೌರ್ನರ್ ಸ್ಥಾನಕ್ಕೆ ಸೂಚಿತವಾಗಿರುವುವೆಂದು ಬಲವಾದ ಸುದ್ದಿ ಹರಡಿದೆ.

ಆಟ ನೋಡುವುದಕ್ಕೂ ನಿರ್ಬಂಧ !

ಏ ಪಿ ಎಸ್ ಲಂಡನ್ ಜ ೬

ಬ್ರಿಟನ್ನಿನಲ್ಲಿ ಫುಟ್‌ಬಾಲ್ ಪಂದ್ಯಗಳನ್ನು ನೋಡುವುದಕ್ಕೆ ಲಕ್ಷಾಂತರ ಮಂದಿ ಸೇರುತ್ತಾರೆ. ಈ ಗುಂಪುಗಳ್ ಸೇರಿಸಾದರೂ ಹೊಡೆದಾಟವಾಗಿ ಅಸಾಹುತವಾಗಿಹಿತೆಂಬ ದೃಷ್ಟಿಯಿಂದ ಗೃಹಾಡಳಿತ ಶಾಖೆಯವರು ಜನಸಂದಣಿಯನ್ನು ಮಿತಿಗೊಳಿಸುವ ನಿಯಮವನ್ನು ಜಾರಿಗೆ ತರಲಿದ್ದಾರೆಂದು ಗೊತ್ತಾಗಿದೆ.

ಡಚ್- ಭಾರತ ಸಂಬಂಧ ಕುಸಿದು ಬೀಳುವ ಸಂಭವ ?

ಏಷ್ಯನ್ ರಾಷ್ಟ್ರಗಳ ಧೋರಣೆ ಕುರಿತು ಬ್ರಿಟನ್ ಮತ್ತು ಅಮೇರಿಕಗಳ ವಿರೋಧ

ರೈಲ್ವೆ ಒಡಂಬಡಿಕೆಗೆ ಸ್ವಾಗತ

ಎಸ್. ಐ. ಆರ್. ಕಾರ್ಮಿಕ ಸಂಘದ ಕಾರ್ಯದರ್ಶಿಯ ಹೇಳಿಕೆ

ಪಿ ಐ ತಿರುಚನಾಪಳ್ಳಿ ಜ ೬

ರೈಲ್ವೆ ಕಾರ್ಮಿಕರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಭಾರತದ ಟ್ರಾನ್ಸ್‌ಪೋರ್ಟ್ ಸಚಿವ ಶ್ರೀ ಎನ್. ಜಿ. ಅಯ್ಯಂಗಾರ್ಯರಿಗೂ ರೈಲ್ವೆಮೆನ್ಸ್ ಫೆಡರೇಷನ್ನಿನ ಅಧ್ಯಕ್ಷರಾದ ಜಯಪ್ರಕಾಶ ನಾರಾಯ್ಣರವರಿಗೂ ... ಒಡಂಬಡಿಕೆ ಏರ್ಪಟ್ಟ ಬಗ್ಗೆ ಗೋಲ್ಡನ್ ರಾಕಿನ ಎಸ್. ಐ ಆರ್. ಕಾರ್ಮಿಕ ಸಂಘದ ಕಾರ್ಯದರ್ಶಿಗಳಾದ ... ರಾಮಚಂದ್ರನ್‌ರವರು ಸಂತೋಷ ...

ಮಧ್ಯ ಭಾರತ ಮಂತ್ರಿಮಂಡಲದ ಪುನರ್ರಚನೆ

ಶ್ರೀ ಲೀಲಾಧರ ಜೋಷಿ ಮುಖ್ಯ ಮಂತ್ರಿ

ಎ ಪಿ ಐ ಗ್ವಾಲಿಯರ್ ಜ ೬

ಮಧ್ಯ ಭಾರತ ಒಕ್ಕೂಟದ ಮಂತ್ರಿಮಂಡಲವನ್ನು ಈ ಕೆಳಕಂಡಂತೆ ಪುನರ್ರಚಿಸಲು ಒಕ್ಕೂಟದ ರಾಜಪ್ರಮುಖರಾದ ಗ್ವಾಲಿಯರ್ ಮಹಾರಾಜರು ತಮ್ಮ ಅನುಮತಿಯನ್ನು ಕೊಟ್ಟಿದ್ದಾರೆ.

ಶ್ರೀ ಲೀಲಾಧರ ಜೋಷಿ (ಪ್ರಧಾನಾಮಾತ್ಯರು) ವಿ ಯಸ್- ಖೋಡೆ [ಉಪಪ್ರಧಾನಿ ಮತ್ತು ಗೃಹಾಡಳಿತ ಮಂತ್ರಿ] ಶ್ರೀಗಳಾದ ರಾಧೆಲಾಲ್ ವ್ಯಾಸ್, ಜಗಮೋಹನಲಾಲ್, ಯಸವಂತಸಿಂಗ್, ಸೈಯದ್ ಹಮೀದ್ ...

ಹಿಂದೂ-ಸಿಖ್ ಸೌಹಾರ್ದಕ್ಕೆ ಭಂಗ ತರಕೂಡದು

ಜ್ಞಾನಿ ಕರ್ತಾರ್ ಸಿಂಗರ ಹೇಳಿಕೆ

ಎ ಪಿ ಐ ಸಿಮ್ಲಾ ಜ ೬

★ ಹಿಂದೂ-ಸಿಖ್ ಸೌಹಾರ್ದಕ್ಕೆ ಭಂಗ ತರುವ ಯಾವ ಕಾರ್ಯಕ್ರಮವನ್ನೂ ಸಿಖ್ಖರು ಕೈಗೊಳ್ಳಬಾರದು —ಎಂದು ಪೂರ್ವ ಪಂಜಾಬಿನ ಮರಾಮತ್ತು ಶಾಖೆಯ ಸಚಿವರಾದ ಜ್ಞಾನಿ ಕರ್ತಾರ್‌ಸಿಂಗ್‌ರವರು ಗುರು ಗೋವಿಂದ ಸಿಂಗ್‌ರವರ ಜನ್ಮ ದಿನೋತ್ಸವ ಸಂದರ್ಭದಲ್ಲಿ ಇಲ್ಲಿ ನೆರೆದಿದ್ದ ಸಿಖ್ಖರ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಸಿಖ್ಖರು ತಮ್ಮ ನ್ಯಾಯಬದ್ಧ ಕೋರಿಕೆಗಳನ್ನು ಸೌಹಾರ್ದಯುತ ರೀತಿಯಲ್ಲಿ ಈ ...

ಸೈನ್ಯಾಧಿಕಾರಿಗಳ ಬದಲಾವಣೆ

ಲೆ. ಜ. ಶ್ರೀ ನಾಗೇಶ್‌ವೆಸ್ಟರ್ನ್ ಕಮ್ಯಾಂಡಿನ ಜಿ. ಓ. ಸಿ. ಸ್ಥಾನಕ್ಕೆ

ಎ ಪಿ ಐ ಡೆಹಲಿ ಜ ೬

ಮೇ|| ಜ|| ಕಾರಿಯಪ್ಪನವರು ಜನವರಿ ... ಭಾರತ ಸೈನ್ಯಗಳ ಕಮ್ಯಾಂಡರ್ ಇನ್ ಚೀಫರ ಹುದ್ದೆಯನ್ನು ವಹಿಸಿಕೊಳ್ಳುವ ...

ಶ್ರೀ ಕಾರಿಯಪ್ಪನವರ ಸ್ಥಾನಕ್ಕೆ ಲೆ|| ಜ|| ನಾಗೇಶ್‌ರವರು ವೆಸ್ಟರ್ನ್ ಕಮ್ಯಾಂಡಿನ ಜಿ ಓ ಸಿ ಗಳಾಗಿ ನೇಮಿತರಾಗಿದ್ದಾರೆ ... ಪ್ರಾಂತ್ಯದಲ್ಲಿ ಜಿ ಓ ಸಿ ಗಳಾಗಿರುವ ಮೇ|| ಜ|| ಎಚ್ ಎಲ್ ಅತಲ್ ...

ಇಡೀ ವಿಶ್ವವನ್ನೇ ನುಂಗಲು ರಷ್ಯಾ ಪ್ರಯತ್ನ

ಮಾರ್ಷಲ್ ಯೋಜನೆ ಅಧಿಕಾರಿಯ ಆಕ್ಷೇಪ

ರಾ. ಸ್ಪೆ ನ್ಯೂಯಾರ್ಕ್ ಜ ೬

ಇಡೀ ವಿಶ್ವವನ್ನು ತನ್ನ ಬಲೆಗೆ ಹಾಕಿಕೊಳ್ಳಲು ರಷ್ಯಾ ಪ್ರಯತ್ನಿಸುತ್ತಿದೆ.

ಈ ರಷ್ಯ "ಗ್ಯಾಂಗಿ"ನ ಮುಂದೆ ಹಿಟ್ಲರ್ ಒಂದು ಕೂಸು—ಎಂದು ಮಾರ್ಷಲ್ ಆರ್ಥಿಕ ಯೋಜನೆ ಅಧಿಕಾರಿ ಹಾಫ್ ಮನ್‌ರವರು ತಿಳಿಸಿದ್ದಾರೆ.

ಯುರೋಪಿನಲ್ಲಿ ಕಮ್ಯೂನಿಸಂ ಪ್ರಭಾವ ಹರಡದಂತೆ ಮಾರ್ಷಲ್ ಆರ್ಥಿಕ ಯೋಜನೆ ತಡೆಹಾಕಿದೆ ಎಂದು ಹಾಫ್‌ಮನ್‌ರವರು ನ್ಯೂಯಾರ್ಕ್ ಚೇಂಬರ್ ಆಫ್ ಕಾಮರ್ಸ್ ...

ಬೆವಿನ್—ಕೃಷ್ಣಮೆನನ್ ಮಾತುಕತೆ

ವಿ ಹಾ ಲಂಡನ್ ಜ ೬

ಭಾರತವು ಡಚ್ಚರೊಡನೆ ರಾಯಭಾರ ಸಂಬಂಧವನ್ನು ತ್ಯಜಿಸುವ ಸಂಭವವಿದೆಯೆಂದು ಲಂಡನ್ನಿನಲ್ಲಿ ಭಾರತದ ಹೈ ಕಮಿಷನರ್ ಆಗಿರುವ ಕೃಷ್ಣಮೆನನ್‌ರವರು ಬ್ರಿಟನ್ನಿನ ವಿದೇಶಾಂಗ ಸಚಿವ ಬೆವಿನ್ನರಿಗೆ ತಿಳಿಸಿರುವುದಾಗಿ ಲಂಡನ್ನಿನ ರಾಜಕೀಯ ವೃತ್ತಗಳಲ್ಲಿ ಸುದ್ದಿ ಹಬ್ಬಿದೆ. ಅಮೇರಿಕಾದ ಸರ್ಕಾರಕ್ಕೂ ವಾಷಿಂಗ್‌ಟನ್ನಿನಲ್ಲಿರುವ ಭಾರತದ ರಾಯಭಾರಿ ಇದೇ ರೀತಿ ತಿಳಿಸಿದ್ದಾರೆಂದು ಗೊತ್ತಾಗಿದೆ.

★ ಭಾರತ ಸರ್ಕಾರದ ಈ ಧೋರಣೆಯನ್ನು ತಾವು ಅನುಮೋದಿಸುವುದಿಲ್ಲವೆಂದೂ ಭದ್ರತಾ ಸಮಿತಿಯಲ್ಲಿ ಇಂ...

[illegible] ಆರ್. ಲೈನಿನಲ್ಲಿ ಕೆಲವೆಡೆಗಳಲ್ಲಿ [illegible] ನಡೆದಿರುವ ವಿಧ್ವಂಸಗಳಿಗೆ [illegible] ಪ್ರಚೋದನೆಯೇ ಕಾರಣ [illegible] ಅವರು ತಿಳಿಸಿದ್ದಾರೆ. ಕಾರ್ಮಿಕ [illegible] ಒಂದು [illegible] ಕಾರ್ಮಿಕರ [illegible]

ರೈಲ್ವೆ ಉಪಸಚಿವ ಶ್ರೀ ಸಂತಾನಂರವರು ಪ್ರಯಾಣ ವ್ಯವಸ್ಥೆ ಬಗ್ಗೆ ಚರ್ಚೆ

ಮುಂಬಯಿ ಜ ೬ [illegible]

ಎಲ್ಲಾ ಕೆಲಸಗಾರರೂ ಮುಷ್ಕರ ಹೂಡಬೇಕು

[illegible] ಮುಷ್ಕರ ಹೂಡಿರುವ [illegible]

ಬೇಕರ್ ಮತ್ತು, ಕುಲರಾವ್ ವಿರುಲ್ಕರರು ಮಂತ್ರಿಮಂಡಲದ ಇತರ ಸದಸ್ಯರು. ಈ ಹತ್ತು ಮಂತ್ರಿಗಳ ಜೊತೆಗೆ ಶ್ರೀ ಸುನ್ನಲಾಲರನ್ನು ಅಭಿವೃದ್ಧಿ ಶಾಖಾ ಉಪ ಸಚಿವರನ್ನಾಗಿ ನೇಮಿಸಲಾಗಿದೆ.

—

ಸಿರೋಹಿ ಸಂಸ್ಥಾನದ ಆಡಳಿತ

ಮುಂಬಯಿ ಸರ್ಕಾರ ವಹಿಸಿಕೊಳ್ಳಬೇಕೆಂದು ಸೂಚನೆ

ಎ. ಪಿ. ಐ. ದೆಹಲಿ ಜ ೬

ಸಿರೋಹಿ ಸಂಸ್ಥಾನದ ಆಡಳಿತವನ್ನು ಮುಂಬಯಿ ಸರ್ಕಾರ ವಹಿಸಿಕೊಳ್ಳಬೇಕೆಂದು ಕೇಂದ್ರ ಸರ್ಕಾರ ಸೂಚಿಸಿದೆಯೆಂದು ಈ ದಿನ ಅಧಿಕೃತ ಪ್ರಕಟಣೆ ತಿಳಿಸಿದೆ. ಈ ಸಂಸ್ಥಾನವು ಉದಯಪುರಕ್ಕೆ ನೈಋತ್ಯದಲ್ಲಿದೆ.

—

ತಿರುಚೂರಿನಲ್ಲಿ ಸಭೆಗಳ ಮೇಲೆ ಪ್ರತಿಬಂಧಕ

ಎ. ಪಿ. ಐ. ಎರ್ನಾಕುಲಂ ಜ ೬

ತಿರುಚೂರಿನಲ್ಲಿ ಯಾವ ವಿಧವಾದ ಸಾರ್ವಜನಿಕ ಸಭೆ ಮತ್ತು ಪ್ರದರ್ಶನಗಳನ್ನು ಇನ್ನು ೧೫ ದಿನಗಳ ಕಾಲ ನಡೆಸಕೂಡದೆಂದು ಕೊಚಿನ್ ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ.

ಕಮ್ಯೂನಿಸ್ಟರ ಚಟುವಟಿಕೆ ಮತ್ತು ಸೆ|| ಥಾಮಸ್ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರ ಇವುಗಳಿಂದಾಗಿ ಜನರಲ್ಲಿ ತಲೆದೋರಿರುವ ಅಶಾಂತಿಯನ್ನು ನಿವಾರಿಸಲು ಈ ಆಜ್ಞೆ ಹೊರಡಿಸಿರುವುದಾಗಿ ಗೊತ್ತಾಗಿದೆ. ಈ ವರೆಗೆ ೧೨ ಮಂದಿ ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆಯೆಂದು ಗೊತ್ತಾಗಿದೆ.

—

ಸುಮಾತ್ರಾದಲ್ಲಿ ವಿಮಾನ ಅಪಘಾತ

ಬಟೇವಿಯ ಜ ೬— ಡಿಸೆಂಬರ್ ೩೧ನೇ ತಾರೀಖು ಸುಮಾತ್ರಾದಲ್ಲಿ ರಿಪಬ್ಲಿಕನ್ ವಿಮಾನವೊಂದು ನೆಲಕ್ಕುರುಳಿ ೪ ಮಂದಿ ಸತ್ತರೆಂದು ವರದಿಯಾಗಿದೆ.

ಪ್ರಾಂತ್ಯದ ಮುಖ್ಯ ಮಂತ್ರಿ ಡಾ|| ಗೋಪಿಚಂದ್ ಭಾರ್ಗವರವರೂ ಈ ಸಭೆಯಲ್ಲಿ ಭಾಷಣ ಮಾಡಿ ಸಿಖ್ಖರು ಗುರು ಗೋವಿಂದಸಿಂಗರ ತ್ಯಾಗಮಯ ಆದರ್ಶವನ್ನು ಅನುಸರಿಸಬೇಕೆಂದು ತಿಳಿಸಿದರು.

[illegible] ರವರು ಸ|| [illegible] ರಾಗಿದ್ದಾರೆ. [illegible] ಗೇಡಿಯರ್ ಎಸ್. ಒ. ಎಸ್. [illegible] ರವರನ್ನು ಮೆ|| ಜನರಲ್ ದರ್ಜೆಗೇರಿಸಲಾಗಿದೆ.

'ದಾ ವಿಷ್ಯ ಕಮ್ಯೂನಿಸ್ಟರ ವಶವಾಗುವ ಸಂಭವ ?

ಚೀಣೀ ಕಮ್ಯೂನಿಸ್ಟರನ್ನು ತಡೆಗಟ್ಟಲು ಮಿಲಿಟರಿ ಸಹಾಯ ಅತ್ಯಗತ್ಯ

ಅಮೇರಿಕಕ್ಕೆ ವಿಲಿಯಂ ಬುಲಿಟ್‌ರವರ ಸೂಚನೆ

(ರಾ. ಸ್ಪೆ) ವಾಷಿಂಗ್‌ಟನ್ ಜ ೬

★ ಅಮೇರಿಕವು ಅತಿ ಶೀಘ್ರದಲ್ಲಿ ಚೀಣಾಕ್ಕೆ ಆರ್ಥಿಕ ಸಹಾಯ ಕಳುಹಿಸಬೇಕಲ್ಲದೆ ಕಮ್ಯೂನಿಸ್ಟರ ವಿರುದ್ಧ ಕದನ ನಡೆಸುವ ಬಗ್ಗೆ ಸೂಕ್ತ ಸೂಚನೆಗಳನ್ನು ಕೊಡಲು ಬಹಳ ದಕ್ಷರಾದ ಒಬ್ಬ ಸೈನ್ಯಾಧಿಕಾರಿಯನ್ನು ಅಲ್ಲಿಗೆ ಕಳುಹಿಸಬೇಕೆಂದು ಅಮೇರಿಕದ ಪ್ರಮುಖ ರಾಜಕಾರಣಪಟುಗಳಲ್ಲೊಬ್ಬರಾದ ವಿಲಿಯಂ ಬುಲಿಟ್‌ರವರು ಈ ದಿನ ಅಮೇರಿಕ ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರೆ.

★ ಕಮ್ಯೂನಿಸ್ಟರು ದಕ್ಷಿಣ ಚೀಣಾವನ್ನೇನಾದರೂ ಆಕ್ರಮಿಸಿದರೆ ಸ್ವಲ್ಪ ಕಾಲದಲ್ಲೇ ಇಂಡೋ ಚೀಣಾ, ಸಯಾಂ, ಬರ್ಮ ಮತ್ತು ಮಲಯಗಳನ್ನೂ ಅವರು ತಮ್ಮ ಅಧಿಕಾರಕ್ಕೊಳಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದೆಂದು ಅವರು ಎಚ್ಚರಿಕೆಯಿತ್ತಿದ್ದಾರೆ.

★ ಈ ಪರಿಸ್ಥಿತಿ ತಲೆದೋರಲೆಡೆಕೊಟ್ಟರೆ ಇಂಡೋನೇಷ್ಯ ಮತ್ತು ಭಾರತಗಳಲ್ಲೂ ಕಮ್ಯೂನಿಸ್ಟರ ಪ್ರಭಾವ ಬೇಗ ಹರಡಲು ಅವಕಾಶ ಕೊಟ್ಟಂತಾಗುವುದೆಂದು ಅವರು ತಿಳಿಸಿದ್ದಾರೆ.

ಪ್ಯಾರಿಸ್ ಮತ್ತು ಮಾಸ್ಕೋಗಳಲ್ಲಿ ಹಿಂದೆ ಅಮೇರಿಕದ ರಾಯಭಾರಿಗಳಾಗಿದ್ದ ಬುಲಿಟ್‌ರವರು ವಿದೇಶಗಳಿಗೆ ಸಹಾಯ ಕೊಡುವ ಬಗ್ಗೆ ಕಾಂಗ್ರೆಸ್ಸಿನಿಂದ ಸ್ಥಾಪಿತವಾಗಿರುವ ಸಮಿತಿಯ ಮುಂದೆ ಸಾಕ್ಷ್ಯ ಕೊಡುತ್ತಾ ಮೇಲಿನ ಅಭಿಪ್ರಾಯವನ್ನು ತಿಳಿಸಿದರು.

ಚೀಣಾಕ್ಕೆ ಆದಷ್ಟು ತ್ವರಿತವಾಗಿ ಅಮೇರಿಕವು ಸಹಾಯ ಕೊಡಬೇಕಾಗಿದೆಯೆಂದೂ ಇಲ್ಲದಿದ್ದರೆ ಅದರಿಂದ ಬಹಳ ಅನರ್ಥವಾಗಲಿದೆಯೆಂದೂ ತಿಳಿಸಿದರು.

ಚೀಣಾ ಸರ್ಕಾರದ ಕಡೆ ಅನೇಕ ಸೇನಾಧಿಕಾರಿಗಳಿಗಿದ್ದರೂ ಕೂಡ ೩೦ ಲಕ್ಷ ಸೈನಿಕರ ಬಲವುಳ್ಳ ಕಮ್ಯೂನಿಸ್ಟ್ ಸೈನ್ಯವನ್ನೆದುರಿಸುವ ಬಗ್ಗೆ ಸೂಕ್ತ ಯೋಜನೆಯನ್ನು ತಯಾರಿಸಿ ಸುವ್ಯವಸ್ಥಿತ ಕದನ ನಡೆಸಲು ಅವರು ದಕ್ಷರಾಗಿಲ್ಲವೆಂದು ಬುಲಿಟ್‌ರವರು ತಿಳಿಸಿದರು. ಚೀಣಾದ ಅಂತರ್ಯುದ್ಧದಲ್ಲಿ ಸರ್ಕಾರಕ್ಕೆ ಜಯ ಸಿಗುವಂತೆ ಮಾಡಬೇಕಾದರೆ ಆರ್ಥಿಕ ಮತ್ತು ಮಿಲಿಟರಿ ಸಹಾಯದ ಜೊತೆಗೆ ಸರ್ಕಾರಿ ಪಡೆಗಳ ಮೇಲ್ವಿಚಾರಣೆಯನ್ನು ಯುದ್ಧದಲ್ಲಿ ಬಹಳ ಅನುಭವ ಪಡೆದಿರುವ ಅಮೇರಿಕನ್ ದಂಡನಾಯಕರು ವಹಿಸಿಕೊಳ್ಳುವುದು ಅಗತ್ಯವೆಂದು ಅವರು ತಿಳಿಸಿದರು.

ಚೀಣಾಕ್ಕೆ ಮಿಲಿಟರಿ ಸಹಾಯ ಕಳುಹಿಸದೆ ಆರ್ಥಿಕ ಸಹಾಯವನ್ನು ಮಾತ್ರ ಕಳುಹಿಸುವುದರಿಂದ ಕಮ್ಯೂನಿಸ್ಟರನ್ನು ಸಮ್ಯಕ್ ತಡೆಗಟ್ಟಲು ಸಹಾಯವಾದರೂ ಅವರನ್ನು ಸೋಲಿಸಲು ಸಾಧ್ಯವಾಗುವುದಿಲ್ಲವೆಂದು ಅವರು ತಿಳಿಸಿದರು.

[illegible]

ಮದ್ರಾಸು ಜ ೬— ಪೌರಾಣಿಕ ಚಿತ್ರಗಳಲ್ಲಿ ನಟ ನಟಿಯರು ಹಿಂದೂ ದೇವರುಗಳ ಪಾತ್ರವನ್ನು ವಹಿಸಬಾರದೆಂಬ ಸಲಹೆಯನ್ನು ಮದ್ರಾಸ್ ಸರ್ಕಾರದವರು ದಕ್ಷಿಣ ಭಾರತ ಫಿಲ್ಮ್ ಚೇಂಬರ್ ಆಫ್ ಕಾಮರ್ಸ್ ಸಂಸ್ಥೆಯ ಪರಿಶೀಲನೆಗೆ ಒಪ್ಪಿಸಿದ್ದಾರೆ.

—

ಜಪಾನಿ ನೌಕಾಧಿಕಾರಿಗಳಿಗೆ ೧೦ ವರ್ಷ ಕಠಿಣ ಶಿಕ್ಷೆ

ರಾ. ಸ್ಪೆ. ಟೋಕಿಯೋ ಜ ೬

ಎರಡನೆ ಮಹಾಯುದ್ಧ ಕಾಲದಲ್ಲಿ ಜಪಾನಿನ ನೌಕಾ ಕಾರ್ಯಾಚರಣೆಗಳ ಮೇಲ್ವಿಚಾರಣೆ ವಹಿಸಿದ್ದ ವೈಸ್ ಅಡ್ಮಿರಲ್ ತಾಸುಕು ನಮ ಚಾವರವರಿಗೆ ಇಂದು ೧೦ ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಜಪಾನೀ ಸಬ್ ಮೇರಿನ್‌ಗಳಿಂದ ಮುಳುಗಿಸಲ್ಪಟ್ಟ ಮಿತ್ರ ರಾಷ್ಟ್ರಗಳ ನೌಕೆಗಳಿಂದ ಜೀವ ಸಹಿತ ಪಾರಾದವರನ್ನು ಕೊಲ್ಲೆ ಮಾಡಲು ಯತ್ನಿಸಿದರೆಂದು ಅವರ ಮೇಲೆ ಆಪಾದನೆ ಹೊರಿಸಲಾಗಿತ್ತು.

—

ಅ|| ಭಾ|| ರಾಜಕೀಯ ಶಾಸ್ತ್ರಜ್ಞರ ಸಮ್ಮೇಳನ

ಶ್ರೀ ಪಕ್ವಾಸರವರಿಂದ ಆರಂಭೋತ್ಸವ

ಎ. ಪಿ. ಐ. ನಾಗಪುರ ಜ ೬

ನಾಳೆಯಿಂದ ಇಲ್ಲಿ ನಡೆಯುವ ಅಖಿಲ ಭಾರತ ರಾಜಕೀಯ ಶಾಸ್ತ್ರಜ್ಞರ ೧೧ನೇ ವಾರ್ಷಿಕಾಧಿವೇಶನಕ್ಕೆ ಲಕ್ನೋ ವಿಶ್ವವಿದ್ಯಾನಿಲಯದ ಡಾ|| ಬಿ. ಎಂ. ಶರ್ಮರವರು ಅಧ್ಯಕ್ಷತೆ ವಹಿಸುವರು.

ಮಧ್ಯ ಪ್ರಾಂತ್ಯ ಗವರ್ನರರಾದ ಶ್ರೀ ಮಂಗಲದಾಸ್ ಪಕ್ವಾಸರವರು ಅಧಿವೇಶನದ ಆರಂಭೋತ್ಸವವನ್ನು ನೆರವೇರಿಸುವರು.

— ಎಂದು ಅಮೇರಿಕ ಮತ್ತು ಬ್ರಿಟಿಷ್ ಸರ್ಕಾರಗಳೆರಡೂ ಅಭಿಪ್ರಾಯಪಟ್ಟಿರುವುದಾಗಿಯೂ ಗೊತ್ತಾಗಿದೆ.

• ಏಷ್ಯನ್ ರಾಷ್ಟ್ರಗಳೆಲ್ಲವೂ ಒಟ್ಟಾಗಿ ಡಚ್ಚರೊಡನೆ ರಾಯಭಾರ ಸಂಬಂಧ ತ್ಯಜಿಸುವ ನಿರ್ಣಯ ಏಷ್ಯನ್ ಸಮ್ಮೇಳನದಲ್ಲಿ ಮಂಡಿಸಲ್ಪಡುವ ನಿರೀಕ್ಷೆ ಇದೆ.

—

ಭಾರತದಲ್ಲಿ ವಿಜ್ಞಾನದ ಪ್ರಗತಿಗೆ ಗಮನ ಅಗತ್ಯ

ಪ್ರೊ| ಬಿಹಾರಿಲಾಲ್‌ರ ಭಾಷಣ

ಎ. ಪಿ. ಐ. ಅಲಹಾಬಾದ್ ಜ ೬

★ ಭಾರತವು ಸ್ವತಂತ್ರವಾಗಿರುವುದರಿಂದ ಈಗ ದೇಶದಲ್ಲಿ ವಿಜ್ಞಾನದ ಪ್ರಗತಿಗೆ ಹೆಚ್ಚು ಗಮನ ಅಗತ್ಯ; ಜನರಲ್ಲಿ ಸಂಶೋಧನಾತ್ಮಕ ಶಕ್ತಿ ಬೆಳೆಯುವುದು ಅತ್ಯವಶ್ಯಕ.

—ಎಂದು ಸಂಯುಕ್ತ ಸಂಸ್ಥಾನದ ಹರ್ಸ್ಟ್ ಸಂಸ್ಥೆಯ ಪತ್ರಿಕೆಗಳ ಜ್ಞಾನ ವಿಭಾಗದ ಸಂಪಾದಕರಾದ ಪ್ರೊ| ಗೋವಿಂದ್ ಬಿಹಾರಿಲಾಲ್‌ರವರು ಇಂದು ಇಲ್ಲಿ ಮಾಡಿದ ಭಾಷಣವೊಂದರಲ್ಲಿ ತಿಳಿಸಿದರು.

ಪ್ರೊ| ಬಿಹಾರಿಲಾಲ್‌ರವರು ಇಲ್ಲಿ ನಡೆದ ವೈಜ್ಞಾನಿಕ ಸಮ್ಮೇಳನದಲ್ಲಿ ಭಾಗವಹಿಸಲು ಅಮೇರಿಕದಿಂದ ಇಲ್ಲಿಗೆ ಆಗಮಿಸಿದರು.

ಪಾಶ್ಚಾತ್ಯ ರಾಷ್ಟ್ರಗಳ ವಿಜ್ಞಾನವು [illegible] ರ ಸ್ವತ್ತಾಗಿ ಅವರ ಸುಖಶ್ರೇಯಸ್ಸಿಗೆ ಸಾಧನವಾಗಿದೆ. ಭಾರತ ಭಾವಿ ಪ್ರಗತಿಯು ಅದರ ವಿಜ್ಞಾನಿಗಳನ್ನು ಅವಲಂಬಿಸಿದೆ. [illegible] ವರು ಶ್ರದ್ಧೆಯಿಂದಲೂ ಆತ್ಮ ವಿಶ್ವಾಸದಿಂದಲೂ ಸಂಶೋಧನೆಗಳಲ್ಲಿ ತೊಡಗಿ ಜನತೆಯ ಪ್ರಗತಿಗೆ ಶ್ರಮಿಸಬೇಕು, ಎಂದು ಅವರು ತಿಳಿಸಿದರು.

—

ಕಮ್ಯೂನಿಸ್ಟ್ ಕೈದಿಗಳ ಮುಷ್ಕರ ಮುಕ್ತಾಯ

ಸೇಲಂ ಜ [illegible]

ಸೇಲಂ ಸೆಂಟ್ರಲ್ ಜೈಲಿನಲ್ಲಿರುವ ಸುಮಾರು ೩೫೦ ಮಂದಿ ಕಮ್ಯೂನಿಸ್ಟ್ ಕೈದಿಗಳು ಜ ೧ನೇ ತಾರೀಖು ಆರಂಭಿಸಿದ ಉಪವಾಸ ಮುಷ್ಕರವನ್ನು ಯಾವ ಷರತ್ತೂ ಇಲ್ಲದೆ ಮುಕ್ತಾಯಮಾಡಿದ್ದಾರೆ.

1948
WORLD NEWS PAPER EXIBITION
HEGGODAVALLI 577524,
Shimoga Dist Karanataka State, INDIA

ಹೈ॥ ಮಂತ್ರಿಮಂಡಲದೊಡನೆ ನೈಜಾಮರ ಭಿನ್ನಾಭಿಪ್ರಾಯ

* ಪ್ರಧಾನ ಮಂತ್ರಿ ಲಾಯಕ್ ಆಲಿಯವರ ರಾಜಿನಾಮೆ! ಪರಿಸ್ಥಿತಿ ವಿಷಮಾವಸ್ಥೆ ಮುಟ್ಟಿದೆ! *

Regd. No M 4605 ॥ ವಂದೇ ಮಾತರಂ ॥ Phone No 2587

—ಸಂಪಾದಕ:- ಹೆಚ್. ಕೆ. ವೀರಣ್ಣಗೌಡ— [ಬೆಲೆ ೧ ಆ

ಬೆಂಗಳೂರು ಶುಕ್ರವಾರ ೬ನೇ ಆಗಸ್ಟ್ ೧೯೪೮ [ಸಂಚಿಕೆ ೨೧೫

ಹತ್ತಿ ಬೆಲೆ ನಿರ್ಧಾರದ ಬಗ್ಗೆ ವರ್ತಕರೊಡನೆ ಚರ್ಚೆ ಅಗತ್ಯ

ಶ್ರೀ ಆರ್. ಜಿ. ಸಾರೈಯಾರವರ ಸೂಚನೆ

(ಎ. ಪಿ. ಐ.) ಮುಂಬಯಿ ಆ ೫

ಹತ್ತಿ ಬೆಲೆ ಮೇಲೆ ಹತೋಟಿ ವಿಧಿಸುವುದರಿಂದ ಹತ್ತಿ ಬೆಳೆಯುವವರಿಗೆ ಬಹಳ ತೊಂದರೆಯಾಗುವುದೆಂದು ಈಸ್ಟ್ ಇಂಡಿಯನ್ ಕಾಟನ್ ಅಸೋಸಿಯೇಷನ್ನಿನ ವ್ಯವಸ್ಥಾಪಕ ಸಮಿತಿಯು ಕೇಂದ್ರ ಸರ್ಕಾರಕ್ಕೆ ತಂತಿ ಕಳುಹಿಸಿದೆ.

ಬರ್ಲಿನ್ನಿನಲ್ಲಿ ರಷ್ಯನರ ಮುನ್ನೆಚ್ಚರಿಕೆ ಕ್ರಮ

ಬರ್ಲಿನ್ ಆ ೪

ಬರ್ಲಿನ್ನಿನ ಪರಿಸ್ಥಿತಿ ತೀರಾ ಹದಗೆಟ್ಟಿರುವುದರಿಂದ ರಷ್ಯಾದವರು ಹಲವು ಮುಂಜಾಗರೂಕತೆಯ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ರಷ್ಯನ್ ಸೈನ್ಯವಿರುವ ಕೇಂದ್ರಕಚೇರಿಯ ಸುತ್ತಲೂ ರಸ್ತೆಗಳಲ್ಲಿ ಜನರ ಧಾಳಿಯನ್ನು ಗಡೆಯಲು ತಂತಿಯ ಬಲೆಗಳನ್ನು ಹರಡಲಾಗಿದೆ. ಅಲ್ಲದೆ ಮುಖ್ಯ ಮುಖ್ಯ ಪ್ರದೇಶಗಳಲ್ಲಿ ಸೈನ್ಯದ ಕಾವಲನ್ನು ಬಲವಡಿಸಲಾಗಿದೆ ಜವಾನರು ಸೈನ್ಯದ ಕೇಂದ್ರಕ್ಕೆ ಹತ್ತಿರದಲ್ಲಿ ವಾಸಮಾಡುವ ಕಡಗಳೆಲ್ಲಲ್ಲಾ ಬಲ

—★—

(ಎ ಪಿ ಐ) ಹೈದರಾಬಾದ್ ಆ ೫

ಹೈದರಾಬಾದಿನ ಪ್ರಧಾನ ಮಂತ್ರಿ ಲಾಯಕ್ ಆಲಿಯವರು ಈ ರಾತ್ರೆ ನೈಜಾಮರಿಗೆ ತಮ್ಮ ರಾಜೀನಾಮೆ ಪತ್ರ ಒಪ್ಪಿಸಿದ್ದಾರೆಂದು ಗೊತ್ತಾಗಿದೆ.

ಸರ್ ಮಿರ್ಜಾ ಇಸ್ಮೇಲರವರ ಮೂಲಕ ನೈಜಾಮರು ಭಾರತ ಸರ್ಕಾರದೊಡನೆ ರಾಜಿಮಾಡಿಕೊಳ್ಳಲು ಪ್ರಯತ್ನಿಸಿದುದೇ ಈ ರಾಜೀನಾಮೆಗೆ ಕಾರಣವೆಂದು ಗೊತ್ತಾಗಿದೆ. ನೈಜಾಮರ ಈ ವರ್ತನೆಯಿಂದ ಮಂತ್ರಿ ಮಂಡಲದ ಅಭಿಪ್ರಾಯವನ್ನು ಬದಿಗೊತ್ತಿದಂತಾಗಿದೆಯೆಂದು ಲಾಯಕ್ ಆಲಿಯವರು ತಮ್ಮ ರಾಜೀನಾಮೆ ಪತ್ರದಲ್ಲಿ ಅಭಿಪ್ರಾಯ ಪಟ್ಟಿರುವುದಾಗಿಯೂ ಗೊತ್ತಾಗಿದೆ.

ಈ ಸುದ್ದಿ ಅಧಿಕೃತವಾಗಿ ಇನ್ನೂ ಪ್ರಕಟವಾಗಿಲ್ಲ ಆದರೆ ಲಾಯಕ್ ಆಲಿಯವರ ರಾಜಿನಾಮೆ ಇನ್ನೂ ಅಂಗೀಕೃತವಾಗಿಲ್ಲವೆಂದು ಮಾತ್ರ ಅಧಿಕೃತ ವಲಯಗಳಲ್ಲಿ ಹೇಳಲಾಗುತ್ತಿದೆ

ನೈಜಾಮರ ಮಾತು ಕತೆ ಗೋಪ್ಯವಾಗಿಡಲಾಗಿದೆ

ಏತನ್ಮಧ್ಯೆ ದಹಲಿಯಲ್ಲಿ ನೈಜಾಂ ಸರ್ಕಾರದ ಏಜಂಟ್ ಜನರಲ್ಲಾಗಿರುವ ನವಾಬ್ ಜೈನ್‌ಯಾರ್‌ಜಂಗ್ ರವರು ಈ ದಿನ ಇಲ್ಲಿಗೆ ಬಂದು ನೈಜಾಮರೊಡನೆ ನಡಸಿರುವ ಮಾತು ಕತೆಗಳನ್ನು ಅತಿ ಗೋಪ್ಯವಾಗಿಡಲಾಗಿದೆ

ಆದರೆ ಈ ಮಾತ ಕತೆಗಳು ಇನ್ನೂ ಮುಗಿದಿಲ್ಲವೆಂದೂ ನಾಳೆ ಮತ್ತೆ ಮಾತು ಕತೆಗಳು ನಡಯಲವೆಯಂದೂ ಗೊತ್ತಾಗಿದೆ

ಪ್ರಧಾನ ಮಂತ್ರಿ ಲಾಯಕ್ ಆಲಿಯವ[illegible]

...ಯದಲ್ಲಿ ನವಾಬ್ ಜೈನ್‌ಯಾರ್‌ಜಂಗ್ ಹೈದರಾಬಾದ್ ಸೇನಾ ನಾಯಕ ಎಡ್ರೂಸ್, ಪೋಲೀಸ್ ಮುಖ್ಯಾಧಿಕಾರಿ ನವಾಬ್ ದೀನ್‌ಯಾರ್‌ಜಂಗ್ ಸಹ ಇದ್ದುದಾಗಿ ಗೊತ್ತಾಗಿದೆ

ಹೈದರಾಬಾದ್ ಪರಿಸ್ಥಿತಿ ವಿಷಮವಾಗಿದೆ

ಪ್ರಧಾನ ಮಂತ್ರಿ ಲಾಯಕ್ ಆಲಿಯವರು ರಾಜಿನಾಮೆ ನಲ್ಲಿಸಿದ ಸಮಯದಿಂದ ಸಂಸ್ಥಾನದ ರಾಜಕೀಯ ವಿಷಮಾವಸ್ಥೆಗೇರಿದೆ ಇತ್ತೇಹಾದ್ ಮಜ್ಲಿಸ್ ಪಕ್ಷವನ್ನು ಮಂತ್ರಿ ಮಂಡಲದಲ್ಲಿ ಪ್ರತಿನಿಧಿಸುವ ನಾಲ್ಕು ಜನ ಮಂತ್ರಿಗಳೂ ಸಹ ನೈಜಾಮರ ವರ್ತನೆಯನ್ನು ಪ್ರತಿಭಟಿಸಿ ನೈಜಾಮರಿಗೆ ಪತ್ರ ಬರೆದಿದ್ದಾರೆ ನಿಮ್ನ ವರ್ಗವನ್ನು ಪ್ರತಿನಿಧಿಸುವ ಸಚಿವರೂ ಸಹ ಅವರೊಡನೆ ಕೂಡಿ [illegible] ಪ್ರತಿಬಟನೆ ಸೂಚಿಸಿದ್ದಾರೆ [illegible]ದೊಡನೆ ರಾಜಿ ಮಾಡಿಕೊ

ಸರ್ ಮಿರ್ಜಾರ ವಿಫಲ ಪ್ರಯತ್ನ

ಎ ಪಿ ಐ ದೆಹಲಿ ಆ ೫

ಭಾರತದ ಗೌರ್ನರ್ ಜನರಲ್ ಸಿ ರಾಜಗೋಪಾಲಚಾರ್ಯ, ಪ್ರಧಾನಿ ಪಂಡಿತ ನೆಹರೂ ಮತ್ತು ಸಂಸ್ಥಾನಿ ಇಲಾಖೆಯವರನ್ನು ಕಂಡು ಜೂನ್ ೧೭ರಂದು ಭಾರತ ಸರ್ಕಾರ ಮುಂದಿಟ್ಟಿದ್ದ ಒಪ್ಪಂದವನ್ನು ಪುನರುಜ್ಜೀವನಗೊಳಿಸಲು ಸಾಧ್ಯವೇ ಎಂಬುದನ್ನು ಅರಿತು ಬಿಕ್ಕಟ್ಟನ್ನು ಪರಿಹರಿಸಲು ಪ್ರಯತ್ನಿಸುವಂತೆ ಮಿರ್ಜಾರವರಿಗೆ ನೈಜಾಮರು ಸೂಚಿಸಿದ್ದಾರೆಂದು ಗೊತ್ತಾಗಿದೆ

ಆದರೆ ಈ ಸಂಧಾನವು ಈಗ ವಿಫಲವಾಗಿದೆ. ನೈಜಾಮರೇ ಖುದ್ದಾಗಿ ಭಾರತ ಸರ್ಕಾರದೊಡನೆ ಸಂಧಾನ ನಡೆಸುವುದೊಂದೇ ಈಗ ಉಳಿದಿರುವ ಮಾರ್ಗ.

ದೇಶದಲ್ಲಿ ಉಂಟಾಗಿರುವ ಪುಂಡಾಟಿಕೆ ಮತ್ತು ಅರಾಜಕತೆಯನ್ನು ಕೊನೆಗಾಣಿಸಲು ಭಾರತ ಸರ್ಕಾರದ ಸಹಾಯ ಪಡೆದರೆ ಮಾತ್ರ ನೈಜಾಮರಿಗೆ ರಕ್ಷಣೆಯ ಮಾರ್ಗ ಉಳಿದಿದೆ ಎಂಬ ಅಭಿಪ್ರಾಯ ಮೂಡತೊಡಗಿದೆ.

ಇಂಡಿಯಾ ಸರ್ಕಾರದ ಸಂಸ್ಥಾನೀ ಇಲಾಖೆಯೊಡನೆ ನೈಜಾಮರ ಪರವಾಗಿ ಸರ್ ಮಿರ್ಜಾ ಇಸ್ಮೈಲ್ ಮತ್ತು ದೆಹಲಿಯಲ್ಲಿ ನೈಜಾಮರ ಏಜೆಂಟ್ ಜನರಲ್ ಆಗಿರುವ ನವಾಬ್ ಜೈನ್‌ಯಾರ್ ಜಂಗ್‌ರವರು ನಡೆಸುವ ಮಾತುಕತೆಗಳು ಸಂಪೂರ್ಣವಾಗಿ ಬಹಿರಂಗವಾಗಿಲ್ಲದಿರುವುದಾದರೂ ಹಲಕೆಲವು ವಿವರಗಳು ಹೊರಬಿದ್ದಿವೆ

ಹೈದರಾಬಾದ್ ಮತ್ತು ಭಾರತ ಸರ್ಕಾರಗಳ ಸಂಬಂಧ ದಿನೇ ದಿನೇ ಬಿಗಡಾಯಿಸುತ್ತಿದ್ದುದನ್ನು ಮನಗಂಡು ನೈಜಾಮರು ಸರ್ ಮಿರ್ಜಾ ಇಸ್ಮೈಲ್‌ರವರ ಸಹಕಾರ ಅಪೇಕ್ಷಿಸಿ ಭಾರತ ಸರ್ಕಾರದೊಡನೆ ಸಂಧಾನ ನಡಸುವಂತೆ ಕೇಳಿಕೊಂಡರೆಂದು ಗೊತ್ತಾಗಿದೆ

ಸರ್ ಮಿರ್ಜಾರವರು ಈ ಕರೆಗೆ ಒಗೊಟ್ಟು ಜೂನ್ ೧೭ರ ಒ[illegible] ಮೇಲೆ ಸಂಧಾನ ನಡೆಸ-

ಯಾ ಸರ್ಕಾರ ಮುಂದಿಟ್ಟ ಒಪ್ಪಂದವನ್ನು ಈಗ ಅಂಗೀಕರಿಸಲು ಸಾಧ್ಯವೇ ಇಲ್ಲವೆಂದೂ ಹೈದರಾಬಾದಿನಲ್ಲಿ ಹಾಲಿ ಇರುವ ಸರ್ಕಾರದ ಬಗ್ಗೆ ಯಾವರೀತಿಯ ಔದಾರ್ಯ ತೋರಲು ಸಾಧ್ಯವಿಲ್ಲವೆಂದು ಹೇಳಿಬಿಟ್ಟುದಾಗಿ ಗೊತ್ತಾಗಿದೆ

★ ಗವರ್ನರ್ ಜನರಲ್ ರಾಜಾಜಿಯವರೂ ಸಹ ಸರ್ದಾರ್ ಪಟೇಲರು ಹೇಳಿದ ಮಾತನ್ನೇ ಒತ್ತಿಹೇಳಿ ನೈಜಾಮರು ತಮ್ಮ ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಸೇರಿಸದೇ ಹೋದರೆ ಸಂಧಾನದ ಮಾತೇ ಇಲ್ಲವೆಂದು ಹೇಳಿಬಿಟ್ಟಿದ್ದಾಗಿ ಗೊತ್ತಾಗಿದೆ

★ ಹೈದರಾಬಾದು ಭಾರತಕ್ಕೆ ಸೇರಬೇಕು ಸಂಸ್ಥಾನದಲ್ಲಿ ಜನಾಬ್ದಾರಿ

106
1948
WORLD NEWS PAPER EXIBITION
...VALLI 577524
Shimoga Dist, Karnataka State, INDIA

ಹೈ॥ ಮಂತ್ರಿಮಂಡಲದೊಡನೆ ನೈಜಾಮರ ಭಿನ್ನಾಭಿಪ್ರಾಯ

* ಪ್ರಧಾನ ಮಂತ್ರಿ ಲಾಯಕ್ ಆಲಿಯವರ ರಾಜಿನಾಮೆ! ಪರಿಸ್ಥಿತಿ ವಿಷಮಾವಸ್ಥೆ ಮುಟ್ಟಿದೆ! *

Regd. No M 4605 ॥ ವಂದೇ ಮಾತರಂ ॥ Phone No 2587

ಸಂಪಾದಕ:- ಹೆಚ್. ಕೆ. ವೀರಣ್ಣಗೌಡ— [ಬೆಲೆ ೧ ಆ

ಸಂಪುಟ ೯] ಬೆಂಗಳೂರು ಶುಕ್ರವಾರ ೬ನೇ ಆಗಸ್ಟ್ ೧೯೪೮ [ಸಂಚಿಕೆ ೨೧೫

—★—

(ಎ ಪಿ ಐ) ಹೈದರಾಬಾದ್ ೫

ಹೈದರಾಬಾದಿನ ಪ್ರಧಾನ ಮಂತ್ರಿ ಲಾಯಕ್ ಆಲಿಯವರು ಈ ರಾತ್ರಿ ನೈಜಾಮರಿಗೆ ತಮ್ಮ ರಾಜೀನಾಮೆ ಪತ್ರ ಒಪ್ಪಿಸಿದ್ದಾರೆಂದು ಗೊತ್ತಾಗಿದೆ.

ಸರ್ ಮಿರ್ಜಾ ಇಸ್ಮೇಲರವರ ಮೂಲಕ ನೈಜಾಮರು ಭಾರತ ಸರ್ಕಾರದೊಡನೆ ರಾಜಿಮಾಡಿಕೊಳ್ಳಲು ಪ್ರಯತ್ನಿಸಿದುದೇ ಈ ರಾಜೀನಾಮೆಗೆ ಕಾರಣವೆಂದು ಗೊತ್ತಾಗಿದೆ. ನೈಜಾಮರ ಈ ವರ್ತನೆಯಿಂದ ಮಂತ್ರಿ ಮಂಡಲದ ಅಭಿಪ್ರಾಯವನ್ನು ಬದಿಗೊತ್ತಿದಂತಾಗಿದೆಯೆಂದು ಲಾಯಕ್ ಆಲಿಯವರು ತಮ್ಮ ರಾಜೀನಾಮೆ ಪತ್ರದಲ್ಲಿ ಅಭಿಪ್ರಾಯ ಪಟ್ಟಿರುವುದಾಗಿಯೂ ಗೊತ್ತಾಗಿದೆ.

ಈ ಸುದ್ದಿ ಅಧಿಕೃತವಾಗಿ ಇನ್ನೂ ಪ್ರಕಟವಾಗಿಲ್ಲ ಆದರೆ ಲಾಯಕ್ ಆಲಿಯವರ ರಾಜಿನಾಮೆ ಇನ್ನೂ ಅಂಗೀಕೃತವಾಗಿಲ್ಲವೆಂದು ಮಾತ್ರ ಅಧಿಕೃತ ವಲಯಗಳಲ್ಲಿ ಹೇಳಲಾಗುತ್ತಿದೆ

ನೈಜಾಮರ ಮಾತು ಕತೆ ಗೋಪ್ಯವಾಗಿಡಲಾಗಿದೆ

ಏತನ್ಮಧ್ಯೆ ದಹಲಿಯಲ್ಲಿ ನೈಜಾಂ ಸರ್ಕಾರದ ಏಜಂಟ್ ಜನರಲ್ಲಾಗಿರುವ ನವಾಬ್ ಜೈನ್‌ಯಾರ್‌ಜಂಗ್ ರ‍ವರು ಈ ದಿನ ಇಲ್ಲಿಗೆ ಬಂದು ನೈಜಾಮರೊಡನೆ ನಡಸಿರುವ ಮಾತು ಕತೆಗಳನ್ನು ಅತಿ ಗೋಪ್ಯವಾಗಿಡಲಾಗಿದೆ

ಆದರೆ ಈ ಮಾತ ಕತೆಗಳು ಇನ್ನೂ ಮುಗಿದಿಲ್ಲವೆಂದೂ ನಾಳೆ ಮತ್ತೆ ಮಾತು ಕತೆಗಳು ನಡೆಯಲಿವೆಯೆಂದೂ ಗೊತ್ತಾಗಿದೆ

...ಯಚಲ್ಲಿ ನವಾಬ್ ಜೈನ್‌ಯಾರ್‌ಜಂಗ್ ಹೈದರಾಬಾದ್ ಸೇನಾ ನಾಯಕ ಎಡ್ರೂಸ್, ಪೋಲೀಸ್ ಮುಖ್ಯಾಧಿಕಾರಿ ನವಾಬ್ ದೀನ್‌ಯಾರ್‌ಜಂಗ್ ಸಹ ಇದ್ದುದಾಗಿ ಗೊತ್ತಾಗಿದೆ

ಹೈದರಾಬಾದ್ ಪರಿಸ್ಥಿತಿ ವಿಷಮವಾಗಿದೆ

ಪ್ರಧಾನ ಮಂತ್ರಿ ಲಾಯಕ್ ಆಲಿಯವರು ರಾಜಿನಾಮೆ ಸಲ್ಲಿಸಿದ ಸಮಯದಿಂದ ಸಂಸ್ಥಾನದ ರಾಜಕೀಯ ವಿಷಮಾವಸ್ಥೆಗೇರಿದೆ ಇತ್ತೇಹಾದ್ ಮಜ್ಲಿಸ್ ಪಕ್ಷವನ್ನು ಮಂತ್ರಿ ಮಂಡಲದಲ್ಲಿ ಪ್ರತಿನಿಧಿಸುವ ನಾಲ್ಕು ಜನ ಮಂತ್ರಿಗಳೂ ಸಹ ನೈಜಾಮರ ವರ್ತನೆಯನ್ನು ಪ್ರತಿಭಟಿಸಿ ನೈಜಾಮರಿಗೆ ಪತ್ರ ಬರೆದಿದ್ದಾರೆ ನಿಮ್ನ ವರ್ಗವನ್ನು ಪ್ರತಿನಿಧಿಸುವ ಸಚಿವರೂ ಸಹ ... ... ಸೂಚಿಸಿದಾರೆ

ಹತ್ತಿ ಬೆಲೆ ನಿರ್ಧಾರದ ಬಗ್ಗೆ ವರ್ತಕರೊಡನೆ ಚರ್ಚೆ ಅಗತ್ಯ

ಶ್ರೀ ಆರ್. ಜಿ. ಸಾರೈಯಾರವರ ಸೂಚನೆ

(ಎ. ಪಿ. ಐ) ಮುಂಬಯಿ ೫

ಹತ್ತಿ ಬೆಲೆ ಮೇಲೆ ಹತೋಟಿ ವಿಧಿಸುವುದರಿಂದ ಹತ್ತಿ ಬೆಳೆಯುವವರಿಗೆ ಬಹಳ ತೊಂದರೆಯಾಗುವುದೆಂದು ಈಸ್ಟ್ ಇಂಡಿಯನ್ ಕಾಟನ್ ಅಸೋಸಿಯೇಷನ್ನಿನ ವ್ಯವಸ್ಥಾಪಕ ಸಮಿತಿಯು ಕೇಂದ್ರ ಸರ್ಕಾರಕ್ಕೆ ತಂತಿ ಕಳುಹಿ...

ಬರ್ಲಿನ್ನಿನಲ್ಲಿ ರಷ್ಯನರ ಮುನ್ನೆಚ್ಚರಿಕೆ ಕ್ರಮ

ಬರ್ಲಿನ್ ೪

ಬರ್ಲಿನ್ನಿನ ಪರಿಸ್ಥಿತಿ ತೀರಾ ಹದಗೆಟ್ಟಿರುವುದರಿಂದ ರಷ್ಯಾದವರು ಹಲವು ಮುಂಜಾಗರೂಕತೆಯ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ರಷ್ಯನ್ ಸೈನ್ಯವಿರುವ ಕೇಂದ್ರ ಕಚೇರಿಯ ಸುತ್ತಲೂ ರಸ್ತೆಗಳಲ್ಲಿ ಜನರ ಧಾಳಿಯನ್ನು ತಡೆಯಲು ತಂತಿಯ ಬೇಲಿಗಳನ್ನು ಹರಡಲಾಗಿದೆ ಅಲ್ಲದೆ ಮುಖ್ಯ ಮುಖ್ಯ ಪ್ರದೇಶಗಳಲ್ಲಿ ಸೈನ್ಯದ ಕಾವಲನ್ನು ಬಲಪಡಿಸಲಾಗಿದೆ ಜನರು ಸೈನ್ಯದ ಕೇಂದ್ರಕ್ಕೆ ಹತ್ತಿ...

ಸರ್ ಮಿರ್ಜಾರ ವಿಫಲ ಪ್ರಯತ್ನ

ಎ. ಪಿ. ಐ ದೆಹಲಿ ೫

ಭಾರತದ ಗೌರ್ನರ್ ಜನರಲ್ ಸಿ. ರಾಜಗೋಪಾಲಾಚಾರಿ, ಪ್ರಧಾನ ಮಂತ್ರಿ ನೆಹರೂ ಮತ್ತು ಸಂಸ್ಥಾನ ಇಲಾಖೆಯವರನ್ನು ಕಂಡು ಜೂನ್ ೧೬ರಂದು ಭಾರತ ಸರ್ಕಾರ ಮುಂದಿಟ್ಟಿದ್ದ ಒಪ್ಪಂದವನ್ನು ಪುನರುಜ್ಜೀವನಗೊಳಿಸಲು ಸಾಧ್ಯವೇ ಎಂಬುದನ್ನು ಅರಿತು ಬಿಕ್ಕಟ್ಟನ್ನು ಪರಿಹರಿಸಲು ಪ್ರಯತ್ನಿಸುವಂತೆ ಮಿರ್ಜಾರವರಿಗೆ ನೈಜಾಮರು ಸೂಚಿಸಿದ್ದಾರೆಂದು ಗೊತ್ತಾಗಿದೆ

ಆದರೆ ಈ ಸಂಧಾನವು ಈಗ ವಿಫಲವಾಗಿದೆ. ನೈಜಾಮರೇ ಖುದ್ದಾಗಿ ಭಾರತ ಸರ್ಕಾರದೊಡನೆ ಸಂಧಾನ ನಡೆಸುವುದೊಂದೇ ಈಗ ಉಳಿದಿರುವ ಮಾರ್ಗ.

ದೇಶದಲ್ಲಿ ಉಂಟಾಗಿರುವ ಗೊಂಡಾಟಿಕೆ ಮತ್ತು ಅರಾಜಕತೆಯನ್ನು ಕೊನೆಗಾಣಿಸಲು ಭಾರತ ಸರ್ಕಾರದ ಸಹಾಯ ಪಡೆದರೆ ಮಾತ್ರ ನೈಜಾಮರಿಗೆ ರಕ್ಷಣೆಯ ಮಾರ್ಗ ಉಳಿದಿದೆ ಎಂಬ ಅಭಿಪ್ರಾಯ ಮೂಡತೊಡಗಿದೆ.

ಇಂಡಿಯಾ ಸರ್ಕಾರದ ಸಂಸ್ಥಾನೀ ಇಲಾಖೆಯೊಡನೆ ನೈಜಾಮರ ಪರವಾಗಿ ಸರ್ ಮಿರ್ಜಾ ಇಸ್ಮೈಲ್ ಮತ್ತು ದೆಹಲಿಯಲ್ಲಿ ನೈಜಾಮರ ಏಜೆಂಟ್ ಜನರಲ್ ಆಗಿರುವ ನವಾಬ್ ಜೈನ್‌ಯಾರ್ ಜಂಗ್‌ರವರು ನಡೆಸುವ ಮಾತುಕತೆಗಳು ಸಂಪೂರ್ಣವಾಗಿ ಬಹಿರಂಗವಾಗಿಲ್ಲದಿರುವುದಾದರೂ ಹಲಕೆಲವು ವಿವರಗಳು ಹೊರಬಿದ್ದಿವೆ

ಹೈದರಾಬಾದ್ ಮತ್ತು ಭಾರತ ಸರ್ಕಾರಗಳ ಸಂಬಂಧ ದಿನೇ ದಿನೇ ಬಿಗಡಾಯಿಸುತ್ತಿದ್ದುದನ್ನು ಮನಗಂಡು ನೈಜಾಮರು ಸರ್ ಮಿರ್ಜಾ ಇಸ್ಮೈಲ್‌ರವರ ಸಹಕಾರ ಅಪೇಕ್ಷಿಸಿ ಭಾರತ ಸರ್ಕಾರದೊಡನೆ ಸಂಧಾನ ನಡೆಸುವಂತೆ ಕೇಳಿಕೊಂಡರೆಂದು ಗೊತ್ತಾಗಿದೆ

ಸರ್ ಮಿರ್ಜಾರವರು ಈ ಕರೆಗೆ ಒಗೊಟ್ಟು ಜೂನ್ ೧೬ರ ಒಪ್ಪಂದ ... ಸರ್ಕಾರದ

...ಯಾ ಸರ್ಕಾರ ಮುಂದಿಟ್ಟ ಒಪ್ಪಂದವನ್ನು ಈಗ ಅಂಗೀಕರಿಸಲು ಸಾಧ್ಯವೇ ಇಲ್ಲವೆಂದೂ ಹೈದರಾಬಾದಿನಲ್ಲಿ ಹಾಲಿ ಇರುವ ಸರ್ಕಾರದ ಬಗ್ಗೆ ಯಾವರೀತಿಯ ಔದಾರ್ಯ ತೋರಲು ಸಾಧ್ಯವಿಲ್ಲವೆಂದು ಹೇಳಿಬಿಟ್ಟುದಾಗಿ ಗೊತ್ತಾಗಿದೆ

★ ಗವರ್ನರ್ ಜನರಲ್ ರಾಜಾಜಿಯವರೂ ಸಹ ಸರ್ದಾರ್ ಪಟೇಲರು ಹೇಳಿದ ಮಾತನ್ನೇ ಒತ್ತಿಹೇಳಿ ನೈಜಾಮರು ತಮ್ಮ ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಸೇರಿಸದೇ ಹೋದರೆ ಸಂಧಾನದ ಮಾತೇ ಇಲ್ಲವೆಂದು ಹೇಳಿಬಿಟ್ಟುದ್ದಾಗಿ ಗೊತ್ತಾಗಿದೆ

★ ಹೈದರಾಬಾದು ಭಾರತಕ್ಕೆ ಸೇರಬೇಕು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಜಾರಿಯಾಗಬೇಕು ಮತ್ತು...

WORLD NEWS PAPER EXIBITION
MEGARAVALLI 577524,
Shimoga Dist, Karnataka State, INDIA

ಪೌರವಾಣಿ

ರಾಷ್ಟ್ರೀಯ ದಿನ ಪತ್ರಿಕೆ

ಸಂಪಾದಕರು— ಹಾ ಶ್ರೀ ದೊರೆಸ್ವಾಮಿ

ಸಂಪುಟ ೧]   ೧೦-೯-೪೭ನೇ ಬುಧವಾರ   [ಸಂಚಿಕೆ ೩

ಮಹಾರಾಜರ ಘೋಷಣೆ ತೃಪ್ತಿಕರವಾಗಿಲ್ಲ !

ಸತ್ಯಾಗ್ರಹ ಮುಂದುವರಿಯುವುದು ಅನಿವಾರ್ಯ !!

ಪ್ರಭುಘೋಷಣೆಯಲ್ಲೂ ಸರ್ ಆರ್ಕಾಟರ ಕೈವಾಡ !!!

ಮೈಸೂರು ಕಾಂಗ್ರೆಸ್ಸು ಜನ್ಮ ತಾಳಿದ್ದೇ ಮೈಸೂರಿನಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದಕ್ಕಾಗಿ ಅದರ ಸತತ ಹೋರಾಟದ ಪರಿಣಾಮವಾಗಿ ಈ ಗುರಿಯನ್ನು ಕಾರ್ಯಗತ ಮಾಡುವ ಘೋಷಣೆಯನ್ನು ಮಹಾರಾಜರು ಮಾಡಿದ್ದಾರೆ ಸ್ಪಷ್ಟವಾಗಿ ಹೇಳಬೇಕಾದರೆ ಪ್ರಭುಗಳು ದಯಪಾಲಿಸಿದ್ದಾರೆ ಎನ್ನುವುದಕ್ಕಿಂತಲೂ, ಪ್ರಜೆಗಳು ತಮ್ಮ ಅರ್ಹತೆ ವ್ಯಕ್ತಪಡಿಸಿ ಪಡೆದಿದ್ದಾರೆ ಎನ್ನುವುದೇ ನಿಜಕ್ಕೂ ಸರಿ ಹಾಗಲ್ಲವಾದರೆ ಪ್ರಜೆಗಳು ಜವಾಬ್ದಾರಿ ಸರ್ಕಾರ ಪಡೆಯಲು ಅರ್ಹರೇ ಎಂಬುದನ್ನು ಪ್ರಭುತ್ವ ಅರಿಯಲು ಕೈಗೊಂಡ ನೀತಿ ಸ್ಥಿರವೇ ಎಂಬ ಪ್ರಶ್ನೆ ಸಹಜವಾಗಿ ತಲೆದೋರುತ್ತದೆ ಜನತೆಯನ್ನು ರೊಚ್ಚಿಗೆಬ್ಬಿಸಿ ಕದನಕ್ಕೆ ಕರೆಯಲು ಕರಮ ಅಹಿಂಸಾಯುತ ನಿರಪರಾಧಿಗಳನ್ನು ಗುಂಡಿನ ಛಾಯೆಗೆ ಕೊಟ್ಟು ಉಬ್ಬಸವಡಿಸಿ, ಜನತೆ ಜವಾಬ್ದಾರಿ ಸರ್ಕಾರ ಪಡೆಯಲು ಅರ್ಹರಾಗಿದ್ದಾರೆಯೇ ಎಂಬುದನ್ನು ಹೊಸ ರೀತಿಯಲ್ಲಿ ನಿರ್ಧರಿಸಲು ಒಗೆದ ಮಂತ್ರಿಮುಖ್ಯ ಸರ್ ಆರ್ಕಾಟರ ರಾಜಕೀಯ ನೈಪುಣ್ಯ ಪ್ರಪಂಚಕ್ಕೇ ಹೊಸ ಮಾದರಿಯದಾಗಿದೆ. ರಾಜಕೀಯಪ್ರಜ್ಞೆ ದಿನೇದಿನೇ ದೇಶದಲ್ಲಿ ಬೆಳೆಯುತ್ತಿರುವಾಗ ಕಾಲಧರ್ಮವನ್ನರಿಯಲು ಅಸಮರ್ಥರಾದ ಇಂತಹ ರಾಜಕೀಯ ಸಲಹೆಗಾರರನ್ನು ನೋಡಿ ಪ್ರಪಂಚದ ಜನ ನಗಬೇಕೋ ಅಳಬೇಕೋ ತಿಳಿಯದಾಗಿದೆ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದಾಗಿ ಮಹಾರಾಜರು ಘೋಷಣೆ ಹೊರಡಿಸಿರುವುದನ್ನು ಕುರಿತು ಹೇಳಿದಂತಾಯಿತು ಇನ್ನು ಮಹಾರಾಜರ ಘೋಷಣೆಯಲ್ಲಿ ಅಡಕವಾಗಿರುವ ಸಲಹಾ ಸಮಿತಿಯ ಜೀವದಾನದ ವಿಚಾರ

ಸಲಹಾ ಸಮಿತಿಯಲ್ಲಿರುವ ಜನ ಸಜ್ಜನರು, ಧರ್ಮಾತ್ಮರು, ಮೈಸೂರಿನ ಮಕ್ಕಳು ಇದೆಲ್ಲಾ ನಿಜ ಆದರೆ ಅವರ್‍ಯಾರೂ ಮೈಸೂರಿನ ಜನತೆಯನ್ನು ಪ್ರತಿನಿಧಿಸುವ ವ್ಯಕ್ತಿಗಳೂ ಅಲ್ಲ ರಾಜಕೀಯ ನೇತೃಗಳೂ ಅಲ್ಲ ಅವರು ಸರ್ ಆರ್ಕಾಟರ ಸರ್ಕಾರದ ಕೃಪಾಪೋಷಿತರು [ಸರ್ ಆರ್ಕಾಟರ ಪ್ರಸ್ತಾಪ ಪದೇ ಪದೇ ಮಾಡುವುದು ವ್ಯಕ್ತಿದ್ವೇಷ ಸೂಚಕವೆಂದು ಎಲ್ಲಿ ಅರ್ಥಮಾಡಿಯಾರೋ ಎಂಬ ಭಯ ನಮಗಿದೆ ಆದರೆ ಇಂದಿನ ಮೈಸೂರು ಸರ್ಕಾರ ಸೂತ್ರ ನಡೆಯುವುದೆಲ್ಲ ಈ ಒಬ್ಬರೇ ವ್ಯಕ್ತಿಗಳ ಸೂತ್ರ ಅವರ ಕೈವಾಡದಿಂದ ಆದ್ದರಿಂದ ಅವರ ಪ್ರಸ್ತಾಪ ಅನಿವಾರ್ಯ]

ಈ ಸಲಹಾ ಸಮಿತಿಯವರು ರಾಜ್ಯಾಂಗ ರಚಿಸಿದರೇನು ? ಭೇದೋಪಾಯ ಪೂರ್ಣ ಬ್ರಿಟಿಷ್ ಸರ್ಕಾರದ ಕೃಪೆಗೊಂಡ ಸರ್ ಆರ್ಕಾಟರೇ ಅದನ್ನು ರಚಿಸಿದರೇನು ಆದರಲ್ಲಿ ಪ್ರಗತಿಪರ ಭಾವನೆಗಳಿಗೆ ಎಡೆಯಲ್ಲಿದೆ ? ಭಾರತ ರಾಜ್ಯಾಂಗ ಸಭೆಯ ಒಳಗೆ ಪ್ರಿನ್ಸಸ್ ಚೇಂಬರ್ ಸಭೆಯಲ್ಲಿ ಮಾತನಾಡುತ್ತಾ ಸಂಸ್ಥಾನಾಧೀಶರು ಸ್ವತಂತ್ರ ಭಾರತ ಪ್ರಜಾನಿಯಮಸ್ಸಿನ ಆಡಳಿತ ಸರಾಗವಾಗಿ ನಡೆಯಲು ಅಡ್ಡಿ ತಂದೊಡ್ಡುವ checks & breaks ಗಳಾಗಬೇಕೆಂದು ಬಹಿರಂಗವಾಗಿ ನುಡಿದಿರುವುದನ್ನು ಯಾರೂ ಮರೆಯಲಾಗದು ಇಂತಹ checks & breaks ಹಾಕಬಲ್ಲ ಸಾಮರ್ಥ್ಯ ಶ್ರೀ ಆರ್ಕಾಟರಿಗೆ ಇದೆ ಅವರು ಶಕ್ತರು ಎಂಬುದನ್ನು ನಾವು ಮನಗಂಡಿದ್ದೇವೆ ಈ checks & breaks ನಿಂದೊಡಗೂಡಿದ ರಾಜ್ಯಾಂಗ ರಚನೆಮಾಡಿ ಮೈಸೂರಿನ ಪ್ರಜೆಗಳ ಮೇಲೆ ಹೇರುವ ಮಸಲತ್ತನ್ನು ಸರ್ ಆರ್ಕಾಟರು ಮಾಡಿದರು ಅದು ಫಲಿಸಲಿಲ್ಲವಾಗಿ ಮಹಾರಾಜರನ್ನು ಪ್ರೇರೇಪಿಸಿ ಅವರ ಬಾಯಿಂದಲೂ ಅದೇ ಪಲ್ಲವಿಹಾಡಿಸಲು ಯತ್ನಮಾಡಿ ಇಂದು ಸಫಲರಾಗಿದ್ದಾರೆ.

ಈ ಘೋಷಣೆ ಒಂದು ಕೈಯಲ್ಲಿ ಕೊಟ್ಟುದನ್ನು ಮತ್ತೊಂದು ಕೈಯಿಂದ ಕಿತ್ತುಕೊಳ್ಳುವ ದತ್ತಾಪಹಾರ ನೀತಿಯನ್ನು ಸರಿದೂಗುತ್ತದೆಂದು ವಿಷಾದದಿಂದ ಹೇಳಬೇಕಾಗಿದೆ

ಬಾಲ ತೋರಿಸಿದ್ದೇವೆ: ತಲೆ ಹೇಗಿರಬಹುದು ಊಹಿಸಿ

ಇದುವರೆಗೂ ಸುಪ್ತಾವಸ್ಥೆಯಲ್ಲಿದ್ದ ಮೈಸೂರು ರಾಜ್ಯಾಂಗ ಸಲಹಾ ಸಮಿತಿ ಎಚ್ಚತ್ತುಕೊಂಡು ಕೆಲಸ ಆರಂಭಿಸಿರುವಂತಿದೆ. ಇಷ್ಟು ದಿನದ ಸಮಾವೇಶಗಳು, ಆಲೋಚನೆಗಳ ಪರಿಣಾಮವಾಗಿ ಸುಧಾರಣಾರೀತ್ಯಾ ಸ್ಥಾಪಿತವಾಗಬಹುದಾದ ಮಂತ್ರಿಮಂಡಲಕ್ಕೆ ಸಾಮೂಹಿಕ ಜವಾಬ್ದಾರಿ ಇರಬೇಕು ಎಂದು ಶಿಫಾರಸು ಮಾಡಿದೆ. ಅಂದಮೇಲೆ ಸರ್ ಆರ್ಕಾಟರು ಅವರ ನಾಮಕರಣ ಶಿಶುವಾದ ಸಲಹಾ ಸಮಿತಿ ರಚಿಸಬಹುದಾದ ಜವಾಬ್ದಾರಿ ಸರ್ಕಾರದ ರಾಜ್ಯಾಂಗ ಸ್ವರೂಪ ಹೇಗಿರಬಹುದೆಂಬುದನ್ನು ಮನಗಂಡು ಮೈಸೂರಿನ ಪ್ರಜೆ ಅವರೊಡನೆ ಸಹಕರಿಸಲಿ ಎಂಬುದೇ ಅವರ ಅಭಿಪ್ರಾಯ ಸ್ವತಂತ್ರ ಆಲೋಚನೆ ಕೂಡ ಮಾಡದೆ ಬಾಲ ನೋಡಿದ ಮಾತ್ರಕ್ಕೆ ಇಲಿ ಇಂತಹುದೇ ಇರುತ್ತದೆ ಎಂಬುದನ್ನು ಹೇಳುವಷ್ಟು ಮೂರ್ಖರು ಮೈಸೂರಿನ ಜನ ಎಂದು ತಿಳಿದಿರುವಂತಿದೆ ನಮ್ಮ ದಿವಾನ್ ಸಾಹೇಬರು

ಮೈಸೂರು ಸರ್ಕಾರದ ಸಮಜಾಯಿಷಿ ಕೇಳಲಾಗಿದೆ

ರಾಜ್ಯಾಂಗ ಸಭೆಯ ಅಧ್ಯಕ್ಷ ಶ್ರೀ ರಾಜೇಂದ್ರ ಪ್ರಸಾದರು ಮೈಸೂರ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರೊಬ್ಬರಿಂದ ಒಂದು ತಕರಾರು ಅರ್ಜಿ ಬಂದಿರುವುದರಿಂದ ರಾಜ್ಯಾಂಗ ಸಭೆಗೆ ಮೈಸೂರಿನಿಂದ ಆರಿಸಲ್ಪಟ್ಟಿರುವ ನಾಲ್ಕುಮಂದಿ ಚುನಾಯಿತ ಪ್ರತಿನಿಧಿಗಳ ಆಯ್ಕೆಯನ್ನು ಏಕೆ ಕಾನೂನುಬಾಹಿರವೆಂದು ಘೋಷಣೆ ಮಾಡಬಾರದೆಂದು ಮೈಸೂರು ಸರ್ಕಾರವನ್ನು ಸಮಜಾಯಿಷಿ ಕೇಳಿದ್ದಾರೆ

ಕಾಂ|| ಅಧ್ಯಕ್ಷರಿಗೆ ಅಪಮಾನ !

ಸಿದ್ದಯ್ಯನಲ್ಲಿದ್ದ ಅಧ್ಯಕ್ಷ ಶ್ರೀ ಕೆ. ಸಿ ರೆಡ್ಡಿಯವರನ್ನು ಮಧ್ಯರಾತ್ರಿಯಲ್ಲಿ ಎಚ್ಚರಿಸಲು ಹೋದ್ರಾಗ ಅವರು ಏಳಲು ಸಾಧ್ಯವಿಲ್ಲವೆಂದು ಹೇಳಲಾಗಿ ಅವರನ್ನು ಅನಾಮತ್ತು ಎತ್ತಿಕೊಂಡುಹೋಗಿ ಪೋಲೀಸ್ ಕಾರಿನಲ್ಲಿ ಮಲಗಿಸಲಾಯಿತು. ಜಿಲ್ಲಾಧಿಕಾರಿಗಳಾದ ಶ್ರೀ ಎ ಸಿ ನಿರ್ವಾಣೇಗೌಡರು ಮತ್ತು ಡಿ ಎಸ್ ಪಿ ಗಳಾದ ಶ್ರೀ ಬಾಬುರೆಡ್ಡಿ ಇವರುಗಳ ನೇತೃತ್ವದಲ್ಲಿಯೇ ಈ ಕೃತ್ಯ ನಡೆಯಿತು

ಶ್ರೀಗಳಾದ ಭಾಷ್ಯಂ, ಟಿ ಸುಬ್ರಹ್ಮಣ್ಯ, ಎ ಜಿ. ರಾಮಚಂದ್ರ ರಾವ್, ಕೆ ಆರ್ ಮಾಧವರಾವ್, ಕುಮಾರನ್, ಕಾಮರಾಜಯ್ಯಂಗಾರ್, ಅನಂತರಾಮಯ್ಯ, ಕೆ ರಾಮಸ್ವಾಮಿ, ಸಿದ್ದಪ್ಪನಹಳ್ಳಿ ಕೃಷ್ಣ ಶರ್ಮ, ಮುತ್ತಿಬ್ಬರನ್ನು ಹಾಸನ ಜೈಲಿಗೆ ವರ್ಗಾಯಿಸಲಾಯಿತು.

ಶ್ರೀಗಳಾದ ಕೆ ಸಿ ರೆಡ್ಡಿ ಎಸ್ ಚನ್ನಯ್ಯ, ಎಚ್. ಸಿದ್ದಯ್ಯ, ಎ ಜಿ ಬಂದೀಗೌಡ, ರಾಜಶೇಖರ ಹಿರೇಮಠ ಟಿ ಸಿದ್ದಲಿಂಗಯ್ಯ ನವರೇ ಮೊದಲಾದವರು ಚಿಕ್ಕಮಗಳೂರು ಜೈಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ

ಆದರೆ ಜನ ಇದನ್ನು ಒಪ್ಪುವ ಹಾಗಿಲ್ಲ ಜನನಾಯಕರಾದರೂ ಈ ಅಭಿಪ್ರಾಯವನ್ನು ತಳ್ಳಿಹಾಕತಕ್ಕವರೇ

ಸರ್ಕಾರ ಕುತ್ತಿಗೆಕ್ಕಾಗಿ ಸೆರೆಮನೆಯೊಳಕ್ಕೆ ಸಂಧಾನ ಚತುರರೆನಿಸಿಕೊಂಡ ಶ್ರೀ ಗುರುಪಾದಶೆಟ್ಟಿಗಳನ್ನೋ, ಮನ್ನಾಜಿರಾಯರನ್ನೋ ಕಳಿಸಿ ಸಂಧಾನ, ಬಿಡುಗಡೆಗಳ ಆಸೆ ತೋರುವ ನಾಟಕವಾಡುವುದು ಬೇಡ ಕಾಂಗ್ರೆಸ್ ನಾಯಕರು ಸೌಜನ್ಯ ತೋರಿ ಮಾತುಕತೆಗೆ ಬಂದವರನ್ನು ಒಮ್ಮೆಗೇ ಅಪ್ರಿಯ ಮಾತುಗಳನ್ನಾಡಿ ಕಳಿಸುವುದು ಹೇಗೆಂದು ಮೀನಮೇಷ ನೋಡುವವರಾದರೂ ಕಾಂಗ್ರೆಸ್ ಅಲಸಗಾರರು ಇವರ ಮೇಲೆ ಎರಗಿಬೀಳುವುದರಲ್ಲಿ ಸಂದೇಹವಿಲ್ಲ ಸತ್ಯಾಗ್ರಹ ಸಮರ ಮುಂದುವರೆಯಲಿ ಇಲ್ಲವೇ ರಾಜ್ಯಾಂಗ ರಚನಾ ಸಭೆಯ ಬಗ್ಗೆ ಪ್ರಭುಘೋಷಣೆ ಹೊರಬೀಳಲಿ ಇದಾಗದೆ ಬರಿಯ ಮಾತುಕತೆಗಳಿಗೆ ಕಾಂಗ್ರೆಸ್ ಮರುಳಾಗುವ ಕಾಲ ಆಗಿಹೋಯಿತು

ದೇಶಕ್ಷೋಭೆ ಅಡಗಿ, ಜನಕ್ಕೆ ನಿಜವಾದ ಅಧಿಕಾರ ಕರಗತವಾಗಬೇಕಿದ್ದರೆ ನಿಜಕ್ಕೂ ಅವಶ್ಯಕ – ಅನಿವಾರ್ಯ ಎಂದು ಮಹಾರಾಜರು ಮನಗಂಡಿದ್ದರೆ ಈಗ ಸರ್ ಆರ್ಕಾಟರಿಂದ ರಚನೆಯಾಗಿರುವ ಈ ಸಲಹಾ ಸಮಿತಿಯನ್ನು ರದ್ದುಮಾಡಿ ಭಾರತ ರಾಜ್ಯಾಂಗ ಸಭೆ ಯಾವ ನಿಯಮಗಳನ್ನು ಅನುಸರಿಸಿ ದೇಶದ ಪ್ರತಿನಿಧಿಗಳನ್ನು ಆರಿಸಿಕೊಂಡಿತೋ ಅದೇ ನಿಯಮಗಳ ಮೇಲೆ ಆರಿಸಿ ಸರ್ವಜನ ಸಮ್ಮತವೂ ದೇಶಹಿತಕಾರಿಯೂ ದೇಶದ ನಿಜವಾದ ಪ್ರಭುಗಳಾದ ಕಾರ್ಮಿಕ, ರೈತ ಮುಂತಾದ ಶೋಷಿತ ಜನಾಂಗ ಉದ್ಧಾರಕವೂ ಆದ ರಾಜ್ಯಾಂಗ ರಚನೆ ಮಾಡಲು ನೆರವಾಗಿ ಮಹಾರಾಜರು ತಮ್ಮ ಪ್ರಜೆಗಳ ವಿಶ್ವಾಸ ಗಳಿಸಲೆಂದು ಆಶಿಸುತ್ತೇವೆ

— ಸಂ

ಸುದ್ದಿ ಸಂಗ್ರಹ

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ತಮ್ಮ ಮುಂದೆ ಬಂದಿದ್ದ ೯ ಸಂಸ್ಥೆಗಳ ಪ್ರತಿನಿಧಿಗಳ ರಾಜೀನಾಮೆಗಳನ್ನು ಪರಿಶೀಲಿಸಿ ಅಂಗೀಕರಿಸಿದರು. ಐದು ಹೊಸ ಸಂಸ್ಥೆಗಳನ್ನು ಅದರೊಳಗೆ ಸೇರಿಸಿಕೊಳ್ಳಲಾಯಿತು

ಇಂಡಿಯಾಕ್ಕೆ ಕ್ಷಿಪ್ರ ಪ್ರಯಾಣದ ಏರ್ಪಾಡು

ಬಿ ಓ ಎ ಸಿ ಪ್ರಯಾಣ ಸಂಸ್ಥೆಯವರು ಲಂಡನ್ನಿನಿಂದ ಕರಾಚಿಗೆ ಬರುವ ದೈನಂದಿನ ಹಾಗೂ ಲಂಡನ್ನಿನಿಂದ ಕೊಲಂಬೋಕ್ಕೆ ವಾರಕ್ಕೊಮ್ಮೆ ಬರುತ್ತಿರುವ ಏರೋಪ್ಲೇನ್ ಪ್ರಯಾಣವನ್ನು ತ್ವರಿತಗೊಳಿಸಲು ಏರ್ಪಾಡು ನಡೆಸುತ್ತಿದ್ದಾರೆ ಈಗಿನ ವಾಯುಮಾರ್ಗ ಬಿಟ್ಟು ಜೇರೆ ದಾರಿಗಳನ್ನು ಹಿಡಿಯುವುದರಿಂದಲೂ ಹೊಸ ಬಗೆಯ ವಿಮಾನಗಳನ್ನು ಉಪಯೋಗಿಸುವುದರಿಂದಲೂ ಈ ಪ್ರಯಾಣ ತ್ವರಿತಗೊಳ್ಳಲು ಸಾಧ್ಯ ಇದರಿಂದಾಗಿ ಲಂಡನ್-ಕೊಲಂಬೋ ಪ್ರಯಾಣ ೨೪ ಗಂಟೆಗಳಷ್ಟು ಕಡಿಮೆ ಬಿದ್ದು ಕೇವಲ ಎರಡೂಕಾಲು ದಿನಗಳಲ್ಲೇ ಹೋಗಿ ಸೇರಬಹುದಾಗಿದೆ. ಇನ್ನುಮೇಲೆ ಲಂಡನ್-ಕರಾಚಿ ಪ್ರಯಾಣ ಒಂದೂವರೆ ದಿನ ಮಾತ್ರ ಹಿಡಿಯುತ್ತದೆ

ಭಾರತ ಡೊಮಿನಿಯನ್ ಶಾಸನ ಸಭೆ

ಇಂಡಿಯಾ ಡೊಮಿನಿಯನ್ ಶಾಸನಸಭೆಯ ವಿಶೇಷ ಸಭೆ ಅಕ್ಟೋಬರ್ ಆರಕ್ಕೆ ಆರಂಭವಾಗುವ ನಿರೀಕ್ಷಣೆ ಇದೆ ಈ ಅಧಿವೇಶನ ಎರಡು ವಾರಗಳು ನಡೆಯಬಹುದು.

ಯೂನಿಯನ್ ಸರ್ಕಾರದ ಮಂತ್ರಿಗಳಾದ ಶ್ರೀ ಎನ್ ವಿ ಗಾಡ್ಗಿಲ್ ರವರು ಚೀಫ್ ಇಂಜಿನಿಯರೊಡನೆ ಅಸೆಂಬ್ಲಿ ಭವನವನ್ನು ನೋಡಿ ಸಭಾಭವನದಲ್ಲಿ ಯಾವ ಬದಲಾವಣೆಗಳು ತುರ್ತಾಗಿ ಆಗಬೇಕೆಂಬುದನ್ನು ಮನನಮಾಡಿಕೊಂಡರು

ಮೈಸೂರು ಸಂಸ್ಥಾನದ ೧೭ನೇ ಶಿಕ್ಷಣ ಸಮ್ಮೇಳನ ದಾವಣಗೆರೆಯಲ್ಲಿ ಸೆ|| ೨೩, ೨೪ನೇ ತಾ|| ಗಳಲ್ಲಿ ನಡೆಯಬೇಕಾಗಿದ್ದದ್ದು ಮೈಸೂರು ಸಂಸ್ಥಾನದಲ್ಲಿ [illegible]ರಾಭಾವದ ಉತ್ಕಟ ಪರಿಸ್ಥಿತಿ ಇರುವುದರಿಂದ ಮುಂದಕ್ಕೆ ಹಾಕಲಾಗಿದೆ [illegible]ದು ಶಿಕ್ಷಣ ಸಮಿತಿಯ ಕಾರ್ಯದರ್ಶಿ ಶ್ರೀ ಡಿ ವಿಶ್ವೇಶ್ವರಯ್ಯನವರು [illegible]ತ್ತಾರೆ

ಮೈಸೂರು ರೈಲ್ವೆ ಕೆಲಸಗಾರರ ಸತ್ಯಾಗ್ರಹ

ಮೈಸೂರು ರೈಲ್ವೆ ಮುಷ್ಕರದ ಸಮಸ್ಯೆಯ ವಿಚಾರದಲ್ಲಿ ಅಖಿಲ ಭಾರತ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಗ ರುಸ್ವಾಮಿಯವರು ಇಂಡಿ[illegible] ಸರ್ಕಾರದ ಟ್ರಾನ್ಸ್‌ಪೋರ್ಟ್ ಮಂತ್ರಿಗಳ ಕೂಡ ಪ್ರಸ್ತಾಪ ಮಾಡಲು ನವದೆಹಲಿಗೆ ಪ್ರಯಾಣ ಮಾಡಿದ್ದಾರೆ ರೈಲ್ವೆ ಬಾಬು ಕೇಂದ್ರ ಸರ್ಕಾರದ ಹತೋಟಿಗೆ ಒಳಪಟ್ಟದ್ದಾದ್ದರಿಂದ ಈ ವ್ಯವಹಾರ ಇತ್ಯರ್ಥಗೊಳಿಸುವ ಜವಾಬ್ದಾರಿ ಅವರದೆಂದು ಶ್ರೀಯುತರ ಅಭಿಪ್ರಾಯ

ಮೈಸೂರು ರೈಲ್ವೆ ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ಎಚ್ ಡಿ ರಂಜ[illegible] ರವರು ಪತ್ರಿಕೆಗಳಿಗೆ ಕೊಟ್ಟಿರುವ ಹೇಳಿಕೆ ಮುತ್ತಿನಂತಹುದು ಸತ್ಯಾಗ್ರಹಿ[illegible] [illegible]ನಾದ ಲಕ್ಷ್ಮಣರಾವ್ ರವರ ಹೇಳಿಕೆ ವಿಚಾರಯೋಗ್ಯವಾಗಿದೆ ಅವರ ಹೇಳಿಕೆ ಹೀಗಿದೆ—

ರೈಲ್ವೆ ಇಲಾಖೆಯವರಿಗೆ ನಾವು ಸಾಕಷ್ಟು ಕಾಲಾವಕಾಶ ಕೊಟ್ಟು ಸತ್ಯಾಗ್ರಹ ಆರಂಭ ಮಾಡಿದ್ದೇವೆ ಸರ್ಕಾರ ರೈಲ್ವೆ ಆಸ್ತಿಪಾಸ್ತಿಗಳನ್ನು ಬಂದೋಬಸ್ತು ಮಾಡದಿದರೆ ಅದನ್ನು ಕಾಪಾಡತಕ್ಕ ಹೊಣೆಗಾರಿಕೆ ನಮ್ಮದಾಗಿದೆ ಏಕೆ[illegible] [illegible] ರೈಲ್ವೆ [illegible] ಯಾರಿಗೂ [illegible] [illegible] ರೈಲ್ವೆ [illegible] ಕೆಲಸಗಾರರನ್ನು [illegible] [illegible]ಗಿದೆ

ಪಂ|| ನೆಹರೂ ವಿದ್ಯಾರ್ಥಿಸಂಘ. ಮಧುಗಿರಿ

ಮೈಸೂರು ಸತ್ಯಾಗ್ರಹ ಸಂದರ್ಭದಲ್ಲಿ ಮಧುಗಿರಿಯ ವಿದ್ಯಾರ್ಥಿ ಸಂಘದವರು ಕಾಲ್ನಡಿಗೆಯಲ್ಲಿ ಕೊಡಿಗೇನಹಳ್ಳಿ ಮುಂತಾದ ಕಡೆಗಳಲ್ಲಿ ಪ್ರವಾಸಮಾಡುತ್ತಾ ಸತ್ಯಾಗ್ರಹ ಸಂದೇಶ ಹರಡುತ್ತಿದ್ದಾರೆ

ಶ್ರೀ ಎಂ ವಿ. ರಾಮರಾಯರು

ಅನೇಕ ತಿಂಗಳಿಂದ ಅನಾರೋಗ್ಯದಿಂದ ಚಿಕಿತ್ಸೆ ಪಡೆಯುತ್ತಿದ್ದ ತುಮಕೂರಿನ ಶ್ರೀ ಎಂ ವಿ ರಾಮರಾಯರು ಪೂರ್ಣ ಗುಣಹೊಂದಿಲ್ಲದಿದ್ದಾಗ ಅವರ ದಸ್ತಗಿರಿಯಾದುದು ಸಾರ್ವಜನಿಕರಲ್ಲಿ ಕಳವಳವನ್ನುಂಟುಮಾಡಿದೆ ಶ್ರೀಯುತರ ಆರೋಗ್ಯದ ಬಗ್ಗೆ ಆಗಾಗ್ಗೆ ಪ್ರಕಟನೆ ನಿರೀಕ್ಷಿಸಲಾಗಿದೆ.

ಸಂಪಾದಕರು ಪ್ರಕಾಶಕರು— ಹಾ ಶ್ರೀ ದೊರೆಸ್ವಾಮಿ
ಮುದ್ರಣಕಾರರು.—ಶ್ರೀ ಆದಣ್ಣಚೆಟ್ಟಿ, ಶ್ರೀ ಸುದರ್ಶನ ಪ್ರೆಸ್, ಹಿಂದೂಪುರ
Q H A 11—10-9-47—C 1500

ಮಹಾರಾಜರ ಘೋಷಣೆ ಅಸಮಂಜಸವಾಗಿದೆ

ಹಿಂದೂಪುರದ ಸೇವಾಮಂದಿರದ ಆಧಾರಸ್ತಂಭರಾದ ಶ್ರೀ ಎ. ಎಂ. ಲಿಂಗಣ್ಣನವರು ಮೈಸೂರು ಮಹಾರಾಜರ ಘೋಷಣೆ ಬಗ್ಗೆ ಈ ರೀತಿ ಹೇಳಿಕೆ ಇತ್ತಿದಾರೆ—

"ಜವಾಬ್ದಾರಿ ಸರಕಾರ ಸ್ಥಾಪಿಸುವುದಾಗಿಯೂ ಪ್ರಜೆಗಳೆಲ್ಲರೂ ಶಾಂತರಾಗಿರಬೇಕೆಂದೂ ಮೈಸೂರು ಮಹಾರಾಜರು ಘೋಷಣೆ ಹೊರಡಿಸಿರುವರಾದರೂ ಈಗಿನ ಸಲಹಾ ಸಮಿತಿಯೇ ಮುಂದೆಯೂ ಕೆಲಸಮಾಡಿ ರಾಜ್ಯಾಂಗ ರಚನಾ ಕಾರ್ಯದಲ್ಲಿ ತೊಡಗುವುದೆಂಬ ವಿಚಾರ ಸಂಸ್ಥಾನದ ಪ್ರಜೆಗಳಿಗಾಗಲೀ ಹೊರಗಿನವರಿಗಾಗಲೀ ಸಮಾಧಾನವುಂಟುಮಾಡುತ್ತಿರುವುದಿಲ್ಲ ಈಗ ಕೂಡಲೇ ಆಗಬೇಕಾಗಿರುವ ಕಾರ್ಯಗಳೇನೆಂದರೆ ೧) ಸಲಹಾ ಸಮಿತಿಯನ್ನು ರದ್ದುಗೊಳಿಸಬೇಕು ೨) ತಾತ್ಕಾಲಿಕ ಸರ್ಕಾರ ಏರ್ಪಡಿಸಬೇಕು ೩) ಪ್ರಜಾಪ್ರತಿನಿಧಿಗಳು ನಿರ್ಮಿಸಿದ ರಾಜ್ಯಾಂಗವನ್ನು ಒಪ್ಪಬೇಕು ಈ ಮೂರು ಭರವಸೆಗಳು ಸಿಕ್ಕಿದ ಕೂಡಲೇ ಶಾಂತಿ ನೆಲಸುವುದರಲ್ಲಿ ಯಾವ ಸಂದೇಹವೂ ಇಲ್ಲ ಪ್ರಭುಗಳು ಕೂಡಲೇ ಈ ಘೋಷಣೆ ಹೊರಡಿಸಿ, ಈಗ ಹೊರಡಿಸಿರುವ ಘೋಷಣೆಯಿಂದ ಸಂಸ್ಥಾನದ ಒಳಗೂ ಹೊರಗೂ ಇರುವ ಪ್ರಜೆಗಳಲ್ಲಿ ಉಂಟಾಗಿರುವ ಅಸಮಾಧಾನವನ್ನು ನಿವಾರಿಸುವರೆಂದು ನಿರೀಕ್ಷಿಸುತ್ತೇನೆ"

ಹೈದರಾಬಾದ್ ಸತ್ಯಾಗ್ರಹ

ಭಾರತ ರಾಷ್ಟ್ರಧ್ವಜ ಆವಿಷ್ಕರಣ ಸಮಸ್ಯೆ

ರಾಷ್ಟ್ರಧ್ವಜ ಎಲ್ಲೂ ಕಾಣಿಸಕೂಡದೆಂದು ಘರ್ಜಿಸಿದ್ದ ಹೈದರಾಬಾದ್ ಸರ್ಕಾರ ಪ್ರಭುಪ್ರಕಟಣೆಯೊಂದನ್ನು ಹೊರಡಿಸಿ, ಖಾಸಗಿ ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಿಸಲೂ ವ್ಯಕ್ತಿಗಳು ಅದನ್ನು ಧರಿಸಲೂ ಪ್ರಭುತ್ವ ಅಡ್ಡಿಮಾಡುವುದಿಲ್ಲವೆಂತಲೂ ಸಾರ್ವಜನಿಕ ಕಾರ್ಯಚಟುವಟಿಕೆಗಳು ಜರುಗುವಾಗ ಮಾತ್ರ ರಾಷ್ಟ್ರಧ್ವಜ ಹಾರಿಸುವುದನ್ನು ತಡೆಗಟ್ಟಲಾಗುವುದೆಂದೂ ಹೇಳಿ ಸರ್ಕಾರದ ಸೋಲನ್ನೊಪ್ಪಿಕೊಂಡಿದ್ದಾರೆ

ಹೈದರಾಬಾದು ರಕ್ಷಣಾ ವಿಧಿ ಮೇರೆಗೆ ಶ್ರೀಮತಿ ಜ್ಞಾನಕುಮಾರಿ, ಶ್ರೀ ರಾಮಕೃಷ್ಣಧೂತ್ ಇವರನ್ನು ದಸ್ತಗಿರಿ ಮಾಡಿದ್ದಾರೆ

ಸ್ತ್ರೀ ಸತ್ಯಾಗ್ರಹಿಗಳು ಶಾಸನೋಲ್ಲಂಘನಾ ಕಾರ್ಯದಲ್ಲಿ ತೊಡಗಿದ್ದಾರೆ ೨೦ ಮಂದಿ ಮಹಿಳೆಯರ ದಸ್ತಗಿರಿಯಾಯಿತು ಅವರನ್ನು ಪೋಲೀಸ್ ಸ್ಟೇಷನ್ನಲ್ಲೇ ಒಬ್ಬ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಮಾಡಿ ತಲಾ ೫ ರೂಗಳಿಂದ ೧೫ ರೂ ಗಳವರೆಗೆ ಜುಲ್ಮಾನೆ ವಿಧಿಸಲಾಯಿತು

ಸಂಸ್ಥಾನದ ಕಾಂಗ್ರೆಸ್ ಭವನದ ಮುಂದೆ ರಾಷ್ಟ್ರಧ್ವಜ ಹಿಡಿದು ಶ್ರೀಮತಿ ವಿಮಲಾಬಾಯಿ ಮೇಲ್ಕೋಟೆ [ಮೈಸೂರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಎ ಜಿ ರಾಮಚಂದ್ರರಾಯರ ಸೋದರ ಡಾ|| ಮೇಲ್ಕೋಟೆರವರ ಪತ್ನಿ] ರವರು ಉಪನ್ಯಾಸಮಾಡಿದರು

ಹೈದರಾಬಾದ್ ಜಿಲ್ಲಾ ಮ್ಯಾಜಿಸ್ಟ್ರೇಟರು ೧೪೪ನೇ ಸೆಕ್ಷನ್ ಜಾರಿಮಾಡಿ ಐದು ಮಂದಿ ಒಂದು ಕಡೆ ಸೇರಬಾರದೆಂದು ಆಜ್ಞೆ ಹೊರಡಿಸಿದ್ದಾರೆ ಲಾಠಿ ಕತ್ತಿ, ಆಸಿಡ್, ಇಟ್ಟಿಗೆ ಚೂರು, ಕಲ್ಲು ಇವುಗಳನ್ನು ಹಿಡಿದು ತಿರುಗುವುದನ್ನು ನಿಷೇಧಿಸಲಾಗಿದೆ

ದೇವುಲಪಲ್ಲಿ ರಂಗರಾವು, ಪಾರಪಲ್ಲಿ ಯಲಮಂದ ಚಿಲ್ಲಜರ್ಲ ಲಿಂಗಯ್ಯಗಾರು ಇವರನ್ನು ಪೋಲೀಸರು ಬಂಧಿಸಿ ನಲ್ಲಗೊಂಡ ಸೆಂಟ್ರಲ್ ಜೈಲಿಗ ಕರೆದುಕೊಂಡುಹೋದರು

ವೃತ್ತಿ ವಿಸರ್ಜನೆ

ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ಸಿನ ಅಣತಿಯಂತೆ ಅನೇಕ ವಕೀಲರು ತಮ್ಮ ಸನ್ನದು ವಾಪಸುಮಾಡಿದ್ದಾರೆ

ಸೂರ್ಯಪೇಟೆಯಲ್ಲಿ ರಾಜೀನಾಮೆಗಳು

ಪ್ರಮುಖ ನ್ಯಾಯವಾದಿ ಶ್ರೀ ಗಪ್ಪಾ ಅಮೃತರೆಡ್ಡಿ, ಅನಂದರಾಮಯ್ಯ, ವೆಂಕಟನರಸಯ್ಯ, ವೆಂಕಟಕೃಷ್ಣಯ್ಯ ಇವರು ತಮ್ಮ ವಕೀಲಿವೃತ್ತಿಗೆ ತಿಲಾಂಜಲಿ ಕೊಟ್ಟಿದ್ದಾರಲ್ಲದೆ ಪ್ರಭುತ್ವಶಾಖೆಗಳಾದ ಮುನಿಸಿಪಾಲಿಟಿ, ಮಾರ್ಕೆಟ್, ಆಹಾರ ಸಮಿತಿ ಮುಂತಾದುವುಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ

ಶ್ರೀ ಗಪ್ಪಾ ಅಮೃತರೆಡ್ಡಿ, ವೆಂಕಟನರಸಯ್ಯ, ಚಕಿಲಂ ರಂಗರಾವ್, ರಾಜಗೋಪಾಲರಾವ್ ಇವರುಗಳ ದಸ್ತಗಿರಿಯಾಯಿತು

ಭಾರತ ರಾಷ್ಟ್ರಧ್ವಜವನ್ನು ಸಾರ್ವಜನಿಕವಾಗಿ ಬೀದಿಗಳಲ್ಲಿ ಮೆರೆಸಿದವರಿಗೆ ಮೂರು ವರ್ಷ ಕಠಿಣ ಸಜಾ ವಿಧಿಸುವುದಾಗಿ ಹೈದರಾಬಾದ್ ಪ್ರಭುತ್ವ ಹೊರಡಿಸಿದ ಆಜ್ಞೆಯನ್ನು ನಿಷ್ಫಲಗೊಳಿಸಿದ ವಿದ್ಯಾರ್ಥಿಗಳನ್ನೂ ಪ್ರಜೆಗಳನ್ನೂ ಶ್ರೀ ಕಾಶೀನಾಥ ವೈದ್ಯ ಅವರು ಅಭಿನಂದಿಸುವುದಾಗಿ ಭಾರತ ಪತಾಕೆಯ ಆವಿಷ್ಕರಣೋತ್ಸವ ಸಂದರ್ಭದಲ್ಲಿ ಹೇಳಿದರು ಅನಂತರ ಅವರ ಬಂಧನವಾಯಿತು.

ನಲ್ಲಗೊಂಡ

ನಲ್ಲಗೊಂಡದಲ್ಲಿ ಬೀದಿಬೀದಿಗಳಲ್ಲಿಯೂ ಬಹಿರಂಗ ನಿವೇಶನಗಳಲ್ಲಿಯೂ ಭಾರತ ಯೂನಿಯನ್ ಪತಾಕೆ ಹಾರಾಡುತ್ತಿವೆ ನಾಲ್ಕು ಸಾವಿರ ಮಂದಿ ಸೇರಿದ್ದ ಬಹಿರಂಗಸಭೆಯಲ್ಲಿ ಧ್ವಜ ಹಾರಿಸಲಾಯಿತು. ಪೋಲೀಸರು ಲಾಠೀ ಛಾರ್ಜು ಮಾಡಿದ್ದರ ಪರಿಣಾಮವಾಗಿ ೧೪ ಮಂದಿಗೆ ಗಾಯಗಳಾಗಿವೆ. ನಾಲ್ಕು ಜನ ವಿದ್ಯಾರ್ಥಿಗಳಿಗೆ ವಿಪರೀತ ಏಟು ಬಿದ್ದಿದೆ ಶ್ರೀ ನಾರಾಯಣ ರೆಡ್ಡಿಯವರ ಬಂಧನವಾಗಿದೆ



ಜ್ಞಾನ ಜ್ಯೋತಿಯ ಹೊಂಬೆಳಕ ಬೆಳಗುವೆನು

ಬೆಳಗುವೆನು ಜ್ಯೋತಿಯನ್ನು
ಎಲ್ಲರೆದೆ ಗುಡಿಯಲ್ಲಿ
ಬೆಳಕು ಮೂಡಲಿ ಎಂದು
ನಿದ್ರೆಯಿಂದೆಚ್ಚೆತ್ತು ಜಗದತ್ತ ನೋಡೆಂದು
ಬೆಳಗುವೆನು ಜ್ಯೋತಿಯನ್ನು ॥

ಮನದ ಕಸವನು ಗುಡಿಸಿ
ರಂಗವಲ್ಲಿಯ ಬರೆಸಿ
ಕರ್ತವ್ಯ ತೋರಣವ
ಹಚ್ಚಿ ದ್ವಾರಕೆ ಕಟ್ಟಿ
ಎಚ್ಚೆತ್ತು ದಾರಿಯಲಿ
ಹುಚ್ಚೆ ಸಂದದಿ ಓಡು
ಕೆಚ್ಚಿಂದ ಹೋರಾಡು
ಇಚ್ಛೆಯನು ಗೆಲು ಎಂದು
ಬೆಳಗುವೆನು ಜ್ಯೋತಿಯನ್ನು ॥

ಹರಿಜನರು ನಾವೆಂದು
ಪುರಜನರು ನೀವೆಂದು
ಹರಿದುರಿದು ಅಸ್ಪೃಶ್ಯ ಅಂಧಕಾರವ ಸುಟ್ಟು
ಬಂಧುಬಳಗವನೆಲ್ಲ
ಮುಂದುಮುಂದಕ್ಕೊಯ್ದು
ಐಕ್ಯ ಭಾವ್ಯತೆಗೆ ಪ ಮಾರ್ಗವನು
ಹುಡುಕೆಂದು
ಬೆಳಗುವೆನು ಜ್ಯೋತಿಯನ್ನು

ವಿಷಯಾನುಕ್ರಮಣಿಕೆ

: 10 ಪಾಂಚಜನ್ಯ ವಿಶೇಷ ಸಂಚಿಕೆ ಸಂಚಿಕೆ : 31

ವಿಷಯ	ಹೆಸರು	ಪುಟ ಸಂಖ್ಯೆ
ಜ್ಞಾಪನೆ	ಸಂಪಾದಕರಿಂದ	i
ಂಪಾದಕೀಯ ವಿಮರ್ಶೆ	ಸಂಪಾದಕರಿಂದ	ii
ಸ್ಪೃಶಿತ ಗಾಂಧೀಜಿ, ಡಾ|| ಅಂಬೇಡ್ಕರ್, ಶ್ರೀ ಜಗಜೀವನ್‌ರಾಂ ಭಾವ ಚಿತ್ರಗಳು		1
ಹಾಪ್ರಧಾನಿ ನೆಹರೂ ಭಾವಚಿತ್ರ ಮತ್ತು ಸಂದೇಶ		4
ೕಂದ್ರ ಸರ್ಕಾರದ ಮಂತ್ರಿ ಮಂಡಲ		5
ೕಂದ್ರ ಸರ್ಕಾರದ ಉಪ ಮಂತ್ರಿ ಮಂಡಲ		7
ಶಾಲ ಮೈಸೂರು ಗೌರ್ನರ್		8
ೂತನ ಮೈಸೂರು ಮಂತ್ರಿ ಮಂಡಲ		9
ೂತನ ಮೈಸೂರು ಉಪಮಂತ್ರಿಗಳು, ಪಾರ್ಲಿಮೆಂಟ್ ಸದಸ್ಯರು		11
ಾನ್ಯ ಶ್ರೀ ಕೆ. ತಿಪ್ಪೇರುದ್ರಯ್ಯನವರ ಅಭಿಪ್ರಾಯ		12
ೕಮಾನ್ ಕೆ. ಆರ್. ಮರುದೇವೇಗೌಡರು		13
ೕಮತಿ ಎಲ್. ಹೆಚ್. ತಿಮ್ಮಗೋವಿಯವರು		14
ೈಸೂರು ವಿಧಾನ ಸಭಾ ಮಾನ್ಯ ಸದಸ್ಯರುಗಳು		15
ಮಾಜ ಸೇವಕರು ಮತ್ತು ಇತರರು		21
ಮ್ನ ವರ್ಗದ ಸೆಮಿನಾರ್ ಉದ್ಘಾಟನಾ ಭಾಷಣ	ಮಾಜೀ ಸಚಿವ ಶ್ರೀ ಟಿ. ಚನ್ನಯ್ಯನವರಿಂದ	23
ೆಮಿನಾರ್ ಆರಂಭೋತ್ಸವದ ಭಾವ ಚಿತ್ರ		24
ಅಸ್ಪೃಶ್ಯತೆಯ ಇತಿಹಾಸ	ಸಂಪಾದಕರಿಂದ	25
ಹರಿಜನ ಪಂಚಕ, ಪಾಂಚಜನ್ಯ ಬಾಳ ಓಟ	ಹನುಮಕವಿ, ರಾವಣೇಕಾರ್	36
ನಿಮ್ನ ವರ್ಗದ ಸೆಮಿನಾರ್ ಸಾಮಾಜಿಕ ಸಮಿತಿ ವರದಿ	ನಾಯಕರು, ಡಾ|| ವೈ. ಯಾಮುನಾಚಾರ್ಯರು.	37
,, ,, ಆರ್ಥಿಕ ಸಮಿತಿ ವರದಿ	ನಾಯಕರು, ಶ್ರೀ ಪೀತಾಂಬರರಾವ್‌ರವರು	41
,, ,, ವಿದ್ಯಾಭ್ಯಾಸ ಸಮಿತಿ ವರದಿ	ನಾಯಕರು ಶ್ರೀ ಮರಿರಾಜ್‌ರವರು	44
,, ,, ಆರೋಗ್ಯ ಮತ್ತು ಶುಚಿತ್ವ ಸಮಿತಿ ವರದಿ	ನಾಯಕರು ಶ್ರೀ ಅನಂತರಾಯರು	48
,, ,, ಆಡಳಿತ ಸಮಿತಿ ವರದಿ	ನಾಯಕರು ಶ್ರೀ ಆರ್. ಚನ್ನಿಗರಾಮಯ್ಯನವರು	50
,, ,,	ಶ್ರೀಮಾನ್ ಆರ್. ಚನ್ನಿಗರಾಮಯ್ಯನವರ ಅಧ್ಯಕ್ಷ ಭಾಷಣ	52
ಡಿಪ್ರೆಸ್ಡ್ ಕ್ಲಾಸ್ ಮುಖ್ಯ ಜನಾಂಗದವರ ಜೀವನ ಪರಿಚಯ,	ಸಂಪಾದಕರಿಂದ	54
ಅಸ್ಪೃಶ್ಯತಾ ಕಾನೂನು		90
ಸೆಮಿನಾರ್ ಮುಕ್ತಾಯ ಸಮಾರಂಭದ ಭಾವ ಚಿತ್ರ		91
ಪಾಂಚಜನ್ಯದ ಸೂಕ್ಷ್ಮ ಪರಿಚಯ	ಸಂಪಾದಕರಿಂದ	93



ಶ್ರೀ ಕೆ. ಭೀಮಯ್ಯ, ಬಿ. ಎ., ಬಿ. ಎಲ್.
(ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್, ಬೆಂಗಳೂರು)

ಕೊರಟಗೆರೆ, ಹರಿಜನ ವಿದ್ಯಾವಂತ ಕುಟುಂಬದಲ್ಲಿ, ಪ್ರಾಥಮಿಕ ಶಾಲೆಯ ಉಪಾಧ್ಯರಾದ ಶ್ರೀ ಎನ್. ದೊಡ್ಡಯ್ಯನವರ ಜೇಷ್ಠಪುತ್ರರಾಗಿ ಶ್ರೀ ಕೆ. ಭೀಮಯ್ಯನವರು 11ನೆಯ ಏಪ್ರಿಲ್,1921ರಲ್ಲಿ ಜನಿಸಿದರು ಕೊರಟಗೆರೆಯಲ್ಲಿ ವ್ಯಾಸಂಗ ಆರಂಭ ಮಾಡಿ, 1935-36 ರಲ್ಲಿ ಶ್ರೀ ನರಸಿಂಹರಾಜಾ ಹಾಸ್ಟೆಲ್ ವಿದ್ಯಾರ್ಥಿಯಾಗಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು 1939 ರಲ್ಲಿ ಪಾಸ್ ಮಾಡಿದರು. ವಿದ್ಯಾರ್ಥಿಯಾಗಿದ್ದಾಗಲೆ, ಉತ್ತಮ ಭಾಷಣಗಾರರು. ವಿಮರ್ಶೆ ಮತ್ತು ಚರ್ಚೆಯಲ್ಲಿ ಇವರದು ಎತ್ತಿದ ಕೈ. ಇವರ ಮೇಧಾಶಕ್ತಿಯನ್ನು ನೋಡಿ. ಇವರ ಸಹಪಾಟಿಗಳೆಲ್ಲಾ ಆಶ್ಚರ್ಯ ಪಡುತ್ತಿದ್ದರು. ಶ್ರೀಯುತರು ಕಾಲೇಜ್ ವ್ಯಾಸಂಗ ಮುಂದುವರಿಸಿ 1945 ರಲ್ಲಿ ಬಿ.ಎ. ಡಿಗ್ರಿಯನ್ನು ಮೈಸೂರು ಮಹಾರಾಜಾ ಕಾಲೇಜ್‌ನಲ್ಲಿ ಪಡೆದರು. 1947ರಲ್ಲಿ ಮದರಾಸಿನಲ್ಲಿ ಲಾವ್ಯಾಸಂಗಮಾಡಿ ಬಿ.ಎಲ್. ಡಿಗ್ರಿ ಪಡೆದರು. ಸಮಾಜ ಸೇವೆ ಎಂದರೆ ಇವರಿಗೆ ತುಂಬಾ ಪ್ರೇಮ ಹರಿಜನ ಉದ್ಧಾರಕ್ಕಾಗಿ ಅನೇಕ ಪವಿತ್ರಕಾರ್ಯ ಸಾಧಿಸಿದ್ದಾರೆ. ತುಮಕೂರಿನಲ್ಲಿ ಒಂದು ಹಾಸ್ಟಲನ್ನು ಸ್ಥಾಪಿಸಲು ಇವರೇ ಮೂಲ ಕಾರಣರು. ಇವರು ಅಡ್ವೋಕೇಟ್ ಆಗಿ ಸೇರಿದ ಕೆಲ ಕಾಲದಲ್ಲೇ, ಇವರ ವಾಕ್‌ಚಾತುರ್ಯತೆ ಮತ್ತು ಮೇಧಾಶಕ್ತಿಗೆ ಮೆಚ್ಚಿ ಇವರನ್ನು ಸರ್ಕಾರದವರು ಪಬ್ಲಿಕ್ ಪ್ರಾಸಿಕ್ಯೂಟರಾಗಿ ನಿಯಮಿಸಿದರು. ಇವರ ಅಮೋಘ ಸೇವೆ ನಾಡಿನ ಮೂಲೆ ಮೂಲೆಗೂ ಹರಡಿತು. ಸರ್ಕಾರ ಇವರನ್ನು ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರಾಗಿ ನೇಮಿಸಿತು. ಬೆಂಗಳೂರಲ್ಲಿ ಕೆಲವು ಕಾಲವಿದ್ದು ಈಗ ಬಳ್ಳಾರಿಯಲ್ಲಿ ಜಡ್ಜ್ ಆಗಿದ್ದಾರೆ.

ಶ್ರೀ. ಪಿ. ಎಲ್. **ಕುಮಾರಸ್ವಾಮಿ,** ಬಿ. ಎಸ್‌ಸಿ., ಬಿ. ಎಲ್.
(ಪ್ರೊಬೇಷನರಿ ಮುನಿಸೀಪರು, ಹೊಸಪೇಟೆ.)

ಮಳವಳ್ಳಿ ತಾಲ್ಲೂಕು ಪೂರಿಗಾಲಿ ಶ್ರೀಯುತರ ಜನ್ಮಸ್ಥಳ. ಇವರು ತಮ್ಮ ಪ್ರಾಥಮಿಕ, ಮಾಧ್ಯಮಿಕ, ಶಿಕ್ಷಣ ಮುಗಿಸಿ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಬೆಂಗಳೂರಿಗೆ ಬಂದರು. ಇಲ್ಲೇ ಇಂಟರ್‌ಮೀಡಿಯೇಟ್ ಮತ್ತು ಬಿ.ಎಸ್‌ಸಿ. ಓದಿ, ಪದವೀಧರರಾದರು. ಬೆಂಗಳೂರು ಸೆಕ್ರೆಟರಿಯೇಟ್‌ನಲ್ಲಿ ಕೆಲಸಕ್ಕೆ ಸೇರಿದರು. ನಂತರ ಬಿ. ಎಲ್. ಅಭ್ಯಾಸಮಾಡಿ 1953ರಲ್ಲಿ ಬಿ. ಎಲ್. ಡಿಗ್ರಿ ಓದಿದರು. ಅದುವರಿಗಾಗಲೇ ಸರ್ಕಾರಿ ನೌಕರರಾಗಿ, ಅದರಲ್ಲೂ ಒಬ್ಬ ಹರಿಜನನ್ನೆಸಿಕೊಂಡು ಹರಿಜನೇತರರ ಮಧ್ಯೆ ಅಂತತ್ರದ ಕೆಲಸ ಮಾಡುವುದರ ಕಹಿ ಅನುಭವವಾಗಿತ್ತು. ಮನಸ್ಸು ಸ್ವಾತಂತ್ರ್ಯದ ಕಡೆಗೆ ಸೆಳೆಯುತ್ತು ವಿದ್ಯೆಯಿತ್ತು, ವಿವೇಕಪೂರ್ಣವಿತ್ತು, ಪ್ರಜಾಸೇವಾ ಭಾವ ತುಂಬಿ ತುಳುಕಾಡುತ್ತಿತ್ತು. ಕೆಲಸಕ್ಕೆ ಶರಣು ಹೊಡೆದು, ಮೈಸೂರಿಗೆ ಹೋಗಿ ಅಲ್ಲಿ ಅಡ್ವೊಕೇಟರಾಗಿದ್ದರು. ಇವರ ಸಹೋದರ ಶ್ರೀ ಪಿ. ನಂಜುಡಸ್ವಾಮಿ ಎಂಬುವರು, ಬಿ. ಇ. ಪಾಸು ಮಾಡಿ ಅಸಿಸ್ಟೆಂಟ್ ಇಂಜನಿಯರಾಗಿರುತ್ತಾರೆ. ಮುನಿಸಿಪಲ್ ಮೆಂಬರಾಗಿದ್ದರು. ಪ್ರಜಾ ಸೇವೆ ಸಲ್ಲಿಸಿದರು. ಈಗ ಸರ್ಕಾರ ಇವರನ್ನು ಮುನಿಸೀಪರಾಗಿ ನೇಮಿಸಿದೆ ಇವರಿಗೆ ಉತ್ತಮ ಭವಿಷ್ಯವಿದೆ.

ವಿಷಯಾನುಕ್ರಮಣಿಕೆ

ಸಂಪುಟ : 10 **ಪಾಂಚಜನ್ಯ ವಿಶೇಷ ಸಂಚಿಕೆ** **ಸಂಚಿಕೆ : 31**

ಕ್ರಮ ಸಂಖ್ಯೆ	ವಿಷಯ	ಹೆಸರು	ಪುಟ ಸಂಖ್ಯೆ
1	ವಿಜ್ಞಾಪನೆ	ಸಂಪಾದಕರಿಂದ	i
2	ಸಂಪಾದಕೀಯ ವಿಮರ್ಶೆ	ಸಂಪಾದಕರಿಂದ	ii
3	ರಾಷ್ಟ್ರಪಿತ ಗಾಂಧೀಜಿ, ಡಾ॥ ಅಂಬೇಡ್ಕರ್, ಶ್ರೀ ಜಗಜೀವನ್‌ರಾಂ ಭಾವ ಚಿತ್ರಗಳು		1
4	ಮಹಾಪ್ರಧಾನಿ ನೆಹರೂ ಭಾವಚಿತ್ರ ಮತ್ತು ಸಂದೇಶ		4
5	ಕೇಂದ್ರ ಸರ್ಕಾರದ ಮಂತ್ರಿ ಮಂಡಲ		5
6	ಕೇಂದ್ರ ಸರ್ಕಾರದ ಉಪ ಮಂತ್ರಿ ಮಂಡಲ		7
7	ವಿಶಾಲ ಮೈಸೂರು ಗೌರ್ನರ್		8
8	ನೂತನ ಮೈಸೂರು ಮಂತ್ರಿ ಮಂಡಲ		9
9	ನೂತನ ಮೈಸೂರು ಉಪಮಂತ್ರಿಗಳು, ಪಾರ್ಲಿಮೆಂಟ್ ಸದಸ್ಯರು		11
10	ಮಾನ್ಯ ಶ್ರೀ ಕೆ. ತಿಪ್ಪೇರುದ್ರಯ್ಯನವರ ಅಭಿಪ್ರಾಯ		12
11	ಶ್ರೀಮಾನ್ ಕೆ. ಆರ್. ಮರುದೇವೇಗೌಡರು		13
12	ಶ್ರೀಮಾನ್ ಎಲ್. ಹೆಚ್. ತಿಮ್ಮಬೋವಿಯವರು		14
13	ಮೈಸೂರು ವಿಧಾನ ಸಭಾ ಮಾನ್ಯ ಸದಸ್ಯರುಗಳು		15
14	ಸಮಾಜ ಸೇವಕರು ಮತ್ತು ಇತರರು		21
15	ನಿಮ್ನ ವರ್ಗದ ಸೆಮಿನಾರ್ ಉದ್ಘಾಟನಾ ಭಾಷಣ	ಮಾಜೀ ಸಚಿವ ಶ್ರೀ ಟಿ. ಚನ್ನಯ್ಯನವರಿಂದ	23
16	ಸೆಮಿನಾರ್ ಆರಂಭೋತ್ಸವದ ಭಾವ ಚಿತ್ರ		24
17	ಅಸ್ಪೃಶ್ಯತೆಯ ಇತಿಹಾಸ	ಸಂಪಾದಕರಿಂದ	25
18	ಹರಿಜನ ಪಂಚಕ, ಪಾಂಚಜನ್ಯ ಬಾಳ ಓಟ	ಹನುಮಕವಿ, ರಾಮಶೇಕಾರ್	36
19	ನಿಮ್ನ ವರ್ಗದ ಸೆಮಿನಾರ್ ಸಾಮಾಜಿಕ ಸಮಿತಿ ವರದಿ	ನಾಯಕರು, ಡಾ॥ ವೈ. ಯಾಮುನಾಚಾರ್ಯರು.	37
20	,, ,, ಆರ್ಥಿಕ ಸಮಿತಿ ವರದಿ	ನಾಯಕರು, ಶ್ರೀ ಪೀತಾಂಬರರಾವ್‌ರವರು	41
21	,, ,, ವಿದ್ಯಾಭ್ಯಾಸ ಸಮಿತಿ ವರದಿ	ನಾಯಕರು ಶ್ರೀ ಮರಿರಾಜ್‌ರವರು	44
22	,, ,, ಆರೋಗ್ಯ ಮತ್ತು ಶುಚಿತ್ವ ಸಮಿತಿ ವರದಿ	ನಾಯಕರು ಶ್ರೀ ಅನಂತರಾಯರು	48
23	,, ,, ಆಡಳಿತ ಸಮಿತಿ ವರದಿ	ನಾಯಕರು ಶ್ರೀ ಆರ್. ಚನ್ನಿಗರಾಮಯ್ಯನವರು	50
24	,, ,,	ಶ್ರೀಮಾನ್ ಆರ್. ಚನ್ನಿಗರಾಮಯ್ಯನವರ ಅಧ್ಯಕ್ಷ ಭಾಷಣ	52
25	ಡಿಪ್ರೆಸ್ಡ್ ಕ್ಲಾಸ್ ಮುಖ್ಯ ಜನಾಂಗದವರ ಜೀವನ ಪರಿಚಯ,	ಸಂಪಾದಕರಿಂದ	54
26	ಅಸ್ಪೃಶ್ಯತಾ ಕಾನೂನು		90
27	ಸೆಮಿನಾರ್ ಮುಕ್ತಾಯ ಸಮಾರಂಭದ ಭಾವ ಚಿತ್ರ		91
28	ಪಾಂಚಜನ್ಯದ ಸೂಕ್ಷ್ಮ ಪರಿಚಯ	ಸಂಪಾದಕರಿಂದ	93

ವಿಜ್ಞಾಪನೆ

ಅನೇಕವರ್ಷಗಳಿಂದ ಸಮಾಜ ದೂರವಾಗಿದ್ದ ಭಾರತದ 7ಕೋಟಿ ನಿಮ್ನ ವರ್ಗಬಾಂಧವರ ಸಮಗ್ರ ಉದ್ಧಾರಕ್ಕೆಂದು ಸಂಘ ಸಂಸ್ಥೆಗಳ ಮೂಲಕವೂ, ಸರ್ಕಾರಗಳ ಮೂಲಕವೂ, ವಿವಿಧ ರೂಪದಲ್ಲಿ ಹೊಸಹೊಸ ಪ್ರಯತ್ನಗಳು ನಡೆಯುತ್ತಿವೆ. ಇದರ ಕುರುಹೇ ಇತ್ತೀಚೆಗೆ ಕೆಂಗೇರಿಯಲ್ಲಿ ನಡೆದ ನಿಮ್ನ ವರ್ಗದವರ (ಸೆಮಿನಾರ್) ವ್ಯಾಸಂಗ ಗೋಷ್ಠಿ.

ನಿಮ್ನ ತರಗತಿಯವರ ಪವಿತ್ರ ಸೇವೆಗಾಗಿ ಜನ್ಮತಾಳಿದ 9 ವರ್ಷ ವಯಸ್ಸಿನ ಪಾಂಚಜನ್ಯವು ತನ್ನ ಮಾರ್ಗದಲ್ಲಿ ಎಷ್ಟೋ ಎಡರು ತೊಡರು, ಕಷ್ಟ ಕಾರ್ಪಣ್ಯಗಳು ಬಂದರೂ ತನ್ನ ಸೇವಾ ಕಾರ್ಯವನ್ನು ಮಾಡುತ್ತಲೇ ಮುಂದುವರೆದಿದೆ. ಈ ಗೋಷ್ಠಿ ಸಂಬಂಧದಲ್ಲೂ ಕೂಡ ಒಂದು ಪುಟ ಸಂಚಿಕೆಯನ್ನು ಮಾತೃಭಾಷೆಯಲ್ಲಿ ಪ್ರಕಟಿಸಬೇಕೆಂಬ ಬಯಕೆಯುಂಟಾಯಿತು.

ಹರಿಜನರಲ್ಲೂ–ಭಕ್ತರು, ಆಶ್ರಮವಾಸಿಗಳು, ಉದ್ದಾಮ ಪಂಡಿತರು, ದಕ್ಷಅಧಿಕಾರಿಗಳು, ಆಂಗ್ಲ ವಿದ್ಯಾಪರಿಣರು, ಸಾಹಿತ್ಯ ಸಾರ್ವಭೌಮರು, ದಾನಧರ್ಮಾಧಿಕಾರಿಗಳು, ದೇಶಾಭಿಮಾನಿಗಳು, ವಿದ್ಯಾಭಿಮಾನಿಗಳು, ತ್ಯಾಗಿಗಳು ಸಮಾಜ ಸೇವಕರು ಇತ್ಯಾದಿ ಮಹನಿಯರೆಷ್ಟೋ ಜನ ದೇಶದ ಮೇಲೆ ಇದ್ದರು, ಈಗಲೂ ಇದ್ದಾರೆ. ಇವರ ಕಿಂಚಿತ್ ಸೇವೆಯೂ ಗಣನೀಯವಾಗಿದೆಯಾದರೂ ಅಸ್ಪೃಶ್ಯತಾ ಮೋಡದ ಹಿಂದೆ ಇವರ ಹೆಸರು, ಕೀರ್ತಿ, ಸೇವೆಗಳು ಮರೆಯಾಗಿ ಹೋಗಿರುವುದು ಸಹಜ. ಇಂಥವರ ಸೂಕ್ಷ್ಮ ಜೀವನ ಪರಿಚಯ ಅವರ ಚಿತ್ರ ಪಟಗಳು ಶೇಖರಿಸಿ ಪ್ರಕಟಿಸಿ ಜನತೆಯ ಕೈಲಿಡಬೇಕೆಂಬ ಸಂಕಲ್ಪವೂ ಕೂಡ ಸ್ಫುರಣವಾಯ್ತು. ಅದರಂತೆ ಕಾರ್ಯಾರಂಭಮಾಡಿದವು. ಇದೇನೂ ಸಾಮಾನ್ಯವಾದ ಕೆಲಸವಲ್ಲ. ಶೇಖರಣಾ ಕಾರ್ಯದಲ್ಲಿ ಅತೀವ ಪ್ರಯತ್ನ ಮಾಡಿದರೂ ಕೂಡ ಈಗ ಓದುಗರ ಕೈಲಿಟ್ಟಿರುವ ಸಂಚಿಕೆಯಲ್ಲಿ ಪ್ರಕಟಿಸಿರುವುದಕ್ಕಿಂತಲೂ ಹೆಚ್ಚಿಗೆ ಚಿತ್ರಪಟಗಳನ್ನು ಪ್ರಕಟಿಸಲು ಸಾಧ್ಯವಾಗದುದಕ್ಕಾಗಿ ತುಂಬಾ ವಿಷಾಧಿಸುತ್ತೇವೆ. ಸಾಧ್ಯವಾದಷ್ಟನ್ನು ಸಧ್ಯದಲ್ಲಿ ಪ್ರಕಟಿಸಿ ಸರ್ವರ ಸಲಹೆಗಳಿಗೂ ಕಾದಿದ್ದೇವೆ.

ಕ್ಷಿಪ್ರದಲ್ಲೇ ಹೊರಬೀಳುವ ನಿಮ್ನ ಜನ ಮಹಾಪುರುಷರ ಸಂಚಿಕೆಗೆ ಸರ್ವರೂ ಮುಂದು ಬಂದು ಚಿತ್ರಪಟಗಳನ್ನೂ ಜೀವನ ಚರಿತ್ರೆಗಳನ್ನೂ ಕಳುಹಿಸಿಕೊಟ್ಟು ನಮ್ಮ ಸೇವಾಕಾಂಕ್ಷೆ ಕೆಲಸವನ್ನು ಪ್ರೋತ್ಸಾಹಿಸಬೇಕಾಗಿ ಪಾಂಚಜನ್ಯವು ಸರ್ವರಲ್ಲಿಯೂ ನಮ್ರವಾಗಿ ಪ್ರಾರ್ಥಿಸುತ್ತದೆ.

ಪ್ರಸ್ತುತ ಪ್ರಕಟಿಸಿರುವ ಚಿತ್ರಪಟ ಸೂಕ್ಷ್ಮ ಪರಿಚಯಗಳಿಂದೇನು ಪ್ರಯೋಜನ ? ಎಂದು ನಮ್ಮನ್ನು ಅಡ್ಡಗಟ್ಟಿ ಪ್ರಶ್ನೆ ಹಾಕಿದವರೂ ಉಂಟು. ಅವರಿಗೆ ನಮ್ಮ ಉತ್ತರವನ್ನು ಮಾನ್ಯ ಓದುಗರೇ ದಯಪಾಲಿಸುವರೆಂದು ನಮ್ಮ ನಂಬಿಕೆ. ಪ್ರಕಟಣೆಯಲ್ಲಿ ಅನಿವಾರ್ಯ ನಿಮಿತ್ತ ಅಲ್ಪಸ್ವಲ್ಪ ಲೋಪಗಳೂ ಉಂಟಾಗದಿಲ್ಲ. ಗುಣೈಕ ಪಕ್ಷಪಾತಿಗಳು ಲೋಪಗಳನ್ನು ಪತ್ರ ಮುಖೇನ ತಿಳಿಯಪಡಿಸಿದಲ್ಲಿ ಶಿರಸಾವಹಿಸಿ ಪರಿಗ್ರಹಿಸಲು ಪಾಂಚಜನ್ಯ ಸಿದ್ಧವಿದೆ.

ಮಾಜೀ ಮತ್ತು ಹಾಲಿ ಇರುವ ಶಾಸನಸಭಾ ಸದಸ್ಯರುಗಳು, ಗಣ್ಯ ಹರಿಜನ ಮಹನೀಯರು, ಮಹಿಳೆಯರು ಸಮಾಜ ಸೇವಕರು ಭಾವಚಿತ್ರ ಮತ್ತು ಜೀವನ ಪರಿಚಯವನ್ನು ಸಂಗ್ರಹಿಸುತ್ತಿದ್ದೇವೆ. ಇದೂ ಬೇಗನೆ ಬೆಳಕಿಗೆ ಬರಲಿದೆ.

ಸೆಮಿನಾರಿನ ಈ ವಿಶೇಷ ಸಂಚಿಕೆಯ ಉಪಯುಕ್ತತೆಯನ್ನು ಮನಗಂಡು ಸರ್ಕಾರದವರು, ಇದರ ಪುನರ್ಮುದ್ರಣಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನಮ್ಮ ಜನ ಪ್ರಿಯ ಸರ್ಕಾರದ ಮಂತ್ರಿಗಳಾದ ಶ್ರೀ ಆರ್. ಚೆನ್ನಿಗರಾಮಯ್ಯನವರಿಗೆ ನಾವು ಚಿರಋಣಿಗಳು.

ಸೆಮಿನಾರಿನ ನಾಲ್ಕಾರು ವಿಭಾಗಗಳಲ್ಲಿಯೂ ಚರ್ಚಿಸಲ್ಪಟ್ಟ ತೀರ್ಮಾನದಂತೆ ಶಿಫಾರ್ಸ್ ಆಗಿರುವಅಂಶಗಳನ್ನು ಅಧಿಕಾರಿಗಳು, ಇಲಾಖಾ ಮೊಖ್ತೇಸರು, ಸಂಘ ಸಂಸ್ಥೆಗಳೂ, ಸಮಾಜ ಸುಧಾರಕರು, ಜನತೆ ಹಾಗೂ ಹರಿಜನ ಬಾಂಧವರೂ ಆಮೂಲಾಗ್ರವಾಗಿಅರಿವು ಮಾಡಿಕೊಂಡು, ತಮ್ಮ ತಮ್ಮ ಪಾಲಿನ ಕರ್ತವ್ಯಗಳನ್ನು ನೆರವೇರಿಸುವಂತಾಗಲೆಂಬ ವಿಶಾಲ ಮನೋಭಾವ ಹಾಗೂ ಪ್ರಚಾರ ರೂಪದಲ್ಲಿ ಸರ್ಕಾರ ನಮಗೆ ತಮ್ಮ ಪೂರ್ಣ ಬೆಂಬಲವನ್ನಿತ್ತು ಪ್ರೋತ್ಸಾಹಿಸಿದೆ.

ಸಂಪಾದಕ

ಸಂಪಾದಕೀಯ ವಿಮರ್ಶೆ

ಮೈಸೂರು ನಿಮ್ನ ವರ್ಗದ ವ್ಯಾಸಂಗ ಗೋಷ್ಠಿಯ ಸಲಹೆಗಳು ನಿಮ್ನ ವರ್ಗದವರಿಗೆ ಒಂದು ಕೈಗನ್ನಡಿ. ಇದು ಏನು ಸಾಧಿಸಿತೋ ಅದನ್ನು ಸರ್ಕಾರ ಆದಷ್ಟು ಜಾಗ್ರತೆ ಕಾರ್ಯಗತ ಮಾಡುವುದೆಂದು ಹರಿಜನರೆಲ್ಲರೂ ಕುತೂಹಲದಿಂದ ಕಾದು ನೋಡುತ್ತಿದ್ದಾರೆ. ಭಾರತದ ಎಲ್ಲಾ ಸಂಸ್ಥಾನಗಳಿಗೂ ಅನ್ವಯಿಸಿದ ಒಂದು ವ್ಯಾಸಂಗ ಗೋಷ್ಠಿ ಕೇಂದ್ರ ಸರ್ಕಾರದ ಆಶ್ರಯದಲ್ಲಿ ಮೊದಲೇ ನಡೆದಿದ್ದಿತಷ್ಟೆ. ಇದನ್ನರಿತ ಮಾದರಿ ಮೈಸೂರು ನಾಡು ಹರಿಜನರ ಪುರೋಭಿವೃದ್ಧಿ ಬಗ್ಗೆ ಸೂಕ್ತವಾದ ಯೋಜನೆಯನ್ನು ತಯಾರಿಸಿದೆ. ಸೆಮಿನಾರ್ ಮಾಡಿರುವ ಸಲಹೆಗಳು ಗಮನಾರ್ಹವಾಗಿವೆ.

ನಮ್ಮ ಭಾರತವು ಸ್ವತಂತ್ರವಾದ ಮೇಲೆ ರಾಷ್ಟ್ರಾಭಿವೃದ್ಧಿ ಬಗ್ಗೆ ಅನೇಕ ಯೋಜನೆಗಳು ತಯಾರಾಗಿ ಕೆಲಸ ಮಾಡುತ್ತಾ ಇವೆ. ಈ ಯೋಜನೆಗಳಲ್ಲೆಲ್ಲಾ ಹರಿಜನರಿಗೆ ಎಷ್ಟರಮಟ್ಟಿಗೆ ಸಹಾಯ ದೊರಕಿದೆ ಎಂದು ವಿಮರ್ಶಿಸುವುದಾದರೆ ಅದು ತುಂಬಾ ಚಿಂತಾಜನಕವಾಗಿದೆ. ಗ್ರಾಮಾಭಿವೃದ್ಧಿ ಬಗ್ಗೆ ಇಂದು ದೇಶದಲ್ಲಿ ಸಹಕಾರ ಸಂಘಗಳ ಗೃಹ ಕೈಗಾರಿಕೆಗಳ ಕೇಂದ್ರಗಳೂ, ಸಾಮೂದಾಯಿಕ ಯೋಜನಾ ಕಾರ್ಯಗಳ, ರಾಷ್ಟ್ರೀಯ ವಿಸ್ತರಣಾ ಕಾರ್ಯಗಳೂ ನಡೆಯುತ್ತಿವೆ. ಇದಕ್ಕಾಗಿ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ವಿಶೇಷ ಹಣ ಒದಗಿಸಿವೆ. ರಾಷ್ಟ್ರದ ಬೆನ್ನುಮೂಳೆಯಾಗಿರುವ ಹರಿಜನರ ಪ್ರಗತಿಯನ್ನು ಈ ಎಲ್ಲಾ ಕ್ಷೇತ್ರಗಳಲ್ಲೂ ಸಾಧಿಸಲು ಅವರಿಗೂ ಸಹ ಕನಿಷ್ಟ ಪಕ್ಷ ಶೇಕಡ 20 ಭಾಗವಾದರೂ ಈ ಸೌಲಭ್ಯಗಳು ದೊರಕುವಂತೆ ಒಂದು ನೀತಿಯ ಅನುಸರಿಸಿ ಅಂಥಾ ನಿರ್ದಿಷ್ಟ ಹಣವು ಅವರ ಪ್ರಗತಿಗೆ ಉಪಯೋಗಿಸಲ್ಪಡಬೇಕು. ಆ ರೀತಿ ಉಪಯೋಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ತ್ರೈಮಾಸಿಕ ರಿಪೋರ್ಟು ತರಿಸಿಕೊಳ್ಳುವ ಏರ್ಪಾಟನ್ನು ಮಾಡಿದರೆ, ಹರಿಜನರು ನಾನಾ ರೀತಿಯಲ್ಲಿ ಪುರಜನರಾದಾರೆಂದು ನಮ್ಮ ಭಾವನೆ. ರಾಷ್ಟ್ರಪಿತ, ಮಹಾತ್ಮ ಗಾಂಧಿಜೀ ಕಂಡ ಕನಸಿನ ಸರ್ವೋದಯವೇ ಇದು ಈ ವ್ಯವಸ್ಥೆ ರಾಷ್ಟ್ರಪಿತನ ಕನಸನ್ನು ನೆನಸು ಮಾಡೀತು. ಇದನ್ನು ನಮ್ಮ ಸರ್ಕಾರ ಗಮನಿಸಲೆಂದೇ ನಮ್ಮ ಸಲಹೆ

ಕೇಂದ್ರ ಸರ್ಕಾರದ ಲೇಬರ್ ಹೌಸಿಂಗ್ ಸ್ಕೀಮಿನಲ್ಲಿ ಗೃಹ ನಿರ್ಮಾಣ ಕಾರ್ಯ ನಡೆಯುತ್ತಿದೆ. ಅಲ್ಲಿಯೂ ಸಹ ನಿರ್ದಿಷ್ಟವಾದ ಶೇಕಡಾವಾರು ಗೃಹಗಳು ಹರಿಜನರಿಗೆ ದೊರೆಯುವಂತಾಗಬೇಕು.

ಉಳುವ ನೇಗಿಲ ಯೋಗಿ ಹರಿಜನ, ಅವನು ದುಡಿದು ಇತರ ಸಂಗಡವನವರ ಕಣಜವನ್ನು ತುಂಬುವುದು ನಿತ್ಯ ಸತ್ಯ ಆದರೆ ಆವನಿಗೆ **ತಿನ್ನಲು ಅನ್ನ, ವಾಸಿಸಲು ಮನೆ, ಅನುಭವಿಸಲು ಜಮೀನು ತನ್ನದೆಂಬುವುದೊಂದಿಲ್ಲ. ಅವಶ್ಯಕವಾದ ಈ ಸೌಲಭ್ಯಗಳನ್ನು ಯಾವ ಪ್ರಜಾರಾಜ್ಯವೇ ಆಗಲಿ ಪ್ರಜೆಗಳಿಗೆ ಕಲ್ಪಿಸದೇ ಹೋದರೆ ಆ ರಾಜ್ಯ ಬಹುಕಾಲ ಬಾಳಲಾರದು.** ಇದನ್ನು ನಮ್ಮ ಸರ್ಕಾರಗಳು ಅರಿಯಬೇಕು.

ದೇಶದ ವಿವಿಧ ಕ್ಷೇತ್ರಗಳಲ್ಲಿ, ಯೋಜನೆಗಳಲ್ಲಿ, ಕಸುಬನ ಸಹಾಯ ಸಲಕರಣೆಗಳನ್ನೂ ಒದಗಿಸುವುದು ಮಾತ್ರವಲ್ಲ ಅದನ್ನು ನಿರ್ವಹಿಸುವ ಅಧಿಕಾರಿಗಳಿಗೆ ಹರಿಜನರನ್ನೇ ನೇಮಿ

ಬೇಕು. ಜೀತಪದ್ಧತಿ ಹೊಸ ನಾಗರಿಕ ಕಲ್ಪನೆಯಾಗಲು "ನಿಷ್ಟ (ತ)ನ". "ಗೇಣಿದಾರರ ಹಕ್ಕು", ಸಾಲ ಸೋಲದ ವಿಮುಕ್ತಿ ಕಾನೂನು", "ಸಣ್ಣ ಸಾಗುವಳಿದಾರರ ಋಣಮುಕ್ತಿ" "ಪರಾವಲಂಬನ (ಜೀತ) ಜೀವನ ಪದ್ಧತಿ" ಈ ಬಗ್ಗೆ ಹೊಸ ಶಾಸನಗಳು ಕೂಡಲೆ ಜಾರಿಯಾಗಬೇಕು.

ಗ್ರಾಮಾಂತರ ಪ್ರದೇಶದಲ್ಲಿ ಹರಿಜನರು ಸಾಲಗಾರರಾಗಿ ತಮಗಿದ್ದ ಜಮೀನನ್ನು ಆಧಾರ ಭೋಗ್ಯ ವಗೈರೆ ಮಾಡಿದ್ದಾರೆ. ಬಡ್ಡಿ, ಚಕ್ರಬಡ್ಡಿಗಳು ಇವರ ಭುಜಗಳ ಮೇಲಿವೆ. ಸಾಲ ತೀರ್ಪಿಗಾಗಿ ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಅವರ ಮನೆಗಳಲ್ಲಿ ಜೀತವಿಟ್ಟು ಬಲಿಕೊಟ್ಟಿದ್ದಾರೆ. ಇದರ ಪರಿಣಾಮವಾಗಿ, ಹೊಲ ಮನೆಗಳನ್ನು ಕಳೆದುಕೊಂಡು ಲಕ್ಷೋಪಲಕ್ಷ ಹರಿಜನ ಸಂಸಾರಗಳು ಇಂದು ಬೀದಿಪಾಲಾಗಿದ್ದಾರೆ. ಅವರ ಪರಾವಲಂಬನಜೀವನವು ಅವರ ಆತ್ಮ ಗೌರವವನ್ನೇ ಹಾಳುಮಾಡಿದೆ. ಇದನ್ನು ಸರಿಪಡಿಸಲು ಸರ್ಕಾರ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು.

ಸಂಸ್ಥಾನಕ್ಕೊಂದು 'ಸ್ಟೇಟ್ ಬ್ಯಾಂಕ್' ಸ್ಥಾಪಿಸಬೇಕು. ಅದಕ್ಕೆ ಮೂಲ ಧನವನ್ನು ಸರ್ಕಾರವೇ ಒದಗಿಸಿ, ಸೂಕ್ತ ರೀತಿಯಲ್ಲಿ ಸಬ್‌ಸಿಡಿ ಕಲ್ಪಿಸಿ. ಬ್ಯಾಂಕಿನ ಷೇರುಗಳನ್ನು ಹರಿಜನರಿಗೆ ಹಂಚಬೇಕು. ಬಡ್ಡಿಯಿಲ್ಲದ ಅಥವಾ ಸುಲಭ ಬಡ್ಡಿ ಸಾಲವನ್ನು ಬ್ಯಾಂಕಿನ ಮೂಲಕ ಹರಿಜನರಿಗೆ ಹಂಚಿದರೆ ಈಗ ಹಳ್ಳಿಗಳಲ್ಲಿ ಅಧಿಕ ಬಡ್ಡಿ ತಾಪದಿಂದ ನರಳುತ್ತಿರುವ ಹರಿಜನರನ್ನು ಋಣಮುಕ್ತರನ್ನಾಗಿ ಮಾಡಲು ಇದು ಒಂದು ಮಾರ್ಗವಾಗುವುದು. ರಾಷ್ಟ್ರೀಕರಣವಾಗಿರುವ ಜೀವವಿಮಾ ಶಾಖೆಯಲ್ಲಿ ಹರಿಜನ ಕುಟುಂಬದ ಪ್ರತಿಯೊಬ್ಬ ಯಜಮಾನನನ್ನು ಜೀವವಿಮೆ ಮಾಡಲು ಒತ್ತಾಯ ಮಾಡಬೇಕು. ಅವನಿಂದ ಬರಬೇಕಾದ ಬ್ಯಾಂಕಿನ ಬಾಕಿ ಕಂತುಗಳು ಪಾವತಿ ಆಗದೆ ನಿಂತಲ್ಲಿ ಆ ಬಾಕಿಯನ್ನು ಜೀವವಿಮಾ ಮೊಬಲಗಿನಿಂದ ವಜಾ ಮಾಡಿಕೊಳ್ಳಬಹುದೆಂಬ ಏರ್ಪಾಡಿರಬೇಕು.

ಹರಿಜನರಿಗೆ ಮನೆಗಳನ್ನು ಒದಗಿಸಿಕೊಡುವುದು ಒಂದು ದೊಡ್ಡ ಪ್ರಶ್ನೆಯಾಗಿದೆ. ಎರಡನೆಯ ಪಂಚವಾರ್ಷಿಕ ಯೋಜನೆ ಜಾರಿಗೆ ಬರುತ್ತಿದೆ. ಈ ಪಂಚವಾರ್ಷಿಕ ಯೋಜನೆಯಲ್ಲಿ ಮೂರು ಕೋಟಿ ರೂಪಾಯಿಗಳನ್ನೊದಗಿಸಿ ಆಧುನಿಕ ರೀತಿಯ ಮನೆಗಳನ್ನು ಲೇಬರ್ ಹೌಸಿಂಗ್ ಕಾರ್ಪೊರೇಷನ್ ಆಶ್ರಯದಲ್ಲಿ ನಿರ್ಮಾಣ ಮಾಡುವಂತೆ ಇವರಿಗೂ ಮನೆಗಳನ್ನು ಕಟ್ಟಲು ಕಾರ್ಪೊರೇಷನ್ Harijan Housing Corporation ಒಂದನ್ನು ಸರ್ಕಾರ ಸ್ಥಾಪಿಸಬೇಕು. ಸುಭದ್ರವಾದ ವಸತಿ ಗೃಹಗಳನ್ನು ಅವರಿಗೆ ಕಟ್ಟಿಸಿ ಕೊಟ್ಟ ಮೇಲೆ ಅವರಿಗೆ ಮನೆಯೊಂದಕ್ಕೆ ಕೊಡಬೇಕಾದ ೫೦೦ ಜಾತಾ ಉಳಿದ ಬಾಕಿ ಹಣ ತೀರ್ಮೆಯ ಬಗ್ಗೆ ೨೦ ವಾರ್ಷಿಕ ಕಂತುಗಳಲ್ಲಿ ಸರ್ಕಾರ ಅಥವಾ ಮೇಲ್ಕಂಡ ಸ್ಟೇಟ್ ಬ್ಯಾಂಕಿಗೆ ವಾಪಸು ಪಾವತಿ ಮಾಡುವಂತೆ ಏರ್ಪಾಡು ಮಾಡಬೇಕು. ಇಂಥಾ ಕಂತುಗಳಿಗೆ ಹಣ ಒದಗಿಸಲು, ಸರ್ಕಾರದ ಜೀವವಿಮೆ ಮತ್ತು ಸಲಹೆ ನೀಡಿರುವ ಸ್ಟೇಟ್ ಬ್ಯಾಂಕ್ ಇವರೆಲ್ಲರ ನೆರವಿಗೆ ನಿಲ್ಲಬೇಕು. ಈ ಬ್ಯಾಂಕಿನ ಶಾಖೆಗಳು ಪ್ರತಿ ತಾಲ್ಲೂಕಿನಲ್ಲೂ ತೆರೆಯಲ್ಪಡಬೇಕು.

ಸರ್ಕಾರಿ ಕಛೇರಿಗಳಲ್ಲಿ ಇರುವಂತೆ ಕೈಗಾರಿಕಾ ಕ್ಷೇತ್ರಗಳಲ್ಲೂ ಗಿರಣಿಗಳಲ್ಲೂ, ಕಾರ್ಖಾನೆಗಳಲ್ಲೂ, ಎಲ್ಲಾ ಮಟ್ಟದಲ್ಲೂ ಕೆಲಸ ದೊರೆಯಲು ಜನಸಂಖ್ಯೆಗನುಗುಣವಾದ ಶೇಕಡಾವಾರು ಹುದ್ದೆಗಳು ಹರಿಜನರಿಗೆ ಮೀಸಲಾಗಿಡುವ ಏರ್ಪಾಡು ಮಾಡಬೇಕು. ಅರ್ಹರಾದವರನ್ನು ಈ ಎಲ್ಲಾ ಕೈಗಾರಿಕಾ ಸ್ಥಾನಗಳಿಗೆ ತಯಾರು ಮಾಡಲು ಇವರಿಗಾಗಿ ವಿಶೇಷ ಟ್ರೈನಿಂಗ್ ಸ್ಕೂಲೊಂದನ್ನು ತೆರೆಯಬೇಕು. ಈಗಿರುವ ಟ್ರೈನಿಂಗ್ ಸ್ಕೂಲುಗಳಲ್ಲಿ ಅಧಿಕ ಪ್ರಮಾಣದಲ್ಲಿ ಇವರಿಗೆ ಸ್ಥಾನಗಳನ್ನು ಮೀಸಲಾಗಿಡಬೇಕು.

ವಿದ್ಯೆ ಇಲ್ಲದಿದ್ದರೆ ಬುದ್ಧಿ ಕಡಮೆ. ವಿದ್ಯೆ ಬಂದರೆ ಸರ್ವ ಸಂಪತ್ತೂ ಉಂಟು. ಅದು ಎಲ್ಲರಿಗೂ ಅವಶ್ಯಕ.

ವಿದ್ಯಾರ್ಜನೆಯಿಂದ ಜ್ಞಾನಾರ್ಜನೆ. ರಾಷ್ಟ್ರದಲ್ಲಿ ಬೇರೂರಿರುವ ಅಸ್ಪೃಶ್ಯತೆ ಸಾಮಾಜಿಕ ದೌರ್ಬಲ್ಯತೆಯಾಗಿದೆ. ಇದು ನಾಶವಾಗಲು ಹರಿಜನರಿಗೆ ಅವಶ್ಯಕವಾಗಿಯೂ ವಿಶೇಷ ವಿದ್ಯಾಭ್ಯಾಸವು ದೊರೆಯಬೇಕು. ಆದುದರಿಂದ ಹರಿಜನ ಗಂಡು ಹೆಣ್ಣು ಮಕ್ಕಳಿಗೆ ಕಡ್ಡಾಯವಾದ ವಿದ್ಯಾಭ್ಯಾಸ ದೊರೆಯಲು ಶಾಸನವಾಗಬೇಕು. ಹರಿಜನ ಪ್ರಗತಿಯೇ ರಾಷ್ಟ್ರ ಪ್ರಗತಿ. ಪ್ರತಿ ಜಿಲ್ಲೆಯಲ್ಲೂ ಹರಿಜನ ವಿದ್ಯಾರ್ಥಿನಿಲಯಗಳು ಸ್ಥಾಪಿಸಲ್ಪಟ್ಟು ಆ ಸ್ಥಳದಲ್ಲಿ ದೊರೆಯುತ್ತಿರುವ ಎಲ್ಲಾ ಮಟ್ಟದ ವಿದ್ಯಾ ವ್ಯಾಸಂಗ ಪೂರ್ಣವಾಗಿ ಹರಿಜನ ಮಕ್ಕಳಿಗೆ ನಿಲಯಗಳಲ್ಲಿ ವಸತಿ ಸೌಕರ್ಯಗಳೊಡನೆ ಒದಗಿಸಬೇಕು. ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವ ನೀತಿಯ ನೆಪದಲ್ಲಿ ಹರಿಜನ ಹಾಸ್ಟಲುಗಳಿಗೆ ಉತ್ತೇಜನ ಕೊಡುವುದನ್ನು ತಪ್ಪಿಸಬಾರದು. ಸೂಕ್ತವಾದ ಕಡೆಗಳಲ್ಲೆಲ್ಲಾ ಇತರೇ ಕೋಮಿನವರಿಗೆ ಶೇಕಡ ೧೦ ಸ್ಥಾನಗಳನ್ನು ಕೊಟ್ಟು ಅವರು ಹರಿಜನ ವಿದ್ಯಾರ್ಥಿಗಳೊಡನೆ ಮಿಳಿತವಾಗಿ ಬೆಳೆಯುವಂತೆ ಮಾಡಬೇಕು. ಇವರಿಂದ ಇಂದಿನ ಯುವಕರಲ್ಲಿ ಮೇಲು ಕೀಳುಭಾವನೆ ದೂರವಾಗಿ ಸಹೋದರಭಾವ ಬೆಳೆಯುವುದು. ಈ ಎಲ್ಲಾ ನಿಯಮಗಳಿಗೂ ಉತ್ತಮ ಆಡಳಿತ ಮಾರ್ಗವಿರಬೇಕು.

ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಲ್ಲಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಹರಿಜನರಿಗೆ ವ್ಯಾಸಂಗ ಕಲ್ಪಿಸಲು [illegible] ಸ್ಥಾಪಿತವಾಗಿರುವ ಹರಿಜನ ಹಾಸ್ಟಲುಗಳ ವಿದ್ಯಾರ್ಥಿಗಳ ಸಂಖ್ಯೆಯನ್ನು ಕ್ರಮವಾಗಿ ೩೫೦ ಮತ್ತು ೪೦೦ಕ್ಕೆ ಏರಿಸಿ ಸವ [illegible]

ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಇಂದಿನ ಸಾಲಿನಲ್ಲಿ ನೂರಾರು ಮಂದಿ ಹರಿಜನ ಬಾಲಕರು ವಸತಿ ಸೌಕರ್ಯವಿಲ್ಲದೆ ತಮ್ಮ ವಿದ್ಯಾಭ್ಯಾಸವನ್ನೇ ನಿಲ್ಲಿಸಿಬಿಟ್ಟ ನಿದರ್ಶನಗಳಿವೆ.

ಸಮಾಜದಲ್ಲಿ ಅವಶ್ಯಕವಾಗಿ ಬಯಸುವ ಸೂಲಗಿತ್ತಿ, ಕಾಂಪೌಂಡರ್ಸ್ ನರ್ಸ್, ಲೇಡಿ ಡಾಕ್ಟರ್ಸ್, ಹೋಂಗೈಡ್ಸ್, ನರ್ಸರೀ ಸ್ಕೂಲು ಗೈಡರ್ಸ್, ಹಾಲು, ಮೊಸರು, ತುಪ್ಪ ಮಾರಾಟಗಾರರು, ಪಾಠಶಾಲೆಗಳಿಗೆ ಮಕ್ಕಳನ್ನು ಒಯ್ಯುವ ಮತ್ತು ಅವರನ್ನು ಸುಧಾರಿಸುವ ಸ್ಥಾನಗಳಿಗೆಲ್ಲಾ ಹರಿಜನ ಹೆಣ್ಣುಮಕ್ಕಳನ್ನೇ ನೇಮಿಸಬೇಕು. ಆ ಸ್ಥಾನಗಳಿಗೆ ತರಪೇತು ಮಾಡುವ ಕೇಂದ್ರಗಳನ್ನು ತೆರೆಯಬೇಕು. ಶ್ರೀಮಂತ ಮಹಿಳಾ ಮಣಿಗಳು ಅವರ ಬಂಧುಗಳು ಮತ್ತು ಆತರಗತಿಯವರ ಮಧ್ಯ ವರ್ತುಳದಲ್ಲಿಯೇ ವಿನಿಯೋಗವಾಗುತ್ತಿರುವ, ಮಹಿಳಾ ಸಮಾಜ, ಸೋದರೀ ಸಮಾಜ, ವನಿತಾಸದನ, ಭಗನೀ ಸೇವಾ ಮಂಡಳಿ ಇತ್ಯಾದಿಗಳು ತಮ್ಮ ಅಂತರ್ಯ ಕಟ್ಟಳೆಯ ಕಟ್ಟೆಯನ್ನು ಒಡೆಯಬೇಕು. ಅಸ್ಪೃಶ್ಯ ಸೋದರೀ ವೃಂದದಲ್ಲಿ ಬೇರತು, ಕಲೆತು, ಮಲೆತು, ಅವರಲ್ಲಿ ಬೆಳೆದು ಬಂದಿರುವ ಜುಗುಪ್ಸೆ, ಅಜ್ಞತೆಯ ಲಜ್ಜೆ, ನಿರುತ್ಸಾಹ, ಅಸಾಧ್ಯತೆಯ ಬನ್ನಾಣಗಳನ್ನು, ಸೂಕ್ತ ರೀತಿಯ ಉಪದೇಶಗಳಿಂದ, ಸಹಸಂಪರ್ಕ ಉತ್ತೇಜನಗಳಿಂದ ತೊಲಗಿಸಲು ಶ್ರಮಿಸುವಂತಾಗಬೇಕು. ನಾಯಕಿಯರು ಸೇವಕಿಯರು ಹರಿಜನರ ಮನೆ ಮನೆಗೂ ಹೋಗಿ ಅವರ ನಿತ್ಯಾಡಳಿತಗಳ ಸುಧಾರಣೆ ಹೇಳಿ ಕೊಡುವ ರೀತಿ ಆಗಬೇಕು. ಈ ಸಂಬಂಧದ ಮೇಲ್ವಿಚಾರಣೆ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರಿಗೆ ಸೇರಬೇಕು. ಈ ಕಾರ್ಯವು ಮುಖ್ಯವಾಗಿ ಹಳ್ಳಿಗಳಲ್ಲಿ ನಡೆಯಬೇಕು.

ಕೂಡಲೇ ಆಕ್ಟ್ ತಯಾರಾಗಲಿ

ದೇಹಕ್ಕೆ ಹೃದಯ ಎಷ್ಟು ಮುಖ್ಯವೋ ರಾಷ್ಟ್ರ ಪ್ರಗತಿಗೆ **ಹರಿಜನರ ಪ್ರಗತಿಯೂ ಅಷ್ಟೆ ಮುಖ್ಯ.** ಇದನ್ನು ಸಾರ್ವಜನಿಕರೂ, ಸರ್ಕಾರಗಳೂ ಒಮ್ಮತದಿಂದ ನಿಷ್ಕಳಂಕ ಮನೋಭಾವದಿಂದ ಆರ್ಥಿಕ, ನೈತಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಗತಿಗೆ ಕೆಲಸ ಮಾಡಲೆಂದು ನಮ್ಮ ಹೆಬ್ಬಯಕೆ. ಭಗವಂತನು ನಮ್ಮ ಈ ಸೇವಾ ಕಾರ್ಯಕ್ಕೆ ಸನ್ಮಂಗಳವನ್ನು, ಮಾರ್ಗದರ್ಶನವನ್ನು ಕಲ್ಪಿಸಲಿ.

ದುಡಿದು ತಮ್ಮ ಹೊಟ್ಟೆ ಹೊರೆದು ತಮ್ಮ ಸಂಸಾರವನ್ನು ಪೋಷಿಸಲಾರದ ಕೆಲವರು ವೈಗಳರಿಗೆ ಹರಿಜನ ಸೇವಾಕಾರ್ಯವು ತೋಳಗಳು ಸಂಬಳ ಕೇಳದೇ ಕುರಿಕಾಯುವಂಥಾ ಪರಿಸ್ಥಿತಿಯಲ್ಲಿದೆ. ದಿಕ್ಕು ಕಾಣದ ಹರಿಜನರು ಇಂಥಾ ಕುಲದ್ರೋಹಿಗಳ ಬಲೆಯಲ್ಲಿ ಸಿಕ್ಕಿ ಸಾವೋ ಬದುಕೋ ಎರಡೂ ಕಾಣದೆ ನಿರ್ನಾಮವಾಗುತ್ತಿದ್ದಾರೆ. ಈ ಕಳ್ಳಸೇವಕರು ಸೇವೆಗಾಗಿಯೇ ತಾವು ದೇಹಧಾರಿಗಳಾಗಿರುವಂತೆ ವರ್ತಿಸಿ, ಕೃತಕ ಪ್ರಪಂಚದ ಕಲ್ಪನಾ ಜೀವನದಲ್ಲಿ ಲೋಲರಾಗಿದ್ದಾರೆ. ಹರಿಜನ ಸಮಾಜ ಸೇವಕರೆಂಬ ಹೆಸರಿನಿಂದ ಹರಿಜನ ಬಂಧುಗಳ ಮನೆಗೆ ಹೋಗಿ ಅಲ್ಲಿ ಊಟ ಉಪಚಾರ ಲಂಚಗಳನ್ನು ಹೊಂದಿ ಅಶ್ಲೀಲ ಕಾರ್ಯದಲ್ಲಿ ತೊಡಗಿದ್ದ ನಿದರ್ಶನಗಳೂ ಉಂಟು. ಇದನ್ನು ಕೂಡಲೇ ತಡೆಗಟ್ಟಿ ಇವರನ್ನು ಬಲಿಹಾಕಬೇಕು. ಇದನ್ನು ಸರ್ಕಾರ, ಸಮಾಜ ಮತ್ತು ಹರಿಜನ ವಿದ್ಯಾವಂತರು ಖಂಡಿತ ಗಮನಿಸಬೇಕು. ಈ ಕಳ್ಳರ ಗುಂಪನ್ನು ಕೂಡಲೇ ಬಲಿಹಾಕಬೇಕು.

ಪ್ರತಿವರ್ಷವೂ ಹರಿಜನಪುರೋಭಿವೃದ್ಧಿಗೆ ವಿವಿಧ ಇಲಾಖೆಗಳಲ್ಲಿ ಹಣ ಮಂಜೂರಾಗುತ್ತಿದೆ. ಇಲಾಖಾ ಅಧಿಕಾರಿಗಳ ಮಂದವರ್ತನೆ ಮತ್ತು ಅಶ್ರದ್ಧೆಯಿಂದ ಲಕ್ಷೋಪಲಕ್ಷರೂಪಾಯಿಗಳು ಲ್ಯಾಪ್ಸ್ ಆಗುತ್ತಿದೆ. ಇದರಿಂದ ಜನತೆಗೆ ಅತೀವ ಅನ್ಯಾಯವಾಗುತ್ತಿದೆ. ಇಂತಹ ಸನ್ನಿವೇಶ ಮುಂದೆಎಂದೂ ಬರದಿರಲಿ. ಸಮಾಜವಾಗಲೀ ಸಂಘವಾಗಲೀ ಸರ್ಕಾರಿ ಅಧಿಕಾರಿಗಳಾಗಲೀ ಇಂತಹ ತಪ್ಪು ಹೆಜ್ಜೆ ಇಟ್ಟರೆ, ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕಾದ್ದು ಸೂಕ್ತ.

ಹಲವುರೀತಿಯ ಪ್ರಾಬಲ್ಯಕ್ಕೆ ಬಲಿಬಿದ್ದ ಕೆಲವು ಅಧಿಕಾರ ವರ್ಗವು ಕಾನೂನು ಪ್ರಕಾರ ಹರಿಜನರ ರಕ್ಷಣೆ, ಅವರ ಹಕ್ಕು ಬಾಧ್ಯತೆಗಳ ಸಂದಾಯ ಸಂಬಂಧದಲ್ಲಿ ಲೋಪಮಾಡುತ್ತಿದ್ದಾರೆ. ಕಾನೂನು ಪರಿಪಾಲನೆಯಲ್ಲಿ ಕರ್ತವ್ಯಲೋಪ, ಸಂದರ್ಭಾನುಸಾರ ಹರಿಜನರನ್ನೇ ಮುಖಭಂಗ, ತೇಜೋಭಂಗ, ಅಪಹಾಸ್ಯ ಮುಂತಾದ ರೀತಿ ನಿರುತ್ಸಾಹಗೊಳಿಸುವುದು. ಲಂಚರುಷುವತ್ತುಗಳನ್ನು ಪಡೆಯುವುದು, ಅವರನ್ನು ತೇಜೋವಧೆಗೆ ಈಡು ಮಾಡುತ್ತಿದ್ದಾರೆ. ಇಂಥವರ ಮೇಲೆ ಕ್ರಮಕೈಗೊಳ್ಳಲು 'ಹರಿಜನ ಪುರೋಭಿವೃದ್ಧಿ ಆಕ್ಟ' ತಯಾರಾಗಬೇಕು. ಅಂತಹ ಆಕ್ಟು ಎಲ್ಲಾ ಅಧಿಕಾರಿಗಳಿಗೂ ದಾರಿ ತೋರಿಸುವುದಲ್ಲದೆ ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಕೆಲಸಮಾಡಲು ಹುರುಪುಗೊಳಿಸುವುದು. ಆದುದರಿಂದ ಆಕ್ಟ್ ಒಂದನ್ನು ತಕ್ಷಣ ಕಾರ್ಯಗತ ಮಾಡಿ ವಿಶಾಲ ಮೈಸೂರಿನ ಕನ್ನಡಮ್ಮನ ಕೀರ್ತಿಯು ನಭೋಮಂಡಲದಲ್ಲಿ ಬೆಳಗುವಂತಾಗಲೆಂದು ಹಾರೈಸುತ್ತೇವೆ.

ಸಂ]

ಭಾರತದ ರಾಷ್ಟ್ರಪಿತ ಮಹಾತ್ಮಗಾಂಧಿ.



ಶತಮಾನಗಳಿಂದ ಬೆಳೆದು ಬಂದಿರುವ ಅಸ್ಪೃಶ್ಯತೆ ಎಂಬ ಪಾಪಕ್ಕೆ ನಾವು ಪ್ರಾಯಶ್ಚಿತ ಮಾಡಿಕೊಳ್ಳಬಹುದಾದ ಮಾರ್ಗವೆಂದರೆ ಹರಿಜನರಲ್ಲಿ ಗೆಳೆಯತನವನ್ನುಂಟುಮಾಡಿಕೊಳ್ಳುವುದರ ಮೂಲಕ, ಹರಿಜನರ ಮನೆಗೆ ಹೋಗುವುದರ ಮೂಲಕ, ನಿಮ್ಮ ಮಕ್ಕಳನ್ನು ನೀವು ಅಪ್ಪುವಂತೆಹರಿಜನರ ಮಕ್ಕಳನ್ನು ಅಪ್ಪಿಕೊಳ್ಳುವುದರ ಮೂಲಕ, ಹರಿಜನರಿಗೆ, ಉಣಲು ಸಾಕಷ್ಟಿದೆಯೇ, ಕುಡಿಯಲು ಶುದ್ಧವಾದ ನೀರು ಇದೆಯೇ, ನಿಮ್ಮ ಹಕ್ಕಿನಂತೆ, ನೀವು ಅನುಭವಿಸುತ್ತಿರುವ ಸ್ವಚ್ಛವಾದ ಬೆಳಕು ಗಾಳಿ ಅವರಿಗಿದೆಯೇ, ಎಂಬುದನ್ನು ಸವರ್ಣೀಯರು ತಿಳಿಯುವುದರ ಮೂಲಕ.

—ಮಹಾತ್ಮ ಗಾಂಧಿ

ಮೈಸೂರು ಸಂಸ್ಥಾನದ ನಿಮ್ನವರ್ಗ ಸೆಮಿನಾರ್ ಗೋಷ್ಠಿಯ ಆರಂಭೋತ್ಸವದ ದೃಶ್ಯ



ಅಸ್ಪೃಶ್ಯತೆಯ ಇತಿಹಾಸ

ಅಸ್ಪೃಶ್ಯತೆಯು ಭಾರತದಲ್ಲಿ ಯಾವಾಗ ಜನ್ಮ ತಾಳಿತು ಎಂಬುದು ನಿಖರವಾಗಿ ಗೊತ್ತಾಗುವುದಿಲ್ಲ ಶಾಸ್ತ್ರಕಾರರೆ ಇದನ್ನು ಅಲ್ಲಲ್ಲಿ ಉಪಯೋಗಿಸಿಕೊಂಡಿರುವುದರಿಂದ ಇದನ್ನೂ ಕೂಡ ಶಾಸ್ತ್ರಪುರಾಣಗಳಷ್ಟೆ ಪ್ರಾಚೀನವಾದುದೆಂದು ಮಾತ್ರ ಹೇಳಬಹುದು. ಇದು ಜನ್ಮ ತಾಳುವುದಕ್ಕೆ ಕಾರಣಗಳನ್ನು ಹಲವಾರು ಪಂಡಿತರು ಹಲವಾರು ರೀತಿಯಲ್ಲಿ ತಮ್ಮ ತಮ್ಮ ಬುದ್ಧಿ ಚಮತ್ಕಾರ ಮಾನದಿಂದ ಅಳೆದಿದ್ದಾರೆ. ಒಟ್ಟೊಟ್ಟು ಪಂಡಿತನೂ ಈ ಅಸ್ಪೃಶ್ಯತೆಯನ್ನು ಒಂದೊಂದು ಮುಖವಾಗಿ ವರ್ಣಿಸಿ ಈ ಸಂಕೇತದ ಜನರನ್ನು ತಮ್ಮ ದೇಶದ ಒಂದು ನೀಚ ಮಟ್ಟಕ್ಕೊ ಎಳೆದಿದ್ದಾರೆ.

ಇತಿಹಾಸ ಸಂಶೋಧನೆ

ನಲ್ಲಿ ಪರಕೀಯರು ಕಾಲಿಟ್ಟಮೇಲೆ ಇಲ್ಲಿಯ ಪೂರ್ವೇತಿಹಾಸಗಳ ಸಂಶೋಧನಾ ಕಾರ್ಯಗಳು ಪ್ರಶಂಶನೀಯವಾಗಿ ನಡೆದಿದೆ. ಅವರ ಸಂಶೋಧನೆಗಳ ಉದ್ದಿಶ್ಯವು ರಾಷ್ಟ್ರದಲ್ಲಿ ನಾನಾರೀತಿಯ ಜಾತೀಮತ ಕಟ್ಟಲೆಗಳಿದ್ದುವೆಂಬುದನ್ನು ಜನತೆಯ ಮುಂದಿಟ್ಟು ಕೀಳುಮೇಲುಗಳ ಘರ್ಷಣೆ ತಂದೊಡ್ಡಿ ಮಧ್ಯೆ ತಾವು ತೀರ್ಪುಗಾರರಾಗುವುದು. ತಮ್ಮ ಸ್ಥಾನ ಭದ್ರ ಮಾಡಿಕೊಳ್ಳುವ ಉದ್ದಿಶ್ಯವಾಗಿರಬಹುದು ಅಥವಾ ಸಂಶೋಧನ ಕಾರ್ಯದಲ್ಲಿ ತಮ್ಮ ಬುದ್ಧಿಶಕ್ತಿ ಶ್ರದ್ಧೆ ಸಾಹಸಗಳನ್ನು ಪ್ರದರ್ಶಿಸುವುದರ ಮುಖೇನ ತಮ್ಮ ಜನಾಂಗದ ಸಂಸ್ಕೃತಿಯ ಹಿರಿಮೆಯನ್ನು ಎತ್ತಿಹಿಡಿದು, ನಮಗೇ ನಮ್ಮ ಮತ ಧರ್ಮದಲ್ಲಿ ನಿರಾಸಕ್ತಿ ಹುಟ್ಟಿಸಿ, ತಮ್ಮ ಮತ ಧರ್ಮ ಕರ್ಮಗಳ ಕಡೆಗೆ ನಮ್ಮನ್ನು ಆಕರ್ಷಿಸಿ ತಮ್ಮ ಧರ್ಮವನ್ನು ಪ್ರತಿಷ್ಠಾಪನೆ ಮಾಡುವ ಉದ್ದಿಶ್ಯವೂ ಆಗಿರಬಹುದು. ಅದೇನೇ ಆಗಿರಲಿ ಸಂಶೋಧನೆಯಂತೂ ನಡೆದಿದೆ.

ಅಂತೂ ಅವರ ಕಾಲದಲ್ಲಿ ಹೊರಬಿದ್ದ ಇತಿಹಾಸ ಶೋಧನೆಗಳಿಂದ ತಿಳಿದುಬರುವ ಪ್ರಕಾರ **ಅಸ್ಪೃಶ್ಯತೆಯು** ಒಂದು ಜನಾಂಗದ ಜಾತಿಯಲ್ಲವೆಂಬುದೂ, ಇವರು ಭಾರತೀಯ ಸವರ್ಣೀಗಳೆನಿಸಿಕೊಳ್ಳುವವರು ಪರಿಗಣಿಸಿರುವಂಥಾ ಸಮಾಜ ಬಾಹಿರರಲ್ಲವೆಂಬುದೂ ಖಚಿತವಾಗಿದೆ.

ಅಸ್ಪೃಶ್ಯರೆಂಬುವರು ಯಾರು?

ಈಗಿನ ಈ ಅಸ್ಪೃಶ್ಯರೆಂಬುವರು ಭಾರತದ ಮೂಲನಿವಾಸಿಗಳು. ಆರ್ಯರು ಭಾರತಕ್ಕೆ ವಲಸೆಬಂದಮೇಲೆ ಅವರ ಆಚಾರ ವ್ಯವಹಾರಗಳು ತೀರ ಭಿನ್ನವಾಗಿದ್ದು ಈ ಮೂಲನಿವಾಸಿಗಳ ಆಚಾರ ವ್ಯವಹಾರಗಳಲ್ಲಿ ಸಮರಸವಾಗಿ ಹೊಂದಿಕೊಳ್ಳದೆ. ಕೆಲವು ಕಾಲ ಅಂತರ್ ಹೋರಾಟ ನಡೆದಂತೆ ವ್ಯಕ್ತವಾಗುತ್ತದೆ. ಆರ್ಯರ ಕರ್ಮ ಧರ್ಮ ಆಚಾರಗಳೇನೇ ಇರಲಿ ಮುಖ್ಯವಾಗಿ ಇವರ ವೃತ್ತಿಯು ಪಶುಪಾಲನೆಯಾಗಿತ್ತೆಂದು ತಿಳಿಯಬರುತ್ತದೆ. ಆ ವೃತ್ತಿಯನ್ನು ಸುಗಮವಾಗಿ ನಡೆಸಿಕೊಂಡು ಹೋಗುವ ಉದ್ದಿಶ್ಯದಿಂದಲೇ ಅವರು ಫಲವತ್ತಾದ ಭಾರತ ದೇಶಕ್ಕೆ ವಲಸೆ ಬಂದರೆಂದು ಚರಿತ್ರೆಯು ಹೇಳುತ್ತಿದೆ. ಇವರು ಮಾಂಸಹಾರಿಗಳಾಗಿದ್ದು ತಮ್ಮ ಆಹಾರಕ್ಕಾಗಿಯೂ ಈ ಜೀವಗಳನ್ನು ವೃದ್ಧಿಗೊಳಿಸಲೇಬೇಕಾಗಿತ್ತು.

ಹೀಗೆ ಹೊರಗಿನಿಂದ ವಲಸೆಬಂದ ಜನರಿಗೆ ಇಲ್ಲಿ ನೆಲೆ ಕೊಡಬಾರದೆಂಬ ಉದ್ದಿಶ್ಯದಿಂದ ಇಲ್ಲಿಯ ಮೂಲನಿವಾಸಿಗಳು ಈ ಆರ್ಯರ ಮೇಲೆ ಬಿದ್ದು ಹೊಡೆದು ಬಡಿದು ರಗಳೆ ಕೊಡುತ್ತಿದ್ದರು. ಇದರ ಪರಿಣಾಮವಾಗಿ ಆರ್ಯರು ಮೂಲನಿವಾಸಿಗಳಮೇಲೆ ಕೈಮಾಡಿ ಅವರನ್ನು ಊರುಬಿಟ್ಟು ಓಡಿಸಿ ಅವರಿಗೆ ಸರಿಯಾಗಿ ನೆಲೆಯಿಲ್ಲದಹಾಗೆಮಾಡಿ, ಅವರುಗಳು ಬೆಟ್ಟ ಗುಡ್ಡ ಕಾಡುಮೇಡುಗಳಲ್ಲಿ ಅಲೆಯುವಂತೆ ಮಾಡಿಟ್ಟರು. ಕಾಡು ಮೇಡು, ಬೆಟ್ಟ, ಗುಟ್ಟಗಳಲ್ಲಿ ಗುಂಪುಗುಂಪಾಗಿ ಅಲೆಯುತ್ತಿದ್ದ ಮೂಲನಿವಾಸಿಗಳೂ ಆಗಾಗ ಆರ್ಯರ ತಂಗಡಗಳ ಮೇಲೆ ಬಿದ್ದು ಧಾಳಿಮಾಡುತ್ತಿದ್ದರು. (ಈ ರೀತಿ ಹೊರಗಡೆ ವಾಸ ಮಾಡುತ್ತಿದ್ದು ಹಾಗೆಯೇ ಉಳಿದುಕೊಂಡ ತಂಡಗಳೇ ಬಜಾರ ಒಮಾಣಿ, ಸೋಲಿಗ ತಾಂಡಗಳೂ ಬಯಲು ಒಡ್ಡರೂ

ಕಲ್ಲು ಒಡ್ಡರೂ, ಮಣ್ಣು ಒಡ್ಡರೂ ಕೊರಚ, ಕೊರವ ಮತ್ತು ನಿವಾಸರಹಿತರಾಗಿ ಓಡಾಡುತ್ತಿರುವ ಇತರ ವರ್ಗಗಳವರೂ ಆಗಿರಬಹುದೆಂದು ಚರಿತ್ರೆಯ ಹಿನ್ನೆಲೆಯಿಂದ ಭಾವಿಸಬಹುದಾಗಿದೆ) ಇಂಥ ಸಣ್ಣಪುಟ್ಟ ಹೋರಾಟಗಳು ಆಗಾಗ ನಡೆದುವು. ವಲಸೆಬಂದ ನಾಗರಿಕ ಆರ್ಯರು ಮೂಲನಿವಾಸಿಗಳಲ್ಲಿ ಶತ್ರುತ್ವದಿಂದ ಜೀವಿಸುವುದು ಕಷ್ಟವೆಂಬುದನ್ನು ಮನಗಂಡ ಮೇಲೆ ಬಾಂಧವ್ಯ ಆಚಾರ ಆಹಾರ ವ್ಯವಹಾರಗಳಲ್ಲಿ ವಿನಿಮಯ ಮಾಡಿಕೊಂಡು ಸಮರಸವೇರ್ಪಡಿಸಿಕೊಂಡು ಬಹುಕಾಲ ಅನ್ಯೋನ್ಯ ವಿಶ್ವಾಸ ಪ್ರೇಮದಿಂದ ಬಾಳಿಕೊಂಡು ಬಂದರು. ಇವರ ಸಹ ಬಾಳ್ವೆಯನ್ನು ಯಾವ ಭಾಷೆಯಲ್ಲಿ ಹೇಗೆ ವರ್ಣನೆಮಾಡಿ ವಿಸ್ತರಿಸಿದರೂ ಮೂಲತತ್ವವೇನೋ ಒಂದೇ ಆಗಿದೆ. ಅಂದ ಮೇಲೆ ಅಸ್ಪೃಶ್ಯರೆಂಬುವರು ಯಾರು? ಎಂಬ ಪ್ರಶ್ನೆಗೆ ಉತ್ತರವೇ ಇಲ್ಲ.

'ಭಾರತದ ಹಿರಿಮೆ'

ಪುಣ್ಯಭೂಮಿಯಾದ ಭಾರತವು ಸಂಪತ್ ಸಮೃದ್ಧಿಯಲ್ಲಿ ಇಡೀ ಜಗತ್ತಿಗೇ ಕಿರೀಟಪ್ರಾಯವಾಗಿದೆ. ಉಷ್ಣವಲಯ, ಪ್ರಕೃತಿದತ್ತವಾದ ಜೀವನದಿಗಳು, ಋತುಧರ್ಮಗಳಲ್ಲಿ ಅತ್ಯಂತ ಏರುಪೇರಿಲ್ಲದ ಹಿತಕರ ವಾತಾವರಣ, ಒಂದು ಕಡೆ ನಭೋಚುಂಬಿತ ಹಿಮಗಿರಿ, ಮತ್ತೊಂದುಕಡೆ ಸಮುದ್ರರಾಜನ ರಕ್ಷಣೆ, ಹಾಗೂ ಪೂರ್ವ ಪಶ್ಚಿಮ ಘಟ್ಟಗಳಿಂದ ಭದ್ರತೆ. ಇಂಥಾ ಪ್ರಕೃತಿ ಸೃಷ್ಟಿಯ ಎಲ್ಲೆಗಳ ಮಧ್ಯದಲ್ಲಿದೆ ಭಾರತ. ಇಲ್ಲಿ, ಜನ ಜೀವನ ಅವಶ್ಯಕತೆಗಳನ್ನು ತುಂಬುವ ಪುಂಜಿಯಾಗಿ, ಆರೋಗ್ಯ ಸಂಪತ್ತು ಸೌಕರ್ಯಗಳ ಕೇಂದ್ರವಾಗಿ, ಹೊರಗಡೆಯವರ ಹಂಗಿಗೆ ತಲೆಬಾಗದೆ ಬದುಕು ನಡೆಸಲು ಅನುಕೂಲವಿದೆ. ಉತ್ಕೃಷ್ಟಭೂಮಿ, ಸಮೃದ್ಧಿ ಜಲ, ಉತ್ತಮ ವಾಯುಗುಣ, ಹೀಗೆ ನಾಲ್ಕೂನಿಟ್ಟಿನಿಂದ ಪೂರ್ಣಗೊಂಡಿದೆ, ಪ್ರಕೃತಿ ಮಾತೆಯ ಸಾರಸರ್ವಸ್ವವೂ ರೂಪುಗೊಂಡಿರುವಂತೆ ಶೋಭಾಯಮಾನವಾಗಿದೆ. ಇಂಥ ಪ್ರಕೃತಿ ಸೌಂದರ್ಯ ಸಂಪತ್ ಸಮೃದ್ಧಿಯ ರಾಷ್ಟ್ರಕ್ಕೆ ಹೊರಗಿನಿಂದ ಬಂದವರು ವಾಪಸು ಹೋಗಲು ಇಷ್ಟಪಡುವುದೇ ಇಲ್ಲ ಇಂಥಾ ಸಂಪತ್ ಸಮೃದ್ಧಿಯಿಂದ ಕೂಡಿದ ಭಾರತಕ್ಕೆ ವಲಸೆ ಬಂದವರೆಲ್ಲಾ ಇಲ್ಲಿಯೇ ತಳ ಊರಿಬಿಟ್ಟರು.

ವರ್ಣಾಶ್ರಮ ಸೃಷ್ಟಿ

ಆರ್ಯರು ಭಾರತಕ್ಕೆ ಬಂದಮೇಲೂ ಬೇರೆ ಬೇರೆ ಜನಾಂಗದವರು ಹತ್ತಾರುಬಾರಿ ಹೊರಗಿನಿಂದ ಬಂದು ಭಾರತದ ಮೇಲೆ ಧಾಳಿ ಮಾಡಿರುವಂತೆ ಚರಿತ್ರೆಯು ಹೇಳುತ್ತದೆ. ಹಳೆಯಕೋಟೆ, ಕೊತ್ತಳ, ಕಂದಕ, ಸುರಂಗಗಳು ಈ ನಿದರ್ಶನಗಳನ್ನು ಸಾರಿ ಹೇಳುತ್ತಿವೆ. ಆರ್ಯರ ಆಗಮನದಿಂದಲೇ ಆರಂಭವಾಗಿದ್ದ ಹೋರಾಟಗಳು ಭಾರತದೊಳಗಡೆ ಅಲ್ಲಲ್ಲಿ ಆಗಾಗ ಸಣ್ಣಪುಟ್ಟದಾಗಿ ನಡೆಯುತ್ತಿದ್ದು, ಜನಜೀವನದಲ್ಲಿ ಅಶಾಂತಿಯ ಪ್ರವಾಹವು ಉಕ್ಕಿ ಉಕ್ಕಿ ತಗ್ಗುತ್ತಿತ್ತು. ಇದರ ಜೊತೆಗೆ ಹೊರಗಣ ಶತ್ರುಗಳ ಅಸಹನೀಯ ಧಾಳಿಗಳೂ ಬೇರೆ ಆರಂಭವಾದುವು. ಅವುಗಳನ್ನು ತಡೆಯಲು ಭಾರತವಾಸಿಗಳಾದ ಆರ್ಯ ಅನಾರ್ಯರುಗಳಲ್ಲಿ ಶಿಸ್ತು ಸಂಯಮಗಳು ಏರ್ಪಡಬೇಕಾದ ಅವಶ್ಯಕತೆ ಕಂಡುಬಂತು. ಅದರಂತೆ ತಮ್ಮ ಜೀವ ಜನ ಧನ ಸ್ವತ್ತು ಸಂಪತ್ತುಗಳ ರಕ್ಷಣೆಗಾಗಿ, ತಮ್ಮ ಸಹಬಾಳುವೆಗಾಗಿ, ತಮ್ಮ ನಿತ್ಯ ಜೀವನದ ಆಚಾರ ವ್ಯವಹಾರ ನಡುವಳಿಕೆಗಳ ಸುಗಮಕ್ಕಾಗಿ, ಇವರಿವರಲ್ಲೇ ಕೆಲವು ನಿರ್ಣಯಗಳನ್ನು ಮಾಡಿಕೊಂಡರು. ಆ ನಿರ್ಣಯಗಳ ಪ್ರತೀಕವೇ ಭಾರತೀಯರಲ್ಲಿ ತಲೆದೋರಿದ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ (ಶರ್ಮ, ವರ್ಮ, ಗುಪ್ತ, ದಾಸ) ಎಂಬ ಚತುರ್ವರ್ಣಗಳು ಎಂದು ಸೂಕ್ಷ್ಮವಾಗಿ ಅರಿಯೋಣ.

ವರ್ಣಾಶ್ರಮ ವಿಂಗಡನೆಯ ಕಾಲ

ಈ ಚತುರ್ವರ್ಣ ನಿರ್ಣಯಗಳು ವೇದಗಳಕಾಲದ್ದೆಂದು ಕೆಲವರೂ ಉಪನಿಷತ್ತುಗಳ ಕಾಲದ್ದೆಂದು ಕೆಲವರೂ ವೇದೋಪನಿಷತ್ತುಗಳ ಕಾಲದಲ್ಲಿ ಕಾಣಬಾರದ ಈ ವರ್ಣಾಶ್ರಮಗಳು ಮಹಾಭಾರತ ಯುದ್ಧಕಾಲದಲ್ಲಿ ಕಂಡುಬಂದಿತೆಂದು ಕೆಲವರೂ ವಾದಿಸುತ್ತಾರೆ. ವಾದಗಳು ಹೇಗಾದರೂ ಇರಲಿ ಒಂದು ಮನೆಯ ವ್ಯವಹಾರದಲ್ಲೇ ನಾಲ್ಕು ಮುಖಗಳಿರಬೇಕಾದಾಗ ಒಂದು ದೇಶ, ಸಮಾಜ, ಹಾಗೂ ಸಂಸ್ಕೃತಿಯಲ್ಲಿ ನಾಲ್ಕು ಮುಖಗಳೇರ್ಪಟ್ಟುದು ಆಶ್ಚರ್ಯವೂ ಅಲ್ಲ, ಅನುಚಿತವೂ ಅಲ್ಲ. ಆದರೆ ಇದರ ಪರಿಣಾಮವು ಬರಬರುತ್ತಾ ಉಲ್ಬಣವಾಗಿ ಈಗನಷ್ಟು ವಿಪರೀತಕ್ಕಿಟ್ಟುಕೊಂಡಿದ್ದು ಅನುಚಿತವೂ ಹೌದು, ಅಕ್ಷಮ್ಯ ಅಪರಾಧವೂ ಹೌದು. ಹೀಗೆ ಆರಂಭವಾದ ವರ್ಣಗಳು ಅಲ್ಲಿಂದ ಮುಂದಕ್ಕೆ ಬಾಂಧವ್ಯ ಬೆಳೆಸುವುದರಲ್ಲಿ ತಿಥಿ, ವಾರ, ಪೂಜೆ, ಪುಣ್ಯದಿನ ಶುಭ ಅಶುಭ ಹಬ್ಬ ಹರಿದಿನ, ಕರ್ಮ ಧರ್ಮಗಳ ಆಚರಣೆಯಲ್ಲಿ ತಮ್ಮದೇ ಆದ ಪದ್ಧತಿಗಳನ್ನು ಬೆಳೆಸಿಕೊಳ್ಳುತ್ತ ಬಂದುವು. ಕಡೆ ಕಡೆಗೆ ಊಟ ಉಪಚಾರ, ಕೊಡುವುದು ಕೊಳ್ಳುವುದು ಸಿದ್ಧ ನಿಸಿದ್ಧ ಕರ್ಮಗಳಿಗೂ ಕೂಡ ವರ್ಣಾಶ್ರಮಗಳೇರ್ಪಟ್ಟವು. ಈ ರೀತಿ ಒಂದು ಪಂಗಡದವರಲ್ಲಿ ಮತ್ತೊಂದು ಪಂಗಡದವರಿಗಿಂತ ಶ್ರೇಷ್ಠತ್ವ ಪಾವನತ್ವಗಳೇರ್ಪಟ್ಟುವು. ಹೀಗೆ ಹೊರಗಿನಿಂದ ವಲಸೆ ಬಂದು ಈ ದೇಶೀಯರಲ್ಲಿ ಬಾಂಧವ್ಯ ವ್ಯವಹಾರ ಚತುಷ್ಟಯಗಳಿಂದ

ಬಾಳುತ್ತ ಬಂದ ಆರ್ಯರೂ ಅವರ ಅನುಯಾಯಿಗಳಾಗಿ ಬೆಳಕಿಗೆ ಬಂದಿದ್ದ **ನಾಗರಿಕ** ಅನಾರ್ಯರೂ ಸೇರಿ ಒಂದಾದರು. ತಮ್ಮ ಸ್ವಾಭಿಮಾನ ಸ್ವಾರ್ಥದೃಷ್ಟಿಯಿಂದ ಇವರು ವಿಶೇಷರೀತಿಯ ಬ್ರಾಹ್ಮಣ್ಯವೇರ್ಪಡಿಸಿಕೊಂಡರು. ತಮ್ಮ ಬುದ್ಧಿಶಕ್ತಿ ಮೇಧಾಬಲ ವಿಧ್ಯಾಪ್ರೌಢಿಮೆಯಿಂದ ಶುಚಿಯಾದ ಬಾಳ್ವೆ, ರುಚಿಯಾದ ಊಟ, ಶುಭ್ರವಾದ ವಾತಾವರಣ, ಚೊಕ್ಕಟವಾದ ನಡೆನುಡಿ, ಅಚ್ಚುಕಟ್ಟಾದ ಜೀವನ ಏರ್ಪಟ್ಟವು. ಇವು ತಮ್ಮದೊಂದು ಮತಕ್ಕೇ ಮೀಸಲು. ಇತರ ವರ್ಗಗಳು ನಮಗಿಂತಲೂ ಕೀಳು ಎಂಬ ಭಾವನೆ ಇವರಲ್ಲಿ ತಲೆದೋರುತ್ತ ಬಂದು ಇವರ ಪ್ರಭಾವವು ಮೇರುಗಿರಿಯಂತೆ ಬೆಳೆದು ಹೋಯಿತು. ಇಲ್ಲಿಂದ ಆರಂಭವಾದ ತಾರತಮ್ಯಗಳ ಅಂತರವೇ ಉಚ್ಚನೀಚಗಳ ನಿರ್ಮಾಣಕ್ಕೆ ಕಾರಣವಾದವು.

ಮತಗಳು ಮತ್ತು ಪದ್ಧತಿಗಳು

ಒಂದೇ ಬುಡವಾದ ವೃಕ್ಷಕ್ಕೆ ಕೆಳಗಡೆ ನಾನಾದಿಕ್ಕಿಗೆ ಬೇರುಗಳು ಬಿಟ್ಟಂತೆ ಮತಗಳೂ ಅದೇ ವೃಕ್ಷಕ್ಕೆ ಮೇಲುಗಡೆ ನಾನಾದಿಕ್ಕಿಗೆ ಕೊಂಬೆಗಳು ಬಿಟ್ಟಂತೆ ಪದ್ಧತಿಗಳೂ ಬೆಳೆಯುತ್ತಾ ಬಂದವು. ಉತ್ತಮ ವರ್ಣದವರೆನಿಸಿಕೊಂಡು ಮೆರೆದ ಬ್ರಾಹ್ಮಣರಲ್ಲೂ ಐಕ್ಯಮತ್ಯ ಬಹುಕಾಲ ಉಳಿಯಲಿಲ್ಲ. ಅವರಲ್ಲೂ ನಾಲ್ಕಾರು ಶಾಖೆಗಳೇರ್ಪಟ್ಟು ಶೈವ, ವೈಷ್ಣವ, ಸ್ಮಾರ್ತ ಶಾಕ್ತೇಯಾದಿ ಕೋಮುಗಳು ಹುಟ್ಟಿಕೊಂಡು ಒಂದೊಂದು ಕೋಮಿನವರೂ ತಮ್ಮ ಪ್ರತಿಷ್ಠೆ ಪ್ರಭಾವಗಳನ್ನು ಪಂಗಡದ ಮೇಲೆ ಬೀರಿ ಅವರನ್ನು ತಮ್ಮ ಮತ ಬೆಳವಣಿಗೆಗೆ ಭೂಮಿಕೆಯನ್ನಾಗಿ ಮಾಡಿಕೊಂಡರು, ಅಲ್ಲಿಂದ ಮುಂದೆ ಮತ ಮತಾಂತರಗಳ ಹೋರಾಟವು ಆರಂಭವಾಯಿತು. ಇದರ ಹಿನ್ನೆಲೆಯಲ್ಲಿ ಉದಿಸಿದ ಅಸೂಯಾ ಸ್ವಾರ್ಥಗಳು ಜನಜೀವನದಲ್ಲಿ ಇಕ್ಕಟ್ಟನ್ನು ತಂದಿಟ್ಟವು.

ದಾರ್ಶನಿಕರ ಪ್ರಭಾವ

ಈ ವೇಳೆಗೆ ಭೌದ್ಧ ಮತವು ತಲೆಯೆತ್ತಿ ಬಹುಕಾಲ ಬಾಳಿತು. ಅದು ಮತ ಮತಾಂತರಗಳ ಮಸೆದಾಟದಿಂದ ಉದ್ಭವಿಸಿದ ಪ್ರಳಯಾಗ್ನಿಯನ್ನು ತನ್ನ ಅಹಿಂಸಾ ಶಾಂತಿ ಜಲದಿಂದ ಆರಿಸುತ್ತಾ ಬಂತು. ಅದರ ಪ್ರಭಾವದಿಂದ ಹಿಂದೂ ಧರ್ಮವು ನಶಿಸುವ ಕಾಲವು ಸನ್ನಿಹಿತವಾಗಿತ್ತು.

ಕ್ರಿಸ್ತಪೂರ್ವ ಸುಮಾರು ಐದನೇ ಶತಮಾನದಲ್ಲಿ ಕಪಿಲವಸ್ತುವಿನಲ್ಲಿ ಬುದ್ಧನ ಜನನವಾಯ್ತು. ಪ್ರಕಾಶಕ್ಕೆ ಬಂದ ಧ್ರುವ ನಕ್ಷತ್ರದಂಥಾ ಬುದ್ಧಗುರು, ಧನಕನಕ ವಸ್ತುವಾಹನ, ಸಿಂಹಾಸನಭಾಂಧವ್ಯ ಪತ್ನೀಪುತ್ರ ವ್ಯಾಮೋಹವನ್ನು ಬಿಟ್ಟು ಹೊ[illegible] ಬಂದರು, ಬುದ್ಧಗುರು ಸಾಧಿಸಿದ ತಪಃಪ್ರಭಾವವು ಇಡಿ[illegible] ಭಾರತವನ್ನೂ ನೆರೆಹೊರೆಯ ರಾಷ್ಟ್ರಗಳನ್ನು ವ್ಯಾಪಿಸುವ[illegible] ದಕ್ಕೂ, ಮೊದಲಿನಿಂದಲೂ ನಡೆದುಬಂದಿದ್ದ ಹಿಂದೂಧರ್ಮ[illegible] ಮಸುಕಾಗುವುದಕ್ಕೂ ಇರುವ ಕಾರಣಗಳನ್ನು ಸೂಕ್ಷ್ಮವಾ[illegible] ವಿವೇಚಿಸಿದರೆ ನಮಗೆ ಬಹುಮುಖ್ಯಾಂಶಗಳು ಕಂಡ ಬರುವುವು. ಬುದ್ಧಗುರು ತಾನು ಸಂಪಾದಿಸಿದ ಬೋಧಿ ಜ್ಞಾನವನ್ನು ಪ್ರಚಾರಮಾಡುವುದು ಅವಶ್ಯಕವೇ? ಒಳ್ಳೆಯದೇ? ಸಾಧ್ಯವೇ ಎಂಬ ಪ್ರಶ್ನೆಗಳಿಗೆ ಮೊದಲು ಉತ್ತರ ಕಂಡುಹಿಡಿದ[illegible] **"ಸರ್ವರಿಗೂ ಮೋಕ್ಷದ ಬಾಗಿಲನ್ನು ತೆರೆಯಬೇಕು. ಧರ್ಮ[illegible] ವನ್ನು ಕೇಳಲು ಕಿವಿ ಇರುವವರೆಲ್ಲರೂ ಅಧಿಕಾರಿಗಳು[illegible] ಅದರಂತೆ ನಡೆಯೋಣ. ಅವರಿಗೆ ಅವಕಾಶಕೊ[illegible] [illegible] ಎದುತೀರ್ಮಾನಿಸಿ ಅದರಂತೆ ಆಚರಿಸಿ ನಡೆದರು. "ಜೀವನವು ದುಃಖಮಯ, ದುಃಖವು ವಾಸನಾ [illegible] ಲುಗಳಿಂದ ಉದ್ಭವಿಸುತ್ತವೆ. ಹಂಬಲನ್ನು ಕಿತ್ತ[illegible] ದರೆ ದುಃಖವು ನಾಶವಾಗುತ್ತದೆ. ಹಂಬಲವನ್ನು ನಿರ್ಮೂ[illegible] ಲಮಾಡಲು ಅಷ್ಟಾಂಗ ಮಾರ್ಗವೇ ಉಪಾಯ. ಅಂದರೆ ಒಳ್ಳೆಯದೃಷ್ಟಿ, ಒಳ್ಳೆಯ ಜೀವನ, ಒಳ್ಳೆಯ ಉದ್ಯ[illegible] ಗಳು ಒಳ್ಳೆಯ ಎಚ್ಚರಿಕೆ, ಒಳ್ಳೆಯ ಆಲೋಚನೆಗಳು [illegible] ಅಷ್ಟಾಂಗ ಮಾರ್ಗವನ್ನನುಸರಿಸುವುದರಿಂದ ಕರ್ಮ[illegible] ಪ್ರವಾಹವು ನಿಂತು ಶಾಶ್ವತವಾದಶಾಂತಿ, ನಿರ್ವಾ[illegible] ಪಡೆಯಬಹುದೆಂದು ಅವರ ಅಭಿಮತ.**

ಹಿಂದೂಧರ್ಮದ ಸೂತ್ರಗಳನ್ನಷ್ಟು ನೋಡೋಣ. ವೇದ[illegible] ಉಪನಯನಗಳೂ ವೇದಾಧ್ಯಯನವೂ ಬ್ರಾಹ್ಮಣರಿಗೆ ಮಾತ್ರ ಮುಡಿಪು. ಇತರರು ಓದಬಾರದು. ಓದಿದರೆ ಮಹಾಪಾಪ[illegible] ಅವರ ನಾಲಿಗೆಯನ್ನು ಸುಡಬೇಕು. ಉಪನಯನವು ಬ್ರಾಹ್ಮ[illegible] ವೈಶ್ಯರಿಗೆ ಮಾತ್ರ ಉಂಟು, ಶೂದ್ರರಿಗೆ ಕೂಡದು. ಸ್ತ್ರೀಯರಿ[illegible] ಗಂತೂ ವೇದಾಧ್ಯಯನವೂ ಇಲ್ಲ, ಉಪನಯನದ ಮಾತೇ ಇಲ್ಲ. (ಅಂದಮೇಲೆ ಇವರು ಜೀವನ್ಮುಕ್ತರಾಗುವ ಬಗೆ ಹೇಗೆ?) ದೇವತೆಗಳನ್ನು ಒಲಿಸಿಕೊಳ್ಳಬೇಕಾದರೆ ಯಜ್ಞಯಾಗಾದಿಗಳನ್ನು ಮಾಡಲೇಬೇಕು. ಮಯೋಚಿತ ಪ್ರಾಣಿಹಿಂಸೆಯೂ ಆಗಬೇಕು. ಅದು ಏಕಾ ಏಕಿ ಅಲ್ಲ, ಮಂತ್ರಪೂರ್ವಕ. ಮುಸಲ್ಮಾನ್ ಸಹೋದರರು ಹಲಾಲ್ ಮಾಡುವ ಹಾಗೆ. ಮೇಲುಮತದರು ಕೀಳುಮತದವರ ಹೆಣ್ಣನ್ನು ತಂದುಕೊಂಡು ವಿವಾಹವಾಗಿ ಸಂಸಾರಹೂಡಿ ಮಕ್ಕಳು ಪಡೆಯಬಹುದು, ಅದಕ್ಕೆ ದೋಷವಿಲ್ಲ. ಆದರೆ ಮೇಲು ಮತದವರು ಕೀಳು ಮತದವರಿಗೆ ಹೆಣ್ಣನ್ನು ಕೊಡಬಾರದು, ಆಕಸ್ಮಾತ್ ಹಾಗೇನಾದರೂ ಆದರೆ ಅದು ಮಹಾಪಾತಕವೆಂದು ಶಾಸ್ತ್ರ ಸೂತ್ರಗಳ ಸಾರಿದವು.

ಂದೂ ಬಾಂಧವರು ಇವುಗಳ ತಾರತಮ್ಯವನ್ನು ವಿಮರ್ಶಿಸಿ ಕಾದ್ದನ್ನು ಅರಿಸಿಕೊಂಡರು. ಹಿಂದೂ ಧರ್ಮಕ್ಕಿಂತಲೂ ಷ್ಠವೆಂದು ತೋರಿದ ಬುದ್ಧ ಧರ್ಮಾವಲಂಬನೆಯು ೀತು ಹಿಮಾಚಲ ಪರಿಯಂತ ಇನ್ನೂ ಹೊರಗೂ ಸಹಾ ಸ್ಪಿತು. ಇದಕ್ಕೆ ಪ್ರಭುತ್ವದ ಬೆಂಬಲವೂ ಸಿಕ್ಕಿತು.

ಹಿಂದೂ ಧರ್ಮ ಪುನರುದ್ಧಾರ

ಸುಮಾರು ೧೫೦೦ ವರ್ಷಗಳ ಕಾಲ ಈ ಬೌದ್ಧಮತವು ಳಗಿತ್ತೆನ್ನಬಹು. ಸುಮಾರು ಕ್ರಿ.ಶ. ೧೧ನೇ ಶತಮಾನದಲ್ಲಿ ರ್ಮಾ ಶಂಕರಾಚಾರ್ಯರ ತಪೋಬಲ ಪ್ರಭಾವವೆಂದು ಏನು ೀಳಿಕೊಳ್ಳುತ್ತಾರೋ ಆ ಪ್ರಭಾವವನ್ನು ದೇಶದ ಮೇಲೆ ೀರಿದರು. ಅಲ್ಲಲ್ಲಿ ಕುಟುಕು ಜೀವದಿಂದ ಮಿನುಗುತ್ತಿದ್ದ ಶೈವ ಷ್ಣವ, ಶಾಕ್ತೇಯ, ಗಾಣಾಪತ್ಯ ಚಾರ್ವಾಕ, ಸೌರ ಎಂಬ ಣ್ಮತಗಳನ್ನು ಅನಿವಾರ್ಯವಾಗಿ ಅಂಗೀಕರಿಸಿ ಹಿಮಾಚಲ ಂದ ಕನ್ಯಾಕುಮಾರಿ ಪರ್ಯಂತ ಪ್ರವಾಸ ಮಾಡಿದರು. ಸ್ವಾರ್ಥ ಸಂಗಡಗಳು ಇವರ ಕರೆಗೆ ಓಗೊಟ್ಟು ಬೌದ್ಧಮತ ನ್ನು ಕಬಳಿಸಿ, ವೈಧಿಕ ಧರ್ಮವನ್ನೇ ಮತ್ತೆ ಹುಟ್ಟುಹಾಕುತ್ತ ಂದರು. ಬೌದ್ಧಮತದ ಪ್ರಭಾವವು ತಗ್ಗಿ ಷಣ್ಮತಗಳ ಪ್ರಭಾವ ಮಾತ್ರ ಅಚ್ಚಳಿಯದೆ ಉಳಿದುಕೊಂಡವು.

ಹೀಗಿರುವ ವೇಳೆಗೆ ಶ್ರೀ ವೈಷ್ಣವ ಮತ ಸ್ಥಾಪಕರಾದ ಶ್ರೀಮದ್ರಾಮಾನುಜಾಚಾರ್ಯರು ವಿಶಿಷ್ಟಾದ್ವೈತಮತವನ್ನು ಸ್ಥಾಪಿಸಿ ಈ ಮತಕ್ಕೆ ಚಾತುರ್ವರ್ಣವೆಂಬ ಭೇಧವಿಲ್ಲ ಎಲ್ಲರನ್ನೂ ಸೇರಿಸುತ್ತಾ ಬಂದರು. ಇದರ ಪ್ರತೀಕವೇ ಈ ದಿವಸ ಚಾತುರ್ವರ್ಣಗಳಲ್ಲಿಯೂ ಮತ್ತು ಅಸ್ಪೃಶ್ಯರಲ್ಲಿಯೂ ಕೂಡ ವೈಷ್ಣವಾಚಾರಿಗಳು ಉಳಿದುಕೊಂಡಿರುವರು. ಆ ವೇಳೆಯಲ್ಲಿ ಮತಾಂಧರಾದ, ಉಚ್ಚವರ್ಣದವರೆನಿಸಿಕೊಡವರು ಪ್ರಭುತ್ವದವರನ್ನು ಪ್ರೇರೇಪಿಸಿ ಆಚಾರ್ಯರ ಮೇಲೆ ಪ್ರಭಾವವನ್ನು ಬೀರಿ ಅವರನ್ನು ದೇಶಾಂತರಗತರನ್ನಾಗಿ ಮಾಡಿದರು. ಹಾಗೆ ಮಾಡದೇ ಇದ್ದಿದ್ದರೆ ಈ ದಿವಸ ನೂರೆಂಟು ಮತಗಳೂ ಮಾಯವಾಗಿ ವೈಷ್ಣವ ಮತ ಲಾಂಛನವೇ ಭಾರತದಿಡೀ ಬೆಳಗುತ್ತಿತ್ತೋ ಏನೋ. ಶ್ರೀಮದಾಚಾರ್ಯರು ಹನ್ನೊಂದನೇ ಶತಮಾನದಲ್ಲೇ ಅಸ್ಪೃಶ್ಯರಿಗೆ ಮೇಲುಕೋಟೆ. ಬೇಲೂರು ಶ್ರೀರಂಗಮುಂತಾದ ವೈಷ್ಣವ ದೇವಾಲಯಗಳಲ್ಲಿ ಪ್ರವೇಶಗಳನ್ನು ದೊರಕಿಸಿ ಕೊಟ್ಟರು. ಶ್ರೀ ತಿರುಪಣಾಳ್ವಾರ್ ಎಂಬ ಒಬ್ಬ ಅಸ್ಪೃಶ್ಯ ಪಂಗಡದ ಭಕ್ತನನ್ನು ಗುರುವಾಗಿ ಸ್ವೀಕರಿಸಿ ಅವರನ್ನು ಶ್ರೀ ರಂಗನಾಥ ಸನ್ನಿಧಿಗೆ ತಮ್ಮ ಭುಜದ ಮೇಲೆ ಹೊತ್ತುಕೊಂಡು ಹೋದರು. ಇಂಥಾ ಆದರ್ಶ ಮತಸ್ಥಾಪಕರು ಕೂಡ ಅಂಧಶ್ರದ್ಧೆಯ ಸ್ವಾರ್ಥಿಗಳ ಪ್ರಭಾವಕ್ಕೆ ಬಲಿ ಬಿದ್ದು ದೇಶಾಂತರಗತರಾಗಬೇಕಾಯಿತು. ಹಾಗೆಯೇ ಭಕ್ತಿಭಂಡಾರಿ ಬಸವಣ್ಣನವರೂ ಸಮಾಜ ಸುಧಾರಣೆಗೆ ಕೈಹಾಕಿದರು. ಇವರ ಕಾಲದಲ್ಲಿ ಲಿಂಗಾಚಾರವು ಪ್ರಬಲಿಸಿತು. ಇವರೂ ಮತಭೇದಗಳನ್ನೆಣಿಸದೆ ಅಸ್ಪೃಶ್ಯರಿಗೂ ಕೂಡ ಲಿಂಗಧಾರಣ ಮಾಡಿಸಿದರು ತಮ್ಮ ಅನುಭವ ಮಂಟಪದಲ್ಲೂ ಸ್ಥಾನವನ್ನು ಕೊಟ್ಟು ಲಿಂಗ ಜಂಗಮರಲ್ಲಿ ಎಲ್ಲರೂ ಒಂದೇ ಹಿರಿ ಕಿರಿಯ ಭೇದವಿಲ್ಲ ಎಂಬುದಾಗಿ ಸಾರಿದರು.

ಶೂದ್ರರ ನಿಲವು

ಈ ವೇಳೆಗಾಗಲೇ ಉನ್ನತಬ್ರಾಹ್ಮಣರ ಉನ್ನತ ಮತಸ್ಥಾಪನೆಯಾಗಿತ್ತಷ್ಟೆ. **ಇವರ ನಿರ್ಣಯಗಳ ಪ್ರಕಾರ** ಇವರಲ್ಲದೆ ಇನ್ನಿತರ ಮೂರು ವರ್ಣಗಳೂ (ಕ್ಷತ್ರಿಯ, ವೈಶ್ಯ ಶೂದ್ರ) ಗೊತ್ತಾಯಿತು. ಇಷ್ಟಾದರೂ ಭಾರತೀಯರು ಮುಖ್ಯವಾಗಿ ಉತ್ತು ಬಿತ್ತಿ ಬೆಳೆದು ದನ, ಕರು, ಕುರಿ, ಮೇಕೆ, ಸಾಕಿ ಜೀವನ ನಡೆಸಬೇಕಾಗಿತ್ತೇ ವಿನಹ ಹೇರೆ ಮಾರ್ಗವೇ ಇರಲಿಲ್ಲ. ಈ ಕಾರ್ಯಗಳಿಗೆಲ್ಲಾ ಮೂಲಮೂರ್ತಿಗಳಾದವರನ್ನು ಶೂದ್ರರೆಂದರು. ಇವರ ಸೇವಾನಿಷ್ಠೆ, ಜನಜೀವನ ರಕ್ಷಣಾತತ್ವ, ರಾಷ್ಟ್ರಭಕ್ತಿ, ಉತ್ಪಾದನಾಶಕ್ತಿ ಭಕ್ತಿ ಭಾವನೆ, ವಿನಯ ವಿಶ್ವಾಸ ಸದ್ಗುಣಗಳನ್ನು ಪರಿಗಣಿಸಿ ಸಮಾಜವು ಇವರಿ ನ್ಯಾಯವಾಗಿಯೂ, ಉನ್ನತಸ್ಥಾನವನ್ನು ಕೊಡಬೇಕಾಗಿತ್ತು. ಕರ್ಮವೇ ಧರ್ಮ, ಸೇವೆಯೇ ಪೂಜೆ ಎಂಬ ಉದಾತ್ತಧ್ಯೇಯದಿಂದ ಕೂಡಿದ ಇವರು ಪರಾಕಾಷ್ಟ ಕಾರ್ಪಣ್ಯಗಳಿಗೆ ಭು ಕೊಟ್ಟು ಜನಹಿತವನ್ನು ಕಾಪಾಡುವ ಕಾರ್ಯನಿರತರಾದರು. ಇವರೇ ಕಾಲಾನುಗುಣ್ಯವಾಗಿ ಅಸ್ಪೃಶ್ಯರಾದರು.

ಕಸಬುಗಳ ವಿಂಗಡನೆ

ಅಲ್ಲಿಂದೀಚೆಗೆ ಇವರ ವ್ಯವಹಾರಾರ್ಥ ಕೆಲವು ಕಾಯ ವಿಭಾಗಗಳನ್ನು ಏರ್ಪಡಿಸಿಕೊಂಡು ಅದಕ್ಕೆ ತಕ್ಕ ಅನ್ವ ನಾಮಗಳನ್ನೂ ಇಟ್ಟುಕೊಂಡಂತೆ ವ್ಯಕ್ತಪಡುತ್ತೆ. ಉದಾ ಣೆಗೆ :—ನಮ್ಮ ದಕ್ಷಿಣದೇಶದಲ್ಲಿ ವಾಡಿಕೆಯಲ್ಲಿರುವಂತೆ ವ ಗೆಲಸದವ—ಬಡಗಿ, ಕಬ್ಬಿಣದ ಕೆಲಸದವ—ಕಮ್ಮಾರ, ಕು ಮಡಿಕೆ ಮಾಡುವವ—ಕುಂಬಾರ, ಹಾಲುಮೊದಿಗಿಸುವವ ಕವಾಡಿಗ. ಚಿನ್ನ ಬೆಳ್ಳಿ ನಗ ನಾಣ್ಯ ಮಾಡುವವ —ಅ ಸಾಲಿಗ, ಕುರಿಗಳನ್ನು ಸಾಕಿ ತುಪ್ಪಟ ಕತ್ತರಿಸಿ ಕಂ ಮಾಡುವವ-ಕುರುಬ, ಚೌಲಕರ್ಮ ಮಾಡುವವ-ನಾಯಿ ದಾನ್ಯ ಬೆಳೆದು ಒಕ್ಕುವವ—ಒಕ್ಕಲಿಗ, ಗ್ರಾಮ ಗೌ

ಮಾಡುವವ-ತಳವಾರ, (ತಳವಾರ್ ಎಂದರೆ ಕತ್ತಿ). ಕುಳಗಳಿಂದ ಕಂದಾಯ ರೂಢಿಸುವವ-ಕುಳವಾಡೀ (ಚಕ್ರ) ಮಾದಕವನ್ನು (ಈಚಲು ಮರದನೀರ) ಒದಗಿಸುವ ಮಾದಗ, ಮಿಳಿಹೆಣೆಯುವವ-ಮಿಳಿಗಾರ, ಚರ್ಮಹದಮಾಡುವವ-ಚಮ್ಮಾರ. ಚಕ್ಕೆ ಕೆಲಸ ಮಾಡುವ-ಚಕ್ಕಲಿ ಕಲ್ಲುಹೊಡೆಯುವವರು-ಕಲ್ಲು ವಡ್ಡರು, ಸ್ಮಶಾನ ಕಾಯುವವ-ಸುಡುಗಾಡು ಸಿದ್ಧ. ಹಾವು ಕುಣಿಸುವವ-ಹಾವಾಡಿಗ, ಹೀಗೆಯೇ ಡೊಂಬ, ಬುಡುಬುಡಿಕೆ ಇತ್ಯಾದಿ ಕಸಬಿಗೆ ತಕ್ಕಂತೆ ವಿಂಗಡಿಸಲ್ಪಟ್ಟವರ ಗುಂಪುಗಳ ಮನೆತನವು ಬೆಳೆದು, ಅನ್ವರ್ಥನಾಮವೇ ಜಾತಿಯ ರೂಪ ತಾಳಿತೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ಜಾತಿ ಮತಗಳು ಕರ್ಮವನ್ನು ಅನುಸರಿಸಿ ಬಂದವುಗಳೇ ಹೊರತು ಹುಟ್ಟಿನಿಂದ ಬಂದ ಬೇಧಗಳಲ್ಲ. ಹೀಗೆಯೇ ಉತ್ತರದೇಶ ದಲ್ಲೂ ಕೂಡ ಅವರವರ ಕಸಬಿಗೆ ತಕ್ಕಂತೆ ಅನ್ವರ್ಥನಾಮಗಳನ್ನಿಟ್ಟುಕೊಂಡು ಅವುಗಳೇ ಪ್ರಕಾಂಡವಾಗಿ ಬೆಳೆದು ಹೋಗಿವೆ.

ಜಾತಿ ಭಿನ್ನ ಬೇಧಗಳು

ಜಾತಿ ಬೇಧವನ್ನು ಜನಜಂಗುಳಿಗಿಂತಲೂ. ಮೃಗ ಸಂಕುಲದಲ್ಲಿ ಮರಗಿಡ ಬಳ್ಳಿಗಳಲ್ಲಿ ಆರೋಪಿಸಬಹುದು. ಆಲ-ಬೇಲ ಮಾವು-ಬೇವು. ಹೊಂಗೆ-ಟೊಂಗೆ. ಬಾಗೆ-ಸೀಗೆ. ಬಾಳೆ-ಮರಾಳೆ ಇತ್ಯಾದಿ. ಹುಲಿ, ಆನೆ. ಎಮ್ಮೆ, ಹಸು. ಕುರಿ. ಮೇಕೆ. ಹಂದಿ, ನಾಯಿ. ಬೆಕ್ಕು ಇಲಿ ಇತ್ಯಾದಿ. ಇವುಗಳಿಗೆ ಜಾತಿ ಬೇಧವೆನ್ನೋಣ. ಇವುಗಳ ಹುಟ್ಟು ಬೆಳವಣಿಗೆ ಪ್ರೇಮ ಪ್ರಣಯಾದಿಗಳಲ್ಲಿ ಒಂದರಲ್ಲೊಂದು ಬೆರೆಯುವುದಿಲ್ಲ ಜಗದೀಶ್ವರನಾದ ಸೃಷ್ಟಿಕರ್ತನು ಮಾನವನಲ್ಲಿ ಇಂಥಾ ವ್ಯತ್ಯಾಸಗಳು ಏನನ್ನೂ ನಿರ್ಮಿಸಲಿಲ್ಲ. ಅಲ್ಲದೆ ಮಾನವನ ಸೃಷ್ಟಿಯು ಜಗನ್ನಿಯಾಮಕನ ಕಲಾಚಾತುರ್ಯದ ಪರಮಾವಧಿ ಎಂದು ಹೇಳಬಹುದು. ಈ ಸಮಯದಲ್ಲಿ ಸುಪ್ರಸಿದ್ಧ ಇಂಗ್ಲೀಷ್ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್ ವಾಕ್ಯಗಳನ್ನು ಜ್ಞಾಪಿಸಿಕೊಳ್ಳೋಣ.

" ಮಾನವನು ಅದೆಂಥಾ ಅದ್ಭುತವಾದಶಕ್ತಿ. ಬುದ್ಧಿಯಲ್ಲಿ ಅದೇನು ಘನತೆ, ಅದೆಂಥಾ ಎಲ್ಲೆ ಮೀರಿದ ಸಾಮರ್ಥ್ಯ. ಆಕಾರದಲ್ಲೂ ನಡಿಗೆಯಲ್ಲೂ ಅದೇನು ರಚನಾಕೌಶಲ್ಯ ಚಿತ್ತಾಕರ್ಷಕ ಶಕ್ತಿ, ಕ್ರಿಯೆಯಲ್ಲಿ ಅವನು ದೇವತೆಯಂತೆ, ಗ್ರಹಣ ಶಕ್ತಿಯಲ್ಲಿ ಪರವಸ್ತುವಿನಂತೆ., ಪ್ರಪಂಚದ ಚೆಲುವು, ಜೀವಕೋಟಿಗಳಲ್ಲಿ ರತ್ನ " ಎಂದು ಹೇಳಿದ್ದಾನೆ. ಎಂಥಾ ಘನವಾದ ಮಾತುಗಳು ಇವು ಇಂಥಾ ಮಾನವನನ್ನು ಗಿಡ ಮರ ಬಳ್ಳಿ ಮೃಗಗಳಂತೆ ಭಾವಿಸುವುದು ಎಂಥಾ ಅನ್ಯಾಯ? ಅಂದಮೇಲೆ ಈ ಅಸ್ಪೃಶ್ಯತೆ ಎಂಬುದೂ ಅಸ್ಪೃಶ್ಯ ನಿರ್ಬಂಧಕ್ಕೆ ಪಕ್ಕಾಗಿರ ಜನಾಂಗಕ್ಕೆ ಸಮಾಜದಲ್ಲಿ ಆಗುತ್ತಿರುವ ಅನ್ಯಾಯವು ಘನ ಬಾಹಿರವಾದದ್ದು. ಮಾನವ ಮಾನವನನ್ನೇ ನಾ ಬೆಕ್ಕುಗಳಿಗಿಂತಲೂ ಕೀಳೆಂದು ಭಾವಿಸಿ ಪ್ರೇರೇಪಿಸುವು ಅದು ಎಂಥ ಧರ್ಮ? ಇದನ್ನು ಹಿಂದೂ ಪವಿತ್ರ ಧರ್ಮವೆಂ ಒಪ್ಪಿಕೊಳ್ಳೋಣವೇ?

ಧರ್ಮದ ಸ್ವರೂಪ

ಹಸುವನ್ನು ಗೋವೆಂದೂ ಗೂಳಿಯನ್ನು ಬಸವಣ್ಣನೆಂದ ಕಪಿಯನ್ನು ಆಂಜನೇಯನ ಪ್ರತಿಗೆ ಎಂದೂ ಹಾವನ್ನು ಸು ಮಣ್ಯೇಶ್ವರ ಎಂದೂ ವೃಕ್ಷಗಳನ್ನು ಅಶ್ವತ್ಥ ಬಿಲ್ವಗಳೆಂದೂ ಗಿ ವನ್ನು ತುಳಸೀ ಎಂದೂ, ನೀರನ್ನು—ಗಂಗಾದೇವಿ ಎಂದ ಬೆಂಕಿಯನ್ನು ಯಜ್ಞೇಶ್ವರಎಂದೂ, "ಸರ್ವಂದೈವಮಯ ಜಗತ್ " ಎಂಬುದಾಗಿ ಸ್ಥಾವರ ಜಂಗಮಾದಿಗಳು ಮೇವಾದ್ವೈತೀಯಂತ ಈಶ್ವರ ಸ್ವರೂಪವನ್ನು ಕಲ್ಪಿಸಿ ಉನ್ನತ ಧ್ಯೇಯದಿಂದ ಕೂಡಿದ ಹಿಂದೂಧರ್ಮವು ಮಾನ ರಲ್ಲಿ ಒಂದು ವರ್ಗವನ್ನು ಮುಟ್ಟಬಾರದವರೆಂದು ಬಹಿಷ್ಕಾ ಪ್ರೇರೇಪಿಸಿದರೆ ಅದು ಧರ್ಮವಲ್ಲ ಶುದ್ಧ ಅಧರ್ಮ ಅದ ಮೊದಲು ಬಹಿಷ್ಕರಿಸಬೇಕು. ಈ ಧರ್ಮವನ್ನು ಮಾನವ ಸಮಾಜ ಸಂಘಟನೆ, ರಾಷ್ಟ್ರದ ಐಕಮತ್ಯ ಇಂಥಾ ಯಾ ದೃಷ್ಟಿಕೋನದಿಂದ ನೋಡಿದರೂ ಇದು ಅನಾಚರಣೀಯ ಧರ್ಮ, ಇದು ಖಂಡನೀಯ.

ಅಸ್ಪೃಶ್ಯ ಯಾವುದು?

ಅಸ್ಪೃಶ್ಯ ಅಂದರೆ ಮುಟ್ಟಬಾರದು ಎಂದು ಅರ್ಥ. ಯಾ ದನ್ನು ಮುಟ್ಟಿದರೆ ಅನಿಷ್ಟ. ಉಂಟಾಗುವುದೋ ಅಪಾಯ ಸಂಕಟ ಒದಗುವುದೋ ಅದನ್ನು ಮುಟ್ಟಬಾರದು ಇದು ಸಕಾರಣವಾದದ್ದು. ಹಾವು, ಚೇಳು, ಕಡಜ, ದುಂಬಿ ಬೆಂಕಿ, ವಿಷ ಎಣ್ಣೆ, ಜಿಡ್ಡು ಇವುಗಳನ್ನು ಮುಟ್ಟಬಾರದ ಮತ್ತು ಹುಲಿ, ಕರಡಿ, ಚಿರತೆ ಕಾಡುಕೋಣ, ಕತ್ತೆಕಿರುಬ ಇವುಗಳ ಬಳಿ ತುಳಿಯಬಾರದು. ಇವುಗಳೆಲ್ಲಾ ಅಸ್ಪೃಶ್ಯಗಳು

ರಾಮಾಯಣ ಮಹಾ ಪುರುಷರು

ಅಸ್ಪೃಶ್ಯರ ಮೂಲ ಪುರುಷರಲ್ಲಿ, ಧರ್ಮಶ್ರದ್ಧೆ, ಸ್ವಾಮಿ ಕಾರ್ಯ ಧುರಂಧರತೆ, ದೇಶಭಕ್ತಿ, ಕಾರ್ಯ ನಿರ್ವಹಣಾ ದಕ್ಷತೆಗಳು ರಾಮಾಯಣ ಕಾಲದಲ್ಲೇ ಅರಿವಾಗಿದೆ. ರಾಮಾಯಣ ಬರೆದವರೇ ಇವನ್ನು ಒಪ್ಪಿಕೊಂಡಿದ್ದಾರೆ. ಆಂಜನೇಯ, ಸುಗ್ರೀವ. ಅಂಗದ, ನಳ, ನಹುಷ, ಸುಶೇಷಣ, ಗವಯ ಗಂಧಮಾದನ, ಜಾಂಬವಂತ, ಜಟಾಯು, ವಿಭೀಷಣ ಇವರುಗಳು ಶ್ರೀರಾಮನಲ್ಲಿಟ್ಟಿದ್ದ ವಾತ್ಸಲ್ಯ. ಭಕ್ತಿ ಭಾವಗಳು ಅನನ್ಯವಾದವು.

ಇವರುಗಳಲ್ಲಿ ಅನೇಕರು ರಾಜರಾಗಿದ್ದವರು, ಇವರುಗಳ ಸೈನ್ಯವೇ ರಾಮಸೈನ್ಯ, ದಶಕಂಠರಾವಣ, ಕೈರಾವಣ, ಮೈರಾವಣರಂಥಾ ಯುದ್ಧವೀರರನ್ನು ಮಣ್ಣು ಮುಕ್ಕಿಸಿದ ಪ್ರಭಲವಾದ ಸೈನ್ಯ ಇವರದು.

ಇವರೆಲ್ಲರೂ ಈಗಿನ ಅಸ್ಪೃಶ್ಯ ಜನಾಂಗದ ಮೂಲ ಪುರುಷರು. ಇವರು ವಾಯುಮಾರ್ಗದ ಪ್ರಯಾಣ, ರಾಯಭಾರವಿಚಕ್ಷಣೆ, ವೈದ್ಯ, ಸೇತು ನಿರ್ಮಾಣ, ಸೈನ್ಯ ರಚನಾ ಚತುರತೆ. ಹವಾಮಾನ ವಾತಾವರಣ ಪರೀಕ್ಷೆ, ಯುದ್ಧ ವಿದ್ಯೆ ಮುಂತಾದುವುಗಳಲ್ಲಿ ಪ್ರವೀಣರಾಗಿದ್ದರೆಂದೂ ನ್ಯಾಯ ಪಕ್ಷಪಾತಿಗಳಾಗಿ ಧರ್ಮರಕ್ಷಣೆ ಕಾರ್ಯಕ್ಕೆ ತಮ್ಮ ಪ್ರಾಣಗಳನ್ನೂ ಸಂಚಕಾರವಾಗಿಟ್ಟಿದ್ದರೆಂದೂ ರಾಮಾಯಣವು ಸಾರಿ ಸಾರಿ ಹೇಳುತ್ತದೆ. ರಾಮಾಯಣ ರತ್ನಗಳಾದ ಇವರು ಭಕ್ತಾಗ್ರೇಸರ, ಧರ್ಮಾಗ್ರೇಸರ, ವೀರಾಗ್ರೇಸರ, ಸತ್ಯಾಗ್ರೇಸರ, ಮಹನೀಯರಲ್ಲವೇ ? ಅಂದ ಮೇಲೆ ಇವರ ಪೀಳಿಗೆಯವರು ಹಲಕೆಲವರಾದರೂ ತಜ್ಞರೂ ತಂತ್ರಜ್ಞರೂ ಆಗಿಲ್ಲದೆ ಇರಲಾರರು. ಅವರುಗಳ ಚರಿತ್ರೆಯನ್ನು ಇತಿಹಾಸಕಾರರು ಕಾರಣಾಂತರ ಕೈ ಬಿಟ್ಟೀ ಇರುತ್ತಾರೆ. ಭಾರತದ ಗ್ರಂಥರಾಜಗಳಾದ ರಾಮಾಯಣ ಭಾರತ ಭಾಗವತಗಳಲ್ಲಿ ರಾಮಾಯಣಕ್ಕಿಂತಲೂ ಹೆಚ್ಚಾಗಿ ಭಾರತ ಭಾಗವತಗಳಲ್ಲಿ ಅಸ್ಪೃಶ್ಯತೆಯು ಈಗಿನಷ್ಟು ಉಲ್ಬಣಾವಸ್ಥೆಯಲ್ಲಿ ಇರಲಿಲ್ಲ ಎಂಬುವುದಕ್ಕೆ ಅನೇಕ ಉದಾಹರಣೆಗಳಿವೆ. ನಾನಾ ಮತಗಳ ಸೌಹಾರ್ದವನ್ನು ಏರ್ಪಡಿಸುವ ಉದ್ದೇಶ್ಯ ಶ್ರೀಕೃಷ್ಣಪರಮಾತ್ಮನು ಎಂಟು ಹೆಣ್ಣುಗಳನ್ನು ವಿವಾಹ ಮಾಡಿಕೊಂಡು ಅಷ್ಟಭಾರ್ಯನಾಯಕನಾಗಿದ್ದ. ಭೀಮನು ಹಿಡಿಂಬೆಯನ್ನೂ ಅರ್ಜುನನು ಚಿತ್ರಾಂಗದ ಉಲೂಪಿಯರನ್ನು ವರಿಸಿದ್ದರು. ಆಗ ಊಟ ಉಪಚಾರ ಕಾರ್ಯ ಕಲಾಪಗಳಲ್ಲಿ ಪರಸ್ಪರ ಐಕಮತ್ಯ ಸಮರಸದಿಂದ ನಡೆದುಕೊಂಡು ಹೋಗುತ್ತಿದ್ದಿತೆಂದು ಕಂಡುಬರುತ್ತೆ. ಹೀಗಿದ್ದ ಮಧುರ ಭಾಂದವ್ಯ ಮುರಿದು ಮತ ಮತಾಂತರಗಳ ಉಚ್ಚನೀಚಗಳು, ಬೆಳೆದು. ಒಂದುಜನಾಂಗಕ್ಕೆ ಅಸ್ಪೃಶ್ಯತಾ ಕಳಂಕವನ್ನು ಬಳಿದು ಪ್ರಜಾಕ್ಷೇಮ ರಾಷ್ಟ್ರದ ಕ್ಷೇಮಗಳಲ್ಲಿ ಅಲ್ಲಕಲ್ಲೋಲವನ್ನುಂಟು ಮಾಡಿರುವ ರಾಷ್ಟ್ರಘಾತಕರನ್ನು ಸಮಾಜರಕ್ಷಕರೆನ್ನೋಣವೋ ಇಲ್ಲ ಭಕ್ಷಕರೆನ್ನೋಣವೋ ಅರ್ಥವಾಗುವುದಿಲ್ಲ.

ಸಮಾಜ ಸುಧಾರಣ ಕಾರ್ಯಗಳು

ಈ ಪಿಡುಗನ್ನು ನಿವಾರಿಸಲು ಈಚೀಚೆಗೆ ದಾಸಪಂಥದವರೂ ...ದು ಶ್ರಮಿಸಿದರು, ಬ್ರಹ್ಮಸಮಾಜದವರು, ಆರ್ಯಸಮಾಜ ...ಮಿ ವಿವೇಕಾನಂದರು ಆನಿಬೆಸೆಂಟಮ್ಮನವರು ಆದಿಯಾಗಿ ಕಂಕಣ ತೊಟ್ಟಿದ್ದರು. ಸ್ವಾಮಿ ವಿವೇಕಾನಂದರು ವಿಲಾಯಿತಿಯಿಂದ ಬಂದ ತರುಣದಲ್ಲೇ ಬಂಗಾಳದಲ್ಲಿ ಸವರ್ಣ ಅವರ್ಣರಿಗೆ ಘರ್ಷಣೆ ಬಂತು. ಅವರ್ಣರು (ಹರಿಜನರು) ಕೆರಳಿ, ತಮ್ಮ ಪ್ರಾಣಗಳ ಹಂಗನ್ನೂ ತೊರೆದು ಸವರ್ಣೀಗಳ ಶಿರಗಳನ್ನು ಚೆಂಡಾಡಿ ರಂಪ ಮಾಡಿದ್ದನ್ನು ಸ್ವಾಮಿಜೀ ಕಂಡು ಕೇಳಿ ವಿಲಾಯತಿಯ ಮಿತ್ರರೊಬ್ಬರಿಗೆ ಬರೆದ ಪತ್ರದಲ್ಲಿ ಹೀಗೆಂದು ಉಲ್ಲೇಖಿಸಿದ್ದಾರೆ "ಮಾನವ ಮಹಾ ಶಕ್ತಿಯು ಅಂತ್ಯಜರಲ್ಲಿ ರುದ್ರ ರೂಪು ತಾಳಿ ಮತಾಂಧರಾದವರ ಶಿರಗಳನ್ನು ಚೆಂಡಾಡಿತು ಉತ್ತಮ ವರ್ಣದವರೆಂದು ಕೊಚ್ಚಿಕೊಳ್ಳುತ್ತಿದ್ದವರ ಪ್ರತಿಷ್ಟೆಗೆ ತಕ್ಕ ಪ್ರಾಯಶ್ಚಿತ್ತವಾಗಿದೆ" ಎಂದಿದ್ದಾರೆ. ಮತ್ತೊಬ್ಬ ಮಿತ್ರರಿಗೆ ಬರೆದ ಪತ್ರದಲ್ಲಿ ಹೀಗೆಂದಿದ್ದಾರೆ. "ಮಿತ್ರ;—ಪವಿತ್ರತವಾದ ಭಾರತ ಭೂಮಿಯಲ್ಲಿ ಅಂತ್ಯಜರೆಂಬ ಪರಿಶುದ್ಧ ಹೃದಯರ ತಂಡವಿದೆಯಷ್ಟೆ, ಇವರು ಪೊದೆಗಳಂಥಾ ಗುಡಿಸಲುಗಳಲ್ಲಿ ವಾಸಮಾಡಿಕೊಂಡು ಅನಿಷ್ಟ ಪರಂಪರೆಗಳಿಗೆ ತುತ್ತಾಗಿದ್ದಾರೆ. ಇವರ ವಿಷಯದಲ್ಲಿ ನಾವು ಮಾಡಬೇಕಾದ ಸೇವಾ ಕಾರ್ಯವು ಅನಂತವಾಗಿವೆ. ಅವರ ಸೇವೆಗಾಗಿ ಗುಡಿಸಲಿನಿಂದ ಗುಡಿಸಲಿಗೆ ತಿರುಗಿ ಅವರನ್ನೂ ಅವರ ಮಕ್ಕಳನ್ನೂ ಶುಚಿರ್ಭೂತರಾಗಿ ಮಾಡು, ವಿದ್ಯೆಯನ್ನು ಕಲಿಸು ಆತ್ಮಗೌರವವನ್ನು ಭೋಧಿಸು, ಕಲಿತನದ ಕೆಚ್ಚನ್ನು ಹೇಳಿಕೊಡು ಇದೇ ರೀತಿ ದಿನ ದಿನವೂ ತಿರುಗಿ ತಿರುಗಿ ಅವರಿಗೆ ಜ್ಞಾನ ದಾನಮಾಡು. ಇದು ನನಗೆ ಬಹಳ ಸಂತೋಷದ ಕಾಣಿಕೆ. ನಮ್ಮ ದೇಶದಲ್ಲಿ ಅಂತ್ಯಜರು ಉದ್ಧಾರವಾಗುವವರೆಗೂ ಕಳಂಕ ತಪ್ಪದು" ಎಂದು ಉಲ್ಲೇಖಿಸಿದ್ದಾರೆ.

ಮೈಸೂರು ರಾಜ ಮನೆತನದವರ ಮಹತ್ಕಾರ್ಯ

ಮೈಸೂರಿನ ಶ್ರೀಮನ್ಮಹಾರಾಜ ಶ್ರೀ ಚಾಮರಾಜ ಒಡೆಯರವರು ಆಳುತ್ತಿರುವ ಮಹಾಸ್ವಾಮಿಯವರ ಪೂಜ್ಯತಾತಂದಿರು ವಿವೇಕಾನಂದ ಸ್ವಾಮಿಜಿಯವರನ್ನು ಆಹ್ವಾನಿಸಿ ಬರೆದಿದ್ದ ಪತ್ರಕ್ಕೆ ಜವಾಬಾಗಿ ಸ್ವಾಮಿಜಿಯು ಅವರಿಗೂ ಅಂತ್ಯಜರಉದ್ಧಾರ ಕಾರ್ಯಕ್ರಮ ವೀಕ್ಷಣೆಯ ಸವಾಲನ್ನೇ ಹಾಕಿದರು. ಈ ಸವಾಲಿನ ಪ್ರತೀಕಾರವೇ ಮೈಸೂರಿನಲ್ಲಿ ಅಂತ್ಯಜರ ಪುರೋಭಿವೃದ್ಧಿ ಕಾರ್ಯವು ವಿದ್ಯಾಭ್ಯಾಸ ರೂಪದಿಂದ ಆರಂಭವಾಯಿತೆನ್ನಬಹುದು.

ಪೌರ ಸನ್ಮಾನ

೧೮೯೦ರಲ್ಲಿ ಪ್ರಯೋಗಾರ್ಥವಾಗಿ ಆನೇಕಲ್ಲು ತಾಲ್ಲೂಕು ಹುಸ್ಕೂರುನಲ್ಲೊಂದು, ಮಾಲೂರು ತಾಲ್ಲೂಕು ನರಸಾಪುರ, ಮಳವಳ್ಳಿ, ಬಂಗಾರುಪೇಟೆ ತಾಲ್ಲೂಕು ಸೂಲುಕುಂಟೆ, ಈ ಮೂರು ಕಡೆಗಳಲ್ಲಿ ಈ ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆದರು. ಹೀಗೆ ಆರಂಭವಾದ ಇವರ ವಿದ್ಯಾಭ್ಯಾಸವು ಪಂಚಮಾ ಸ್ಕೂಲುಗಳೆಂಬ ಹೆಸರಿನಲ್ಲಿ ಮುಂದುವರೆಯಿತು. ೧೯೧೨-೧೩

ಶ್ರೀಮಾನ್ ಸಿ. ಆರ್. ರೆಡ್ಡಿಯವರು

ರಲ್ಲಿ ಸರ್ಕಾರದವರು ಮೈಸೂರು ನಗರದಲ್ಲಿ ಪಂಚಮಾ ಬೋರ್ಡಿಂಗ್ ಸ್ಕೂಲನ್ನು ತೆರೆದರು ೧೯೧೪-೧೫ರಲ್ಲಿ ದಿವಾನ್ ಬಹದ್ದೂರ್ ಪುಟ್ಟಣ್ಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಸಿವಿಕ್ ಅಸೋಸಿಯೇಷನ್ ಏರ್ಪಾಡಾಯಿತು ಮದ್ರಾಸಿನಿಂದ ರಾವ್ ಬಹದ್ದೂರ್ ಎಂ. ಸಿ. ರಾಜ (ಜಸ್ಟೀಸ್ ಪಾರ್ಟಿಯು ಅಧಿಕಾರದಲ್ಲಿದ್ದಾಗ ಮಂತ್ರಿಯಾಗಿದ್ದವರು) ರವರನ್ನು ಕರೆಸಿ ಅವರಿಗೆ ಮಾನ ಪತ್ರ ಒಪ್ಪಿಸುವ ಸಮಾರಂಭದ ಜೊತೆಗೆ ಸಮ್ಮೇಳನವೂ ನಡೆಯಿತು. ಇದೇ ಮೈಸೂರು ಸಂಸ್ಥಾನದ ಪ್ರಥಮ ಪಂಚಮಾ ಸಮ್ಮೇಳನ.

ಈ ಸಮ್ಮೇಳನಾನಂತರ ಇವರಿಗೆ ಪಂಚಮರೆಂಬ ಹೆಸರು ತೆಗೆದು ಆದಿದ್ರಾವಿಡರೆಂದು ಕರೆದರು ಆದಿದ್ರಾವಿಡ ಪತ್ರಿಕೆಯೊಂದು ಪಂಚಮಾ ಬೋರ್ಡಿಂಗ್ ಹೋಂ ಆಶ್ರಯದಲ್ಲಿ ಶ್ರೀ ಆರ್. ರಂಗೇಗೌಡ ತಲಕಾಡು, ಶ್ರೀ ಕೆ. ಲಿಂಗಯ್ಯ ಮಳವಳ್ಳಿ, ಪಿ. ಮಲ್ಲಪ್ಪ ಸೋಸಲೆ ಇವರ ಸಂಪಾದಕತ್ವದಲ್ಲಿ ಹೊರಬಂತು. ಶ್ರೀಮಾನ್ ವಿರೂಪಾಕ್ಷಯ್ಯ, ವನಜಮ್ಮ, ಶ್ರೀ ನಾರಾಯಣಸ್ವಾಮಿ ಐಯ್ಯರ್‌ರವರು ಈ ಜನಾಂಗದವರ ಪುರೋಭಿವೃದ್ಧಿಗಾಗಿ ಶ್ರಮಿಸಿದವರು ಹೀಗಿರುವಾಗ ದಿವಂಗತರಾದ ಸಿ. ಆರ್ ರೆಡ್ಡಿಯವರು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ರಾಗಿ ಬಂದರು

ಶ್ರೀಮಾನ್ ಸಿ ಆರ್ ರೆಡ್ಡಿಯವರ ಸ್ತುತ್ಯಕಾರ್ಯ

ಇವರು ಅಧಿಕಾರ ವಹಿಸಿಕೊಂಡ ಕೂಡಲೆ ಮೈಸೂರಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ಪ್ರಚಾರ ಚಳುವಳಿಯು ತಲೆ ಎತ್ತಿಕೊಂಡು ಇದರ ತತ್ವದ ಮೂಲೋದ್ದೇಶದ ಪರಿಣಾಮ ಪಂಚಮರ ವಿದ್ಯಾಭ್ಯಾಸದಲ್ಲಿ ಪ್ರಚಂಡ ಕ್ರಾಂತಿಯನ್ನೇ ಉಂಟು ಮಾಡಿತು ಪಂಚಮರನ್ನು ಎಲ್ಲಾ ಶಾಲೆಗಳಲ್ಲಿ ಸೇರಿಸಬೇಕೆಂಬ ಸುಗ್ರೀವಾಜ್ಞೆ ಹೊರಟಿತು. ಸವರ್ಣಗಳು ಮುಖ್ಯವಾಗಿ ಸನಾತನಿಗಳಾದ ಬ್ರಾಹ್ಮಣರು ಆಚಾರ್ಯರ ಮುಷ್ಕರ ಹೂಡಿದರು. ಪಂಚಮರನ್ನು ಸೇರಿಸಿದ ಸ್ಕೂಲಿನಿಂದ ತಮ್ಮ ಮಕ್ಕಳನ್ನು ವಾಪಸ್ಸು ಕರೆಸಿಕೊಂಡರು. ಒಂದೊಂದು ಶಾಲೆಯಲ್ಲಿ ೨-೩ ಉಪಾಧ್ಯಾಯರಿದ್ದರೂ ೨-೩ ಪಂಚಮಾ ವಿದ್ಯಾರ್ಥಿಗಳು ಮಾತ್ರವೇ ಹಾಜರಿದ್ದದ್ದು ಇಲಾಖಾಧಿಕಾರಿಗಳ ನೋಟೀಸಿಗೆ ಬಂತು. ಇಲಾಖೆಯು ತನ್ನ ನಿರ್ಧಾರವನ್ನು ಒಂದಂಗುಲದಷ್ಟೂ ಬದಲಾಯಿಸಲಿಲ್ಲ. ಶ್ರೀಮಾನ್ ರೆಡ್ಡಿಯವರಿಗೂ, ಮರಿಮಲ್ಲಪ್ಪಾಸ್ ಹೈಸ್ಕೂಲ್ ಹೆಡ್ಮಾಸ್ಟರು ಶ್ರೀಮಾನ್ ವೆಂಕಟಕೃಷ್ಣಯ್ಯನವರಿಗೂ ಪತ್ರಿಕಾಲೋಕದಲ್ಲಿ ಪ್ರಚಂಡ ಯುದ್ಧವೇ ನಡೆದು ಹೋಯಿತು. ಆಳಿದ ಕೀರ್ತಿಶೇಷರಾದ ಶ್ರೀಮನ್ ಮಹಾರಾಜ ಕೃಷ್ಣರಾಜೇಂದ್ರ ಒಡೆಯರವರ ಮತ್ತು ಯುವರಾಜಾ ಶ್ರೀಮನ್ ಕಂಠೀರವ ನರಸಿಂಹರಾಜ ಒಡೆಯರವರ ಪೂರ್ಣ ಕೃಪಾಕಟಾಕ್ಷವು ಈ ಪಂಚಮರ ಉದ್ಧಾರದ ಕಡೆಗೆ



ಶ್ರೀಮಾನ್ ಕಂಠೀರವ ನರಸಿಂಹರಾಜ ಒಡೆಯರು

ಇವರುಗಳಲ್ಲಿ ಅನೇಕರು ರಾಜರಾಗಿದ್ದವರು, ಇವರುಗಳ ಸೈನ್ಯವೇ ರಾಮಸೈನ್ಯ, ದಶಕಂಠರಾವಣ, ಹೈರಾವಣ, ಮೈರಾವಣರಂಥಾ ಯುದ್ಧವೀರರನ್ನು ಮಣ್ಣು ಮುಕ್ಕಿಸಿದ ಪ್ರಭಲವಾದ ಸೈನ್ಯ ಇವರದು.

ಇವರೆಲ್ಲರೂ ಈಗಿನ ಅಸ್ಪೃಶ್ಯ ಜನಾಂಗದ ಮೂಲ ಪುರುಷರು. ಇವರು ವಾಯುಮಾರ್ಗದ ಪ್ರಯಾಣ, ರಾಯಭಾರವಿಚಕ್ಷಣೆ, ವೈದ್ಯ, ಸೇತು ನಿರ್ಮಾಣ, ಸೈನ್ಯ ರಚನಾ ಚತುರತೆ. ಹವಾಮಾನ ವಾತಾವರಣ ಪರೀಕ್ಷೆ, ಯುದ್ಧ ವಿದ್ಯೆ ಮುಂತಾದುವುಗಳಲ್ಲಿ ಪ್ರವೀಣರಾಗಿದ್ದರಿಂದೂ ನ್ಯಾಯ ಪಕ್ಷಪಾತಿಗಳಾಗಿ ಧರ್ಮರಕ್ಷಣೆ ಕಾರ್ಯಕ್ಕೆ ತಮ್ಮ ಪ್ರಾಣಗಳನ್ನೂ ಸಂಚಕಾರವಾಗಿಟ್ಟಿದ್ದರಿಂದೂ ರಾಮಾಯಣವು ಸಾರಿ ಸಾರಿ ಹೇಳುತ್ತದೆ. ರಾಮಾಯಣ ರತ್ನಗಳಾದ ಇವರು ಭಕ್ತಾಗ್ರೇಸರ, ಧರ್ಮಾಗ್ರೇಸರ, ವೀರಾಗ್ರೇಸರ, ಸತ್ಯಾಗ್ರೇಸರ, ಮಹನೀಯರಲ್ಲವೇ? ಅಂದ ಮೇಲೆ ಇವರ ಪೀಳಿಗೆಯವರು ಹಲಕೆಲವರಾದರೂ ತಜ್ಞರೂ ತಂತ್ರಜ್ಞರೂ ಆಗಿಲ್ಲದೆ ಇರಲಾರರು. ಅವರುಗಳ ಚರಿತ್ರೆಯನ್ನು ಇತಿಹಾಸಕಾರರು ಕಾರಣಾಂತರ ಕೈ ಬಿಟ್ಟೇ ಇರುತ್ತಾರೆ. ಭಾರತದ ಗ್ರಂಥರಾಜಗಳಾದ ರಾಮಾಯಣ ಭಾರತ ಭಾಗವತಗಳಲ್ಲಿ ರಾಮಾಯಣಕ್ಕಿಂತಲೂ ಹೆಚ್ಚಾಗಿ ಭಾರ ತಭಾಗವತಗಳಲ್ಲಿ ಅಸ್ಪೃಶ್ಯತೆಯು ಈಗಿನಷ್ಟು ಉಲ್ಬಣಾವಸ್ಥೆಯಲ್ಲಿ ಇರಲಿಲ್ಲ ಎಂಬುವುದಕ್ಕೆ ಅನೇಕ ಉದಾಹರಣೆಗಳಿವೆ. ನಾನಾ ಮತಗಳ ಸೌಹಾರ್ದವನ್ನು ಏರ್ಪಡಿಸುವ ಉದ್ದಿಶ್ಯ ಶ್ರೀಕೃಷ್ಣಪರಮಾತ್ಮನು ಎಂಟು ಹೆಣ್ಣುಗಳನ್ನು ವಿವಾಹ ಮಾಡಿಕೊಂಡು ಅಷ್ಟಭಾರ್ಯನಾಯಕನಾಗಿದ್ದ. ಭೀಮನು ಹಿಡಿಂಬಿಯನ್ನೂ ಅರ್ಜುನನು ಚಿತ್ರಾಂಗದ ಉಲೂಪಿಯರನ್ನು ವರಿಸಿದ್ದರು. ಆಗ ಊಟ ಉಪಚಾರ ಕಾರ್ಯ ಕಲಾಪಗಳಲ್ಲಿ ಪರಸ್ಪರ ಐಕಮತ್ಯ ಸಮರಸದಿಂದ ನಡೆದುಕೊಂಡು ಹೋಗುತ್ತಿದ್ದಿತೆಂದು ಕಂಡು ಬರುತ್ತೆ. ಹೀಗಿದ್ದ ಮಧುರ ಬಾಂಧವ್ಯ ಮುರಿದು ಮತ ಮತಾಂತರಗಳ ಉಚ್ಚನೀಚಗಳು, ಬೆಳೆದು, ಒಂದುಜನಾಂಗಕ್ಕೆ ಅಸ್ಪೃಶ್ಯತಾ ಕಳಂಕವನ್ನು ಬಳಿದು ಪ್ರಜಾಕ್ಷೇಮ ರಾಷ್ಟ್ರದ ಪ್ರೇಮಗಳಲ್ಲಿ ಅಲ್ಲಕಲ್ಲೋಲವನ್ನುಂಟು ಮಾಡಿರುವ ರಾಷ್ಟ್ರ ಘಾತಕರನ್ನು ಸಮಾಜರಕ್ಷಕರೆನ್ನೋಣವೋ ಇಲ್ಲ ಭಕ್ಷಕರೆನ್ನೋಣವೋ ಅರ್ಥವಾಗುವುದಿಲ್ಲ.

ಸಮಾಜ ಸುಧಾರಣ ಕಾರ್ಯಗಳು

ಈ ಪಿಡುಗನ್ನು ನಿವಾರಿಸಲು ಈಚೀಚೆಗೆ ದಾಸಪಂಥದವರೂ ದುಡಿದು ಶ್ರಮಿಸಿದರು, ಬ್ರಹ್ಮಸಮಾಜದವರು, ಆರ್ಯಸಮಾಜ ಸ್ವಾಮಿ ವಿವೇಕಾನಂದರು ಆನಿಬೆಸೆಂಟಮ್ಮನವರು ಆದಿಯಾಗಿ ಕಂಕಣ ತೊಟ್ಟಿದ್ದರು. ಸ್ವಾಮಿ ವಿವೇಕಾನಂದರು ವಿಲಾಯಿತಿಯಿಂದ ಬಂದ ತರುಣದಲ್ಲೇ ಬಂಗಾಳದಲ್ಲಿ ಸವರ್ಣ ಅವರ್ಣರಿಗೆ ಘರ್ಷಣೆ ಬಂತು. ಅವರ್ಣರು (ಹರಿಜನರು) ಕೆರಳಿ, ತಮ್ಮ ಪ್ರಾಣಗಳ ಹಂಗನ್ನೂ ತೊರೆದು ಸವರ್ಣಿಗಳ ಶಿರಗಳನ್ನು ಚೆಂಡಾಡಿ ರಂಪ ಮಾಡಿದ್ದನ್ನು ಸ್ವಾಮಿಜೀ ಕಂಡು ಕೇಳಿ ವಿಲಾಯತಿಯ ಮಿತ್ರರೊಬ್ಬರಿಗೆ ಬರೆದ ಪತ್ರದಲ್ಲಿ ಹೀಗೆಂದು ಉಲ್ಲೇಖಿಸಿದ್ದಾರೆ "ಮಾನವ ಮಹಾ ಶಕ್ತಿಯು ಅಂತ್ಯಜರಲ್ಲಿ ರುದ್ರ ರೂಪು ತಾಳಿ ಮತಾಂಧರಾದವರ ಶಿರಗಳನ್ನು ಚೆಂಡಾಡಿತು ಉತ್ತಮ ವರ್ಣದವರೆಂದು ಕೊಚ್ಚಿಕೊಳ್ಳುತ್ತಿದ್ದವರ ಪ್ರತಿಷ್ಟೆಗೆ ತಕ್ಕ ಪ್ರಾಯಶ್ಚಿತ್ತವಾಗಿದೆ" ಎಂದಿದ್ದಾರೆ. ಮತ್ತೊಬ್ಬ ಮಿತ್ರರಿಗೆ ಬರೆದ ಪತ್ರದಲ್ಲಿ ಹೀಗೆಂದಿದ್ದಾರೆ. "ಮಿತ್ರಾ;—ಪವಿತ್ರತವಾದ ಭಾರತ ಭೂಮಿಯಲ್ಲಿ ಅಂತ್ಯಜರೆಂಬ ಪರಿಶುದ್ಧ ಹೃದಯರ ತಂಡವಿದೆಯಷ್ಟೆ, ಇವರು ಪೊದೆಗಳಂಥಾ ಗುಡಿಸಲುಗಳಲ್ಲಿ ವಾಸಮಾಡಿಕೊಂಡು ಅನಿಷ್ಟ ಪರಂಪರೆಗಳಿಗೆ ತುತ್ತಾಗಿದ್ದಾರೆ. ಇವರ ವಿಷಯದಲ್ಲಿ ನಾವು ಮಾಡಬೇಕಾದ ಸೇವಾ ಕಾರ್ಯವು ಅನಂತವಾಗಿವೆ. ಅವರ ಸೇವೆಗಾಗಿ ಗುಡಿಸಲಿನಿಂದ ಗುಡಿಸಲಿಗೆ ತಿರಿಗಿ ಅವರನ್ನೂ ಅವರ ಮಕ್ಕಳನ್ನೂ ಶುಚಿರ್ಭೂತರಾಗಿ ಮಾಡು, ವಿದ್ಯೆಯನ್ನು ಕಲಿಸು ಆತ್ಮಗೌರವವನ್ನು ಭೋಧಿಸು, ಕಲಿತನದ ಕೆಚ್ಚನ್ನು ಹೇಳಿಕೊಡು ಇದೇ ರೀತಿ ದಿನ ದಿನವೂ ತಿರಿಗಿ ತಿರಿಗಿ ಅವರಿಗೆ ಜ್ಞಾನ ದಾನಮಾಡು. ಇದು ನನಗೆ ಬಹಳ ಸಂತೋಷದ ಕಾಣಿಕೆ. ನಮ್ಮ ದೇಶದಲ್ಲಿ ಅಂತ್ಯಜರು ಉದ್ಧಾರವಾಗುವವರೆಗೂ ಕಳಂಕ ತಪ್ಪದು" ಎಂದು ಉಲ್ಲೇಖಿಸಿದ್ದಾರೆ.

ಮೈಸೂರು ರಾಜ ಮನೆತನದವರ ಮಹತ್ಕಾರ್ಯ

ಮೈಸೂರಿನ ಶ್ರೀಮನ್ಮಹಾರಾಜ ಶ್ರೀ ಚಾಮರಾಜ ಒಡೆಯರವರು ಆಳುತ್ತಿರುವ ಮಹಾಸ್ವಾಮಿಯವರ ಪೂಜ್ಯತಾತಂದಿರು ವಿವೇಕಾನಂದ ಸ್ವಾಮಿಜಿಯವರನ್ನು ಆಹ್ವಾನಿಸಿ ಬರೆದಿದ್ದ ಪತ್ರಕ್ಕೆ ಜವಾಬಾಗಿ ಸ್ವಾಮಿಜಿಯು ಅವರಿಗೂ ಅಂತ್ಯಜರಉದ್ಧಾರ ಕಾರ್ಯಕ್ರಮ ವೀಕ್ಷಣೆಯ ಸವಾಲನ್ನೇ ಹಾಕಿದರು. ಈ ಸವಾಲಿನ ಪ್ರತೀಕಾರವೇ ಮೈಸೂರಿನಲ್ಲಿ ಅಂತ್ಯಜರ ಪುರೋಭಿವೃದ್ಧಿ ಕಾರ್ಯವು ವಿದ್ಯಾಭ್ಯಾಸ ರೂಪದಿಂದ ಆರಂಭವಾಯಿತೆನ್ನಬಹುದು.

ಪೌರ ಸನ್ಮಾನ

೧೮೯೦ರಲ್ಲಿ ಪ್ರಯೋಗಾರ್ಥವಾಗಿ ಆನೆಕಲ್ಲು ತಾಲ್ಲೂಕು ಹುಸ್ಕೂರುನಲ್ಲೊಂದು, ಮಾಲೂರು ತಾಲ್ಲೂಕು ನರಸಾಪುರ, ಮಳವಳ್ಳಿ, ಬಂಗಾರುಪೇಟೆ ತಾಲ್ಲೂಕು ಸೂಲುಕುಂಟೆ, ಈ ಮೂರು ಕಡೆಗಳಲ್ಲಿ ಈ ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆದರು. ಹೀಗೆ ಆರಂಭವಾದ ಇವರ ವಿದ್ಯಾಭ್ಯಾಸವು ಪಂಚಮಾ ಸ್ಕೂಲುಗಳೆಂಬ ಹೆಸರಿನಲ್ಲಿ ಮುಂದುವರೆದುವು. ೧೯೨೨-೧೩

ಶ್ರೀಮಾನ್ ಸಿ. ಆರ್. ರೆಡ್ಡಿಯವರು

ರಲ್ಲಿ ಸರ್ಕಾರದವರು ಮೈಸೂರು ನಗರದಲ್ಲಿ ಪಂಚಮಾ ಬೋರ್ಡಿಂಗ್ ಸ್ಕೂಲನ್ನು ತೆರೆದರು ೧೯೧೪-೧೫ರಲ್ಲಿ ದಿವಾನ್ ಬಹದ್ದೂರ್ ಪುಟ್ಟಣ್ಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಸಿವಿಕ್ ಅಸೋಸಿಯೇಷನ್ ಏರ್ಪಾಡಾಯಿತು ಮದ್ರಾಸಿನಿಂದ ರಾವ್ ಬಹದ್ದೂರ್ ಎಂ. ಸಿ. ರಾಜ (ಜಸ್ಟೀಸ್ ಪಾರ್ಟಿಯು ಅಧಿಕಾರದಲ್ಲಿದ್ದಾಗ ಮಂತ್ರಿಯಾಗಿದ್ದವರು) ರವರನ್ನು ಕರೆಸಿ ಅವರಿಗೆ ಮಾನ ಪತ್ರ ಒಪ್ಪಿಸುವ ಸಮಾರಂಭದ ಜೊತೆಗೆ ಸಮ್ಮೇಳನವೂ ನಡೆಯಿತು. ಇದೇ ಮೈಸೂರು ಸಂಸ್ಥಾನದ ಪ್ರಥಮ ಪಂಚಮಾ ಸಮ್ಮೇಳನ.

ಈ ಸಮ್ಮೇಳನಾನಂತರ ಇವರಿಗೆ ಪಂಚಮರೆಂಬ ಹೆಸರು ತೆಗೆದು ಆದಿದ್ರಾವಿಡರೆಂದು ಕರೆದರು ಆದಿದ್ರಾವಿಡ ಪತ್ರಿಕೆಯೊಂದು ಪಂಚಮಾ ಬೋರ್ಡಿಂಗ್ ಹೋಂ ಆಶ್ರಯದಲ್ಲಿ ಶ್ರೀ ಆರ್. ರಂಗೇಗೌಡ ತಲಕಾಡು, ಶ್ರೀ ಕೆ. ಲಿಂಗಯ್ಯ ಮುಳವಳ್ಳಿ, ಪಿ. ಮಲ್ಲಪ್ಪ ಸೋಸಲೆ ಇವರ ಸಂಪಾದಕತ್ವದಲ್ಲಿ ಹೊರಬಂತು. ಶ್ರೀಮಾನ್ ವಿರೂಪಾಕ್ಷಯ್ಯ, ವನಜಮ್ಮ, ಶ್ರೀ ನಾರಾಯಣಸ್ವಾಮಿ ಐಯ್ಯರ್‌ರವರು ಈ ಜನಾಂಗದವರ ಪುರೋಭಿವೃದ್ಧಿಗಾಗಿ ಶ್ರಮಿಸಿದವರು ಹೀಗಿರುವಾಗ ದಿವಂಗತರಾದ ಸಿ. ಆರ್ ರೆಡ್ಡಿಯವರು ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ರಾಗಿ ಬಂದರು.

ಶ್ರೀಮಾನ್ ಸಿ ಆರ್ ರೆಡ್ಡಿಯವರ ಸ್ತುತ್ಯಕಾರ್ಯ

ಇವರು ಅಧಿಕಾರ ವಹಿಸಿಕೊಂಡ ಕೂಡಲೆ ಮೈಸೂರಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ಪ್ರಚಾರ ಚಳುವಳಿಯು ತಲೆ ಎತ್ತಿಕೊಂಡು ಇದರ ತತ್ವದ ಮೂಲೋದ್ದೇಶದ ಪರಿಣಾಮ ಪಂಚಮರ ವಿದ್ಯಾಭ್ಯಾಸದಲ್ಲಿ ಪ್ರಚಂಡ ಕ್ರಾಂತಿಯನ್ನು ಉಂಟು ಮಾಡಿತು ಪಂಚಮರನ್ನು ಎಲ್ಲಾ ಶಾಲೆಗಳಿಗೆ ಸೇರಿಸಬೇಕೆಂಬ ಸುಗ್ರೀವಾಜ್ಞೆ ಹೊರಟಿತು. ಸವರ್ಣೀಯರು ಮುಖ್ಯವಾಗಿ ಸನಾತನಿಗಳಾದ ಬ್ರಾಹ್ಮಣರು ಆಚಾರ ಪುಷ್ಕರ ಹೂಡಿದರು. ಪಂಚಮರನ್ನು ಸೇರಿಸಿದ ಸ್ಕೂಲ್‌ನಿಂದ ತಮ್ಮ ಮಕ್ಕಳನ್ನು ವಾಪಸ್ಸು ಕರೆಸಿಕೊಂಡರು ಒಂದೊಂದು ಶಾಲೆಯಲ್ಲಿ ೨-೩ ಉಪಾಧ್ಯಾಯರಿದ್ದರೂ ಪಂಚಮಾ ವಿದ್ಯಾರ್ಥಿಗಳು ಮಾತ್ರವೇ ಹಾಜರಿದ್ದುದು ಇಲಾಖಾಧಿಕಾರಿಗಳ ನೋಟೀಸಿಗೆ ಬಂತು. ಇಲಾಖೆಯು ತನ್ನ ನಿರ್ಧಾರವನ್ನು ಒಂದಗುಲದಷ್ಟೂ ಬದಲಾಯಿಸಲಿಲ್ಲ ಶ್ರೀಮಾನ್ ರೆಡ್ಡಿಯವರಿಗೂ, ಮರಿಮಲ್ಲಪ್ಪಾ ಹೈಸ್ಕೂಲ್ ಹೆಡ್ಮಾಸ್ಟರು ಶ್ರೀಮಾನ್ ವೆಂಕಟಕೃಷ್ಣಯ್ಯನವರಿಗೂ ಪತ್ರಿಕಾ ಲೋಕದಲ್ಲಿ ಪ್ರಚಂಡ ಯುದ್ಧವೇ ನಡೆದು ಹೋಯಿತು ಆಳಿದ ಕೀರ್ತಿಶೇಷರಾದ ಶ್ರೀಮನ್ ಮಹಾರಾಜ ಕೃಷ್ಣರಾಜೇಂದ್ರ ಒಡೆಯರವರ ಮತ್ತು ಯುವರಾಜ ಶ್ರೀಮಾನ್ ಕಂಠೀರವ ನರಸಿಂಹರಾಜ ಒಡೆಯರ ಸಂಪೂರ್ಣ ಕೃಪಾ ಕಟಾಕ್ಷವು ಈ ಪಂಚಮರ ಉದ್ಧಾರದ ಕಡೆಗೆ [illegible]



ಶ್ರೀಮಾನ್ ಕಂಠೀರವ ನರಸಿಂಹರಾಜ ಒಡೆಯ

ಶ್ರೀಮನ್ ಕಂಠೀರವ ನರಸಿಂಹರಾಜ ಒಡೆಯರವರು, ಪರಸ್ಪರ ಸಹಾಯ ಸಂಘಗಳ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ ಮೈಸೂರಿನಲ್ಲಿ ಪಂಚಮರ ಸಮಗ್ರ ಪುರೋಭಿವೃದ್ಧಿ ಮಾರ್ಗದಲ್ಲಿ ತಮ್ಮ ಸರ್ಕಾರದ ನಿಲುವೇನು, ತಮ್ಮ ವೈಯಕ್ತಿಕ ತತ್ವವೇನು ಎಂಬುದನ್ನು ಹೃದಯಂಗಮವಾಗಿ ವಿವರಿಸಿದರು. ಬೊಂಬಾಯಿನಲ್ಲೂ ಒಂದು ಸಲ ಭಾಷಣವಲ್ಲಿ ಅಸ್ಪೃಶ್ಯರ ವಿಷಯದಲ್ಲಿ ತಮ್ಮ ಅಭಿಮಾನವನ್ನೂ ಹೊರಗೆಡವಿದರು.

ಪಂಚಮರಿಗೆ ಇದೊಂದು ಪರ್ವಕಾಲ. ರಾಜಧಾನಿಯಲ್ಲಿ ಸ್ಥಾಪಿತವಾಗಿದ್ದ ಸೆಂಟ್ರಲ್ ಪಂಚಮಾ ಬೋರ್ಡಿಂಗ್ ಸ್ಕೂಲು ಸಕಲ ಸೌಕರ್ಯಗಳಿಂದ ಕೂಡಿ ಪಂಚಮಾ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಭಗವತೀ ವಿದ್ಯಾ ಪೀಠವಾಯ್ತು. ಇದರ ನೆರವಿನಿಂದ ಸಂಸ್ಥಾನದ ನಾಲ್ಕೂ ನಿಟ್ಟಿನಿಂದ ಪಂಚಮಾ ವಿದ್ಯಾರ್ಥಿಗಳು ವಿದ್ಯಾವಂತರಾಗಿ ಜ್ಞಾನ ದೀಕ್ಷೆ ಪಡೆದು ಹೊರಬರುತ್ತಿದ್ದರು.

ಪಂಚಮರ ಗೋಪಾಲನ ಉದಯ

ಈ ಸಮಯಕ್ಕೆ ತಕ್ಕ ಮತ್ತೊಂದು ಪವಾಡವೆಂದರೆ ಪಂಚಮರ ಅಂಧಕಾರಾಕಾಶದಲ್ಲಿ ಶುಕ್ಲಪಕ್ಷದಚಂದ್ರನಂತೆ ಶ್ರೀಮಾನ್ **ಆರ್. ಗೋಪಾಲಸ್ವಾಮಿ ಐಯ್ಯರ್‌ರವರು** ಈ ಜನಾಂಗದ ಸೇವೆಗೆ ಕಂಕಣಕಟ್ಟಿ ಸೇವಾಕ್ಷೇತ್ರಕ್ಕಿಳಿದರು. ಹಳ್ಳಿಗಳಲ್ಲಿ

ಶ್ರೀಮಾನ್ ಆರ್. ಗೋಪಾಲಸ್ವಾಮಿಐಯ್ಯರ್ ರವರು

ಪಟ್ಟಣಗಳಲ್ಲಿ ಸ್ಕೂಲುಗಳಲ್ಲಿ, ಕಾರ್ಖಾನೆಗಳಲ್ಲಿ, ಆಸ್ಪತ್ರೆಗಳಲ್ಲಿ ಅಧಿಕಾರರಂಗದಲ್ಲಿ ಸಾಮಾಜಿಕ ಪರಿಷತ್ತಿನಲ್ಲಿ, ಆರ್ಥಿಕ ಗೋಷ್ಠಿಯಲ್ಲಿ ಕ್ಲಬ್ಬುಗಳಲ್ಲಿ, ಮಠಗಳಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ, ಹಾಸ್ಟಲುಗಳಲ್ಲಿ ಜೈಲುಗಳಲ್ಲಿ, ಮದುವೆಗಳಲ್ಲಿ, ಮತೀಯ ಗೋಷ್ಠಿಗಳಲ್ಲಿ ಎಲ್ಲಿ ನೆನೆದರಲ್ಲಿ, ಎಲ್ಲಿನೋಡಿದರಲ್ಲಿ ನೆನೆದವರ ಮನದಲ್ಲಿ ಪಂಚಮರ ಗೋಪಾಲನಾಗಿ ಪ್ರಕಟವಾಗಿ ಅಹರ್ನಿಶಿ ದುಡಿದು ಪಂಚಮರಿಗೆ ನಾನಾ ರೀತಿಯ ಸೌಕರ್ಯಗಳಿಗಾಗಿಯೇ ಶ್ರಮಿಸುತ್ತಾ ಬಂದರು. **ಇದೊಂದು ಪಂಚಮರ ಪುರೋಭಿವೃದ್ಧಿ ಪರ್ವಕಾಲ-ಸುವರ್ಣಯುಗ-ಇಡೀ ಭಾರತದಲ್ಲೇ ಮೈಸೂರು ಈ ಕಾರ್ಯದಲ್ಲೂ ವಿದ್ಯಾವಂತ ಮುಂದಾಳುಗಳು** ತಮ್ಮ ಜನಾಂಗದ ಸೇವೆಗೆ ಕೈಹಾಕಿದರು. **ಸೇವೆಯೂ ಅನುಕೂಲ ಸಿಂಧುವಾಗಿಯೇ ಕಂಡಿತು.**

ಡಾ॥ ಬಿ. ಆರ್. ಅಂಬೇಡ್ಕರ್ ರವರ ಸವಾಲ್

ಭಾರತ ಬಂಧ ವಿಮೋಚನಾ ತತ್ವದ ಅಡಿಗಲ್ಲಮೇಲೆ ರಚನೆಯಾಗಿದ್ದ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಬ್ರಿಟಿಷ್ ಸರ್ಕಾರ ಮಧ್ಯೆ ಸ್ವರಾಜ್ಯ ಚಳುವಳಿಯ ವಾತಾವರಣವೆದ್ದಿತು. ಈ ವೇಳೆಗಾಗಲೇ ಉತ್ತರದೇಶದಲ್ಲೊಂದು ಪ್ರಚಂಡ ತಾರೆಯು ಮಿರುಗಲಾರಂಭಿಸಿತ್ತು. ಅದು ಅಸ್ಪೃಶ್ಯತಾ ನಿವಾರಣೆ ಮತ್ತು ಅವರ ಪುರೋಭಿವೃದ್ಧಿ ಸಂಬಂಧದಲ್ಲಿ ಬಿರುಗಾಳಿ ಒಂದನ್ನೆಬ್ಬಿಸಿ ಸ್ವರಾಜ್ಯ ಹೋರಾಟಗಾರರಲ್ಲಿ ತಿಕ್ಕುಹಿಡಿಸಿತ್ತು. ಆ ಮಹಾವ್ಯಕ್ತಿಯೇ ಡಾಕ್ಟರ್ ಬಿ. ಆರ್ ಅಂಬೇಡ್ಕರ್. ಇವರ ವಿದ್ಯಾ ಪ್ರೌಢಿಮೆ ವ್ಯಕ್ತಿತ್ವದ ಮಹತ್ತು ಅದ್ವಿತೀಯ ಮೇಧಾಶಕ್ತಿ ಇತ್ಯಾದಿಗಳನ್ನು ಇಲ್ಲಿ ವಿವರಿಸಬೇಕಾದ ಅವಶ್ಯಕತೆ ಇಲ್ಲ. ಇವರು ಸ್ವಾತಂತ್ರ್ಯ ಭಾರತ ಸಂವಿಧಾನ ರಚನಾಗೋಷ್ಠಿಯ ಅಧ್ಯಕ್ಷರಾಗಿದ್ದು, ಜಗತ್ತು ತಲೆದೂಗುವಂಥಾ ಭಾರತ ಸಂವಿಧಾನವನ್ನು ರಚಿಸಿಕೊಟ್ಟರು. **ಆಧುನಿಕಮನು ರಾಜ್ಯಾಂಗ ರಚನಾ ಬೃಹಸ್ಪತಿ** ಎಂದು ರಾಜಕೀಯ ಧುರೀಣರೇ ಮುಕ್ತ ಕಂಠದಿಂದ ಹೊಗಳಿದ ಕೀರ್ತಿವಂತರು, ಎಂದು ಮಾತ್ರ ಇವರ ವ್ಯಕ್ತಿಪರಿಚಯಮಾಡಿ ಮುಗಿಸೋಣ. ಇವರು " ಭಾರತ ಷೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ ' ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡು ಕಾರ್ಯಾರಂಭಮಾಡಿದ್ದರು. ಈ ಷೆಡ್ಯೂಲ್ಡ್ ಪಂಗಡಕ್ಕೆ ಈಗಿನ ಹರಿಜನರು, ಕೊರಚ, ಕೊರಮ ಬಣಜಾರ, ವಡ್ಡ, ಬೋಯಿ ಎಂಬ ಮತಗಳನ್ನು ಸೇರಿಸಿ ಇವರ ನೈತಿಕ, ಆರ್ಥಿಕ ಸಾಮಾಜಿಕ ಮತ್ತು ಶೈಕ್ಷಣಿಕ ಪುರೋಭಿವೃದ್ಧಿ ಕಾರ್ಯಕ್ಕೆ ಕೈ ಹಾಕಿದರು.

ಪೂನಾ ಒಪ್ಪಂದ

ಇಂಗ್ಲೆಂಡಿನಲ್ಲಿ ೧೯೩೧ರಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ಇವರು ಗಾಂಧಿಯವರ ವಾದವನ್ನು ಪ್ರತಿಭಟಿಸಿ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆ, ಡಬ್ಬಲ್ ವೋಟ್ ಹಕ್ಕು ಇರಬೇಕೆಂಬ ಸವಾಲು ಹಾಕಿದರು. ವಿಷಯವನ್ನು ಆಮೂಲಾಗ್ರವಾಗಿ ಪರಿಶೀಲಿಸಿದ ಬ್ರಿಟಿಷ್ ಪ್ರಭುತ್ವದವರು ಜಾತೀಯ ಪ್ರಾತಿನಿಧಿಕ ಚುನಾವಣೆ ತತ್ವವನ್ನು ಅಂಗೀಕರಿಸಿ ತೀರ್ಪು ಕೊಟ್ಟೇಬಿಟ್ಟರು. ತಮ್ಮ ಪ್ರಯತ್ನದಲ್ಲಿ ವಿಫಲರಾಗಿ ಹಿಂತಿರುಗಿದ ಮಹಾತ್ಮಗಾಂಧಿಯವರು ಅಸ್ಪೃಶ್ಯರಿಗೆ **ಹರಿಜನರೆಂಬ** ಹೆಸರಿಟ್ಟು ಅವರ ಸೇವೆಗೆ ಆರಂಭಿಸಿದರು. ಡಾ|| ಅಂಬೇಡ್ಕರ್‌ರವರ ತತ್ವವನ್ನು ಮನ್ನಿಸಲಿಕ್ಕಾಗಲೀ ಹರಿಜನರು ಹಿಂದೂಗಳಿಂದ ಬೇರೆ ಎಂದು ಅಂಗೀಕರಿಸಲಿಕ್ಕಾಗಲೀ ಒಪ್ಪದೆ ಡಾ|| ಅಂಬೇಡ್ಕರ್‌ರವರ ನಿರ್ಧಾರ ಬದಲಾವಣೆಗಾಗಿ ಗಾಂಧೀಜಿ ಮಹಾ ಪ್ರಾಯೋಪವೇಶ ಉಪವಾಸವನ್ನು ಕೈಕೊಂಡು 21 ದಿವಸಗಳ ಉಪವಾಸ ಮಾಡಿದರು. ಇಂಥಾ ಪ್ರಾಣಾಪಾಯ ಪ್ರಾಯೋಪವೇಶಕ್ಕೆ ಇಡೀ ಭಾರತವೇ ನಡುಗಿಹೋಯಿತು. ಹಿಂದೂ ಬಾಂಧವರು ಮಹಾತ್ಮರ ಅಭಿಪ್ರಾಯದಂತೆ ಅಸ್ಪೃಶ್ಯತೆಯ ನಿವಾರಣಾ ಕಾರ್ಯಕ್ರಮ ಕೈಗೊಳ್ಳುವಂತೆಯೂ, ಅದರ ನಿರ್ಮೂಲ ಮಾಡುವಂತೆಯೂ ಭರವಸೆ ನೀಡಿ ಡಾ|| ಅಂಬೇಡ್ಕರ್‌ರವರ ನಿರ್ಧಾರವನ್ನು ಬದಲಿಸಿದರು. ಇವರ ಪರಿಣಾಮವಾಗಿ ಪೂನಾ ಪಾಕ್ಟ್ ಎಂಬ ಒಂದು ಒಪ್ಪಂದವೇರ್ಪಟ್ಟಿತು.

ಹರಿಜನ ಸೇವಕ ಸಂಘಗಳು ಸ್ಥಾಪನೆ :

ಆದರ್ಶ ರಾಷ್ಟ್ರಪಿತ ಬಾಪು ಇವರನ್ನು ಅಸ್ಪೃಶ್ಯರೆಂದು ಕರೆಯುವುದು ಸಹ ಅಪರಾಧ ಎಂದು, ಇವರ ಬಗ್ಗೆ ನೊಂದು ಭಾರತಮಾತೆಯ ಸತ್ಪುರುಷ ಪ್ರಜಾ ಕೋಟಿಯಲ್ಲಿ ಇವರೂ ಸಹ ಸಮಭಾಗಿಗಳು ಎಂಬುದನ್ನು ದೇಶಾದ್ಯಂತ ಸಾರಲು ಪ್ರವಾಸಕ್ಕೆಕೊಂಡರು. ಸಾಮಾಜಿಕದೌರ್ಬಲ್ಯದ ನಿವಾರಣೆಯ ಒಂದು ಗುರಿಯನ್ನು ಸಾಧಿಸಲು ಈ ಜನಾಂಗವನ್ನು ಬಾಪು "ಹರಿಜನರು" ಎಂದು ಕರೆದರು. ಅವರ ಸೇವೆಗಾಗಿ, ಅಖಿಲ ಭಾರತ ಹರಿಜನಸೇವಕ ಸಂಘ ಸ್ಥಾಪಿಸಿದ್ದು ಮಾತ್ರವಲ್ಲದೆ, ರಚನಾತ್ಮಕ ಕಾರ್ಯಗಳಲ್ಲಿ ಹರಿಜನೋದ್ಧಾರ ಕಾರ್ಯ ಒಂದು ಪ್ರಾಮುಖ್ಯವಾದ ಕಾರ್ಯ ಎಂದು ಪರಿಗಣಿಸಿ; ಹರಿಜನೇತರರೂ, ಕಾಂಗ್ರೆಸ್ ಸದಸ್ಯರೂ ದೇಶದಾದ್ಯಂತ; ಇವರ ಬಗ್ಗೆ ಕೆಲಸಮಾಡಲು ಅಧಿಕೃತವಾದ, ಒಂದು ಒತ್ತಾಯವನ್ನು ಕಲ್ಪಿಸಿ, "ಹರಿಜನ ಸೇವೆಯೇ ಹರಿಸೇವೆ" ಎಂದು ಸಾರಿದರು, ದೇಶದ ಮೂಲೆ ಮೂಲೆಯಲ್ಲಿ ಪ್ರವಾಸ ಕೈಗೊಂಡು, ಪ್ರತಿ ಸಂಸ್ಥಾನಗಳಲ್ಲೂ ಪ್ರಾಂತೀಯ ಹರಿಜನ ಸೇವಕ ಸಂಘಗಳು ಸ್ಥಾಪನೆ ಆದವು. ಕೆಲಸ ಮಾಡಲು ಧನ ಶೇಖರಿಸಿದರು. ಈ ಪವಿತ್ರ ಕಾರ್ಯನಿರ್ವಹಣೆಗೆ, ಶ್ರೀಠಕ್ಕರ್ ಬಾಪಾರವರನ್ನು ನೇಮಿಸಿ, ಅವರ ನಾಯಕತ್ವದಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯವನ್ನು ಸವರ್ಣ ಹಿಂದುಗಳಿಂದ ನಡೆಸುವಂತೆ ಮಾಡಿದ್ದಲ್ಲದೆ, ಇದು ಒಂದು ಅಪರಾಧ, ಅದರ ಪ್ರಾಯಶ್ಚಿತ್ತ ಅವರ ಸೇವೆಯೇ ಎಂದು ಜನತೆಗೆ ತೋರಿಸಿ ಕೊಟ್ಟರು.

ಮೈಸೂರಿನಲ್ಲಿ ರಾಜಕೀಯ ಸುಧಾರಣೆಗಳು

ಇಷ್ಟರಲ್ಲೇ ಮೈಸೂರು ರಾಜಕೀಯದಲ್ಲೂ **ಪ್ರಚಂಡ** ಸುಧಾರಣೆಗಳು ಆರಂಭವಾದವು. ಸರ್ ಮಿರ್ಜಾರವರ ಆಡಂಬರದ ದಿವಾನಗಿರಿಯ ಆಡಳಿತದ ಕಾಲ. ಮುಸ್ಲಿಂ ಜನಾಂಗದ ಮುನ್ನಡೆಯದಿನ. ಈ ಸಮಯಕ್ಕೆ ಪಂಚಮರು ಆದಿ ಕರ್ನಾಟಕರು ಎಂಬ ಅಭಿದಾನಕ್ಕೆ ಬಂದಿದ್ದರು. ದಿವಂಗತ ಶ್ರೀಮಾನ್ ಯುವರಾಜ ಶ್ರೀ ಕಂಠೀರವ ನರಸಿಂಹರಾಜಾ ಒಡೆಯರ ಹೆಸರಿನಲ್ಲಿ ಶ್ರೀ ನರಸಿಂಹರಾಜಾ ಹಾಸ್ಟಲು ಬೆಂಗಳೂರಿನಲ್ಲಿ ನಿರ್ಮಾಣವಾಗಿ ಕೆಲವು ವಿದ್ಯಾರ್ಥಿಗಳು ಬೆಳಕಿಗೆ ಬಂದಿದ್ದರು, ರಾಜಕೀಯ ಸುಧಾರಣಾ ಸಭೆಯಲ್ಲಿ ಈ ಜನಾಂಗದ ಪರವಾಗಿ ಶ್ರೀ ನ ಎನ್ ಆರ್. **ಚನ್ನಿಗರಾಮಯ್ಯನವರು** ಸದಸ್ಯರಾಗಿದ್ದರು.

ಸಭೆಯು ಕೌನ್ಸಿಲರ್ ದಿವಾನಬಹದ್ದೂರ್ ಕೆ. ಆರ್. ಶ್ರೀನಿವಾಸಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿತ್ತು. ಈ ಸಮಿತಿಯಲ್ಲಿ ತಜ್ಞರಾದ ಶ್ರೀ ಕೆ. ಅನಂತರಾಮ್ ಶ್ರೀ ಹಯವದನರಾವ್, ಶ್ರೀ ಎಸ್. ಹಿರಣ್ಣಯ್ಯ, ಶ್ರೀ ಡಿ. ವಿ. ಗುಂಡಪ್ಪ ಶ್ರೀ ಜೆ. ಮಹಮದ್ ಇಮಾಂ, ಶ್ರೀ ಹನೀಫ್, ಶ್ರೀ ಅಬ್ಬಾಸ್ ಖಾನ್, ಶ್ರೀ ಭೂಪಾಳಂ ಚಂದ್ರಶೇಖರಯ್ಯ, ಶ್ರೀ ಬಿ. ಎಸ್. ಪುಟ್ಟಸ್ವಾಮಿ, ಮುಂತಾದ ರಾಜಕೀಯ ಧುರೀಣರೇ ಕೂಡಿದ್ದರು. ಸಮಿತಿಯಲ್ಲಿ ಶ್ರೀಮಾನ್ ಆರ್. ಚನ್ನಿಗರಾಮಯ್ಯನವರು ತೋರಿದ ತಮ್ಮ ರಾಜಕೀಯ ಚಾಣಾಕ್ಷತೆಯು ಅನನ್ಯವಾದುದು ಅಮೋಘವಾದುದು. ಅದರ ಪರಿಣಾಮವಾಗಿ ನಿಮ್ನವರ್ಗದವರಿಗೆ ಆಗಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ೩೦ ಸ್ಥಾನಗಳು ದೊರೆತವು. ಅಮೂಲ್ಯವಾದ ಅನುಕೂಲಗಳೂ ಲಭಿಸಿದವು.

ವಿಶೇಷ ಗ್ರಾಂಟ್ ಸ್ಪೆಷಲ್ ಆಫೀಸರುಗಳ ನೇಮಕ

ಸುಧಾರಣೆಗಳಾದ ನಂತರ, ನಿಮ್ನ ವರ್ಗಾಭಿವೃದ್ಧಿ ಗ್ರಾಂಟ್ ಒಂದನ್ನು ಸರ್ಕಾರವು ಬಜೆಟ್‌ನಲ್ಲಿ ಒದಗಿಸುತ್ತಾ ಬಂತು. ಈ ಗ್ರಾಂಟನ್ನು ಸರಿಯಾದ ರೀತಿ ಖರ್ಚುಮಾಡಿ ಈ ಜನಾಂಗದ ಪುರೋಭಿವೃದ್ಧಿ ಸಾಧಿಸುವ ಬಗ್ಗೆ ಮೇಲ್ವಿಚಾರಕರನ್ನಾಗಿ ಸ್ಪೆಷಲ್ ಆಫೀಸರುಗಳ ನೇಮಕವಾಯಿತು. ವಿದ್ಯಾಭ್ಯಾಸದ ಮಾರ್ಗದಲ್ಲೂ ಪ್ರಗತಿ ನಡೆಯಿತು. ಹರಿಜನೋದ್ಧಾರ ಕಾರ್ಯವನ್ನೂ ಕೂಡ ರಾಷ್ಟ್ರಾಭಿವೃದ್ಧಿ ಕಾರ್ಯಗಳಂತೆಯೇ ಪರಿಗಣಿಸಿ ವರ್ಷೇ ವರ್ಷ ಗ್ರಾಂಟನ್ನು ಹೆಚ್ಚಿಸುತ್ತಾ ಬಂದು ನಿಮ್ನ ವರ್ಗೋದ್ಧಾರ ಶಾಖೆಯೊಂದನ್ನು ನಿರ್ಮಾಣ ಮಾಡಿದರು. ಈ ಶಾಖೆಯು ಕೆಲವು ಕಾಲ ರೆವಿನ್ಯೂ ಕಮೀಷನರ್‌ರವರ ಆಡಳಿತಕ್ಕೂ ಕೆಲವು ಕಾಲ ಲೇಬರ್ ಕಮೀಷನರ್‌ರವರ ಆಡಳಿತಕ್ಕೂ ಸೇರಿದ್ದು ಈ ಶಾಖೆಗೆ ಒಂದು ಸ್ಪೆಷಲ್ ಆಫೀಸರನ್ನು ನೇಮಿಸಿದರ. ಇವರೇ ಶ್ರೀ ಬಿ. ರಾಚಪ್ಪ ಬಿ. ಎ., ೧೯೪೬ ನೇ ನವಂಬರ್ ೮ ಸುಮಾರಿನಲ್ಲಿ ಈ ಇಲಾಖೆಯ ಛಾರ್ಜನ್ನು ತೆಗೆದುಕೊಂಡರು. ಅಲ್ಲಿಂದಾಯ್ತು ೧೯೫೫ನೇ ಸೆಪ್ಟಂಬರ್ ೧೫ರವರೆಗೆ ೯ ವರ್ಷಗಳ ಕಾಲ ಈ ಇಲಾಖೆಯಲ್ಲಿದ್ದರು. ಇಷ್ಟು ದೀರ್ಘ ಕಾಲ ಈ ಇಲಾಖೆಯಲ್ಲಿದ್ದು ಇವರು ಮಾಡಿದ್ದೇನು ? ಎಂಬ ಪ್ರಶ್ನೆಗೆ ಅವರೇ ಉತ್ತರಿಸಬೇಕು.

ಜವಾಬ್ದಾರಿ ಸರ್ಕಾರ ಸ್ಥಾಪನೆ ಮತ್ತು ಹರಿಜನರು

ಅಸ್ಪೃಶ್ಯರ ಬಗ್ಗೆ ಬಾಪು ಕೈಗೊಂಡ ಕಾರ್ಯಕ್ಕೆ ದೇಶದ ಎಲ್ಲಾ ಜನದಿಂದ ಮನ್ನಣೆ ದೊರಕಿತು, ಈ ಬಗ್ಗೆ ಎಲ್ಲಾ ಪ್ರಾಂತ ಸರ್ಕಾರಗಳೂ. ದೇಶೀಯ ಸಂಸ್ಥಾನಗಳೂ, ಒಂದು ಗೊತ್ತಾದ ನೀತಿಯನ್ನು ಅನುಸರಿಸಿ. ಅವರ ಪುರೋಭಿವೃದ್ಧಿಗಾಗಿ, ಕೆಲವು ಪ್ರಚಾರ ಮತ್ತು ಪ್ರಗತಿ ಪರವಾದ ಕಾರ್ಯಗಳನ್ನು ನಿಯೋಜಿಸಿ ಸಾಧಿಸುತ್ತಾ ಬಂದರು. ಭಾರತ ಸ್ವಾತಂತ್ರ ಚಳುವಳಿ ಆರಂಭವಾಯಿತು. ಹರಿಜನರು ಕಾಂಗ್ರೆಸ್‌ಗೆ ಸೇರಿ ಇದರಲ್ಲಿ ಕೆಲಸ ಮಾಡಿ ತಮ್ಮ ಕರ್ತವ್ಯವನ್ನು ತಾವು ಸಾಧಿಸಿದರು. ಸ್ವಾತಂತ್ರ ಬಂದಮೇಲೆ, ಭಾರತ ರಾಜ್ಯಾಂಗ ನಿರ್ಮಾಣ ಸಭೆಯು ಆರಂಭವಾಯಿತು, ಹರಿಜನರ ಪ್ರಗತಿಗೆ ರಾಜ್ಯಾಂಗದಲ್ಲಿ ವಿಶೇಷ ಸೌಲಭ್ಯ ದೊರೆಯಿತು. ಇಂದು ರಾಷ್ಟ್ರದಲ್ಲಿ ಅಸ್ಪೃಶ್ಯತೆ, ಒಂದು ಅಪರಾಧವಾಗಿದೆ। ಹಲ ಕೆಲವರು ಈ ಅಸ್ಪೃಶ್ಯತಾ ನಿವಾರಣೆಯನ್ನು ಕಡೆ ಗಣ್ಣಿನಿಂದ ನೋಡುತ್ತಿರುವುದು ತುಂಬಾ ಶೋಚನೀಯ. ಇದಕ್ಕೆ ಶಾಸನವಿದ್ದರೂ, ಹೃದಯ ಪರಿವರ್ತನೆ ಬೇಕು. ಅಂತಹ ಪವಿತ್ರ ದಿನ ಬಹು ಬೇಗ ಬಂದು, ಭಾರತ ಮಾತೆಯ ಸತ್ಪ್ರಜೆಗಳಲ್ಲಿ ಇವರೂ ಸಮಭಾಗಿಗಳಾಗಬೇಕಾಗಿದೆ.

ನಮ್ಮ ರಾಷ್ಟ್ರದಲ್ಲಿ ಹರಿಜನರ ಬಗ್ಗೆ ನಡೆದ ಕಾರ್ಯಗಳು

ಭಾರತವು ತನ್ನದೇ ಆದ ಒಂದು ರಾಜ್ಯಾಂಗವನ್ನು ಸ್ಥಾಪಿಸಿ ಇಡೀ ಪ್ರಪಂಚದಲ್ಲೇ ಒಂದು ಅಗ್ರ ಸ್ಥಾನವನ್ನು ಗಳಿಸಿದೆಯಷ್ಟೆ. ಇದರಲ್ಲಿ ಜಾತ್ಯಾತೀತವಾದ ತತ್ವವು ಪರಿಗಣಿತವಾಗಿದೆ. ಅಸ್ಪೃಶ್ಯರು ಇಡೀ ರಾಷ್ಟ್ರದಲ್ಲಿ1/6 ಭಾಗ ಇದ್ದಾರೆ. ಇವರ ಅಭಿವೃದ್ಧಿಯಾದ ಹೊರತು ರಾಷ್ಟ್ರ ಅಭಿವೃದ್ಧಿಯಾಗಲಾರದೆಂದು ಅರಿತು, ಅನೇಕ ಮಹತ್ಕಾರ್ಯಗಳನ್ನು ಈ ಜನಾಂಗದ ಬಗ್ಗೆ ಸಾಧಿಸಲು ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ವಿದ್ಯಾಭ್ಯಾಸದ ಪ್ರಗತಿಗೆ ಯೋಜನೆಗಳನ್ನು ಮಾಡಿಕೊಂಡು ಕೇಂದ್ರ ಸರ್ಕಾರ ಕಾರ್ಯ ಸಾಧಿಸುತ್ತಾ ಬಂದಿದೆ. ಆದರೆ ನಿರೀಕ್ಷಿಸಿದಷ್ಟು ಕಾರ್ಯವಾಗಲೀ ಪ್ರಗತಿಯಾಗಲೀ ಕಾಣುತ್ತಿಲ್ಲ. ಇದಕ್ಕೆ ಮೂಲ ಕಾರಣ, ಜನತೆಯ ಹೃದಯ ಪರಿವರ್ತನೆಯಾಗಲಿಲ್ಲ. ಸ್ವಾರ್ಥ ಸಾಧಕರ ಹಿನ್ನೆಲೆಯಲ್ಲಿ ಇದು ಪ್ರಗತಿ ಪಥ ಹೇಗೆ ಹಿಡಿದೀತು ? ಹರಿಜನರು ವಿಶೇಷ ಸೌಲಭ್ಯಗಳನ್ನು ರಾಜ್ಯಾಂಗದಲ್ಲಿ ಕಾಣುವುದರಿಂದ ಅವರು ಮುಂದುವರಿಯಲಾರರು. ಅದು ಕಾರ್ಯಗತವಾದಾಗ ಮಾತ್ರ ಅವರ ಪ್ರಗತಿ. ಇದನ್ನು ಸಾಧಿಸಲು ಸರ್ವರೂ, ಸತತವಾಗಿ ದುಡಿಯಬೇಕು. ಅದೇ ಇಂದಿನ ರಾಷ್ಟ್ರಪ್ರಗತಿಗೆ ನಿಸ್ವಾರ್ಥ ಸೇವೆ.

ಅಸ್ಪೃಶ್ಯರ ಬಗ್ಗೆ ಕೇಂದ್ರ ಸರ್ಕಾರದ ಮುನ್ನಡೆ

ರಾಷ್ಟ್ರ ಪ್ರಗತಿಯ ಬಗ್ಗೆ ಯೋಜನೆಗಳೂ ಪಂಚವಾರ್ಷಿಕ ಯೋಜನೆಗಳೂ ರಾಷ್ಟ್ರದ ಏಳಿಗೆ ಕಾರ್ಯದಲ್ಲಿ ಆರಂಭವಾದವು. ಆದರೆ ಹರಿಜನ ಪುರೋಭಿವೃದ್ಧಿ ಬಗ್ಗೆ ಗೊತ್ತಾದ ಯೋಜನೆ ತಯಾರಿಸಿ, ಅದನ್ನು ವರದಿ ಮಾಡಲು ಸರ್ಕಾರದಿಂದ, ಅಪ್ಪಣೆಪಡೆದು, ಭಾರತದ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇಲಾಖೆಯು ಒಂದು "ಸೆಮಿನಾರ್" ಏರ್ಪಡಿಸಿ ಈಹಿಂದುಳಿದ ಜನಾಂಗದ ನಾನಾ ಮುಖ ಪ್ರಗತಿಗಾಗಿ, ಅನೇಕ ವಿಷಯಗಳನ್ನು ವಿಮರ್ಶೆ ಮಾಡಿ ಈ ಇಲಾಖೆಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು ಈ ಬಗ್ಗೆ ಷೆಡ್ಯೂಲ್ಡ್ ಕ್ಲಾಸ್ ಕಮಿಷನರ್ ಶ್ರೀ ಕಾಂತ್‌ರವರಿಗೆ ನಮ್ಮ ಕೃತಜ್ಞತೆಗಳು.

ಇದನ್ನು ಅರಿತ, ಮೈಸೂರು ಸರ್ಕಾರ ಮತ್ತು ಮೈಸೂರ ನಿಮ್ನ ವರ್ಗದ ಪುರೋಭಿವೃದ್ಧಿ ಇಲಾಖೆಯು, ಇಡಿ ಮೈಸೂರು ನಾಡಿನಲ್ಲಿ ಇರುವ ವಿಶೇಷ ಪರಿಣಿತರು, ರಾಜಕೀಯ ನಿಪುಣರು, ಅರ್ಥ ಶಾಸ್ತ್ರ ನಿಪುಣರು, ಶಾಸನ ಸಭಾ ಸದಸ್ಯರು, ಸಮಾಜ ಸೇವಾ ಕಾರ್ಯಕರ್ತರು, ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳನ್ನು ಬರಮಾಡಿಕೊಂಡು ಇವೆ

೧೧-೨-೧೯೫೬ ರಲ್ಲಿ ಒಂದು **ಸೆಮಿನಾರ್** ನಡೆಸಿದರು. ಸೆಮಿನಾರ್‌ಗೆ ಡೆಲಿಗೇಟುಗಳಾಗಿ ಆಹ್ವಾನಿಸಲ್ಪಟ್ಟಿದ್ದ ಇವರೆಲ್ಲರೂ, ಸಾಮಾಜಿಕ, ವಿದ್ಯಾಭ್ಯಾಸ, ಆಡಳಿತ, ಆರ್ಥಿಕ ಮತ್ತು ಜನಾರೋಗ್ಯ, ಎಂಬ ಐದು ಸಮಿತಿಗಳನ್ನು ರಚಿಸಿಕೊಂಡು ಉಪಯುಕ್ತವಾದ ರಚನಾತ್ಮಕ ಚರ್ಚೆ ಮತ್ತು ತೀರ್ಮಾನಗಳನ್ನು ಮಾಡಿದ್ದಾರೆ. ಇದು ಸರ್ಕಾರದಿಂದ ಅಂಗೀಕಾರವಾಗಿ ಜಾಗ್ರತೆ ಜಾರಿಗೆ ಬಂದರೆ ಹರಿಜನರ ಪ್ರಗತಿ ಉನ್ನತ ರೀತಿಯಲ್ಲಿ ಗೊತ್ತಾದ ಕಾಲದಲ್ಲಿ ನಿರ್ವಹಣೆಯಾಗುವುದೆಂದು ನಾವು ನಂಬೋಣ. ಈ ಸೆಮಿನಾರ್ ಕಾರ್ಯವು ದಕ್ಷ ಆಡಳಿತಗಾರರೆಂದು ಹೆಸರಾಂತ ಶ್ರೀಮಾನ್ ಕೆ. ತಿಪ್ಪೇರುದ್ರಯ್ಯ ಐ.ಎ.ಎಸ್. ಡಿಪ್ರೆಸ್ಡ್ ಕ್ಲಾಸ್ ಕಮೀಷನರ್, ರವರ ನೇತೃತ್ವದಲ್ಲಿ ಶ್ರೀ ವೈ. ಸಿ. ಹೊಂಬಾಳಯ್ಯ ಬಿ.ಎ., ಎಲ್.ಎಲ್.ಬಿ. ಸೇಲ್ಸ್ ಟ್ಯಾಕ್ಸ್ ಡೆಪ್ಯುಟೀ ಕಮೀಷನರ್, ಶ್ರೀವಿ. ಹನುಮಂತಪ್ಪ ಎಂ. ಎ., ಸರ್ಕಾರದ ಅಸಿಸ್ಟೆಂಟ್ ಸಕ್ರೆಟರಿ ಇವರುಗಳ ಸಂಪೂರ್ಣ ಜವಾಬ್ದಾರಿಯಲ್ಲಿ ನಡೆದು ಜನ ಜಾಗೃತಿಗೆ ಆದರ್ಶವಾಗಿದೆ.

ಸೆಮಿನಾರ್ ಕಾರ್ಯಕಲಾಪಗಳು :—

ಶ್ರೀಮಾನ್ ಡಾ|| ಕುಪ್ಪುಸ್ವಾಮಿನಾಯ್ಡುರವರು, ಡೈರೆಕ್ಟರ್
ಶ್ರೀಮಾನ್ ಕೆ. ತಿಪ್ಪೇರುದ್ರಯ್ಯನವರು, ಜನರಲ್ ಸೆಕ್ರೆಟರಿ
,, ವೈ.ಸಿ. ಹೊಂಬಾಳಯ್ಯನವರು, ಸಹಾಯಕ ಡೈರೆಕ್ಟರು
,, ವಿ. ಹನುಮಂತಪ್ಪನವರು, ಎಕ್ಸಿಕ್ಯೂಟಿವ್ ಸೆಕ್ರೆಟರಿ
,, ವೈ. ಯಮುನಾಚಾರ್‌ರವರು, ಸಾಮಾಜಿಕ ಭಾಗದ ನಾಯಕರು
,, ಪೀತಾಂಬರರಾವ್‌ರವರು, ಆರ್ಥಿಕಾಭಿವೃದ್ಧಿ ಭಾಗದ ನಾಯಕರು
,, ಮರಿರಾಜ್‌ರವರು,-ವಿದ್ಯಾಭ್ಯಾಸ ಭಾಗದ ನಾಯಕರು
,, ಡಾ|| ಅನಂತರಾವ್‌ರವರು, ಆರೋಗ್ಯ ನೈರ್ಮಲ್ಯ ಭಾಗದ ನಾಯಕರು.
,, ಆರ್. ಚನ್ನಿಗರಾಮಯ್ಯನವರು, ಆಡಳಿತ ವಿಭಾಗದ ನಾಯಕರು

ಈ ವಿಭಾಗಗಳಿಗೆ ಕ್ರಮವಾಗಿ ;—

ಶ್ರೀ ಯುತರುಗಳಾದ ಎಂ. ಮುದ್ದಲಿಂಗಣ್ಣ, ರಾಮಯ್ಯ ಭೀಮಸೇನರಾವ್, ನಾರಾಯಣರಾವ್, ರೂಪ್ಲಾನಾಯಕ್ ಇವರುಗಳು ಕಾರ್ಯದರ್ಶಿಗಳಾಗಿ ಅಸ್ಪೃಶ್ಯತಾ ಭೀಕರ ರಾಕ್ಷಸ–ನಿಮ್ನ ತರಗತಿಯ ದುಸ್ಥಿತಿ ಕರಾಳ ಪೈಶಾಚದ ಮೇಲೆ [illegible]

ಈ ಮಹಾ ಯದ್ಧಕ್ಕೆ **ಸಿದ್ದಗಂಗಾ** ಮಠಾಧೀಶ್ವರ ಶ್ರೀ ಶ್ರೀ ಶ್ರೀ **ಶಿವಕುಮಾರಸ್ವಾಮಿಗಳು** ಪೌರೋಹಿತ್ಯವಹಿಸಿದ್ದರು. ಹ ಜನ ಮಂತ್ರಿಗಳಾದ ಶ್ರೀಮಾನ್ **ಟಿ. ಚೆನ್ನಯ್ಯನವರಿಂ** ಯಾಗಾರಂಭ ರೂಪದಲ್ಲಿ ಗೋಷ್ಠಿಯು ಆರಂಭವಾಯ್ತು.

೧೧–೨–೫೬ ಮೊದಲನೆಯ ದಿನದ ಗೊತ್ತಾದ ಕಾರ್ಯಕ್ರಮದ ಪ್ರಕಾರ, ಶ್ರೀ ಸಿದ್ದಗಂಗಾ ಮಠಾಧೀಶ್ವರ, ಮಾನ್ಯ ಗುರುವರ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಗೋಷ್ಠಿಯ ಕಾರ್ಯಕ್ರಮ ಆರಂಭವಾಯಿತು. ಸಜ್ಜುಗೊಳಿಸಿದ, ಹಸಿರು ವಾಣಿ ಚಪ್ಪರದಿಂದ ಅಲಂಕೃತವಾದ ಸಂಭಾಂಗಣಕ್ಕೆ ಮೈಸೂರು ದೇಶದ ಮೂಲೆ ಮೂಲೆಯಿಂದ ಆಹ್ವಾನಿತರೂ, ವಿವಿಧ ಡೆಲಿಗೇಟುಗಳೂ ದಯಮಾಡಿಸಿದ್ದರು ಸಭೆಯ ಕಾರ್ಯಕ್ರಮ ಮಧ್ಯಾಹ್ನ ೧ ಘಂಟೆ ೩೦ ನಿಮಿಷಕ್ಕೆ ಆರಂಭವಾಯಿತು.

ನಿಮ್ನ ವರ್ಗದ ಕಮೀಷನರವರಾದ ಶ್ರೀ ಕೆ. ತಿಪ್ಪೇರುದ್ರಯ್ಯನವರು, ಸಭೆಗೆ ದಯಮಾಡಿಸಿದ್ದ ಶ್ರೀ ಸ್ವಾಮಿಜಿಯವರನ್ನು ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀಮಾನ್ ಟಿ. ಚನ್ನಯ್ಯನವರನ್ನು ಸರ್ವರನ್ನೂ ಸ್ವಾಗತಿಸುತ್ತಾ, ಡೆಲಿಗೇಟ್‌ಗಳಾಗಿ ದಯಮಾಡಿಸಿರುವ 'ಮಾನ್ಯ ಶಾಸನ ಸಭಾ ಸದಸ್ಯರನ್ನೂ ಅರ್ಥಶಾಸ್ತ್ರ ನಿಪುಣರನ್ನೂ, ಸಮಾಜಿಕ ಕಾರ್ಯಕರ್ತರನ್ನೂ ರಾಜಕೀಯ ಮೇಧಾವಿಗಳನ್ನೂ ಪರಿಚಯ ಮಾಡಿ ಕೊಟ್ಟು ಅವರೆಲ್ಲರಿಗೂ ಸುಸ್ವಾಗತ ಬಯಸಿದರು.

ಕೀರ್ತನ ಭೂಷಣ ಶ್ರೀ ಕೃಷ್ಣಪ್ಪನವರ ಸ್ವಾಗತ ಗೀತಾ ಪಠಣದಿಂದ ಕಾರ್ಯಾರಂಭವಾಯಿತು. ಈ ಗೀತೆಯಲ್ಲಿ ಅಸ್ಪೃಶ್ಯತೆಯ ಮೂಲ, ಅದರ ಬೆಳವಣಿಗೆ ಮತ್ತು ಅದರ ನಿವಾರಣೋಪಾಯ ಇವನ್ನು ಚಿತ್ರಿಸಿ, ಸರ್ವ ಹರಿಜನರಿಗೂ ಈ ಗೋಷ್ಠಿಯು ವಿಜಯ ಸಾಧಿಸಿಕೊಡಲಿ ಎಂದು ಕೋರಿ ಹಾಡಿದರು. ಇದರಲ್ಲಿ ಅಸ್ಪೃಶ್ಯತೆಯ ಬೆಳವಣಿಗೆಗೆ, ವೇದದಲ್ಲಿ ಆಧಾರವಿಲ್ಲವೆಂದೂ, ವಾದ ಮಾಡುವುದರಿಂದ ಆ ಬಗ್ಗೆ ತಿರಳು ಇಲ್ಲವೆಂದೂ, ವ್ಯಕ್ತಪಡಿಸಿದ್ದಾರೆ. ತಮ್ಮ ಗೀತೆಯನ್ನು ಪರಿಸಮಾಪ್ತಿಗೊಳಿಸುತ್ತಾ ಇಡೀ ರಾಷ್ಟ್ರಕ್ಕೂ, ಹಾಗೂ ಹರಿಜನ ಜನಾಂಗಕ್ಕೂ ಈ ವಿಚಾರ ವಿನಿಮಯಗೋಷ್ಠಿ ಪವಿತ್ರ ಕಾರ್ಯ ಸಾಧಿಸಲಿ ಎಂದು ಭಗವಂತನನ್ನು ಸ್ಮರಿಸುತ್ತಾ, ಸೆಮಿನಾರ್ ಕಾರ್ಯ ಸುಲಲಿತವಾಗಿ ನಡೆಯಲಿ ಎಂದು ಗೀತೆಯನ್ನು ಪರಿಸಮಾಪ್ತಿಗೊಳಿಸಿದರು. ಉನ್ನತ ಅಧಿಕಾರಿಗಳಿಂದಲೂ, ಶಾಸನಸಭಾ ಸದಸ್ಯರಿಂದಲೂ ಮೊದಲನೆಯ ದಿನದ ಸಭೆ ಕಿಕ್ಕಿರಿದು ನೆರೆದಿತ್ತು.

To be Continued
in
NEXT RoLL.

To be Continued
in
NEXT Roll.

END

END

END